ಬ್ರಹ್ಮಶಿವ ಕವಿ ವಿರಚಿತ

120

ಸಮಯಪರೀಕ್ಷೆ

ಸಂಪಾದಕರು :

ಬಿ. ಎಸ್. ಕುಲಕರ್ಣಿ, ಎಂ. ಎ.

ರೀಡರ

ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

೧೯೫೮

ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

For favour of review.

ಬ್ರಹ್ಮಶಿವ ಕವಿ ವಿರಚಿತ

ಸಮಯಪರೀಕ್ಷೆ

ಸಂಪಾದಕರು :

ಬಿ. ಎಸ್. ಕುಲಕರ್ಣಿ, ಎಂ. ಎ.

ರೀಡರ

ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

Foreword by :

DR. B. A. SALETORE,

M. A. PH.D. (LOND), D. PHIL (GEISSEN)

Director

KANNADA RESEARCH INSTITUTE

DHARWAR

1958

KANNADA RESEARCH INSTITUTE

DHARWAR

Publisher :

DR. B. A. SALETORE,

M. A. PH.D. (LOND), D. PHIL (GEISSEN)

Director

Kannada Research Institute

Dharwar

Printer :

N. V. KURDI,

Shree Saraswati Printing Wor

Dharwar

FOREWORD

The name of the author of *Samayaparīkṣe* is Brahmaśiva. He was a Jaina poet, who also wrote another work called *Trailōkyachūḍāmaṇi*. From his works it appears that he hailed from Poṭṭalagere, and he was a learned man. He mentions many wellknown Jain saints like Graddhapincha, Vīranandi, etc. He also mentions historical persons such as Cavundaraya, Attimabbe, Racamalla and Caturamantri-Bharata, who encouraged Jainism. It seems that he composed his work during the period of Kirtivarman, the brother of Western Calukya Emperor Vikramaditya VI (A. D. 1076-1126).

Brahmaśiva also gives a list of Jain poets. They are Pampa, Ponna, Ranna, Asaga, Nagacandra, Aggala and Bandhuvarma. Among these poets Aggala and Bandhuvarma seem to be contemporaries of the poet. Aggala mentioned by this poet may perhaps be not the same as his namesake who lived in A. D. 1189.

During the period of the poet, Jainism was on the decline. Other faiths such as Śaivism etc. were gaining ground. Being moved by the state of affairs, the poet tries to plead for his faith and in doing so he criticises the rival faiths. This kind of criticism was not a new thing during his age. His work is significant

not so much from this point of view as from that of the social and religious life of the people. Of some interest to students of religion is the fact that the author does not mention either Basava or any other Śiva Śaraṇa leader. He does mention, however, Jēḍaradāsimayya, who is supposed to be prior to Basava. These facts lead us to presume that the poet may have lived during the period A. D. 1100–1125.

The book is useful from the point of view of the religions in India, particularly from that of view of Jainism. It has been edited by Shri. B. S. Kulkarni, Reader in Kannada, of the Kannada Research Institute, Dharwar.

KANNADA RESEARCH INSTITUTE.
DHARWAR
10th April, 1958

B. A. SALETORE
Director

ಪರಿವಿಡಿ

ಬೆಲೆ : ಐದು ರೂಪಾಯಿಗಳು

ಮೊದಲ ಮಾತು

ಬ್ರಹ್ಮಶಿವಕವಿಯ ಸಮಯಪರೀಕ್ಷೆ ಗ್ರಂಥವನ್ನು ಸಂಪಾದಿಸಬೇಕೆಂಬ ಉದ್ದೇಶದಿಂದ ಮೈಸೂರು ಓರಿಯಂಟಲ್ ರಿಸರ್ಚ ಇನ್‌ಸ್ಟಿಟ್ಯೂಟದಿಂದ ಅದರ ಪ್ರತಿ ಮಾಡಿಸಿ ನಮ್ಮ ಸಂಸ್ಥೆಗೆ ತರಿಸಲಾಗಿತ್ತು. ಆ ಕಾಲದ ಸಾಮಾಜಿಕ ವಿಷಯವನ್ನು ತಿಳಿಸುವಲ್ಲಿ ಈ ಗ್ರಂಥವು ಉಪಯುಕ್ತವಾಗಬಹುದೆಂದೂ ಮತ್ತು ಇಲ್ಲಿಯ ವರೆಗೆ, ನಮಗೆ ತಿಳಿದ ಮಟ್ಟಿಗೆ, ಅಪ್ರಕಟಿತವಿದ್ದುದರಿಂದಲೂ ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಬೇಕೆಂದು ಈಗ ೪-೫ ವರ್ಷಗಳ ಹಿಂದೆಯೇ ನಿಶ್ಚಯಿಸಲಾಯಿತು. ಗ್ರಂಥದ ಪರಿಶೀಲನೆಗೆಂದು ಮೈಸೂರಿನಿಂದ ಪ್ರತಿಮಾಡಿಸಿ ತರಿಸಿದ ಪ್ರತಿಯನ್ನು ಕೈಗೆತ್ತಿಕೊಂಡಾಗ, ಅದು ಅವಸರದಲ್ಲಿ ಬರೆದುದರ ಪರಿಣಾಮವಾಗಿಯೋ ಅಥವಾ ಮತ್ತಾವುದೋ ಕಾರಣಕ್ಕಾಗಿ ಬಹಳ ತಪ್ಪುಗಳಿಂದ ಕೂಡಿದ್ದಾಗಿ ಓದಲು ಬಾರದಷ್ಟು, ಓದಿದ್ದು ಕೂಡ ಅರ್ಥವಾಗದ ರೀತಿಯಲ್ಲಿದ್ದುದರಿಂದ ಈ ಗ್ರಂಥದ ಬೇರೆ ಪ್ರತಿಗಳನ್ನು ಶೋಧಿಸುವದು ಅನಿವಾರ್ಯವಾಯಿತು.

ಯಾವುವಾದರೂ ಸಂಸ್ಥೆ, ಅಥವಾ ವ್ಯಕ್ತಿಗಳಲ್ಲಿ ಬೇರೆ ಪ್ರತಿಗಳು ದೊರೆಯುವವೋ ಎಂಬುದನ್ನು ತಿಳಿಯಲು ಸುಮಾರು ಎರಡು ವರ್ಷಗಳ ಮೇಲ್ಪಟ್ಟು ಅವಧಿ ಜಾರಿತು. ಕೊನೆಗೊಮ್ಮೆ ನಮ್ಮ ಪ್ರಯತ್ನವು ಫಲಿಸಿತು.

ಸಮಯಪರೀಕ್ಷೆ ಗ್ರಂಥದ ಒಂದು ತಾಡಓಲೆಯ ಪ್ರತಿಯು ಶ್ರೀ ಜೈನಮಠ ಹೊಂಬುಚದಲ್ಲಿ ಇರುವದೆಂದು ಗೊತ್ತಾಯಿತು. ಆಗ ಅಲ್ಲಿಯ ವರೆಗೆ ಹೋಗಿ ಆ ಪ್ರತಿಯನ್ನು ನಮ್ಮ ಅಭ್ಯಾಸಕ್ಕೋಸ್ಕರ ಸಂಸ್ಥೆಗೆ ಎರವಲಾಗಿಕೊಡಬೇಕೆಂದು ಕೇಳಿದಾಗ ಆ ಮಠದ ಪೂಜ್ಯ ಶ್ರೀ. ದೇವೇಂದ್ರಕೀರ್ತಿ ಪಟ್ಟಾರಕ ಸ್ವಾಮಿಗಳು ಅವರು ಸಂತೋಷದಿಂದ ಕೊಟ್ಟು ಆಶೀರ್ವದಿಸಿದರು.

ಅದರಂತೆ ಈ ಸಮಯಪರೀಕ್ಷೆ ಗ್ರಂಥದ ಎರಡು ತಾಡಓಲೆಯ ಪ್ರತಿಗಳು ಮೈಸೂರಿನ ಜೈನ ಸಾಹಿತ್ಯ ಪ್ರಚಾರ ಸಂಘದ ಕಾರ್ಯದರ್ಶಿ

ಗಳಾದ ಶ್ರೀ. ಎಂ. ಪದ್ಮನಾಭಶರ್ಮ ಅವರಲ್ಲಿ ಇರುವದಾಗಿ ತಿಳಿಯಿತು. ಆಗ ಅವರನ್ನು ಸಮಕ್ಷಮ ಸಂದರ್ಶಿಸಿ ಅವರ ಪ್ರತಿಗಳನ್ನು ನಮ್ಮ ಸಂಪಾದನೆ ಕಾರ್ಯಕ್ಕೆ ಒದಗಿಸಲು ಕೇಳಿದಾಗ ಅವರಾದರೂ ಸಂತೋಷದಿಂದ ಒಪ್ಪಿಕೊಂಡು ತಮ್ಮ ಎರಡೂ ಪ್ರತಿಗಳನ್ನು ನಮಗೆ ಎರವಲಾಗಿ ಕೊಟ್ಟರು.

ಆಮೇಲೆ ನಮ್ಮ ಸಂಪಾದನೆಯ ಕಾರ್ಯ ನಿಜವಾಗಿ ಆರಂಭವಾಯಿತು. ಶ್ರೀ ಹೊಂಬುಚ ಮಠದ ಸ್ವಾಮಿಗಳವರಿಂದ ತಂದ ಪ್ರತಿ, ಶ್ರೀ. ಶರ್ಮ ಅವರಿಂದ ತಂದ ಎರಡು ಪ್ರತಿಗಳು ಹಾಗು ಪ್ರತಿಮಾಡಿಸಿ ತರಿಸಿದ ಒಂದು ಪ್ರತಿ— ಹೀಗೆ ಈ ನಾಲ್ಕು ಪ್ರತಿಗಳನ್ನು ಮುಂದಿಟ್ಟುಕೊಂಡು ಓದಿದಾಗ ಶ್ರೀ ಶರ್ಮ ಅವರು ಕೊಟ್ಟ ಎರಡು ಪ್ರತಿಗಳಲ್ಲಿ ಒಂದು ಸುಸ್ಥಿತಿಯಲ್ಲಿದ್ದು, ಶುದ್ಧವಾಗಿ ಬರೆದಂತಹುದೂ, ಹಳೆಯದೂ, (ಸುಮಾರು ೩೫೦-೪೦೦ ವರ್ಷಗಳ ಹಿಂದಿನದು) ಅಲ್ಲಲ್ಲಿಯ ಅಲ್ಪಸ್ವಲ್ಪ ಸ್ಖಾಲಿತ್ಯಗಳನ್ನುಬಿಟ್ಟರೆ ಪೂರ್ಣವಾಗಿಯೂ ಇದ್ದುದಾಗಿ ಕಂಡುಬಂದಿತು. ಅವರ ಇನ್ನೊಂದು ತಾಡಓಲೆಯ ಪ್ರತಿಯು ಈ ಪ್ರತಿಯನ್ನೇ ನೋಡಿ ಬರೆದುದಾಗಿದೆ. ಆದರೆ ಬರಹ ಅಶುದ್ಧವದೆ. ಹೊಂಬುಚದ ಪ್ರತಿಯು ಈ ಪ್ರತಿಗಳಿಗೆ ಆಧಾರವಾಗದ ಬೇರೆ ಯಾವುದೋ ಪ್ರತಿಯಿಂದ ನಕಲು ಮಾಡಿದುದು ಆಗಿದೆ. ಅದರ ಆರಂಭದ ಕೆಲವು ಓಲೆಗಳು ಹರಿದುಹೋಗಿವೆ. ಉಳಿದ ಭಾಗ ಸುಸ್ಥಿತಿಯಲ್ಲಿದೆ. ತಪ್ಪುಗಳೂ ಬಹಳ ಇಲ್ಲ.

ಮೈಸೂರ ಓರಿಯಂಟಲ್ ರಿಸರ್ಚ ಇನ್‌ಸ್ಟಿಟ್ಯೂಟದಿಂದ ನಕಲು ಮಾಡಿ ತರಿಸಿದ ಪ್ರತಿಯು ಹೆಚ್ಚು ಉಪಯುಕ್ತವಾಗದಿದ್ದರೂ ಅದರಲ್ಲಿ ಈ ಮೂರು ತಾಡಓಲೆ ಗ್ರಂಥಗಳಲ್ಲಿಲ್ಲದ ಹೆಚ್ಚಿನ ಪದ್ಯಗಳು ಪ್ರತಿ ಅಧಿಕಾರದಲ್ಲಿಯೂ ಇದ್ದುದಾಗಿ ಕಂಡುಬಂದಿತು. ಆದ್ದರಿಂದ ಇದಕ್ಕೆ ಮೂಲ ಇನ್ನಾವುದೋ ಬೇರೆ ಪ್ರತಿ ಇರಬೇಕೆಂದು ಊಹಿಸಬಹುದಾಗಿದೆ.

ಶ್ರೀ ಶರ್ಮ ಅವರಿಂದ ತಂದ ಪ್ರತಿಗಳಿಗೆ "ಅ," "ಆ" ಎಂದೂ ಹೊಂಬುಚದ ಪ್ರತಿಗೆ "ಇ" ಎಂದೂ, ಮೈ. ಓ. ರಿ. ಇ. ದಿಂದ ನಕಲು ಮಾಡಿಸಿ ತರಿಸಿದ ಪ್ರತಿಗೆ "ಈ" ಎಂದೂ ಹೆಸರಿಟ್ಟು, ನಂಬಲರ್ಹವಾದುದೂ, ಶುದ್ಧವೆಂದು ಕಂಡ "ಅ" ಪ್ರತಿಯನ್ನು ಮೂಲವಾಗಿಟ್ಟುಕೊಂಡು

ಉಳಿದ ಮೂರು ಪ್ರತಿಗಳನ್ನು ಪಾಠಾಂತರ ಹಾಕಲು ಉಪಯೋಗಿಸಿ ಕೊಳ್ಳಲಾಯಿತು. ಅಲ್ಲದೆ "ಈ" ಪ್ರತಿಯಲ್ಲಿ ಬಂದ ಹೆಚ್ಚಿನ ಪದ್ಯಗಳು ಪ್ರಕಟವಾಗದೆ ಉಳಿಯಬಾರದೆಂದೂ ಹಾಗೂ ಅಭ್ಯಾಸದ ದೃಷ್ಟಿಯಿಂದ ಉಪಯುಕ್ತವಾಗಬಹುದೆಂದೂ ಅವುಗಳನ್ನು ಗ್ರಂಥಾಂತ್ಯದಲ್ಲಿ "ಅನು-ಬಂಧ-೧"ರಲ್ಲಿ ಕೊಡಲಾಗಿದೆ

ಅಮೂಲ್ಯವಾದ ಒಂದು ಹಳಗನ್ನಡ ಕೃತಿಯು ಬೆಳಕಿಗೆ ಬರಲು ಅನುಕೂಲವಾಗುವಂತೆ ತಮ್ಮಲ್ಲಿಯ ಪ್ರತಿಗಳನ್ನು ಕೊಟ್ಟು ಆಶೀರ್ವದಿಸಿದ ಶ್ರೀ. ದೇವೇಂದ್ರ ಕೀರ್ತಿ ಸ್ವಾಮಿಗಳವರಿಗೂ, ಸಹಕರಿಸಿದ ಮಿತ್ರ ಶ್ರೀ. ಶರ್ಮಾ ಅವರಿಗೂ ಹೃತ್ಪೂರ್ವಕವಾಗಿ ಋಣಿಗಳಾಗಿದ್ದೇವೆಂದು ತಿಳಿಸಲು ಆನಂದವಾಗುತ್ತದೆ.

ಸಂಪಾದಕರು

Burdon of the past, burden of both good and ill is overpowering, and sometimes suffocating, more especially for those of us who belong to very ancient civilisations like those of India and China. As Nietzche says "Not only the wisdom of centuries also their madness breakth out in us. Dangerous it is to be an heir."

There is a special heritage for those of us of India, not an exclusive one, but none are exclusive and all are common to the race of man, but, more especially applicable to us something that is in our flesh and blood and bones, that has gone to make us what we are and what we are likely to be.

From "Discovery of India" –Jawaharlal Nehru.

ಪ್ರಸ್ತಾವನೆ

"To understand the present age, therefore, it is necessary to go back considerably earlier time."
(Burtrand Russel)

ಇವತ್ತಿನ ನಮ್ಮ ಜೀವನದ ಸಮಸ್ಯೆಗಳ ಸರಿಯಾದ ಅರ್ಥವನ್ನು ತಿಳಿದುಕೊಳ್ಳುವದಕ್ಕೆ ಆಧುನಿಕ ವಿದ್ವಾಂಸರಾದ ಬರ್ಟ್ರಾಂಡ ರಸೆಲ್ ಅವರು ಅನ್ನುವಂತೆ ಹಿಂದಿನ ಕಾಲದಲ್ಲಿ ಸಂಭವಿಸಿದ ಸಾಮಾಜಿಕ ಘಟನೆಗಳನ್ನು ತಿಳಿಯುವದು ಅವಶ್ಯವಾಗಿದೆ. ಯಾವುದೊಂದು ಕಾಲದ ಜೀವನದ (ಘಟನೆಗಳ) ಪ್ರತಿಬಿಂಬವು ಆಗಿನ ಕಾಲದ ಕಾವ್ಯ, ಶಾಸ್ತ್ರ, ಕಲೆಗಳಲ್ಲಿ ಒಡಮೂಡಿರುತ್ತದೆ ಏಕಂದರೆ ಮಾನವನ ಮನಸ್ಸು ಕಾಲಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಭಿವ್ಯಕ್ತವಾಗುವ ರೀತಿಗಳಲ್ಲಿ ಇದು ಒಂದು ಬಗೆ !

ಕರ್ನಾಟಕವು ಭಾರತದ ಒಂದು ಅಂಗ. ಯಾವುದೊಂದು ಅಂಗದ ಸ್ಥಿತಿಗತಿ ಕುರಿತು ವಿಚಾರ ಮಾಡುವಾಗ ಅದರ ಇಡೀ ಭಾಗದ ಪರಿಸ್ಥಿತಿಯನ್ನೂ ಲೆಕ್ಕಿಸಬೇಕಾಗುತ್ತದೆ. ಹೀಗಲ್ಲದೆ ಕರ್ನಾಟಕದ ಮಟ್ಟಿಗೇ ವಿಚಾರ ಮಾಡಿದರೆ ನಮ್ಮಲ್ಲಿ ಆದ ಅನೇಕ ಘಟನೆಗಳ ಅರ್ಥವೇ ಆಗಲಾರದು. ಭಾರತದ ಇತಿಹಾಸದಲ್ಲಿ ಕೊನೆಯ ಸುವರ್ಣ ಯುಗವೆಂದರೆ ಗುಪ್ತರಕಾಲವೆಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಏಕಂದರೆ ಸುಮಾರು ಏಳನೆಯ ಶತಮಾನದ ನಂತರ ಪರಕೀಯರ ದಾಳಿಗಳಿಂದಾಗಿ ಮುಗ್ಗರಿಸಲು ಆರಂಭವಾದ ಭಾರತವು ಇಪ್ಪತ್ತನೆಯ ಶತಮಾನದ ಮಧ್ಯದವರೆಗೂ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಸಮರ್ಥವಾಗಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಕರ್ನಾಟಕದ ಮಟ್ಟಿಗೆ ರಾಷ್ಟ್ರಕೂಟರ ಕಾಲವು ಸುವರ್ಣಯುಗವೆಂದು ಹೇಳಬಹುದಾದರೂ ಭಾರತೀಯ ಸ್ವಾತಂತ್ರ್ಯ ಸೂರ್ಯನು ಅಸ್ತಂಗತನಾಗುವ ಕಾಲದಲ್ಲಿ ನಮ್ಮ ಈ ಸುವರ್ಣಯುಗವು ಕಾಣಿಸಿಕೊಂಡಿತೆಂಬುದನ್ನು ಮರೆಯಲಾಗುವದಿಲ್ಲ. ಆದುದರಿಂದಲೇ ಕರ್ನಾಟ

ನೀರು, ಆಕಳು, ಹಾಗೂ ಮಾರಿ, ಮಸಣಿ, ಬಳರಿ, ಚಂಡಿ, ಚಾಮುಂಡಿ, ಮಾಳಚಿ, ಬೀರ, ಮೈಲಾರ, ವ್ಯಂತರ ಮುಂತಾದವುಗಳನ್ನು ಹೇಳಿದ್ದಾನೆ. ಅನೇಕ ದೇವತೆಗಳ ಪೂಜೆ ರೂಢಿಯಲ್ಲಿದ್ದ ಈ ಮಾತು ಈ ಕವಿಯ ನಂತರ ಬಂದ ಬಸವಣ್ಣನವರ ವಚನಗಳಿಂದ ಹಾಗೂ ಬೇರೆ ಗ್ರಂಥಗಳಿಂದ ನಿಜವೆಂದು ಗೊತ್ತಾಗುತ್ತದೆ. ಇಲ್ಲಿ ಮೈಲಾರನ ವಿಷಯಕ್ಕೇ ಹೇಳಬೇಕೆಂದರೆ—

"ವೀರದೊಳುಕ್ಕಿ ಮಚ್ಚರಿಸಿ ಕೋಪದೆ ಜೈನನೆ ಕಾದಿಸತ್ತು" ಮೈಲಾರನಾದನೆಂದು ಕವಿ ಒಂದೆಡೆ ಹೇಳುತ್ತಾನೆ. ಇನ್ನೊಂದೆಡೆ "ಮೈಲ" ಎಂದು ಕರೆಯುತ್ತ "ನಿನ್ನೆ ತಾನಾದ ಮೈಲ ಮಾಳಚಿಯರು" ಜನಕಾಪ್ತರಾದರು ಎನ್ನುತ್ತಾನೆ. ಈ ಮೈಲಾರನಿಗೆ ಜಾತ್ರೆ ನಡೆಯುತ್ತಿತ್ತೆಂದೂ ಇನ್ನೊಂದೆಡೆ ಹೇಳುತ್ತಾನೆ. ಮೈಲಾರ, ಮಾಳಚಿಯರ ವಿಷಯವಾಗಿ ಅನೇಕ ಸಂಶೋಧಕರು ಈಗಾಗಲೇ ಸಂಶೋಧನೆ ನಡೆಯಿಸಿದ್ದಾರೆ. ಕವಿಯು ಇಲ್ಲಿ ಹೇಳುವ ಅನೇಕ ಮಾತುಗಳು ಆ ದೇವತೆಗಳ ಬಗ್ಗೆ ಹೆಚ್ಚಿನ ವಿವರಣೆ ತಿಳಿಯಲು ಅನುಕೂಲವಾಗಬಹುದೇನೋ ?

ದೇವರ ಪೂಜೆ ಎಂದಾಗ ಒಂದು ಮಾತು ನಮಗೆ ನೆನಪಿಗೆ ಬರುತ್ತದೆ. ಸಾಮಾನ್ಯ ಮಾನವನು ದೇವರಲ್ಲಿ ತಾರತಮ್ಯ ಮಾಡುವದು ಬಹು ಕಡಿಮೆ. ತನ್ನ ಫಲಾಪೇಕ್ಷೆ ಕೈಗೂಡಲೆಂದು ಆತನು ಎಲ್ಲ ದೇವರಿಗೂ ಕೈಮುಗಿಯುವವನೆ! ಆದರೆ ಈ ರೀತಿಯು ಧರ್ಮದ ಹೆಸರಿನಲ್ಲಿ ಮೇಲೆ ಕುಳಿತವರಿಗೆ ಸರಿಕಾಣದು. ಈ ರೀತಿಯ ವ್ಯವಹರಣೆ ಸಾಮಾನ್ಯ ಜನರಲ್ಲಿದ್ದವೆಂದು ಕವಿಯು ಹೇಳುವ ಈ ಪದ್ಯದಿಂದ ಗೊತ್ತಾಗುತ್ತದೆ.

"ಒಂದೆಸೆಯೊಳ್ ಜಿನಬಿಂಬಮನೊಂದೆಸೆಯೊಳ್ ಲಿಂಗ-
ವಿಷ್ಣುಬಿಂಬಮನವನಂ- ।
ತೊಂದೆಡೆಯೊಳ್ಪೂಜಿಸುವಾ ಸಂದೇಹಿಗೆ ಜೈನನೆಂಬ
ಪೆಸರೆಂತೆಸೆಗುಂ ॥"

ಹರಿಹರರಲ್ಲಿ ಭೇದವನ್ನು ಮೇಲೆ ಎಣಿಸದಿದ್ದರೂ ಒಳಗೊಳಗೆ ಭೇದ ಕಲ್ಪನೆ ಮಾಡುತ್ತಿದ್ದರೆಂಬ ಮಾತನ್ನು ಹೇಳುತ್ತಿದ್ದಾನೆ. (ಅಧಿಕಾರ ೧೦— ಪದ್ಯ ೫೫)

ಒಂದೇ ಮನೆಯಲ್ಲಿ ತಮತಮಗೆ ಅನುಕೂಲವಾದ ಮತಗಳನ್ನು ಅನುಸರಿಸುತ್ತ ಬೇರೆ ಬೇರೆ ದೇವತೆಗಳಿಗೆ ನಡೆದುಕೊಳ್ಳುತ್ತಿದ್ದರೆಂಬ ಮಾತು

"ಪೆಂಡತಿ ಮಾಹೇಶ್ವರಿಗಾಡ ಗಂಡಂ ಜೈನಂಗಡವನ ಮಕ್ಕಳ್ಗಡ ಮಾರ್ತಂಡಂಗೆ ಭಕ್ತರೆನಿಪಾ ಭಂಡಂಗುತ್ತಮದ ಜೈನವೆಸರೆಂತೆಸಗುಂ" ಎಂಬ ಈ ಪದ್ಯದಿಂದ ಸ್ಪಷ್ಟವಾಗುತ್ತದೆ. ಇದರಂತೆ ಯಜ್ಞದ ವಿಷಯವಾಗಿ ಹೇಳುತ್ತ ಧರ್ಮದ ವಿಷಯದಲ್ಲಿ ಹಿಂಸೆ ನಡೆಯುತ್ತಿತ್ತೆಂದು ಎತ್ತಿ ತೋರಿಸಿದ್ದಾನೆ.

ಸಮಾಜದಲ್ಲಿ ಎಂತಹ ದುಸ್ಥಿತಿ ಬಂದೊದಗಿದರೂ ತಮ್ಮ ಉಚ್ಚಮಟ್ಟವನ್ನು ಕಾಯ್ದುಕೊಂಡು ಮರ್ಯಾದೆಯಿಂದ ಬಾಳುತ್ತಾ ಇರುವ ವಿಷಯವು ಭಾರತೀಯ ಮಹಿಳೆಯರ ವೈಶಿಷ್ಟ್ಯವಾಗಿದೆ. ಒಂದು ರೀತಿಯಿಂದ ನೋಡಿದರೆ ನಮಗೆ ಸಿಕ್ಕುವ ಗೌರವ ನಮ್ಮ ಹೆಣ್ಣುಮಕ್ಕಳ ಆದರ್ಶ ನಡುವಳಿಕೆಯಿಂದಾಗಿದೆ ಎಂದು ಹೇಳಬಹುದು. ಆದರೆ ಬ್ರಹ್ಮಶಿವ ಕವಿಯು ಹೇಳುವ "ನೆರಮನೆಯುವರೆನ್ನಂ ಜಾತ್ರೆಗೆ ಕರದೊಡೆ ಬರಲೀಯನೆನ್ನ ಗಂಡಂ ಪೊಲೆಯಂ, ಕರಮುಬ್ಬುಡೆಯಾತಂ" ಎಂದು ಹೇಳುವ, "ಕೂಸಿಂಗೆ ಕುತ್ತವಾದಡೆ ದೇಶದ ಬಳರಿಯರ್ಗೆ" ಬಳ್ಳರ್ಚನೆ ಕೊಡುವ, ಮಕ್ಕಳ ವ್ಯಸನಗಳಿಗೆ ಪ್ರೋತ್ಸಾಹನ ಕೊಡುವ ಆದರೆ ಧರ್ಮಕಾರ್ಯದಲ್ಲಿ ಅನಾಸಕ್ತಿ ತೋರಿಸುವ ಹಾಗೂ ಇನ್ನೂ ಅನೇಕ ಸ್ವೇಚ್ಛಾಚಾರದಲ್ಲಿ ತೊಡಗಿರುವ "ಅಱಗುಲಿವೆಂಡಿ"ರ ವಿಷಯವನ್ನು ಲಕ್ಷಿಸಿದಾಗ, ಈ ಸಂಕ್ರಮಣ ಕಾಲದಲ್ಲಿ ಸ್ತ್ರೀಯರೂ ಕೂಡ ಯಾವ ಮಟ್ಟಕ್ಕೆ ಇಳಿದಿದ್ದರೆಂಬ ಅಂಶವು ತಿಳಿಯುತ್ತದೆ. ಈ ರೀತಿ ಆ ಕಾಲದ ಅಭ್ಯಾಸಕ್ಕೆ ಅನುಕೂಲವಾಗುವಂತೆ ಇಷ್ಟೊಂದು ಮಾಹಿತಿಯು ಒಂದೇ ಕಡೆ ಯಾವ ಗ್ರಂಥದಲ್ಲಿಯೂ ಸಿಕ್ಕುವದಿಲ್ಲ.

ನಮ್ಮ ಸುವರ್ಣ ಯುಗದ ಪ್ರಾರಂಭದಲ್ಲಿ ಅಂದರೆ ಹತ್ತನೆಯ ಶತಮಾನದ ವರೆಗೆ ಧಾರ್ಮಿಕ ಜನರ ಸಲುವಾಗಿ, ಲೌಕಿಕ ಜನರ ಸಲುವಾಗಿ ಪ್ರತ್ಯೇಕವಾಗಿ ಕಾವ್ಯರಚನೆ ಮಾಡುವ ವಾಡಿಕೆ ಇತ್ತು.ಮುಂದಿನ ಕಾಲದಲ್ಲಿ ಈ ತಾರತಮ್ಯವು ನಷ್ಟವಾಯಿತು. ಕಾವ್ಯಗಳಲ್ಲಿಯೂ ಕೂಡ ತಮ್ಮ ತಮ್ಮ ಮತಗಳ ಹಿರಿಮೆ, ಹೊಗಳಿಕೆ ಹಾಗೂ ಪ್ರಚಾರಕ್ಕೆ ಇಂಬುದೊರೆತುದು ಹೆಚ್ಚಾಗಿ ಕಂಡುಬರುತ್ತದೆ. ಒಂದೊಂದು ಮತದವರ ಸಲುವಾಗಿಯೇ ಕಾವ್ಯಗಳು, ತತ್ತ್ವಗ್ರಂಥಗಳು ಬೆಳೆದುಬಂದವು. ಇದರಿಂದ ನಮ್ಮಲ್ಲಿ ಯಾವ ಸಮಾಜದವರೂ ಓದಿ ಆನಂದಪಡಬಹುದಾದಂತಹ ಶುದ್ಧ (ರಾಷ್ಟ್ರೀಯ) ಸಾಹಿತ್ಯವು ಮೈವೆತ್ತಲಿಲ್ಲ. ಇಂತಹ ಕಾಲದಲ್ಲಿ ಹುಟ್ಟಿದ ಈ

ಸಮಯಪರೀಕ್ಷೆ ಗ್ರಂಥವನ್ನೋದುವಾಗ ಅನೇಕ ಮತಗಳ ವಿಚಾರದಲ್ಲಿ ಕವಿಬ್ರಹ್ಮಶಿವನು ಅನಾದರದಿಂದ ಆಡಿದ ಮಾತುಗಳು ಅಲ್ಲಲ್ಲಿ ಕಾಣಿಸಿ ಕೊಳ್ಳುತ್ತವೆ. "Sectarian controversy was the order of the day" (Yaśastilak & Indian Culturer page 346). ತಮ್ಮ ಮತದ ಮಂಡನದ ಸಲುವಾಗಿ ಪರಮತ ಖಂಡನೆಯು ಅಗತ್ಯವೆಂದು ಆ ಕಾಲದ ನಂಬುಗೆಯಾಗಿತ್ತು. ಈ ನಂಬುಗೆಯಿಂದ ಆ ಕಾಲದ ಯಾವ ಮತದವರೂ ಮುಕ್ತರಾಗಿದ್ದರೆಂದು ಕಂಡುಬರುವದಿಲ್ಲ. ಪರಮತದ ಖಂಡನೆಯಲ್ಲಿ ಅವರವರ ಸಾಂಸ್ಕೃತಿಕಮಟ್ಟವು ಮಾತ್ರ ಚನ್ನಾಗಿ ವ್ಯಕ್ತ ವಾಗುತ್ತಿರುತ್ತದೆ.

ತನ್ನ ಸರಿಯಾದ ಬೆಲೆ ತಿಳಿದುಕೊಳ್ಳುವದಕ್ಕೆ ಇನ್ನೊಬ್ಬರು ತನ್ನ ವಿಷಯದಲ್ಲಿ ಪಡುವ ಅಭಿಪ್ರಾಯ ಏನೆನ್ನುವದನ್ನು ತಿಳಿಯುವ ನೈತಿಕ ಧೈರ್ಯವು, ಏಳಿಗೆಯನ್ನು ಕೋರುವ ಪ್ರತಿಯೊಬ್ಬರಿಗೂ ಅವಶ್ಯವಾಗಿದೆ ಒಂದು ಜನವು ಇನ್ನೊಂದು ಜನದ ವಿಷಯದಲ್ಲಿ ಯಾವ ಬಗೆಯ ಭಾವನೆ ಯನ್ನಿಟ್ಟುಕೊಂಡಿದೆ ಎಂಬುದು ತಿಳಿಯಬೇಕಿದ್ದರೆ ಆ ಜನದ ಭಾಷೆಯಲ್ಲಿಯ ಗಾದೆ ಮಾತುಗಳನ್ನು ನೋಡಬೇಕು. ತನ್ನಲ್ಲಿಯ ಕುಂದುಕೊರತೆಗಳೇನು ಎಂಬುದನ್ನು ತಿಳಿದುಕೊಂಡು, ಅವುಗಳನ್ನು ತಿದ್ದಿಕೊಂಡು ಮುಂದುವರೆ ಯಲು ಇಂತಹ ಟೀಕೆಗಳಿಂದ ಸಹಾಯವಾಗುತ್ತದೆ. ಆಧುನಿಕ ಮಾನ-ಶ್ಶಾಸ್ತ್ರಜ್ಞನರು ಹೇಳುವಂತೆ (ಅದು ಮೊದಲು ಕಹಿ ಎನಿಸಿದರೂ) ನಮ್ಮ ಲ್ಲಿಯ ಕುಂದು ಏನೆಂಬುದು ತಿಳಿದರೆ ಆದನ್ನು ನೀಗಿಕೊಳ್ಳಲು (ಕೇವಲ ಅಹಂಕಾರಿಯಾದ ಜೀವದ ಹೊರತು) ಮನಸ್ಸು ಅರಿತೋ ಅರಿಯದೆಯೋ ಹೆಣಗದೆ ಇರುವದಿಲ್ಲ. ಸಮಯಪರೀಕ್ಷೆ ಗ್ರಂಥದಲ್ಲಿ ಬರುವ ಒಂದೊಂದು ಮತದ ಕುಂದುಕೊರತೆಗಳಲ್ಲಿ ಅದರೊಳಗಿನ ಅತಿಶಯೋಕ್ತಿ ಹಾಗೂ ಉಪ-ಹಾಸ್ಯದ ಭಾಗವನ್ನು ಬದಿಗಿರಿಸಿ ಅಲ್ಲಿ ಇರುವ ಸತ್ಯಾಂಶವೆಷ್ಟು ಎಂಬುದನ್ನು ಆ ಕಾಲದ ಬೇರೆ ಪ್ರಮಾಣಗಳಿಂದ ನಿರ್ಧರಿಸಿಕೊಳ್ಳುವದು ಅತ್ಯಗತ್ಯ ವಾಗಿದೆ.

೧೧–೧೨ನೆಯ ಶತಮಾನಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಆಗಿನ ಕಾಲದ ಧಾರ್ಮಿಕ ಸಂಪ್ರದಾಯಗಳನ್ನು ಹಿಂದಿಕ್ಕಿ, ಒಳ್ಳೇ ಭರದಿಂದ ತಲೆ ಎತ್ತಿದ ಸಂಪ್ರದಾಯಗಳು ಮುಖ್ಯವಾಗಿ ಎರಡು : ಒಂದು ವೀರಶೈವ; ಇನ್ನೊಂದು ಮಾಧ್ವ. ಆಚಾರ ಶುದ್ಧಿಗೆ ವಿಶೇಷ ಪ್ರಾಧಾನ್ಯತೆ ಇತ್ತ ಸಂಪ್ರದಾಯಗಳು ಇವು! ಆ ಕಾಲಕ್ಕೆ ಬಹುಜನ ಸಮಾಜವನ್ನು ತಮ್ಮತ್ತ

ಆಕರ್ಷಿಸಿಕೊಂಡ ಪಂಥಗಳಿವು! (ದಕ್ಷಿಣಕರ್ನಾಟಕದಲ್ಲಿಯ ರಾಮಾನುಜ ಪಂಥವನ್ನೂ ಇದರೊಡನೆ ಲೆಕ್ಕಕ್ಕೆ ಹಿಡಿಯಬಹುದು. ಆದರೆ ಇದು ಕರ್ನಾಟಕ ದಲ್ಲಿಯೇ ಹುಟ್ಟಿಕೊಂಡ ಸಂಪ್ರದಾಯವಲ್ಲ.) ಬ್ರಹ್ಮಶಿವನ ಈ "ಸಮಯ ಪರೀಕ್ಷೆ"ಯಲ್ಲಿ ಆ ಸಮಯಕ್ಕೆ ಇದ್ದ ಬೇರೆ ಬೇರೆ ಧರ್ಮಪಂಥಗಳಲ್ಲಿ ಸಾಕಷ್ಟು ಆಚಾರಶುದ್ಧಿ ಇದ್ದಿಲ್ಲವೆಂಬದು ಬೆಳಕಿಗೆ ಬರುತ್ತದೆ. ಆ ಕಾಲದ ನಾಥಸಂಪ್ರದಾಯದವರು, ಶಾಕ್ತರು, ಕಾಪಾಲಿಕರು ಮೊದಲಾದವರ ರೀತಿ ನೀತಿಗಳು ಟೀಕೆಗೆ ಗುರಿಯಾದುದನ್ನು ಆ ಕಾಲದ ಅನೇಕ ಗ್ರಂಥ ಗಳಲ್ಲಿ ಕಾಣಬಹುದು. (ಆ ಕಾಲದ ಸಾಮಾಜಿಕ ನೈತಿಕ ಆಚಾರದ ಮಟ್ಟವು ಸಾಕಷ್ಟು ಸಮಾಧಾನಕರವಾಗಿ ಇರಲಿಲ್ಲವೆಂಬ ಮಾತು ಯಶಸ್ತಿಲಕ ಮೊದ ಲಾದ ಗ್ರಂಥಗಳಿಂದ ತಿಳಿಯುತ್ತದೆ.) ಕರ್ನಾಟಕದ ವೀರಶೈವ, ಮಾಧ್ವ ಸಂಪ್ರದಾಯಗಳಿಗೆ ಅವುಗಳ ಪ್ರಚಾರಕ್ಕೆ ಆಗಿನ ಕಾಲದಲ್ಲಿ ದೊರೆತ ಬಹುಜನ ಸಮಾಜ ಬೆಂಬಲ ನೋಡಿದಲ್ಲಿ ಬ್ರಹ್ಮಶಿವನು ಮಾಡಿರುವ ಆಗಿನ ಕಾಲದ ಅನಾಚಾರದ ಟೀಕೆಯಲ್ಲಿ ತಥ್ಯವಿಲ್ಲವೆಂದು ಹೇಳಲಿಕ್ಕಾ-ಗುವದಿಲ್ಲ.

ಜೈನಧರ್ಮದ ಮೂಲ ಜೀವಾಳವೆಂದರೆ—ಅಹಿಂಸೆ, ಕರುಣೆ, ವ್ರತಾ ಚಾರಗಳ ಪಾಲನೆಯ ವಿಷಯದಲ್ಲಿ ಉಗ್ರ ನಿರ್ಬಂಧಗಳು! ಆಗಿನ ಕಾಲದ ಇತರ ಪಂಥಗಳಲ್ಲಿ ಇವಕ್ಕೆ ಇಷ್ಟು ಪ್ರಾಶಸ್ತ್ಯವಿದ್ದಂತೆ ತೋರುವ ದಿಲ್ಲ. ತನ್ನ ಹಿಂದೆ ಇದ್ದಂತಹ ಶೈವಾದಿ ಪಂಥಗಳನ್ನೆ ಒಳಗೊಂಡು ವೀರ-ಶೈವ ಧರ್ಮವನ್ನು ಸ್ಥಾಪಿಸಿದ ಬಸವಣ್ಣನವರು, ಆ ಬೇರೆ ಬೇರೆ ಪಂಥಗಳ ಲ್ಲಿಯ ಲೋಪದೋಷಗಳನ್ನು ಹೊಡೆದು ಹಾಕಲು ಪ್ರಯತ್ನಿಸಿದರು.

"ಸತ್ಯ ಶೌಚ ನಿತ್ಯ ನೇಮದ ತಪ್ಪದೆ ಮಾಡಬಲ್ಲರೆ ಅದು ಲೇಸು"
"ತನುಶುಚಿಯಲ್ಲದವನ ದೇಹಾರವೇಕೆ"

ಎಂಬ ಈ ವಚನಗಳು ಆಗಿನ ಕಾಲದ ಕೊರತೆಯನ್ನು ಎತ್ತಿ ತೋರಿಸಿ, ಅದನ್ನು ತುಂಬಿಕೊಳ್ಳಲು ಉಪದೇಶಿಸಿದವುಗಳಾಗಿವೆ ಎಂಬುದು ಮೇಲೆಯೇ ಕಾಣುತ್ತದೆ.

ಸಮಯಪರೀಕ್ಷೆ ಗ್ರಂಥವನ್ನು ಯಾವ ದೃಷ್ಟಿಕೋನದಿಂದ ನೋಡಿ ಅದರ ಅಭ್ಯಾಸ ಮಾಡಬೇಕು ಎಂಬುದನ್ನು ತಿಳಿದುಕೊಂಡ ನಾವು ಈಗ ಕವಿಯ ಬಗ್ಗೆ ಸ್ವಲ್ಪ ಪರಿಚಯ ಮಾಡಿಕೊಳ್ಳಬಹುದು.

ಕವಿಯ ಹೆಸರು

ಸಮಯಪರೀಕ್ಷೆ ಗ್ರಂಥವನ್ನು ಬರೆದ ಕವಿಯನ್ನು ಬ್ರಹ್ಮಶಿವ ಎಂಬ ಹೆಸರಿನಿಂದ ಉಲ್ಲೇಖಿಸುವದು ವಾಡಿಕೆಯಾಗಿದೆ. ಈತನು "ತ್ರೈಲೋಕ್ಯ ಚೂಡಾಮಣಿ" ಎಂಬ ಇನ್ನೊಂದು ಗ್ರಂಥವನ್ನು ಬರೆದಿದ್ದಾನೆ. ಸಂಪಾದನೆಯ ಕಾರ್ಯದಲ್ಲಿ ಬಳಸಿಕೊಂಡಿರುವ "ಈ" ಪ್ರತಿಯ ಗದ್ಯದಲ್ಲಿ ಬ್ರಹಶಿವ ಎಂಬ ಹೆಸರು ಕಾಣಿಸಿಕೊಳ್ಳುತ್ತದೆ. ಆದರೆ "ಅ" "ಆ" "ಇ" ಪ್ರತಿಗಳ ಪ್ರತಿಯೊಂದು ಅಧಿಕಾರದ ಕೊನೆಗೆ ಬರುವ ಗದ್ಯದಲ್ಲಿ "ಇದು........ ಮಹಾಕವಿ ಬ್ರಹ್ಮದೇವ ವಿರಚಿತಮಪ್ಪ" ಎಂದು ಉಲ್ಲೇಖವಿದೆಯಲ್ಲದೆ ಗ್ರಂಥಾಂತ್ಯದಲ್ಲಿ ಬರೆದಿರುವ "ಪರಮಾತ್ಮನೆನಿಸಿದರುಹತ್ಪರಮೇಶ್ವರನಮಳ ಕೀರ್ತಿಯಂತಂತರೆವಿಸ್ತರಿಸಿ ಕರಮೆಸಗೆ ಬಮ್ಮಂ ವಿರಚಿಸಿದೀ ಕಾಬ್ಯಮಖಿಳ ಬುಧಜನ ಸೇವ್ಯಂ" ಎಂಬ ಪದ್ಯದಲ್ಲಿ ಹಾಗು ಕವಿಯು ತನ್ನ ವಿವರಗಳನ್ನು ಕೊಡುವ ಪದ್ಯದಲ್ಲಿ (ಅಧಿಕಾರ-೧ ಪದ್ಯ ೫೭) ತನ್ನ ಹೆಸರು ಬ್ರಹ್ಮ ಎಂದು ಹೇಳಿದುದು ಗೊತ್ತಾಗುವದು. ಜೈನಮತದಲ್ಲಿ ಬ್ರಹ್ಮ, ಭರಮ, ಭರಮಪ್ಪ ಎಂಬ ಹೆಸರುಗಳು ರೂಢಿಯಲ್ಲಿರುತ್ತವೆ. ಕವಿಯ ಮತದ ದೃಷ್ಟಿಯಿಂದ ಮತ್ತು "ಅ", "ಆ", "ಇ", ಪ್ರತಿಗಳ ಆಧಾರದ ಮೇಲಿಂದ ಕವಿಯ ನಿಜವಾದ ಹೆಸರು "ಬ್ರಹ್ಮದೇವ"ನೆಂದೇ ಇರಬೇಕೆಂದು ತಿಳಿಯುವದು ಸಮಂಜಸವಾಗುತ್ತದೆ.

ಕವಿಯ ಮತ

ಕವಿ ಬ್ರಹ್ಮಶಿವನು ಜೈನಮತೀಯನಾಗಿದ್ದನೆಂಬಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕೆ ಆತನ ಸಮಯಪರೀಕ್ಷೆ, ತ್ರೈಲೋಕ್ಯ ಚೂಡಾಮಣಿ ಗ್ರಂಥಗಳೇ ಸಾಕ್ಷಿಯಾಗಿವೆ. ಆದರೆ—

"ಪಿರಿದರ್ಥಿ ಮುನ್ನ ಮಾಹೇಶ್ವರದೊಳ್ತನಗದರೊಳೊ-
ಳ್ಪುಗಾಣದೆನೆಗಳ್ದೀ ।
ಪರಮ ಜಿನಧರ್ಮದೊಳಪೊಕ್ಕು ರಾಗಿಪಂ ಸುಕವಿ-
ಪಂಪರಾಜನ ಮೊಮ್ಮಂ ॥"

ಎಂಬ ಪದ್ಯದಿಂದ ಇವನು ಮೊದಲು ಶೈವಧರ್ಮಾವಲಂಬಿಯಾಗಿದ್ದು ನಂತರ ಜೈನಧರ್ಮಕ್ಕೆ ಬಂದಂತೆ ಗೊತ್ತಾಗುತ್ತದೆ. ಆದರೆ "ಅ", "ಆ",

"ಇ", ಪ್ರತಿಗಳಲ್ಲಿ ಹೀಗೆ ಬಂದಿರುವ ಪದ್ಯವು "ಈ" ಪ್ರತಿಯಲ್ಲಿ "ಪಿರಿದರ್ಥಿ ……………ಸುಕವಿ……… ……."ಎಂದು ಅಪೂರ್ಣವಾಗಿಯೂ, ಕವಿಚರಿತೆಯಲ್ಲಿ "ಪಿರಿದಱಿ………………………………ಸುಕವಿ ಬ್ರಹ್ಮ (ಶಿವನೇ ಬಲ್ಲ") ಎಂದೂ ಇದೆ. "ಅ", "ಆ", "ಇ" ಪ್ರತಿಗಳಲ್ಲಷ್ಟೇ ಬಂದಿರುವ "ಪಂಪರಾಜನ ಮೊಮ್ಮಂ" ಎಂಬ ಪದದಿಂದ ಇವನು ಹುಟ್ಟಿನಿಂದಲೇ ಜೈನನಾಗಿರಬೇಕೆಂದೆನಿಸುತ್ತದೆ. ಏಕಂದರೆ ಆದಿಕವಿ ಪಂಪ, ಅಭಿನವ ಪಂಪನಾಗಚಂದ್ರರು ಜೈನರಾಗಿದ್ದರು. ಆದರೆ "ಪಂಪ" ಈ ಹೆಸರು ಕೇವಲ ಜೈನರಿಗೇ ಮೀಸಲಾಗಿರುವ ಅಗತ್ಯವಿಲ್ಲ. ಶೈವರಲ್ಲಿಯೂ ಕೂಡ ಅದು ರೂಢಿಯಲ್ಲಿದ್ದುದು "ಪಂಪಾಪತಿ" ಇತ್ಯಾದಿ ಹೆಸರುಗಳಿಂದ ತಿಳಿಯುತ್ತದೆ. ಕವಿಯು ತಾನು ಯಾವ ಯಾವ ವಿಷಯಗಳಲ್ಲಿ ಪರಿಣತನಾಗಿದ್ದೆನೆಂದು ಹೇಳುವ—

"ಸೌರಂ ಕಾಳೋತ್ತರಮಂ । ಬಾರಾಧನೆಗಳೊಳಮಖಿಳವೇದ-
ಸ್ಮೃತಿತ ॥
ತ್ಪೌರಾಣಮೆನಿಪ್ಪವರೊಳ್ । ಸಾರಮನಿಂಬಾಗಿನೆರೆಯೆ-
ನಿರುತಂ ಬಲ್ಲಂ ॥"

ಎಂಬ ಪದ್ಯದಿಂದ ಕವಿಯು ವೇದದ ಅಭ್ಯಾಸಮಾಡಿದ್ದನೆಂಬುದು ಸ್ಪಷ್ಟವಿದೆ. ಜನ್ಮತಃ ಕವಿ ಜೈನನಾಗಿದ್ದರೆ ವೇದವನ್ನು ಓದುವದು ಆತನಿಗೆ ಸಾಧ್ಯವಾಗುತ್ತಿದ್ದಿಲ್ಲವೇನೊ! ವೇದಾಭ್ಯಾಸ ತಿಳಿದ ಇವನು ಮೊದಲು ಶೈವ ಬ್ರಾಹ್ಮಣನಾಗಿರಬೇಕೆಂಬುದಕ್ಕೆ ಪುಷ್ಟಿ ಕೊಡುತ್ತದೆ. ಆದ್ದರಿಂದ ಬ್ರಹ್ಮಶಿವ ಕವಿಯು ಮೊದಲು "ಮಾಹೇಶ್ವರ" ಧರ್ಮಾವಲಂಬಿಯಾಗಿದ್ದು ನಂತರ ಜೈನಧರ್ಮಕ್ಕೆ ಪರಿವರ್ತಿತನಾದನೆಂದು ತಿಳಿಯುವದು ಸತ್ಯಕ್ಕೆ ಸಮೀಪವಾದ ಮಾತಾಗಿದೆ.

"ಇಳೆಯೊಳ್ಸಲೆ ನೆಲಸಿದ ಪೊಟ್ಟೆಳಗೆಱೆಯೊಳ್ಸಿಗಳ್ದ-
ಸಿಂಗರಾಜನ ಸುತನ- ।
ಗ್ಗಳದೇವನ ಕೆಳೆಯಂ ದ್ವಿಜಕುಳರತ್ನಂ ವತ್ಸಗೋತ್ರ-
ತಿಳಕಂ ಬ್ರಹ್ಮಂ ॥"

ಈ ಪದ್ಯದಲ್ಲಿ ಬರುವ "ದ್ವಿಜಕುಳ ರತ್ನಂ" ಎಂಬ ಮಾತಿನಿಂದ ಮೇಲಿನ ನಮ್ಮ ಊಹೆಗೆ ಪುಷ್ಟಿ ದೊರೆಯುತ್ತದೆ. ಇದೂ ಅಲ್ಲದೆ ಜೈನಮತದಲ್ಲಿ ಅವಸಿ

ಗಿದ್ದ ಆವೇಶ ನೋಡಿದರೆ (ವಾದದ ರೀತಿಯಲ್ಲಿ) ಹೊಸದಾಗಿಯೇ ಸ್ವೀಕರಿಸಿದ ಪ್ರಾರಂಭಿಕ ಸ್ಫೂರ್ತಿ ಆತನಲ್ಲಿ ಕಂಡುಬರುತ್ತದೆ.

ಕವಿಯ ಊರು

ಪಂಡಿತನಾದ ಈ ಕವಿಯು ಪೊಟ್ಟಳಗೆರೆಯುವನೆಂದು ಮೇಲೆ ಬರೆದ ಪದ್ಯದಿಂದಲೇ ತಿಳಿಯುತ್ತದೆ. ಈ ಪೊಟ್ಟಳಗೆರೆಯು ಹೈದರಾಬಾದದ (ಡೆಕ್ಕನ್) ಹತ್ತರ ಇರುವ ಪೋಟ್ಟಣಚರುವು ಎಂಬುದು ಆಗಿದೆ ಎಂದು ತಿಳಿಯಲು ಅವಕಾಶವಿದೆ. ಈ ಬಗ್ಗೆ ಶ್ರೀ. ಪಿ. ಬಿ. ದೇಸಾಯಿ ಅವರು ತಮ್ಮ ಗ್ರಂಥ "ಜೈನೀಝುಮ್ ಇನ್ ಸೌಥ ಇಂಡಿಯಾ" ಪುಟ ೨೧೨ರಲ್ಲಿ ವಿವರಿಸಿದ್ದಾರೆ. ಕಾರಣ ಇಲ್ಲಿ ಈ ಬಗ್ಗೆ ಹೆಚ್ಚಿನ ವಿವರಣೆ ಅನಗತ್ಯ !

ಕಾವ್ಯದ ಉದ್ದೇಶ

" ಇದು ರತ್ನಕರಂಡಕಮೆಂಬುದು ಭಾವಿಸುವಾಗಳಿದುವೆ-
ಪರಸಮಯಿಗಳಂ ।
ಮುದದಿಂ ಪಥಕ್ಕೆ ತರಲಾರ್ಪುದು ಸಮಯಪರೀಕ್ಷೆ-
ಎಂಬುದಿಂತೀ ಕಾವ್ಯಂ ॥"

ಎಂಬ ಪದ್ಯದಿಂದ " ಘನಮಿಥ್ಯಾತ್ವಾ ಚಳ ಭೇದನ ವಜ್ರಂ ", "ಜೈನಮಾರ್ಗ ನಿಶ್ಚಳ ಚಿತ್ತಂ", "ಜಿನಸಮಯ ಸುಧಾರ್ಣವ ವರ್ಧನ ಚಂದ್ರಂ " ಆದ ಕವಿಯು " ಭವ್ಯರ ಮತದಿಂ ಪೇಳ್ದಿಂ " ಎಂದು ಹೇಳಿದ ಈ ಕಾವ್ಯದ ಉದ್ದೇಶವು ಏನಿದೆ ಎಂಬುದು ಸ್ಪಷ್ಟವಾಗುತ್ತದೆ. ಅಂತೆಯೇ ಗ್ರಂಥದ ಆದ್ಯಂತ ಕವಿಯು ಸ್ವಮತ ಸಿದ್ಧಾಂತವನ್ನು ಎತ್ತಿ ಹಿಡಿಯುವ, ಅನ್ಯಮತದವುಗಳನ್ನು ನಿರಾಕರಿಸುವದರ ಮರ್ಮವು ಸ್ಪಷ್ಟವಾಗುತ್ತಿದೆ.

ಕವಿಯು ಸ್ಮರಿಸಿದ ಜೈನ ಮುನಿಗಳು

ಗ್ರಂಥಾರಂಭದಲ್ಲಿ ಕವಿ ಜೈನಮುನಿಗಳನ್ನೂ, ಜೈನಧರ್ಮಕ್ಕೆ ಪ್ರೋತ್ಸಾಹಕೊಟ್ಟು ಅದನ್ನು ಎತ್ತಿ ಹಿಡಿದ ಪುಣ್ಯಾತ್ಮರನ್ನೂ, ಶ್ರೇಷ್ಠ ಜೈನ ಕವಿಗಳನ್ನೂ ನೆನೆದಿದ್ದಾನೆ.

ಬ್ರಹ್ಮಶಿವ ಕವಿಯು ನೆನೆದ ಮುನಿಗಳು ಗೃಧ್ರಪಿಂಛ, ಸಮಂತಭದ್ರ, ಜಟಾಚಾರ್ಯ, ಪೂಜ್ಯಪಾದ, ಅಕಳಂಕ, ಕೊಂಡಕುಂದ, ಸೋಮದೇವ ಪಂಡಿತ, ಚತುರ್ಮುಖದೇವ, ಬಿಟ್ಟದದೇವರು, ವಾದಿರಾಜ, ಮೇಘ

ಚಂದ್ರ, ವೀರಣಂದಿ, ವೀರಸೇನ, ಕವಿಪರಮೇಷ್ಠಿ, ಬಾಳಚಂದ್ರ, ಮೇಘ ಚಂದ್ರ, ವೀರಣಂದಿ ಇವರಾಗಿದ್ದಾರೆ. ಇಲ್ಲಿ ಕವಿಯು ಮುನಿಗಳ ಗಣ ಅಥವಾ ಗುರು ಪರಂಪರೆ ಇವುಗಳನ್ನು ಹೇಳಿಲ್ಲ; ಅಲ್ಲದೆ ಕಾಲಮಾನವನ್ನೂ ಕ್ರಮಬದ್ಧವಾಗಿ ಹೇಳಲು ಪ್ರಯತ್ನಿಸಿಲ್ಲ. ಕೇವಲ ಸ್ಮರಿಸಬೇಕೆಂಬ ಉದ್ದೇಶದಿಂದ ಸ್ಮರಿಸಿದಂತೆ ಇದೆ.

ಕವಿಯು ನೆನೆದ ಜೈನ ಕವಿಗಳು ಹಾಗೂ ಮಹನೀಯರು

ಕವಿಯು ಹೆಸರಿಸಿದ ಕವಿಗಳೆಂದರೆ — ಪಂಪ, ಪೊನ್ನ, ರಜಕ (ಅಸಗ) ರನ್ನ, ನಾಗಚಂದ್ರ (ಅಭಿನವಪಂಪ), ಅಗ್ಗಳ, ಬಂಧುವರ್ಮ ಇವರಾಗಿದ್ದಾರೆ. ಇಲ್ಲಿಯೂ ಕೂಡ ಕವಿಯು ಕಾಲಮಾನ ದೃಷ್ಟಿಯಿಂದ ಕವಿಗಳನ್ನು ಹೆಸರಿಸಿಲ್ಲ. ಮುನಿಗಳನ್ನು ನೆನೆಯುವದಾದ ಕೂಡಲೆ ಕಾಲಮಾನ ದೃಷ್ಟಿಯಿಂದ ಕಡೆಯವನಾಗಬಹುದಾದ ಬಂಧುವರ್ಮನನ್ನು ಮೊದಲು ಉಲ್ಲೇಖಿಸುತ್ತಾನೆ. ನಂತರ ಜೈನಧರ್ಮದೇಳ್ಗೆಗೆ ಶ್ರಮಿಸಿದ ಮಹಾತ್ಮರುಗಳನ್ನು ಹೇಳುತ್ತ— "ಪಟ್ಟಣದ ನಡುವೆ ಬೆಳ್ಳಿಯ ಬೆಟ್ಟಂಗಳನಿಳಿಪ ಜೈನ ನಿಳಯಂಗಳನೀ ಸೃಷ್ಟಿಯೊಳೆ ಕೂಡೆ ಮಾಡಿದ" ರಟ್ಟ ಶಂಖಾವನೀಶನನ್ನೂ, "ಗುಣದ ಕಣಿ ದಾನಚಿಂತಾಮಣಿ ವಿಮಳಚರಿತ್ರ ಜೈನಶಾಸನ ರಕ್ಷಾಮಣಿ ಸಜ್ಜನೈಕ ಚೂಡಾಮಣಿ"ಯಾದ ಅತ್ತಿಮಬ್ಬೆಯನ್ನೂ, "ಅತಿ ಧವಳ ಕೀರ್ತಿ ಲಕ್ಷ್ಮೀಪತಿ ಜಿನಸಮಯವಾರ್ಧಿ ವರ್ಧನ ತಾರಾಪತಿ" ಯಾದ ರಾಯ (ಚಾವುಂಡರಾಯ)ನನ್ನು, " ಅಮಳಿನ ಚರಿತ ಜೈನಾಗಮ ಕುಶಲ ಗಂಗ ವಂಶ ತಿಳಕ " ನಾದ ಶ್ರೀರಾಯರಾಚಮಲ್ಲನನ್ನೂ, " ಜಿನಪದ ಪಯೋಜ ಭೃಂಗಂ ವಿನೇಯ ನಿಧಿ"ಯಾದ ಚತುರಮಂತ್ರಿ ತಿಳಕನಾದ ಭರತನನ್ನೂ, " ಪ್ರವಿಮಳ ಜಿನಶಾಸನದಿಂ ಪವಿತ್ರಮನೆ ಮಾಡಿ ಕೂಡೆ (ಕೂಂಡಿ) ಮೂಸಾಸಿರಮಂ ಭುವನನುತನಾದ" ಪೆರ್ಗಡೆ ಬೊಮ್ಮನನ್ನು, ಆತನ ಮಗನಾದ ಕೀರ್ತಿಮಂಡಳೇಶ್ವರತಿಳಕ ನಾಗದೇವನನ್ನು ಹಾಗೂ ಅವನ ಮಗನಾದ "ಆಹವಮಲ್ಲ ನೃಪತಿ" ಯನ್ನೂ ಮತ್ತು ಚಳುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲನ ಮಗನೂ, ವಿಕ್ರಮಾಂಕನ ತಮ್ಮನೂ, ಕವಿಯೂ, ಕಲಿಯೂ, "ಜಿನೇಂದ್ರಂ ತನಗಾಪ್ತನೂ" ಆದ ಧರಣಿಪತಿ ಕೀರ್ತಿದೇವನನ್ನೂ ಸ್ಮರಿಸಿದ್ದಾನೆ.

ಮೇಲೆ ಉಲ್ಲೇಖಿಸಿದ "ರಟ್ಟಂ ಶಂಖಾವನೀಶಂ" ಎಂಬ ಹೆಸರಿನ ಅರಸು ಯಾರೆಂಬುದು ಸ್ಪಷ್ಟವಾಗಿ ತಿಳಿಯುವದಿಲ್ಲ. ಆದರೆ ಜೈನಧರ್ಮವನ್ನು ಎತ್ತಿ ಹಿಡಿದು ಅದರ ಶ್ರೇಯಸ್ಸಿಗಾಗಿ ಶ್ರಮಪಟ್ಟ ಒಬ್ಬ ಅರಸನು ರಟ್ಟರ ವಂಶದಲ್ಲಿ ಇದ್ದನೆಂದು ತಿಳಿಯುತ್ತದೆ. ಈತನನ್ನು ಕುರಿತು ಕವಿ ರನ್ನನು ತನ್ನ ಅಜಿತನಾಥ ಪುರಾಣದಲ್ಲಿ ಹೀಗೆ ಉಲ್ಲೇಖ ಮಾಡಿದ್ದಾನೆ.

ಪಿರಿಯಂ ಭೂತುಗನಾತನಿಂ ಮಮುಳನಾತಂಗಂ ನೊಳಂಬಾಂತಕಂ ।
ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂಕರಂ॥
ಪಿರಿಯಂ ಶಂಕರಗಂಡನಲ್ತೆ ಪಿರಿಯಂ ತದ್ಭಾರಮಂ ಪೊತ್ತು ನಿ ।
ತ್ತರಿಸುತ್ತಿಪ್ಪುದರಿಂದೆ ನೀನೆ ಪಿರಿಯೈ ಶ್ರೀದಾನ ಚಿಂತಾಮಣೀ ॥

(ಅಜಿತ ಪುರಾಣ— ಆ ೧೨—ಪ. ೯)

ಜೈನಧರ್ಮದ ಏಳಿಗೆಗಾಗಿ ಪ್ರಯತ್ನಿಸಿದ ಈ ರಟ್ಟ ಶಂಕರಗಂಡನನ್ನು ಕುರಿತು ಶ್ರೀ. ಪಿ. ಬಿ. ದೇಸಾಯಿ ಅವರು ತಮ್ಮ "ಜೈನಿಝಂ ಇನ್ ಸೌಥ ಇಂಡಿಯಾ" ಎಂಬ ಗ್ರಂಥದಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ. ಈ ರಟ್ಟ ಶಂಕರಗಂಡನೇ ಬ್ರಹ್ಮಶಿವ ಕವಿಯು ಹೇಳಿರುವ "ರಟ್ಟಂ ಶಂಖಾವನೀಶಂ" ಆಗಿರಬಹುದೆಂದು ತೋರುತ್ತದೆ.

"ಕೂಡೆ (ಕೂಂಡಿ) ಮೂಸಾಸಿರ" ಎಂದು ಉಲ್ಲೇಖವಾದ ನಾಡು ಯಾವುದಾಗಿರಬಹುದು ? The tract covering roughly the present day Belgaum District and the adjacent areas, was known in olden times by the name Kūṇḍi or Kuhuṇḍi Maṇḍala (Jainism in South India. Shri P. B. Desai). ಇದರಿಂದ ಕವಿಯು ಉಲ್ಲೇಖಿಸುವ "ಕೂಂಡಿ ಮೂಸಾಸಿರ" ನಾಡು ಈಗಿನ ಬೆಳಗಾವಿ ಜಿಲ್ಹೆ ಹಾಗು ಸುತ್ತುಮುತ್ತಲಿನ ಪ್ರದೇಶವಾಗಿತ್ತೆಂದು ಕಂಡುಬರುತ್ತದೆ. ("ಅ" ಪ್ರತಿಯಲ್ಲಿ "ಕೂಡೆ ಮೂಸಾಸಿರ" ವೆಂದು ಬರೆದಿರುವದರಿಂದ ಅದು ಹಾಗೆಯೆ ಅಚ್ಚಾಗಿರುತ್ತದೆ. ಆದರೆ "ಕೂಡೆ ಮೂಸಾಸಿರ" "ಕೂಂಡಿ ಮೂಸಾಸಿರ" ವಿರಬಹುದೇ ?" ಎಂದು ಸಂಶಯ ಬಂದಾಗ ನಾವು ಪುನಃ ಎಲ್ಲ ಪ್ರತಿಗಳನ್ನೂ ಕೂಲಂಕಷವಾಗಿ ಪರೀಕ್ಷೆ ಮಾಡಿದೆವು. ಆಗ ಹರಿದುಹೋದುವೆಂದು ಬಿಟ್ಟುಬಿಡಲಾದ "ಇ" ಪ್ರತಿಯು ಹರುಕು ಓಲೆಯಲ್ಲಿ "ಕೂಂಡಿ ಮೂಸಾಸಿರ"ವೆಂದು ಬರೆದಿದ್ದುದು ಕಂಡು

ಬಂದಿತು. ಕಾರಣ "ಅ"ಪ್ರತಿಯ "ಕೂಡೆ ಮೂಸಾಸಿರಕ್ಕೆ" "ಇ" ಪ್ರತಿಯ "ಕೊಂಡಿ ಮೂಸಾಸಿರ"ವು ಪಾಠಾಂತರವೆಂದು ಲಕ್ಷಿಸಬೇಕಾಗಿ ವಿನಂತಿ.)

ಇದರಿಂದ ಕವಿಯು ಹೇಳುವ ಪೆರ್ಗಡೆ ಬೊಮ್ಮ, ಆತನ ಮಗ ಆಹವಮಲ್ಲ ನೃಪತಿ ಇವರೆಲ್ಲ ಈಗಿನ ಬೆಳಗಾವಿ ಜಿಲ್ಹೆಯ ನಾಡನ್ನು ಆಳುತ್ತಿರಬೇಕೆಂದು ಊಹಿಸಬಹುದು.

ಒಂದನೆಯ ಅಧಿಕಾರದ ೨೭ನೆಯ ಪದ್ಯದಲ್ಲಿ ಮೇಘಚಂದ್ರ ಮುನಿಯ ಬಗ್ಗೆ ಹೇಳುವಾಗ ಅವರು "ಮೊರಂಬ"ದಲ್ಲಿದ್ದರೆಂದು ಕವಿ ಹೇಳುತ್ತಾನೆ. ಈ "ಮೊರಂಬ"ವು ಧಾರವಾಡ ಜಿಲ್ಹೆಯ ಮೊರಬ ಗ್ರಾಮವೇ ಆಗಿದೆ.

ಕವಿಯ ಕಾಲ

ಭಾರತೀಯ ಸ್ವಭಾವದಲ್ಲಿ ಸನಾತನತ್ವಕ್ಕೆ, ಕಾಲಾತೀತ ಅವಸ್ಥೆಗೆ ಇರುವ ಆತ್ಯಂತಿಕ ಬೆಲೆಯ ಮೂಲಕ ಕಾಲಪರಿಸ್ಥಿತಿ ವಿಷಯದಲ್ಲಿ ದುರ್ಲಕ್ಷ್ಯ ಉಂಟಾದುದು ಕಂಡುಬರುತ್ತದೆ. ಆದ್ದರಿಂದ ನಮ್ಮ ಕವಿಗಳು ತಮ್ಮ ಕಾಲಪರಿಸ್ಥಿತಿ ಹೇಳುವದು ತೀರ ಕಡಿಮೆ. ಅದರಂತೆ ಐತಿಹಾಸಿಕ ಘಟನೆಗಳು-ಇವು-ಎಂಬ ರೀತಿಯಲ್ಲಿ ಬರೆದಿಡುವ ಪದ್ಧತಿ ನಮ್ಮಲ್ಲಿ ನಡೆದುಬಂದಿಲ್ಲ. ಅಂತಲೇ ನಮ್ಮ ದೇಶದ ಮಹಾಪುರುಷರ ಪುರಾಣಗಳು ದೊರೆಯುವವೇ ಹೊರತು ಚರಿತ್ರೆ ಗ್ರಂಥಗಳಿಲ್ಲ. ಬ್ರಹ್ಮಶಿವ ಕವಿಯು ಇದಕ್ಕೆ ಹೊರತಾಗಿಲ್ಲ. ಆತನು ತನ್ನ ಕಾಲವನ್ನೇ ಹೇಳಿಕೊಂಡಿಲ್ಲ. ಆದ್ದರಿಂದ ಅನೇಕ ಜನ ಕನ್ನಡ ಕವಿಗಳ ವಿಷಯದಲ್ಲಿದ್ದಂತೆ ಬ್ರಹ್ಮಶಿವನ ಕಾಲದ ವಿಷಯದಲ್ಲೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಕನ್ನಡ ಕವಿಚರಿತೆಕಾರರು ಬ್ರಹ್ಮಶಿವ ಕವಿಯ ಕಾಲವು ಕ್ರಿ. ಶ. ಸುಮಾರು ೧೧೦೦ ಎನ್ನುತ್ತಾರೆ. ಇದಕ್ಕೆ ಅವರು ಕೊಡುವ ಕಾರಣಗಳು ಇವು. ಬ್ರಹ್ಮಶಿವನು ತನ್ನ ಸಮಕಾಲೀನನಾಗಿರಬಹುದಾದ ಚಾಳುಕ್ಯ ರಾಜನಾದ ತ್ರೈಲೋಕ್ಯ ಮಲ್ಲನ ಮಗ, ಆರನೆಯ ವಿಕ್ರಮಾದಿತ್ಯನ ತಮ್ಮ-ಕೀರ್ತಿವರ್ಮ (ಗೋವೈದ್ಯದ ಕರ್ತೃ)ನನ್ನು ಸ್ತುತಿಸಿ ತನ್ನ ಗ್ರಂಥ ಆರಂಭ ಮಾಡಿರುವನು; ಮತ್ತು ಈ ಕವಿಯ ಗುರುವಾದ ವೀರಣಂದಿ ಮುನಿ ೧೧೧೫ ರಲ್ಲಿ ಗತಿಸಿದ ಮೇಘಚಂದ್ರ ತ್ರೈವಿದ್ಯನ ಮಗನಾಗಿರಬೇಕು

ಡಾ. ಎ. ವೆಂಕಟಸುಬ್ಬಯ್ಯನವರು ಗೋವೈದ್ಯವನ್ನು ಬರೆದ ಕೀರ್ತಿವರ್ಮನ ತಂದೆಯಾದ ತ್ರೈಲೋಕ್ಯಮಲ್ಲನೆಂಬವನು ಚಾಲುಕ್ಯ ಚಕ್ರವರ್ತಿ

ಯಾದ ತ್ರೈಲೋಕ್ಯಮಲ್ಲನ ಕಾಲದಲ್ಲಿ ಪಾಲಭ ಎಂಬ ನಗರವನ್ನೋ ನಾಡನ್ನೋ ಆಳುತ್ತಿದ್ದ ಒಬ್ಬ ಸಣ್ಣ ಅಧಿಕಾರಿ ಇರಬೇಕೆಂದೂ, ಸಮಯ ಪರೀಕ್ಷೆಯಲ್ಲಿ ಸ್ತುತಿಸಲ್ಪಟ್ಟಿರುವ ಆಹವಮಲ್ಲ ಮಹೀಶನು ಪ್ರಾಯಃ ಚಾಲುಕ್ಯ ಚಕ್ರವರ್ತಿಯಾದ ತ್ರೈಲೋಕ್ಯಮಲ್ಲ ಆಹವಮಲ್ಲನೇ ಇರಬೇಕೆಂದೂ ಆದುದರಿಂದ ಕೀರ್ತಿವರ್ಮ, ಬ್ರಹ್ಮಶಿವರು ೧೦೬೦ರಿಂದ ೧೦೬೫ ರಲ್ಲಿ ಜೀವಿಸುತ್ತಿದ್ದಿರಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ. ಬ್ರಹ್ಮಶಿವನ ಗುರುವಾದ ವೀರಣಂದಿಯು ೧೧೧೫ರಲ್ಲಿ ಗತಿಸಿದ ಮೇಘಚಂದ್ರನ ಶಿಷ್ಯ ನಲ್ಲನೆಂಬುದು ಡಾ. ವೆಂಟಕಸುಬ್ಬಯ್ಯನವರ ಹೇಳಿಕೆ.

ಶ್ರೀ. ಎಚ್. ದೇವಿರಪ್ಪ ಎಂ. ಎ. ಅವರು ಬ್ರಹ್ಮಶಿವನ ಕಾಲವು ಸುಮಾರು ಕ್ರಿ. ಶ. ೧೨೦೦ ಆಗಿರಬೇಕೆಂದು ಊಹಿಸುತ್ತಾರೆ.

ಅವರು ಕೊಡುವ ಕಾರಣಗಳು ಹೀಗೆ—

(೧) ಸುಮಾರು ೧೨೬೦ರಲ್ಲಿದ್ದ ಕೇಶಿರಾಜನ ಶಬ್ದಮಣಿದರ್ಪಣ ದಲ್ಲಿ ಬ್ರಹ್ಮಶಿವನ ತ್ರೈಲೋಕ್ಯಚೂಡಾಮಣಿಯಲ್ಲಿ ಬರುವ ಒಂದು ಪದ್ಯದ "ಅಹಿಂಸಾಲಕ್ಷಣೋಧರ್ಮಎಂಬುದನೀತತ್ಸವಿತುರ್ವರೇಣ್ಯ ರಜಿದರ್ ತ್ರೈಲೋಕ್ಯ ಚೂಡಾಮಣೀ" ಎಂಬ ಭಾಗ ಉದಾಹರಿಸ ಲಾಗಿದೆ.

ಪುಲಿಗೆರೆಯ ಸೋಮನಾಥ ಬಸದಿಯಲ್ಲಿ ಸೋಮನಾಥದ ಸೋಮನಾಥನನ್ನು ಸ್ಥಾಪಿಸಿದ ವಿಷಯ ಸಮಯಪರೀಕ್ಷೆಯಲ್ಲಿ ಬಂದಿದೆ. ಇದನ್ನು ಮಾಡಿದವನು ಆದಯ್ಯ. ಈ ಆದಯ್ಯನ ಕಾಲ ಸು. ಕ್ರಿ.ಶ. ೧೧೭೦. ಆದ್ದರಿಂದ ಬ್ರಹ್ಮಶಿವನು ಕ್ರಿ. ಶ. ೧೧೭೦ ಹಾಗೂ ೧೨೬೦ರ ನಡುವೆ ಇರಬೇಕು.

(೨) ಬ್ರಹ್ಮಶಿವನ ಗ್ರಂಥದಲ್ಲಿಯ ಅನೇಕ ಪದ್ಯಗಳಲ್ಲಿ "ಲಿಂಗಿಗಳ್" "ಮಾಹೇಶ್ವರರ್" "ಶಿವಭಕ್ತರ್" ಚರಲಿಂಗಿಗಳ್" "ಪರಲಿಂಗಿಗಳ್" ಈ ಮಾತುಗಳಿವೆ. ಇವುಗಳನ್ನು ಕವಿ ವೀರಶೈವರನ್ನು ನಿರ್ದೇಶಿಸಿಯೇ ಹೇಳುತ್ತಿದ್ದಾನೆಂದು ತೋರುತ್ತದೆ.

(೩) ೧೧೭೬–೧೧೯೫ರ ಕಾಲದ ಶ್ರವಣಬೆಳಗೊಳದ ಶಾಸನ ಗಳಲ್ಲಿ ಬರುವ ಬೊಮ್ಮ "ಮಲ್ಲದೇವ" "ಮಲ್ಲಿನಾಥ" ಇವರೇ ಬ್ರಹ್ಮಶಿವ ಕವಿ ಹೇಳುವ ಪೆರ್ಗಡೆಬೊಮ್ಮ, ಆಹವಮಲ್ಲ ಮಹೀಶರು ಇರಬೇಕು. ಆದ್ದರಿಂದ ಕವಿ ೧೧೭೬–೧೧೯೫ರ ನಡುವೆ ಇದ್ದಂತಾಯ್ತು.

(೪) ಇಬ್ಬರು ಮೇಘಚಂದ್ರ, ಇಬ್ಬರು ವೀರಣಂದಿ ಮುನಿಗಳನ್ನು ಕವಿಬ್ರಹ್ಮಶಿವ ಉಲ್ಲೇಖಿಸಿದ್ದಾನೆ. ಇವರಲ್ಲಿ ಎರಡನೆಯ ಮೇಘಚಂದ್ರ ೧೧೭೫ರಲ್ಲಿ ಮೃತಪೊಂದಿದ ನಯಕೀರ್ತಿ ಶಿಷ್ಯ. ಈ ಮೇಘಚಂದ್ರನಿಗೆ ವೀರಣಂದಿ ಎಂಬ ಶಿಷ್ಯನಿದ್ದನೆಂದು ಶ್ರವಣಬೆಳಗೊಳದ ೭೫ನೆಯ ಶಾಸನ ದಿಂದ ತಿಳಿಯುತ್ತದೆ.

(೫) ಕ್ರಿ. ಶ. ೧೧೮೯ರಲ್ಲಿ ಚಂದ್ರಪ್ರಭ ಪುರಾಣ ಬರೆದು ಮುಗಿ ಸಿದ ಅಗ್ಗಳ ದೇವನು ತನ್ನ "ಕೆಳೆಯು" ಎಂದು ಕವಿ ಹೇಳಿದ್ದಾನೆ. ಆದ್ದ ರಿಂದ ಬ್ರಹ್ಮಶಿವನು ಕ್ರಿ. ಶ. ೧೧೮೯ರಲ್ಲಿ ಇದ್ದಂತಾಯಿತು.

(೬) ಸು. ಕ್ರಿ. ಶ. ೧೨೦೦ರಲ್ಲಿ ಇದ್ದಿರಬೇಕೆಂದು ತಿಳಿಯಲಾದ ಬಂಧುವರ್ಮನನ್ನು ಕವಿ ಉಲ್ಲೇಖ ಮಾಡಿದ್ದಾನೆ. ಕಾರಣ ಬ್ರಹ್ಮಶಿವನು ೧೨೦೦ರಲ್ಲಿ ಸಮಯಪರೀಕ್ಷೆ ಬರೆದಿರಬೇಕು. ನಂತರ ತ್ರೈಲೋಕ್ಯಚೂಡಾ ಮಣಿ ಬರೆದಿರಬೇಕು.

ಇದರಲ್ಲಿ ಮೊದಲಿನ ಇಬ್ಬರು ಮಹನೀಯರು ಕವಿಯ ಕಾಲವನ್ನು ಕುರಿತು ವಿಚಾರಿಸುವಾಗ "ಸಮಯಪರೀಕ್ಷೆ"ಯ ಅಪೂರ್ಣ ಪ್ರತಿ ಬಹುತಃ ನಾವು ಬಳಸಿಕೊಂಡಿರುವ "ಈ" ಪ್ರತಿ (ಇದರಲ್ಲಿ ಮೊದಲನೆಯ ೩೭ ಪದ್ಯಗಳಿಲ್ಲ) ಯನ್ನು ಅವಲಂಬಿಸಿದ್ದರೆಂದು ಕಾಣುತ್ತದೆ. ಆದ್ದರಿಂದ ಡಾ. ವೆಂಕಟಸುಬ್ಬಯ್ಯನವರು ಹೇಳುವ ಮಾತುಗಳು ಸತ್ಯಕ್ಕೆ ದೂರಾ ಗಿಯೇ ಉಳಿಯುತ್ತವೆ. ಆದರೆ ಶ್ರೀ. ನರಸಿಂಹಾಚಾರರ ವಿಚಾರವು ಒಮ್ಮೆಲೇ ದೂರೀಕರಿಸುವಂತಿಲ್ಲವಾದರೂ ಸಂಪೂರ್ಣ ಸತ್ಯವಾಗುವದಿಲ್ಲ. ಅದರಂತೆ ಶ್ರೀ. ದೇವೀರಪ್ಪನವರು ಮಾಡಿದ ವಿಚಾರವು ಒಮ್ಮೆಲೇ ಸರಿ ಯಲ್ಲವೆಂದು ಹೇಳುವಷ್ಟು ಹಗುರಾಗಿಲ್ಲವಾದರೂ ಅವರು ಹೇಳುವ ಮಾತುಗಳಲ್ಲಿ ಬಂದಿರುವ ವಿಚಾರಗಳೂ ಕವಿಯ ಕಾಲವನ್ನು ತಿಳಿಯಲು ಸಾಕಷ್ಟು ಪುಷ್ಟಿಯನ್ನು ಕೊಡುತ್ತಿಲ್ಲ.

ಶ್ರೀ ದೇವೀರಪ್ಪನವರು ಹೇಳುವಂತೆ ಬ್ರಹ್ಮಶಿವನು ಬಸವಣ್ಣನವರ ನಂತರ ಆಗಿಹೋದನೆಂಬುದು ಸ್ಪಷ್ಟವಾಗುತ್ತದೆ. ಬಸವಣ್ಣನವರು ವೀರ- ಶೈವಮತದ ಸಂಸ್ಥಾಪಕರು. ಹೀಗಿರುವಾಗ ಬ್ರಹ್ಮಶಿವಕವಿಯು ತನ್ನ ಗ್ರಂಥದಲ್ಲಿ ವೀರಶೈವ ಮತವನ್ನು ಎಲ್ಲಿಯೂ ಎತ್ತಿ ಆಡುವದಿಲ್ಲ. ವೀರ- ಶೈವ ಮತಕ್ಕೆ ಮೊದಲು ಶೈವ ಮತವು ಕರ್ನಾಟಕದಲ್ಲಿ ಇತ್ತೆಂಬುದು ಸ್ಪಷ್ಟವದೆ. ಅಲ್ಲದೆ ಲಿಂಗವನ್ನೆ ಪೂಜೆ ಮಾಡುವ ಲಾಕುಳರು, ಕಾಳಾ-

ಮುಖರು ಇಲ್ಲಿದ್ದರು. ಇವರೆಲ್ಲರನ್ನೂ ಒಂದುಗೂಡಿಸಿ, ವೀರಶೈವ ಮತ ವನ್ನು ಸ್ಥಾಪಿಸಿದ ಶ್ರೇಯಸ್ಸು ಬಸವಣ್ಣನವರದಾಗಿದೆ. ಮತಸ್ಥಾಪನೆ ಮಾಡುವಾಗ ಬಸವಣ್ಣನವರು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಜಾತಿಭೇದವನ್ನು ಕಿತ್ತೊಗೆಯಲು ಅವರು ಪ್ರಯತ್ನಿಸಿದರು. ಲಿಂಗಧಾರಣ ಮಾಡಿದ ಶಿವಭಕ್ತನು ಹೊಲೆಯನಾದರೂ ಆತನಲ್ಲಿ ಅವರು ಊಟಮಾಡಲು ಹಿಂಜರಿಯಲಿಲ್ಲ. ಅದರಂತೆ ಶುದ್ಧ ಆಚಾರದತ್ತ ಅವರು ಗಮನ ಕೊಟ್ಟು ಆ ರೀತಿ ಸುಧಾರಣೆಯನ್ನು ಮಾಡಿದರು. (ಬಸವದೇವರ ರಗಳೆ, ಬಸವೇಶ್ವರ ವಚನ ಶ್ರೀ. ಬಸವನಾಳರಿಂದ ಸಂಪಾದಿತ ೬೪೮ನೆಯ ವಚನ ನೋಡಿರಿ). ಅಂದಮೇಲೆ, ಈ ಮೊದಲೇ ಹೇಳಿದಂತೆ, ಶೈವ ಮೊದಲಾದ ಧರ್ಮಗಳಲ್ಲಿದ್ದ ಕೆಲವು ಕುಂದುಕೊರತೆಗಳನ್ನು ಬಸವಣ್ಣನವರು ಕಿತ್ತೊಗೆಯಲು ಪ್ರಯತ್ನಿಸಿದರೆಂತಾಗುವದಿಲ್ಲವೇ? ಅವೇ ಕುಂದುಕೊರತೆಗಳು ಅನ್ಯಮತದವರಲ್ಲಿ ರೂಢಿಯಲ್ಲಿವೆಯೆಂದು ಬ್ರಹ್ಮಶಿವನು ಹೇಳುವಲ್ಲಿ ಬಸವಣ್ಣನವರ ಮೊದಲಿನ ವಿಷಯ ಹೇಳುತ್ತಿದ್ದಾನೆಂದು ಅರ್ಥವಾಗುವದಿಲ್ಲವೇ? ಉದಾ :-

" ಪೊಲಗೇವೈಸರು ತೊಗಲಿನೊ । ೞಲಸದೆ ನೀರ್ಗುಡಿಯುಉ-
ತಿರ್ಪರಡಗಂ ತಿಂಬರು ॥
ಪೊಲೆಯರತೆರದಿಂ ನೆಗಳ್ವರು । ಪೊಲೆಯರ ಪೆಸಗೊಂಡ-
ಡುಣ್ಬರಾ ಸಚ್ಚರಿತರ್ ॥"
(ಮೊದಲಾದವು).

ಬಸವಣ್ಣನವರು ಲಿಂಗಪೂಜೆಗೆ ಮಹತ್ವ ಕೊಟ್ಟರು. ಅಷ್ಟಾವರ್ಣಗಳು, ಷಟ್‌ಸ್ಥಲ ಸಿದ್ಧಾಂತ ಒಂದು ರೂಪುಗೊಂಡು, ಇಷ್ಟಲಿಂಗಪೂಜೆ ಪ್ರಸಿದ್ಧವಾಯಿತು. ಸ್ಥಾವರಲಿಂಗದ ಪೂಜೆ ಹಿಂದುಳಿಯಿತು ಸಮಯಪರೀಕ್ಷೆಯಲ್ಲಿ ಇಷ್ಟಲಿಂಗಪೂಜೆ, ಅಷ್ಟಾವರ್ಣ, ಷಟ್‌ಸ್ಥಲ ಸಿದ್ಧಾಂತಗಳ ವಿಷಯವೇ ಬಂದಿಲ್ಲ. ಶೈವರ್, ಗೊರವರ್, ಲಿಂಗಿಗಳ್, ಮಾಹೇಶ್ವರರ್ ಎಂದು ಶಬ್ದಗಳ ಉಲ್ಲೇಖವಿದ್ದರೂ ಅವು ಶ್ರೀ ದೇವೀರಪ್ಪ ಅವರು ವಿಚಾರಿಸಿದಂತೆ, ವೀರಶೈವರನ್ನು ಕುರಿತು ಇರದೆ ಶೈವ ಮೊದಲಾದವರನ್ನು ಕುರಿತು ಇವೆ ಎಂದು ತಿಳಿಯಬಹುದಾಗಿದೆ. ಒಂದುವೇಳೆ ಬ್ರಹ್ಮಶಿವನು ಕ್ರಿ. ಶ. ೧೨೦೦ರ ಸುಮಾರಿಗೆ ಅಥವಾ ಅದಕ್ಕೂ ಮುಂದೆ ಇದ್ದುದಾಗಿದ್ದರೆ ಅವನು ಬಸವಣ್ಣನವರು ಹಾಗೂ ಅವರ ಸಮಕಾಲಿನರಾದ ಇತರ ಶಿವಶರಣರ ಉಲ್ಲೇಖ,

ಅವರ ತತ್ತ್ವ ಹಾಗು ಕಲ್ಯಾಣಕ್ರಾಂತಿ ಕುರಿತು ವಿಚಾರ ಮಾಡದಿರು ತ್ತಿದ್ದಿಲ್ಲ. ಆದರೆ ಎಲ್ಲಿಯೂ ಈ ಬಗ್ಗೆ ಉಲ್ಲೇಖ ಇಲ್ಲ. ಆದರೆ ಬಸವಣ್ಣ ನವರ ಪೂರ್ವದಲ್ಲಿ ಇದ್ದನೆಂದೂ, ವಚನ ರಚನೆಗೆ ಆರಂಭ ಮಾಡಿದವನು ಎಂದೂ ಪ್ರತೀತಿ ಇರುವ ಜೇಡರ ದಾಸಿಮಯ್ಯನ ಉಲ್ಲೇಖ ಬ್ರಹ್ಮಶಿವ ಮಾಡಿದ್ದಾನೆ. (ಅಧಿಕಾರ ೯—ಪದ್ಯ ೨೮) ಇದರಿಂದ ಬ್ರಹ್ಮಶಿವನು ಬಸ ವಣ್ಣ ಹಾಗೂ ಇತರ ಶಿವಶರಣರ ಕಾಲಕ್ಕಿಂತ ಮೊದಲು ಬಾಳಿರಬೇಕೆಂದು ಊಹಿಸಬಹುದಲ್ಲವೇ ?

ಪುಲಿಗೆರೆಯಲ್ಲಿ ಸೋಮನಾಥನ ಸ್ಥಾಪನೆಯಾದ ವಿಚಾರವನ್ನು ಆಧಾರವಾಗಿಟ್ಟುಕೊಂಡು ಕ್ರಿ. ಶ. ೧೧೬೦ರ ನಂತರ ಬ್ರಹ್ಮಶಿವನು ಬಾಳಿರ ಬೇಕೆಂದು ಶ್ರೀ. ದೇವಿರಪ್ಪ ಅವರು ಹೇಳಿದ್ದಾರೆ. ಇದು ಬಲವತ್ತರವಾದ ಆಧಾರವೆಂದು ತಿಳಿಯಲು ಬರುವಂತಿಲ್ಲ. ಏಕೆಂದರೆ ಕವಿ ಬ್ರಹ್ಮಶಿವನು ಕೇವಲ ಪುಲಿಗೆರೆಯ ಸೋಮನಾಥನನ್ನಷ್ಟೇ ಜೈನದೇವತೆ ಎಂದು ಕಾಣು ತ್ತಿಲ್ಲ. ಜಗತ್ತಿನ ಪ್ರತಿಯೊಂದು ದೇವತೆ, ಗುಡಿಗುಂಡಾರಗಳ ಹಿಂದೆ ಜೈನ ಧರ್ಮದ ಪ್ರಭಾವ ಇದೆ ಎಂದು ಆತನು ಪ್ರತಿಪಾದಿಸುತ್ತಿದ್ದಾನೆ. ಉದಾ ಹರಣೆಗಾಗಿ ಒಂದೆರಡನ್ನು ಇಲ್ಲಿ ಹೇಳಬಹುದು. "ಜಗತೀ ವಿಖ್ಯಾತೆ ಕೊಲ್ಲಾಪುರವರದ ಮಹಾ ಲಕ್ಷ್ಮೀ........ದೇವಿತಾಂ ಜೈನೆ........"ಎಂದೂ "ವೀರದೊಳುಕ್ಕಿ ಮಚ್ಚರಿಸಿ ಕೋಪದೆ ಜೈನನೆ ಕಾದಿ ಸತ್ತು ಮೈಲಾರನೆನಲ್ಕೆ ರೂಢಿವಡೆದಂ" ಹಾಗು "ಕರಿಮುಖ ಯಕ್ಷನಲ್ಲನೆ ವಿನಾಯಕನೆಂಬವ ನೀಗಳ್".

ಕೊಲ್ಲಾಪುರವು ಶಾಕ್ತಸಂಪ್ರದಾಯಕ್ಕೆ ಬಹು ಪ್ರಾಚೀನ ಕಾಲ ದಿಂದಲೂ ಸೇರಿತ್ತೆಂಬುದು ಶಿಲಾಶಾಸನಗಳ ಆಧಾರದಿಂದ ಸಿದ್ಧವಾಗುತ್ತಿದೆ. ಈ ದೃಷ್ಟಿಯಿಂದ ಕವಿ ಹೇಳುವ ಮಹಾಲಕ್ಷ್ಮಿಯು ಜೈನೆ ಎಂಬ ಮಾತು ಐತಿಹಾಸಿಕ ಸತ್ಯವಾಗಲಾರದು. ಆದರೂ ಈ ಮಹಾಲಕ್ಷ್ಮಿಯು ಜೈನ ಪದ್ಮಾವತಿ ಎಂದೂ ಈ ಬಗ್ಗೆ ಒಂದು ಶಿಲಾಶಾಸನವೂ ಕೂಡ ಅಲ್ಲಿತ್ತೆಂದೂ ಜನರು ನಂಬುತ್ತಿದ್ದರಾಗಿ ಪ್ರೊ. ಕುಂದಣಗಾರ ಅವರು ಪ್ರ. ಕ. ಸಂಪುಟ ೨೨ರಲ್ಲಿ ಬರೆದ "ಕೊಲ್ಲಾಪುರ ಆಗ ಈಗ" ಎಂಬ ಲೇಖನದಲ್ಲಿ ಹೇಳುತ್ತಾರೆ. ಇದರಂತೆ ಇದೇ ದೇವತೆಯನ್ನು ಜಗದಂಬಾ ಎಂಬ ಹೆಸರಿನಿಂದ ಶೈವ ಸಂಪ್ರ ದಾಯದವರು ಕರೆದದ್ದುಂಟು. ಇವನ್ನೆಲ್ಲ ಗ್ರಹಿಸಿದಾಗ ಒಂದೇ ದೇವತೆ ಯನ್ನು ಬೇರೆ ಬೇರೆ ಮತದವರು ತಮಗೆ ಇಷ್ಟವಾದ ಹೆಸರಿನಿಂದ ಕರೆದು

ಪೂಜಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಎಲ್ಲಮ್ಮ ಕ್ಷೇತ್ರವನ್ನು ನೆನಪಿಗೆ ತಂದು ಕೊಳ್ಳಬಹುದು. ಈ ಎಲ್ಲಮ್ಮನು ಸವದತ್ತಿಯನ್ನು ಆಳುತ್ತಿದ್ದ ರಟ್ಟರ ಕಾಲದಲ್ಲಿ ಸ್ಥಾಪಿತವಾದ ಜೈನ ಪದ್ಮಾವತಿ ಎಂದು ಹೇಳುತ್ತಾರೆ. ಈ ಎಲ್ಲಮ್ಮನ ದೇವಸ್ಥಾನದ ಗರ್ಭಗುಡಿಯ ಬಾಗಿಲದ ಮೇಲೆ ಜೈನ ತೀರ್ಥಂಕರನ ಮೂರ್ತಿ ಇತ್ತೆಂದು ಕೆಲವು ವರ್ಷಗಳ ಹಿಂದೆ ಕಣ್ಣಾರೆ ಕಂಡವರು ಹೇಳುತ್ತಾರೆ. ಆದರೆ ಈಗ ಎಲ್ಲಮ್ಮನು ಎಲ್ಲರ ಅಮ್ಮನಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ಕವಿಯು ಹೇಳುವ ಪುಲಿಗೆರೆಯ ಸೋಮನಾಥನ ವಿಷಯವನ್ನು ಲಕ್ಷಿಸಿದಾಗ ಒಂದೇ ವಿಗ್ರಹವನ್ನು ಜೈನರು ಮತ್ತು ಶೈವರು ಬೇರೆ ಬೇರೆ ಹೆಸರಿನಿಂದ ಪೂಜಿಸುತ್ತಿರಬೇಕೆಂದು ಕಾಣುತ್ತದೆ. ಕಾಲಾಂತರದಲ್ಲಿ ಅದು ಸಂಪೂರ್ಣವಾಗಿ ಒಂದೇ ಧರ್ಮದವರ ದೇವತೆಯಾಗಿ ಮಾರ್ಪಟ್ಟಿರಬೇಕು. ಈ ವಿಷಯವಾಗಿ ಕವಿಯು ಹೇಳುವ ಪೂರ್ತಿ ಪದ್ಯವು ಹೀಗಿದೆ. "ಪುಲಿಗೆರೆಯಲ್ಲಿ ಮುಂ ವೃಷಭವಾಹನ ಯಕ್ಷನನಾದಿಕಾಲದೊ|ಳ್ನೆಲದೊಳೆ ಪೂಳ್ದುದಂ ಬೆರಟಿ ಕಂಡದನೊರ್ಮೆಯೆ ನಂದಿವಾಹನಂ। ನೆಲದೊಳಗಿರ್ದು ರುದ್ರನೊಗೆ ತಂದನಿದನಲ್ತೆ ಸ್ವಯಂಭುವೆಂದು ಗಾ। ವಿಲರದನೀಗಳರ್ಚಿಸುವರೇನದು ತಮ್ಮ ಸ್ವಯಂಭು ಲಿಂಗಮೇ॥". ಇಲ್ಲಿ ಆದಯ್ಯನು ಸೌರಾಷ್ಟ್ರದಿಂದ ಸೋಮನಾಥನನ್ನು ತಂದು ಪ್ರತಿಷ್ಠಿಸಿದನೆಂದು ಕವಿ ಹೇಳುವದಿಲ್ಲ. ಒಂದು ವೇಳೆ ಆದಯ್ಯನು ಹೀಗೆ ಮಾಡಿದ ನಂತರ ಕವಿಯು ಈ ಗ್ರಂಥವನ್ನು ಬರೆದಿದ್ದರೆ ಅವನು ಸ್ಪಷ್ಟವಾಗಿ ಹಾಗೆ ಉಲ್ಲೇಖ ಮಾಡಿ ತನಗೆ ಹೇಳಬೇಕಾದುದನ್ನು ಹೇಳಬಹುದಿತ್ತು. ಅಲ್ಲದೆ ಸೋಮನಾಥನೆಂದು ಜನರು ಪೂಜಿಸುತ್ತಿದ್ದರೆಂದೂ ಆತನು ಹೇಳುವದಿಲ್ಲ. ನೆಲದಲ್ಲಿ ಹೂಳಿ ಹೋದ ನಂದಿವಾಹನ ಮೂರ್ತಿಯೊಂದು ಸಿಕ್ಕಾಗ ಅದಕ್ಕೆ ಸ್ವಯಂಭುವೆಂದು ಕರೆದು ಪೂಜಿಸಿದರೆಂದು ಹೇಳುತ್ತಾನೆ. ಇದರಿಂದ ಆದಯ್ಯನ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಸೋಮನಾಥ ಎಂಬ ಹೆಸರು ಈ ಕವಿಗೆ ಗೊತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈತನು ಆದಯ್ಯನ ಕಾಲಕ್ಕಿಂತಲೂ ಪೂರ್ವದಲ್ಲಿಯೇ ಬದುಕಿರಬೇಕೆಂದು ಊಹಿಸಲು ಅವಕಾಶವಾಗುತ್ತಿದೆ.

ಶ್ರೀ. ದೇವೀರಪ್ಪನವರು ಕ್ರಿ. ಶ. ೧೧೭೬ರಲ್ಲಿ ತೀರಿಹೋದ ನಯಕೀರ್ತಿಯ ಬಗ್ಗೆ ಹೇಳಿ ಆತನ ಶಿಷ್ಯರಲ್ಲಿ ಮೇಘಚಂದ್ರ ಎಂಬವನಿದ್ದ. ಅವನೇ ಬ್ರಹ್ಮಶಿವಕವಿ ಹೇಳುವ ಎರಡನೆಯ ಮೇಘಚಂದ್ರನಿರಬೇಕೆಂದೂ

ಕಾರಣ ಈ ತರುವಾಯ ಬ್ರಹ್ಮಶಿವ ಬಂದಿರಬೇಕೆಂದೂ ಹೇಳುತ್ತಾರೆ. ಆದರೆ ಅದೇ ಶ್ರ. ಬೆ. ದ ಇನ್ನೊಂದು ಶಾಸನದಲ್ಲಿ ಕ್ರಿ. ಶ. ೧೧೯೯ರಲ್ಲಿ "ಮುಡಿಪಿದ" ಒಬ್ಬ ನಯಕೀರ್ತಿ ಇದ್ದನೆಂಬ ಉಲ್ಲೇಖವಿದೆ. (ನೇ. ಪು. ಪುಟ-xxv). ಕಾರಣ ಇಲ್ಲಿಯೂ ನಿರ್ಧಾರವಾಗಿ ಏನನ್ನೂ ಹೇಳಲು ಬರುವಂತಿಲ್ಲ!

ಬ್ರಹ್ಮಶಿವನು ಅತ್ತಿಮಬ್ಬೆಯ ಉಲ್ಲೇಖ ಮಾಡಿದ್ದಾನೆ. ಮಹಾಕವಿ ರನ್ನನಿಂದ ಅಜಿತನಾಥ ಪುರಾಣವನ್ನು ಬರೆಯಿಸಿ ಪೊನ್ನ ಕವಿಯ ಶಾಂತಿ ಪುರಾಣದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ ದಾನ ಮಾಡಿ, ಸಾವಿರಕ್ಕೆ ಮೇಲ್ಪಟ್ಟು ಬಸದಿಗಳನ್ನು ಕಟ್ಟಿಸಿ, ಅನೇಕ ಬಸದಿಗಳ ಜೀರ್ಣೋದ್ಧಾರ ಮಾಡಿ ತನ್ನ ದಾನಕಾರ್ಯದಿಂದ 'ದಾನ ಚಿಂತಾಮಣಿ' ಎಂದು, ಹತ್ತನೆಯ ಶತಮಾನದ ಕೊನೆಯಲ್ಲಿ ಹನ್ನೊಂದನೆಯ ಶತಮಾನದ ಆರಂಭದಲ್ಲಿ, ಪ್ರಸಿದ್ಧಳಾದ ಅತ್ತಿಮಬ್ಬೆಯು ಕರ್ನಾಟಕದ ಇತಿಹಾಸದಲ್ಲಿ ಚಿರಸ್ಮರಣೀ-ಯಳಾಗಿದ್ದಾಳೆ. ಬ್ರಹ್ಮಶಿವಕವಿ ಅವಳನ್ನು

"ಗುಣದಕಣಿ ದಾನಚಿಂತಾ |
ಮಣಿ ವಿಮಳ ಚರಿತ್ರ ಜೈನಶಾಸನ ರಕ್ಷಾ ||
ಮಣಿ ಸಜ್ಜನೈಕ ಚೂಡಾ- |
ಮಣಿಯೆಂದೆಂದತ್ತಿಮಬ್ಬೆಯಂ ಪೊಗಳದರಾರ್ ||"

ಎಂದು ಬಾಯಿತುಂಬ ಹೊಗಳಿದ್ದಾನಲ್ಲದೆ ಲಕ್ಕುಂಡಿಯ ಕ್ರಿ. ಶ. ೧೦೦೭ ನೆಯ ವರ್ಷದ ಶಾಸನದಲ್ಲಿ ಉಲ್ಲಿಖಿತವಾದ—

"ನರಪನ ಬೆಸದಿಂ ಜಿನನಂ |
ಶಿರದೊಳ್ಸಲೆ ತಾಳ್ದಿದಾನಚಿಂತಾಮಣಿ ನಿ- ||
ರ್ಭರ ಗೋದಾವರಿಯುಂ ಪುಗೆ |
ಪರಿಯುಡುಗಿದುದೆಂದೊಡೊಳ್ಪನದನೇವೇಳ್ವೆಂ ||"

ಈ ಮಾತನ್ನೇ ಬ್ರಹ್ಮಶಿವಕವಿಯು ಈ ರೀತಿ ಹೇಳಿದ್ದಾನೆ—

"ಭರದಿಂ ಬಂದೊತ್ತೆ ಮುಂದೆಮ್ಮಸಕದೆಸಕದಿಂತೀವಿ-
ಮುಂದೊತ್ತಿಗೋದಾ- |
ವರಿ ಭೂಪಂ ತೈಲಪಂ ನಿಸ್ತರಿಸು ಕಟಕಮಂ ಬೇಗ-
ಮಿನ್ನೆಬ್ಬ ನೀನೆಂ |

ನೆರೆಯಲ್ಸರ್ವಜ್ಞನಂ ಪೊತ್ತಗಿಯುದೆ ನದಿಯುಂ-
ಪೊಕ್ಕಡಾವಾರಿಪೂರಂ ।
ಬಿರಿದತ್ತಾಚಕ್ರಿಪಾಯ್ಬಂ ತೊರೆಯುನಮಳ ಸಮ್ಯಕ್ತ್ವ-
ವಿಖ್ಯಾತಿಯಿಂದಂ ॥

ಅತ್ತಿಮಬ್ಬೆಯ ಬಗ್ಗೆ ಈ ರೀತಿ ಆದರ, ಅಭಿಮಾನದಿಂದ ಹೊಗಳುತ್ತಿರುವ ಕವಿಯು ಅತ್ತಿಮಬ್ಬೆಯ ಕಾರ್ಯಗಳನ್ನು ಕಣ್ಣಾರೆ ಕಂಡು ಹೊಗಳುತ್ತಿರುವನೆಂದೇ ಭಾಸವಾಗುತ್ತದೆ. ಇದರಿಂದ ಅತ್ತಿಮಬ್ಬೆಯ ಅಂತಿಮ ಕಾಲದಲ್ಲಿ ಅಥವಾ ಅವಳು ಗತಿಸಿದ ಅಲ್ಪಾವಧಿಯಲ್ಲಿಯೇ ಇವನು ಹುಟ್ಟಿರಬೇಕು. ಬಾಲ್ಯದಿಂದಲೇ ಜನಮನದಲ್ಲಿ ಅಚ್ಚಳಿಯದೆ ನಿಂತಿದ್ದ ಅತ್ತಿಮಬ್ಬೆಯ ವಿಷಯ (ಚಾರಿತ್ರ)ವನ್ನು ಕೇಳಿ, ತಿಳಿದು ಅವಳ ಬಗೆಗೆ ಆಸ್ಥೆ ಹುಟ್ಟಿ ತನ್ನ ಕಾವ್ಯದಲ್ಲಿ ಈ ಬಗೆಯಾಗಿ ವರ್ಣಿಸಿರಬೇಕು.

ಕವಿಯು ಹೇಳಿರುವ ಜೈನಮುನಿಗಳ ಹೆಸರುಗಳೂ ಕವಿಯ ಕಾಲವನ್ನು ತಿಳಿಯಲಿಕ್ಕೆ ಅಷ್ಟೊಂದು ಸಹಾಯವಾಗುವಂತಿಲ್ಲ. ಏಕೆಂದರೆ ಈ ಹಿಂದೆಯೇ ಹೇಳಿದಂತೆ ಕವಿಯು ಯಾವದೇ ಒಂದು ಸರಿಯಾದ ರೀತಿಯಲ್ಲಿ ಮುನಿಗಳನ್ನು ಹೆಸರಿಸಿಲ್ಲ. ಇಬ್ಬರು ಮೇಘಚಂದ್ರರು ಇಬ್ಬರು ವೀರಣಂದಿಗಳನ್ನು ಉಲ್ಲೇಖಿಸುತ್ತಿದ್ದರೂ ಅವರ ಗುರುಪರಂಪರೆ, ಗಣ, ಅಥವಾ ಅವರ ಬಿರದು ಮೊದಲಾದವುಗಳನ್ನು ಹೇಳದೆ ಇರುವದರಿಂದ ಹಾಗೂ ಶ್ರವಣಬೆಳಗೊಳ ಶಾಸನಗಳಲ್ಲಿ ಈ ಇಬ್ಬರು ಮೇಘಚಂದ್ರರಕಿಂತಲೂ ಹೆಚ್ಚು ಮೇಘಚಂದ್ರರ ಉಲ್ಲೇಖ ಬರುತ್ತಿರುವದರಿಂದ ಕವಿಯ ಕಾಲವನ್ನು ನಿರ್ದಿಷ್ಟಪಡಿಸುವಲ್ಲಿ ಈ ಹೆಸರುಗಳು ಹೆಚ್ಚಿನ ಸಹಾಯವನ್ನೇನೂ ಸಲ್ಲಿಸುತ್ತಿಲ್ಲ.

ಕವಿಗಳ ವಿಷಯ ಹೇಳುವಾಗ ಕಾಲಮಾನದ ದೃಷ್ಟಿಯಿಂದ ಕೊನೆಯವನಾಗಬಹುದಾದ ಬಂಧುವರ್ಮನನ್ನು ಎಲ್ಲಕ್ಕೂ ಮೊದಲು ಸ್ಮರಿಸುತ್ತಾನೆ. ಮುನಿಗಳ ಸ್ಮರಣೆಯ ನಂತರ, ಪಂಪಪೊನ್ನರಕಿಂತ ಮೊದಲು ಬಂಧುವರ್ಮನನ್ನು ಕವಿಯು ನೆನೆಯುತ್ತಿರಬೇಕಾದರೆ ಯಾವದೇ ಉದ್ದೇಶವು ಕವಿಗಿರಲೇಬೇಕು. ಬಹುಶಃ ಬಂಧುವರ್ಮನು ಕವಿಯ ಸಮಕಾಲೀನನು, ಒಂದೇ ಗುರುಪರಂಪರೆಗೆ ಸೇರಿದವನು ಇರಬೇಕೆಂದೂ ಅಂತೆಯೇ ಕವಿಯು ಆತನನ್ನು ಎಲ್ಲಕ್ಕೂ ಮೊದಲು ಎರಡು ಮೂರು ಪದ್ಯಗಳಲ್ಲಿ ಹೊಗಳಲು ಪ್ರಯತ್ನಿಸಿದ್ದಾನೆಂದೂ ಊಹಿಸಬಹುದಾಗಿದೆ.

ಕವಿಚರಿತೆಕಾರರು ಬಂಧುವರ್ಮನ ಕಾಲವನ್ನು ನಿಶ್ಚಯವಾಗಿ ಹೇಳಿಲ್ಲ. ಒಂದು ವೇಳೆ ಕವಿಚರಿತೆಕಾರರ ಕಾಲವು (ಸು. ಕ್ರಿ. ಶ. ೧೨೦೦) ಸರಿಯೆಂದು ಇಟ್ಟುಕೊಂಡರೆ ಬಂಧುವರ್ಮನ ನಂತರ ಬಂದ ಬ್ರಹ್ಮಶಿವನು, ಈಗಾಗಲೇ ವಿಚಾರಿಸಿದಂತೆ, ೧೨ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಜರುಗಿದ ರಾಜಕೀಯ, ಧಾರ್ಮಿಕ ಘಟನೆಗಳ ಉಲ್ಲೇಖ ಮಾಡದೇ ಇರುತ್ತಿರಲಿಲ್ಲ. ಪರಿಸ್ಥಿತಿ ಹೀಗಿರುವಾಗ ಬಂಧುವರ್ಮನ ಕಾಲವನ್ನು ತಿಳಿಯುವಲ್ಲಿ ಬ್ರಹ್ಮಶಿವನ ಗ್ರಂಥ ಅನುಕೂಲವಾಗಬಹುದಾಗಿದೆ. ಒಂದು ವೇಳೆ ಬ್ರಹ್ಮಶಿವನು ಕ್ರಿ.ಶ.೧೨೦೦ರ ನಂತರವೇ ಬಾಳಿದ್ದರೆ ಇವನಂತೆಯೇ ಸ್ವಮತ ಮಂಡನ ಪರಮತಖಂಡನ ಮಾಡಿ ಗ್ರಂಥರಚಿಸಿದ ನಯಸೇನಮುನಿಯನ್ನೂ, ವೃತ್ತವಿಲಾಸನನ್ನೂ ಇವನು ಸ್ಮರಿಸದೆ ಇರುತ್ತಿರಲಿಲ್ಲ. ಕಾರಣ ಈ ಕವಿಗಳ ಸಮಕಾಲೀನನಾಗಿ ಅಥವಾ ಕೆಲವೇ ವರ್ಷಗಳ ಪೂರ್ವದಲ್ಲಿ ಇವನು ಬಾಳಿರಲಿಕ್ಕೆ ಸಾಕು.

"ಕೊಡುವಾತ ಸಂಗ ಕೊಂಬಾತ ಸಂಗ" ಎಂಬ ಬಸವೇಶ್ವರನ ವಚನವನ್ನು ಮನಸ್ಸಿನಲ್ಲಿಟ್ಟುಕೊಂಡು "ಕುಡುವಂ ತಾಂ ಕುಡುವುದುತಾಂ। ಕುಡೆಕೊಳ್ವಂತಾನೆ ದೇವನಿತ್ತಂಗೊಳ್ವಂ॥ ನುಡಿವವನಂ ತಾನೆಂಬನ। ನುಡಿಯುಂ ಕೈಕೊಳ್ಳದಿರ್ಪವಂ ಮತಿವಂತಂ॥ ಎಂಬ ಈ ಪದ್ಯವನ್ನು ಬ್ರಹ್ಮಶಿವಕವಿಯು ರಚಿಸಿರುವನೆಂದು ಊಹಿಸಿದರೆ ತಪ್ಪಾಗಲಾರದೆಂದು ಶ್ರೀ. ದೇವಿರಪ್ಪನವರು ಬರೆಯುತ್ತಾರೆ. ಆದರೆ ಈ ಪದ್ಯದ ಮೂಲವನ್ನು ಆದಿಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಕಾಣಬಹುದಾಗಿದೆ. ಅಲ್ಲಿ ಬರುವ ಪದ್ಯ ಹೀಗಿದೆ— "ಕುಡವೇೞ್ವನ ಕುಡುವನ ಕುಡೆ। ಪಡೆವನ ಪೆಂಪೇಂ ನೆಗೞ್ತೆವಡೆಗುಮೊ ಪೇೞ್ವಿಂ॥ ಕುಡವೇೞ್ಗೆಮ ಕುಡವಣ್ಣಂ। ಕುಡುಗೆಮ ಕುಡೆಕೊಳ್ವ ಕಲಿಯನಱಿಯಲ್ಕಕ್ಕುಂ॥" (ವಿ. ವಿ. ಆ. ೬, ಪ. ೪೯).

ಸಮಯಪರೀಕ್ಷೆ ಗ್ರಂಥದ ಆದಿಯಲ್ಲಿ ಬ್ರಹ್ಮಶಿವನು ಸ್ಮರಿಸಿದ ಪೆರ್ಗಡೆ ಬೊಮ್ಮ, ಅವನ ಮಗ ನಾಗದೇವ, ಅವನ ಮಗ ಆಹವಮಲ್ಲ ಮಹೀಶ ಇವರನ್ನು ಶ್ರವಣಬೆಳಗೊಳದ ೬೬ ಮತ್ತು ೩೩೫ನೇ ಶಾಸನಗಳಲ್ಲಿ ಸ್ತುತಿಸಲ್ಪಟ್ಟ ಬೊಮ್ಮಾದಿಗಳೊಂದಿಗೆ ಸರಿಹೋಲಿಸಿದ್ದಾರೆ ಶ್ರೀ ದೇವೀರಪ್ಪನವರು. ಆ ಶಾಸನಗಳಲ್ಲಿ ಬರುವ ನಾಗದೇವನ ಮಗ "ಮಲ್ಲಿದೇವ" "ಮಲ್ಲಿನಾಥ" ಇವನೇ ಬ್ರಹ್ಮಶಿವನು ಹೇಳಿದ ಆಹವಮಲ್ಲ ಮಹೀಶನಿರಬೇಕು ಎಂದು ಶ್ರೀ. ದೇವೀರಪ್ಪನವರು ತರ್ಕಿಸಿದ್ದಾರೆ. ಆದರೆ ಶಿಲಾಶಾಸನಗಳಲ್ಲಿ ಬರುವ

ವ್ಯಕ್ತಿಗಳನ್ನು ಅತಿಯಾಗಿ ಎಳೆದು ಹೀಗೆ ಸರಿಹೊಂದಿಸುವದು ಸಾಹಸದ ಮಾತಾಗಬಹುದೆಂದು ನಮಗೆ ಅನಿಸುತ್ತದೆ. "ಆಹವಮಲ್ಲ" "ಮಲ್ಲಿನಾಥ" ನಾಗಿ ಮಾರ್ಪಡುವದು ಅಸಂಭವ. ಕಾರಣ ಶ್ರ. ಬೆ. ಶಾಸನಗಳಲ್ಲಿ ಉಕ್ತ ರಾದ ಬೊಮ್ಮಾದಿಗಳು ಹಾಗು ಸಮಯಪರೀಕ್ಷೆಯಲ್ಲಿ ಉಕ್ತರಾದ "ಕೊಂಡಿಮಂಡಲ"ಕ್ಕೆ ಸಂಬಂಧಪಟ್ಟವರೆಂದು ಹೇಳಲಾದ ಬೊಮ್ಮಾದಿಗಳು ಬೇರೆ ಬೇರೆ ಎಂದು ತಿಳಿಯಬಹುದಾಗಿದೆ

ತನ್ನ ಗೆಳೆಯನೂ ಕವಿಯೂ ಎಂದು ಬ್ರಹ್ಮಶಿವನು ಸ್ಮರಿಸುವ ಅಗ್ಗ ಳನು, ಚಂದ್ರಪ್ರಭ ಪುರಾಣವನ್ನು ಕ್ರಿ. ಶ. ೧೧೮೯ರಲ್ಲಿ ಬರೆದ ಅಗ್ಗಳನಾಗಿರಲಾರನು. ಏಕಂದರೆ ಮೇಲೆ ಬಂಧುವರ್ಮನ ವಿಷಯ ವಾಗಿ ಹೇಳುವ ಕಾರಣಗಳೇ ಇಲ್ಲಿಯೂ ಉದ್ಭವಿಸುವವು. ಆದ್ದರಿಂದ ಕವಿಚರಿತೆಕಾರರು ಊಹಿಸಿದಂತೆ ಸಮಯಪರೀಕ್ಷೆಯಲ್ಲಿ ಬರುವ ಅಗ್ಗಳನು ಬೇರೆಯವನೆಂದು ಕಾಣುತ್ತದೆ. ಬಹುಶಃ ಚಂದ್ರಪ್ರಭಪುರಾಣ ಬರೆದ ಅಗ್ಗ ಳನ ಅಜ್ಜನಾಗಿದ್ದರೂ ಆಗಿರಬಹುದು.

ಈ ಎಲ್ಲ ವಿಷಯಗಳಿಂದ ವಿಚಾರಿಸಿದಾಗ ಕವಿಬ್ರಹ್ಮಶಿವನು ನಿರ್ದಿಷ್ಟ ವಾಗಿ ಇಂತಹ ವರ್ಷದಲ್ಲಿಯೇ ಬಾಳಿದನೆಂದು ಹೇಳುವದು ಕಠಿಣ. ಆದರೆ ಆತನು ಬಸವೇಶ್ವರನಿಂದ ಸ್ಥಾಪಿತವಾದ ವೀರಶೈವ ಮತಕ್ಕಿಂತಲೂ ಪೂರ್ವದಲ್ಲಿ ಬಾಳಿದವನೆಂದು ತಿಳಿಯಲು ಹೆಚ್ಚು ಅವಕಾಶವು ತೋರು ತ್ತಿದೆ. ಆದ್ದರಿಂದ ಕವಿಯು ಕ್ರಿ. ಶ. ೧೧೦೦ರಿಂದ ೧೧೩೦ರ ಕಾಲದ ಅವಧಿಯಲ್ಲಿ ಬಾಳಿರಬೇಕೆಂದು ಊಹಿಸಲು ಅಭ್ಯಂತರವಿಲ್ಲೆಂದು ಕಾಣುತ್ತದೆ.

ಕವಿಯ ಕಾವ್ಯ

ಕಾವ್ಯದದೃಷ್ಟಿಯಿಂದ ಸಮಯಪರೀಕ್ಷೆ ಗ್ರಂಥವನ್ನು ನೋಡುವದಾದರೆ ಅದು ಒಂದು ಮಹಾಕಾವ್ಯವೆಂದು ಹೇಳುವದು ಧೈರ್ಯದ ಮಾತಾದೀತು. ಸ್ವಮತದ ಪ್ರಚಾರಕ್ಕಾಗಿ ಸಾಮಾನ್ಯನಿಗೂ ಅರ್ಥವಾಗಬೇಕೆಂಬ ಉದ್ದೇಶ ದಿಂದ ಬರೆದ ಈ ಕಾವ್ಯವು ಹೆಚ್ಚಾಗಿ ಸರಳವಾದ ಭಾಷೆಯಲ್ಲಿಯೇ ರಚಿತ ವಾಗಿದೆ. ಇದರಲ್ಲಿ ಕಂದಗಳೇ ಹೆಚ್ಚಾಗಿದ್ದು ವೃತ್ತಗಳು ಅಲ್ಲಲ್ಲಿ ಕಾಣಿಸಿ ಕೊಳ್ಳುತ್ತವೆ. ಇದರಿಂದ ಇದು ಕಾವ್ಯವೆಂಬ ಹೆಸರಿಗೆ ಅನ್ವರ್ಥಕವಾಗಿದೆ.

ಆಗಿನ ಕಾಲದ ಇನ್ನುಳಿದ ಕವಿಗಳಂತೆ ಈತನು ತನ್ನ ಗ್ರಂಥದಲ್ಲಿ ಸಂಸ್ಕೃತ, ಪ್ರಾಕೃತ ಭಾಷೆಗಳ ಭಾರವನ್ನು ಹೇರಲು ಪ್ರಯತ್ನಿಸಿಲ್ಲ. ಆದರೂ ಆತನಿಗೆ ಆ ಭಾಷೆಗಳಲ್ಲಿ ಪ್ರಭುತ್ವವಿತ್ತೆಂಬುದು ಇದೇ ಗ್ರಂಥದಲ್ಲಿ ಉಪಯೋಗಿಸುವ "ಯಾಮಾತಿಸ್ನಾಗತಿ" ಮೊದಲಾದ ಸಂಸ್ಕೃತ ವಾಕ್ಯಗಳಿಂದ, ಪ್ರಾಕೃತ ಗಾಹೆಗಳಿಂದ ಗೊತ್ತಾಗುತ್ತದೆ. ಅಲ್ಲದೆ ಆತನು ಚರ್ಚಿಸಿರುವ ಅನೇಕ ವಿಷಯಗಳಿಂದಲೂ ಈ ಮಾತು ಸ್ಪಷ್ಟವಾಗುತ್ತದೆ. ಧರ್ಮಗಳ ವಿಷಯ ವಾಗಿ ಹೇಳುವ ಈ ಗ್ರಂಥವು ತತ್ತ್ವ-ತರ್ಕಗಳ ಮೇಲೆಯೇ ನಿಲ್ಲುವದು. ಆಗ ಕಾವ್ಯದ ಜೀವಾಳಗಳಾದ ರಸಗಳ ಪೋಷಣೆಗೆ ಆಸ್ಪದವಿಲ್ಲದಾಗುತ್ತದೆ. ಅಲ್ಲದೆ ಮಹಾಕಾವ್ಯದ ಲಕ್ಷಣವೆಂದು ನಂಬಲಾದ ಅಷ್ಟಾದಶವರ್ಣನೆ ಗಳಿಗೂ ಅಲ್ಲಿ ಸ್ಥಾನವಿಲ್ಲ. ಈ ದೃಷ್ಟಿಯಿಂದ ಇದು ಮಹಾಕಾವ್ಯವಲ್ಲ ಎಂದು ಹೇಳಬಹುದು ಆದರೆ ಬ್ರಹ್ಮಶಿವನಿಗೆ ಕಾವ್ಯ ರಚನೆಯಲ್ಲಿ ಪ್ರಭುತ್ವ ವಿಲ್ಲ ಎಂದು ಹೇಳುವಂತಿಲ್ಲ. ಕಾವ್ಯರಚನೆಗೆ ಬೇಕಾಗುವ ಗುಣಗಳಾದ ಬಹುಶ್ರುತತ್ವ ಮತ್ತು ಪಾಂಡಿತ್ಯಗಳು ಆತನಲ್ಲಿ ಇದ್ದುವೆಂದು ಕಂಡುಬರು ತ್ತಿದೆ. ಅಲ್ಲದೆ ಪ್ರತಿಭೆಯೂ ಆತನಲ್ಲಿದೆ ಎಂಬುದು ಆತನು ರಚಿಸಿದ ಹಲ ಕೆಲವು ಪದ್ಯಗಳಿಂದ ವಿದಿತವಾಗುತ್ತದೆ. ಉದಾ:— ೧, ೧೫ನೆಯ ಅಧಿಕಾರ ಗಳಲ್ಲಿ ಜಿನಸ್ತುತಿಯಾಗಿ ಬರುವ ವೃತ್ತಗಳನ್ನು ನೋಡಬಹುದು. ಇವನ ಇನ್ನೊಂದು ವೈಶಿಷ್ಟ್ಯವೆಂದರೆ ಆತನು ಉಪಯೋಗಿಸುವ ನಾಣ್ಣುಡಿಗಳಾ ಗಿವೆ. ಉದಾ—"ಪಾಲುಂಡು ಮೇಲುಂಬುದೆ" "ಮೊರಡಿಯಲ್ಲಿ ಮಾದು ಫಲವಾಗದು" "ಬಿತ್ತಿದಂತೆ ಬೆಳೆ" ಮುಂತಾದವುಗಳು. ಅವನ ಹೋಲಿಕೆ ಗಳೂ ಸಹ, ಸರಳವಾಗಿ, ಸುಂದರವಾಗಿ, ಮಾರ್ಮಿಕವಾಗಿವೆ. "ಜಿನ ವಚನ ತೆಂಗಿನಂತೆ ರುಚಿ", "ಜಿನಧರ್ಮ ವಿಮಳಗಂಗಾಸ್ನಾನ", "ಜ್ವರಿತಂಗೆ ದುಗ್ಧಪಾನಂ ಪಿರಿದುಂ ಸೊಗಯಿಸದು" ಇತ್ಯಾದಿ.

ಆತನ ಪಾಂಡಿತ್ಯದ ಕುರುಹಾಗಿಯೇ ಆತನಿಗೆ ದೊರೆತ "ಕವಿಚಕ್ರ ವರ್ತಿ" ಎಂಬ ಬಿರುದೇ ಆತನು ಪಂಡಿತನಾದ ಕವಿ ಎಂಬ ಮಾತಿಗೆ ಸಾಕ್ಷಿ ಯಾಗಿ ನಿಂತಿರುವಾಗ ಈ ದಿಶೆಯಲ್ಲಿ ಹೆಚ್ಚಿನ ವಿವರಣೆ ಅಗತ್ಯವಿಲ್ಲೆಂದೆನಿ ಸುತ್ತದೆ.

ಕವಿಯ ಬಗ್ಗೆ ಆತನ ಗ್ರಂಥದ ಬಗ್ಗೆ ಸ್ವಲ್ಪದರಲ್ಲಿಯೇ ಕಲ್ಪನೆ ಮಾಡಿಕೊಂಡನಂತರ ಸಂಪಾದನೆಯ ಕಾರ್ಯದಲ್ಲಿ ನಾವು ವಹಿಸಿದ ರೀತಿ ಯನ್ನು ವಿದ್ವಾಂಸರ ಗಮನಕ್ಕೆ ತರುವದವಶ್ಯವೆನಿಸುತ್ತದೆ. ಮೊದಲ ಮಾತಿ

ನಲ್ಲಿ ಹೇಳಿದಂತೆ 'ಅ' ಪ್ರತಿಯು ಶುದ್ಧವೂ ಹಳೆಯದೂ ಇದ್ದುದರಿಂದ ಏನೂ ಬದಲಾವಣೆಗಳಿಲ್ಲದೆ ಅದನ್ನೇ ಮೂಲವನ್ನಾಗಿಟ್ಟುಕೊಳ್ಳಲು ನಿಶ್ಚ-ಯಿಸಲಾಯಿತು. ಈ ತತ್ತ್ವಕ್ಕೆ ಅಂಟಿಕೊಂಡದ್ದರಿಂದ ಕೆಲವೊಂದು ಕಡೆ ಅಕ್ಷರಗಳು ಹೋದಲ್ಲಿ ಹಾಗೇ ಬಿಟ್ಟು ಉಳಿದ ಪ್ರತಿಗಳ ಸಹಾಯದಿಂದ ಪಾಠಾಂತರ ಹಾಕಲಾಯಿತು. ಅಲ್ಲದೆ ಕೆಲವು ಕಡೆ ಒಡೆದು ಕಾಣುವಂತಹ ದೋಷಗಳೂ ಉಳಿಯುವಂತಾಯಿತು. ಉದಾಹರಣೆಗಾಗಿ:—"ದಿವಸಕರ" ಶಬ್ದವನ್ನು "ದೆವಸಕರ" ಎಂದು ''ಅಂಗನೆ'' ಶಬ್ದವನ್ನು ''ಅಂಗೆನೆ" ಎಂದು ಕವಿ ಉಪಯೋಗಿಸಿದಂತೆ ಇಟ್ಟುದು. ದ್ವಿತ್ವಾಕ್ಷರದಲ್ಲಿ ಋಕಾರಕ್ಕೆ ಬದಲಾಗಿ ರಕಾರದ ಉಪಯೋಗ ಉದಾ: '' ಸೃಷ್ಟಿ " ಎಂಬಲ್ಲಿ '' ಶ್ರಿಷ್ಟಿ " ಇತ್ಯಾದಿಗಳನ್ನು ಇಟ್ಟುದು. ಪದ್ಯಗಳಲ್ಲಿಯು ಪದಗಳಲ್ಲಿ ದ್ವಿತೀಯಾವಿಭಕ್ತಿಯಾಗಿರಬೇಕಾದವುಗಳನ್ನು ಕವಿ ಬರೆದಂತೆ ಪ್ರಥಮಾಂತವಾಗಿಟ್ಟುದು "ವ" ಕಾರ "ಮ"ಕಾರಗಳಿಗೆ ಕವಿಯು ಭೇದಮಾಡದಿದ್ದುದನ್ನೇ ಅನುಸರಿಸಿದುದು. ಪದ್ಯಗಳಲ್ಲಿರುವ ದ್ವಿತ್ವಾಕ್ಷರವನ್ನು ಹೊಸಗನ್ನಡ ರೂಪದಲ್ಲಿರಿಸದೆ ಕವಿಯ ವೈಶಿಷ್ಟ್ಯವನ್ನೇ ಅನುಸರಿಸಿದೆ. ಉದಾ: ''ವರ್ಗ'' ಇದನ್ನು ''ವರ್ಗ್ಗ'' ವೆಂದು ''ಲಾಂಛನ"ಕ್ಕೆ ''ಲಾಂಚ್ಛನ''ವೆಂದು ಬರೆದುದು. ಮೇಲ್ಕಾಣಿಸಿದ ಅಲ್ಪಸ್ವಲ್ಪ ದೋಷಗಳು, ಅರ್ಥಕ್ಕೆ ಭಂಗವನ್ನು ಉಂಟುಮಾಡುವಂಥವು ಇರದ್ದರಿಂದ, ಅವನ್ನು ಮೂಲಗ್ರಂಥದಲ್ಲಿದ್ದಂತೆಯೇ ಉಪಯೋಗಿಸಲಾಗಿದೆ.

ಪ್ರತಿಮಾಡುವವನ ದೋಷದಿಂದ ಸೇರಿದ ಹೆಚ್ಚಿನ ಅಕ್ಷರಗಳನ್ನು ಕೆಲವು ಕಡೆ ( ) ಈ ರೀತಿ ಕಂಸಿನಲ್ಲಿ ತೋರಿಸಲಾಗಿದೆ. ಅನುಬಂಧ ೧ರಲ್ಲಿ ಕೊಟ್ಟ ಪದ್ಯಗಳು ಈಗ ಪ್ರಕಟವಾದ ರೀತಿಯಲ್ಲಿ ಇದ್ದಿಲ್ಲ. ಈಗಾಗಲೇ ಹೇಳಿದಂತೆ ''ಈ" ಪ್ರತಿಯಲ್ಲಿ ದೋಷಗಳು ಬಹಳವಾಗಿದ್ದು ಪದ್ಯಗಳು ಅಶುದ್ಧವಾಗಿವೆ. ಆದ್ದರಿಂದ ಶಕ್ಯವಿದ್ದಲ್ಲಿ ಆ ಪದ್ಯಗಳನ್ನು ತಿದ್ದಿ ಪ್ರಕಟಿಸಲಾಗಿದೆ. ತಪ್ಪು ಪದ್ಯ ಪ್ರಕಟಿಸಿ ನಮ್ಮ ಪಾಠಾಂತರ ಹಾಕುತ್ತ ಹೋಗುವದರಿಂದ ಗ್ರಂಥವು ಅತಿಯಾಗಿ ಬೆಳೆಯುವದೆಂಬ ಅಂಜಿಕೆಯಿಂದ ಹಾಗೆ ಮಾಡಲಿಲ್ಲ. ಈ ಬಗೆಗೆ ಒಂದು ಉದಾಹರಣೆ ನೋಡಬಹುದು. ''ಈ" ಪ್ರತಿಯಲ್ಲಿ ಬಂದ ಪದ್ಯ ಹೀಗಿದೆ: ''ಆ ವಚನ ಪೂರ್ವಕದಿಂ। ತಜ್ಜಿನ ಚರಣಾಂಗುಷ್ಠ ನಖಮಣಿ ದ್ಯುತಿಯಿಂ॥ ಮುನ್ನಿನ ತಮ್ಮನುಭವಮನ। ರಿವರೀಮನುಜರಿಂದೇಂ ತೀರ್ಥಕರನ ಪೆಂಪತಿತಯುಮೋಂ॥", ಅಶುದ್ಧವಾದ, ಅರ್ಥವಾಗದ ಈ ಪದ್ಯವನ್ನು ಹೀಗೆ ತಿದ್ದಲಾಗಿದೆ.

" ಆನತ ಪೂರ್ವಕದಿಂ ತ- | ಜ್ಜಿನಚರಣಾಂಗುಷ್ಠನಖಮಣಿ-
ದ್ಯುತಿಯಿಂ ಮು- ||
ನ್ನಿನ ತಮ್ಮಭವಮನರಿವರ್ | ಮನುಜರಿದೇಂ ತೀರ್ಥ-
ಕರನ ಪೆಂಪತಿಶಯಮೋ ||
(ಅನು. ೧. ಅ. ೨. ಪ. ೫. ಪು. ೩೫೮)

ಕೊನೆಯದಾದರೂ ಕಡಮೆಯಲ್ಲದ ಕಾರ್ಯವನ್ನು ಮಾಡದಿದ್ದರೆ ಕೃತಘ್ನರೆಂಬ ಹೆಸರಿಗೆ ನಾವು ಪಾತ್ರರಾಗಬೇಕಾದೀತು. ಆದ್ದರಿಂದ ಈ ಗ್ರಂಥವನ್ನು ನಾವು ಸಂಪಾದಿಸಿ ಪ್ರಕಟಿಸುವದಕ್ಕೆ ಅನೇಕ ರೀತಿಯಿಂದ ನೆರವಾದ ಮಹನೀಯರ ಉಪಕಾರ ಸ್ಮರಣೆಯನ್ನು ನಾವು ಮಾಡುತ್ತಲಿದ್ದೇವೆ. ತಮ್ಮ ಪ್ರತಿಗಳನ್ನು ಎರವಲಾಗಿ ಕೊಟ್ಟ ಶ್ರೀ. ದೇವೇಂದ್ರಕೀರ್ತಿ ಸ್ವಾಮಿಗಳು ಮತ್ತು ಶ್ರೀ. ಶರ್ಮಾ ಅವರನ್ನು ಮತ್ತೊಮ್ಮೆ ಅಭಿನಂದಿಸುತ್ತೇವೆ. ಎರಡನೆಯದಾಗಿ ಈ ಗ್ರಂಥವನ್ನು ಸಂಪಾದನೆಗಾಗಿ ತಕ್ಕೊಳ್ಳುವಂತೆ ಪ್ರೋತ್ಸಾಹಿಸಿ ಅನುವುಮಾಡಿ ಕೊಟ್ಟ ಆಗ ಈ ಸಂಸ್ಥೆಯ ಡಾಯರೆಕ್ಟರರಾಗಿದ್ದ ವಿದ್ಯಾರತ್ನ ಶ್ರೀ. ಆರ್. ಎಸ್. ಪಂಚಮುಖಿ ಎಂ.ಎ. ಅವರನ್ನು, ಅವರನಂತರ ಡಾಯರೆಕ್ಟರರಾಗಿ ಬಂದ ಪ್ರೊ. ಎಸ್. ಎಸ್. ಮಾಳವಾಡ ಎಂ. ಎ. ಅವರನ್ನು ಹೃತ್ಪೂರ್ವಕವಾಗಿ ನೆನೆಯುತ್ತೇವೆ. ಅದರಂತೆ ಅವರ ನಂತರ ಬಂದ ಈಗಿನ ಡಾಯರೆಕ್ಟರರಾಗಿರುವ ಡಾ॥ ಬಿ. ಎ. ಸಾಲೆತೊರೆ ಎಂ. ಎ. ಪಿ. ಎಚ್‌ಡಿ. (ಲಂಡನ್). ಡಿ. ಫಿಲ್ (ಗೀಜನ್) ಅವರನ್ನು ನಮ್ಮ ಕಾರ್ಯ ಮುಂದುವರೆದು ಕೊನೆಗೊಳ್ಳುವಂತೆ ಮಾಡಿದ್ದಲ್ಲದೆ ಈ ಗ್ರಂಥಕ್ಕೆ "ಫೋರ್ವರ್ಡ" ಬರೆದು ಆಶೀರ್ವದಿಸಿದ್ದಕ್ಕಾಗಿ ತುಂಬಿದೆದೆಯಿಂದ ನೆನೆಯುತ್ತೇವೆ. ಗ್ರಂಥದ ಪ್ರಸ್ತಾವನೆ ಬರೆಯುವಾಗ ಅಲ್ಲಲ್ಲಿ ಉಪಯುಕ್ತ ಸಲಹೆಗಳನ್ನು ನೀಡಿದ ಡಾ॥ ಆರ್.ಸಿ.ಹಿರೇಮಠ ಎಂ.ಎ.,ಪಿ.ಎಚ್‌ಡಿ. ಅವರಿಗೂ ಹಾಗೂ ಶ್ರೀ. ಪಿ. ಬಿ. ದೇಸಾಯಿ ಎಂ. ಎ. ಅವರಿಗೂ ಋಣಿಯಾಗಿದ್ದೇವೆ. "ಪ್ರೆಸ್‌ಕಾಪಿ" ವಗೈರೆ ತಯಾರಿಸಲು ಸಹಾಯ ಮಾಡಿದ ಶ್ರೀ. ಎಸ್.ಬಿ ಪುರೋಹಿತ ಅವರಿಗೂ ನಮ್ಮ ಕೃತಜ್ಞತೆ ಸಲ್ಲಬೇಕು. ಮತ್ತು ಅಚ್ಚಿನ ಕಾರ್ಯವನ್ನು ಸಾಧ್ಯವಿದ್ದಷ್ಟು ಅಚ್ಚುಕಟ್ಟಾಗಿ ಮಾಡಿದ ಶ್ರೀ ಸರಸ್ವತೀ ಪ್ರಿಂಟಿಂಗ ಪ್ರೆಸ್ಸಿನ ಒಡೆಯರಾದ ಶ್ರೀ. ಎನ್. ವ್ಹಿ. ಕುರಡಿ ಅವರಿಗೂ ನಮ್ಮ ಧನ್ಯವಾದಗಳು.

" ಯುಗಾದಿ "
೨೧–೩–೧೯೫೮

ಬಿ. ಎಸ್. ಕುಲಕರ್ಣಿ
ಸಂಪಾದಕರು

ಸಮಯಪರೀಕ್ಷೆ ಗ್ರಂಥದ ಸಾರಾಂಶ

ಪ್ರಥಮಾಧಿಕಾರಮ್

ಶ್ರೀ ಮಹಾವೀರ, ಆದಿನಾಥರ ಸ್ತುತಿ (ಪದ್ಯ ೧, ೨, ಪುಟ ೧); ಗೃಧ್ರ ಪಿಂಛನಿಂದ ವೀರಣಂದಿಯ ವರೆಗೆ ಜೈನಮುನಿಗಳ ಸ್ತುತಿ (ಪದ್ಯ ೩-೨೮ ಪುಟ ೧-೬); ಪಂಪ-ಬಂಧುವರ್ಮ ಮೊದಲಾದ ಜೈನಕವಿಗಳ ಬಗ್ಗೆ ಉಲ್ಲೇಖ (ಪದ್ಯ ೨೯-೩೬; ಪು. ೬-೭); ರಟ್ಟ ಶಂಖಾವನೀಶ, ಅತ್ತಿಮಬ್ಬೆ, ಚಾವುಂಡರಾಯ, ರಾಚಮಲ್ಲ, ಮಂತ್ರಿಭರತ, ಪೆರ್ಗಡೆಬೊಮ್ಮ ಅವನ ಮಗ ನಾಗ, ಚಾಳುಕ್ಯ ತ್ರೈಲೋಕ್ಯಮಲ್ಲನ ಮಗ ಕವಿ ಕೀರ್ತಿವರ್ಮ, ನಾಗನ ಮಗ ಆಹವಮಲ್ಲ ಇವರ ಬಗ್ಗೆ ಉಲ್ಲೇಖ (ಪ ೩೭-೪೯ ಪು ೭-೯); ಮನವಚನಕಾಯಗಳಿಂದ ಜೀವದಯೆ ಸಾಧಿಸುವ ಜೈನರಿಗಿಂತ ದಯಾಪರ ರೊಳರೇ ? ಆದ್ದರಿಂದ ಅಮೃತ ಸೌಖ್ಯ ಬಯಸುವವರು ಸೂರ್ಯ, ಚಂದ್ರ, ಗಿರಿ, ಕರಿ ಮೊದಲಾದವನ್ನು ಬಣ್ಣಿಸದೆ ಜಿನನನ್ನು ಪೂಜಿಸಬೇಕು. (ಪ. ೫೦-೫೪ ಪು ೯-೧೦); ಬಂಧು ಸಂತತಿ, ದೈತ್ಯರ, ಕೊಲೆ ವರ್ಣಿಸುವ ಪಾತಕ ಕಥೆ ಕೇಳದೆ ಮಂಗಳಕಾರಕವಾದ ಜೈನ ಕಥೆ ಕೇಳಬೇಕು; ಮತಿವಂತನು ಜಿನ ನನ್ನು ಸ್ತುತಿಸಬೇಕು. (ಪ ೫೫ ೫೬ ಪು ೧೦); ಪೊಟ್ಟಳಗೆರೆಯ ಸಿಂಗ-ರಾಜನ ಮಗನೂ, ವೇದಸ್ಮೃತಿ ಪುರಾಣಗಳಲ್ಲಿ ಬಲ್ಲಿದನೂ ಆದ ಬ್ರಹ್ಮ (ಶಿವ) ಕವಿಯು ಪರಸಮಯಿಗಳನ್ನು ಒಳ್ಳೇ ಮಾರ್ಗಕ್ಕೆ ತರುವ ಉದ್ದೇಶ ದಿಂದ ಈ ಕಾವ್ಯ ರಚಿಸಿದನು. ಇದನ್ನು ಗುಣಿಗಳೆದುರು ಓದಬೇಕು. ಗುಣಿಗಳಿಗೆ ಮುನಿವವರ ಮುಂದೆ ಓದಬಾರದು. (ಪ ೫೭-೬೬ ಪು೧೦-೧೨); ಮೂರು ಲೋಕಕ್ಕೆ ದೇವನೂ, ಅಷ್ಟಕರ್ಮ ನಿರ್ಮುಕ್ತನೂ, ದೇವೇಂದ್ರ ನರೇಂದ್ರ, ಫಣೀಂದ್ರರಿಂದ ಪೂಜಿತನೂ, ಶಾಂತಾತ್ಮನೂ, ಆದ ಜಿನನನ್ನು ಮುಕ್ತಿಯಿಚ್ಛೆ ಮಾಡುವವನು ಪೂಜಿಸಬೇಕು (ಪ ೬೭-೮೯ ಪು ೧೨-೧೫); ನಿಶ್ಚಳವಾದ ಭಕ್ತಿಯಿಂದ ಜೈನಬಸದಿಯನ್ನು ಬಲವಂದರೆ ಅಘಸಂಕುಳ ವನ್ನು ಗೆಲ್ಲಲು ಸಾಧ್ಯವಾಗುತ್ತದೆ. ನಿಕೃಷ್ಟನೂ, ಪಾಪಿಯೂ, ಆದವನು ಸದ್ಭಾವದಿಂದ ಜಿನನನ್ನು ನೆನೆದರೆ ಮುಕ್ತಿ ಹೊಂದುವದು ಆಶ್ಚರ್ಯವೆ ? ಹಾವಿನ ವಿಷವು ವಿಷಹರಣದ ಮಣಿಯನ್ನು ನೋಡಿದ ಕೂಡಲೆ ಇಳಿಯುವಂತೆ ದುರಿತವೆಂಬ ವಿಷವು ಜಿನೇಂದ್ರ ಮುಖಚಂದ್ರ ದರ್ಶನದಿಂದ

ಹೋಗುತ್ತದೆ. ದೇವೇಂದ್ರ ಲೋಕದ ಸುಖಾಪೇಕ್ಷಿಯು ಜಿನಸ್ತೋತ್ರ ಮಾಡಬೇಕು. (ಪ ೮೭-೯೩ ಪು ೧೫-೧೭); ಜಿನಪೂಜೆ ಮಾಡದಿದ್ದರೂ ನೋಡಿ ಉತ್ತಮ ಸುಖ ಪಡೆಯಬಹುದು. ಸಂಸಾರ ಗುಹೆಯಿಂದ ಹೊರ ಬರಲು ಇಚ್ಛಿಸುವವನು, ಪಾಪರಾಶಿಯು ನಾಶವಾಗಬೇಕೆಂಬುವವನೂ "ಣಮೋ ಅರ್ಹಂತಾಣಂ" ಎಂಬ ಏಳು ಅಕ್ಕರಗಳನ್ನು ಭಕ್ತಿಯಿಂದ ಪಠಿಸ ಬೇಕು. ಮನುಷ್ಯ ಜನ್ಮದ ಸಾರ್ಥಕತೆ, ಕುಲ, ರೂಪ, ಸಿರಿ, ಬಲ. ಕೀರ್ತಿ ಮೊದಲಾದವುಗಳನ್ನು ಬಯಸುವವನು ಜಿನನನ್ನು ಆರಾಧಿಸಬೇಕು. (ಪದ್ಯ ೯೪-೧೦೩. ಪು ೧೭-೧೯);ಅನಂತ ಸೌಖ್ಯವು ಜಿನೇಂದ್ರನಂ ಭಾವಿಪಂದು ಗಹ ನಮೆ? ಮನಸ್ಸಿನಲ್ಲಿ ತನ್ನನ್ನು ನೆನೆಯುವವರಿಗೆ ಅಪವರ್ಗಮಾರ್ಗವನ್ನು ತೋರಿಸುವಜಿನರಿಂದ ಹೆಚ್ಚಿನ ಉಪಕಾರಿಗಳುಂಟೆ,ಜಿನರಾಜ ಪಾದಸಂಸ್ಮರಣ ಮಹೌಷಧವು ಕಿಲ್ಬಿಷರುಜಾಳಿಗಳನ್ನು ಕಿಡಿಸಬಲ್ಲದು (೧೦೪-೧೧೩ ಪು ೧೯-೨೦); ನದಿಯೇ ಮೊದಲಾದ ಜಲಗಳಲ್ಲಿ ಸ್ನಾನಮಾಡಿದರೆ ಪುನೀತನಲ್ಲ ಜಿನೇಂದ್ರಾಭಿಷವಣಜಲದಿಂದ ಮನುಷ್ಯನು ಪವಿತ್ರನಾಗುವನು; ಮನೆಯು ಜಿನಗಂಧೋದಕದಿಂದ ಪವಿತ್ರವಾಗುವದು;ಕಳಶ,ಕನ್ನಡಿ,ಕರಿಕೆ ಮೊದಲಾ ದವು ಪವಿತ್ರವಲ್ಲ, ಜಿನಪಾದಾರ್ಚಿತ ಪುಷ್ಪಗಳು ಪವಿತ್ರವು. ಜಿನೇಂದ್ರ ಸ್ತುತಿಗಳು ಮಂಗಳಕರ, ಕರ್ಣಾನಂದಕರವಾದವು. ಮತಿಗೆಟ್ಟು ಜಂಗುಳಿ ದೇವರನೊಂದರುದಿಂಗಳು ಕುಳ್ಳಿರ್ದು ಪೂಜಿಸುತ್ತ ಇರದೆ ಮುಕ್ತ್ಯಂಗನೆ ಯನ್ನು ಬಯಸುವವನು ಜಿನನನ್ನು ಪೂಜಿಸಬೇಕು. ಅಜ್ಞಾನದಿಂದ ಹಿಂದಿನ ಜನ್ಮಗಳೆಲ್ಲವೂ ವ್ಯರ್ಥಹೋದವೆಂದು ಚಿಂತಿಸದೆ ಈಗಲಾದರೂ ಭಕ್ತಿ ಯಿಂದ ಜಿನಪಾದಗಳನ್ನು ನಂಬಿದರೆ ಎಲ್ಲ ತರದ ದುಃಖಗಳು ದೂರವಾಗಿ ಸೌಖ್ಯವಾಗುತ್ತದೆ (ಪ ೧೧೪-೧೪೩ ಪು ೨೦-೨೬)

ದ್ವಿತೀಯಾಧಿಕಾರವು್

ವೃಷಭನಾಥನ ಸ್ತುತಿ (ಪ ೧ ಪು ೨೭); ಜಿನಧರ್ಮವು ಆದಿನಾಥ ನಿಂದ ಬಂದುದೆನ್ನುತ್ತಾರೆ. ಆದರೆ ಜಗತ್ತು ಅನಾದಿಕಾಲದಿಂದ ಬಂದುದು; ಅದರಂತೆ ಅನಾದಿಕಾಲದಿಂದಲೂ ಅರುಹಂತರು ಜಗದೊಳಗೆ ಹುಟ್ಟಿ ಮುಕ್ತಿಹೊಂದುತ್ತ ಬಂದಿದ್ದಾರೆ. ಆದ್ದರಿಂದ ಜಿನಧರ್ಮವಾದರೂ ಅನಾದಿ ಯಾಗಿದೆ. ಜೈನಧರ್ಮವು ನೂತನವಲ್ಲ. (ಪ ೨-೮, ಪು ೨೭-೨೮); ಮನು ಜರು ಜೀವಿಪಮಾರ್ಗವನ್ನು ಆದಿಜಿನೇಶ್ವರನು ಹೇಳಿಕೊಟ್ಟನು. ಅದಕ್ಕೆ

ಕೃತಯುಗವೆಂದು ಹೆಸರಾಯ್ತು. ಅಕ್ಷರ, ಲೆಕ್ಕ, ಜ್ಯೋತಿಷ, ಶಕುನ, ಆಯುರ್ವೇದ;ಗಣಿತ ಮೊದಲಾದವೆಲ್ಲವು ಜಿನೇಶನಿಂದ ಬಂದವುಗಳಾಗಿವೆ (ಪ ೯-೨೨ ಪು ೨೮-೩೦); ಚಾತುರ್ವರ್ಣಗಳಲ್ಲಿ ಕ್ಷತ್ರಿಯ ಶ್ರೇಷ್ಠ;ಮೇದಿನಿ ಪತಿ ಭರತಮಾಡಿದುದೇ ಶಾಸನ. ಅವನು ಗುಣಿಗಳಿಗೆ ವ್ರತವನ್ನು ಕೊಟ್ಟು ದ್ವಿಜರನ್ನು ಮಾಡಿದನು; ಜನ್ಮದಿಂದಲೇ ದ್ವಿಜರಲ್ಲ ಆ ಕಾಲಕ್ಕೆ ರತ್ನತ್ರಯದ ಕುರುಹಾಗಿ ಯಜ್ಞೋಪವಿತವನ್ನು ಧರಿಸಿದರು. ಚಾತುವರ್ಣದಲ್ಲಿ ಸುವ್ರತರಾಗಿ ತಪಸ್ವಿಗಳಂತಿರುವರೆಲ್ಲರು ಪಾರ್ವರೆ. ಅಂದು ಭರತ ಕೊಟ್ಟ ವ್ರತಬಂಧವು ಇಂದು "ವ್ರತಬಂಧ"ವಾಗಿ ಉಳಿದಿದೆ. (ಪ ೨೩-೪೦ ಪು ೩೦-೩೩) ಅಕ್ಷಯ ತೃತೀಯೆ, ದೀಪಾವಳಿ ಕಾರ್ತಿಕ (ನರಕ)ಚತುರ್ದಶಿ ಮೊದಲಾದವು ರೂಢಿಯಲ್ಲಿ ಬಂದ ಬಗೆ ಮತ್ತು ಬೇರೆ ಬೇರೆ ತೀರ್ಥಗಳು ದೇವಗಂಗೆ ಪವಿತ್ರವಾದ ರೀತಿ (ಪ ೪೧-೫೬ ಪು ೩೩-೩೬);ಶ್ರೀರಾಮ ಮತ್ತು ಪಾಂಡವರು ಆರ್ಹತ ವ್ರತವನ್ನು ಒಪ್ಪಿ ಪಾಲಿಸಿ ಮುಕ್ತಿ ಪಡೆದರು. ಆದರೆ ಅವರಿಗೆ ಶೈವರೆಂದು ಕರೆಯುತ್ತಾರೆ. ರಾಮನೆಂಬ ಹೆಸರಿನ ಒಬ್ಬ ಅರಸು ಮಾಡಿದ ಈಶ್ವರ ನಿಲಯಂಗಳನ್ನು ಶ್ರೀರಾಮ ಮಾಡಿದನೆಂದು ಹೇಳು ತ್ತಾರೆ. ಆದರೆ ಅಂಥ ಗುಡಿಗಳು ಯುಗಯುಗಾಂತರವಿರಲು ಸಾಧ್ಯವೇ ? ಶ್ರೀ ಪರ್ವತ ಮಲ್ಲಿನಾಥನಿರ್ದ ಎಡೆ; ಹನುಮನ ಮಣಿಕುಂಡಲ, ಗರುಡನ ಪಚ್ಚಸಾರ, ಸೀತೆಯ ಕಂಕಣ, ಗಂಗೆಯ ನೊರೆ ಎಂದು ನಂಬುವ ವಸ್ತು ಗಳು ಹಿಂದೆ ಮಾನಸ್ತಂಭದ ಕೆಳಗೆ ಹೂಳಿದ ರತ್ನಗಳು (೫೭-೬೬ ಪು ೩೭-೩೮); ಪುಲಿಗೆರೆಯಲ್ಲಿ ಹಿಂದೆ ಹೂಳಿ ಹೋದ ವೃಷಭವಾಹನ ಯಕ್ಷನನ್ನೇ ಅಗೆದು ತೆಗೆದಾಗ ಸ್ವಯಂಭು ರುದ್ರನೆಂದು ಕರೆಯಲಾಗಿದೆ; ಕೊಲ್ಲಾ-ಪುರದ ಲಕ್ಷ್ಮಿ ಒಬ್ಬ ಜೈನೆ; ಸಿಟ್ಟಿನಿಂದ ಕಾದಿ ಮಡಿದ ಜೈನನೆ ಮೈಲಾರ; ಜೈನಕರಿಮುಖ ಯಕ್ಷನೇ ಕರಿಮುಖ (ಗಣಪತಿ) ನಾಗಿದ್ದಾನೆ. ಒಟ್ಟಿನಲ್ಲಿ ಈಗ ಬೇರೆ ಹೆಸರಿನಿಂದ ಕರೆಯಲ್ಪಡುವ ಎಲ್ಲ ಮಹತ್ವದ ಸ್ಥಳಗಳ ಹಿಂದೆ ಜೈನ ಸಂಪ್ರದಾಯವಿದೆ. (ಪ ೬೭-೭೫ ಪು ೩೮-೪೦); ವ್ಯಾಕರಣಶಾಸ್ತ್ರ ದಲ್ಲಿಯೂ ಜೈನರ ಕೈವಾಡವಿದೆ. ಪಾಣಿನಿಯ ವ್ಯಾಕರಣಕ್ಕೆ ಬುಧಮಿತ್ರ ವೃತ್ತಿಯನ್ನು ಬರೆದ. ಗಂಗವಾಡಿ ೯೬ ಸಾವಿರಕ್ಕೆ ಅಧಿಪತಿಯಾಗಲು ಮಾಧವನಿಗೆ ಸಹಾಯ ಮಾಡಿದವರು ಸಿಂಹಣಂದ್ಯಾಚಾರ್ಯರು; ಕಂಚಿ ಮೊದಲಾದೆಡೆಗಳಲ್ಲಿ ಪೂರ್ವದಿಂದ ಜೈನಬಸದಿಗಳು ನಿರ್ಮಿಸಲ್ಪಟ್ಟಿದ್ದವು. ಅವುಗಳೆಲ್ಲ ಜೈನಧರ್ಮದ ಕುರುಹುಗಳಾಗಿವೆ. ಈ ರೀತಿ ಜೈನಧರ್ಮವು ಅನಾದಿಯಾಗಿದೆ (ಪ ೭೬-೮೭ ಪು ೪೦-೪೨).

ತೃತೀಯಾಧಿಕಾರಮ್

ಜಿನಸ್ತುತಿ (ಪ ೧ ಪು ೪೩); ಜಿನಪತಿ ಹೇಳಿದುದೇ ಸಿದ್ಧಾಂತ, ಜೈನ-ಧರ್ಮದ ಮುಖ್ಯ ಲಕ್ಷಣ ಅಹಿಂಸೆ. ಪಾಪ-ಕೋಪಗಳಲ್ಲಿ ತೊಡಗದ ಜಿನ ವಚನ ಜಗತ್ತಿನ ಎಲ್ಲೆಡೆಯಲ್ಲೂ ಒಂದೇತೆರನಾಗಿದೆ. ಕುಲಹೀನನಿಗೆ ಒಂದು ತೆರ, ಕುಲಜಂಗೆ ಒಂದುತೆರವಿರುವದು ನಿರ್ಮಳ ಧರ್ಮವಲ್ಲ, ಅದು ಠಕ್ಕ ಮತವು. ಕೊಲೆ, ಅಸತ್ಯ, ಕಳವು, ಪರಸತಿಆಶೆ, ಮೋಹ, ಮಧು, ಮದ್ಯಸೇವೆ ಇವು ಅಧರ್ಮ, ಇವನ್ನು ಬಿಟ್ಟುಬಿಡಿರಿ ಎಂದು ಹೇಳುವ ಜೈನ ವಚನಗಳೇ ಮುಖ್ಯವು. ತನಗಾರು ಇಲ್ಲ ತಾನೋರ್ವನೆ ಜೀವಂ ಕರ್ತೃ ಭೋಕ್ತೃ ಎಂದು ಹೇಳುವ ಹಾಗೂ ಕರ್ಮಬಂಧನ ಮತ್ತು ವಿಮೋಚನ ವನ್ನು ಹೇಳುವ ಅಹಿಂಸೆಯನ್ನೇ ಮೂಲವಾಗಿಟ್ಟುಕೊಂಡ ಜೈನಧರ್ಮವೇ ಉಳಿದ ಮತಗಳಿಗಿಂತ ಒಳ್ಳೆಯದು (ಪ ೨-೨೦ ಪು ೪೩-೪೬); ಲೋಕಾ-ಲೋಕಸ್ಥಿತಿ, ಅನೇಕ ದ್ರವ್ಯ ಸ್ವರೂಪ ಜೈನಾಗಮದಲ್ಲಿ ತಿಳಿಯಲಿಕ್ಕೆ ಬರುತ್ತದೆ. ಎಂಟು ತರದ ಕರ್ಮವಶದಿಂದ ಮುಳುಗುತ್ತಿರುವ ಜೀವನಿಗೆ ಅರ್ಹದ್ವಚನವು ಯಾನಪಾತ್ರದಂತಿದೆ. ಜಿನಮುಖೋಕ್ತ ಆಗಮವು ಪವಿತ್ರ ಗಂಗಾಸ್ನಾನವಿದ್ದಂತೆ ಆದರಿಂದ ಸಮ್ಯಜ್ಞಾನಿಯಾಗಬೇಕು. ಕುಡುಕನಾದವನು ಜೈನಮತ ಕೇಳುವದರಿಂದ, ಶ್ರಾವಕನಾಗಿ ಒಳ್ಳೇ ವ್ರತಗಳಿಂದ ನಂತರ ದೇವನಾಗುತ್ತಾನೆ. ಸರ್ವಜ್ಞನು ಹೇಳಿದ ಜೈನಾಗವನ್ನು ಯಾವ ಭ್ರಾಂತಿಗೊಳಗಾಗದೆ ನಿಶ್ಚಲಚಿತ್ತನಾಗಿ ಕೇಳಬೇಕು. ಅದರಿಂದ ಒಳ್ಳೆಯ ಪರಿಣಾಮಗಳಾಗುವದರಲ್ಲಿ ಸಂಶಯವಿಲ್ಲ. ಜಿನಮಾರ್ಗವನ್ನು ಬಿಟ್ಟು ಅನ್ಯ ಮಾರ್ಗ ಅವಲಂಬಿಸಿ ಕರ್ಮಬಂಧನ ಹರಿದೊಗೆವೆನೆಂಬುದು "ಪರುಗೋಲಿಂ ಪಾಯ್ವಂದದೆ ಮೊರದಿಂ ಪಾಯ್ವೆನೆಂಬ ಮರುಳಂ ಪೋಲ್ಕುಂ". ಗಿಡಮರಗಳ ಹಾಲು ಹೇಗೆ ಸೇವ್ಯವಲ್ಲವೋ ಹಾಗೆ ಅನ್ಯಮತಗಳು ಅಸೇವ್ಯವು. ಉತ್ತಮ ಹಾಲಿನಂತಿದ್ದ ಜೈನಮತವೇ ಸೇವ್ಯವು. ಅಪವರ್ಗ-ಮಾರ್ಗ ಚಿಂತನೆಯುಳ್ಳ ಜೀವನು ಜೈನಾಗಮವನ್ನು ತಿಳಿದು ಅದರ ಅವಲಂಬಿಯಾಗಬೇಕು (ಪ ೨೧-೯೯ ಪು ೪೬-೬೦).

ಚತುರ್ಥಾಧಿಕಾರಮ್

ಜಿನಸ್ತುತಿ (ಪ ೧ ಪು ೬೧); ಅನುಪಮವಾದ ಅರಿವು, ಗುಣ, ಆಚಾರದಿಂದ ಜೈನಧರ್ಮಾವಲಂಬಿಗಳು, ದೀಪಾವಳಿಯ ಕತ್ತಲೆಯಲ್ಲಿ ದೀಪಗಳು ಬೆಳಗುವ ಹಾಗೆ ಕಲಿಕಾಲದಲ್ಲಿ ಮಿಥ್ಯಾಸಮಯಿಗಳ ಮಧ್ಯದಲ್ಲಿ, ಬೆಳಗು

ತ್ತಿದ್ದಾರೆ. ಪುರುಷನ ಪುಣ್ಯದಿಂದ ಇಷ್ಟಸಿದ್ಧಿಯಾಗುತ್ತದೆ. ಕರ್ಮವೇ ಮುಖ್ಯ; ಶುಭಕರ್ಮದ ಉದಯದಿಂದ ಶುಭವಾಗುತ್ತದೆ. ರಾಜಪ್ರಸಾದ, ಜಿನರಾಜ ಶ್ರೀಪಾದಸೇವೆ, ವಾಜಿ, ಗಜ, ಸುಖಭೋಜ ಮುಂತಾದುವೆಲ್ಲ ಶುಭೋದಯ ಕರ್ಮಫಲ. ಒಂದೇ ರತ್ನ ಸಿಕ್ಕವನು ಧನ್ಯ. ಆದ್ದರಿಂದ ರತ್ನತ್ರಯ ಪಡೆದ ಭವ್ಯನು ಅಧಿಕ ಸುಖಿಯಾಗುವದು ಅಚ್ಚರಿಯೆ ? ಸಮ್ಯಕ್ತ್ವ ರತ್ನಾಕರನಾಗಬೇಕಾದವನು ನಿಃಶಂಕೆ, ನಿಃಕಾಂಕ್ಷೆ,ನಿರ್ವಿಚಿಕಿತ್ಸೆ, ಅಮೂಢ ದೃಷ್ಟಿತ್ವ, ಉಪಗೂಹನ, ವಾತ್ಸಲ್ಯ, ಪ್ರಭಾವನೆ ಇವುಗಳಿಂದ ಅಲಂಕೃತನಾಗಿರಬೇಕು. ಎಲ್ಲ ಲಾಭಗಳಲ್ಲಿ ರತ್ನತ್ರಯ ಲಾಭವೇ ಉತ್ತಮ ಲಾಭ. (ಪ ೨-೨೪ ಪು ೬೧-೬೫); ತನಗೆ ಶುಭೋದಯವಾದಾಗ ಧನ-ಧಾನ್ಯ ಪರಿಗ್ರಹಂಗಳು ತಮ್ಮಿಂದ ತಾವೇ ಬರುವವು. ಅಶುಭೋದಯವಾದರೆ ಎಷ್ಟು ಮರುಗಿದರೂ ಇವೆಲ್ಲ ಕೈಗೂಡುವದಿಲ್ಲ ಎಂದು ಜೈನನು ನಂಬುತ್ತಾನೆ. ಕುಲಹೀನನಿಗೆ ಪರದೇಶಿಗೆ ಲೇಸುಮಾಡುವವನೆ ಜೈನ. ವೈಶೇಷಿಕ, ವೈದಿಕ, ಚಾರ್ವಾಕ, ಬುದ್ಧ, ಸಾಂಖ್ಯ ಮತಗಳಲ್ಲಿ ವರ್ತಿಸುವವನು, ಅಮೂಢ ದೃಷ್ಟಿ ಅನ್ನಿಸುತ್ತಾನೆ. ಪಂಚೇಂದ್ರಿಯಗಳ ಇಚ್ಛೆಗೆ ಒಳಗಾದವನು ನರಕಭಾಗಿಯಾಗುತ್ತಾನೆ. ಜೈನಧರ್ಮವನ್ನಾ-ಶ್ರಯಿಸುವದರಿಂದ ಸೌಖ್ಯವಾಗುತ್ತದೆ. ದಯೆ, ಚರಿತ್ರೆ ಮೊದಲಾದವುಗಳನ್ನು ಮನಸ್ಸಿನಿಂದ ನಡಿಸಿಕೊಂಡು ಬರುವ ಜೈನಯತಿಯು ಉಳಿದ ಯತಿಗಳಿಗಿಂತ ಉತ್ತಮನಾಗಿದ್ದಾನೆ. (ಪ ೨೫-೪೫ ಪು ೬೫-೬೮); ಒಬ್ಬ ಜೈನನು ಅತಿಥಿಯಾಗಿ ಮನೆಗೆ ಬಂದಾಗ ಕಾಯಾ-ವಾಚಾ-ಮನಸಾ ಅವನಿಗೆ ಅತಿಥಿ ಸತ್ಕಾರ ಮಾಡಬೇಕು. ಜೈನನಿಗೆ ರೋಗ ಮುಂತಾದವುಗಳು ಬಂದಾಗ ಆರೈಕೆ ಮಾಡಬೇಕು. ಜಿನಪೂಜೆಗೆ ಫಲ, ಪುಷ್ಪ ಮೊದಲಾದವನ್ನು ಕೊಡಬೇಕು. ಜೈನನನ್ನು ಆದರಿಸದ ಗರ್ವಿ ಜೈನನೇ ಅಲ್ಲ. ಉಳಿದವರಲ್ಲಿ ಈ ರೀತಿಯ ಅತಿಥಿ ಸತ್ಕಾರ ಕಂಡುಬರುವದಿಲ್ಲ (ಪ ೪೬-೫೫ ಪು ೬೮-೭೭). ಸಮ್ಯಕ್ತ್ವ ರತ್ನಾಕರನೆನಿಸುವವನು ದೇವ ಮೂಢತೆ, ಪಾಷಂಡಿ ಮೂಢತೆ, ಲೌಕಿಕ ಮೂಢತೆ ಇವುಗಳಿಂದ ದೂರವಿದ್ದು ಅಮಳ ಚಾರಿತ್ರಯುಕ್ತನಾಗಿ ಅರ್ಹತ ವ್ರತದಲ್ಲಿ ಕೂಡಿದವನಾಗಿರಬೇಕು. ಕುಲ, ಐಶ್ವರ್ಯ, ಜ್ಞಾನ, ಬಲ, ರೂಪ, ಜಾತಿ, ತಪ ಮೊದಲಾದವುಗಳಲ್ಲಿ ತನಗೆ ಸರಿಯಾದವರು ಯಾರೂ ಇಲ್ಲೆಂಬ ಭಾವನೆ ಉಳ್ಳವನಿಗೆ ಸಮ್ಯಕ್ತ್ವವು ಒಪ್ಪುವದಿಲ್ಲ. ಅದರಂತೆ ಮರ, ಅಗ್ನಿ, ಆಕಳು, ಆಯುಧ ಮೊದಲಾದ

ವನ್ನು ಪೂಜಿಸುವವನಿಗೂ ಸಮ್ಯಕ್ತ್ವವು ಒಪ್ಪುವದಿಲ್ಲ.(ಪ೯೬-೧೨೦ ಪು೭೬-೮೦); ಒಂದು ಕಡೆ ಜಿನಬಿಂಬಕ್ಕೂ ಮತ್ತೊಂದೆಡೆ ಲಿಂಗಕ್ಕೆ ಇನ್ನೊಂದು ಕಡೆ ವಿಷ್ಣು ಬಿಂಬಕ್ಕೆ .ಪೂಜೆ ಸಲ್ಲಿಸುವ ಸಂದೇಹಿಗೆ ಜೈನನೆಂಬ ಹೆಸರು ಸಲ್ಲದು. ಅದರಂತೆ ದೇವಾಲಯಕ್ಕೆ ಹೋದಾಗ ಮಾಹೇಶ್ವರನೆಂದುಕೊಳ್ಳು ವವನಿಗೆ, ಬಸದಿಗೆ ಹೋದಾಗ ಜೈನನೆಂದು ಅಂದುಕೊಳ್ಳುವವನಿಗೆ ಸಮ್ಯ-ಕ್ತ್ವವು ಒಪ್ಪಲಾರದು. ಮಾರಿಗೆ, ಬಳರಿಗೆ, ಮೈಲಾರಗೆ ಜಾತ್ರೆಮಾಡು ವವನು ಜೈನನಲ್ಲ. ಹೆಂಡತಿ ಮಾಹೇಶ್ವರಿ, ಗಂಡ ಜೈನ, ಮಕ್ಕಳು ಮಾತ್ರಾ-ಡಂಗೆ ಭಕ್ತರು ಆದಲ್ಲಿ ಜೈನನೆಂಬ ಹೆಸರು ಒಪ್ಪದು. ಆದ್ದರಿಂದ ಜೈನನಾದವನು ಕುಮತಗಳಿಂದ ಅಚಲನಾಗಿರಬೇಕು. ಆಚಾರ, ವಿಚಾರ ಶುದ್ಧಿ ನೋಡಿ ಜೈನನೆಂದು ತಿಳಿಯಬೇಕು. ಅದರಂತೆ ಮಿಥ್ಯಾದೃಷ್ಟಿ ಬಿಟ್ಟು ಸಮ್ಯಕ್ ದೃಷ್ಟಿಯುಳ್ಳವನೇ ಜೈನನು. (ಪ ೧೨೧-೧೬೩ ಪು ೮೦-೮೭)

ಪಂಚಮಾಧಿಕಾರಮ್

ಜಿನಸ್ತುತಿ (ಪ ೧ ಪು ೮೮);ಮನ-ವಚನಕಾಯದಿಂದ ಜೀವನಿಕಾಯ ವನ್ನು ಹಿಂಸಿಸದೆ ಅಹಿಂಸೆ ಪಾಲನೆ ಮಾಡುವವನೇ ಜೈನ. ದೇವತೆಗೆ ಹರಕೆ ಕೊಟ್ಟರೆ ನಾನಾವಿಧವಾದ ರುಜೆಗಳು ಪೋಗಿ ತಾನು ಬದುಕುತ್ತೇನೆಂದರೂ ಸಹ ಜೈನನಾದವನು ಟಗರು, ಕೋಳಿ ಮುಂತಾದವುಗಳ ಬಲಿಕೊಡಲು ಒಪ್ಪುವದಿಲ್ಲ. ಇಂಥ ಸ್ಥಳದಲ್ಲಿ ಇಂಥ ಬೆಳೆ ಬೆಳೆಯುತ್ತದೆಂದು, ಇಂಥ ಜಲಾ ಶಯದಲ್ಲಿ ಜಲಚರಗಳಿವೆಯೆಂದು, ಇಂಥ ಅಡವಿಯೊಳಗೆ ಮೃಗಸಂತತಿ ಯುಂಟೆಂದು ಜೈನನಾದವನು ಹೇಳುವದಿಲ್ಲ. ಮೃದು, ಮಧುರ ವಚನ ದಿಂದ ಕೂಡಿದವನಾಗಿರುತ್ತಾನೆ. ಧನದಾಸೆಯಿಂದ ತುಪ್ಪದೊಳಗೆ ಎಣ್ಣೆ, ಹೊನ್ನೊಳು ಬೆಳ್ಳಿ, ಉಪ್ಪಿನೊಳು ಮಣ್ಣು, ಕೂಡಿಸದಿರುವದು, ದೊಡ್ಡ ಅಳತೆ ಯಿಂದ ತಕ್ಕೊಂಡು ಸಣ್ಣ ಅಳತೆಯಿಂದ ಮಾರುವದು ಮುಂತಾದ ಮೋಸದ ವ್ಯಾಪಾರ ಸುಪ್ರತಿಯು ಮಾಡಬಾರದು. (ಪ ೨-೪೮ ಪು ೮೮-೯೬); ದುಶ್ಚರಿತನಾದವನು ಕುಲಟಾಂಗನೆಯಲ್ಲಿ ನೆರೆಯಲ್ಕೆ ಬಯಸುವನು. ಅದ ರಂತೆ ಜಾರಸ್ತ್ರೀಯು ಆತ್ಮೇಶನನ್ನು ವಂಚಿಸಿ ಅನೇಕ ವಿಧವಾದ ಸಂಕೇತ ಗಳಿಂದ ಸಮ್ಮಂಧಗಳಿಂದ ತನ್ನ ಜಾರನಲ್ಲಿ ಕೂಡುತ್ತಾಳೆ. ಪರನಾರೀಗಮನ, ಪರಪುರುಷಸಂಗ ಇವು ನಿಷೇಧ. ಇದರಿಂದ ನಿಜವಾದ ಜೈನನು ದೂರಿರು ತ್ತಾನೆ. ಅದರಂತೆ ಪರರ ಸುಖಸಂಪತ್ತುಗಳನ್ನು ಕಂಡು ನಿಜವಾದ ಜೈನನು ಅಸೂಯಾಪರನಾಗುವದಿಲ್ಲ (ಪ ೪೯-೮೭ ಪು ೯೬-೧೦೪); ಸಂಸಾರದಲ್ಲಿ

ದಾರಾದಿ ಪರಿಗ್ರಹಗಳಿಂದ ಬದ್ಧನಾಗಿರದೆ ಸುಖಕ್ಕೆ ಕಾರಣವಾದ ಸುವ್ರತಗಳನ್ನು ಪಾಲಿಸಿಕೊಂಡು ಹೋಗಬೇಕು. ಮನೆಯಲ್ಲಿ ಹೆಂಡಿರು ಮಕ್ಕಳು ಜೈನಧರ್ಮಕ್ಕೆ ವಿರೋಧಿಗಳಾಗಿದ್ದರೆ ಖಳಸಂತತಿಗೆ ಕೂಳಿಕ್ಕುವ ತೆರದೆ ಜೈನನು ಅವರಿಗೆ ಊಟ ಹಾಕುತ್ತಾನೆ. ಆದರೆ ಅವನು ತನ್ನ ಧನವನ್ನು ಜಿನಸಮಯಿಗಳಿಗೇ ವೆಚ್ಚ ಮಾಡಬೇಕು. ಜಿನಧರ್ಮದಲ್ಲಿ ವಿಶ್ವಾಸವಿಡದೆ ನಾಡೊಳಗಿನ ಕಲ್ಲು, ಮರಗಳನ್ನು ಕುಲದೈವವೆಂದು ಪೂಜಿಸುವವಳು, ಜಿನಮುನಿಗಳಿಗೆ ದಾನಾದಿಗಳನ್ನು ಕೊಡದಿರುವವಳು, ನೆರಮನೆಯವರು ಜಾತ್ರೆಗೆ ಕರೆದಾಗ ಗಂಡನು ಕಳಿಸದಿದ್ದರೆ ಅವನನ್ನು ನಿಂದಿಸುವವಳು, ಮಗನ ವ್ಯಸನಕ್ಕೆ ವೆಚ್ಚ ಮಾಡುವವಳು,— ಇಂಥ ಮಿಥ್ಯಾದೃಷ್ಟಿಯುಳ್ಳ "ಅಱಿಗುಲಿವೆಂಡಿರ" ಕೂಡ ಜೈನನು ತನ್ನ ಜೀವನವನ್ನು ಹಾಳುಮಾಡಿಕೊಳ್ಳಬಾರದು. ಧರ್ಮದ ಏಳ್ಗೆಗಾಗಿ ಸಂತಾನವನ್ನು ಸುಶಿಕ್ಷಣದಿಂದ ತಯಾರು ಮಾಡಬೇಕು. ಉತ್ತಮ ಹೆಂಡತಿ, ಮಕ್ಕಳನ್ನು ಪಡೆದವನೇ ಧನ್ಯ! ಪಂಚಾಣುವ್ರತ ಪಾಲಿಸಿ ಮುಕ್ತಿ ಪಡೆಯಬೇಕು. (ಪ ೮೮-೧೬೦ ಪು ೧೦೩-೧೧೫);

ಷಷ್ಠಾಧಿಕಾರಮ್

ಜಿನಸ್ತುತಿ (ಪ ೧ ಪು ೧೧೬); ದುಃಖಭಾಜನವಾದಂಥ ರಾತ್ರಿಭೋಜನವು ಶುಭಮತಿಗಳಿಗೆ ಆಗದು. ರಾತ್ರಿಕಾಲದಲ್ಲಿ ಸೂಕ್ಷ್ಮಜಂತುಗಳು ಕಾಣದಿರುವದರಿಂದ ಹಗಲು ಹೊತ್ತಿನಲ್ಲಿ ಜೈನನಾದವನು ಉಣ್ಣುತ್ತಾನೆ. ಮಾಂಸ, ಮದ್ಯ, ಮಧು, ಇವುಗಳನ್ನು ಹಾಗೂ ಕ್ರಿಮಿಗಳಿಂದ ಯುಕ್ತವಾದ ಎಣ್ಣೆ, ಫಲ, ಗಡ್ಡೆ, ಗೆಣಸುಗಳನ್ನು, "ಪೂವಿನ ಬಾಡು"ಗಳನ್ನು ಶ್ರಾವಕನು ಸೇವಿಸುವದಿಲ್ಲ. ಹಾಗೂ ಕರವತಿಗೆಯ ನೀರನ್ನು ಕುಡಿಯಲಾರನು; ಹಿಂಸೆ ನಡೆದ ಕಥೆಗಳನ್ನು ಕೇಳಲಾರನು. ಈ ರೀತಿ ಅಹಿಂಸೆಯನ್ನು ಪಾಲಿಸುತ್ತ ಸಚ್ಚರಿತ್ರದಿಂದ ನಡೆಯುವ ಜೈನನು ನಶ್ವರವಾದ ದೇಹವನ್ನು ಉತ್ತಮವಾದ ವಸ್ತ್ರ, ಆಭರಣ, ಸುಗಂಧ ಲೇಪನ, ರುಚಿಕರವಾದ ಆಹಾರ ಮೊದಲಾದವುಗಳಿಂದ ತಣಿಸಲು ಇಚ್ಛೆ ಮಾಡುವದಿಲ್ಲ. ಅವನ ನಿಜವಾದ ಆಭರಣಗಳೆಂದರೆ ರತ್ನತ್ರಯಗಳು. ಅವುಗಳಿಂದ ಅಲಂಕೃತನಾದವನೇ ಶ್ರೀಮಂತ. ಉಳಿದ ಸಂಪತ್ತುಗಳು ವ್ಯರ್ಥ. (ಪ ೨-೬೭ ಪು ೧೧೬-೧೨೭); ಎಲ್ಲ ಜನ್ಮಗಳಲ್ಲಿ ಮನುಷ್ಯ ಜನ್ಮವು ಹೆಚ್ಚಿನದು, ಈ ಜನ್ಮದಲ್ಲಿ ಸಚ್ಚಾರಿತ್ರನಾಗಿ ಬೇಕಾದಂಥ ಸಂಕಟ ಬಂದಾಗ್ಯೂ ಧೃತಿಗೆಡದೆ ಒಳ್ಳೇ ವ್ರತಗಳನ್ನು ಪಾಲಿಸಿಕೊಂಡು

ಬರುವದು ಅವಶ್ಯ. ಇದನ್ನು ಜೈನನಾದವನು ಸಾಧಿಸುತ್ತಾನೆ. ನಿತ್ಯ ಉಪಯೋಗಕ್ಕೆ ನೀರನ್ನು ಸೋಧಿಸಿ ಉಪಯೋಗಿಸುವ, ಸಾರಣೆ ಮಾಡುವಾಗ ಹಿಂಸೆಯಾಗದಂತೆ ಎಚ್ಚರಿಕೆ ವಹಿಸುವ, ಮುನಿಗಳಿಗೆ ಶುದ್ಧವಾದ ದಾನಮಾಡುವ ಜೈನರ ಮನೆಗಳು ತೀರ್ಥಂಗಳಲ್ಲವೇ ? ಮಾನವನು, ಇದು ತನ್ನ ಮನೆ, ಹೆಂಡತಿ, ಮಕ್ಕಳು, ಧನ-ಧಾನ್ಯ ಭೂಷಣ ಎಂದು ಮೋಹದಲ್ಲಿ ಸಿಕ್ಕು ಜನ ಹಾಳುಮಾಡಿಕೊಳ್ಳದೆ ಸರ್ವಜ್ಞನಲ್ಲಿ ಮನ ನಿಲ್ಲಿಸಿ ಸಚ್ಚರಿತ್ರನಾಗಿ ಪಾರಮಾರ್ಥವನ್ನು ಸಾಧಿಸಬೇಕು. (ಪ ೬೮-೧೧೯ ಪು ೧೨೭-೧೩೬).

ಸಪ್ತಮಾಧಿಕಾರಮ್

ಜಿನಸ್ತುತಿ (ಪ ೧ ಪು ೧೩೭); ಅತಿ ನಿರ್ಮಲ ಗುಣಗಳಿಂದ, ಸದ್ವೃತ್ತಿಯಿಂದ ಕೂಡಿದವರಾದ ಜೈನಮುನಿಗಳು ಈ ಭೂಮಿಗೆ ಅಲಂಕಾರಪ್ರಾಯರಾಗಿದ್ದಾರೆ. ಜೈನಮುನಿಯು, ಬಿಸಿಲು, ಗಾಳಿ, ಚಳಿ ಮಳೆಯನ್ನದೆ, ದೃಢವಾದ ಮನಸ್ಸಿನಿಂದ ತಪಸ್ಸು ಮಾಡುತ್ತಾನೆ. ಪಕ್ಷೋಪವಾಸ, ಮಾಸೋಪವಾಸ, ಮೊದಲಾದ ಉಪವಾಸ ವ್ರತಗಳನ್ನು ಪಾಲನ ಮಾಡುತ್ತಾನೆ. ತನ್ನ ನಡೆ-ನುಡಿಗಳಿಂದ ಜೀವಾವಳಿಗೆ ನೋವಾಗದಂತೆ ವರ್ತಿಸುತ್ತಾನೆ. ತಾನು ಉಂಡ ಅಡುಗೆಯನ್ನು ಸವಿ-ಕಹಿ ಎಂದು ವರ್ಣಿಸುವದಿಲ್ಲ. ತಪಸ್ಸಿಗೆ ಉಪಸರ್ಗವಾದರೆ ಅಧೈರ್ಯದಿಂದ ತಪೋಭಂಗ ಮಾಡುವದಿಲ್ಲ. ಈ ರೀತಿ ಸಕಲ ಜೀವಿಗಳಲ್ಲಿ ದಯವುಳ್ಳವರು, ಜಿನೇಂದ್ರ ಪದಾಬ್ಜಂಗಳಲ್ಲಿ ಮನಸ್ಸುಳ್ಳವರು, ದುಶ್ಚರಿತ್ರಗಳಿಗೆ ಹೆದರುವಂಥವರು, ಸಚ್ಚಾರಿತ್ರದಲ್ಲಿ ಆಸಕ್ತರಾದವರು, ಆಪ್ತಾಗಮತ್ವದಲ್ಲಿ ಪ್ರೀತಿಯುಳ್ಳವರು ಆದಂಥ ಜೈನ ಮುನಿಗಳಿಗೆ ಆಹಾರ ದಾನಾದಿಗಳನ್ನು ಮಾಡಿ, ಅವರ ತಪಸ್ಸು ನಿರಾತಂಕವಾಗಿ ನಡೆಯುವಂತೆ ಮಾಡಿ ಪುಣ್ಯ ಭಾಗಿಗಳಾಗಬೇಕು (ಪ ೨-೭೨, ಪು ೧೩೭-೧೪೯);

ಅಷ್ಟಮಾಧಿಕಾರಮ್

ಜಿನಸ್ತುತಿ (ಪ ೧ ಪು ೧೫೧); ಜಗತ್ತೆಲ್ಲ ಸುಟ್ಟುಹೋದಾಗ ಬ್ರಹ್ಮ-ಹರಿ ಇವರು ಜಗತ್ತು ಮಾಡುವ ಸಲುವಾಗಿ ಒಬ್ಬರಿಗೊಬ್ಬರು ಎದುರಿಸುತ್ತಿದ್ದಾಗ ಈಶ್ವರನು ಉರಿಲಿಂಗವಾದನು. ಜಗತ್ತು ಸುಟ್ಟಾಗ ಬ್ರಹ್ಮ-ಹರಿಗಳು ತಾವು ಎಲ್ಲಿದ್ದರು ? ಲಿಂಗದ ಶಕ್ತಿಯನ್ನು ತಿಳಿಯಲು ವಿಷ್ಣುವು ಕೆಳಗೂ ಬ್ರಹ್ಮನು ಮೇಲೂ ಹೊರಟಾಗ ಕೇದಿಗೆ ಬ್ರಹ್ಮನ ಸಲುವಾಗಿ ಸುಳ್ಳು ಹೇಳಿತು. ಆದ್ದರಿಂದ ಶಾಪಗೊಂಡ ಕೇದಿಗೆಯು ಈಶ್ವರ ಪೂಜೆಗೆ

ನಿಷೇಧವಾಗಿದೆ. ಲಿಂಗೋದ್ಭವದ ಕಥೆ, ಶೈವರು ಲಿಂಗಪೂಜೆ ಮಾಡಿದರು. ಶೂಲ, ಡಮರು ಹಿಡಿದ ರುದ್ರ ಸದಾಶಿವನಲ್ಲ, ಲಿಂಗದಲ್ಲಿ ತ್ರಿಮೂರ್ತಿಗಳ ಸ್ಥಾನವಿವರಣೆ, ಲಿಂಗವು ಕನಸಿನಲ್ಲಿ ಬಂದು ತಾನು ನೆಲದಲ್ಲಿ ನೆಲಿಸಿದ ವಿಷಯ ತಿಳಿಸುವದು, ಕೈ, ಕಾಲು, ಕಿವಿ, ಬಾಯಿ ಇಲ್ಲದ ಲಿಂಗವು ವರ ವನ್ನು ಕೊಡಲು ಸಾಧ್ಯವೆ ? ಶಂಕರ, ಸದಾಶಿವರ ವರ್ಣನೆ (ಪ ೨-೩೬ ಪು ೧೫೧-೧೫೭); ಬಸದಿಗಳ ನೆರಳು ಮನೆಗಳ ಮೇಲೆ ಬಿದ್ದರೆ ಆಗದೆಂದು ಅವನ್ನು ಊರ ಹೊರಗೆ ಹಾಕುತ್ತಾರೆ. (ಪ ೩೭-೪೯ ಪು ೧೫೭-೧೫೮); ದೈತ್ಯ ಸಂಹಾರಿಯಾದವನು ಶಂಕರನೊ ? ಭಯಂಕರನೊ ? (ಬೇರೆ ಬೇರೆ ರಾಕ್ಷಸರ ಸಂಹಾರ ಕಥೆಗಳಿವೆ) ಶಿವನು ಪಂಚಭೂತ ಶರೀರಿ (ಪ ೪೦-೧೦೬ ಪು ೧೫೮-೧೬೯); ಚಂಡಿಯ ಚರಣದಲ್ಲಿ ತ್ರಿಮೂರ್ತಿಗಳಿದ್ದಾರೆಂದು ಕೌಳರ ಮತ (ಪ ೧೧೭ ಪು ೧೭೧); ಜಗತ್ತನ್ನೇ ನಿರ್ಮಾಣ ಮಾಡುವ ಬ್ರಹ್ಮನು ತನ್ನ ತಲೆಯನ್ನು ಶಿವನಿಂದ ಏಕೆ ರಕ್ಷಿಸಿಕೊಳ್ಳಲಿಲ್ಲ (ಪ ೧೩೩ ಪು ೧೭೩-೭೪) ದಶಾವತಾರಮಾಡಿ ರಾಕ್ಷಸ ಸಂಹಾರ ಮಾಡಿದ ವಿಷ್ಣುವು ಆಪ್ತದೈವವೆ ? (ಪ ೧೩೬-೧೪೮ ಪು ೧೭೪-೧೭೬);ನರಸಿಂಹ ಎಂದರೆ ಪುರುಷಸಿಂಹ; ವಿಷ್ಣುವು ಕೇಸರಿಯ ವದನನಾದನೆಂದು ಹೇಳುವದು ಸರಿಯೆ ? (ಪ ೧೪೯ ಪು ೧೭೬); ಪುರುಷೋತ್ತಮ, ಅಚ್ಯುತ, ಹದಿನಾರು ಸಾವಿರ ಸುದತಿಯರ ಸೂರೆಗೊಟ್ಟ ಕೃಷ್ಣನ ಬಗ್ಗೆ ಉಲ್ಲೇಖ (ಪ ೧೫೦-೧೫೮ ಪು ೧೭೬-೧೭೮); ಹರಿಹರರು ಮುಂದೆ ತೀರ್ಥಂಕರರಾಗುವವರೆಂದು ತಿಳಿದು ಪೂಜಿಸಬೇಕು. ಅದರಂತೆ ರಾಮ ಲವ-ಕುಶರೂ, ಪಂಚಪಾಂಡವರೂ ಜೈನಧರ್ಮದ ಪುಣ್ಯಪುರುಷ ರೆಂದು ನೆನೆಯಬೇಕು. (ಪ ೧೫೯-೬೧ ಪು ೧೭೮); ಸೌರಾರಾಧನೆ ವಿಚಾರ ಬೌದ್ಧ ಧರ್ಮದ ಕ್ಷಣಿಕವಾದದ ವಿಚಾರ(ಪ ೧೬೨-೧೮೭ ಪು೧೭೮-೧೮೨); ಗಣಪತಿ ಷಣ್ಮುಖರು ಫಲಕೊಡಲಾರದ ದೈವಗಳು. ಆಧುನಿಕ ಮೈಲ, ಮಾಳಚಿ ಮೊದಲಾದವರು ದೇವರಾದರು; ಕಾರಣ ಹರಿಹರರೇಕಾಗಬಾರದು? ಇಂಥ ನಾಡೊಳಗುಳ್ಳ "ಕೂಡಿಕೂಳಿ ದೇವ"ರನ್ನು ಒಲ್ಲೈಸದೆ ಜಿನೇಂದ್ರ ನನ್ನು ಪೂಜಿಸಿ ಜನ್ಮಸಾರ್ಥಕತೆ ಮಾಡಿಕೊಳ್ಳಬೇಕು (ಪ ೧೮೮-೨೫೦, ಪು ೧೮೨-೧೯೩).

ನವಮಾಧಿಕಾರವ್

ಜಿನಸ್ತುತಿ (ಪ ೧ ಪು ೧೯೪); ದೇವಮೂಢತೆ, ಪಾಷಂಡಿ ಮೂಢತೆ, ಲೌಕಿಕ ಮೂಢತೆ ಬಿಟ್ಟು ಸಚ್ಚಾರಿತ್ರನಾಗಿ ಸಮ್ಯಕ್ತ್ವ ರತ್ನಾಕರನೆನಿಸಬೇಕು. (ಪ ೨ ಪು ೧೯೪); ಕಿಚ್ಚು, ಕವಿಲೆ, ಮರ ಮುಂತಾದವುಗಳು ದೇವತಾ ಮೂಢತ್ವ. ಜಾತ್ರೆಯ ಮರುಳರು ಭಿನ್ನನಾದ ಮಲ್ಲಿಕಾರ್ಜುನನನ್ನು ಪೂಜಿಸುವರು. ಗರೆಯುಳಿ ಚಂಗದೇವನ ಊರಲ್ಲಿ ವಿಷ್ಣುವಿನ ಮೂರು ಕೈಗಳು ಮುರಿದಿರುವವು. ಅವು ಯುಗಪರಿವರ್ತನದ ಕಾಲಕ್ಕೆ ಮುರಿದವೆನ್ನುತ್ತಾರೆ. ಲಿಂಗಗಳು ಬೆಳೆಯುತ್ತ ಹೋಗಿ ಪೀಠ ಒಡೆಯುವಂತಾದರೆ ಲಿಂಗದ ತಲೆಯಲ್ಲಿ ಮಳೆ ಹೊಡೆಯಬೇಕೆನ್ನುತ್ತಾರೆ. ಉದ್ಭಟ, ಮಲುಹಣ, ಶರೀರ ಸಹಿತರಾಗಿ ದೇವಲೋಕಕ್ಕೆ ಹೋದರು. ಬೇರೆ ಬೇರೆ ರೋಗಗಳಿಗೆ ಬೇರೆ ಬೇರೆ ದೇವತೆಗಳು ಕಾಡುತ್ತಾರೆಂದು ನಂಬುವರು. ಅವಧೂತ ಮುನಿಯ ಜನ್ಮವೃತ್ತಾಂತ, ಜೇಡರ ದಾಸಿಮಯ್ಯ, ಶಿರಿಯಾಳ, ಕುಂಬರ ಗುಂಡಯ್ಯರ ಉಲ್ಲೇಖ. ಗಂಗಾನದಿಯು ಕೇವಲ ನೀರು. ಜೀವನನ್ನು ಸುರಗಣಿಕೆಯರು ಹೊತ್ತುಕೊಂಡೊಯ್ಯುತ್ತಾರೆಂಬುದು ಸಾಧ್ಯವೇ ? ಬೆನಕ, ಬಾಡುಬ್ಬೆಗಳಿಗೆ ಸಂತಯಿಸಿದರೆ ಬೆಳೆಯು ಹುಲುಸಾಗುವದೆ ? ಆಕಳ ಮೈಯಲ್ಲಿ ಎಲ್ಲ ದೇವತೆಗಳಿರುತ್ತಾರೆಂದು ನಂಬಿ, ಪೂರ್ವಕರ್ಮದಿಂದ ಪಶುವಾಗಿ ನವೆವ ಆಕಳ ಮೂತ್ರದಿಂದ ಪ್ರೋಕ್ಷಣವೂ, ಪ್ರಾಶನವೂ, ಸರಿಯೆ ? "ಕಚ್ಚದಿರಿ" ಎಂದು ನಿತ್ಯ ನಾಗರಪೂಜೆ ಮಾಡಿದರೆ ಆ ನಾಗ ಕಚ್ಚನೆ ? (ಪ ೩-೮೧ ಪು ೧೯೪-೨೦೭); ಒನಕೆ, ಗೂಟ, ಹೊಸ್ತಿಲ ಇತ್ಯಾದಿಗಳು ದೈವವೇ ? ಮಾರಬ್ಬೆ, ಮಸಣಿ, ವಾಸಿಣಿ, ಬೀರ, ಮೈಲಾರ ಇವರು ದೇವರೆ ? ಮಕ್ಕಳಾದರೆ ದೇವರು ಕೊಟ್ಟನೆಂದು ನಂಬುತ್ತಾರೆ. ಆದರೆ ಪೂರ್ವ ಕರ್ಮದ ಫಲದಂತೆ ಮಕ್ಕಳು ಜನಿಸುತ್ತಾರೆ. ಮಾಹೇಶ್ವರರು, ವೈದಿಕರು, ವೈಷ್ಣವರು ಬಳರಿಗೆ ಅರ್ಚನೆಗುಣಿಯುತ್ತಾರೆ. ಶೈವರು ವ್ಯಂತರವನ್ನು ಪೂಜಿಸುತ್ತಾರೆ. "ಜೋಕಾರ" ಸಾಯುವಾಗ ಆತನ ತಾಯಿಯಾದ ದೇವತೆಯು ಏಕೆ ಅವನನ್ನು ಕಾಯಲಿಲ್ಲ ? ದೇವರ ಹೆಸರಿನಲ್ಲಿ ಬಲಿಕೊಟ್ಟು ಅವನ್ನು ತಾವೇ ಸೇವಿಸುತ್ತಾರೆ. ತಲೆ ಬೋಳಿಸಿಕೊಂಡು, ಕೆಂಡದ ಓಕಳಿ ಆಡಿ, ಅಂಗುಲಿ ಕಡಿದುಕೊಂಡು ಹರಕೆ ಮುಟ್ಟಿಸುತ್ತಾರೆ. ಚಾಮುಂಡಿ, ಕಾಳಿ, ಮಾಳಚಿ, ಕೇತ, ಕಾಳ, ಮೈಲಾರ ಇವರು ಬೇಡಿದ ವರಕೊಡಲು ಸಾಧ್ಯವೇ ? ಇಂಥ ದೇವತೆ ಮೂಢತ್ವದಿಂದ ಜೈನನು ದೂರ ಇರುತ್ತಾನೆ. (ಪ ೮೨-೧೪೫ ಪು ೨೦೭-೨೧೬).

ದಶಮಾಧಿಕಾರಮ್

ಜಿನಸ್ತುತಿ (ಪ ೧-೨ ಪು ೨೧೮); ರೂಪವಿಲ್ಲದ ಶಿವನು ಶಿವತತ್ವ ಹೇಗೆ ನಿರೂಪಿಸಿದನು? ಜಿನನಿಂದ ಹೇಳಿದ ಆಗಮ ಸತ್ಯವು. ಸೋಮಶರ್ಮನ ಸುತನ ಪೆಣದಲ್ಲಿ ಲಾಕುಳೇಶನು ಪೊಕ್ಕು ಶೈವಾಗಮ ಹೇಳಿದನೆಂದು ಶೈವರು ಎನ್ನುತ್ತಾರೆ. ರುದ್ರನು ಜಗತ್ತನ್ನು ದಹಿಸುವಾಗ ತಾನೆಲ್ಲಿದ್ದನು, ತನ್ನ ಭಕ್ತರನ್ನು ಎಲ್ಲಿಟ್ಟಿದ್ದನು? ದಾನವರನ್ನು ಹುಟ್ಟಿಸಿದ ಶಿವನು ಅವರನ್ನು ಏಕೆ ಕೊಂದನು? ತಾಯಿ ಮಕ್ಕಳನ್ನು ಕೊಲ್ಲುವಳೆ? ಹರಿಹರರಲ್ಲಿ ಜಗತ್ತನ್ನು ಯಾರು ಸಂರಕ್ಷಿಸಿದರು, ಯಾರು ನಾಶ ಮಾಡಿದರು? ಲೋಕ ಸ್ವಯಂಭು. ಹರಿಹರರಲ್ಲಿ ಮೇಲೆ ಅಭೇದ ಹೇಳಿ ಒಳಗೆ ಭೇದವನ್ನು ಪಾಲಿಸುತ್ತಾರೆ. ವಿಷ್ಣು ವರಕೊಟ್ಟವರನ್ನು ಶಿವನು ನಾಶಮಾಡುವನು. ಶಿವ ವರ ಕೊಟ್ಟವರನ್ನು ವಿಷ್ಣು ಸಂಹರಿಸುವನು. ಇದು ಮಿತ್ರತ್ವದ ಲಕ್ಷಣವೆ? ರೌದ್ರಿ ಭದ್ರಕಾಳಿವರು ರುದ್ರನ ಬೆವರಿನಿಂದ ಹುಟ್ಟಲು ಅವರು ಪೇನೋ? ಅರ್ಧ ನಾರೀಶ್ವರರಾದವರು ತಮ್ಮ ಇನ್ನರ್ಧ ದೇಹವನ್ನು ಎಲ್ಲಿಟ್ಟಿದ್ದರು? ಜಗತ್ತಿನ ಹೆಣ್ಣುಮಕ್ಕಳೆಲ್ಲ ಗೌರಿಯ ರೂಪೆಂಬ ಭಕ್ತರು ಹೆಂಡರೊಂದಿಗೆ ಹೇಗೆ ಕೂಡುತ್ತಾರೆ. (ಪ ೩-೮೫ ಪು ೨೧೮-೨೩೨); ಮತ್ಸ್ಯ, ಕೂರ್ಮಾದಿ ತಿರ್ಯಗ್ಜೀವಿಗಳ ಪುರಾಣಗಳು ವಿಪರೀತವಲ್ಲವೆ? ಶುಕ್ರನ ಕಣ್ಣನ್ನು ವಾಮನನು ದರ್ಭೆ ಚುಚ್ಚಿ ಕಳೆದ ಭುವನಂಗಳನೆಲ್ಲ ಕಾಯ್ವ ವಿಷ್ಣು ತನ್ನಳಿಯ ಅಭಿಮನ್ಯುವಿನನ್ನೇಕೆ ಕಾಯಲಿಲ್ಲ? ಸೂರ್ಯ ಮೊದಲಾದ ಜ್ಯೋತಿಷ್ಕರು ಮನುಜರ ಮಕ್ಕಳೇ? ಅಗಸ್ತ್ಯನು ಸಮುದ್ರ ಕುಡಿದನು, ವಿಂಧ್ಯ ಗಿರಿಗೆ ಬೆಳೆಯಬೇಡ ಎಂದನು. ಪರಶುರಾಮನು ಸಮುದ್ರ ಹಿಂದಟ್ಟಿ ಕೊಂಕಣ ನಿರ್ಮಿಸಿದನು. ರವಿಗೆ ಹುಟ್ಟ ಬೇಡೆಂದರೆ ಆತನು ಉದಯಿಸದಿದ್ದುದು ಮುಂತಾದ ಘಟನೆಗಳು ಸಾಧ್ಯವೇ? ರಾವಣ, ಹನುಮಂತ ರಾಕ್ಷಸ, ಕಪಿಗಳು ಅಲ್ಲ, ವಿದ್ಯಾಧರರು; ಭಗವದ್ಗೀತೆಯ ಉಲ್ಲೇಖ; ರಾಮಾಯಣ, ಮಹಾಭಾರತ ಇವುಗಳನ್ನು ಜೈನರ ಹೇಳಿಕೆಯಂತೆ ಕೇಳಬೇಕು. (ಪ ೮೬-೧೯೩ ಪು ೨೩೨-೨೪೯).

ಏಕಾದಶಾಧಿಕಾರಮ್

ಜಿನಸ್ತುತಿ (ಪ ೧ ಪು ೨೫೧); ವೇದವು ಅಪೌರುಷೆಯವು. ಯಜ್ಞವಲ್ಕಿ ಮುನಿಪನ, ಅಗ್ನಿ ಮುಖದಿಂದ ವೇದಗಳು ಉತ್ಪತ್ತಿಯಾದವೆನ್ನುತ್ತಾರೆ. ವೇದ ವ್ಯಾಸನು ವೇದ ಕರ್ತೃವೆನ್ನುತ್ತಾರೆ. ವೇದಗಳಲ್ಲಿ ಅನೇಕ ಪ್ರಕಾರಗಳಿವೆ.

ವೇದದಲ್ಲಿ ನೂರುವರ್ಷವೆಂದು ಹೇಳುವ ಮನುಷ್ಯನ ಆಯುಷ್ಯವು ಕೃತಯುಗದವರಿಗೋ ಕಲಿಯುಗದವರಿಗೋ ? ಕ್ಷೇತ್ರಜಪದ್ಧತಿಯಿಂದ ಮಕ್ಕಳನ್ನು ಪಡೆಯುತ್ತಾರೆ. ಸೂರ್ಯ, ಚಂದ್ರಗ್ರಹಣಗಳ ಬಗ್ಗೆ ಇದ್ದ ಕಲ್ಪನೆ, ಸೂರ್ಯನು ಚಲಿಸುವ ರೀತಿ, ಸೂರ್ಯಕಿರಣ ಬೆಳಗುವ ಬಗೆ, ವರ್ಣಾಶ್ರಮಗಳು ಬ್ರಹ್ಮನಿಂದ ಉತ್ಪನ್ನವಾದವು (ಪ ೨-೬೧ ಪು ೨೫೧-೨೬೧); ಸುಳ್ಳಾಡಿದಾಗ, ಸೀಂತಾಗ, ಉಗುಳಿದಾಗ, ಬಲಗಿವಿ ಹಿಡಿದುಕೊಳ್ಳುತ್ತಾರೆ. ವೈದಿಕರ, ಮಡಿಬಟ್ಟೆ, ಊಟ, ನೀರು ಕುಡಿಯುವದು, ಮಾತುಳ ವಿವಾಹ ಪಾಪಕಳೆಯುತ್ತೇವೆಂದು ಹಣ ಪಡೆಯುವ ವಿಧಾನ. ಜನ್ನಕ್ಕೆ ಮೂಲವಾದ ವೇದ ಧರ್ಮ ಹೇಗೆ? ಯಜ್ಞ-ಮಾಂಸ ಸೇವನೆ ವಿಷಯ, ಶ್ರಾದ್ಧಪಿಂಡಗಳ ಉಲ್ಲೇಖ, ಹೋರಿಗೆ ಚುಚ್ಚಿದರೆ ಸತ್ತವರು ಸ್ವರ್ಗ ಪಡೆಯುತ್ತಾರೆಂಬ ನಂಬುಗೆ, ಜಾತಿಶ್ರೇಷ್ಠವಲ್ಲ ಗುಣಶ್ರೇಷ್ಠ (ಪ ೬೨-೧೬೧ ಪು ೨೬೧-೨೭೭).

ದ್ವಾದಶಾಧಿಕಾರವ್

ಜಿನಸ್ತುತಿ (ಪ ೧ ಪು ೨೭೯); ಲೋಕಮೂಢವೆಂದರೇನು ? ಕನ್ನಡಿ ನೋಡುವ ವಿಧಾನ, ಊಟಮಾಡುವಾಗ ಆಚರಿಸುವ ನಿಯಮ, ಬದರಿ, ಬನ್ನಿ ಮೊದಲಾದ ವೃಕ್ಷದೆಲೆಗಳ ಧಾರಣ ಪದ್ಧತಿ, ಹಾಲು, ಮೊಸರು ಧಾನ್ಯ ಮೊದಲಾದವುಗಳಲ್ಲಿ ಮೂಢತೆ, ಅಡಕೆಯ ಬಗೆಗೆ ಮೂಢತೆ, ಗಂಗೆ, ಕುರುಭೂಮಿ ಮೊದಲಾದವುಗಳಲ್ಲಿ ಸ್ನಾನಮಾಡುವದು, ಗ್ರಹಣ, ಸಂಕ್ರಾಂತಿಗಳ ಕಾಲಕ್ಕೆ ಗಂಗೆ ಎಲ್ಲ ಜಲಾಶಯಗಳಲ್ಲಿರುವ ನಂಬಿಗೆ, ಸಾಲದರಿಣವು ಸ್ನಾನದಿಂದ ಮೋಚನ, ಅಸುರನ ಎಲವುಗಳು ರತ್ನವಾದವೆಂಬ ನಂಬುಗೆ, ಮಕ್ಕಳಾಗುವ ಬಗೆಗೆ ನಂಬುವ ಮೂಢ ಕಲ್ಪನೆ. ಇಂಥ ಮೂಢತೆಗಳನ್ನು ಜಿನಸಮಯಿ ನಂಬಲಾಗದು. (ಪ ೨-೪೯ ಪು ೨೭೯-೨೮೭).

ತ್ರಯೋದಶಾಧಿಕಾರವ್

ಅವರವರ ಕರ್ಮದಂತೆ ದೇವರು ಜನರನ್ನು ಇಡುತ್ತಾನೆ. (ಪ ೧, ಪು ೨೮೮); ಜೈನಧರ್ಮಿಗಳನ್ನು ಕಂಡು ಅವರೇ ಹೆಚ್ಚಿನವರೇ ಎಂದು ಕರ್ಚಿಕೊಲ್ಲುತ್ತಾರೆ. ಜಿನಧರ್ಮ ಒಳ್ಳಿತ್ತು ಎಂದರೆ ಸಿಟ್ಟಿಗೇಳುತ್ತಾರೆ. ಜೈನಧರ್ಮದ ಸ್ವೀಕಾರ ಬಡತನ ತರುತ್ತದೆ. ಜೈನರ ಆಚಾರವನ್ನು ವೈದಿಕರು ಒಪ್ಪುವದಿಲ್ಲ. ಬಳರಿಗೆ ಕುರಿಕೊಯ್ದು ಮಾಂಸ ತಿಂದು ಮದ್ಯ ಸೇವಿಸುತ್ತ "ಅಡಗಿಂಡೆ" ಯಾಡುತ್ತಾರೆ. ಕುದೃಷ್ಟಿಯುಳ್ಳವರಾಗದೆ ಜೈನಮತಾವಲಂಬಿಗಳಾಗಬೇಕು. (ಪ ೨-೬೪ ಪು ೨೮೮-೨೯೯).

ಚತುರ್ದಶಾಧಿಕಾರಮ್

ಜಿನಸ್ತುತಿ (ಪ ೧ ಪು ೩೦೦); ಪರಮ ಸುಖಕ್ಕೆ ಎಯ್ದಿಪರುಷಿಯರ ನಲ್ಲದೆ ದುಶ್ಚರಿತ್ರರು ಲೋಲುಪರು ಪರಲಿಂಗಿಗಳನ್ನು ಹೊಂದಿರುವದು ಪಾಷಂಡಿ ಮೂಢತ್ವವು. ಯತಿಗಳೆಂದರೆ ಯಾರು ? ಸದಮಳ ಚರಿತ್ರರಲ್ಲದೆ ಮನಸಿಗೆ ಬಂದಹಾಗೆ ವರ್ತಿಸುವವನು ಮುನಿಯೆ ? ಮಾಣಿಯು ಒಡಲನ್ನು ಲಾಕುಳೀಶ ಹೊಕ್ಕಿದ್ದನು. ದಯೆ, ಸದ್ವೃತ್ತಿ ಬೇರೆ ಬೇರೆ ಮತದವರಲ್ಲಿ ಹೇಗೆ ಹೇಗೆ ಕಂಡುಬರುತ್ತವೆ. ಕೌಳಾಚಾರ್ಯರು ಮದ್ಯ ಸೇವಿಸುತ್ತಾರೆ. ತಂಗೂಳನುಂಬ ಬೌದ್ಧರ ಚರಿತ್ರವು ವಿಪರೀತವಲ್ಲವೆ ? ಗೊರವನನ್ನು ಸತ್ಕರಿಸುವದರ ಫಲ. ಅರಸರು, ಒಕ್ಕಲಿಗರು ಬೇಟೆಯಾಡಿ ಪ್ರಾಣಿ-ಪಕ್ಷಿಗಳನ್ನು ಕೊಲ್ಲುತ್ತಾರೆ. ಆಗಿನ ಕಾಲದ ಊಟ, ನೀರು ಕುಡಿಯುವಿಕೆ ಮೊದಲಾದವುಗಳ ಉಲ್ಲೇಖ. ಯಜ್ಞಾಚಾರದ ಉಲ್ಲೇಖ; " ಧರ್ಮ "ಭೂಮಿ"ಯ ಬಗ್ಗೆ ವ್ಯಾಖ್ಯೆ ಮಾಂಸ ಉಣ್ಣದವನು ಸ್ವರ್ಗಕ್ಕೇರಲಾರನೆಂಬ ಕಲ್ಪನೆ; ನಾರಾಯಣನವತಾರವೆಂದು ಹೇಳುವ, ಮೀನ, ಆವೆ ಮೊದಲಾದವನ್ನು ತಿನ್ನುತ್ತಾರೆ. ಸೋಸದ ನೀರು, ಚರ್ಮಭಾಜನದಲ್ಲಿಯ ನೀರು ಉಪಯೋಗಿಸುವ ಉಲ್ಲೇಖ; ಛತ್ರದಲ್ಲಿ ಊಟಮಾಡುವ ಪದ್ಧತಿ; ಮಿಥ್ಯಾತ್ವ ದೃಷ್ಟಿಯನ್ನು ಬಿಟ್ಟು ಜೈನಧರ್ಮದಿಂದ ನಡೆಯಬೇಕು. (ಪ ೨-೧೬೮ ಪು ೩೦೦-೩೨೯).

ಪಂಚದಶಾಧಿಕಾರಮ್

ಜಿನಸ್ತುತಿ (ಪ ೧ ಪು ೩೩೧); ಕುಲಹೀನಂಗೆ ಒಂದು ಕುಲಜನಿಗೆ ಒಂದು ಆಚಾರ ಹೇಳುವದು ನಿರ್ಮಳ ಧರ್ಮವಲ್ಲ; ಅದು ಠಕ್ಕ ಮತ. ಶುದ್ಧವಾದ ಆಚಾರದಿಂದ ಕೂಡಿದ ಜೈನಧರ್ಮವೇ ಐಹಿಕಾಮುತ್ರಿಕದಲ್ಲಿ ಸೌಖ್ಯಹೇತುವಾದುದು. ಕೊಲೆ, ಕಳವು, ಅಸತ್ಯ,ದುಶ್ಚರಿತ್ರೆಗಳಿಗೆ, ಮದ್ಯ, ಮಾಂಸ, ಮಧು ಮೊದಲಾದವುಗಳ ಸೇವನೆಗೆ ಆಸ್ಪದವಿಲ್ಲದ ಜೈನಧರ್ಮವನ್ನು ಸುಂದರವಾದ ಹೋಲಿಕೆಗಳೊಂದಿಗೆ "ಜಿನಧರ್ಮ ವ್ಯಾವರಣ "ದಲ್ಲಿ ವರ್ಣಿಸಲಾಗಿದೆ. (ಪ ೨-೨೧೫ ಪು ೩೩೧-೩೫೨).

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೨	೨೨	-ಗೊಯ್ಯಲ್ಪೋಗಿಸಿ	-ಗೊಯ್ಯಲ್ಪೋಗಿಸಿ
೩	೧	ಈಮಹೀ	ಈ ಮಹಿ
೬	೨೫	-ನೆನಲ್ಕೆರಾ	ನೆನಲ್ಕೇರಾ
೯	೨	ಪಿರಿದಿವಂ	ಪಿರಿದೀವಂ
೯	೨	ಗಡೈನ	ಗಡೆನ:
೧೦	೯	ಮತಿಗೆಟ್ಟೋರ್ವರನೋರ್ವ	ಮತಿಗೆಟ್ಟೊರ್ವರನೊರ್ವ
		(ಇದರಂತೆ ಮುಂದೆಯೂ "ಓರ್ವ" ಎಂದು ಬಂದಲ್ಲಿ "ಒರ್ವ" ಎಂದು ತಿದ್ದಿಕೊಳ್ಳಬೇಕು.)	
೧೩	೮	ಸಿದ್ದಿಯಂ	-ಸಿದ್ಧಿಯಂ
೧೪	೧೯	ಪೇರ್ಮೆಯ	ಪೆರ್ಮೆಯ
೧೪	೨೪	ಜಗದೋಳ್	ಜಗದೊಳ್
೧೯	೧೯	ಮೆಂಬುದಲ್ಲಿ	ಮೆಂಬುದೆಲ್ಲಿ
೬೧	೧೮	ದೇವಸವು	ದೆವಸವು
೯೪	೧೧	ಬೆಣ್ಣೆಯೊಳು	ಬೆಣ್ಣೆಯೊಳ್
೧೨೩	೧೯	ಚೆನ್ನೆವುದೋ	ಚೆನ್ನೇವುದೊ
೧೨೪	೧೬	ನಾಡುವನರ	ಡುವನರ
೧೪೦	೧೯	ಪರಿಷಹ	ಪರೀಷಹ
೧೪೫	೧೦	ಜಾವದಿ	ಜಾವಧಿ
೧೪೯	೧೩	ಜಾತಣೆಣ	ಜಾತಣೇಣ
೧೪೭	೨೨	ಕೃಷ್ಣನು	ಕೃಷ್ಣನು
೧೫೮	೧೨	ಪೂಗಳ್ವಂ	ಪೊಗಳ್ವಂ
೧೬೪	೨೦	‖೭‖	‖೭೭‖
೨೧೩	೬	ಭರಿಕೆಯ್ಯ	ಬರಿಕೆಯ್ಯ
೨೩೯	೨೨	ಜೀವಿತಮಧು	ಜೀವಿತಮದು
೨೪೬	೯	ಪೇಳ್ವಕಾಂತೇ	ಪೇಳ್ವಕೌಂತೇ.
೨೮೨	೧೫	ಧಾತ್ರಂ	ಧಾತೃಂ
೨೯೦	೧೮	ಸರಿವಂತ	ಸಿರಿವಂತ

ಪುಟ	ಸಾಲು	ತಪ್ಪು	ಒಪ್ಪು
೨೯೭	೩	ಕಿಡಿಪೇಂ	ಕಿಡಿಪೆಂ
೨೯೭	೩	ನೋೞ್ಪಂ	ನೊೞ್ಪ
೩೦೦	೧೭	ಶುಚಿುಯೆಂ	ಶುಚಿಯೆಂ
೩೦೨	೧೬	ದುರ್ವ್ಯಾದ	ದುರ್ವ್ಯಾಧ
೩೦೮	೨೪	ಗ್ರಂಥಂಗಿಳೆ	ಗ್ರಂಥಂಗಳೆ
೩೧೧	೧೭	-ದೊಡ಼ಂಬ	ದೊಡುಂಬ
೩೧೭	೧೭	ಣ್ಣನದೆಂತುಂ	ಣ್ಣನಡೆಂತು
೩೪೩	೧೬	ಮಾಗ್ಗದೊಳೆ	ಮಾರ್ಗ್ಗದೊಳೆ
೩೪೫	೩	ವೊಡಂದಂದಂ	ವೊಡಂದಂದದಂ
೩೫೮	೯	ತಮ್ಮನುಭವ	ತಮ್ಮ ಭವ
೩೫೮	೧೦	ಮನುಜರಿಂದೇ	ಮನುಜರಿದೇಂ
೩	೪(ಪರಿವಿಡಿ)	xxxvi-xxxxviii	xxxvi-xLviii
೪೦	ಪುಟಸಂಖ್ಯೆ (ಗ್ರಂಥ ಸಾರಾಂಶ)	xxxx	xL

॥ ಶ್ರೀ ॥

॥ ವೀತರಾಗಾಯ ನಮಃ ॥

ಸಮಯ ಪರೀಕ್ಷೆ

ಪ್ರಥಮಾಧಿಕಾರಮ್

ಶ್ರೀ ವೀರಜಿನಾದೀಶಂ ।
ದೇವರದೇವಂ ವಿಬೋಧ ದೃಗ್ವೀರ್ಯ್ಯಸುಖಾ ॥
ಶ್ರೀವಲ್ಲಭನನುಪಮನೊಸೆ- ।
ದಾವ[1]ಗಮೆಮಗೀಗೆ ವಿಮಳರತ್ನತ್ರಯಮಂ ॥ ॥ ೧ ॥

ನಮಗೀಗತ್ಯಂತ ಸೌಖ್ಯಾಸ್ಪದಮನೊಸೆದು ಕಾರುಣ್ಯದಿಂ ಶ್ರೀಜಿನೇಂದ್ರಂ ।
ಕಮನೀಯಾಂಗಾತ್ಮತೇಜಃ ಪ್ರಸರದೆಸ[2]ಕದಿಂ ವಿಶ್ರುತಂ ಮೋಕ್ಷಲಕ್ಷ್ಮೀ- ।
ರಮಣಂ ಸರ್ವ್ವಜ್ಞನಾನಂದಿತ ಭುವನಜನಂ ಘೋರ ಸಂಸಾರದೂರಂ ।
ವಿಮಳಜ್ಞಾನಸ್ವರೂಪಂ ತ್ರಿಭುವನ ತಿಳಕಂ ವಿಶ್ವದೇವಾದಿ[3]ದೇವಂ ॥ ೨ ॥

ಕಂ॥ ಜಗದೊಳಗುಳ್ಳ ಸುತತ್ವಮ- ।
ನಗಣಿತಮನನಂತ ಭೇದಭಿನ್ನ ಸ್ಥಿತಿಯಂ ॥
ಸುಗಮದಿನಱಿವಂತಿರೆ ಪೇ- ।
ಳ್ದಗುಣಾಢ್ಯಂ ಗೃಧ್ರಪಿಂಛ[4] ಮುನಿಕೇವಳಮೆ ॥ ॥ ೩ ॥

ಕವಿಗಮಕಿವಾದಿವಾಗ್ಮಿ ।
ಪ್ರವರರೊಳುತ್ಕೃಷ್ಟಮೆನಿಸಿ ತಪದಿಂ ಶ್ರುತದಿಂ ॥
ತಮಗೆಣೆಯಿಲ್ಲೆನೆ ಜಗದೊ- ।
ಳ್ಭುವನಾಚಾರ್ಯ್ಯಸಮಂತಭದ್ರದೇವರ್ನೆಗಳ್ದರ್ ॥ ೪ ॥

---

೧. ಅ—ವಾ; ೨. ಅ—ರ; ೩. ಅ—ಧಿ; ೪. ಅ—ಚ;

ವೃ॥ ಇನನಸ್ತಂಗತನಾಗೆ ತತ್ಸಮಯದೊಳ್ಕಯ್ಯಿಕ್ಕಿ ವಂಶಾವಳೀ ।
ವನಮಧ್ಯಸ್ಥಿತನಾಗಿ ವಾಯುವಶದಿಂ ಕೇಶಂಗಳಂ ಸುತ್ತಿ ವೇ- ।
ಣುನಿಕಾಯಂ ಬಿಡದೆತ್ತಿ ಪೋದುತಿರಲದ್ರುವ್ವಾದ್ಯನುಪ್ರೇಕ್ಷೆಯಂ ।
ಮನದೊಳ್ಭಾವಿಸಿ ಪೇಳ್ದ ಸ್ಥೈರಣೆಯ ಮಾನುಷ್ಯಂ-
ಜಟಾಚಾರ್ಯ್ಯರಂ ॥ ೫ ॥

ಪದದನುರಾಗದಿಂ ನೆಗಳ್ದ ಶಾಸನದೇವತೆ ಪೂಸೆ ಪಾದ ಲೇ- ।
ಪದ ಗುಣದಿಂದೆ ಯೋಜನ ಸಹಸ್ರಮನೊರ್ವ್ವದಲೆಯ್ದುವೊಂದು ಸಂ- ।
ಪದಮನಪೂರ್ವ್ವವಾಗೆ ತಳೆದೀ ಧರೆಯೊಳ್ಸಲೆ ಪೂಜ್ಯಪಾದ ನಾ- ।
ಮದಿನೆಸೆದಾ ಮುನೀಂದ್ರನ ನತಂದ್ರನನರ್ತ್ಥಿಯೊಳಾರು ಬಣ್ಣಿಸರ್ ॥ ೬ ॥

ಸಕಳಪ್ರಾಣಿ ಹಿತಾರ್ತ್ಥವಾಗೆ ರುಜೆಗಳ್ಪಿಂಗಲ್ಕೆ ಕಲ್ಯಾಣಕಾ- ।
ರಕಮಂ ವಾಗ್ಮಳಮಂ ತೆರಳ್ಚಿಕಳೆಯಲ್ಜೈನೇಂದ್ರಮಂ ಚಿತ್ತದೊಂ- ।
ದು [೧]ಕಳಂಕಂ[೧] ಕಿಡಿಸಲ್ಸಮಾಧಿಶತಯೋಗ ಗ್ರಂಥಮಂ ಪೇಳ್ದು ಸ- ।
ರ್ವ್ವಕವೀಂದ್ರಸ್ತುತ ಶುದ್ಧಚಿತ್ತನೆಸೆದಂ ಶ್ರೀಪೂಜ್ಯಪಾದೋತ್ತಮಂ ॥ ೭ ॥

ಕಂ॥ ಅಸದೃಶಮಿವೆನಿಸಿ ಲೋಕ- ।
ಕ್ಕೆಸೆಯೆ ಮನೋವಚನಕಾಯಮಳಮಂ ಕಳೆಯ- ॥
ಲ್ಕೆ ಸಮರ್ತ್ಥವೆನಿಪುವಂತೆ ರ- ।
ಚಿಸಿದರ್ಕ್ಕೆವಳಮೆ ಪೂಜ್ಯಪಾದ ಮುನೀಂದ್ರರ್ ॥ ೮ ॥

ಜಿನಶಾಸನಕ್ಕೆ ಭೂಷಣ- ।
ಮೆನಿಸಿದ್ದಕಳಂಕ ತರ್ಕ್ಕಮಂ ಪೇಳ್ದ ಮಹಾ- ॥
ಮುನಿಯಂ ಭವ್ಯಾಂಬುಜ ಮಿ- ।
ತ್ರನನೊಲ್ದಕಳಂಕ ದೇವನಂ ಪೊಗಳದರಾರ್ । ॥ ೯ ॥

ವೃ॥ ಎರಡುಂ ಕಯ್ಯ ತಳಂಗಳೊಂದೆ ಪುಟದೊಳ್ಸಂಪ್ರೀತಿಯಿಂದಿಟ್ಟು ನಿ- ।
ರ್ಬ್ಭರದಿಂ ಚಾರಣರಾವಿದೇಹ ಮಹಿಗೊಯ್ಯಲ್ಪೊಗಿಸಿ ಮಂದರೇ- ।
ಶ್ವರರಂ ಬಂದಿಸಿ ತತ್ಪ್ರಣೀತ ಸಮಯ ಗ್ರಂಥಂಗಳಂ ತಂದು ಬಿ- ।
ತ್ತರದಿಂ ಬಿತ್ತಿದ ಕೊಂಡಕುಂದ ಮುನಿನಾಥ ಖ್ಯಾತಿ-
ಲೋಕೋತ್ತಮರ್ ॥ ೧೦ ॥

---

೧. ಅ—೧ಳಂಕಮಂ;೧

ವೃ॥ ಈ ಮಹೀಮಂಡಲಂ ಪೊಗಳೆ ಪೂರ್ವ್ವವಿದೇಹದೊಳಿರ್ದ್ದ-
ತಂದುದೋ-
ಸಾಮಿ ಸುಲೋಚನಾಚರಿತೆ ಪಾಹುಡಮೆಂಬ ಪುರಾಣಮಂ ಮನ- ।
ಪ್ರೇಮದಿ[೧]ನೋದುತಿರ್ಪ್ಪ ಯತಿಗಳ್ಗೆ ನಿರನ್ವಯವಾಗಲೆಂದು ತಂ- ।
ದಾಯತಿಸಾಧನಿಂ ಪಿರಿಯರುಂ ಪೆಱರುಂಟಿ ತಪಃಪ್ರಭಾವದಿಂ ॥೧೧॥

ಕಂ॥ ದ್ರವ್ಯಂಗಳಂದಮಂ ಸ್ವ- ।
ದ್ರವ್ಯ ಪರದ್ರವ್ಯ ಭೇದ ಭಿನ್ನ ಸ್ಥಿತಿಯಂ ॥
ಶ್ರವ್ಯಮೆನೆಪೇಳ್ದ ಮುನಿಜನ ।
ಸೇವ್ಯಮೆನಲ್ಕೊಂಡಕುಂದ ಮುನಿಪರ್ನೆಗಳ್ದರ್ ॥ ೧೨ ॥

ವಾದಿಗಳೊಳಗತ್ಯುತ್ತಮ ।
ವಾದಿಗಳಯ್ವತ್ತನಾಲ್ವರಂ ಗೆಲ್ದ ವಚ- ॥
ಶ್ರೀದ್ವೈತ[೨]ಜಿನನಮಳಿನ ಸ್ಯಾ- ।
ದ್ವಾದಾಚಳಸಿಂಹನಖಿಳ ತಾರ್ಕ್ಕಿಕ ಭೂಪಂ ॥ ೧೩ ॥

ಜಿನಸಮಯಾಂಬರ ಸೋಮಂ ।
ವಿನೇಯಜನಕುಮುದ ಸೋಮನಖಿಳಧರಿ[೩]ತ್ರೀ- ॥
ಜನನಯನೋತ್ಸವಸೋಮಂ ।
ಜನಸ್ತುತಂ ಸೋಮದೇವಪಂಡಿತ ದೇವಂ ॥ ೧೪ ॥

ಪರಮ ಜಿನಚರಣಭಕ್ತಂ ।
ಪರಮಾಗಮವೇದಿ ಪರಮಮುನಿತುಷ್ಟಿಕರಂ ॥
ಪರಮ ನರೇಶ್ವರ ವಂದ್ಯಂ ।
ಧರೆಗೆಸೆದಂ ಪರಮಪಂಡಿತಂ[೪] ಭೂಪಾಲಂ ॥ ೧೫ ॥

ಪೊಸೆಯದೆ ಪಜ್ಜೆಗಳಂ ನಾ- ।
ಲ್ದೆಸೆಯೊಳಮೆಂಟೆಂಟು ದಿ[೫]ವಸಮಿರುಳುಂ ಪಗಲುಂ ॥
ಮಿಸುಕದೆ ನಿಲೆ ನಿಂದೆಸೆವಂ ।
ಪಸರಿಸಿದರ್ಲ್ಲೋ[೬]ಕದೊಳ್ ಚತುರ್ಮ್ಮುಖದೇವರ್ ॥ ೧೬ ॥

---

೧. ಅ—ದಿಂ; ೨. ಅ—ತ್ಯ; ೩. ಅ—ತ; ೪. ಅ—ದಿ; ೫. ಇ—ಳಂ;
೬. ಅ—ಲೋ;

ವೃ॥ ಮೆಟ್ಟಿಯೆನಿಲ್ವ ಕಲ್ಲನುಜಿ ಸುಟ್ಟೊಡಮುಂಘ್ರಿಗಳುಚ್ಚೆಱ-
ಗೂಂಟಮಂ ।
ಬೆಟ್ಟಿದೊಡಂ ಮಹೋಗ್ರಫಣಿ ಸುತ್ತಿದೊಡಂ ಮೊಳಕಾಲ್ಗಳಂ ಬಿಡ-।
ಲ್ಬಟ್ಟಲನೋವದೆತ್ತಿದೊಡಮುಳ್ಕದಿ[೧] ಮೇರು ನಗೇಂದ್ರದಂದದಿಂ ।
ಬೆಟ್ಟದ ದೇವರಲ್ಲದರ್ಗೆ[೨] ತಿರ್ಗ್ಗಮೆ ನಿಶ್ಚಳ-
ಯೋಗದಿಂದಿರಲ್ । ೧೬ ॥

ಕಂ॥ ವಾದಿಗಳೆನೆ ನೆಗಳ್ದಮಹಾ- ।
ವಾದಿಗಳಂ ನುಡಿದು ಗೆಲ್ದು ಚಕ್ರೇಶ್ವರ ನೊ- ॥
ಲ್ದಾದರಿಸಿ ನೆಗಳ್ದನಿಂತೀ ।
ಮೇದಿನಿಯೊಳ್ವಾದಿರಾಜ ದೇವರೆ ದೇವರ್ ॥ ೧೮ ॥

ವೃ॥ ವನಗಜಮುಳ್ಳ ಪೇರಡವಿಯೊಳ್ಬರೆ ಕಟ್ಟಿದಿರಾಗಿ ತಾಗೆ ಬೆ- ।
ನ್ನನೆ ಪರಿತಪ್ಪ ಪೆರ್ಬ್ಬುಲಿ ಮಹಾಫಣಿ ಸಂಕುಳ ಮೆಯ್ದೆವಪ್ಪ ಕಾ- ।
ಯ್ಪಿನ ಪಗೆಕೂಡೆ ಮಾಡುವುಪಸರ್ಗ್ಗಮದಾಗಳೆ-
ಮಾಣ್ಗುಮರ್ತ್ಥಿಯಿಂ ।
ನೆನದಡೆ ಮೇಘಚಂದ್ರ ಮುನಿವಲ್ಲಭದಿವ್ಯಪದಾಂಬುಜಂಗಳಂ ॥ ೧೯ ॥

ಕಂ॥ ಮೊಗದೊಳ್ವಾಗ್ವಧು ಸಂತತ- ।
ಮಗಲದೆ ನಿಲೆ ಕೀರ್ತ್ತಿವಧುಗೆ ಕೂರ್ತ್ತುಂ ಮತ್ತ- ॥
ರ್ತ್ಥಿಗಳಮೃತ ವಧುಗೆ ತಪದು- ।
ಜ್ಜುಗಮೆಂತುಟೊ ಮೇಘಚಂದ್ರ ಮುನಿಪುಂಗವರಾ ॥ ೨೦ ॥

ಮಳಧಾರಿಗಳೆನೆ ನೆಗಳ್ದಂ ।
ಮಳರಹಿತಮೆನಿಪ್ಪ ತಪದೆ ಸುಚರಿತ್ರದೆ ನಿ- ॥
ರ್ಮ್ಮಳ ತೇಜೋಭುಂಭುಕ ಮಾ- ।
ಯ್ತೆ[೩]ಳೆಗಚ್ಚರಿ ವೀರಣಂದಿ ಮಲಧಾರಿಗಳಾ ॥ ೨೧ ॥

ವೀರದ ಗುರ್ವಿಂದುಗ್ರನ ।
ವೀರಮನದಟಲೆದು ನೆಗಳ್ಟ ಮದನನ ಮದಮಂ ॥
ಬೀರಮುಮನಲೆದು ಗೆಲ್ದು[೪]ದು ।
ವೀರತಪಂ ವೀರಣಂದಿ ಮಲಧಾರಿಗಳಾ ॥ ೨೨ ॥

---

೧. ಅ—ದೆ; ೨. ಅ—ರ್ಗ್ಗೆ; ೩. [ಯ್ತು] ೪. ಅ—ಲ್ತು;

ವೃ॥ ಮುನಿಸೊಂದಾದಂದೆ ಸನ್ಯಾಸನ ವಿರದಶನಂ-
ಧದ್ವಿರ್ಯಯಾದಂಗೆ ಸನ್ಯಾ- ।
ಸನವಕ್ಷಿ ಕ್ಷುದ್ರನಿದ್ರಾಭರದಿನೊಱಗೆ ಸನ್ಯಾಸನಂ ಗಾತ್ರಕಂಡೂ- ।
ಯನಮಂ ಕೈಮುಟ್ಟೆ ಸನ್ಯಾಸನಮುಗುಳ್ದಡೆ-
ಸನ್ಯಾಸನಂ ಪೂಣ್ಕೆಯೆಂದೆಂ- ।
ದೆನಸುಂ ತಾನೇಂ[1] ಪರಿಚ್ಛೇದಿಯೊ ತಪದ ಬೆಡಂಗಂ-
ಗುಣವ್ರಾತ ತುಂಗಂ ॥ ೨೩ ॥

ಕಂ॥ ಅತಿ ನಿರ್ಮ್ಮಳಮೆನಿಸಿದರ್ಪ್ಪ ।
ಶ್ರುತವದೆ ತಾಂ ಮೂರ್ತಿಗೊಂಡುದೆಂಗುಂ ಲೋಕಂ ॥
ಶ್ರುತಕೇವಳಿ ಜಿನಸೇನರ ।
ನತಂದ್ರರಂ ವೀರಸೇನ ಭಟ್ಟಾರಕರಂ ॥ ೨೪ ॥

ಕವಿಪರಮೇಷ್ಠಿವೆಸರ್ನ್ನಿಜ ।
ಕವಿತಾಗುಣದಿಂದಮೆಸೆಯೆ ಕವಿಜನವಂದ್ಯಂ ॥
ಕವಿಪರಮೇಷ್ಠಿಮುನೀಂದ್ರಂ ।
ಭುವನಾಂತರ್ವ್ವರ್ತಿ ಕೀರ್ತಿ ನೆಗಳ್ದಂ ಧರೆಯೊಳ್ ॥ ೨೫ ॥

ಆಪ್ತೋದಿತ ಲೋಕ ಪ್ರ- ।
ಜ್ಞಪ್ತಿಗೆ ಮುಂಕರ್ತ್ತೃವಾಗಿ ಕಡೆಯೊಳ್ನಿಂದಿ- ॥
ದ್ದಾರ್ಪ್ತ ಸ್ಮರಣೆಯೆನಿ[2]ಸುವಂ ।
ವ್ಯಾಪ್ತಯಶಂ ಬಿಟ್ಟು ಬಾಳಚಂದ್ರಂ ನೆಗಳ್ದಂ ॥ ೨೬ ॥

ವೃ॥ ಧರೆಯೊಳ್ಸಂದ ಮೊರಂಬದೊಳ್ ನಿಜ ನಿಶೀಧಿಸ್ಥಾನದೊಳ್ಮಣ್ಣನಾ- ।
ದರದಿಂದೊರ್ಮ್ಮೆಯೆ ತಂದು ಪೂಸಲೊಡನತ್ಯುಗ್ರಗ್ರ[3]ಹಾನೇಕ ಸ- ।
ರ್ಪ್ಪರುಜಾಪೀಡೆಗಳಾಗಳಂತೆ ಕೆಡುಗುಂ ತಾನೆಂದೊಡಂ-
ಮಮ್ಮ ಬಾ- ।
ಱ್ಪರೆ ಸಾಮಾನ್ಯಮೆ ಮೇಘಚಂದ್ರ-
ಮುನಿಮಾಹಾತ್ಮ್ಯಂ ಧರಾಚಕ್ರದೊಳ್ ॥ ೨೭ ॥

ಕಂ॥ ಪದಿಮೂಱುದಿನಂ ಸನ್ಯಸ- ।
ನದೆ ಕಾಯೋತ್ಸರ್ಗ್ಗದಿಂದೆ ನಿಂದುಂ ನಿಂದಂ- ॥

---

೧. ಅ—ನೆಂನ; ೨. ಅ—ನಿ; ೩. ಅ—ಗ್ರಾ;

ದದಿನಸುಖಂ ಬಿಟ್ಟು ಜಗ- ।
ದ್ವಿದಿತಯುತಂ ವೀರಣಂದಿ ಸುಗತಿಗೆ ಸಂದಂ ॥ ೨೮ ॥

ನಯದಿಂದಂ ತಾಯುಂ ತಂ- ।
ದೆಯುಮೊಳ್ಪನೆ ಶಿಕ್ಷಿಪಂತೆ ಮನುಜಾವಳಿಯಂ ॥
ನಯದಿಂ ಸಂಬೋಧಿಸಿ ಮು- ।
ಕ್ತಿಯೊಳೊಂದಿಪ ಪೆರ್ಮೆ ಬಂಧುವರ್ಮಂಗೆ ನಿಜಂ ॥ ೨೯ ॥

ರೋಗಂ ಸಮಸ್ತದುಃಖ- ।
ಕ್ಕಾಗರಮದು ಕೇಳ ಜೀವ ಸಂಬೋಧನೆಯಂ ॥
ಬೇಗಂ ಮಾಣ್ಗುಂ ದುಸ್ಸಹ ।
ರೋಗಂ ಸದ್ವೈದ್ಯನಿಂದಮುಪಸಮಿಸುವವೋಲ್ ॥ ೩೦ ॥

ಭವ ಜಳಧಿಯೊಳಗೆ ಮುಳ್ಕಾ- ।
ಡುವ ಜೀವಾವಳಿಗೆ ಮುಕ್ತಿಯಂ ತಡೆಯದೆ ಪೊ- ॥
ರ್ದ್ದುವುದುಂ ಪೇಳ್ದುದಱಿಂ ಬಂ- ।
ಧುವರ್ಮನಂ ಭುವನಬಂಧುವೆನ್ನದರೊಳರೇ ॥ ೩೧ ॥

ಜನವಲ್ಲಭನಮಳಯಶೋ- ।
ಧನನುತ್ತಮ ರಾಜಪೂಜಿತಂ ಬುಧನಿಳಯಂ ॥
ಜಿನಪಾದಾಂಬುಜ ಮಧುಕರ- ।
ನೆನೆ ನೆಗಳ್ದಂ ಪಂಪರಾಜನೂರ್ಜ್ಜಿತತೇಜಂ ॥ ೩೨ ॥

ಶುಭಚರಿತನನಖಿಳ ಕವಿ- ।
ಪ್ರಭುವಂ ಲೋಕೈಕ ಮಾನ್ಯನಂ ತ್ರೈಭುವನ ॥
ಪ್ರಭುಚರಿತಮನತಿಭಕ್ತಿಯಿ- ।
ನಭಿನುತಮೆನೆಪೇಳ್ದ ಪಂಪನಂ ಪೊಗಳದರಾರ್ ॥ ೩೩ ॥

ಪೊನ್ನಂ[೨] ವಿನೇಯ[೩]ರನ್ನಂ[೩] ।
ರನ್ನಂ ಭವ್ಯಾಬ್ಜಮುಖವಿಕಾಸನ ಮಿತ್ರಂ ॥
ಪೊನ್ನನೆನಲ್ನೆರಾಣಿಯು ।
ಪೊನ್ನನ್ನನಮೂಲ್ಯರತ್ನದನ್ನಂ ರನ್ನಂ ॥ ೩೪ ॥

೧. ಆ—ಲ; ೨. ಆ—ನ್ನ; ೩. ಆ—೩ರತ್ನಂ ರನ್ನ;೩

ಪೊನ್ನನೆ ಪಂಪನೆ ರಜಕನೆ ।
ರನ್ನನೆ ಕವಿತಾಗುಣೋದಯನೆ ದರ್ಶನ ಸಂ- ॥
ಪನ್ನತೆಯೊಳ್ಕವಿತೆಯೊಳವ ।
ರನ್ನನೆ ವಿದಿತಾತ್ಮಭಾವನಗ್ಗಳದೇವಂ ॥ ೩೫ ॥

ವಿತ್ತಂ ಸತ್ಪಾತ್ರಕ್ಕಾ- ।
ಯತ್ತಂ ನಿಜವಾಣಿ ತೀರ್ಥಕರ ಕೀರ್ತ್ತನೆಗಾ- ॥
ಯತ್ತಂ ವ್ರತಕ್ಕೆ ತನುವಾ- ।
ಯತ್ತವೆನಲ್ನಾಗಚಂದ್ರ, ಬುಧನೆ ಕೃ೧ತಾರ್ತ್ಥಂ ॥ ೩೬ ॥

ಪಟ್ಟಣದ ನಡುವೆ ಬೆಳ್ಳಿಯ ।
ಬೆಟ್ಟಂಗಳನಿಳಿಪ ಜೈನನಿಳಯಂಗಳ ನೀ- ॥
ಶ್ರಿಷ್ಟಿಯೊಳೆ ಕೂಡೆಮಾಡಿದ ।
ರಟ್ಟಂ ತಂಖಾವನೀಶನೆನೆ ಪೊಗಳದರಾರ್ ॥ ೩೭ ॥

ಗುಣದಕಣಿ ದಾನ ಚಿಂತಾ- ।
ಮಣಿ ವಿಮಳ ಚರಿತ್ರ ಜೈನಶಾಸನ ರಕ್ಷಾ- ॥
ಮಣಿ ಸಜ್ಜನೈಕಚೂಡಾ- ।
ಮಣಿಯೆಂದೆಂದತ್ತಿಮಬ್ಬೆಯಂ ಪೊಗಳದರಾರ್ ॥ ೩೮ ॥

ವೃ॥ ಭರದಿಂ ಬಂದೊತ್ತೆ ಮುಂದೆಮ್ಮಸಕದೆಸಕದಿಂ ತೀಪಿ-
ಮುಂದೊತ್ತೆ ಗೋದಾ- ।
ವರಿ ಭೂಪಂ ತೈಲಪಂ ನಿಸ್ತರಿಸು ಕಟಕಮಂ ಬೇಗಮಿನ್ನಬ್ಬ ನೀನೆಂ- ।
ದೆರೆಯಲ್ಸರ್ವಜ್ಞನಂ ಪೊತ್ತಗಿಯದೆ ನದಿಯಂ-
ಪೊಕ್ಕಡಾವಾರಿಪೂರಂ ।
ಬಿರಿದತ್ತಾ ಚಕ್ರಿಪಾಯ್ದಂ ತೊರೆಯನಮಳ ಸಮ್ಯಕ್ತ್ವ-
ವಿಖ್ಯಾತಿಯಿಂದಂ ॥ ೩೯ ॥

ಕಂ॥ ಅಕಳಂಕಚರಿತೆ ಜಿನಚರ- ।
ಣಕಂಜಕಿಂಜಲ್ಕ ಪುಂಜರಂಜಿತ ತನು ಸ- ॥
ರ್ವ್ವಕಳಾವಿದೆ ಶೌಚಿಘಟಾಂ- ।
ತಿಕೆ ದಾನವಿನೋದೆಯೆಂಬ ಬಿರುದಿಂ ನೆಗಳ್ದಳ್ ॥ ೪೦ ॥

---

೧. ಅ—ಕ್ರು;

ಅತಿ ಧವಳ ಕೀರ್ತಿ ಲಕ್ಷ್ಮೀ- ।
ಪತಿಯುಂ ಜಿನಸಮಯವಾರ್ಧಿ ವರ್ಧನತಾರಾ- ॥
ಪತಿಯಂ ಕೂರ್ತ್ತನಿಶಂ ರಾ- ।
ಜಿತನಂ ರಾಯನನುದಾರಿಯುಂ ಪೊಗಳದರಾರ್ ॥ ೪೧ ॥

ಅಮಳಿನ ಚರಿತಂ ಜೈನಾ- ।
ಗಮಕುಶಲಂ ಗಂಗವಂಶತಿಳಕಂ ಭವ್ಯೋ- ॥
ತ್ತಮನಮಳವಾಗ್ವಧೂಟೀ- ।
ರಮಣಂ ಶ್ರೀರಾಯ ರಾಚಮಲ್ಲಂ ನೆಗಳ್ದಂ ॥ ೪೨ ॥

ಜಿನಸಮಯ ಸುಧಾರ್ಣ್ಣವ ವ- ।
ರ್ಧನಚಂದ್ರಂ ಜಿನಮತಾಂಬುಜಾಕರಹಂಸಂ ॥
ಜಿನಪದಪಯೋಜ ಭೃಂಗಂ ।
ವಿನೇಯನಿಧಿ ಚತುರಮಂತ್ರಿತಿಳಕಂ ಭರತಂ ॥ ೪೩ ॥

ಪ್ರವಿಮಳ ಜಿನಶಾಸನದಿಂ ।
ಪವಿತ್ರಮೆನೆ ಮಾಡಿ ಕೂಡೆ ಮೂಸಾಸಿರಮಂ ॥
ಭುವನನುತನಾದನಾತ್ಮೀ- ।
ಯವಚೋಮೃತದಿಂದೆ ಪೇಳ್ದಪೆರ್ಗ್ಗಡೆಬೊಮ್ಮಂ ॥ ೪೪ ॥

ಆವಿಭುವಿನಗ್ರತನಯಂ ।
ಪಾವನ ಚರಿತಂ ವಿನೇಯಕಲ್ಪಮಹೀಜಂ ॥
ಕೇವಳಮೆ ನಾಗದೇವಂ ।
ಭೂವಿಶ್ರು[೧]ತಕೀರ್ತಿಮಂಡಳೇಶ್ವರ ತಿಳಕಂ ॥ ೪೫ ॥

ವೃ॥ ಜನತಾನಂದಂ ಚಳುಕ್ಯಾಭರಣನವನಿಪಾಳೋತ್ತಮಂ-
ಸಾರ್ವ್ವಭೌಮಂ ।
ಜನಕಂ ತ್ರೈಲೋಕ್ಯಮಲ್ಲಂ ಸಕಳ ವಸುಮತೀವಲ್ಲಭಂ-
ವಿಕ್ರಮಾಂಕಾ- ।
ವನಿಪಂ ತಾನಗ್ರಜಾತಂ ತ್ರಿಭುವನವಿಭುದೇವಾದಿದೇವಂ ಜಿನೇಂದ್ರಂ ।
ತನಗಾಪ್ತಂ ಮತ್ತೆನಲ್ಕೇಂ ಪಿರಿಯನೊ-
ಜಗತೀನಾಥರೊಳ್ಕೀರ್ತ್ತಿದೇವಂ ॥ ೪೬ ॥

---

೧. ಆ—ಶೃ;

ಕಂ॥ ಅರಸುಮಗಂ ಗಡ ಕಲಿ ಗಡ।
ಪಿರಿದಿವಂ ಗಡ ಬಳಿಕ್ಕ ಜೈನಂಗಡ್ಡೆನ-।
ಲ್ಧರಣಿಪತಿ ಕೀರ್ತ್ತಿದೇವಂ।
ನಿರುತಂ ಪೊಂಕಪ್ಪಿತಾದುದೆನಿಸಿದನಿಳೆಯೊಳ್ ॥ ೪೭ ॥

ಇವನಂತಿರೊಳ್ಪಿನಿಂ ನೆಗ-।
ಳ್ದವರವರಾರೆಂದು ನಾಗದೇವನ ಮಗನಾ-॥
ಹವಮಲ್ಲ ನೃಪತಿಯನ್ನಯ।
ಕುವಳಯಮಿತ್ರನನನೇಕರುಂ ಬಣ್ಣಿಸುವರ್ ॥ ೪೮ ॥

ಇನ್ನರಿವರೆಂದು ಬಣ್ಣಿಸು-।
ವನ್ನರಲೋಕೈಕಸಾರ ಸರ್ವ್ವಸ್ವರೆನಿ-॥
ಪ್ಪನ್ನರೆ ಸಮಸ್ತಗುಣ ಸಂ-।
ಪ[೧]ನ್ನರೆ ಭವ್ಯರ್ಕ್ಕಳೆಂದು ಬಣ್ಣಿಪುದು ಜಗಂ ॥ ೪೯ ॥

ಮನವಚನಕಾಯದಿಂ ಜೀ-।
ವನಿಕಾಯಮನಳಿಯರಳಿವುದೆನ್ನಮ್ಮರ್ತ್ತಂ-॥
ತೆನತುಮೊಡಂಬಡರೆನೆ ತಾ-।
ಮೆನೆ ಜಗದೊಳ್ ಜೈನರಿಂ ದಯಾಪರರೊಳರೇ ॥ ೫೦ ॥

ಶ್ರೀ ಮಹಿತನಂ ತ್ರಿಲೋಕ-।
ಸ್ವಾಮಿಯನಾನಂದಮೂರ್ತ್ತಿಯಂ ಮುಕ್ತಿವಧೂ॥
ಪ್ರೇಮನನಖಿಳಜಗದ್ರ-।
ಕ್ಷಾಮಣಿಯಂ ಪೊಗಳ್ವುದಮೃತ ಸೌಖ್ಯ[೨]ಮನೋಲ್ವಂ ॥ ೫೧ ॥

ಅನುಪಮ ಗುಣಭೂಷಣನಂ।
ವಿನೇಯಜನ ಕುಮುದಚಂದ್ರನಂ ಸಕಳಜಗ-॥
ಜ್ಜನವಂದ್ಯನೆನಿಸಿ ನೆಗಳ್ದಾ-।
ದಿನಾಥನಂ ದೇವದೇವನಂ ಪೊಗಳ್ಗೆ ಬುಧಂ ॥ ೫೨ ॥

---

೧. ಆ—ಪ್ಪ; ೨. ಆ—ವಿಮನೊಬಿವಂ೨;

ನಿರ್ವ್ವಾಣಪದಸ್ಥಿತನಂ ।
ದುರ್ವ್ವಾರ ಭವಾಬ್ಧಿತೀರಪಾರಂಗಮನಂ ॥
ಸರ್ವ್ವೇಶ್ವರನಂ ಪೊಗಳ್ವುದ- ।
ಪೂರ್ವ್ವಗುಣಸ್ತುತಿಶತಂಗಳಿಂ ಮತಿವಂತಂ ॥ ೫೩ ॥

ಖರಕರನಂ ಹಿಮಕರನಂ ।
ತರುವಂ ಗಿರಿಯಂ ಮೃಗಾರಿಯಂ ಕರಿಯುಂ ಸುಂ- ॥
ದರಿಯುಂ ಬಣ್ಣಿಸ[೧]ದರುಹ[೨]- ।
ತ್ಪರಮೇಶನನರ್ತ್ತಿಯಿಂದೆ ಬಣ್ಣಿಸುಗಱಿವಂ ॥ ೫೪ ॥

ವೃ॥ ಮತಿಗೆಟ್ಟೋರ್ವ್ವರನೋರ್ವ್ವರೆಚ್ಚರಿಱಿದ-
ಕ್ರೋಂಗಿದಕ್ಕೆಲಬ್ಬಂಧುಗಿಸಂ- ।
ತತಿಯಂ ದೈತ್ಯರನೆಂಬ ಪಾತಕಕಥಾಳಾಪಂಗಳಂ ಪೇಳ್ದು ದು- ।
ರ್ಗ್ಗತಿಯೊಳ್ಬೀಳದೆ ಸರ್ವ್ವಜೀವಹಿತಮಂ ಸದ್ಭಾವದಿಂ ದೇವ ಸಂ- ।
ಸ್ತುತಮಂ ಪೇಳ್ವುದು ಜೈನಧರ್ಮ್ಮಕಥೆಯಂ ಲೋಕೈಕ-
ಮಾಂಗಲ್ಯಮಂ ॥ ೫೫ ॥

ಕಂ॥ ಮತಿತವದನ್ನೆಗಮರ್ಹನ- ।
ನತಿಶಯಮನೆ ಪೊಗಳ್ವುದರ್ತ್ತಿಯಿಂ ಸಕಳ ಜಗ- ॥
ತ್ಪತಿಯಂ ನಾಲಗೆ ತಣಿವಿನ ।
ಮತಂದ್ರಮನನಾಗಿ ಸಂತತಂ ಮತಿವಂತಂ ॥ ೫೬ ॥

ಇಳೆಯೊಳ್ಸಲೆ ನೆಲಸಿದ ಪೊ- ।
ಟ್ಟುಳ[೩]ಗೆಱೆಯೊಳ್ನೆಗಳ್ದಸಿಂಗ[೪]ರಾಜನ ಸುತನ- ॥
ಗ್ಗಳದೇವನ ಕೆಳೆಯಂ ದ್ವಿಜ- ।
ಕುಳರತ್ನಂ ವತ್ಸಗೋತ್ರತಿಳಕಂ ಬ್ರಹ್ಮಂ ॥ ೫೭ ॥

ಸೌರಂ ಕಾಳೋತ್ತರಮುಂ- ।
ಬಾರಾಧನೆಗಳೊಳಮಖಿಳವೇದಸ್ಮೃತಿ ತ- ॥
ತ್ಪೌರಾಣಮೆನಿಪ್ಪುವಱೊಳ್ ।
ಸಾರಮನಿಂಬಾಗಿ ನೆಱಿಯೆ ನಿರುತಂ ಬಲ್ಲಂ ॥ ೫೮ ॥

---

೧. ಅ—ಾದರ್ಹಗ; ೨. ಇ—ಿದಾಡಿದಬ್ಬಂಧುಶಿ; ೩. ಇ—ಣ; ೪. ಅ—ಹ;

ಪಿರಿದರ್ತ್ಥಿಮುನ್ನ ಮಾಹೇ- |
ಶ್ವರದೊ[1]ಳ್ತನಗದಱೊಳೊಳ್ಪುಗಾಣದೆ ನೆಗಳ್ದೀ ||
ಪರಮ ಜಿನಧರ್ಮ್ಮದೊಳ[2]ಪೊ- |
ಕ್ಕು ರಾಗಿಪಂ ಸುಕವಿ ಪಂಪರಾಜನ ವೊಮ್ಮಂ || ೫೯ ||

ಘನಮಿಥ್ಯಾತ್ವಾಚಳಭೇ- |
ದನ ವಜ್ರಂ ಜೈನಮಾರ್ಗ್ಗನಿಶ್ಚ[3]ಳಚಿತ್ತಂ ||
ಜಿನಸಮಯಸುಧಾರ್ನ್ನ[4]ವ ವ- |
ರ್ದ್ಧನ ಚಂದ್ರಂ ಪೇ[5]ಳ್ದನೆ[5]ಸೆಯೆ ಭವ್ಯರ ಮತದಿಂ || ೬೦ ||

ಇದು[6]ರತ್ನ[6]ಕರಂಡಕಮೆಂ- |
ಬುದು ಭಾವಿಸುವಾಗಳಿದುವೆ ಪರಸಮಯಿಗಳಂ ||
ಮುದದಿಂ ಪಥಕ್ಕೆ ತರಲಾ- |
ರ್ಪ್ಪುದು ಸಮಯಪರೀಕ್ಷೆಯೆಂಬುದಿಂತೀಕಾವ್ಯಂ || ೬೧ ||

ಆಪ್ತಾಗಮಧರ್ಮ್ಮಮುಮನ- |
ನಾಪ್ತಾಗಮಮಾ ಕುಧರ್ಮ್ಮಮೆಂಬೆರಡುಮನೋ- ||
ಲ್ದಾಪ್ತೋದಿತಮೆನಿಪ ಸುಖಾ- |
ವಾಪ್ತಿಯನೋಲ್ವರ್ಗ್ಗೆ ತಿಳಿಯೆ ಪೇಳ್ವೆಂ ಕ್ರಮದಿಂ || ೬೨ ||

ಇಂತಿರೆ ದೂಷಿಸುವುದು ಗುಣಿ- |
ಗೇಂ ತಕ್ಕುದೆ ಜಗಮನೆಲ್ಲಮೆಂಬುದನುಳಿದಾ- ||
ದ್ಯಂತಂ ಭಾವಿಸಿ ಕೇಳ್ವವ- |
ರಿಂತಿದೆ ಸುಖಹೇತುವೆಂದು ನಂಬುಗು[7]ಮಲ್ತೆ || ೬೩ ||

ತಿಳಿವುಳ್ಳನೆಯ್ದೆ ಕೇಳ್ದಡೆ |
ಮುಳಿಯುಂ ತಿಳಿಯಲ್ಕೆ ಬಯಸುಗುಂ ಸನ್ಮತಿಯೇಂ ||
ತಿಳಿಯಲೊಡಂ ದುರ್ಜ್ಜನನುಂ |
ಪಿಳಸಿತ[8]ಮುಂ[8]ಧರ್ಮ್ಮದತ್ತಲೆಱಗುಗುಮಲ್ತೆ || ೬೪ ||

---

೧. ಇ—ರೊ; ೨. ಇ—ಳೆ; ೩. ಅ—ಚ್ಚ; ೪. ಇ—ರ್ಣ್ಣ; ೫. ಇ—ಳ್ದವೆ; ೬. ಇ—ಸಮಯ; ಅ—ರತ್ನಾ; ೭. ಇ—ಗೆ; ೮. ಇ—ವಮತಿ;

ಗುಣದೋಷಮನಱಿದವಱೊ- ।
ಳ್ಗುಣ[1]ಮಂ[1]ಕೈಕೊಂಡು ದೋಷಮಂ ನೆಱೆಬಿಡುವಾ ॥
ಗುಣವಂತನ ಮುಂದೋದುಗೆ ।
ಗುಣಕ್ಕೆ ಮುಳಿ[2]ವವನ ಮುಂದೆ ಬೇಡಿದನೋದಲ್ ॥ ೬೫ ॥

ಅನುಪಮಸಮ್ಯಗ್ದೃಷ್ಟಿಯಿಂ-[3] ।
ನನುಪಮಸಮಭಾವನಪ್ಪನಿಂ ಬರಯಿಪುದೀ ॥
ಜಿನಧರ್ಮಾಮೃತಮಂ ದು- ।
ರ್ಜನನಿಂದಂ ಬರಯಿಸಲ್ಕೆ ಬೇಡಿದನಱಿವಂ ॥ ೬೬ ॥

ಮೂವತ್ತನಾಲ್ಕುತೆಱದಿನ ।
ದಾವಂಗತಿಶಯವಿಶೇಷವೊಪ್ಪುಗುಮಂತಾ- ॥
ದೇವನೆ ಮೂಲೋಕಕ್ಕಂ ।
ದೇವನೆ ನೆಗಳ್ದತಿಶಯಂಗಳಿಲ್ಲದನಲ್ಲಂ ॥ ೬೭ ॥

ಸಕಳಂ ನಿಃಕಳನೆಂಬೀ ।
ವಿಕಲ್ಪದಿಂ ಸಕಳಲೋಕಹಿತತತ್ವಸುದೇ- ॥
ಶಕನುಂ ಲೋಕಾಗ್ರಗತಾ ।
ಷ್ಟಕರ್ಮನಿರ್ಮುಕ್ತಶುದ್ಧನುಂ ತಾನಾಪ್ತಂ ॥ ೬೮ ॥

ಸಂಗತಗುಣನಖಿಳಜಗ- ।
ನ್ಮಂಗಳಕಾರಣನನಂತಬೋಧಾತ್ಮಂ ನಿ- ॥
ಸ್ಸಂಗಂ ನಿರುಪಮನೆನಿಸಿಯೆ ।
ಸಂದಂಗೆಱಗುವುದು ಸೌಖ್ಯಮಂ ಬಯಸುವವಂ ॥ ೬೯ ॥

ಅಮಳಿನ ದರ್ಶನದಿಂ ವಿ- ।
ಶ್ವಮನೊರ್ಮೊದಲೆಯ್ದೆ ಕಂಡು ಬಳಿಕಂ ಲೋಕಾ- ॥
ಗ್ರಮನೆ[4]ಯಿದಿ[4] ನಿಂದ ದೇವೋ- ।
ತ್ತಮನಂ ಸೇವಿಪುದು ಮೋಕ್ಷಮಂ ಬಯಸುವವಂ ॥ ೭೦ ॥

---

೧. ಇ—೧ಮನೆ೧; ೨. ಆ—ನಿ; ೩. ಇ—ಯ; ೪. ಇ—೪ಯ್ದೆ೪;

ಪಾತ್ರನನಶೇಷಲೋಕಪ- ।
ವಿತ್ರನನಜರನನನಂತವೀರ್ಯ್ಯನನಖಿಳ ॥
ಸ್ತೋತ್ರನನೆಂತುಪಕಾರಣ ।
ಮಿತ್ರನನೋಲಗಿಪುದಮಿತಸೌಖ್ಯಮನೋಲ್ವಂ ॥ ೭೧ ॥

ಅನುಪಮಸುಖನಿಳಯನ- ।
ನನಘನನಕ್ಷಯನಂ ತ್ರಿಲೋಕಪತಿಯಂ ಸರ್ವ್ವ ॥
[1]ಜ್ಞನನಾ[1]ಪ್ತನೆಂದು ಪೊದ್ದರ್ವ್ವ- ।
ದನವದ್ಯನನಿಷ್ಟಸಿದ್ಧಿಯಂ ಬಯಸುವವಂ ॥ ೭೨ ॥

ನಿರುತಂ ತನ್ನೊಳು ಪೇಯ್ವ- ।
ತ್ತಿರೆ ಸಾಸಿರದೆಂಟುನಾಮಮುಮಂ ಸಕಳಜಗ- ॥
ದ್ಗುರುವಾದನಾವನಾತನೆ ।
ಪರಮೇಶ್ವರನೆಂದು ನಂಬಿ ಸೇವಿಪುದಜಿೀವಂ ॥ ೭೩ ॥

ಗುಣಿಯಂ ತ್ರಿಲೋಕಚೂಡಾ- ।
ಮಣಿಯಂ ಪರಮಾತ್ಮನಂ ಜಗಜ್ಜನಚಿಂತಾ- ॥
ಮಣಿಯನಘದೂರನಂ ಸುರ- ।
ಗಣವಂದ್ಯನನಾಪ್ತನೆಂದು ಸೇವಿಪುದಜೀವಂ ॥ ೭೪ ॥

ಅಪ್ರಮಿತತೇಜನಂ ಭುವ- ।
ನಪ್ರಭುವಂ ಶಾಂತಮೂರ್ತ್ತಿಯಂ ಶಾಶ್ವತ ಸೌ- ॥
[2]ಖ್ಯಪ್ರಿಯನ[2]ನಖಿಳ ಮನುಜೇಂ- ।
ದ್ರಪ್ರಣುತನನಾಪ್ತನೆಂದು ಬಗೆವುದು ಚದುರಂ ॥ ೭೫ ॥

[3]ಸನ್ಮಾರ್ಗ್ಗ[4]ರೂಪನಂ[4]ವಿ- ।
[5]ಶ್ವನ್ಮುನಿ[5]ಜನ ಭಾವಿತ ಕ್ರಮಾಬ್ಜನನಜನಂ ॥
ಮನ್ಮನದಿಂದೋಲಗಿಪುದು ।
ಜನ್ಮಜರಾಮರಣರಹಿತನೆನಿಸಿದ ಜಿನನಂ ॥ ೭೬ ॥

---

೧. ಅ—೧ಜ್ಞ—ನಾ೧; ೨. ಅ—೨ಖ್ಯಪ್ರೇಮನ೨; ೩. ಇ—ಉ; ೪. ಇ—೪ದೂರನಂ೪; ೫. ಅ—೫ವಿಶ್ವಂವ೦ುನಿ೫;

ಪುಟ್ಟಿದನಂ ಪೊಂದದನಂ ।
ನೆಟ್ಟನೆ ಲೋಕೈಕದರ್ಶಿ ತಾನೆನಿಸಿದನಂ ॥
ನಿಟ್ಟಿಸಿ ಮನದೊಳು ದುರಿತಘು ।
ರ[1]ಟ್ಟನನೆ[1]ನ[2]ಗಾಪ್ತನೆಂದು ಭಾವಿಪುದಱಿವಂ ॥ ೭೭ ॥

ಭವಮಥನ[3]ನಂ ಜಿತಾಂ[3]ಗೋ- ।
ದ್ಭವನಂ ಲೋಕೈಕಬಂಧುವಂ ದುರಿತಮಹಾ- ॥
ರ್ಣ್ಣವತರಣ[4] ನಿಪುಣನಂ ನ- ।
ಚ್ಚುವು[5]ದರುಹನ[5]ನಾಪ್ತನೆಂದು ನಿಶ್ಚಯ[6]ದಿಂದಂ[6] ॥ ೭೮ ॥

ಜಿನನಿರೆ ಜನನಿಯ ಬಸು[7]ಱಿ[7]ೊ- ।
ಳ್ವಿನಯದೆ ಬಲಗೊಳೆ ಪದಾರ್ತ್ಥ[9] ನಿರ್ಣ್ಣಯಮಕ್ಕುಂ ॥
ಮುನಿಪತಿಗಳಿಗೆನೆ ಬಾಱ್ಪರೆ ।
ಜಿನೇಂದ್ರನಂ ಬೋಧನಿಧಿಯನೋಲಗಿಸದರಾರ್ ॥ ೭೯ ॥

ಪುಟ್ಟಲೊಡಂ ದೇವೇಂದ್ರಂ ।
ನಿಟ್ಟಿಸಿ ಸರ್ವ್ವಜ್ಞನೆಂದು ಪೊಡವ[8]ಟ್ಟನೆನ- ॥
ಲ್ಕಟ್ಟವಿರು ಮರುಳೆ ಪಟ್ಟಂ- ।
ಗಟ್ಟಿದೊಡಱಿಸಲ್ಕೆವೇಳ್ಕುಮೇ ಲಕ್ಷಣಮಂ ॥ ೮೦ ॥

ದೇವೇಂದ್ರ ನರೇಂದ್ರ ಫಣೀಂ- ।
ದ್ರಾವಳಿ ಪಿರಿದಪ್ಪ ಭಕ್ತಿಯಿಂ ಜಿನಪತಿಯಂ ॥
ಭಾವಿಪರೆಂದಡೆ ಪೇರ್ಮ್ಮೆಯ ।
[9]ನೇರ್[9]ಣ್ಣೆಪುದಾನೆಗಂಡುವಡಿಯಱಸುವುದೆ ॥ ೮೧ ॥

ಜಿನಪತಿ ಜಗದೊಳ್ಪೂಜಾ- ।
ರ್ಹನಪ್ಪುದಱಿನರ್ಹನಾದ[10]ನೆಂದುಂ[10] ಜನನಂ ॥
ತನಗಿಲ್ಲದಱಿಂದಭವನು- ।
ಮೆನೆ ನಿಜದಿಂ ಖ್ಯಾತಿವೆತ್ತನಿಂತೀಜಗದೊಳ್ ॥ ೮೨ ॥

---

೧. ಅ—೧ಟ್ಟ—ನೆಂ; ೨. ಇ—ನೆ; ೩. ಅ—೩ನ—ಜಿ೩; ೪. ಅ—ಣಿ: ೫. ಅ, ಇ—೫ದರ್ಶನ೫; ೬. ಅ—೬ದಿಂ೬; ೭. ಇ—ಸಿ; ೮. ಅ—ಮು; ೯ ಅ೯—ರ್ವ; ೧೦. ಇ—೧೦ನೆಂಬುದು೧೦;

ವೃ॥ ಪುಸಿಕೊಲೆಪಾದರಂ ಕಳವಸೇವ್ಯವಿಮೋಹನಮೆಂಬ ತೀವ್ರ ದು- ।
ರ್ವ್ಯಸನಮನಾವಗಂ ಬಿಡುವುದೆಂಬ ಜಿನೇಶ್ವರನಾಜ್ಞೆಮೀಱಿ[1]ಲಂ- ।
ಘಿಸಿನೊಡಮೀಗಳುಂ ಜಗಮೆದಂಡಿಸುತಿರ್ದ್ದಪು-
ದೆಂದೊಡೋ[1]ಹೊ ಬ- ।
ಣ್ಣಿಸಲಳವೇ ಜಗತ್ರಯ ವಿಭುತ್ವಮನಿಂದ್ರನರೇಂದ್ರವಂದ್ಯನಾ[2] ॥೮೩॥

ಕಂ॥ ತನು ನಯನಹಾರಿ ಶಾಂತಾ- ।
ತ್ಮನ ವಚನಂ ಶ್ರವಣಹಾರಿಯುಪಕಾರಿ ದಿಟಂ ॥
ತನ[3]ಗೆಂದಾರಾಧಿಸುವಂ ।
ಜಿನೇಂದ್ರನಂ ಗುಣನಿಧಾನನಂ ಮತಿವಂತಂ ॥ ೮೪ ॥

ಹಳಕುಳಿಶಚಕ್ರಲಾಂಚ್ಛನ ।
ವಿಳಾಸಿ ಹಳಕುಳಿಶಚಕ್ರಧರಸಂಪದಮಂ ॥
ಬೆಳಯಿಸುಗುಂ ತಮಗೆಱಗ- ।
ಲ್ವಿಳಾಸದಾರ್ಹಂತ್ಯ ಪದಮುಮಂ ಜಿನಸಪದಂ ॥ ೮೫ ॥

ಧರೆಯೆಲ್ಲಮನಾಳಿಸುಗುಂ ।
ಸುರೇಂದ್ರಸಂಪದಮನೆಯ್ದಿಕುಂ ಮುಕ್ತಿಯೊಳಾ- ॥
ದರದಿಂ ನೆರವುಗು[4]ವರುಹ-[4]।
ತ್ಪರಮೇಶ್ವರ ತ[5]ತ್ಪದಾಬ್ಜ ಸೇವನೆ ತನ್ನಂ ॥ ೮೬ ॥

ಪಲವುಂ ಮಾತಿನೊಳೇಂ ನಿ- ।
ಶ್ಚಳಭಕ್ತಿಯಿನೊರ್ಮ್ಮೆ[6]ಬಂದು ಜೈನಾಲಯಮಂ ॥
ಬಲವಂದನಿತಱಿನಘಸಂ- ।
ಕುಳಮಂ ಗೆಲಲಾರ್ಕ್ಕುಮಲ್ಲಿ ಸಂದಯಮುಂಟೆ ॥ ೮೭ ॥

ವೃ॥ ಅನಿಶಂ ಪಾಪಿ ಪರೋಪತಾಪಿ ನಿರುತಂ ಹಿಂಸಾರತಂ ತಾನೆನಿ- ।
ಪ್ಪ ನಿಕೃಷ್ಟಂಗವಶೇಷಜೀವದಯೆಯುಂ ಶಾಂತಚಿತ್ತಮುಂ ನಿಶ್ಚಯಂ[7]।
ಮನದೊಳ್ಪುಟ್ಟುಗುಮೊರ್ಮ್ಮೆ ಕಂಡನಿತಱಿಂದೆಂದಂದೆ ಸದ್ಭಾವದಿಂ ।
ಜಿನನಂ ಭಾವಿಸುವಂಗದಾವಗಹನಂ ಮುಕ್ತ್ಯಂಗನಾ-
ಸಂಗಮಂ ॥ ೮೮ ॥

೧. ಇ—ಡಾ; ೨. ಇ—ನಂ; ೩. ಇ—ವೆ; ೪. ಇ—ಳವರ್ಮರ್ಗಳ; ೫. ಇ—ಸ; ೬. ಇ—ನ್ಮೆ; ೭. ಇ—ತಾ; ೮. ಆ—ಯ;

ಕಂ॥ ಫಣಿಯುವಿಷಂ[1] ವಿಷಹರಣದ ।
ಮಣಿಯಿಂದಂ ಕಿಡುವತೆಱದೆ ದುರಿ[2]ತವಿಷಂ[2]ತತ್ ॥
ಕ್ಷಣದೊಳೆ ಕೆ[3]ಡುಗುಂ ಭುವನ- ।
ಪ್ರಣುತ ಜಿನೇಂದ್ರಾನನೇಂದುವಂ ನೋಡಲೊಡಂ ॥ ೮೯ ॥

ವೃ॥ ನಯನಾನಂದನ ಸಾಂದ್ರಚಂದ್ರಕರಮುಂ-
ಕರ್ಪ್ಪೂರಮುಂ ಕೂರ್ಪ್ಪಕಾಂ- ।
ತೆಯ ಕಾಂತಾನನಚಂದ್ರನುಂ ಕಮಳಷಂ[4]ಡಂ[5]
ಶ್ರೀಯುಮುಂ[6] ಧ್ಯಾನಮಾ- ।
ಳ್ಕೆಯಚೆಲ್ವಂ[7]ಬೆಳಗೆಯ್ಯುಮೆಂಬಿವಿನಿತುಂ ಭವ್ಯಂಗೆ ನಿರ್ವ್ಯಾಕುಳಂ ।
ನಯನಾನಂದಕರಂ ಜಿನೇಂದ್ರಮುಖಚಂದ್ರಾಲೋಕನ-
ಶ್ರೀಪದಂ ॥ ೯೦ ॥

ಜನನೀಗರ್ಬ್ಭಾಂಧಕೂಪಾಂತರದಿನೊಗೆದೆನಾ-
ನೀಗಳಿಂದೀಗ ಮಲ್ಲೋ- ।
ಚನನೀಳೇಂದೀವರಂ ತಾಳ್ದಿದು[8]ದು ವಿಕಸನ ಶ್ರೀಯನಾತ್ಯಂತಿಕಂ ಮ-
ಜ್ಜನನಂ ಸಾಫಲ್ಯಮೀಗಳ್ ಜಿನಮುಖಕಮಳಾಳೋಕನಂ-
ಬೆತ್ತೆನಾನೆಂ- ।
ದೆನುತಂ ತಾನಾಗಳುಂ ರಾಗದೆ ನಲಿವ ನರಂ-
ಲೋಕವಂದ್ಯಂ ಕೃತಾರ್ತ್ಥಂ ॥ ೯೧ ॥

ಕಂ॥ ದೇವಸ್ತುತ್ಯನ ನರುಹ- ।
ದ್ದೇವನನರ್ಚ್ಚಿಸುತಮಿರ್ಪ್ಪ ಭವ್ಯನವಶ್ಯಂ ॥
ಭಾವಿಪ್[9]ಡೆ ಮರ್ತ್ತ್ಯನಲ್ಲಂ ।
ದೇವಸ್ತುತ್ಯನೆದ[10]ಂಲಲ್ಲಿ ಸಂದಯಮುಂಟೇ ॥ ೯೨ ॥

ವೃ॥ ಮನಮೊಲ್ದರ್ಚ್ಚಿಸಿದಾತನುಂ ಪಿರಿದೆನಿಪ್ಪಾನಂದದಿಂದಂ ಜಿನಾ- ।
ರ್ಚ್ಚನಮಂ ನೋಡಿದನುಂ ನಿರೀಕ್ಷಿಸಿ ಪವಿತ್ರಸ್ತೋತ್ರದಿಂ ಕೀರ್ತ್ತಿಸು-।

---

೧. ಇ—ಷಾ; ೨. ಇ—೨ತದವಿಷ೨; ೩. ಇ—ಕಿ; ೪. ಅ—ಷ; ೫. ಇ—ಡ;
೬. ಅ, ಇ—ಮು; ೭. ಇ—ಲ್ವಂ; ೮. ಇ—ದಿ; ೯. ಇ—ಪೊ; ೧೦. [ನ];

ತ್ತೆ[1] ನಮಸ್ಕಾರಮಂ ನೊಲ್ದು ಮಾಡಿದವನುಂ-
ಪೂಜಾನುಮೋದಾಂತರಂ- ।
ಗನುಮತ್ಯಂತ ಸುಖಂಗಳಂ ಪಡೆಗು[2]ಮಾ ದೇವೇಂದ್ರ-
ಲೋಕಂಗಳೊಳ್ ॥ ೯೩ ॥

ಕಂ॥ ಮಾಡಿದೊಡಂ ಮೆಚ್ಚಿದೊಡಂ ।
ಮಾಡಿಸಿದೊಡಮಮಿತಸೌಖ್ಯಮೆನೆ ಕೆಮ್ಮನೆ ಕೆ- ॥
ಟ್ಟೋ[3]ಡದೆ ಜಿನಪೂಜೆಗಳಂ ।
ಮಾಡದೊಡಂ ನೋಡಿ ಪಡಯಿಮುತ್ತಮಸುಖಮಂ ॥ ೯೪ ॥

ಪರಮಾತ್ಮಂ ಲೋಕತ್ರಯ ।
ಗುರುಭಕ್ತ[4]ಜನಾನುರಕ್ತನಕ್ಷರ[5]ನಾದ್ಯಂ ॥
ಪುರುಷೋತ್ತಮನೆಂಬುದು ದೇ- ।
ವರದೇವನ[6]ನಸಮ[7]ಸೌಖ್ಯಮಂ ಬಯಸುವವಂ ॥ ೯೫ ॥

ವಿಹ್ವಳಸಂಸಾರಗುಹಾ- ।
ಗಹ್ವರಮಂ ಪೊಱಮಡಲ್ಕೆ ಬಗೆಯುಳ್ಳಾತಂ ॥
ಪ್ರಹ್ವ[8]ಪರನಾ[7]ಗಿ ನಿಲಿ[8]ಪುದು ।
ಜಿಹ್ವಾಗ್ರದೊಳರುಹನೆಂಬ ಮೂಱಕ್ಕರಮಂ ॥ ೯೬ ॥

ಯಮ ನಿಯಮ ಸ್ವಾಧ್ಯಾಯ ।
ಕ್ರಮದೆ ತಪಂ ಗೆಯ್ಯದೊಡಮಘಾರಾತಿಯನ ॥
ಶ್ರಮದಿಂ ಗೆಲಲಿವೆ ಸಾಲ್ಗುಂ- ।
ಣಮೋ[9]ರಹಂತಾಣಮೆನಿಸಿದಕ್ಕರಮೇಳುಂ ॥ ೯೭ ॥

ವೃ॥ ಒಂದಿದ ಭಕ್ತಿಯಿಲ್ಲದೊಡಮೇಂ ನಿರುತಂ ಶರಣಂ
ಜಿನೇಂದ್ರ ನೀ- ।
ನೆಂದಡೆ ಸೌಖ್ಯಮಕ್ಕುಮೆನೆ ಭಕ್ತಿಯಿನುಚ್ಚರಿಸುತ್ತ-
ಮಿದ್ರೋಡೇ- ।

೧. ಇ—ತ್ತಿ; ೨. ಅ—ಗುಂ; ೩. ಇ—ಟ್ವಾ; ೪. ಇ—ಕ್ತಿ; ೫. ಇ—ಯು;
೬. ಇ—೬ನಮರ೬; ೭. ಇ—೭ಪ—ನಾ೭; ೮. ಇ—ಪ್ಪು; ೯. ಇ—ಣುಂ;

ಸೆಂದಪುದಾತನುನ್ನತಿಯನಾಗುರು ಪಂಚಕವಜ್ರಪಾತಮಾ- ।
ದಂದೆ ಕಳಲ್ವು ನುಚ್ಚುನುಱಿಯಾಗದೆ-
ನಿಲ್ಕುಮೆ ಪಾಪಪರ್ವ್ವತಂ ॥ ೯೮ ॥

ಕಂ॥ ಜಿನಪಾದಾಂಭೋರುಹಮುಂ[೧] ।
ನೆನೆವವನುಂ ಜಿನಪದಾಬ್ಜಮಂ ಪೂಜಿಪನುಂ ॥
ಜಿನನಂ ಸ್ತು[೨]ತಿಯಿಸು[೨]ವವನುಂ ।
ಮನುಷ್ಯನಾಗಿದ್ದೊ[೩]ಡೇನೊ ಮುಕ್ತನೆ[೪]ಬಗೆಯಲ್[೪] ॥ ೯೯ ॥

ಅತಿದುರ್ಲ್ಲಭಮಪ್ಪ ಮನು- ।
ಷ್ಯತೆಯುಂ ಪಡೆದಲ್ಲಿ[೫] ಜಿನನನಾರಾಧಿಸಿ ತಾ- ॥
ನತಿಶಯ ಸುಖಮಂ ಪಡೆವಂ ।
ಮತಿವಂತಂ ಸ್ವಾರ್ತ್ಥವಿಕಳನವನೊಲ್ಲದವಂ ॥ ೧೦೦ ॥

ದುರಿ[೬]ತಾರಿಯು[೬]ನೋಲಗಿಸದ ।
ನರ[೭]ನೀ ಸಂಸಾರ ಘೋರ ಮಕರಾಕರದೊ- ॥
ಳ್ತಿರಿತಂದು ಮುಳುಗುತಿಕ್ಕುಂ ।
ಪರಮಾಪ್ತ[೮]ದ್ರೋಹನಾತ್[೯]ನಾತ್ಮದ್ರೋಹಂ ॥ ೧೦೧ ॥

ಕುರುಡಂ ಕಣ್ಣಂ ಪಡೆದೊಡೆ ।
ತಿರಿಕಂ ನಿಧಿವಡೆದೊಡೆಂತು ನಲಿದಾಡುಗುಮಂ- ॥
ತಿರೆ ಜಿನಪದಾಬ್ಜಸೇವನೆ ।
ದೊರೆಕೊಳೆ ಸಂಸಾರಿನಲಿವುದೊಲುವಡೆ ಸುಖವಂ ॥ ೧೦೨ ॥

ವೃ॥ ಕುಲಮುಂ ರೂಪಮನೂನಮಪ್ಪಸಿರಿಯುಂ-
ಸೌಭಾಗ್ಯಮುಂ ತೇಜಮುಂ ।
ಬಲಮುಂ ಖ್ಯಾತಿಯುಮೊಪ್ಪುವೊಳ್ನುಡಿಗಳುಂ-
ಸೌಂ[೧೦]ದರ್ಯ್ಯಮುಂ ಯೋಗ್ಯತಾ ।
ಬಲಮುಂ ಮಿಕ್ಕ ವಿಭುತ್ವಮುಂ ಜಿನಪ[೧೧]ದಾಂಭೋಜಾತ-
ಸಂಸೇವೆಯಿಂ ।

೧. ಅ—ವ; ೨. ಅ—೨ತಿ—ಸು೨; ೩. ಇ—ನು; ೪. ಇ—ಲು; ೫. ಇ—ವ; ೬. ಇ—೬ತಾರಾತಿಯು೬; ೭. ಅ—ರಂ; ೮. ಇ—ತ್ಮ; ೯. ಇ—ತ್ಮ; ೧೦. ಅ—ಸವು^; ೧೧. ಅ—ಪಾ;

ಫಲಮಂತಲ್ಲದೊಡಿಂತಿವೆಲ್ಲಮಫಲಂ ವಿಶ್ವಂಭರಾ-
ಚಕ್ರದೊಳ್ ॥ ೧೦೩ ॥

ಕಂ॥ ಮನವಾರೆ ನೆನೆದು ಕಣ್ತ- ।
ಣ್ಣನೆ ತಣಿವಿನವೊಲ್ದುನೋಡಿ ನಾಲಗೆ ಜಿನನೊಂ- ॥
ದನುಪಮ ಗುಣ[1]ವನೆ[1]ಬಣ್ಣಿಪು- ।
ದನೆ ಪೆತ್ತಂ ಸಕಳಜಗಮನಾಳಲ್ಪೆತ್ತಂ ॥ ೧೦೪ ॥

ವೃ॥ ಜರೆ ನಿಜಶಕ್ತಿಯಿಂ ಪಿಳಿದು ಪಿಂ[2]ಡಿಸದನ್ನೆಗಮಾತ್ಮ-
ದೇಹದೊ- ।
ಳ್ಜರೆತೆ[3]ನೋಱದನ್ನೆಗಮನಾಕುಳಮಿಂದ್ರಿಯ-
ದೇಳ್ಗೆಯು[4]ಳ್ಳಿನಂ ।
ಮರಣದ ದಂದುಗಂ ತೊಡರದನ್ನೆಗಮುಚ್ಚಿರ್ಪು-
ದತ್ಯಿರ್ಯಿಯಿಂ ಜಿನೇ- ।
ಶ್ವರನನಹರ್ನಿಶಂ ನೆನೆವುದಿಂದ್ರನರೇಂದ್ರ-
ಫಣೀಂದ್ರ ವಂದ್ಯನಂ ॥ ೧೦೫ ॥

ಕಂ॥ ಇಂತೀ ನಿಱವಿಂ ಪಡೆ[4]ವುದ- ।
ನಂತ ಸುಖಾಸ್ಪದಮನೆಂದು ಜಿನಬಿಂಬಂ ಪೇ- ॥
ಳ್ವಂತಿದ್ರ್ದುದು ಜಾನಿಸುವುದು ।
[5]ಸಂತಂ[5] ಮದನಂತ ಸೌಖ್ಯಮಂ ಬಯಸುವವಂ ॥ ೧೦೬ ॥

ಮನದೊಳ್ಭಾವಿಸುತುಂ ಬರೆ ।
ದನಿತ್ತಱಿಂ ಚಿತ್ರಿಕಂಗಮುತ್ತಮಸೌಖ್ಯಂ ॥
ಜನಿಯಿಕುಮೆನೆ ತತ್ವಜ್ಞಂ ।
ಜಿನೇಂದ್ರನಂ ಭಾವಿಪಂದು ಗಹನಮೆ ಮೋಕ್ಷಂ ॥ ೧೦೭ ॥

ವೃ॥ ಕೊಲ್ಲದಿರೆಂಬುದೆಲ್ಲಿ ಪುಸಿಯಂ ಬಿಸುಡಿಂಗಡ-
ಮೆಂಬುದೆಲ್ಲಿ ನೀ- ।
ನೊಲ್ಲದಿರೆಂತುವನ್ಯವನಿತಾರತಿಸಂಗಮಮೆಂಬುದಲ್ಲಿ ಚೀಃ ।

---

೧. ಅ—೧ಣವಂದನೆ೧; ೨. ಇ—ಹಿಂ; ೩. ಇ—ವು; ೪. ಇ—ಡೆ; ೫. ಅ—೫ಸೆಂತತಂ೫; ಇ—೫ಸಂತ೫; ೬. ಇ—ದಾ.

ಪೊಲ್ಲದು ಕಾಂಕ್ಷೆಗಳ್ಕಳವು ಜೇನಡಗಂ ಬಿಸುಡೆಂಬುದೆಲ್ಲಿ ತಾ।
ನೆಂಗಿಲ್ಲಿದನೆಂದು ನಂಬು ಪರಮಾತ್ಮನುಮಾಗಮಮುಂ-
ಪರತ್ರೆಯುಂ ॥ ೧೦೮ ॥

ಕಂ॥ ಮನದೊಳ್ತನ್ನಂ ಭಾವಿಸಿ।
ದನಿತಱೊಳಪವರ್ಗ ಮಾರ್ಗಮಂ ತೋಱುವವೋ- ॥
ಲ್ಜನವಂದ್ಯರಾಗೆ ಮಾಡುವ।
ಜಿನರಿಂದಾರುಂ ಪರೋಪಕಾರಿಗಳೊಳರೇ ॥ ೧೦೯ ॥

ಮತಿಹೀನಂಗಂ ವಿಳಸ-।
ನ್ಮತಿಯಕ್ಕುಂ ಸಿಷ್ಟಸಂಗದಿಂದದೊಡೆ ಸ- ॥
ನ್ಮತಿಯೊಳ್ಕೇವಳ ವಿದ್ಯಾ-।
ಪತಿನೆಲಸಿರೆ ಸುಮತಿಯುಪ್ಪುದೊಂದಚ್ಚರಿಯೆ ॥ ೧೧೦ ॥

ಚಿಂತಿಪುದು ಜಿನೇಶ್ವರನಂ।
ಸಂತತಮುತ್ಪವದೆಯಾಮತಿಸ್ಸಾಗತಿಯೆಂ- ॥
ಬಂತೆನಗಾಗದಿರದು ಮ-।
ತ್ಯಂತಸುಖಂ ಸಿದ್ಧವಚನವೇಂ ತಪ್ಪುಗುಮೇ ॥ ೧೧೧ ॥

ಅತಿ ವಿಷಮುಮಪ್ಪಖಳಸಂ-।
ಸೃತಿ ಸುಖಮನೆ ನೆನೆಯುತಿರ್ಪನೆಂತಂತಿರೆ ಭಾ- ॥
ವಿಪನಾಗಿ ಸಂತತಂ ಜಿನ।
ಪತಿಯಂ ನೆನೆನೆನೆವವಂಗೆ ತೀರದುದುಂಟೇ ॥ ೧೧೨ ॥

ವೃ॥ ಅರಿದು ಗೆಲಲ್ಕೆ ಕಿಲ್ಬಿಷರುಜಾಳಿಯನೌಷಧಸಾಧ್ಯಮಲ್ಲದಂ।
ನರರಳಿವೆಜ್ಜರೇನಱಿವರೇ ಕಿಡಿಸಲ್ಜಿನರಾಜಪಾದಸ-।
ಸ್ಮರಣಮಹೌಷಧಂ ಕಿಡಿಸುಗುಂ ಸಲೆ ಭವ್ಯನೆ ದೇವದೇವನಂ।
ಸ್ಮರಿಸುವುದೇಕಚಿತ್ತದಿನಹೀಂದ್ರ ನರೇಂದ್ರ-
ಸುರೇಂದ್ರವಂದ್ಯನಂ ॥ ೧೧೩ ॥

ಕಂ॥ ಪರಿವಳಿ ತೊರೆಗಳ ನೀರ್ಗಳ।
ನಲಸದೆ ಮಿಂದಂ ಪುನೀತನಲ್ಲಂದಲು ನಿ- ॥
ರ್ಮಳಜೈನೇಂದ್ರಾಭಿಷವಣ-।
ಜಳದಿಂದೆಪವಿತ್ರಗಾತ್ರನಕ್ಕುಂ ಮನುಜಂ ॥ ೧೧೪ ॥

---

೧. ಇ—ನ; ೨. ಅ—ಮೊ; ೩. ಅ, ಇ—ಶೃ; ೪. ಇ—ಸಂ; ೫. ಇ—ಸರಿಯಿಪುಣ;

ಜ್ಯೋತ್ಸ್ನೆಯೊಳ್ ತಿಮಿರ ಪಟಳಂ ।
ಕೃತ್ಸ್ನಂ ಕಿಡುವಂತೆ ದೋಷವರ್ಜ್ಜಿತಪರಮಾ- ॥
ರ್ಹತ್ಸ್ನಪನಸಲಿಲದಿವಿಜಸ- ।
ರಿತ್ಸ್ನಾನದೆ ದುರಿತತಿಮಿರ ಪಟಳಂ ಕಿಡುಗುಂ ॥ ೧೧೫ ॥

ಶಾಂತಿಗೆ ಪುಣ್ಯಾಹೃದ ನೀ- ।
ರಂ ತಳಿದಡೆ ಶುದ್ಧಿಯಾಗಲಱಿಗುಮೆ ಗೇಹಂ ॥
ಭ್ರಾಂತೇಂ ಜಿನಗಂಧೋದಕ- ।
ಮಂತಳಿವುದು ಮನೆಗಳೊಳಗೆ ಮಾಂಗಲ್ಯಕರಂ ॥ ೧೧೬ ॥

ಕಳಶಂ ಕನ್ನಡಿ ತೋರಣ- ।
ಮೆಳದಳಿಸುವ ಕಱುಕೆ ಸೇಸೆ ಬಾಸಿಗಮಿವು ಮಂ- ॥
ಗಳಮೆ ಜಿನಪಾದಪದ್ಮಂ- ।
ಗಳನರ್ಚ್ಚಿಸಿದಾಸುಪುಷ್ಪ[೧]ಮೆನೆ[೧]ಮಾಂಗಲ್ಯಂ ॥ ೧೧೭ ॥

ಪಸುರ್ವಂದರಳಂಕಾರಂ ।
ಪಸೆಪಱಿಯೆ ಬಿವಜಿನಾದಪರಿಣಯನಮದೇ ॥
ನೆಸೆಗುಮೆ ಜಿನರಾಜಾರ್ಚ್ಚನ ।
ಮೊಸಗೆಯು ಮೇಲೊಸಗೆಯಲ್ತೆ ಭವ್ಯಂಗೆಂದುಂ ॥ ೧೧೮ ॥

ವೃ॥ ಅತಿಗಂಭೀರಂ ಭವಾಂಭೋನಿಧಿಕಳಿಯಲಣಂ-
ಬಾರದೆನ್ನಂಗವೀಸಂ- ।
ಸೃತಿಯೊಳ್ಮತ್ತಾರವಾಜಿತ್ರ್ಗೆಯಲದ್ದಾರ್ತನಂ ದುಃಖನಕ್ರಾ- ।
ಹತನಂ ಕರ್ಮೋಗ್ರವಾತಾಚಳಿತನನಭವಂ-
ಸರ್ವಗೀರ್ವಾಣರಾಜಾ- ।
ರ್ಚ್ಚಿತಪಾದಾಂಭೋಜಯುಗ್ಮಂ ಬಗೆವಡೆ-
ಜಗದೊಳ್ತಾನೆಹಸ್ತಾವಳಂಬಂ ॥ ೧೧೯ ॥

ದೇವನತಲೆಗೇಱಿದ ಪು- ।
ಷ್ಪಾವಳಿಯುಂ ಮುಟ್ಟಿ ಮೀವರುಳಿದೆಡೆಗಳೊಳಿ- ॥
ನ್ನೇವೊಗಳ್ವುದೊ ನೆಗಳ್ದರ್ಹ ।
ದ್ದೇವನನರ್ಚ್ಚಿಸಿದ ಕುಸುಮಮಖಿಳ ಪವಿತ್ರಂ ॥ ೧೨೦ ॥

---

೧. ಇ—ಮದೆ; ೨. ಇ—ಮೀ;

ವೃ॥ ಜಿನಪಾದಾಂಭೋಜಮಂ ಪೂಜಿಸಿದ ವಿವಿಧ-
ಮಪ್ಪರ್ಚ್ಚನಾನೀಕಮಂ ದೇ- ।
ವನಿಕಾಯಂ ಪ್ರೀತಿಯಿಂದಂ ತಲೆಯೊಳೆಸೆಪಿನಂ-
ತಾಳುವನಿರ್ಚ್ಚಲುಂ ಮ- ।
ತ್ತಿನದೈವಂಗಳ್ಗೆ ಕೊಟ್ಟರ್ಚ್ಚನೆಯನೆ ಖಳರುಂ-
ದುಷ್ಟರುಂ ಕಷ್ಟರುಂ ದು- ।
ರ್ಜ್ಜನರುಂ ಸೇವಿಪ್ಪರೆಂದಂದರುಹನೆ ಪಿರಿಯಂ-
ದೇವರೊಳ್ತಾಂ ಮಹಂತಂ ॥ ೧೨೧ ॥

ಅತಿರೌದ್ರಾರ್ತ್ಥಾವಹಂಗಳ್ಸ್ವವಚನ-
ವಿರಸೋತ್ಪಾದಿಗಳ್ದೇವದೂಷ್ಯ ।
ಸ್ಥಿತಿಗಳ್ತಾವನ್ಯದೇವ ಸ್ತುತಿಗಳಖಿಳ-
ಪುಣ್ಯೇತರಂಗಳ್ ಜಿನೇಂದ್ರ ।
ಸ್ತುತಿಗಳ್ಕರ್ಣಾಮೃತಸ್ಪ[೧]ಂದಿಗಳಖಿಳ-
ಭವಾನಂದಿಗಳ್ಲೋಕಮಾಂಗ- ।
ಲ್ಯತರಂಗಳ್ಪಾವನಂಗಳ್ ಸಕಳನತಜನ-
ಪ್ರಾರ್ತ್ಥಿತಾರ್ತ್ಥಪ್ರದಂಗಳ್ ॥ ೧೨೨ ॥

ಕಂ॥ ದೇವರದೇವನನರುಹ- ।
ದ್ದೇವನ ನೋಲಗಿಸೆ ಮುಕ್ತಿಯಕ್ಕುಂ ಪೆಱರಂ ॥
ಸೇವಿಸಿದಡಾಗದೆಂತೆನೆ ।
ಭಾವಿಸಲೇನುಂಟೆ ಮೊರಡಿಯೊಳ್ಮಾದು ಫಲಂ ॥ ೧೨೩ ॥

ಆರ್ತ್ತದೊಳ್ತೊಡರ್ದು ಪಲವುಂ ।
ಮೂರ್ತ್ತಿಗಳಂ ತಾಳ್ದಿನಮೆವ ಕಾಪುರುಷತಾರ್ತ್ತ[೨] ॥
ವಾರ್ತ್ತಪರೆ ಶಾಂತರೂಪಿಂ ।
ವರ್ತ್ತಿಸಿ ಜಿನರಾಜನಂತು ಮುಕ್ತಿಯ[೩]ನೀಯಲ್[೩] ॥ ೧೨೪ ॥

ಆವಾವತೆಱದೊಳೆಂತುಂ ।
ಭಾವಿಪ್ಪೊಡನೇಕರೂಪನಾಗಿರ್ಪ್ಪವರಂ ॥

೧. ಇ—ಸ್ಯಂ; ೨. ಆ—ರ್ತ್ಥ; ೩. ಇ—೩ನೆಯ್ದಲೂ೩;

ದೇವರ[1]ವರೆಂದು ನಂಬದೆ ।
ಮೂವಣ್ಣಂ ಬಂದದೇವರಂ ನಂಬುವುದೇ ॥ ೧೨೫ ॥

ಮತಿಗೆಟ್ಟು ಸಂತತಂ ಸಂ- ।
ಶೃತಿಯೊಳ್ ಪೆವವರ ನಾದವೋಲಗಿಸೆ ಚತು- ॥
ರ್ಗ್ಗತಿಯೊಳು ಬೀಳದೆ ಪಂಚಮ ।
ಗತಿಯೊಳ್ನೆಲಸುವಡೆ ಸೇವಿಪುದು ಜಿನಪತಿಯಂ ॥ ೧೨೬ ॥

ಜಂಗುಳಿದೇವರನೊಂದಱು ।
ದಿಂಗಳ್ನುಳ್ಳಿರ್ದ್ದು ಪೂಜಿಸುತ್ತಿರದೆ ಗುಣೋ- ॥
ತ್ತುಂಗನೆನೆ ನೆಗಳ್ದಜಿನನ ಪ- ।
ದಂಗಳನರ್ಚ್ಚಿಪುದು ಸೌಖ್ಯಮಂ ಬಯಸುವವಂ ॥ ೧೨೭ ॥

ಸಾಲದೆ ಮುಕ್ತ್ಯಂಗನೆಯುಂ ।
ಸೋಲಿಸುವಡೆ ಜಿನಪದಾಬ್ಜಸೇವನೆಮತ್ತಂ ॥
ಪಾಲುಂಡುಂ ಮೇಲುಂಬುದೆ ।
ಲೋಲುಪರೆನಿಸಿರ್ದ್ದದೇವರಂ ಸೇವಿಪುದೇ ॥ ೧೨೮ ॥

ಪೊನ್ನೆಂಬ ಪೆಸರೊಳಾ ಕ- ।
ಬ್ಬೊ[2]ನ್ನುಂ ಕಿಸುವೊನ್ನುಮೆಯ್ದಲಾರ್ಕ್ಕುಮೆ ಪೇಳ್ವೆಂ ॥
ಬೊನ್ನಂದಮಂ ವಿಚಾರಿಪೊ- ।
ಡನ್ನವೆ ಜಿನನಾಥನೊಡನೆ ಮತ್ತಿನದೆಯ್ವಂ ॥ ೧೨೯ ॥

ವೃ॥ ಒಡೆಯನೆ ತಾಂ ಜಗತ್ರಯಕೆ ನಿಶ್ಚಯಮೆಂಬುದು-
ಮೀಜಗಕ್ಕೆ ಕ- ।
ನ್ನಡಿಸುವವೋಲ್ಫಣೀಂದ್ರ ದನುಜೇಂದ್ರ ಸುರೇಂದ್ರರ-
ನೂನ ಭಕ್ತಿನೇ- ।
ರ್ಪ್ಪಡೆ ಪಿಡಿಯಲ್ಕೆ ಪೂರ್ನ್ನಸಸಿಯುಂ ನಗುವಂದದಿ-
ನೊಪ್ಪಿ ತೋರ್ಪ್ಪ ಮು- ।
ಕ್ಕೊಡೆಯೊಡೆಯಂಗೆ ಮಾಡುವುದುಮೊಮ್ಮೆಯೆ- ।
ನೀಗುಮನಂತಸೌಖ್ಯಮಂ ॥ ೧೩೦ ॥

೧. ಇ—ರಿ; ೨. ಇ—ರ್ವ್ವೊ;

ಕಂ॥ ಪರಮಜಿನಭಕ್ತಿ ದೊರಕೊಳೆ।
ಪರಸಮಯಂಗಳಿಗೆ ಮತ್ತಮೆಱಗುತ್ತಿರ್ಪ್ಪಂ॥
ಪಿರಿದುಂ ನಿಧಿಕೋಳ್[1]ತ್ತುಂ।
ಜರಗಂ ಕಚ್ಚರ್ಕ್ಕೆತ್ತಮಿರ್ಪ್ಪ ಮರುಳಂ ಪೋಲ್ಕುಂ ॥ ೧೩೧ ॥

ಜಿನನಾಮೋಚ್ಚಾರಣಮುಂ।
ಜಿನಚರಣಸ್ಮರಣಮುಂ ಜಿನಾಗಮತತಿಯುಂ॥
ಮನುಜಂಗೆ ಕೂಡದೆಂತುಂ।
ಘನತರದುಃಕರ್ಮ್ಮಬಂಧಮುಳ್ಳನ್ನೆವರಂ ॥ ೧೩೨ ॥

ನರಕಮನೆ ಬಯಸನೆಂತುಂ।
ನರಕಕ್ಷಯ ಮೋಕ್ಷಲಕ್ಷ್ಮಿಯೊಳ್ಕೂಡುವುದಂ॥
ಪಿರಿದಂ ಬಯಸುಗುಮದು ತಾಂ।
ದೊರೆಕೊಳ್ಗುಂ ವೀತರಾಗಪದಸೇವನೆಯಿಂ ॥ ೧೩೩ ॥

ಜಿನಮಾರ್ಗ್ಗದೆ ನಡೆದು ಜಗ-।
ಜ್ಜನಸಂಸ್ತುತನಾಗಿ ಮುಕ್ತಿಯೊಳ್ಕೂಡುವುದಂ॥
ಮನುಜಂ ತಾನೊಲ್ಲನೆ ಕ-।
ರ್ಮ್ಮನಿಕಾಯಂ ಪೊರ್ದ್ದಲೀಯದವನನದೆಂತುಂ ॥ ೧೩೪ ॥

ವೃ॥ ಎನಿತು ವಿವೇಕಿಯಕ್ಕೆಮ ಬಹುಶ್ರುತನಕ್ಕೆಮ-
ಶಬ್ದಶಾಸ್ತ್ರಮುಂ-।
ಳ್ಳನಿತಱೊಳಂಕರಂ ಕುಶಲನಕ್ಕೆಮವಿದ್ಯೆ-
ಯೊಳಾದಕರ್ಮ್ಮ ಬಂ-।
ಧನ ಶಿಥಿಲತ್ವಮಿಲ್ಲದೊಡೆ ಪುಟ್ಟುವುದಲ್ತು ಜಿನೇಂದ್ರತತ್ವವಾ-।
ಸನೆ ಭವವಾ[2]ರಣಂ ಮದವಿದಾರಣಮಕ್ಷಯ-
ಸೌಖ್ಯಕಾರಣಂ ॥ ೧೩೫ ॥

ಕಂ॥ ಇಂತಪ್ಪನಾಪ್ತನೆಂಬುದ।
ನೆಂತುಂ ದುಷ್ಕೃತಿಗೆ ತೋಱದಾತನ ಮನಮುಂ॥

---

೧. ಇ—ಳ್ಳಿ; ೨. ಇ—ಹಾ;

ಭ್ರಾಂತೀಂ ಪುದಿಯುತ್ತಿ ಕರ್ಮ್ಮಾಮ- ।
ನಂತಭವಂ ಮಱಿಸಿ ದರ್ಶನಾವರಣೀಯುಂ ॥ ೧೩೬ ॥

ಪುರುಷಂಗೆ ಪಲವು ಭವದೊ- ।
ಳ್ನೆರಪಿದ ದುಷ್ಕರ್ಮ್ಮಮೆಯ್ದೆ ತವುವನ್ನೆವರಂ ॥
ಪರಮ ಜಿನೇಂದ್ರ ಪದಾಬ್ಜ- ।
ಸ್ಮರಣಮದೇಗೆಯ್ವುವೊಂದಲಱಿಯದು ಮನದೊಳ್ ॥ ೧೩೭ ॥

ಅಂತಿಲ್ಲದ ಸಂಶ್ರುತಿಯೊಳ- ।
ನಂತಭವಂ ಪುಟ್ಟಿ ನವೆದು ಬೆದೆವೆಂದ ಬೆಂದೆಂ- ॥
ದೆಂತಾನುಂ ಸಾಗ್ರ್ಗಂ ಕ- ।
ಮ್ರ್ಮಾಂತಕನಂ ಸೌಖ್ಯಭಾಗಿಗಿನಿಸಿದ ಜೀವಂ । ೧೩೮ ॥

ಅಱಿಯಮೆಯಿಂದಂ ಪೋದವು ।
ಪೆಱಗಣ ಜನ್ಮಂಗಳೆಂದು ಬಗೆದಾಪೊತ್ತುಂ ॥
ಮಱುಗಲ್ವೇಡ ಜಿನೇಂದ್ರಂ- ।
ಗೆಱಗಲೊಡಂ ಪೋದಜನ್ಮಮನಿತುಂ ಸಫಲಂ ॥ ೧೩೯ ॥

ಬರಿಸದ ಜೀವಿತವೊರ್ಮ್ಮೆಯೆ ।
ದೊರೆಕೊಳೆ ಬಡವಂಗೆ ಸವೆದ ಪೆಱಗಣ ದುಃಖಂ ॥
ಪರೆವಂತಿರೆ ಸಂಸಾರಿಗೆ ।
ಪರೆಗುಮಳಂ ಜಿನಪದಾಬ್ಜಮುಂ ಸಾರಲೊಡಂ ॥ ೧೪೦ ॥

ವೃ॥ ಇಱಿದುಂಕಳ್ದು[1]ಮಸತ್ಯಮುಂ ನುಡಿದು-
ವನ್ಯಸ್ತ್ರೀಯುರಂ ಸಾರ್ದ್ದುಮೇ- ।
ತೆಱದಿಂದಂ ಧನಧಾನ್ಯಮುಂ ನೆರಪಿದೀ ದುಃಕರ್ಮ್ಮಮುಂ ಪಿಂಗಿಸ- ।
ಲ್ಕಱಿಯೇಂ ಕೆಟ್ಟೆನೆನಲ್ಕೆವೇಡೆಲೆ ಜಿನೇಂದ್ರ ಶ್ರೀಪದಾಬ್ಜಂಗಳಂ ।
ಮಱೆಗೊಂಡಾಗಳೆ ಪಿಂಗಿ ಪೋಕುಮದಱಿಂ-
ದುಃಕರ್ಮ್ಮಮುಂ ನಿಶ್ಚಯುಂ ॥ ೧೪೧ ॥

ಶಾಪದಿ ನೊಂದವಂಗೆ ಬಹುದುಃಖದೊಳೊಂದಿದವಂಗೆ ಕಾಮಸಂ- ।
ತಾಪದೆ ಬೆಂದವಂಗೆ ಬಡವಂಗದವಂಗತಿ ದುಃಖಿತಂಗೆ ಧಾ- ।

೧. ಇ—ಬೆ; ೨. ಇ—ನಾ; ೩. ಇ—ಳ್;

ಶ್ರೀಪತಿ ಕೋಪದೊಳ್ತೊಡರ್ದವಂಗೆ ಶರಣ್ಪೆಱತಿಲ್ಲ ಜೈನಸ- |
ದ್ರೂಪವಿಶೇಷಸಂಸ್ಮರಣವೊಂದೆವಲಂ ಕರಣೀಯ-
ಮೆಲ್ಲಿಯುಂ || ೧೪೨ ||

ಶ್ರೀಮದ್ದೇವೇಂದ್ರ ವೃಂದಾರ್ಚಿತಪದಕಮಳಂ-
ಭವ್ಯಲೋಕೈಕಸೇವ್ಯಂ |
ಕಾಮಪ್ರಧ್ವಂಸಿ ವಿಧ್ವಂಸಿತದುರಿತ ಭಟಾಟೋಪ-
ನಾರ್ಹಂತ್ಯಲಕ್ಷ್ಮೀ- |
ರಾಮಾಕೇಳೀನಿವಾಸಂ ವಿಪುಳ ವಿಮಳ ಕೈವಲ್ಯ-
ಬೋಧಪ್ರಭಾವೋ- |
ದ್ದಾಮಂ ಲೋಕೈಕನಾಥಂ ಕುಡುಗೆ-
ನಿಜಸುಖಾವಾಪ್ತಿಯಂ ವೀರನಾಥಂ || ೧೪೩ ||

ಗದ್ಯ:— ಇದು ಭಗವದರ್ಹತ್ಪರಮೇಶ್ವರ ಚರಣಸ್ಮರಣ ಪರಿಣತಾಂತಃಕರಣ ವೀರಣಂದಿ ಮುನೀಂದ್ರ ಚರಣಸರಸೀರುಹಷಟ್ಚರಣ ಮಿಥ್ಯಾಸಮಯ ತಿಮಿರ ಚಂಡಕಿರಣ ಸಕಳಾಗಮೋತ್ಥನಿಪುಣ ಮಹಾಕವಿ ಬ್ರಹ್ಮದೇವ ವಿರಚಿತಮಪ್ಪ ಸಮಯಪರೀಕ್ಷೆಯೊಳಾಪ್ತಸ್ವರೂಪ ನಿರೂಪಣಂ ಪ್ರಥಮಾಧಿಕಾರಂ ||

ಶ್ರೀ ಶ್ರೀ ಶ್ರೀ

॥ ಶ್ರೀ ॥

ದ್ವಿತೀಯಾಧಿಕಾರಮ್

ಕಂ॥ ಶ್ರೀವೃಷಭೇಶ್ವರನನಘಂ ।
ಭಾವೋದ್ಭವಮಥನನಖಿಳ ದೋಷಾಪಹರಂ ॥
ಕೇವಳಬೋಧಂ ಸುರಪತಿ ।
ಸೇವಿತಪದನೀಗೆ ನಮಗೆ ಬೇಡಿದ ವರಮಂ ॥ ೧ ॥

ಮರುದೇವಿಗೆ ನಾಭಿನರೇ- ।
ಶ್ವರಂಗೆ ಮಗನಾದ ಮನುಜನಿಂ ಪುಟ್ಟಿದುದೀ ।
ಧರೆಗೆ ಜಿನಧರ್ಮ್ಮವೆನುತಿ- ।
ರ್ಪ್ಪರುಮ[೧]ಱಿಯದೆ ಜಗವನಾದಿಯಪ್ಪುದನ[೨]ಱಿಯರ್ ॥ ೨ ॥

ಅರಹಂತರ್ಜ್ಜಗದೊಳಗೋ- ।
ರ್ವ್ವರಲ್ಲ ಯುಗಕೋಟಿಗಳೊಳನಾದಿಯೊಳೆಂದುಂ ॥
ಪರಮಜಿನಕೋಟಿಕಾಲಾಂ- ।
ತರದೊಳ್ಸಲೆ ಪುಟ್ಟಿಮುಕ್ತಿಗೆಯ್ದುತ್ತಿರ್ಪ್ಪರ್ ॥ ೩ ॥

ಅವರಿವರುವರೆನ್ನದೆ ಜಗ- ।
ದವರೆಲ್ಲಂ ಕರ್ಮ್ಮವೊಂದು ಮಾತಿಂ ಮುನ್ನಂ ॥
ತವತವಗೆ ನುಡಿವರದಱಿಂ- ।
ದವೆನಂಬುಗೆ ಕರ್ಮ್ಮವಾದವಾರ್ಹತವಾದ್ಯಂ ॥ ೪ ॥

ತನಿಕಾಣಲ್ಪುಟ್ಟಿದವಂ ।
ಜಿನಭಕ್ತನೆಯಕ್ಕುಮೆಂಬರದಱಿಂದಾದ್ಯಂ ॥
ಜಿನಧರ್ಮ್ಮವೆಂಬನಂಬುಗೆ ।
ತನಿಬಗೆವೊಡನಾದಿಕಾಲಮಪ್ಪುದಱಿಂದಂ ॥ ೫ ॥

---

೧. ಇ—ನ; ೨. ಅ—ಮ;

ವೃ॥ ನಿರುಪಮಜಾತರೂಪವರಮುದ್ರೆಯೊ ಮುದ್ರೆಜಗಕ್ಕದಲ್ಲದೀ- ।
ಶ್ವರವರಮುದ್ರೆಯೋ ಕಮಳಸಂಭವಮುದ್ರೆಯೊ-
ವಿಷ್ಣುಮುದ್ರೆಯೋ ।
ಸರಸಿಜಮಿತ್ರಮುದ್ರೆಯೊ ಜಗತ್ರಯಮುಂ-
ಜಿನರಾಜಮುದ್ರೆಯೆಂ- ।
ಬರ ನುಡಿ ತಕ್ಕುದೀತೆಱದೆ ತೋರ್ಪ್ಪುದು-
ಯುಕ್ತಿಯೊಳೊಂದಿ ಬಲ್ಲವರ್ ॥ ೬ ॥

ಕಂ॥ ಜಿನನಾಥನಖಿಳಭುವನದ ।
ಜನಕೆಲ್ಲಂ ತಾನೆ ಜನಕನೆಂಬುದ [೧]ತಾನೆಂ[೧] ॥
ಜನವತ್ಸಳತ್ವಮಱಿಪದೆ ।
ಜನಶ್ಶೈಶವಕುಚಿತ ಫಳದವನರೂಪತೆಯಿಂ[೨] ॥ ೭ ॥

ವೃ॥ ಸರಸಿಜಸಂಭವಂ ಬಗೆದು ಭಾವಿಸಿ ಭಾವಿಸಿ ಚಿತ್ರಶಾಸ್ತ್ರಮಂ ।
ವಿರಚಿಸುವಂದು ತಾನೆ ಚತುರುತ್ತರಹಸ್ತಮತಾದಿವಿದ್ಧಮಂ ।
ಬರೆವುತ ವಾದಿವಿದ್ಧಮೆ ಜಿನೇಶ್ವರವಿದ್ಧಮಿದೆಂದು ಪೇಳ್ದುದಂ ।
ಪರಿಕಿಸದೇಕೆ ಮೂಢಜನ [೩]ಮೂಳ್ದ[೩]ರೊ-
ನೂತನಮೆಂದು ಜೈನಮಂ ॥ ೮ ॥

ಕಂ॥ ಪಲಕಾಲಂ ಭರತ ಧರಾ- ।
ತರೆಯಲ್ಲಂ ಭೋಗಭೂಮಿಯಾಗಿರೆ ಸುಖಸಂ- ॥
ಕುಳಮಂ ಸುರತರುಗಳ್ಕುಡೆ ।
ವಿಳಾಸದಿಂ ಭೋಗಭೂಮಿಜರ್ಸ್ಸುಖದಿನಿರಲ್ ॥ ೯ ॥

ಮನುವಂಶತಿಳಕನಾದಿಯ ।
ಜಿನೇಶ್ವರಂ ತಾನೆ ಭೋಗಭೂಮಿಯ ಕಡೆಯೊ- ॥
ಳ್ಮನುಜರ್ಜ್ಜೀವಿಪ ಮಾರ್ಗ್ಗಮ- ।
ನೆನಿತಾನುಂ ಮಾಡಲಾಯ್ತು ಕೃತಯುಗನಾಮಂ ॥ ೧೦ ॥

ಧರೆಯೊಳ್ವರ್ಣ್ಣಾಶ್ರಮಮುಮಂ ।
ನರೇಂದ್ರವಂಶದ ವಿಕಲ್ಪಮುಂ ಧಾರಿ[೪]ಣಿಯುಂ ॥

೧. ಇ—೧ನೆಂದುಂ೧; ೨. ಇ—ಯಂ; ೩. ಇ—೩ಮುಳ್ದ೩; ೪. ಅ, ಇ—ರು;

ಪರಗುವ ಬಿತ್ತುವ ಬಹುವಿಧ ।
ಪರಿಕರದಿಂದುಣ್ಪುಪಾಯಮಂ ವಿಭು ಪೇಳ್ದಂ ॥ ೧೧ ॥

ಕ್ಷಿತಿಪತಿವೃಷಭೇಶ್ವರನೂ- ।
ರ್ಜ್ಜಿತಯಶನಿಂಬಾಗಿ ಮಾಡಲಾದಿಯ ಜಿನನಾ ॥
ಕೃ[1]ತಯುಗಮಾದತ್ತಲ್ಲದೆ ।
ಕೃತಯುಗಮೆಂದಿಂತುದೆಸೆಗದೇಂ ಪೆಸರಾಯ್ತೋ ॥ ೧೨ ॥

ಮುನ್ನಂ ತ್ರಿಲೋಕಗುರುಸಿ- ।
ದ್ಧನ್ನಮಯೆಂದೆಱಗಿ ಬಳಿಕೆ ಸರ್ವ್ವಾಕ್ಷರಮಂ ॥
ತನ್ನಿಂದೀಜಗವಱಿಯೆಜ- ।
ಗನ್ನುತಸಾ[2]ದಿಜಿ[2]ನನೋಜೆಯಿಂ ವಿರಚಿಸಿದಂ ॥ ೧೩ ॥

ಅಕ್ಕರಮಂ ಬಲಗಯ್ಯೊಳು ।
ಲೆಕ್ಕಮನೆಡಗಯ್ಯೊಳಭವನನುಲೋಮವಿಲೋ- ॥
ಮಕ್ಕೆ ನೆಲೆಯಾಗಿ ಮಾಡಿ ಜ- ।
ಗಕ್ಕಱಿಪಿದನೋಜೆಯಿಂದ ಮಾ[3]ದಿಬ್ರಹ್ಮಂ ॥ ೧೪ ॥

ಒಂದಾವಿಯಾದ ಲೆಕ್ಕಮ- ।
ನಂದೆಡ[4]ಗಯ್ಯಿಂದೆ ಲಿಪಿಗಳಂ ಬಲಗಯ್ಯೋ- ।
ಳ್ಪಂದಾದಿಬ್ರಹ್ಮಂ ದಯೆ ।
ಯಿಂದಂ[5] ಜಗಕ[6]ಱಿಪಿ ಪರಮಗುರು ಧರೆಗೆಸೆದಂ ॥ ೧೫ ॥

ಅರುಹರಶರೀರರಾಚಾ- ।
ರ್ಯ್ಯರುಪಾಧ್ಯಾಯರ್ಮ್ಮು[7]ನೀಶ[7]ರೆಂಬೀನಾಮಾ- ॥
ಕ್ಷರದಲ್ಲಿ ಮೊದಲ ಪಂಚಾ- ।
ಕ್ಷರಮಂ ತೆಗ[8]ದೊಂದುಮಾಡಲಾಯ್ತಾ ಪ್ರಣವಂ ॥ ೧೬ ॥

ಅನುಪಮನಿಶ್ರೇಯಸ ಸಾ- ।
ಧನಕಾರಣಮಪ್ಪ ಪಂಚಪದದಾದಿಯೆ ತಾ- ॥
ನೆನಲಂತುಟಿಂತುಟೆಂದಿಂ- ।
ತೆನಲಳವಿಯೆ ಭುವನಸಾರಮಪ್ಪೋಂಕಾರಂ ॥ ೧೭ ॥

---

೧. ಅ—ಕೃ; ೨. ಇ—೨ನಾ—ಜೈನ೨; ೩. ಇ—ವಾ; ೪. ಇ—ಡೆ; ೫. ಇ—ದೆ;
೬. ಇ—ಕ್ಕ; ೭. ಅ, ಆ, ಇ—೭ನಿಪ೭; ೮. ಇ—ಗೆ;

ಧರೆಯೊಳು ಸಿದ್ಧಂನಮಸಿ- ।
ದ್ಧಿರಸ್ತು ಟಂ[1]ಶಾಂತಿ[1]ರಸ್ತು ಟಂ [2]ಶುದ್ಧಗೆ[2]ಯಾ-॥
ಗಿರೆಯುಂ ಜೈನಂ ಮೊದಲೆಂ- ।
ಬರಲ್ತು[3] ಲೋಕಕ್ಕೆಕಲ್ತು[4]ವೆಯ್ದೆ[4] ಕೃತ[5]ಘ್ನರ್[5] ॥ ೧೮ ॥

ಜೋಯಿಸಮಂ ಶಕುನಂಗಳ ।
ನಾಯುರ್ವೇದಮನನೇಕವಿದ್ಯೆಗಳಂ ವಾಕ್ ॥
ಶ್ರೀಯುವತೀಶ್ವರನರುಹನ- ।
ಮೇಯಜ್ಞಾನನಿಧಿ ಪೇಳ್ದನುಳಿದವರಳವೇ ॥ ೧೯ ॥

ಗಣಿತದೊಳೇಂ ಜೋಯಿಸಮಂ ।
ಗಣಿತಮುಮಿವುಮೊದಲೊಳಾರ್ಹತಪ್ರೋಕ್ತಮೆನಲ್ದರೆ ಧಾ- ॥
ರುಣಿಯೊಳಗೆ ಬೆಳಗುತಿರ್ದ್ದವು ।
ಗಣಿತಮುಮಂ ಜೈನರಲ್ಲಿ ಕಲ್ತರೆ ಬಲ್ಲರ್ ॥ ೨೦ ॥

ವೃ॥ ಕುಡೆತವು ತಪ್ಪುದಲ್ತು ಪಡದಂಗೆಡಱಿಲ್ಲದರಿದ್ರನಪ್ಪನುಂ- ।
ಪಡೆಗುಮದಕ್ಕೆ ಬೇಱ[6] ಬೆಲೆ ಬೇಡ ನಿಜೇಚ್ಛೆ-
ಯಿನ[7]ಪ್ಪುದಾಗಿಯುಂ ।
ಕಿಡದು ಕವರ್ತ್ತೆವೊಗದು ಕಳಲ್ಕಣಮಾಗದು ಶಕ್ಕವಿದ್ಯೆ[8]ಯೊ- ।
ಳ್ತೊಡರದು ಕೂಡೆ ಪುಂಜಿಸಿದ ವಾಗ್ಮಯರತ್ನಚಯಂ-
ಜಿನೇಶನಾ[9] । ೨೧ ॥

ಅಕ್ಕರವಿದ್ಯೆಯೊಳ್ನೆಱೆಯೆ ಜೆಟ್ಟಿಗನೆಂಬನಿತಲ್ಲದಿರ್ದ್ದಡಂ- ।
ಮಕ್ಕಳನೋದಿಸಲ್ಬಗೆದು ಸುದ್ದಗೆಗಲ್ತನುವೆಲ್ಲರಂತು ದುಃ- ।
ಖಕ್ಕೊಳಗಪ್ಪನಲ್ಲನೆನಿಸಿ[10]ರ್ದ್ದ ಜಗಜ್ಜನಕಾಮಧೇನುವ- ।
ಪ್ಪಕ್ಕರಮಾದಿದೇವಕೃತವೆಂದಡೆ ಜೈನವನಾದಿಯಲ್ಲದೇ ॥ ೨೨ ॥

ಕಂ॥ ಕ್ಷತ್ರಿಯನೆ ಧಾತ್ರಿಗೊಡೆಯಂ ।
ಕ್ಷತ್ರಿಯನಾಗ್ಗೇನನಿತ್ತನದು ದೈವಕೃತಂ ॥

---

೧. ಇ—೧ಪುಷ್ಟಿ೧; ೨. ಇ—೨ಸುದ್ದಗಿ೨; ೩. ಇ—ಲ್ಲ: ೪. ಇ—೪ವಿದ್ಯೆ೪; ೫. ಅ—೫ಜ್ಞರುಂ೫; ೬. ಇ—ನಿ; ೭. ಇ—ದ್ಯೆ; ೮. ಇ—ನಂ; ೯. ಇ—ಗಿ; ೧೦. ಇ—ದ್ದ;

ಕ್ಷತ್ರಿಯನೆ ತೀರ್ತ್ಥಂಕರನಾ।
ಕ್ಷತ್ರಿಯನದಱಿಂದೆ ಪಿರಿಯನೆಲ್ಲಂದದೊಳಂ ॥ ೨೩ ॥

ಪರದರುಮಾದ್ವಿಜರುಂ ಶೂ।
ದ್ರರುಮುರ್ವ್ವಿಗೆ ನಾಥರಲ್ಲದಱಿಂದ್ಧಾಮೂ।
ವರು ವಿ೧ತ್ತಮಸಲ್ಲದು ಭೂ।
ಪರಮಾಟಮುಮಿತ್ತವೃತ್ತಿಯುಂ ನೆಱೆಸಲ್ಕುಂ ॥ ೨೪ ॥

ಆದಿಬ್ರಹ್ಮಸುತಂ‡ಳ।
ಕ್ಷ್ಮೇದೈತಂ ಚರಮದೇಹಿ ಮನುಕುಳತಿಳಕಂ॥
ಮೇದಿನಿಪತಿ ಭರತೇಶ್ವರ।
ನಾದೊರೆಯಂ ಮಾಡಿದದುವೆ ಶಾಸನಮಲ್ತೇ ॥ ೨೫ ॥

ಅವನಿಪತಿಭರತರಾಜಂ।
ನವನಿಧಿಗಳಿಗರುಹನಾಗಿ ನಿಧಿಗಳಿಗೆಂತುಂ॥
ತವಿಲಿಲ್ಲದುದಂ ಕಂಡು।
ತ್ಸವದಿಂ ಜಿನನಿಳಯನಿಚಯಮಂ ಮಾಡಿಸಿದಂ ॥ ೨೬ ॥

ಅಂತುಂ ತವಿಲಿಲ್ಲದೊಡಿ।
ನ್ನೆಂತಿದನಾಂ ತವಿಪೆನಿತ್ತೊಡಂ ಮುನಿಪತ್ನಾ೯॥
ಗೆಮೆಂತುಮಿದನೊಲ್ಲದವರ್ಗ೯।
ತ್ತಾಂ ತವಿಪೆನೆಂದು ಬಗೆದಂ ಮನದೊಳ್೨ ॥ ೨೭ ॥

ತ್ರಿಜಗದ್ಗುರುತನಯಂ ಮೂ।
ಱುಜಾತಿಯೊಳ್ಗುಣಿಗಳಪ್ಪರಂ ಬ್ರತಭಿತ್ತುಂ॥
ದ್ವಿಜರಾಗಿ ಮಾಡಲಂದಿಂ।
ದ್ವಿಜರಾದರ್ಬ್ರತಕೆ೩ ಗುರುಗೆ ಪುಟ್ಟಿದಕತ್ದದಿಂ ॥ ೨೮ ॥

ನಿಜದಿಂ ತಾಯ್ತಂದೆಗಮೊ।
ರ್ವ್ವ್ರಜನಿಯಿಸಿದ್ವರ್ತ್ತಮಬ್ರತಂಗುಡೆ ಗುರುಗೊ॥

---

೧. ಅ—ರಿ; ೨. ಇ—೨ಮೆಂತುಮಿದನೊಲ್ಲನುಳಿದವ।
ಗ೯ತ್ತಾಂ ತವಿಪೆನೆಂದು ಬಗೆದಂ ಮನದೊಳ್॥೨;
೩. ಇ—ದೆ;

ರ್ಮ್ಮಜನಿಯಿಸಿದಕಾರಣದಿಂ |
ದ್ವಿಜರಾದರ್ದ್ದೆಸೆಗೇಂ ದ್ವಿಜನ್ಮರೆ ಪಾರ್ವ್ವರ್ || ೨೯ ||

ಭೂವಿಭು ರತ್ನತ್ರಯನಾ- |
ಮಾವಶಥಂ ಮಾಡಿ ಮೂಱುೞ ನೂಲ್ಗಳ ಗುಣದಿಂ ||
ಮೂವಡಿಮಾಡಿದಸ[೧]ತ್ತ್ರೂ- |
ತ್ರಾವಳಿಯಂ ಕೊರಳೊಳಿಕ್ಕಿಕೊಟ್ಟಂ ಬ್ರತಮಂ || ೩೦ ||

ಯಜ್ಞೋಪವೀತಮಂ ಸ- |
ರ್ವ್ವಜ್ಞನನರ್ಚ್ಚಿಸುವ ಪದದೊಳಿಕ್ಕುವ ಕಥದಿಂ ||
ಯಜ್ಞೋಪವೀತವೆಂಬೀ- |
[೨]ಸ್ಸೈಜ್ಞೆ[೨]ಯುದಕ್ಕಾಯ್ತು ಜೆಸೆಗೇಂ ಪೆಸರಾಯ್ತೇ || ೩೧ ||

ಬ್ರತದಿಂ ಕೆಟ್ಟೊಡೆ ಪಾರ್ವ್ವರ |
ಸುತನಿದಱಿಂ ಪಾರ್ವ್ವನಲ್ಲನಂತದಱಿಂದಂ ||
ವ್ರತಮೆ ವಿಶೇಷಂ ಮನುಜಂ |
ವ್ರತಬಂಧನದಿಂದೆ ಪೂಜ್ಯನಲ್ಲದನಲ್ಲಂ || ೩೨ ||

ತಪಮಂ ಕೈಕೊಳಲೊಡನೆಂ- |
ತು ಪಾರ್ವ್ವರುಂ ಭೂಪವೈಶ್ಯಶೂದ್ರರುಮೆಲ್ಲಂ ||
ತಪಸಿಗಳಪ್ಪವೊಲಾರ್ಹತ- |
ರೆ ಪಾರ್ವ್ವರೆನೆ ಸಂದರಾವಜಾತಿಯೊಳೊಗೆದುಂ || ೩೩ ||

ಸುರಲೋಕದಲ್ಲಿ ದೇವ- |
ಸ್ಸುರರೀಧರೆಗಿವರೆ ದೇವರದಱಿಂದೆ ಧರಾ- ||
ಮರರೆಂದು ಪೆಸರನಿಟ್ಟಂ |
ಭರತೇಶ್ವರ ಚಕ್ರವರ್ತ್ತಿ ಸುವ್ರತಯುತರಂ || ೩೪ ||

ಭರತೇಶ[೩]ನಾದಿಚಕ್ರೇ- |
ಶ್ವರನಾದರದಿಂದೆ ಮಾನ್ಯರಿವರೆಂದು ಧರಾ- ||
ಮರರಂ ಸದ್ರತ್ನತ್ರಯ |
ನಿರತರನೋಜೆಯೊಳೆ ಮಾಡಿ ಭಾವಿಸಿ ದಯೆಯಿಂ || ೩೫ ||

---

೧. ಇ—ತ; ೨. ಈ—೨ಸಂಜ್ಞೆ೨; ೩. ಆ—ಶ್ವ;

ಆರಂಭಂ ರತ್ನತ್ರಿತ- ।
ಯಾರಾಧಕರ್ಗೀದ್ವಿಜನ್ಮತತಿಗಾಗ[೧]ದು ಲೋ- ॥
ಕಾರಾಧ್ಯರೆಂದು ಭರತಂ ।
ಕಾರುಣ್ಯದೆ ದಾನಯೋಗ್ಯರಾಗಿರೆ ಕೊಟ್ಟಂ ॥ ೩೬ ॥

ಅಂದಿಂತೊಟ್ಟಾರಂಭಮು- ।
ನೆಂದುಂ ತಾವೊಲ್ಲದೊಳ್ಪಿನಿಂ ನಡವೆಡೆಯೊ- ॥
ಳ್ಮುಂದರಿಯದೆ ರತ್ನತ್ರಯ ।
[೨]ದಿಂದುಳಿದು ಯಥೇಷ್ಟರಾದ ಕಾರಣದಿಂದಂ[೨] ॥ ೩೭ ॥

ಸಲ್ಲದು[೩] ವಿಪ್ರಂಗಿಂತಿದು ।
ಪೊಲ್ಲದೆನುತ್ತಾಡಲಱಿಯದಂಗಣವೊಳ್ಳಿ- ॥
ತ್ತಲ್ಲೆಂಬವೋಲ್ ವ್ರತಂಗಳಿ- ।
ಗಲ್ಲದವರ್ ಜೈನಧರ್ಮ್ಮಮುಂ ಕೈಕೊಳ್ಳರ್ ॥ ೩೮ ॥

ಕ್ಷಿತಿಪತಿ ಗುಣಿಗಳನೆಲ್ಲಂ ।
ವ್ರತಬಂಧನಮಾಗೆ ಮಾಡಲಂದಿಂತೊಟ್ಟು ॥
ವ್ರತದೊಂದುರೂಢಿಯಿಂದಂ ।
ವ್ರತಬಂಧನಮೆಂದು ಮಾಳ್ಪರಿನ್ನುಂ ಪೂರ್ವ್ವರ್ ॥ ೩೯ ॥

ಉತ್ತಮಕುಲಮುಂ ಪಡೆದ- ।
ತ್ಯುತ್ತಮಜಿನಮಾರ್ಗ್ಗದಿಂದೆ ನಡೆವಾತಂ ತಾ- ॥
ನುತ್ತಮರೊಳಗತ್ಯುತ್ತಮ- ।
ನತ್ತಲೆಪಂ ಪಡೆಗುಮುತ್ತರೋತ್ತರಸುಖಮುಂ ॥ ೪೦ ॥

ಪೊಲೆಯುಂ ಶ್ರಾವಕನಾದೊಡೆ ।
ಪಲರೊಳವಂ ಮಾನ್ಯನಪ್ಪೊ[೪]ನೆಂದಡೆ ಮತ್ತಿಂ ॥
ಕುಲಜಂ ಗಡ ಜೈನಂ ಗಡ ।
ಬೆಲೆಯುಂಟೆ ಪೊಂಗೆ ಕಂಪುದೊರೆಕೊಂಡತೆಱಿಂ ॥ ೪೧ ॥

---

೧. ಇ—ದು; ೨. ಇ—೨ದಿಂಕೆಟ್ಟು ಯಥೇಷ್ಟರಾದುದರಿಂದ೨; ೩. ಇ—ದ;
೪. ಇ—ಪ್ಪ;

ವೃ॥ ಶ್ರೇಯಾಂಸಂ ಗುರುಭಕ್ತಿಯಿಂ ನಿಱಿಸೆ ತನ್ನಂ ನಿಂದು-
ಸಂದಕ್ಷಯ ।
ಶ್ರೀಯಕ್ಕೆಂದು ತೃತೀಯೆಯಲ್ಲಿ ಪರಸಲ್ಸಂದಾದಿದೇವಂ ಜಗ-।
ಜ್ಜ್ಯಾಯಂ ತದ್ದಿನಮೀಗಳಕ್ಷಯತೃತೀಯ-
ಶ್ರೀಯನಾಳ್ದಿರ್ದ್ದದಂ- ।
ತಾಯೋಗೀಂದ್ರನಿನಲ್ಲದಂದನಿತು[೧]ಪೆಂಪೆಂತಾ-
ದಿ[೧]ನಕ್ಕಾದುದೋ ॥ ೪೨ ॥

ಕಂ॥ ಎಸದಿರೆ ನಂದೀಶ್ವರಮಂ ।
ಬಸಂತದೊಳ್ಮಾಡಿ ಬಳಿಕ [೨]ಪೌರ್ಣ್ಣಮಿ[೨]ಯೊಳ್ದೇ- ॥
ವಸಮಾಜಮೋಕುಳಿಯನಾ- ।
ಡೆ ಸಿಂಪಿಣಿಯುದೆಂದು ಮಾಡುವರ್ತ್ತದ್ದಿನದೊಳ್ ॥ ೪೩ ॥

ವೃ॥ ಖ್ಯಾತಿಗೆ ಸಂದ ಕಾರ್ತ್ತಿಕಚತುರ್ದ್ದಶಿಯಂದು-
ನಿಶಾವಸಾನದೊ- ।
ಳ್ಸ್ವಾತಿಯೊಳೊಪ್ಪೆ ವೀರಜಿನನೊಲ್ದಮೃತಾಂಗನೆಗೀಶನಾಗೆ ಸಂ-।
ಜಾತಮನೋಮುದರ್ದ್ದಿವಿಜರುತ್ಸವಮಂ ನೆಱೆಮಾಡೆ ತದ್ದಿನಂ।
ಭೂತಳದೊಳ್ಮಹೋತ್ಸವ ಸುಖಾಸ್ಪದಕಾರಣ-
ಮಾದುದೀಗಳುಂ ॥ ೪೪ ॥

ಕಂ॥ [೩]ಬೆಳಗಪ್ಪಜಾವದಾಗಳ್ ।
ಸೊಡರ್ಗುಡಿಗಳ ಬೆಳಗಿ ಪೂಜೆಗೆಯ್ತರೆ ದೀಪಾ[೩] ॥
ವಳಿಯೆಂಬುದಾ[೪]ಯ್ತುಮಾ[೪]ದಿನ ।
ದೊಳಗೀಗಳ್ಪರ್ವ್ವಮಾದುದಾ ಜಿನಸಿಂದಂ ॥ ೪೫ ॥

ದೇವೇಂದ್ರನು ಭವನಿರ್ವ್ವಾ ।
ಣಾವನಿಗರ್ಚ್ಚಿಸಿದ ಧೂಪ ಭೂರಿಯ ಬೊಟ್ಟಂ ॥
ದೀಪಾವಳಿ ವೆಸರಿಡೆ ಭ- ।
ವ್ಯಾವಳಿಯುಂ ತಿಳಕ[೫]ಮಿಟ್ಟಡೆ[೬]ಲ್ಲರುಮಿಟ್ಟರ್ ॥ ೪೬ ॥

---

೧. ಇ—೧ಪೆಂಪಾದಿ೧; ೨. ಇ—೨ಪುಣ್ಣಮಿ೨;
೩. ೩ಬೆಳಗಪ್ಪಾಗಳು ಸೊಡರ್ಗ್ಗುಡಿ । ಗಳನೆಲ್ಲಂ ಬೆಳಗಿ ಪೂಜೆಗೆಯ್ತರೆ ದೀಪಾ ॥೩;
೪. ಇ—೪ದುದಾ೪; ೫. ಇ—೫ಮಿಲ್ಲದೆ೫; ೬. ಇ—ಲ್ಲ;

ಧರೆಯೊಳ್ ಮುಟ್ಟದೆ ನೆಗೆದಂ- ।
ತರಿಕ್ಷದೊಳ್ನೆಲಸಿ ನಿಂದ[೧]ವ್ಮೈಳಾಪಜಿನೇ- ॥
ಶ್ವರ[೧]ತೀರ್ತ್ಥದತಿಶಯಮನಾ- ।
ಧರಣೇಂದ್ರಂ ಪೊಗಳಲ[೨]ಱಿಯನುಳಿದವರಳವೇ ॥ ೪೭ ॥

ವೃ॥ ಪಡುವಣವಾರ್ಧಿಯಲ್ಲಿ ಧನುಪಂಚಶತೋನ್ನತಜ್ಜೈನಬಿಂಬವಿ-।
ರ್ದ್ದಡೆಯ ಜಳಂ ಸುಧಾಸಮಮೆ ಯೋಜನವಿಸ್ತೃತಮಲ್ಲಿ-
ಭಾವಿಸಲ್ ।
ಜಳಚರಮಿಲ್ಲ ತತ್ಪ್ರತಿಮೆ ಪಚ್ಚೆಯಬಣ್ಣದಿನುರ್ವ್ವಿಗಾವಗಂ।
ತುಡಿಗೆಯೊಲಿರ್ಪ್ಪುದೆಂದೊಡೆಲೆ ಬಣ್ಣಿಸಲಾರ್ಪ್ಪರೆ-
ತೀರ್ತ್ಥದಂದಮಂ ॥ ೪೮ ॥

ಕಂ॥ ಜಳಯಾತ್ರೆಗೆ ಪೋಪವರ್ಗಳ್ ।
ಜಲವಿಲ್ಲದೊಡಾಜಿನೇಶ್ವರಂ ನಿಂದೆಡೆಯೊಳ್ ॥
ಜಳಮಂ ಮೊಗದೊಯ್ವುತ್ತಿರ್ತ್ತ- ।
ಜ್ಜಳಮಬ್ಧಿಯ ನಡುವೆಸೀಯನಾದುದಱಿಂದಂ ॥ ೪೯ ॥

ವೃ॥ ಇಳೆಯೊಳ್ಸಂದಿರ್ದ್ದ ಮುಕ್ಕುಂದದ ಜಿನನ-
ಪದಾಂಗುಷ್ಠಮನ್ನೇಣೊಳಿಂಬಾ- ।
ಗಳದಂತಾಸೂತ್ರದಿಂದಂ ಕರಿತುರಗನಗೇಂ[೨]ದ್ರೋತ್ತ-
ಮಾಂಗಂಗಳಂ ಮ- ।
ತ್ತೆಳೆವಾಗ[೩]ಳ್ನಾಲ್ಕು[೩]ಮಲ್ಲಲ್ಲಿಗೆ ನಿರುತಮೆನಲ್ಕಿನ್ನ-
ವಾಶ್ಚರ್ಯ್ಯಮೆಂತಾ ।
ನೊಳವೇ ಪೇಳೆಂದು ತೀರ್ತ್ಥಾತಿಶಯಮನನಿಶಂ-
ಬಣ್ಣಿಸಲ್ಬಲ್ಲನಾವಂ ॥ ೫೦ ॥

ಕಂ॥ ಬಂದಿರುಳೊ[೪]ಳ್ಬಾನು[೪]ವರಂ ।
ತಂದಿಕ್ಕಿದ ಪುಷ್ಪಮಾಲೆ ನಿಮಿರ್ದುದು ಪಾದ- ॥
ಕ್ಕೆಂದೊಡೆ ಭುವನಕ್ಕಚ್ಚರಿ ।
ಬಂದ[೫]ಣಿಗೆ[೫]ಯ ಶಾಂತಿನಾಥತೀರ್ತ್ಥಾತಿಶಯಂ ॥ ೫೧ ॥

---

೧. ಇ—೧ವ್ಮೈಳಾಪುರದೀಶ್ವರ೧; ೨. ಇ—ರೇ; ೩. ಇ—೩ಳುಸಾಲ್ಗು೩; ೪. ಇ—೪ಳುಜಾನು೪; ೫. ಇ—೫ಳಿಕೆ೫;

ಶ್ರೀಮತ್ಸಮಂತಭದ್ರ- ।
ಸ್ವಾಮಿಯ ವಾಗ್ವಜ್ರಪಾತದಿಂ ವಾರಣಸೀ ॥
ಗ್ರಾಮದ ಮಹೇಶಲಿಂಗಮಿ- ।
ಳಾಮಂಡಳಮಱಿಯಲೊಡೆಯೆ ಜಿನನೊಳಗಿರ್ದಂ ॥ ೫೨ ॥

ಹಿಮಶೈಳಾಗ್ರದಿನಿಳಿತಂ- ।
ದಮರಾಪಗೆ ಕೆಳಗೆ ನಿಂದ ಜಿನಬಿಂಬದಮೇ- ॥
ಲಮರ್ದಿರೆ ಪರಿತಂದುದಱಿಂ- ।
ದಮೆ ಪಾವನಮಾಯ್ತು ಬಱಿದೆ ಪಾವನಮಾಯ್ತೇ ॥ ೫೩ ॥

ಉರಗೇಂದ್ರನ ಲೋಕದೊಳಂ ।
ಧರೆಯೊಳಮಾಜ್ಯೋತಿರಿಂದ್ರಲೋಕದೊಳಂ ಬಿ- ॥
ತ್ತರಿಸುವುವಲ್ಲವೆ ಪಲರ್ಗ- ।
ಚ್ಚರಿಯೆನಿಸಿದ ಕೃತ್ರಿಮಂ ಜಿನೇಂದ್ರಾವಸಥಂ ॥ ೫೪ ॥

ಈ ವಿಧದತಿಶಯಮುಳಿದರ ।
ದೇವರೊಳೆತ್ತಾನುಮುಳ್ಳೊಡನಿತಱೊಳೆ ಜಗ ॥
ಕ್ಕಾವಲ್ಲದೆ ದೇವಂ ಪೆಱ- ।
ನಾವಂ ಮತ್ತೆಂದು ಬೀಗಿ ಬಿಸೆಯದೆ ಮೂಣರ್ ॥ ೫೫ ॥

ಎಣಿಸುವಡೆ ತೀರ್ತ್ಥಸಂಚಯ ।
ವೆಣಿಕೆಗೆ ಮಿಗಿಲವಱೊಳೀಗಳೊಂದೆರಡಂ ಕಂ- ॥
ಡೆಣಿಸಿದೆನಂತಾತೀರ್ತ್ಥಮ- ।
ನೆಣಿಸಲ್ಧರಣೇಂದ್ರನಾದೊಡಂ ನೆಱೆದಪನೇ ॥ ೫೬ ॥

ವೃ॥ ರಾಮನರೇಂದ್ರನುಂ ನೆಗಳ್ದಪಾಂಡುನರೇಂದ್ರನ-
ಪುತ್ರರಯ್ವರುಂ ।
ಪ್ರೇಮದಿನಾರ್ಹತವ್ರತಮನೊಪ್ಪಿರೆ ಪಾಳಿಸಿ ಮುಕ್ತಿಕಾಮಿನೀ ।
ಕಾಮರೆನಲ್ಕೆ ಸಂದರವರಂ ಸಲೆಮೋಹದಿ ಶೈವರೆಂಬರೀ ।
ಭೂಮಿಯ ಮೂಢಜೀವಿಗಳವಂದಿರನಾರ್ಪ್ಪಳೆ-
ಮಾರಿಬಾರಿಸಲ್ ॥ ೫೭ ॥

---

೧. ಇ—೧ಭಾವಿಸಿ೧; ೨. ಇ—ಸೆ;

ನರಪತಿಶಾಂತರಾಹನನ ಮಾಡಿದ ಕೋಟೆಗಳೆಲ್ಲನಾಡೊಳಂ।
ಓರಿದೊಳವಂತೆ ರಾಮುವೆಸರೋರ್ವ್ವ-
ನೃಪಂ ಧರೆಯಲ್ಲಿ ಮಾಡಿದೀ- ।
ಶ್ವರನಿಳಯಂಗಳಂ ಬಿಡದೆಮಾಡಿಸಲಾಯುಗದಲ್ಲಿ ರಾಮಣನೀ- ।
ಶ್ವರಭವನಂಗಳಂ ಧರೆಯೊಳೊಪ್ಪಿರೆ-
ಮಾಡಿದನೆಂಬರೇಳಿದರ್ ॥ ೫೮ ॥

ಕಂ॥ ಯುಗದ ಕಡೆವರೆಗಮಿಪ್ಪವೆ ।
ಜಗದೊಳಗಿಟ್ಟಗೆಯ ಕಿಱಿಯದೇಗುಲಮೆಂತಿ- ॥
ಮ್ಮೆಗೆ ಪುಸಿವರೊಳರೆ ಮುನ್ನಿನ ।
ಯುಗದಾ ದೇಗುಲಮಿನಿತ್ತುಕಿಱಿಯುವೆ ಪೇಳಿಂ ॥ ೫೯ ॥
ಶ್ರೀಪರ್ವ್ವತಮೆಂಬುದು ದುರಿ- ।
ತಾಪಹರಂ ಮಲ್ಲಿನಾಥಜಿನನಿರ್ದ್ದೆಡೆ ಮ- ॥
೧ತ್ತೇ....ಮಾ೧ತೊಜಿನೇಶ್ವರ ।
ರೂಪುಗಳಾನಗದೊಳೆತ್ತಲುಂ ಬಾಹಲ್ಯಂ ॥ ೬೦ ॥

ವೃ॥ ನುತವೈಶಾಖದ ಪೂರ್ಣ್ಣಮಾಸೆಯೊಳನಂತದ್ದೇಶ-
ವೀಥೀಸುಸಂ- ।
ಗತನಾಗಲ್ಕೆ ತದರ್ಕ್ಕರಶ್ಮಿನಿವಹಂ ತಳ್ಪೊಯಿವುದುಂ ದೇವನಿ- ।
ರ್ಮ್ಮಿತಶೈಳಾಗ್ರಮಣಿಸ್ಫುರಜ್ಜಿನಗೃಹಪ್ರದ್ಯೋತಿ-
ರೋಧೋಂತರ- ।
ಸ್ಥಿತಮಾಗಲ್ಕದನೀಗ ತಾಮುಸದೆ ಲಿಂಗಂ ಜ್ಯೋತಿಯೇಂ-
ಗುಂಜನಂ ॥ ೬೧ ॥

ಇಂತಿವನತ್ಥಿರ್ಯಿಂ ನಿಲಿಪವೆಂದು ಮುನೀಶ್ವರರೇಳುಲಿಂಗಮಂ।
ತಂದಿರೆ ಪೊತ್ತು ಪೊತ್ತುಗೆಳೆವುತ್ತಿರೆ ಲಗ್ನಮೆ ತಪ್ಪಿದಪ್ಪುದೆಂ- ।
ದಂದವನೊಂದುಮಾಡಿ ನಿಲಿಸಲ್ಬಗೆದೊರ್ಮ್ಮೆಯೆ-
ಭೀಮರಂಗಮಾ- ।
ಯ್ತೆಂದೆಱಗುತ್ತಮಿಪ್ಪರಘುಟಂದವಿದೆನ್ನದೆ-
ಮೂಢಜೀವಿಗಳ್ ॥ ೬೨ ॥

---

೧. ಇ, ಈ,—೧ತ್ತೇಪಡೆಮಾ೧;

ಕಂ॥ ಸಂದರ್ಕ್ಕಕಾಂತಲಿಂಗಮು- ।
ನೊಂದಾಗಲಗಸ್ತ್ಯನೊತ್ತೆ ತಮ್ಮೊಳಗೇಳಿಂ- ॥
ತೊಂದಾದುವವೆಂದೂಳ್ವರು- ।
ವೊಂದಪ್ಪಂತಿ[೧]ರೆಯುಮ[೧]ಣ್ಣಮುದ್ದೆಯೊ ಪೇಳಿಂ ॥ ೬೩ ॥

ಭೀಮೇಶನೆಂದು ಡಾಕ್ಷಾ- ।
ಗ್ರ[೨]ಮದವನ್ನುಡಿವಶಂಭು ಮಾನಸ್ತಂಭಾ ॥
ಭೂಮಿಕೆಯ ಕೆಳಗೆ ಕಾಣ್ಬ- ।
ತ್ತಾರ್ಮುತ್ಸವದಿಂದಲದಱ [೩]ಮೊದಲಲೊ[೩]ಳ್ಜಿನನಂ ॥ ೬೪ ॥

ಅಣುವನ ಮಣಿಕುಂಡಳಮುಂ ।
ಫಣಿವೈರಿಯ ಪಚ್ಚೆಸಾರಮುಂ ಸೀತೆಯ ಕಂ- ॥
ಕಣಮುಂ ಗಂಗೆಯ ನೊರೆಯುಂ ।
ಫಣಿಕಟಕನ ಕೆಳಗೆ ಬೈಕೆಯಿರ್ದ್ದಪುವೆಂಬರ್ ॥ ೬೫ ॥

ಮಾನಸ್ತಂಭದ ಮೊದಲೊಳ್ ।
ಜೈನಪ್ರತಿಕೃತಿಗಳಿರ್ದ್ದವದುಕಾರಣದಿಂ ॥
ತಾನೆ[೪]ಯುಂ[೪]ಮುಚ್ಚಿರ್ದ್ದ- ।
ಜ್ಞಾನಿಗಳದಱೊಳಗೆ ರತ್ನಮಿರ್ದ್ದಪು[೫]ವೆಂಬರ್ ॥ ೬೬ ॥

ವೃ॥ ಪುಲಿಗೆಱೆಯಲ್ಲಿಮುಂ ವೃಷಭವಾಹನಯಕ್ಷನ-
ನಾದಿಕಾಲದೊ- ।
ಳ್ನೆಲದೊಳೆ ಪೂಳ್ದುದಂ ಬೆರಟಿ ಕಂಡದನೊರ್ಮ್ಮೆಯೆ-
ನಂದಿವಾಹನಂ ।
ನೆಲದೊಳಗಿರ್ದ್ದ ರುದ್ರನೊಗೆತಂದನಿದಲ್ತೆ-
ಸ್ವಯಂಭುವೆಂದು ಗಾ- ।
ವಿಲರದನೀಗಳರ್ಚ್ಚಿಸುವರೇನದು ತಮ್ಮ-
ಸ್ವಯಂಭುಲಿಂಗಮೋ ॥ ೬೭ ॥

ಕಂ॥ ಪರಿಯುಳಿಯ ಜಿನನ ನೆತ್ತಿಯೊ ।
ಳಿರದೊಗೆದುದು ಲಿಂಗವೆಂಬರಂತಲ್ತು ಜಿನೇ- ॥

---

೧. ಇ—೧ರೆಯುವೆಯುಮು೧; ೨. ಇ—ಗ್ರ್ರಾ; ೩. ಇ—೩ವೊದಲೊಳು೩; ೪. ಇ, ಈ—೪ನೆಲೆಯುಂ೪; ೫. ಇ—ಹ;

ಶ್ವರನಿಪ್ಪನೊಳಗೆ ಪೊಱಗೆಡೆ- ।
ಯರಂಗದೊಳ್ ಲಿಂಗವೆಡಚತನದಿಂದಿಕ್ಕುರ್ಗಂ ॥ ೬೮ ॥

ವೃ॥ ಜಗತೀವಿಖ್ಯಾತೆ ಕೊಲ್ಲಾಪುರವರದಮಹಾಲಕ್ಷ್ಮಿ-
ಚಂದ್ರಪ್ರಭಸ್ವಾ- ।
ಮಿಗಳ್[೧]ಂದುಂ ಭಕ್ತಿ[೨]ಯಿನ್ನುಂ ಜಿನಪದಯುಗಳಕ್ಕೆತ್ತಿ-
ನೈವೇದ್ಯಮಂ ಜಾ- ।
ತ್ರೆಗೆ ಬಂದರ್ಮ್ಮಗತ್ತೆ ತೋರ್ಪ್ಪರ್ಸ್ಸರುಗನದಱಿನಾದೇವಿ-
ತಾಂ ಜೈನೆ ಹಿಂಸಾ- ।
ದಿಗಳಂ ಕೈಕೊಳ್ಳಳಿನ್ನುಂ ಕೃತಕದವಳು ಮಾಕಾಳಿ-
ಮಾಂಸಾಸಿಯಲ್ತೆ ॥ ೬೯ ॥

ಕಂ॥ ಭಾವಿಸಿ ಜಿನಮತಮಂ ಸಂ- ।
ಭಾವಿತ ಮತಿಕೇಳ್ದು ಬಳರಿತನಮಂ ಬಿಟ್ಟು ॥
ದೇವಿ ನೆಗಳ್ದಣ್ಣಿಗೆಱೆಯೊಳ್ ।
ಶಾ[೩]ವಕಿಯೆನೆ ರೂಢಿವೆತ್ತು ದೇವತೆಯಾದಳ್ ॥ ೭೦ ॥

ವೃ॥ ವೀರದೊಳುಕ್ಕಿ ಮಚ್ಚರಿಸಿ ಕೋಪದೆ ಜೈನನೆ-
ಕಾದಿ ಸತ್ತು ಮೈ- ।
ಲಾರನೆನಲ್ಕೆ ರೂಢಿವಡದಂ ಬ್ರತಮಂ ಬಿಡದೀಗಳುಂ ಖರಂ ।
ಘೋರವೆನಲ್ಕೆ ಕೊಲ್ವ ಕೊಲೆಗಾದಮೆ ತಾನುಪವಾಸ-
ಮಿಪ್ಪುದಂ ।
ಪಾರಣೆಮಾಳ್ಪುದಂ ತಿಳಿದು ನಂಬುವುದಾತನ-
ಜೈನವೃತ್ತಿಯಂ ॥ ೭೧ ॥

ಕಂ॥ ಅಡಿಗಡಿಗಿರದೊಳ್ಳಿತ್ತಂ ।
ನುಡಿಯೆನುತ ಪವಿತ್ರಮಪ್ಪಸರುಗೆತ್ತುವರೆಂ ॥
ದಡೆ ಮೈಲಾರಂ ಕೊಲೆಗಳ ।
ನೊಡಂಬಡಂ ನಾಡಪಾಪಕರ್ಮ್ಮರೆ ಕೊಲ್ವರ್ ॥ ೭೨ ॥

---

೧. ಇ—ಳ್ಗೆ; ೨. ಇ—ಕ್ತೆ; ೩. ಶ್ರಾ;

ವೃ॥ ಪರಸು ಫಳಾಕ್ಷಸೂತ್ರವರದೋಚಿತಚಿಹ್ನ-
ಚತುರ್ಬ್ಭುಜಂ ಮಹಾ-।
ಕರಿವದನಂ ಜಿನೇಂದ್ರವರಶಾಸನರಕ್ಷಣದಕ್ಷನುತ್ತಮಂ।
ಕರಿಮುಖಯಕ್ಷನಲ್ಲನೆ ವಿನಾಯಕನೆಂಬವನೀಗಳಾತನಂ।
ಹರಸುತನೆಂದು ಮೂಢಜನಮರ್ಚ್ಚಿಸುಗುಂ-
ವಿಪರೀತವೃತ್ತಿಯಿಂ ॥ ೭೩ ॥

ಕಂ॥ ಭೂವಳಯದೊಳಗೆ ರೂಢಿಯ।
ದೇವಿಯುರಂ ಬಳರಿಯೆಂದು ಕೊಂಡಾಡಿದೊಡಂ॥
ಶ್ರಾವಕರಾದರ್ಶ್ಯಾಸನ।
ದೇವಿಯುರೆಂದಱಿವುದಾಪೆಸಗ್ಗೊ೯ಂಡವರಂ ॥ ೭೪ ॥

ಅವಿವೆನ್ನದೆ ರೂಢಿಯ ತಾ-।
ಣಮೆಲ್ಲಮಂ ತೀರ್ತ್ಥಕರರ ಕೇವಳಿಗಳ ಮು-॥
ನ್ನೆವಿಹಾರಿಸಿದೆಡೆಗಳಿವೆ-।
ಲ್ಲವೆಂದು ನಂಬುವುದು ಬೇಱೆ ಪೆಸರಿಟ್ಟಡವೇಂ ॥ ೭೫ ॥

ಇಂದ್ರಮುನಿ ಚಂದ್ರಮುನಿ ಜೈ-।
ನೇಂದ್ರಮುನಿ ಪ್ರಕೃತಿಯೆನೆ ಜಗದ್ವಿಶ್ರುತಮಾ-॥
ಯಿಂತ್ರಂದ್ರಂ ಚಂದ್ರಂ ಶ್ರೀ ಜೈ-।
ನೇಂದ್ರವೆನಲ್ ಜಗದೊಳೆಲ್ಲಿಯುಂ ವ್ಯಾಕರಣಂ ॥ ೭೬ ॥

ಸಕಳಜ್ಞಂಗಮಿತಗುಣಂ-।
ಗೆ ಕಲ್ವಿಷಂಗೆಜಿಗಿಪೇಳ[1]ನಾಪಾಣಿನಿಯುಂ॥
ಸುಕಳವಿದನಮಿತಗುಣನೆಂ-।
ಬ ಕೀರ್ತ್ತಿ ಜಿನನಲ್ಲದನ್ಯರೊಳ್ಸಂದಪುದೆ ॥ ೭೭ ॥

ಸೂತ್ರಮನೆ ಮುನ್ನ ಪಾಣಿನಿ।
ಸೂತ್ರಿಸೆ ಜೈನೇಂದ್ರಬುದ್ಧಿ ಮಾಡಿದನಂತಾ॥
ಸೂತ್ರಕ್ಕೆ ವೃತ್ತಿಯುಂ ಬುದ।
ಮಿತ್ರಂ ಕೊಟ್ಟಂ ದ್ವಿಜನ್ಮರೆಲ್ಲಂ ಬೇಡಲ್ ॥ ೭೮ ॥

---

೧. ಇ—ಳ್ದ:

ಸರ್ವ್ವಂಗೆ ಸರ್ವ್ವದರ್ಶಿಗೆ ।
ಸರ್ವ್ವಜ್ಞಂಗೆಱಗಿ ಸರ್ವ್ವವರ್ಮ್ಮಂ ಪೇಳ್ದಂ ॥
ಸರ್ವ್ವಮನಱಿವಂ ಕಾಣ್ಬನು ।
ಪೂರ್ವ್ವನುಮಿಲ್ಲರುಹನಱಿವನರುಹನೆ ಕಾಣ್ಬಂ ॥ ೭೯ ॥

ಕರಿದಿಕ್ಕರಿನಿಭವೇಣ್ಪಾ- ।
ಸಿರಕ್ಕೆ ದಶಲಕ್ಷವಾ[1]ಜಿಗಳ್ಗಧಿಪತಿಯಾ- ॥
ಗಿರೆ ಮಾಧವಂಗೆ ಮಾಡಿದ ।
ಗುರು ಜಗದೊಳ್ ಸಿಂಹಣಂದಿಮುನಿಪತಿಯಲ್ಲಾ ॥ ೮೦ ॥

ಧರಣೀಶಶಿಖಾಮಣಿಗ- ।
ಚ್ಚರಿಯಾಗಿರೆ ಗಂಗವಾಡಿ ತೊಂಭತ್ತಱಸಾ- ॥
ಸಿರದಧಿಪಂ ಮಾಧವನಾ- ।
ಗಿರೆ ಮಾಡಿದರಲ್ತೆ ಸಿಂಹಣಂದ್ಯಾಚಾರ್ಯ್ಯರ್ ॥ ೮೧ ॥

ಧರೆ ಪೊಗಳೆ ನೆಗಳೆ ಕಂಚಿಗೆ ।
ಕರುವಿಟ್ಟಂದೆಯ್ದೆ ಮಾಡಿದೆಡೆಗಳೊಳೊಂದೊಂ- ॥
ದರುಹದ್ದೇವಾಲಯವೆಸ- ।
ದಿರೆ ಮಾಡಿಸಿ ಸಂದರಲ್ತೆ ಜೈನವ್ರತಿಗಳ್ ॥ ೮೨ ॥

ಒಂದಿರುಳೊಳೆ ಖಚರೇಂದ್ರಂ ।
ಬಂದೊಪ್ಪಿರೆ ಕೋಟಿಮಾಡಿ ಬೋಧನವಮಂ ತಾ- ॥
ನೊಂದೊಂದಟ್ಟಳೆಯೊಳ್ಕ- ।
ತ್ತೊ[2]ಂದೊಂದು ಜಿನಾಲಯಂಗಳಂ ನೆಱೆ ಸಮೆದಂ ॥ ೮೩ ॥

ಪಿಂಗಳ ಜಿನಶಾಸನವಾ- ।
ದ್ಯಂಗಡ ಪುಸಿಯೆಂದು ನುಡಿವ ದುಷ್ಟರ ದುರ್ವ್ವಾ- ॥
ಕ್ಯಂಗಳೊಳೇನಾದಿತ್ಯನ- ।
ನಂಗಯ್ಯೊಳ್ಮುಚ್ಚಲಾರ್ಗ್ಗವೇಂ ಬಂದಪುದೆ ॥ ೮೪ ॥

ಇಂತಲ್ಲದೆ ವಿಕಳಾತ್ಮರ- ।
ನೆಂತುಂ ತಿಳಿಪಲ್ಕೆ ಬಾರದೆಂಬುದಱಿಂದಾ ॥

೧. ಇ—ರಾ; ೨. ಕ—ದ;

ನಿಂತಿವನೆಲ್ಲಂ ತಿಳಿಪಿದೆ- ।
ನುಂತುಂ ಜಿನಧರ್ಮ್ಮವಲ್ಲದುಂಟೇ ಧರ್ಮ್ಮಂ ॥ ೮೫ ॥

ಭರತದೊಳೈರಾವತದೊ- ।
ಳ್ಪರಿವಿಡಿಯಿಂದೊಂದೆಕಾಲದೊಳ್ಮಿಥ್ಯಾತ್ವಂ ॥
ದೊರೆಕೊಳೆ ಕುಲಿಂಗಜನಕು- ।
ಬ್ಬರವಕ್ಕುಂ ಜೈನ⁽¹⁾ಮಱೆಯೆ ವರ್ತ್ತಿಸುತಿರೆಯುಂ⁽¹⁾ ॥ ೮೬ ॥

ವೃ॥ ಪರಮಶ್ರೀರಮಣೀಪ್ರಿಯಂ ನರಸುರೇಂದ್ರಾಹೀಂದ್ರ-
ದೈತ್ಯೇಂದ್ರಖೇ- ।
ಚರರಾಜೇಂದ್ರತಿರೀಟಕೋಟಿವಿರುಹದ್ರತ್ನಾವಳೀರಶ್ಮಿಕೇ- ।
ಸರರಾಜಿತಪಾದಪದ್ಮಯುಗಳಂ ಲೋಕೈಕನಾಥಂ ಜಿನೇ- ।
ಶ್ವರನೊಲ್ದೀಗೆ ವಿನೇಯಸಂತತಿಗೆ ಮುಕ್ತಿ-
ಶ್ರೀಸುಖಾವಾಪ್ತಿಯಂ ॥ ೮೭ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರ ಚರಣಸ್ಮರಣ ಪರಿಣತಾಂತಃಕರಣ ವೀರಣಂದಿ ಮುನೀಂದ್ರ ಚರಣಸರಸೀರುಹಷಟ್ಚರಣ ಮಿಥ್ಯಾಸಮಯ ತಿಮಿರ ಚಂಡಕಿರಣ ಸಕಳಾಗಮಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವ ವಿರಚಿತಮಪ್ಪ ಸಮಯಪರೀಕ್ಷೆಯೊಳುಮನಾದ್ಯನಿಧನ ಜಿನಧರ್ಮ್ಮವರ್ಣ್ಣನಂ ದ್ವಿತೀಯಾಧಿಕಾರಂ ॥

ಶ್ರೀ ಶ್ರೀ ಶ್ರೀ

---

೧. ಇ—೧ಕತಿಗೆ ಮುಕ್ತಿಶ್ರೀಯುಂ೧;

ಸರ್ವ್ವಜ್ಞಂಗೆ ಸರ್ವ್ವದರ್ಶಿಗೆ ।
ಸರ್ವ್ವಜ್ಞಂಗೆಱಗಿ ಸರ್ವ್ವವರ್ಮ್ಮಂ ಪೇಳ್ದಂ ॥
ಸರ್ವ್ವಮನಱಿವಂ ಕಾಣ್ಬನು ।
ವೋರ್ವ್ವನುಮಿಲ್ಲರುಹನಱಿವನರುಹನೆ ಕಾಣ್ಬಂ ॥ ೭೯ ॥

ಕರಿದಿಕ್ಕರಿನಿಭವೆಣ್ಬಾ- ।
ಸಿರಕ್ಕೆ ದಶಲಕ್ಷವಾ[1]ಜಿಗಳ್ಗಧಿಪತಿಯಾ- ॥
ಗಿರೆ ಮಾಧವಂಗೆ ಮಾಡಿದ ।
ಗುರು ಜಗದೊಳ್ ಸಿಂಹಣಂದಿಮುನಿಪತಿಯಲ್ಲಾ ॥ ೮೦ ॥

ಧರಣೀಶಶಿಖಾಮಣಿಗ- ।
ಚ್ಚರಿಯಾಗಿರೆ ಗಂಗವಾಡಿ ತೊಂಭತ್ತಱಿಸಾ- ॥
ಸಿರದಧಿಪಂ ಮಾಧವನಾ- ।
ಗಿರೆ ಮಾಡಿದರಲ್ತೆ ಸಿಂಹಣಂದ್ಯಾಚಾರ್ಯ್ಯರ್ ॥ ೮೧ ॥

ಧರೆ ಪೊಗಳೆ ನೆಗಳೆ ಕಂಚಿಗೆ ।
ಕರುವಿಟ್ಟಂದೆಯ್ದೆ ಮಾಡಿದೆಡೆಗಳೊಳೊಂದೊಂ- ॥
ದರುಹದ್ದೇವಾಲಯವೆಸ- ।
ದಿರೆ ಮಾಡಿಸಿ ಸಂದರಲ್ತೆ ಜೈನವ್ರತಿಗಳ್ ॥ ೮೨ ॥

ಒಂದಿರುಳೊಳೆ ಖಚರೇಂದ್ರಂ ।
ಬಂದೊಪ್ಪಿರೆ ಕೋಟಿಮಾಡಿ ಬೋಧನಮುಂ ತಾ- ॥
ನೊಂದೊಂದಟ್ಟಳೆಯೊಳ್ಮ- ।
ತ್ತೊಂದೊಂದು ಜಿನಾಲಯಂಗಳಂ ನೆಱೆ ಸಮೆದಂ ॥ ೮೩ ॥

ಏಂಗಳ ಜಿನಶಾಸನವಾ- ।
ದ್ಯಂಗಡ ಪುಸಿಯೆಂದು ನುಡಿವ ದುಷ್ಪರ ದುರ್ವ್ವಾ- ॥
ಕ್ಯಂ[2]ಗಳೊಳೇನಾದಿತ್ಯನ- ।
ನಂಗಯ್ಯೊಳ್ಮುಚ್ಚಲಾರ್ಗ್ಗವೇಂ ಬಂದಪುದೆ ॥ ೮೪ ॥

ಇಂತಲ್ಲದೆ ವಿಕಳಾತ್ಮರ- ।
ನೆಂತುಂ ತಿಳಿಪಲ್ಕೆ ಬಾರದೆಂಬುದಱಿಂದಾ ॥

---

೧. ಇ—ರಾ; ೨. ಇ—ದ;

ನಿಂತಿವನೆಲ್ಲಂ ತಿಳಿಪಿದೆ- ।
ನುಂತುಂ ಜಿನಧರ್ಮ್ಮವಲ್ಲದುಂಟೇ ಧರ್ಮ್ಮಂ ॥ ೮೫ ॥

ಭರತದೊಳೈರಾವತದೊ- ।
ಳ್ಪರಿವಿಡಿಯಿಂದೊಂದೆಕಾಲದೊಳ್ಮಿಥ್ಯಾತ್ವಂ ॥
ದೊರೆಕೊಳೆ ಕುಲಿಂಗಜನಕು- ।
ಬ್ಬರವಕ್ಕುಂ ಜೈನಮಾರ್ಗಿಯೆ ವರ್ತ್ತಿಸುತಿರೆಯುಂ[೧] ॥ ೮೬ ॥

ವೃ॥ ಪರಮಶ್ರೀರಮಣೀಪ್ರಿಯಂ ನರಸುರೇಂದ್ರಾಹೀಂದ್ರ-
ದೈತ್ಯೇಂದ್ರಖೇ- ।
ಚರರಾಜೇಂದ್ರಕಿರೀಟಕೋಟಿವಿರುತದ್ರತ್ನಾವಳೀರಶ್ಮಿಕೇ- ।
ಸರರಾಜಿತಪಾದಪದ್ಮಯುಗಳಂ ಲೋಕೈಕನಾಥಂ ಜಿನೇ- ।
ಶ್ವರನೊಲ್ದೀಗೆ ವಿನೇಯಸಂತತಿಗೆ ಮುಕ್ತಿ-
ಶ್ರೀಸುಖಾವಾಪ್ತಿಯಂ ॥ ೮೭ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರ ಚರಣಸ್ಮರಣ ಪರಿಣತಾಂತಃಕರಣ ವೀರಣಂದಿ ಮುನೀಂದ್ರ ಚರಣಸರಸೀರುಹಷಟ್ಚರಣ ಮಿಥ್ಯಾ-ಸಮಯ ತಿಮಿರ ಚಂಡಕಿರಣ ಸಕಳಾಗಮಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವ ವಿರಚಿತಮಪ್ಪ ಸಮಯಪರೀಕ್ಷೆಯೊಳುಮನಾದ್ಯ ನಿಧನ ಜಿನಧರ್ಮ್ಮವರ್ಣ್ಣನಂ ದ್ವಿತೀಯಾಧಿಕಾರಂ ॥

ಶ್ರೀ ಶ್ರೀ ಶ್ರೀ

೧. ಇ—೧ತತಿಗೆ ಮುಕ್ತಿಶ್ರೀಯಂ೧;

ಎಂತೆಂತು ಪಿಕ್ಕಿ ನೋಳ್ಪಡ- ।
ಮಂತಂತೆ ವಿಚಾರಸಹಮು[1]ನಾ.......[1] ॥
ದ್ಯಂತಂ ಜೈನಾಗಮು[2]ಮನ[2] ।
[3]ದಂತಿಂತುಂತೆಂದೆನಲ್ಕದೇಂ ಬಂದಪುದೇ[3] ॥ ೨೪ ॥

ಅಂತುಟಿದಿಂ[4]ತುಟು ಪೇಳಿ-।
ನ್ನುಂತುಟದೆಂಬಂತುಟಲ್ತು ಜೈನಾಗಮಮಾ- ॥
ದ್ಯಂತನ್ನೆ ರಾಣಿಯ ಹೊ- ।
ನ್ನಂತುಟು ಮಧ್ಯಸ್ಥವೃತ್ತಿಯಿಂ[5] ನೋಳ್ಪಾಗಳ್ ॥ ೨೫ ॥

ಖಳಸಂಸೃ[6]ತಿಯೆಂಬ ಮಹಾ- ।
ಜಳನಿಧಿಯೊಳಗೆಂಟುತೆಱದ ಕರ್ಮ್ಮದ ವಶದಿಂ ॥
ಮುಳುಗುತ್ತ[7]ಲಿಪ್ಪ[7] ಜೀವಾ- ।
ವಳಿಗೆಲ್ಲಂ ಯಾನಪಾತ್ರಮರ್ಹತ್ಪ್ರೋಕ್ತಂ ॥ ೨೬ ॥

ಒಳಗಂ ಭೇದಿಸದನ್ನಂ ।
ಚಳಬುದ್ಧಿಗೆ ಪೊಱಗುಬೆಟ್ಟಿತಾಗಿರ್ಕ್ಕುಂ ನಿಂ ॥
ದೊಳಗಂ ಭೇದಿಸುತಿರೆ ನಿ- ।
ರ್ಮ್ಮಳ ಬುದ್ಧಿಗೆ ತೆಂಗಿನಂತೆ ರುಚಿ ಜಿನವಚನಂ ॥ ೨೭ ॥

ಶ್ರುತಿಯೊಳ್ಮಿಥ್ಯಾಮಾರ್ಗ್ಗಂ ।
ಸತತಂ ಸನ್ಮಾರ್ಗ್ಗಮಾವುದೆಂದಱಿಯದ ಸಂ- ॥
ಸ್ಮೃ[8]ತಿಯ ಮನುಜಂಗೆ ಕಣ್ಣಂ ।
ಗತಿಯುಮದೆಂತ[9]ತುಟಲ್ತೆ ಜಿನರಾಜಮತಂ ॥ ೨೮ ॥

ಎಡೆವರಿಯದೆ ಕಣ್ಗೆಟ್ಟ- ।
ಪ್ಪಡಱ[10]ಯೊಂನೊಳಗಱಿದು ನೆಱೆಯೆ ಬೆಳಗೆತ್ತಂ ನೋ- ॥
ಳ್ಪಡೆ ಭಾವಕಂಗೆ ಕೈಗ- ।
ನ್ನಡಿಯುವೊಲೆಸೆದಪುದು ನಿರ್ಮ್ಮಳಂ ಜೈನಮತಂ ॥ ೨೯ ॥

---

೧. ಇ—೧ನಾದ್ಯಂತನಾ೧; ೨. ಇ—೨ನದ೨; ೩. ಇ—೩ನಂತಿಂತುಂತೆನಲದಂತು-ವೇಂಬಂದಪುದೇ೩; ೪. ಇ—ದಂ; ೫. ಇ—ಯೇಂ; ೬. ಆ, ಇ—ಶೃ; ೭. ಇ—೭ತ್ತಿಪ್ಪವು೭; ೮. ಆ, ಇ—ಶೃ; ೯. ಇ—ತೆಂ; ೧೦. ಇ—ಯು;

ಒಳಗಱಿಯದಿದಿರ್ದೊಡಿಕ್ಕೆಮ ।
ತಿಳಿದೊಳ[೧]ಪೊಕ್ಕಂಬಳಿ[೨]ಕ್ಕೆ ಭಾಷಿತಮಂ ತಾಂ[೩] ॥
ಚಳಮನ[೪]ನಾಗದೆ ಬಗೆದೊಡೆ ।
ಖಳನುಂ ಜೈನಬ್ರತಕ್ಕೆ ಘುಳಿಲನೆ ಬಕ್ಕುಂ ॥ ೩೦ ॥

ಒಳ್ಳಿತ್ತು ಹೊಲ್ಲದೆಂಬುದ- ।
ನೊಳ್ಳಿತ್ತಾಗಱಿವವಂಗೆ ಜಿನವಚನಂ ತಾ- ॥
ನೊಳ್ಳಿತ್ತು ವಿಚಾರಿಸ[೬]ದಂ- ।
ಗೊಳ್ಳಿತ್ತಾಗಿಕ್ಕುಮತ್ತೆ ಲೋಗರ [೫]ಕುಮತಂ[೫] ॥ ೩೧ ॥

ಆರೋರ್ವ್ವರ ಕಥೆಗಳೊಳಂ ।
ಸಾರಮೆನಿಪ್ಪೆಡೆಗಳಾರಮತದೊಳ್ಕುಂಬಿ- ॥
ಟ್ಟಾರಯ್ಯೆ ಧರ್ಮ್ಮಮುಂಟದೆ ।
ಸಾರಂ ತಾನಲ್ತೆ ಭುವನದೊಳ್ ಜಿನಧರ್ಮ್ಮಂ ॥ ೩೨ ॥

ಜಿನಮುಖಹರ್ಮ್ಯಾಚಳಸಂ- ।
ಜನಿತಾಗಮಮಾರ್ಗ್ಗವಿಮಳಗಂಗಾಸ್ನಾನಂ ॥
ಮನುಜಂಗಘಹರಣಂ ಮ- ।
ತ್ತಿನ ಗಂಗಾಸ್ನಾನಮಿಂತು ತನುಮಳಹರಣಂ ॥ ೩೩ ॥

ಬಗೆವು[೭]ಗದು ಜೈನನಂದದೆ ।
ಮಿಗೆ ಪಾಟಿಸಿ ಕುಮತಿ ಕುಮತವಂ ಪಲ್ಲುಂ ನಾ- ॥
ಲಗೆ ತಪ್ಪುವನ್ನಮಿರದೋ- ।
ದುಗೆ ಸಮ್ಯಜ್ಞಾನಿಯಾಗಲೇನಱಿದಪನೇ ॥ ೩೪ ॥

ಸನ್ನುತ ಜೈನಾಗಮಸಂ- ।
ಪನ್ನಂ ತಾನೆನಿಸ[೮]ದಿತರಕುಮತಂಗಳೊಳು- ॥
ತ್ಪನ್ನಮತಿಮನಂಗೆಯ್ವುದು ।
ಹೊನ್ನಂಬಂ ನೀರೊಳಿಟ್ಟಿಕಿಡಿಪಂತಕ್ಕುಂ ॥ ೩೫ ॥

ಸಾರಾಸಾರದ್ವಿತಯ ವಿ- ।
ಚಾರಕ್ಷಮನೆನಿಸಿದವನೆ ಮಿಥ್ಯಾತ್ವದೆ ತಾ- ॥

---

೧. ಇ—ದ; ೨. ಇ—೨ಕ್ಕೆಜಿನಭಾಷಿತಮಂ ॥೨; ೩. ಅ—ಳ; ೪. ಇ—ಸಿ; ೫. ಇ—ಸಮತಮುಂಸ; ೬. ಇ—ಯು; ೭. ಇ—ಸಿ; ೮. ಅ, ಇ, ಈ—ಚ್ಚ;

ಎಂತೆಂತು ಓಕ್ಕಿ ನೋಳ್ಪಡ- |
ಮಂತಂತೆ ವಿಚಾರಸಹಮು[೧]ನಾ……[೧] ||
ದ್ಯಂತಂ ಜೈನಾಗಮ[೨]ಮನ[೨] |
[೩]ದಂತಿಂತುಂತೆಂದೆನಲ್ಕದೇಂ ಬಂದಪುದೇ[೩] || ೨೪ ||

ಅಂತುಟಿದಿಂ[೪]ತುಟು ಪೇಳಿ- |
ನ್ನುಂತುಟದೆಂಬಂತುಟಲ್ತು ಜೈನಾಗಮಮಾ- ||
ದ್ಯಂತನ್ನೆ ರಾಣೆಯ ಹೊ- |
ನ್ನಂತುಟು ಮಧ್ಯಸ್ಥವೃತ್ತಿಯಿಂ[೫] ನೋಳ್ಪಾಗಳ್ || ೨೫ ||

ಖಳಸಂಸೃ[೬]ತಿಯೆಂಬ ಮಹಾ- |
ಜಳನಿಧಿಯೊಳಗೆಂಟುತೆಱದ ಕರ್ಮ್ಮದ ವಶದಿಂ ||
ಮುಳುಗುತ್ತ[೭]ಲಿಪ್ಪ[೭] ಜೀವಾ- |
ವಳಿಗೆಲ್ಲಂ ಯಾನಪಾತ್ರಮರ್ಹತ್ಪ್ರೋಕ್ತಂ || ೨೬ ||

ಒಳಗಂ ಭೇದಿಸದನ್ನಂ |
ಚಳಬುದ್ಧಿಗೆ ಪೊಱಗುಬೆಟ್ಟಿತಾಗಿರ್ಕ್ಕುಂ ನಿಂ ||
ದೊಳಗಂ ಭೇದಿಸುತಿರೆ ನಿ- |
ರ್ಮ್ಮಳ ಬುದ್ಧಿಗೆ ತೆಂಗಿನಂತೆ ರುಚಿ ಜಿನವಚನಂ || ೨೭ ||

ಕ್ಷಿತಿಯೊಳ್ಮಿಥ್ಯಾಮಾರ್ಗ್ಗಂ |
ಸತತಂ ಸನ್ಮಾರ್ಗ್ಗಮಾವುದೆಂದಱಿಯದ ಸಂ- ||
ಸೃ[೮]ತಿಯ ಮನುಜಂಗೆ ಕಣ್ಣುಂ |
ಗತಿಯುಮದೆಂತಂ[೯] ತುಟಲ್ತೆ ಜಿನರಾಜಮತಂ || ೨೮ ||

ಎಡೆವರಿಯದೆ ಕಣ್ಗೆಟ್ಟಿ- |
ರ್ಪ್ಪಡಱಿಯೆ[೧೦]ಂನೊಳಗಱಿದು ನೆಱೆಯೆ ಬೆಳಗೆತ್ತಂ ನೋ- ||
ಳ್ಪಡೆ ಭಾವಕಂಗೆ ಕೈಗ- |
ನ್ನಡಿಯುವೊಲೆಸೆದಪುದು ನಿರ್ಮ್ಮಳಂ ಜೈನಮತಂ || ೨೯ ||

---

೧. ಇ—೧ನಾದ್ಯಂತನಾ೧; ೨. ಇ—೨ನದ೨; ೩. ಇ—೩ನಂತಿಂತುಂತೆನಲದಂತು-ಮೇಂಬಂದಪುದೇ೩; ೪. ಇ—ದಂ; ೫. ಇ—ಯೇಂ; ೬. ಆ, ಇ—ಶೃ; ೭. ಇ—೭ತ್ತಿಪ್ಪವು೭; ೮. ಆ, ಇ—ಶೃ; ೯. ಇ—ತೆಂ; ೧೦. ಇ—ಯ;

ಒಳಗಱಿಯದಿದಿರ್ದ್ದಿಕ್ಕೆಮ ।
ತಿಳಿದೊಳ್[1]ಪೊಕ್ಕಂಬಳಿ[2]ಕ್ಕೆ ಭಾಷಿತಮಂ ತಾಂ[2] ॥
ಚಳಮನ[3]ನಾಗದೆ ಬಗೆದೊಡೆ ।
ಖಳನುಂ ಜೈನಬ್ರತಕ್ಕೆ ಘುಳಿಲನೆ ಬಕ್ಕುಂ ॥ ೨೦ ॥

ಒಳ್ಳಿತ್ತು ಹೊಲ್ಲದೆಂಬುದ- ।
ನೊಳ್ಳಿತ್ತಾಗಱಿವವಂಗೆ ಜಿನವಚನಂ ತಾ- ॥
ನೊಳ್ಳಿತ್ತು ವಿಚಾರಿಸ[4]ದಂ- ।
ಗೊಳ್ಳಿತ್ತಾಗಿಕ್ಕುಮತ್ತೆ ಲೋಗರ [5]ಕುಮತಂ[5] ॥ ೨೧ ॥

ಆರೋರ್ವ್ವರ ಕಥೆಗಳೊಳಂ ।
ಸಾರಮೆನಿಪ್ಪೆಡೆಗಳಾರಮತದೊಳ್ಕುಂಬಿ- ॥
ಟ್ಟಾರಯ್ಕೆ ಧರ್ಮ್ಮಮುಂಟದೆ ।
ಸಾರಂ ತಾನಲ್ತೆ ಭುವನದೊಳ್ ಜಿನಧರ್ಮ್ಮಂ ॥ ೨೨ ॥

ಜಿನಮುಖಹಮ್ಯಾ್ರಚಳಸಂ- ।
ಜನಿತಾಗಮಮಾರ್ಗ್ಗವಿಮಳಗಂಗಾಸ್ನಾನಂ ॥
ಮನುಜಂಗಘಹರಣಂ ಮ- ।
ತ್ತಿನ ಗಂಗಾಸ್ನಾನಮಿಂತು ತನುಮಳಹರಣಂ ॥ ೨೩ ॥

ಬಗೆವು[6]ಗದು ಜೈನನಂದದೆ ।
ಮಿಗೆ ಪಾಟಿಸಿ ಕುಮತಿ ಕುಮತಮಂ ಪಲ್ಲುಂ ನಾ- ॥
ಲಗೆ ತಪ್ಪುವನ್ನಮಿರದೋ- ।
ದುಗೆ ಸಮ್ಯಜ್ಞಾನಿಯಾಗಲೇನಱಿದಪನೇ ॥ ೨೪ ॥

ಸನ್ನುತ ಜೈನಾಗಮಸಂ- ।
ಪನ್ನಂ ತಾನೆನಿಸ[7]ದಿತರಕುಮತಂಗಳೊಳು- ॥
ತ್ಪನ್ನಮತಿಮನಂಗೆಯ್ವುದು ।
ಹೊನ್ನಂಬಂ ನೀರೊಳಿಚ್ಚ್ರಿಕಿಡಿಪಂತಕ್ಕುಂ ॥ ೨೫ ॥

ಸಾರಾಸಾರದ್ವಿತಯ ವಿ- ।
ಚಾರಕ್ಷಮನೆನಿಸಿದವನೆ ಮಿಥ್ಯಾತ್ವದೆ ತಾ- ॥

---

೧. ಇ—ದ; ೨. ಇ—ರಿಕ್ಕೆಜಿನಭಾಷಿತಮಂ ॥೨; ೩. ಅ—ಳ; ೪. ಇ—ಸಿ; ೫. ಇ—ಸಮತಮುಂ೫; ೬. ಇ—ಯು; ೭. ಇ—ಸಿ; ೮. ಅ, ಇ, ಈ—ಚ್ಚ್ರ;

ನೋರಂತೆ ನಮೆವಡಕ್ಕಟ।
ನೀರೊಳು ಕಿಚ್ಚೆದ್ದೊರ್ಡೇತಱಿಂದಾಱಿಸುವರ್ || ೩೬ ||

ಫಳಮಱಿಸುವಂಗೆ ರುಚಿನಿ-।
ರ್ಮ್ಮಳಜಿನಮತದಲ್ಲಿ ಪುಟ್ಟೆ ಬೇಡಿದ ಕಾಡೊ-॥
ಳ್ಮಳೆಕೊಂಡುದೆಂದು ಸಂತ[?]ಸ।
ದೊಳು ನಿಚ್ಚಂ ನಿಚ್ಚವೊಲ್ದು ಭಾವಿಪುದಱಿವಂ || ೩೭ ||

ವೃ|| ಜಿನದೇವಂ ದೇವನಾ ದೇವನೆ ನುಡಿದುದೆ-
ಸಿದ್ಧಾಂತಮಾಜ್ಞಾನರೂಪಂ-।
ಮನವೊಲ್ದಾನಂದದಿಂ ತಾಳ್ದಿದ ತಪಮೆ-
ಮತ್ತಮಿಂದ್ರಾದಿ ಪೂಜಾ-।
ರ್ಹನ ಮಾರ್ಗ್ಗಂ ಮೋಕ್ಷಮಾರ್ಗ್ಗಂ ದಿಟಮಿದು-
ಪೆಱತಲ್ತೆಂದು ಕೈಕೊಂಡಪುಣ್ಯಾ-।
ತ್ಮನೆ ಭವ್ಯಂ ಸೇವ್ಯನತ್ಯುತ್ತಮನನಘನವಂ-
ಸರ್ವ್ವಲೋಕೈಕಪೂಜ್ಯಂ || ೩೮ ||

ಕಂ|| ನರನಂ ಮುಕ್ತ್ಯಂಗನೆಯೊ-।
ಳ್ನೆರಪಲ್ ಜಿನವಚನದೂತಿಯಲ್ಲದೆ ಜಗದೊ-॥
ಳ್ಪರಿಣತರಿಲ್ಲದಱಿಂ ತಡ।
ದಿರದಱಿಗೆ ತದೀಯಹೃದಯಮುಂ ಭವ್ಯದಿಟಂ || ೩೯ ||

ಭಾವನೆಮಿಗೆ ಜಿನಮತಮಂ।
ಭಾವಿಸಿ ಕೇಳಲೊಡನಂತೆ ಕಳ್ಗಿಡಿವವನುಂ॥
ಶ್ರಾವಕನಕ್ಕುಂ ಬಳಿಯಂ।
ದೇವಂ ತಾನೆನಿಕುಮುತ್ತಮ ಬ್ರತದಿಂದಂ || ೪೦ ||

ಪರಮ ಜಿನೋಕ್ತವ್ರತದೊ-।
ಳ್ಗುರುಗಳ್ನಿಯಮಿಸಿದ ಮೋಕ್ಷಮಾರ್ಗ್ಗದ ಮಾತಂ॥
ನಿರುತಮ್ಮೀರಲ್ಸಲ್ಲದು।
ಗುರುವಚನಮಲಂಘ್ಯನೀಯಮೆಂಬುದನಱಿಯಾ || ೪೧ ||

---

೧. ಇ—ತೊ;

ಗುರುವೆಂಬುದಱಿಂ ಪ್ರಾಕೃತ ।
ಪುರುಷನು[1] ಪೇಳ್ದಂ[2]ತೆ ಗೆಯ್ವರೆಂದಡೆ [3]ಜಾಡ[3]ರೆ- ॥
ನೆ ನೆಗಳ್ವ ಜಗತ್ರಯದೊಳ್ ।
ಗುರು ಬೆಸಸಿದ ಮಾರ್ಗ್ಗದಿಂದೆ ನಡೆಯಲ್ವೇಡಾ ॥ ೪೨ ॥

ವೃ॥ ಕದಡದೆ ಚಿತ್ತದೊಳ್ಕಲುಷಮಂಗೆಡೆಗೊಳ್ಳದೆ-
ಪೋಗಿದೇತರೆ- ।
ನ್ನದೆ ಸಲೆ ಮುಕ್ತಿಯಂ ಕಿಡಿಸಿ ದಾಂಟದೆ-
ಸಾರಮನಪ್ಪುಕೆಯ್ದು ಸಾ- ।
ರದ ದೆಸೆಯಾಗದೀತೆಱದೆ ಕೇಳ್ವವರುಳ್ಳಡೆ ಲೋಕಸಾರಮ- ।
ಭ್ಯುದಯಸುಖೈಕಹೇತುಜಿನಮಾರ್ಗ್ಗಮೆ-
ಮುಕ್ತಿಗೆ ಮಾರ್ಗ್ಗಮೆಲ್ಲಿಯುಂ ॥ ೪೩ ॥

ಕಂ॥ ಎಂತಕ್ಕುಮೆಂದು ಮನದೊ- ।
ಳ್ಚಿಂತಿಸಿ ಮಱುಗದಿರು ಮರುಳೆ ಸರ್ವ್ವಜ್ಞಂ ಪೇ- ॥
ಳ್ದಂತುಟು ನಿಶ್ಚಯಮದಱಿಂ ।
ಭ್ರಾಂತಂ ಬಿಟ್ಟೊಲ್ದು ಕೇಳ್ಗೆ ಜೈನಾಗಮಮಂ ॥ ೪೪ ॥

ಓರಂತ ಪಥ್ಯಕುಮತಾ- ।
ಹಾರದೆ ಜಡನಾದ ದೇಹಿಯಂ ಸರ್ವ್ವಜ್ಞೋ- ॥
ದೀರಿತದರವಚನಸುಧಾ- ।
ಹಾರಮೆ ಪಟುಮಾಳ್ಕುವುಳಿದವಾಕ್ಯ್ಯಮೆ ಮಾಡಲ್ ॥ ೪೫ ॥

ಕಳಿಮಳಿನ ಕುಮತಸಂಗತ ।
ಕಳಂಕಮಂ ಕರ್ಚ್ಚಿ ಕಳೆವೊಡಭವೋದಿತ ನಿ- ॥
ರ್ಮ್ಮಳವಾಕ್ಸುಧಾಂಬುಪೂರಮೆ ।
ಕಳೆಗುಂ[4]ಮಳ್ತಿನ [4]ದುರುಕ್ತಿಗಳ್ಕಳದಪುವೇ ॥ ೪೬ ॥

ಅಭಿಮತಸುಖದೊಳ್ಕೂಡುವ ।
ಶುಭಪರಿಣಾಮಮನೆ ಕೇಳ್ವೊಡಘವಿರದದಱಿಂ- ।
ದಭಿವಿನುತ ಜೈನಸೂಕ್ತಿ- ।
ಪ್ರಭಾವಮಂ ಬಣ್ಣಿಸಲ್ಕೆ ನೆಱಿವಪನಾವಂ ॥ ೪೭ ॥

೧. ಇ—ನ; ೨. ಇ—ಳ್ವಂ; ೩. ಇ—[3]ಬ್ಯಾದ[3]; ೪. ಇ—[4]ಮಳಿನರ[4];

ಭವಜಳಧಿಮಗ್ನಮಾನವ ।
ನಿವಹ[೧]–ಮು[೧]ತ್ತಾರಣೈಕಕಾರಣಮಂ ಭೂ- ॥
ಭುವನಸ್ತುತಮಂ ಕೇಳ್ವುದು ।
ವಿವೇಕಿಗಳ್ ಸೌಖ್ಯಸಾರಮಂ ಜಿನಮತಮಂ ॥ ೪೮ ॥

ತಿಮಿರಂ ಸೂರ್ಯಾಂಶುಗಳಿಂ- ।
ದಮೆ ಕರಗುವ ತೆಱದೆ ಕರಗುಗುಂ ದುರಿತಂ ವಿ- ॥
ಶ್ವಮನೆಯ್ದೆ ಕಾಣ್ಬ ಬೋಧಂ ।
ಸಮನಿಸುಗುಂ ಕೇಳಲೊಡನೆ ಜೈನಾಗಮಮಂ ॥ ೪೯ ।

ನಿರ್ಮ್ಮಳಮನನಕ್ಕುಂ ದುಃ- ।
ಕರ್ಮ್ಮಂಗಳ ವಸಕೆ ಸಲ್ಲನೆಲ್ಲಂದದೊಳಂ ॥
ಧರ್ಮ್ಮಂಗೆಯ್ಯಲ್ಬಯಸುಗು- ।
ಮೊರ್ಮ್ಮೆ ಜಿನಾಗಮಮನೋಜೆಯಿಂ ಕೇಳ್ದಸರಂ ॥ ೫೦ ॥

ಮನವಲಸದೆ ಜೀವಂಗಳ- ।
ನನಿಶಂ ಘಾತಿಸುವ ಪಾಪಿ ಸೂರನುಮಾದಂ ॥
ಜಿನನುತ್ತಮಮತಮಂ ಕೇ- ।
ಳ್ದನಿತಱೊಳಂ ಕೊಲ್ವ ಕೊಲೆಗೊಡಂಬಡಲಱಿಯಂ ॥ ೫೧ ॥

ಮನುಜಂ ದ್ವಿಪಾದಪಶು ತಾ- ।
ನೆನಿಪವನುಂ ಭಕ್ತಿವೆರಸು ನಿಶ್ಚಳಮತಿಯಿಂ ॥
ಜಿನಮತಮನರ್ತಿಯಿಂ ಕೇ- ।
ಳ್ದ ನರಂ ತಾಂ ಜೈನನೆನಿಸಿ ಪಂಡಿತನಕ್ಕುಂ ॥ ೫೨ ॥

ನೋಗರು ಮಾಡಿದ ಪಲತೆಱ- ।
ದಾಗಮುಮಂ ಕೇಳ್ದು ನಿಟ್ಟೆಗೊಳ್ಳದವಂ ಕೇ- ।
ಳ್ವಾಗಳೆ ಸನ್ಮತಿಯಕ್ಕುಂ ।
ಬೇಗಂ ತ್ರೈಲೋಕ್ಯಹಿತಮೆನಿಪ್ಪಾರ್ಹತಮಂ ॥ ೫೩ ॥

ಪಲತೆಱದಾಗಮುಮಂ ಕೇ- ।
ಳ್ದಲ[೩]ಸದೆಯಿಂದಂ[೩] ಯಥೇಷ್ಟ[೪]ಮಾನಧನಂ[೪] ನಿ- ॥

---

೧. ಇ—೧ಹಸಮು೧; ೨. ಇ—ತಂ; ೩. ಇ—೩ಲಸಿಕೆಯಿಂ೩; ೪. ಇ—೪ನಾದವನುಂ೪;

ಮ್ರ್ಖಳಚಿತ್ತನಕ್ಕುಮಘುಮಂ ।
ಗೆಲಲಾಕ್ರ್ಕಂ ಕೇಳಲೊಡನೆ ಜೈನಾಗಮಮಂ ॥ ೫೪ ॥

ಅತಿಕಾಮಾತುರನೆನಿಪಂ ।
ಸಿತಗಂ ಕಳಬಳಿಗನೇಣಗೋಣಂ ಮೂರ್ಕ್ಖಂ ॥
ತತನಱಿಯನೆನಿಪ್ಪಂ ಜಿನ- ।
ಮತಮಂ ಕೇಳ್ವಾಗಳನಘುನಕ್ಕುಮಭವ್ಯಂ ॥ ೫೫ ॥

ಕಲಹಕ್ಕೆ ಕಚ್ಚೆವಾಸುವ ।
ತಲೆವೊತ್ತೆ ಕೆರಳ್ವ ಜಗಳವಾಡುವನುಂ ತಾಂ ॥
ಸಲೆ ಬೈಸಿಸಿಕೊಳ್ವಂ ನಿ. ।
ಮ್ರ್ಖಳನಕ್ಕುಂ ಕೇಳಲೊಡನೆ ಜೈನಾಗಮಮಂ ॥ ೫೬ ॥

ಜಿನಮತಮಂ ಕೇಳದರೊಳ ।
[೧]……[೧]ನೋವಿಲ್ಲ ಕೇಳ್ದಡೆಂತಪ್ಪಂಗಂ ॥
ಮನದೊಳ್ನೋವಕ್ಕುಂ ಕೆ- ।
ಮ್ಮನೆ ಪೆಱಗಣಕಾಲಮಂತೆ ಪೋದವೆನುತ್ತಂ ॥ ೫೭ ॥

ಎ[೨]ಯ್ದುವುದುಂ ದುರ್ಗ್ಗತಿಗಳ- ।
ನೆಯ್ದಿ[೨] ಕರಂ ಸೆದೆಗೆಟ್ಟು [೩]ಘಾಸಿ[೩]ಸಿ ಬಿ೧ಿಯುಂ ॥
ಬಯ್ದುಂ ಮಱುಗದೆ ಮುಕ್ತಿಯ- ।
ನೆಯ್ದುವನಾರ್ಹತಮನೊಯ್ದು ಭಾವಿಪುದಱಿವಂ ॥ ೫೮ ॥

ವಿಕಳತೆಯಿನನಂ ತಾನಂ- ।
ತಕಾಲಮುಂ ಜೈನಮಾರ್ಗ್ಗಮಂ ಕಾಣದೆ ಮು- ॥
ನ್ನಕಟಕಟ ಕೆಟ್ಟೆನೀಮು- ।
ತ್ತೆ ಕೆಡದಿರೆಲೆ ಜೀವ ಭಾವಿಸರುಹನ ಮತಮಂ ॥ ೫೯ ॥

ಪರಮ ಜಿನಮಾರ್ಗ್ಗಮಂ ಸ- ।
ದ್ಗುರುಗಳ್ದಯೆಯಿಂದೆ ತೋಱಿ[೪] ತಾ[೪]ಳ್ವುದು ನೀನಾ- ॥
ದರದಿಂದಮೊಡಂಬಡುವುದು[೪] ।
ಸಿರಿಬರೆ ಮೊಳಕಾಲನಾಂಪ[೫]ರಾದ[೫]ರುಮೊಳರೆ ॥ ೬೦ ॥

---

೧. ಇ—೧ಮನದೊಳು೧; ೨. ಇ—೨ಎಯ್ದಿದ ದುರ್ಗ್ಗತಿಗಳನಿರ| ದೆಯ್ದಿ೨; ೩. ಇ—೩ದೂರಿ೩; ೪. ಇ—೪ತಾಳ್ದುವುದು ನಿರಾಧರನಾಗವೇಡದಿಟದಿಂ।೪; ೫. ಇ—೫ಗಾಂಪ೫;

ನರಕದ ದುಃಖವನುಣುತಂ |
ಸುರರಾ[೧]ಜಂ ಜೈನ[೨]ಧರ್ಮ್ಮಮಂ ತಿಳಿಪಿದೊಡಾ- ||
ದರದಿಂದೆ[೨] ಧರ್ಮ್ಮಮಂ....|
......ಪಡೆಯಲ್ಕೆ ಪೇಳಿ[೨]ಮೆಂಬರೊ ಪೇಳಿಂ || ೬೧ ||

ಕ್ಷುತ್ತಂಗುಳಿಗಾಹಾರಂ |
ಪೊತ್ತಂಬಡೆ ಪುಗಿಸಿ ಪೊಯ್ಯನೂಡುವವೋಲ್ ದು- ||
ವ್ವೃರ್ತ್ತಂಗೆ ಜೈನಮಾರ್ಗ್ಗಮ- |
ನೊತ್ತಂಬದೆ ಪೇಳಲೊಯ್ಯ[೩]ಲಜೀವನೆ ಚದುರಂ[೩] || ೬೨ ||

ವೃ|| ಬಾವಿಯೊಳಿರ್ದ್ದ ಪಾವಸೆ ತುಳುಂಕಲು[೪]-
ಕಲ್ಲೊಡೆದಂತೆ[೪] ಮತ್ತೆಯುಂ |
[೫]....ಮೆ ಪೇಳ್ವ ಪೇ[೫]ಳ್ವ ಪದದೊಳ್ಜಿನ-
ಮಾರ್ಗ್ಗಮನೊಳ್ಪಿತಾದೊಡಂ |
ಭಾವಿಸು [೬]ತಂತು[೬]ಮಂ ಪೊರೆದು [೭]ಮಾರೊಳ-
ದಾಳ್ವರನಂತುಟಾದೊಡ[೭]- |
ನ್ನೇವರರ್‌ರಾಯ್ಯ್ರಭೂವರರರ್ ಸಂಚಿತದುಷ್ಕೃ[೮]ತ-
ಕರ್ಮ್ಮಮು[೯]ಳ್ಪಿನಂ || ೬೩ ||

ಕಂ|| ಸಲೆ ನವೆವ ರೋಗಿ ಬೇಗಂ |
ತಲೆಯತ್ತಲ್ಕಾ[೧೦]ಡಿ ನವೆವರ್ನ್ನರಮತದೊ- ||
ಳ್ಪಲಕಾಲಂ[೧೦] ಭಾವಿಸಿ[೧೧]ದವ- |
ನಲಸಿಕೆಯಿಂದಾರ್ಹತಕ್ಕ[೧೧]ಮೆಂದುಂ ಬಾರಂ[೧೧] || ೬೪ ||

ಜ್ವರಿತಂಗೆ ದುಗ್ಧಪಾನಂ |
ಪಿರಿದುಂ ಸೊಗಯಿಸದ ತೆಱದೆ ಮಿಥ್ಯಾತ್ವಮಹಾ ||
ಜ್ವರಿತಂಗೆ ಸುಧಾಪ್ರತಿಮಂ |
ಪರಮಜಿನೇಂದ್ರಾಗಮೋಕ್ತಿಮೋಹಿಸದೆಂತುಂ || ೬೫ ||

---

೧. ಇ—೧ರುಂಬುದು೧; ೨. ಇ—೨ದಂಕೇಳ್ವರ್ಮ್ಮನು| ಜರೆತಾಂ ಕೇಳಲ್ಕೆಪಡೆಯೆ೨ ೩. ಇ—೩ನಜ್ಜಿಪುವುದಜೀವಂ||೩; ೪. ಇ—೪ಲೊಡಂ ತಿಳಿದೆಂತು೪; ೫. ಇ—೫ತೀವುಗುಮಂತೆಕೇ೫; ೬. ಇ—೬ಗುಂತ೬; ೭. ಇ—೭ವಾತವುದೆಳು ನರನಂತುಟಾರಲಿ೭; ೮. ಇ—೮ವಾಯ್ಯರ್ಪೂರ್ವ್ವಭವ೮; ೯. ಇ—೯ಜಿನಂತಿರ್೯; ೧೦. ಇ—೧೦ಬವ ಪೀಪಿ೧೦; ೧೧. ಇ—೧೧ಕ್ಕೆಮೆಯ್ದುರಲಾಜಿಂ೧೧;

[೧]ಜೈನರ ಮತಮಂ ಕೇಳ್ವುದು ।
....॥
...............................।
....[೧] ॥ ೬೬ ॥

ಇದು ತಕ್ಕುದು ತಗದು[೨]ದುವೆಂ[೨]- ।
ದಿದುವಾಗಮಮಿದುವೆ ಸತ್ಪಥಂ ದುಷ್ಪಥಮೆಂ- ॥
ದಿದನಱಿಯದೆ[೩] ....।
..........ಮೋಕ್ಷಮಾರ್ಗ್ಗಮಂ ಜಿನಮತದೊಳ್[೩] ॥ ೬೭ ॥

ಮೊಟ್ಟೈಸೆವನ್ಯಸಮಯಿಗ- ।
ಳೊಟ್ಟಜೆಯಿಂ ಮಾಡಿದಾಗಮಂಗಳ್ ಬಗೆಯಿಂ- ॥
ದಟ್ಟು ಸವಿನೋಡದಂದಮೆ ।
ನಿಟ್ಟಿಸಲದು ಮೋಕ್ಷಮಾರ್ಗ್ಗಮಂ ಜಿನಮತದೊಳ್ ॥ ೬೮ ॥

ಲೋ[೪]ಗರು ಮಾಡಿದ ಪಲತೆಱ- ।
ದಾಗಮ[೫]ಮುಂ ಯುಕ್ತಿಪಲವುತಾನುಂತುಂ[೫] ಜೈ- ॥
ನಾಗಮದೃಷ್ಟಂ ನಿಶ್ಚಯ- ।
ಮಾಗಿಕ್ಕುಂ ಕೋಟಿತೆಱದೊಳಂ ನೋಡುವೊಡಂ ॥ ೬೯ ॥

ಜಿನಮತಮನಱಿದವಂ ಮ- ।
ತ್ತಿನಾಗಮಂಗಳನುಮೋದುವಂದವಱವಱೊ- ॥
ಳ್ಪಿನಿಸುಂ ನಿಶ್ಚಯ[೬]ಮೆ....[೬]- ।
[೭]..ನೆ ಮೆಚ್ಚಿದ ತೆಱನಂತೆ ನಡೆವುತಿಪ್ಪುದಱಿಂದಂ ॥ ೭೦ ॥

ಪರಮತದೊಳಗೆತ್ತಾನುಂ ।
ಪರಿಕಿಸುವಡೆಯುಕ್ತಿಸಹಮೆನಿಪ್ಪೋದುಗಳೊಂ ॥

೧. ಇ—೧ಜಿನಮತಮಂ ಕೇಳ್ದಂ ಮು । ನ್ನಿನಸಿತಮತಮಂ ಬಿಸುಳ್ಪನಲ್ಲಂ ಸಲಿದು ॥
ಮ್ಮರ್ನುಜಂಮತ್ತಿರ್ಕುಮೆಂ। ತೆನೆಅಪಾರಸಾರಗುಣಿಯೆನಿಸುವಾತ್ಮದ್ರೋಹಂ॥೧;
೨. ಇ—೨ದಾಗಮ೨; ೩. ಇ—೩ಕುಮತಿಗಳೂ । ಳ್ವದನಾಗಮವೆಂದು ನಂಬಿಕಿಡುವ-ಮೂರ್ಖರ್ ॥೩; ೪. ಇ—ನೋ; ೫. ಇ—೫ಯುಕ್ತಿಗಳೆಯುಕ್ತಿ ಸಹಮಲ್ಲವು೫; ೬. ಇ—೬ನಿಲ್ಲೆಂ೬; ೭. ಇ—೭ತೆನೆನೆಮೆಚ್ಚಿದ ತೆಱದೆನುಡಿವರಪ್ಪುದಱಿಂದಂ ॥೭;

ದೆರ[೧]ಡೊಳವುಂ ಜಿನಮತಸರ[೧] ।
ಸರಧಿಯ ಶಿಖರಕ್ಕೆ ನೋಡೆಬೇಱಿಲ್ಲಿಂತುಂ ॥ ೭೧ ॥
ಅತ್ತಿಯ ಪಣ್ಣಂದದಿ ನೊ- ।
ಳ್ಪಿತ್ತಪ್ಪುದು ಪೊಱಗೆ ನೋಳ್ಪನೆಂದೊಳಗಣದೊ- ॥
ಳ್ಪಿತ್ತಲ್ತದನ್ಯಸಮಯದ।
ಪೊತ್ತಗೆಗಳ್ ಜೈನಮತದ ಪೊತ್ತಗೆಗೆಣೆಯೇ ॥ ೭೨ ॥
ನೋಡದ ಮುನ್ನಮದಕ್ಕುಮ ।
ರೂಢಿಯ ಜಿನಮತಮನನ್ಯಮತದಾಗಮಮುಮಂ ॥
ನೋಡಿ ಬಳಿಕ್ಕಂ ಪೇಱರಂ ।
ನೋಡೆ ಜರತ್ತೃಣಲವಂಗಳೆನಿತೊಳವನಿತುಂ ॥ ೭೩ ॥
ನಾಡೊಳಗೆ ಬೆಳ್ಳಿಕಟ್ಟಂ ।
ಮಾಡುವನುಂ[೨] ಪೊನ್ನನಿಕ್ಕಿಮಾಳ್ಪಂದನಿಬ- ॥
ರ್ಮ್ಮಾಡುವರರುಹನ ಮತದೊಳ್।
ಕೂಡಿ ಕರಂ ಮೇರೆಗೆಟ್ಟು ಪುಸಿಯೋದುಗಳಂ ॥ ೭೪ ॥
ಜೈನಾಗಮಮಮೃತಾಬ್ಧಿಯೊ- ।
ಳೇನುಂ ದೊರೆಕೊಂಡುದದಱಬಲದಿಂದಂ ತಾ- ।
[೩]ನೇ ಸಂದಯಮೆನಿತುಂ-[೩] ।
[೪]ತಾನಯಮಾಗಿಕ್ಕುವ[೪]ನ್ಯಸಮಯಕ್ಕೆಲ್ಲಂ ॥ ೭೫ ॥
ಪುಸಿಯಂ[೫]………… ।
………………………………………॥
ಜಿಸೆಜೈನ…………ಬ[೫] ।
ಣ್ಣಸರಂಗೊ[೬]ಳ್ವಂತೆ[೬] ಧರ್ಮ್ಮಶಾಸ್ತ್ರಂ ಪೇಳ್ವರ್ ॥ ೭೬ ॥
ಉತ್ತಮವೆನಿಸಿದ ಮಾತುಗ- ।
ಳೆತ್ತಾನುಂ ಅನ್ಯರಾಗ[೭]ಮೋಕ್ತಿಗ[೭]ಳಂ ತಾ ॥

---

೧. ಇ—೧ಡುಳ್ಳಡವು ಜಿನಮತ೧; ೨. ಇ—ಡಂ; ೩. ಇ—೩ವೇನಂ ಮಾಡಿದೊಡಂ-ತದು ।೩: ೪. ಇ—೪ತಾನಾಗವ ಮಾದುದಳ೪; ೫. ಇ—೫ದಿಟವುಂ ಸುಕೃತವು । ನಸುಕೃತವುಂ ಕಾಳಿಗವುಡಹಿಂಸೆಯುನೊಡನೊಂ ॥ ದಿಸಿಜೈನರಲ್ಲದರ್ಬ್ಬ೫; ೬. ಇ—೬ಗೋದಂ೬; ೭. ಇ—೭ಮಂಗಳೊ೭;

ಉತ್ತಮವೆನಿಸಿದ ನುಡಿಗಳ್ ।
ಮತ್ತಿನ ದುರ್ವ್ವಚನಮುಂಟೆ ಜೈನಾಗಮದೊಳ್ ‖ ೭೭ ‖

ಅಣುಮಾತ್ರಮಸತ್ಯ[೧]ಮದಾ- ।
ಗಣುವಿಲ್ಲ[೧] ಜಿನೇಂದ್ರಮತದೊಳೆಂತುಂ ನೋಳ್ಪಾ- ‖
ದಣಕದ ಪುಸಿಯೊಂದೆರಡೆ- ।
ಯೆಣಿಸುವಡವು ಲೆಕ್ಕಮಿಲ್ಲ ಮಿಕ್ಕಿನ ಮತದೊಳ್ ‖ ೭೮ ‖

ಮೊದಲಲಿ ಮುನ್ನೋರ್ವ್ವಂ ಪೇ- ।
ಳ್ವು[೨]ದುಮಿಲ್ಲಂ ಯಿನ್ನು ಮುನ್ನ ನುಡಿಯುಳ್ಳಡೆ ಪೇ- ‖
ಳ್ವುದುಮಿಲ್ಲ ಪೇಳ್ವುದಿಲ್ಲಂ ।
ಮೊದಲುಂ ಮುತ್ತತುದಿಚಂದನ[೨]ವೆನ್ನವನ್ಯಮತಂಗಳ್ ‖ ೭೯ ‖

ಅಡಗಡಗ ಮಚ್ಚಿದಂದಮೆ- ।
ನುಡಿಯದುದಾಗಮಮೆನಿಕ್ಕುಮಲ್ಲದೆ ಭಾಗಂ ‖
ಮಡಿಮೈಲಗೆಯುಂತಿರಲೇ- ।
ನೆಡಂಬಡಂ ನುಡಿಯದಂಶಿದೇನಾಗಮಮೋ ‖ ೮೦ ‖

ನುಡಿ[೩]ದಂತೆ[೩] ನಿಶ್ಚಯುಂ [೪]ಸಲೆ ।
[೫]ನುಡಿಯುದ ತಾಂ ಬಾಯ್ಗೆ ಬಂದುದಂ ನುಡಿಯುದುದಂ ‖
[೬]..........[೬]ಪರಸಮ[೭]ಯುದ[೭] ।
ನುಡಿಯಲ್ಲದೆ ತಪ್ಪನುಡಿಯಲಱಿವರೆ ಜೈನರ್ ‖ ೮೧ ‖

ನೋಡಲದು ಯುಕ್ತಿಯಿಂದಂ ।
ರೂಢಿಯ ಜಿನಮತಮನನ್ಯಮತಮಂ ತಾನುಂ ‖
ನೋಡುವು[೮]ದಯುಕ್ತಮದಕೊಂ- ।
ಡಾಡುವುದನುಚಿತಮುಮೆಂದುಮೆಂಬಜ್ಜೈನರ್[೮] ‖ ೮೨ ‖

---

೧. ಇ—೧ದಮಾ । ತಣವ೧; ೨ ಇ—೨ದಿಲ್ಲದಿನ್ನಿಂತುಟೆಂಬನುಡಿಯುಳ್ಳೊಡೆಪೇ ‖ ಳ್ದದುದಿಲ್ಲ ಮೊದಲು ಮುತ್ತಂ । ತುಟಚಂದನನವೆನಿಪುವಿ೨; ೩. ಇ—೩ದುದನೆ೩; ೪. ಇ—ನಿ; ೫. ಇ—೫ನುಡಿಯುದೆ ಬಾಯುತ್ತ ಬುದುದಂ ತಾ ತೆಱದಿಂ ‖೫; ೬. ಇ—೬ನುಡಿವುದು೬; ೭. ಇ—೭ಯುಂಗಳ೭; ೮. ಇ—೮ದೆಯುಕ್ತಿಯುಂ ಮು । ನ್ನಾಡಿದವಚನಮನೆಮ್ಮಗಳ್ದುಮಲ್ಲೆಂಬದಱಿಳೊಳ್ ‖೮;

ನುಡಿವುದನೆ ನುಡಿಯರೆರಡಂ ।
[೧]ಉಡುವಿನ ನಾಲಗೆಯು ಜಡರನುತ್ತಮ.......॥
....[೧] ।
ನುಡಿಗಳ ದಿಟವಲ್ಲವೆನಿಪನಾತ್ಮ[೨]ನುಮಲ್ಲಂ ॥ ೮೩ ॥

ತಪ್ಪಂ ನುಡಿವರ ಮತದೊ- ।
ಳ್ತಪ್ಪದು ಸುಖ[೩]....ಮೆಂ[೩]ದು ನಡೆ[೪]ವಡೆ[೪]ಸುಖಮೇ- ॥
ನಪ್ಪುದು ತೊಱೆಯೊಳ್ಪೋಪಂ ।
ತೆಪ್ಪಮೆಗೆತ್ತಿಹಿಯನೆಯ್ದಿ ಪಿಡಿವಂತಕ್ಕುಂ । ೮೪ ॥

ವೃ॥ ಕುರುಡಂ ಲಾವಗೆ ಮೆಟ್ಟಿದಂತೆಸೆವ ಸದ್ಧರ್ಮ್ಮಂಗಳಂ-
ಪೇಳ್ವಲೋ- ।
ಗರದೊಂದಾಗಮಮಾರ್ಗ್ಗದಿಂದೆ ನಡೆಯಲ್ಕೈ-
ಸಾಗ್ಗ್ರಮೋ ಸೌಖ್ಯಮಾ- ।
ದರದಿಂದಂ ಕಡೆಗೆಯ್ದುವನ್ನೆವರೆಗಂ ಸನ್ಮಾರ್ಗ್ಗಮಂ-
ಪೇಳ್ವ ಜೈ- ।
ನರದೊಂದಾಗಮಮಾರ್ಗ್ಗದಿಂ ನಡೆದವಂಗಪ್ಪಂತೆ-
ಸೌಖ್ಯಾವಹಂ ॥ ೮೫ ॥

ಕಂ॥ ಕ್ರಮುವಱಿಯದಿತರ ಕುಮತ ।
ಕ್ರಮದೆ ತಪಂಗೆಯ್ದು ನಮೆದು [೫]ನಟ್ಟಡಮತ್ತಂ ॥
ಕಟಕಟಮೆ ಮತ್ತದಂ ಜೈ- ।
ನಮಾರ್ಗ್ಗದಿಂ ನಡೆಯೆ ಮುಕ್ತಿಯಕ್ಕುಮಮೋಘಂ ॥ ೮೬ ॥

ನೆಱೆಜಿನಮಾರ್ಗ್ಗದೆ ನಡೆದಡೆ ।
ಕೊಱೆಗುಂ ಕರ್ಮ್ಮಂಗಳುಳಿದ[೬]ಮತದೊಳ್ಕರ್ಮ್ಮಂ ॥
ಕೊಱೆದಪುದೆ ಪಱುಗೋಲಿಂ ಪಾಯ್ವಂದದೆ ।
ಮೊಱಿನಿಂದಂ ಪಾಯ್ವೆನೆಂಬ ಮರುಳಂ ಪೋಲ್ಕುಂ[೬] ॥ ೮೭ ॥

---

೧. ಇ—೧ನುಡುವಿನ್ನಾಲಗೆಯುಜಡರನುತ್ತಮರೆನವೇ॥ ಡುಡುವೆಂಬುದುಪಾವೆಂಬುದು೧; ೨. ಇ—ಪ್ತ; ೩. ಇ—೩ಖಹೇತುವೆಂ೩; ೪. ಇ—೪ನುಡಿ೪; ೫. ಇ—೫ನಾರುಟ್ಟಡ ಮಾ॥ಕ್ಕುಮೆ ಸುಗತಿ ಮರುಳೆನಿಂ೫; ೬. ಇ—೬ದರೊಳುಕೊಱೆದಪುದೆ ॥ ಪಱಿಗೋಲೊಳ್ಪಾಯ್ವಂತಿರೆ। ತೊರೆಯುಂ ನೊರದಿಂದೆ ಪಾಯಲೇಂ ಬಂದಪುದೇ ॥೬;

ಇದುಮೆಯ್ವಮುಪ್ಪುದೆ ದೆ- |
ಯ್ವದೆ ಪೇಳ್ವುದು ಲೋಕಹಿತಮೆನಿಪ್ಪಾಗಮದಿಂ- ||
ತಿದು ಮೋಕ್ಷಮಾರ್ಗ್ಗಮೆಂ[೧]ಬಂ- |
ತಿದು ತಾಂ ಸದ್ರುಷ್ಟಿಯೆಂಬನಲ್ಲದನಲ್ಲಂ[೧] || ೮೮ ||

ಆದರಿಸಿ ಸಂತತಂ ಮಿ- |
ಥ್ಯಾದೃಷ್ಟಿಗಳೋದಿನಿಪ್ಪದಿಂ ನೆಗಳದೆ ಸಂ- ||
ದಾದಿಬ್ರಹ್ಮಂ ಪೇಳ್ದೊಂ- |
ದಾದಿಯ ಮಾರ್ಗ್ಗದೊಳೆ ನಡೆದು[೨]ಪೇಳ್ವುದೆ[೨] ಸುಖಮಂ || ೮೯ ||

ಉತ್ತಮ ಜಿನಮಾರ್ಗ್ಗಕ್ಕೆಣೆ |
ಮತ್ತಿನ ಕುಮತಂಗಳೆನ್ನದಿಪ್ಪರಿಕಿಸುವಂ- ||
ದುತ್ತಮಮಲ್ಲದಱಿಂದಂ- |
ದುತ್ತಮವೆಂದೆನಲು ಬೇಡ ಸನ್ಮತಿಯುಪ್ಪಂ || ೯೦ ||

ಮದಗಜದ ತಿವಳಿಯೊಳಗ- |
ಲ್ಲದೆ ಮಿಗದಳಿ[೩]........ತೆ[೩]ಱದೆ ಲೋಕ[೪]ಧರ್ಮ್ಮದಿ ||
........[೪]ಸಕಳ ತತ್ವವೊಳಗ- |
ಲ್ಲದೆ ಮಿಗಲಱಿದಪುದೆ ಜಿನಮತಾಂಭೋನಿಧಿಯಂ || ೯೧ ||

ಪರಸಮಯದ ಪಿರಿದೆನಿಸಿದ |
ಪುರಾಣಮಂ ಜೈನರಲ್ಲಿ ವಾಕ್ಯಮದೊಂದಂ ||
ಪರಿಕಿಸಿ ನೋಳ್ಪಾಗಳ್ ಕೆಂ- |
ಬರಲಿನ ಪೇರ್ಗ್ಗಲ್ಲತೆಱನದ[೫]ಂತೆಲೆ ಪೋಲ್ಕುಂ[೫] || ೯೨ ||

ಪಾಲೆಂದಡೆ ಗಿಡುಮರಗಳ |
ಪಾಲುಂ ಸೇವ್ಯಂಗಳಲ್ಲವೆನಿಸಿದ ಪಾಲುಂ ||
ಪಾಲಕ್ಕುಮೆ ಜಿನಮತದಿಂ |
ಮೇಲಕ್ಕುಮೆ ಸಿತಗಮಾಳ್ಪಸಿತಮತಕಥೆಗಳ್ || ೯೩ ||

೧. ಇ—೧ದೆಂ|ಬುದನಾಸದ್ದೃಷ್ಟಿಯುಲ್ಲದಂಕಂಡಪನೇ ||೧; ೨. ಇ—೨ಪಡೆವುದು೨; ೩. ಇ—೩ಳಿನಿಂಗದತೆ೩; ೪. ಇ—೪ದನವರ್ಮ್ಮ||ಡಿದಳ; ೫. ಇ—೫ದೆಂತಂತೆವೊಲಂ೫;

[೧]ಸಾರದೆ ಸಾರಮನಿಂತು ವಿ-[೧] |
ಚಾರಿಸುವುದು ಮುನ್ನ ತನ್ನ[೨]ನಱಿವುಳ್ಳದ[೨]ಱೊಳ್ ||
ವೈರವನೆ ಬಿಟ್ಟು ತತ್ವದ |
ಸಾರತೆಯುಂ ತಿಳಿದು ಬಳಿಕ ಕೈಕೊಳುಗಱಿವಂ || ೯೪ ||

ಇದು ಮುಕ್ತಿಮಾರ್ಗ್ಗಮಿಂತ- |
ಪ್ಪುದು ದುರ್ಗ್ಗತಿಮಾರ್ಗ್ಗಮೆಂದು ಪರಿಕಿಸುತಂ ತ- ||
ತ್ವದ ಹರಿಕೆಯುಳ್ಳವಂ ತಿಳಿ- |
ವುದು ಮಚ್ಚರ[೩]ಮುಳಿದು ಬೇಗ[೩] ಜೈನರ ಕೆಲದೊಳ್ || ೯೫ ||

ಅಪವರ್ಗ್ಗಮಾರ್ಗ್ಗಮಂ ಜೈ- |
ನಪುರಾಣಮನೆಯ್ದೆ ತಿಳಿದು ಮನುಜಂ ಬಳಿಯಂ ||
ಕುಪಥಕ್ಕೆಱಿ[೪]ಗನು ತಾಂ ಬಿ- |
ದ್ದರ್ಪಳ್ಳದೊಳ್ ಕುಳಿಗಳೊಳಗೆ ಬಿದ್ದರ್ಪನಲ್ತೆ[೪] || ೯೬ ||

ಅನುಪಮಜಿನವಚನರಸಾ- |
ಯನಸೇವನೆ ಜನನಮರಣ [೫]ದುಷ್ಕಾ[೫]ಪಹರಂ ||
ಮನುಜಂಗೆ[೬]ದಾನಿನಿಪಂ[೬] |
ಮನಸ್ವಿಗಳ್ನಿಯಮದಿಂದೆ ಸೇವಿಸುತಿಪ್ಪರ್ || ೯೭ ||

ಆಗಮದಿಂದಾಪ್ತನನಿಂ- |
ಬಾಗಿರೆ ತಿಳಿದಾಪ್ತನಿಂದಮಾಗಮಮೆಂದಿಂ- ||
ಬಾಗಿರೆ[೭] ತಿಳಿಯದೊಡೆರಡೊಂ[೭]- |
ದಾಗಿಕ್ಕುಂ ಮುಖ್ಯಮೆರಡುಮೆಂದಿಂ[೮]ತರ[೮]ಱಿವಂ || ೯೮

ವೃ|| ಪರಮಸುಖಕ್ಕೆ ತಾನೆ ನೆಲೆಯುಂ ಬಿಡದಾತ್ಮವಿಭೂತಿ-
ಸೂಚಿಸಾ- |
ತ್ತಿರೆ ಮನುಜಂಗೆ ಮಂಗಳ [೯]ಮಹೋತ್ಸವಮೊಪ್ಪುವು-
ದೆಂದೊಡಂತದರ್[೯] |

---

೧. ಇ—೧ಸಾರವಿದಸಾರವೆಂದು ವಿ೧; ೨. ಇ—೨ನ್ನೊಳಱಿವುಳ್ಳವ೨; ೩. ಇ—೩ವಂಬಿಸುಟ್ಟು೩. ೪. ಇ—೪ಗನಿರುಳುಬಿದ್ದರ್ಪಗವದೊಳು ಪಗಲುಮರಿವುಡಂ ಬಿದ್ದರ್ಪನೆ೪; ೫. ಇ—೫ದುಃಖಾ೫; ೬. ಇ—೬ದವನಿಶಂ೬; ೭. ಇ—೭ಗೆತಿಳಿಯದುವಿರದೊ೭; ೮. ಇ—೮ದೆಂಗಳ೮; ೯. ಇ—೯ಹಾಭಿಷವೃತ್ಸನಂ ಪುರಂದರರ್೯;

ವಿಳಚಿಸಿ ದೇವದೇವಪದದೊಳ್ನೆಗಳ್ದಾದಿ-
ಜಿನೇಂದ್ರಚಂದ್ರನಾ- ।
ದರದೊಳೆ ಬೋಧವಾರ್ಧಿಯನೆ ಪೆರ್ಚಿಸುತಿರ್ಕೆ-
ವಿನೇಯಕೋಟಿಯಂ ॥ ೯೯ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರ ಚರಣಸ್ಮರಣ ಪರಿಣತಾಂತಃಕರಣ ವೀರಣಂದಿ ಮುನೀಂದ್ರ ಚರಣಸರಸೀರುಹಷಟ್ಚರಣ ಮಿಥ್ಯಾ-ಸಮಯತಿಮಿರ ಚಂಡಕಿರಣ ಸಕಳಾಗಮಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವ ವಿರಚಿತಮಪ್ಪ ಸಮಯಪರೀಕ್ಷೆಯೊಳಾಪ್ತಾಗಮ ವರ್ಣ್ಣನಂ ತೃತೀಯಾಧಿಕಾರಂ ॥

ಶ್ರೀ ಶ್ರೀ ಶ್ರೀ

॥ ಶ್ರೀ ॥

ಚತುರ್ಥಾಧಿಕಾರಮ್

ಶ್ರೀಮದನಂತಚತುಷ್ಟಯ- ।
ಧಾಮಂ ತ್ರೈಲೋಕ್ಯ ಶಿಖರಿ ಶೇಖರನಖಿಳ- ॥
ಸ್ವಾಮಿ ವರಮೋಕ್ಷಲಕ್ಷ್ಮೀ- ।
ಧಾಮಂ ದಯಗೆಯ್ಗೆ ವಿಮಳ ರತ್ನತ್ರಯಮಂ ॥ ೧ ॥

ಅನುಪಮಮುಪ್ಪಱಿವಿಂದ- ।
ತ್ಯನುಪಮಗುಣಗಣದಿನನುಪಮಾಚಾರದಿನೀ ॥
ಜಿನಸಮಯಿಗಳೋರ್ವರ್ನರೆಯಂ ।
ಮನುಷ್ಯರೆ ಲೋಕದವರಿನೊಪ್ಪುತ್ತಿರ್ಪರ್ ॥ ೨ ॥

ದೀವಳಿಗೆಯ ಕಳ್ತಲೆಯೊಳ್ ।
ದೀವಿಗೆಗಳ್ ಬೆಳಪತೆಱದೆ ಕಲಿಕಾಲದೆ ಮಿ- ॥
ಥ್ಯಾವಿಳಸಿತವೆನೆ ಸಂದ ಜ- ।
ನಾವಳಿಗಳ ನಡುವೆ ಬೆಳಗುತಿರ್ಪರ್ಭವ್ಯರ್ ॥ ೩ ॥

ನಿಧಿಪುರುಷನಲ್ಲದಂಗೇಂ ।
ನಿಧಿ ಸಾರ್ಗ್ಗುಮೆ ಸಾರದಂತೆ ಪಲರೊಳಗೆ ಗುಣಾಂ- ॥
ಬುಧಿಯಪ್ಪ ಭವ್ಯನಿರಲೇ- ।
ನಧಿಗಮ ಸಮ್ಯಕ್ತ್ವಮುಳಿದವಂಗಾದಪುದೆ ॥ ೪ ॥

ಪಿರಿದಪ್ಪ ನಿಧಾನಂ ಸಾ- ।
ರ್ತ್ತರೆದೇವಸಮನಱಸದಂದದಿಂ ಶ್ರೀಧರ್ಮ್ಮಂ ॥
ದೊರೆಕೊಂಡಡಲಸದೊಂದುಮ- ।
ನಿರದೆಯು ಕೈಕೊಳ್ವುದಮಿತ ಸೌಖ್ಯಮನೊಲ್ವಂ ॥ ೫ ॥

ಪುರುಷನ ಪುಣ್ಯೋದಯದಿಂ ।
ವರಲಕ್ಷ್ಮಿಯುಮಿಷ್ಟಸಿದ್ಧಿಯುಂ ಜಿನಚರಣ ॥
ಸ್ಮರಣೆಯುಮವಯೋಗದೊಳಂ ।
ದೊರೆಕೊಳ್ಗುಂ ದಿವಸವಾರದಿಂದಾದಪುದೇ ॥ ೬ ॥

ಪೊಲ್ಲದುಗೆಯ್ವುತ್ತಿರೆ ತ- ।
ಳ್ವಿಲ್ಲದೆ ಸುಖಮಕ್ಕುವೊಳ್ಪಿತನೆ ಮಾಡುತಿರ- ॥
ಲ್ಪೊಲ್ಲದುಮಕ್ಕುಂ ಕರ್ಮ್ಮಮೆ ।
ಬಲ್ಲಿತ್ತುಳಿಪೆಜಿತವಂತರಂಗಮೆ ಮುಖ್ಯಂ ॥ ೭ ॥

ಮುನ್ನೆರಪಿದುಭಯಕರ್ಮ್ಮಂ ।
ತನ್ನಂ ಪಿಡಿದೂಡುತಿರ್ಕ್ಕುಮಿಂ ಜೋಯಿಸವೇ- ॥
ಕಿನ್ನೆನಲಂತುಟೆ ನಿಶ್ಚಯ- ।
ವೆನ್ನೊ[1]ಂದಿದ ತೆಱನಿದೆಂಬ ಮನುಜನೆ ಚದುರಂ ॥ ೮ ॥

ಶುಭಕರ್ಮ್ಮಮನೊದವಿಸುತಿರೆ ।
ಶುಭಮಕ್ಕುಂ ಪೊಲ್ಲದಾಗದಶುಭೋದಯದಿಂ ॥
ಶುಭವಾಗದೊಡಂ ಮುಂತಣ ।
ಶುಭಲಾಭಂತಪ್ಪದೊಳ್ಪಿತಂ ಮಾಳ್ಕಜೀವಂ ॥ ೯ ॥

ನಿಧಿತಾಂ ಕೊಳಿ[2]ತ್ತೆಂಬಂ ಬಹು- ।
[3]ವಿಧವಿಘ್ನಂ[3] ಸಹಿಷ್ಣುಗಂತೆ ಕೊಳೆಗುಂ ದು- ॥
ರ್ವ್ವಿಧನಂಗೆ ಬೇಗಮಕ್ಷಯ ।
ನಿಧಾನವೆನೆ ವಿಘ್ನಸಹನನಪ್ಪುದು ಪುರುಷಂ ॥ ೧೦ ॥

ರಾಜಪ್ರಸಾದಮುಂ ಜಿನ- ।
ರಾಜಶ್ರೀಪಾದಸೇವೆಯುಂ ವಸ್ತುಗಳುಂ ॥
ವಾಜಿಗಜವೃಂದಮುಂ ಸುಖ ।
ಭೋಜನಮುಂ ಪುಣ್ಯದುದಯದಿಂ ದೊರೆಕೊಳ್ಗುಂ ॥ ೧೧ ॥

ರತ್ನಮನೊಂದನೆ ಪಡದಂ ।
ಯತ್ನದೆ ಸುಖಿಯಾಗಲಾರ್ಕ್ಕುವೆಂದಡೆ ಭವ್ಯಂ ॥

---

೧. ಇ—ನೋ; ೨. ಇ—ಗೆಂ; ೩. ಈ—[3]ವಿಧದಿಂ ವಿಘ್ನ[3];

ರತ್ನತ್ರಯಮುಮಂ ಪಡೆದಂ ।
ನೂತ್ನಸುಖಕ್ಕಧಿಕ[1]ನಪ್ಪುದೊಂದಚ್ಚರಿಯೆ ॥ ೧೨ ॥

ವೃ॥ ಪ್ರಚುರಂ ವರ್ತ್ತಿ[2]ಕುಮಾವನಲ್ಲಿ ನಿರುತಂ-
ನಿಃಶಂಕೆ ನಿಃಕಾಂಕ್ಷೆ ನಿ- ।
ರ್ವ್ವಿಚಿಕಿತ್ಸಾಕ್ಷಮಮೂಢದೃಕ್ತ್ವಮುಪಗೂಹಂ-
ಸಂಸ್ಥಿತಿವ್ಯಾಪ್ತಿ ಭ- ।
ವ್ಯಚಯಾಹ್ಲಾದನಕಾರಿವತ್ಸಳತೆ ಸದ್ಧರ್ಮ್ಮ-
ಪ್ರಭಾವಂಗಳಿಂ- ।
ಬುಚಿತಾಂಗಾಷ್ಟಕಯುಕ್ತನಾತನೆ ವಲಂ-
ಸಮ್ಯಕ್ತ್ವ ರತ್ನಾಕರಂ ॥ ೧೩ ॥

ಕಂ॥ ಜಿನಪತಿ ನಚ್ಚಿನ ದೇವಂ ।
ಜಿನನುಕ್ತಮೆ ತತ್ವಮದಱೊಳಾರ್ತ್ತಸಗುವ ಸ- ॥
ನ್ಮುನಿಗಳೆ ಮುನೀಶರೆಂದೆಂ- ।
ದೆನುತಂ ನಚ್ಚಿಪ್ಪಮಾನವಂ ನಿಶ್ಶಂಕಂ ॥ ೧೪ ॥

ದುರಿತವಿದೂರನನಚ್ಚ[?]ಸು- ।
ತಿರೆ ಪಾಪಂ ಪೊರ್ದ್ದದಮಿತಸೌಖ್ಯಮುಮಕ್ಕುಂ ॥
ಪರಮಾರ್ತ್ಥಮೆಂದೆ ನಂಬಿ- ।
ಪ್ಪಿರವದೆ ನಿಶ್ಶಂಕೆಯೆಂದು ಪೇಳ್ವರ್ಮ್ಮುನಿಗಳ್ ॥ ೧೫ ॥

ಇನಿತಂ ಬಲ್ಲಿಂ ಸರ್ವ್ವ- ।
ಜ್ಞನ ಮತದೊಳುಮೆತ್ತಲಾನುಮೊಂದಕ್ಕರಮುಂ ॥
ಮನದೊಳ್ತಾನನುಮಾನಿಸ- ।
ದ ನರಂ ಸದ್ದೃಷ್ಟಿಜೈನರೊಳಗುತ್ಕೃಷ್ಟಂ ॥ ೧೬ ॥

ಉಪಶಮದೊಳಱಿತದೊಳ್ಕಿ- ।
ಕ್ಕಪವಗ್ಗೋಚಿತ ಚರಿತ್ರದೊಳ್ ಸ್ವೈರಣೆಯೊ- ॥
ಳ್ತಪದೊಳ್ವಿದ್ಯೆಯೊಳೆಂತೆಂ- ।
ತು ಪೇಳ್ವಡಂ ಪಿರಿಯರಪ್ಪರವರೆ ಮುನೀಶರ್ ॥ ೧೭ ॥

---

೧. ಇ—ಕ; ೨. ಇ—ರಿತ್ತನು;

ಎಂತಕ್ಕುಮೆಂದು ಮನದೊ :
ಳ್ಸಂತಾಪಂ ಬಡದೆ ಜೈನಮಾರ್ಗ್ಗದಿ ನಡೆಯು- ||
ಲ್ಕಂತಣ ಜನ್ಮಂಗಳೊಳ- |
ತ್ಯಂತಂ ಸುಖಿಯಪ್ಪನೆಂದು ನಂಬುಗೆ ಜೈನಂ || ೧೮ ||

ಇಂತಪ್ಪ ಲಕ್ಷ್ಮಿಯುಕ್ಕೆನ- |
ಗಿಂತಪ್ಪುದು ಕೂಡಿಬಕ್ಕೆ ಸುಕೃತದ ಫಲದಿಂ- ||
ದಿಂತಪ್ಪ ಸೌಖ್ಯಯೋಗಮ- |
ನೆಂತಕ್ಕೆನಗೆಂದು ನೆಗಳನೆಂತುಂ ಭವ್ಯಂ || ೧೯ ||

ಪದಿನಾಲ್ಕುಂ ರತ್ನಂಗಳ |
ಪದಮುಮನಕ್ಕೃಷಿಣಮನಕ್ಕುಮೊಲ್ಲಂ ಲಘುಕ- ||
ರ್ಮ್ಮದ ವಶದಿಂ ರತ್ನ[1]ತ್ರ[1]- |
ಯದ ಲಕ್ಷ್ಮಿಯೆ ಸಾಲ್ಗುಮೆಂಬನುತ್ತಮಭವ್ಯಂ || ೨೦ ||

ಅಲಸದೆ ಬಹುರೂಪುಗಳಂ |
ಸಲೆತಾಳ್ದುವ ದಿವ್ಯಲಕ್ಷ್ಮಿಯುಂ ಪಗರಣಮೆಂ- ||
ದಲಘುತರಚಕ್ರವರ್ತ್ತಿ- |
ತ್ವಲಕ್ಷ್ಮಿಯುಂ ಕಸವಿದಿನಿತುಮೆಂಬಂ ಭವ್ಯಂ || ೨೧ ||

ಕೃಪಣಮನನುಳಿದ[1]ವಂ ನಾ- |
ಕ[1]ಪತಿತ್ವಮನೆಯ್ದೆ ಬಯಸುವಂ ಪಿರಿದುಂ ಮು- ||
ಕ್ತಿಪಥಕ್ಕೆ ಸಲುವೆನೊಲ್ಲೆಂ |
ಕುಪತಿತ್ವಮನೆಂದೆ ಬಗೆವನುತ್ತಮ ಜೈನಂ || ೨೨ ||

ಸಕಳ ಜಗತೀಶ್ವರತ್ವಮ- |
ನಕಾಮಿಕಂ ಮಾಳ್ಪತಪಮನಲ್ಪಸುಖಕ್ಕ- ||
ತ್ಸುಕನಳಿಪಿಂ ಕುಡುವುದು ಮಾ- |
ಣಿಕಮಂ ತವುಡಿಂಗೆ ಮಾಱುವಂತಾಗಿಕ್ಕುಂ || ೨೩ ||

ಲಾಭವೆ ನರೇಂದ್ರವಿಭವಂ |
ಲಾಭಮೆ ದೇವೇಂದ್ರವಿಭವಮೆಂದುಂ ಭವ್ಯಂ ||

೧. ಇ—೧ವರ್ಣಕ್ಕೆ೧;

ಗೇಭಂಡವೊ ರತ್ನತ್ರಯು ।
ಲಾಭಮೆ ಲಾಭದೊಳಗೆಲ್ಲಮುತ್ತಮಲಾಭಂ || ೨೪ ||

ಸಂಗದೊಳೊಳ್ಪಿದಳ್ಗಪ್ಪವ್ಯ- ।
ತಾಂಗನೆಯುತ್ತೆಱಕಮುಳ್ಳವಂ ಮತ್ತ್ಯ್ರವಧೂ ॥
ಸಂಗಕ್ಕೆಱಗನದೆಂತುಟೆ ।
ಪೊಂಗೆಱಗುವ ದೀಪವರ್ತಿ೨ಮಣ್ಗೆ೨ರಗುಗುಮೆ || ೨೫ ||

ತನಗೆ ಶುಭೋದಯಮಾದೊಡೆ ।
ಧನಧಾನ್ಯಪರಿಗ್ರಹಂಗಳೆಯ್ತರುತಿಕ್ಕುಂ ॥
ತನಗಶುಭೋದಯಮಾದೊಡೆ ।
ಯೆನಿತುಂ ಮಱುಗಿದೊಡಮಾಗದೆಂಬಂ ಜೈನಂ || ೨೬ ||

ಇವನೇತಕ್ಕಮಣಂ ಭಂ- ।
ಡವಲ್ಲ ಪಡೆದಪ್ಪನೆಲ್ಲವಿದ್ಯೆಗಳೊಳಮಾ- ॥
ನಿವನಿಂದಂ ಕುಶಳನೆನೇ- ।
ಕಿವನಂದದೆ ಪಡೆಯೆನೆಂದು ಮಱುಗುವನೆಗ್ಗಂ || ೨೭ ||

ಪುರುಷಾರ್ತ್ಥದಿಂದವಾಗದು ।
ಸಿರಿಯೆಂತೆನೆ ದುಶ್ಚರಿತ್ರನುಂ ದುರ್ಮ್ಮತಿಯುಂ ॥
ಪುರುಷಾರ್ತ್ಥದಿಂದೆ ಪಡೆವರೆ ।
ಸಿರಿಯಂ ಪುಣ್ಯಫಲಮುಳ್ಳಡೆನ್ನನುಮುಣ್ಗುಂ || ೨೮ ||

ಪಡೆಯದೊಡೆ ವಿಷಾದಮುಮಂ ।
ಪಡೆದೊಡೆ ಹರುಷಮುಮನುಳಿಗಿಯುತ್ತಮನೇಕೆಂ- ॥
ದಡೆ ಪುಣ್ಯದುದಯದಿಂದಂ ।
ಪಡೆಗುಂ ಮಱುಗಿದೊಡೆ ಲಬ್ಧಿಹೀನಂ ಪಡೆಯಂ || ೨೯ ||

ಜೀವಂಗೆ ಪುಣ್ಯವಶದಿಂ ।
ದೇವಗ್ರಹಮಂತ್ರತಂತ್ರನೈಮಿತ್ತಂಗ- ॥
ಳ್ಭಾವೊಳ್ಪನೀಗುಮಂತವು ।
ಜೀವಂಗೆಳ್ಪಳಿದಡಾಗಲಾಪ್ಪುರ್ವೆ ಮಾಡಲ್ || ೩೦ ||

---

೧. ಇ—ವ; ೨. ಇ—೨ಮಂಗೆ೨; ೩. ಇ—ಗೊ;

ಕುಲಹೀನಂ ತೊನ್ನಂ ಕಿಸು- ।
ಗುಳಿಗಂ ಪರದೇಶಿ ವಿತ್ತಹೀನಂ ಕುತ್ತಂ- ॥
ಗುಳಿಯಕ್ಕೆ ಜೈನನೆನೆ ಜಿನ- ।
ನಿಳಯಕ್ಕೊಯ್ದೋವಿ ಲೇಸುವಾಳ್ವನೆ ಜೈನಂ ॥ ೩೧ ॥

ಸಕಳಂಕರಪ್ಪ ವೈಶೇ- ।
ಷಿಕ ವೈದಿಕ ಬುದ್ಧ ಸಾಂಖ್ಯ ಚಾರ್ವ್ವಾಕಮತ ॥
ಪ್ರಕರಕ್ಕೆಱಗದೆ ವರ್ತ್ತಿಸು- ।
ವಕಳಂಕನ ಮೂಢದೃಷ್ಟಿಯೆನಿಕುಂ ನಿರುತಂ ॥ ೩೨ ॥

ವೃ॥ ಮುಂಕೊಟ್ಟಂತುಟುಮಾರಮೇಲೆ ರಿಣವುಂಟಾದತ್ಥರ್ಮಮಂ-
ದಾತ್ರತಾಂ ।
ಬ್ಯೆಂಕಿಟ್ಟೀಸುವ ಭಟ್ಟಗುತ್ತನವರಲ್ಲಿಂದಗ್ಗಳಂ ಕಾಣಿಯುಂ ।
ಕಿಂಕುರ್ವ್ವಾಣದಿನೀವರಲ್ಲರದಱಿಂ ನೀನನ್ಯದೇಹಕ್ಕದೇ ।
ಕಿಂಕಷ್ಟಂಬಡಲಾತ್ಮಸೇವೆ ಕುಡದೆ ಸ್ವರ್ಗ್ಗಾಪವರ್ಗ್ಗಂಗಳಂ ॥ ೩೩ ॥

ಕಂ॥ ಯೋಗ್ಯಂ ತಾನಾಗಿರ್ದ್ದುಂವು- ।
ಯೋಗ್ಯನೆ ತತ್ವಂಗಳೊಳಗನಱಿಯದ ಪುರುಷಂ ॥
ಯೋಗ್ಯಂ ತಾನಲ್ಲದೊಡಂ ।
ಯೋಗ್ಯನೆ ಜಿನತತ್ವದೊಳಗನಱಿವ ಮಹಾತ್ಮಂ ॥ ೩೪ ॥

ಅವರಿಂದಂ ಸಚ್ಚರಿತ- ।
ಬ್ಭುರ್ವನದೊಳಾರೆಂದು ಜೈನಸಮಯಿಗಳೊಳ್ ಕೆ- ॥
ಟ್ಟವರಂ ದ್ವೇಷಿಸಿ ದೂಷಿಸು- ।
ವವರಂ ವಾಕೊರ್ಕ್ಕಂಡು ಮುಚ್ಚಿ ಕಳೆವಂ ಜೈನಂ ॥ ೩೫ ॥

ಆನೆ ಕಡುಗುಜ್ಜನಾದೊಡ- ।
ಮೇನನ್ಯಮೃಗಕ್ಕದೆಂತು ಮುದ್ದಮೆ ಜೈನಂ ॥
ಹೀನನೆನಿಸಿದೊಡಮಿತರ ।
ಜ್ಞಾನಿಗಳಿಂ ಮಿಗಿಲೆನಿಕ್ಕುಮೆಲ್ಲಂದದೊಳಂ ॥ ೩೬ ॥

ಪಡೆಯಲ್ಬಾರದ ಗತಿಯುಂ ।
ಪಡೆದುಂ ಶ್ರೀಜೈನಧರ್ಮ್ಮವುಂ ಪಡೆದುಮದಂ ॥

ಕಿಡಿಸಿ ಬಳಿಕೆಂತು ಪಡೆದಪೆ ।
ಕಿಡದಿರು ನೀನೆಂದು ನಿಲಿಪನುತ್ತಮಪುರುಷಂ ॥ ೩೭ ॥

ತ್ರಿದಶಾದ್ಯುತ್ತಮಸುಖಸಂ- ।
ಪದಮಂ ಕುಡಲಾರ್ಪ್ಪ ಸುವ್ರತಂ ವಿಕಳಾತ್ಮಂ- ॥
ಗೊದವಿರ್ದ್ದ ಕಿಡುವುದೆಂಬುದು ।
ನಿಧಿ ದೊರೆಕೊಂಡಿರ್ದ್ದಲಾದತೆಱನಂ ಪೋಲ್ಕುಂ ॥ ೩೮ ॥

ಪುರುಳಿಲ್ಲದಂಗೆ ಜೈನಂ ।
ದೊರೆಕೊಂಡುಂ ದುಶ್ಚರಿತ್ರಮಂ ಬಿಡದುದಱಿಂ ॥
ಚಿರಕಾಲಂ ನಿಲಲಱಿಯದು ।
ಪರಿಕಿಸುವೊಡದಂತೆ ನಾಯ್ಗೆ ನೆಯ್ಯಕ್ಕುಗುಮೇ ॥ ೩೯ ॥

ಕರಗದೊಳಿಟ್ಟಡೆ ಜೂ[೧]ಳಿಯಿ- ।
ನಿರದದು ಪೊಱಮಡುಗು ಬಸನಿಯಂ ತಪದೊಳ್ತಂ- ॥
ದಿರಿಸಿದೊಡವನಿರಲಱಿವನೆ ।
ಕುರುಳಂ ತರ್ಕ್ಕೈಸಿ ಪರಿವನೆನಿತೆಡೆವರಿವಂ ॥ ೪೦ ॥

ತವಿಸುತಿರೆ ತಪದೊಳೊಡಲಂ ।
ನೆವನೆವದಿಂ ಶಾಂತಿ ಮಾಡೆ ಬೇತಾಳಂ ಮೂ- ॥
ಡುವ ತೆಱದಿನಂತರಾಯಂ ।
ಸಮನಿಸುಗುಂ ಪುಣ್ಯಹೀನನಪ್ಪಂಗೆಂತುಂ ॥ ೪೧ ॥

ವೃ॥ ವನಿತಾಂಗಾಲಿಂಗನೋತ್ಕಾಂತನು ಜಿನಪದಪರ್ಯ್ಯಂತ-
ಧಾತ್ರೀತಳಾಲಿಂ- ।
ಗನದೊಳ್ಕಾಂತಾಕುಚಸ್ಪರ್ಶನಕರಮುಭವ-
ಶ್ರೀಪದಾಂಭೋರುಹಸ್ಪ- ।
ರ್ಶನದೊಳ್ತತ್ಪಕ್ವಬಿಂಬಾಧರಮನೆರೆವ ಬಾಯಿ-
ಮಾರಜಿನಸ್ತೋತ್ರಸಂಕೀ- ।
ರ್ತ್ತನದೊಳ್ನಿಂದಂದು ಮರ್ತ್ತ್ಯಂಗಮ್ಮೃತಪದವಿ-
ಕೈಸಾರ್ಪ್ಪುದೇಂ ಚೋದ್ಯಮಾಯ್ತೊ ॥ ೪೨ ॥

೧. ಇ—ಮೂ;

ಕಂ॥ ಕಿವಿ ಮೆಯ್ ಕಣ್ ನಾಲಗೆಮೂ-।
ಗಿವೈ[1]ದಱೊಳಗೊಂದಱಿಚ್ಛೆಯುಮಂ ಸಲಿಸಿದ ಮೂ-॥
ನವನಾಳ್ಗಂ ನರಕಂಗಳೊ-।
ಳವಯುವಂ ಕೂಡೆ ಜಿನನೊಳಕ್ಕುಂ ಸೌಖ್ಯಂ ॥ ೪೩ ॥

ವೃ॥ ನಿರುಪಮನೂತ್ನ ರತ್ನವೊಡದಂದಳಲಾವಗಮಕ್ಕುಮಂತದಂ।
ಪರಿಕಿಸುವಾಗ ಕಾಜೊಡದಡಾಗದು ನೋವು-
ಜಗಕ್ಕೆ ನೋಳ್ಪಡಂ-।
ತಿರೆ ಜಿನಯೋಗಿ ಕೆಟ್ಟಡೆ ಜನಕ್ಕಳಲಾವಗಮಕ್ಕುಮೆಯ್ದೆ ಕೆ-।
ಟ್ಟಿರಲಿತರವ್ರತೀಶವರನಂ ಮಱೆದುಂ-
ಪೆಸರ್ಗೊಳ್ವುದೇ ಜನಂ ॥ ೪೪ ॥

ದಯೆಯುಂ ಬಿಟ್ಟು ಚರಿತ್ರಮುಂ ತೊಱೆದು-
ಸನ್ಮಾರ್ಗಕ್ರಮಂದಪ್ಪಿ ನಿಃ-।
ಕ್ರಿಯೆಯಿಂದಂ ನಡೆದೋಜೆಯುಂ ಮಱೆದು-
ಮಿಥ್ಯಾಮಾರ್ಗಮಂ ಪೊರ್ದಿರೂ-।
ಢಿಯ ಸದ್ಧರ್ಮದೊಳತ್ಥವಟ್ಟವನುಮಂ ಮತ್ತಂ-
ಮನಂಬೊಯ್ದು ಜೈ-।
ನ ಯತೀಂದ್ರೋತ್ತಮರೆಂದು ನಿಟ್ಟೆಗೊಳಿಸಲ್ಕೆಂತುಂ-
ಪೆಱರ್ಬಲ್ಲರೇ । ೪೫ ॥

ಕಂ॥ ಎಳಗರುಗಳ ಕಂಡಾಪಯುಂ-।
ಗಳೆಂತು ರಾಗಿಸುಗುಮಂತೆ ಜೈನಂ ಭವ್ಯಾ-॥
ವಳಿಯುಂ ಪಿರಿದುಂ ಕಂಡಾ-।
ಗಳೆ ಕೂರ್ಮೆಯನೊಲ್ವು ಮಾಳ್ಪಡದು ವಾತ್ಸಲ್ಯಂ ॥ ೪೬ ॥

ಎನಗೆ ನಿಧಿಸಾರ್ದುದಾದಂ।
ಮನೋರಥಂ ಕೂಡಿಬಂದುದೆನಗೆಯ್ದೆ ಕೃತಾ-॥
ರ್ಥನೆನಾದೆನೆಂಬವಂ ನರ-।
ನವನುಂ ಸದ್ರುಷ್ಟಿಜೈನನೆಳ್ತಂದಾಗಳ್ ॥ ೪೭ ॥

೧. ಇ—ವೊಂ; ೨. ಇ—ಡು;

ವಸುಧೆಯನಾಳ್ವಂತೆ ಸುಧಾ- ।
ರಸಮಂ ಪೀರ್ದ್ದಂತೆ ನಲ್ಲರೊಳ್ನೆರದಂತೆಂ- ॥
ಬಸವಾಗಿಕ್ಕುಂ ಚಿತ್ತ- ।
ಕ್ಕೆ ಸಂತಸಂ ಗುಣಿಗೆ ಜೈನನೆಳ್ತಂದಾಗಳ್ ॥ ೪೮ ॥

ಇವರೆಮ್ಮಯ ^೧^ಕುಲದ^೧^ವರೆಮ- ।
ಗಿವರಿಂ ಬಿಟ್ಟಾಪ್ತರಿಲ್ಲ ಪೆಱರಿಂದತ್ಯು- ॥
ತ್ಸವದಿಂ ಸಮಯಿಗಳಂ ತಣಿ- ।
ಪುವುದವರಂ ಜೈನರಲ್ಲಿ ಕಲ್ತರೆ ಬಲ್ಲರ್ ॥ ೪೯ ॥

ಬಡವಂ ಮಾಣಿಕಮಂ ಕಂ- ।
ಡಡೆ ರಾಗಿಸುವಂತೆ ಜೈನಸಮಯಿಗಳಂ ಕಂ- ॥
ಡಡೆ ಜೈನಂ ರಾಗಿಸುಗುಂ ।
ಕುಡುಗುಂ ತನಗುಳ್ಳ ಮಾರ್ಗ್ಗದಿಂ ನಿರ್ಧ್ಧನನಂ ॥ ೫೦ ॥

ಜಿನಸಮಯಿಗಳೆಳ್ತರೆ ತ- ।
ನ್ನನೊತ್ತೆಯಿಟ್ಟಾದೊಡಂ ಮಹೋತ್ಸವದಿಂ ನಿ- ॥
ರ್ಧ್ಧನನಪ್ಪ ಜೈನನಿಕ್ಕುಗು- ।
ಮನವರತಂ ಪೆಱರದೆಂತುಮುಣಲಿಕ್ಕುವರೆ ॥ ೫೧ ॥

ಪರಿಣತನೆನಿಸುವ ಜೈನಂ ।
ದೊರೆಕೊಂಡುಂ ಪಲವು ದಿವಸಮಿರೆಯುಂ ಪರಮಾ- ॥
ದರದಿಂದಲಸದೆ ನಿಚ್ಚಂ ।
ದೊರೆಕೊಂಡುದು ನಿಧಿಯೆನುತ್ತಮಿಕ್ಕುವುದಱಿವರ್ ॥ ೫೨ ॥

ತಮಗೆಂತು ದುಃಖಮುಱಿದೇ ।
ತಮಗೆಂತು ಸುಖಾಭಿಲಾಷೆಯದರಿಂ ತಮ್ಮಂ- ॥
ದಮದೆಂತುಟಂತೆ ಬಗೆವುದು ।
ಸಮಸ್ತಭವ್ಯರುಮನಮಿತಸೌಖ್ಯಮನೋಲ್ವಂ ॥ ೫೩ ॥

ಜಿನಸಮಯಿ ಮನೆಗೆವರೆ ಕ- ।
ಯ್ಯನೊಲ್ದು ಮುಗಿದಿತ್ತ ಬನ್ನಿಮಿರಿಯೇ ಬೆಸನೇ- ॥

೧. ಇ—೧ಸಮಯ೧;

ನೆನುತಂ ಪದಪಿಲ್ಲದೆ ಸ- ।
ತ್ತನಂದದಿಂದಿರ್ಪ್ಪ ಗರ್ವ್ವಿ ಜೈನನೆ ಬಗೆಯಲ್ ॥ ೫೪ ॥
ಬೆರಲುಂ ಕಿವಿಯುಂ ಮಿಂಚುವ ।
ಸಿರಿವಂತರನಿತ್ತ ಬನ್ನಿ ಮೆಂದಾದರದಿಂ ॥
ಕರೆವ ಬಡಜೈನನಾದೊಡೆ ।
ಕರೆಯದ ದುರ್ಗ್ಗರ್ವ್ವಿ ಜೈನನೆನಿಕುಮೆ ಕಷ್ಟಂ ॥ ೫೫ ॥
ಬಡವನನಾದರದಿಂ ಬಂ- ।
ದಡೆ ಸಿರಿವಂತಂಗೆ ಮೇಲೆ[1]ದೆರ್ದ್ದಿಲ್ಲದೊಡಂ ॥
ಕುಡುಗುಂ ವಾತ್ಸಲ್ಯದಿನೆಂ- ।
ದೊಡೆ ಮತ್ತಾ ಜೈನನಲ್ಲಿ ಪುರುಳಱಿಸುವುದೆ ॥ ೫೬ ॥
ಬಡವಂಗೆ ಕೊಟ್ಟೊಡೆನಗೆ- ।
ವ್ಕೊಡವೆಯನಾನೀವೆನಿತ್ತೊಡೆನಗಿನ್ನಿವನಿ- ॥
ಮ್ಮಡಿಗುಡುಗುಮೆಂದು ಕುಡುವಾ ।
ಬಡಮನದವನಧಿಕನಂದನಲ್ಲಂ ಜೈನಂ ॥ ೫೭ ॥
ಬಡವಂ ಗುಣಿಯಾಗಿರ್ದ್ದೊಡ- ।
ಮೊಡನುಡಿಯಂ ಹಸ್ತಿಮೂರ್ಕ್ಖನಾದೊಡವಂ ತಾಂ ॥
ನುಡಿವಂ ಸಿರಿವಂತರೊಳೆಂ- ।
ದಡೆ ಮತ್ತವನಱಿ[2]ತದಲ್ಲಿ ಪುರುಳಱಿಸುವುದೆ ॥ ೫೮ ॥
ಉಣಲಿಕ್ಕುಗುಮುಡಕೊಡುಗುಂ- ।
ಗುಣಮುಳ್ಳವಿನೇಯನಿಕರಮಾನದಱಿಂದಂ ॥
ಗುಣಿಯೆನಿಸುವೆನೆಂಬಂ ನಿ- ।
ರ್ಗ್ಗುಣಿಯಪ್ಪಂಗೊಪ್ಪಲಱಿಗುಮೆ ಜೈನ[2]ಮತಂ[2] ॥ ೫೯ ॥
ಎಂತು ಕುವಳಯ ಸಮಾಜದ ।
ಸಂತಸಮಂ [3]ಸಸಿ[3]ಸಮರ್ತ್ಥಿಪಂತೆ ಸಮರ್ತ್ಥಂ ॥
ಸಂತಂ ಭವ್ಯಸಮಾಜದ ।
ಸಂತಸವೆಸವಂತು ನೆಗಳ್ವಡಾತಂ ಜೈನಂ ॥ ೬೦ ॥

---

೧. ಇ—ಮಿ; ೨. ಇ, ಈ—೨ತನಂ೨; ೩. ಇ—೩ಶಶಿ೩;

ಜನನಿಜನಕಾಗ್ರಜರುಂ ।
ತನುಜಾನುಜಬಂಧುವರ್ಗ್ಗಮುಂ ಜೈನನೆ ಬೇ- ॥
ಱಿನಗೆ ಪೆಱರಾರುಮಿಲ್ಲೆಂ- ।
ಬನಿತಂ ಬಗೆವವನೆ ಜೈನನುಳಿದವನಲ್ಲಂ ॥ ೬೧ ॥

ಜೈನಂಗೆಡರಾದೆಡೆಯೊಳ್ ।
ಜೈನಂ ಕೈಕೊಂಡು ಕಾಯಲಾರ್ಪ್ಪಡೆ ಜೈನಂ ॥
ಜೈನನುಪೇಕ್ಷಿಪೊಡಂತವ ।
ಜೈನನೆ ನಿರ್ಗ್ಗುಣಿಯವಂ ನಿಕೃಷ್ಟಂ ಕಷ್ಟಂ ॥ ೬೨ ॥

ತಮಗಂ ಮಕ್ಕಳ್ಗಂ ರೋ- ।
ಗಮಾದೊಡಾಕ್ಷಣದೆ ಮರ್ದ್ದವಾಳ್ಪವೊಲರುಹ- ॥
ತ್ಸಮಯಿಗೆ ರುಜೆಯಾದೊಡೆ ಮ- ।
ರ್ದ್ದವಾಳ್ಪುದಾಕ್ಷಣದೆ ಮುಕ್ತಿಯುಂ ಬಯಸುವವಂ ॥ ೬೩ ॥

ದೇವರನರ್ಚ್ಚಿಸುವಲ್ಲಿಯ ।
ಪೂವಿನ ಫಳವೊಂದನೀಯರನ್ಯರದೆಂತುಂ ॥
ಶ್ರಾವಕರೊಲ್ದೀಗುಂ ಜಿನ- ।
ಪಾವನಪೂಜೆಯುನನಂತಸುಖದಾಯಕಮಂ ॥ ೬೪ ॥

ರಾಗಿಸಿ ಸಮಯಿಗಳಂ ಕಂ- ।
ಡಾಗಳೆ ಸಂತುಷ್ಟಿಮಾಳ್ಪರಲ್ಲದೆ ಕೊರಲಿಂ ॥
ಮೇಗಣ ಮಾತಂ ನುಡಿಯರ- ।
ದೇಗೆಯ್ದುಂ ತಾವದೆಂತು ನುಡಿವರೆ ಭವ್ಯರ್ ॥ ೬೫ ॥

ಆದರಿಸಿ ಭವ್ಯಜನಮಂ ।
ಸೋದರರಿವರೆಂದು ತಮ್ಮ ಸುಕೃತದ ಫಲದೋ- ॥
ಪಾದಿಯನೀವಜ್ಜೈನರು ।
ಬಾದಿನೊಳೇನನ್ಯಸಮಯದವರಿತ್ತಪರೆ ॥ ೬೬ ॥

ಏನೊಂದಂ ಪ್ರಿಯದಿಂದಂ ।
ದಾನಮನಿತ್ತಂಗಮಮಿತಸೌಖ್ಯಂ ಕಡೆಯೊ- ॥
ಳ್ತಾನಕ್ಕುಮೆಂದಡುತ್ತಮ ।
ದಾನದ ಸತ್ಫಲಮನಿತ್ತವಂಗರಿದುಂಟೇ ॥ ೬೭ ॥

ಬೆಲೆಯಿಡುವವಱಿಂ ಮಾಡಿದ ।
ಫಲಕ್ಕೆ ಕಡೆಯಿಲ್ಲ[1] ದಾನದೆಡೆಗೆಂದಡೆ ಕೇ- ॥
ಳ್ಬೆಲೆಯಿಡಬಾರದ ಧರ್ಮ್ಮದ ।
ಫಲಮಂ ಕೊಟ್ಟೊಂದು ಫಲಮನದನೇವೇಳ್ವೆಂ ॥ ೬೮ ॥

ಜೈನಪದಾಭ್ಯರ್ಚ್ಚನೆಯುಂ ।
ದಾನಮುಮಣಮಿಲ್ಲದಿರ್ದ್ದೊಡಂ ದಿಬ್ಯಸುಖಂ ॥
ಜೈನಂಗಕ್ಕುಮೊಡಂಬಡೆ ।
ದಾನಕ್ಕಂ ಜೈನಪೂಜೆ[2]ಗತಿ[2]ಸನ್ಮತಿಯಿಂ ॥ ೬೯ ॥

ವೃ॥ ಪಿರಿದಾಯಾಸದೆ ಘೋರವೀರತಪಮಂ-
ಮಾಡಿಕ್ಕನಾಯಾಸದಿಂ ।
ನರನಾಂ ಜೈನನೆನೆಂದೊಡೆಂದನಿತಱಿಂ-
ವಾತ್ಸಲ್ಯದಿಂದೀಯೆ ಬಿ- ।
ತ್ತರದಿಂ ಭವ್ಯರಗೆಯ್ದ ಪುಣ್ಯಫಲಮಂ-
ಕೈಸಾರ್ಗ್ಗೆಮೆಂದಂದೆ ಬಾ- ।
ಱ್ಪರೆ ಲೋಕೋತ್ತರಮಾರ್ಹತವ್ರತಮದಂ-
ಬಣ್ಣಿಪ್ಪನೇ ವಣ್ಣಿಪಂ ॥ ೭೦ ॥

ಕಂ॥ ಖ್ಯಾತಿಯುಮಂ ಪಿರಿದಪ್ಪ ವಿ- ।
ಭೂತಿಯುಮಂ ಜೈನನಾಗೆ ಪಡೆಯಲ್ಕಕ್ಕುಂ ॥
ಮಾತೇನನ್ಯರ ಸಮಯದೊ- ।
ಳೀತೆಱದಿಂ ಪಡೆಯಲೆಂತುಮಱಿವನೆ ಮನುಜಂ ॥ ೭೧ ॥

ಪಸಿವಿಂಗೆ ತೃಷೆಗೆ ನಿದ್ರೆಗೆ ।
ಬಿಸಿಲ್ಗೆ ಸೀತಕ್ಕೆ ತಮಗೆ ಯತ್ನಂ ಮಾಳ್ಪಂ- ॥
ತು ಸದಾ ಪ್ರಯತ್ನಮಂ ಭ- ।
ವ್ಯಸಮಿತಿ ನಿಜಸಮಯಿಗೊಲ್ದು ಮಾಳ್ಪಂ ನಿಚ್ಚಂ ॥ ೭೨ ॥

ಬರೆ ಭವ್ಯಾಂಬುಜಮಿತ್ರಂ ।
ಸರಾಗದಿಂ ನಿಜಗೃಹಾಂಗಣಕ್ಕೀಕ್ಷಿಸಿ ಭ- ॥

೧. ಇ—ಕ್ಕೆ; ೨. ಇ, ಈ—೨ಗಂ೨;

ವ್ಯರ ವದನ[೧]ಮರಲುತಿರಲಿರ- ।
ಲಿ[೧]ರವೇಳ್ಕುಂ ಸಮಯಧರ್ಮ್ಮಮಿಂತುಟೆಯಲ್ತೆ । ೭೩ ॥

ಸಲೆ ಮುನ್ನಂ ಪಾವಿಂಗಂ ।
[೨]ಸಲೆ[೨]ಯಿಕ್ಕದ ವಜ್ರಲೋಭಿಯುಂ ಶ್ರಾವಕನಾ- ॥
ಗಲೊಡಂ ನಿಜಸಮಯಿಗೆ ವ- ।
ತ್ಸಲತೆಯಿನಿರ್ದ್ದೊಡಮೆಯೆಲ್ಲಮಂ ವೆಚ್ಚಿಸುಗುಂ ॥ ೭೪ ॥

ಪಡೆಮಾತೆ ಜೈನನೇನೆಂ- ।
ದೊಡೆ ಸಾಲ್ಗುಂ ಕಳ್ಳನಾದೊಡಂ ತಾನೆಡೆಯಂ ॥
ಕುಡುವಂ ಕೂಳಿಕ್ಕುವರೆ- ।
ಲ್ಲೆಡೆಗಳೊಳಂ ಜೈನಮಱಿಯಲಿಂತಿರೆ ಸಾರಂ ॥ ೭೫ ॥

ಅತಿಪರಿ[೩]ಚಯ[೩]ಮಾಗುತ್ತಿರೆ ।
ಮತಿಹೀನನವಜ್ಞೆಗೆಯ್ವನುಳಿದಜ್ಜೈನ- ॥
ಗ್ಗತಿಪರಿಚಯಮಾಗುತ್ತಿರ- ।
ಲತಿಶಯವಾತ್ಸಲ್ಯಮೊಂದುಗುಂ ಸಮಯಿಗಳೊಳ್ ॥ ೭೬ ॥

[೪]ಯೋಗ್ಯರು ನಿಜನಿಜಸಮಯದ[೪] ।
ಯೋಗ್ಯರುಮಂ ಕಂಡು ಸೆಣಸುವರ್ಪ್ಪೆಱವೆಡೆಯೊಳ್ ॥
ಯೋಗ್ಯನೆನೆ ನೆಗಳ್ದ ಜೈನಂ ।
ಯೋಗ್ಯಂ ನಿಜಸಮಯಿಯಾಗೆ ಪೊಡೆವಡುತಿಕ್ಕುಂ ॥ ೭೭ ॥

ಪಿಂಗಳನೇತ್ರನನೆಂತುಂ ।
ಪಿಂಗದೆ ಪೂಜಿಸುತಮಿರ್ಪ್ಪ ಮಾಹೇಶ್ವರನುಂ ॥
ಲಿಂಗಿಯುಮಂ ಶಿವಭಕ್ತನು- ।
ಮಂ ಗಹನಂ ಗೆಯ್ಯರೆಮ್ಮ ಸಮಯಿಗಳಿನ್ನಂ ॥ ೭೮ ॥

ಒಂದುಃ ಪೊರೆ ಜಡೆಯುಮಂ ಪಲ- ।
ವಂದದ ಮುದ್ರೆಯುಮನೆಯ್ದೆ ಪೊತ್ತೆನ್ನಂ ಬಾ- ॥

೧. ಇ—[೧]ಮೂವಗಮಿರಲುತಿ[೧]; ೨. ಇ, ಈ—[೨]ಪಲಿ[೨]; ೩. ಇ—[೩]ಭವ[೩]; ೪. ಇ—[೪]ಯೋಗ್ಯನ್ನಿಜಸಮಯದರಂ[೪];

ಯೆಂದು ಬಿಸಿಲಲ್ಲಿ ನಿಂದನ- ।
ನೆಂದುಂ[1]ಬಿಸಿ[1]ಲಿಂಗೆ ಕರೆಯರೆಮ್ಮ ಭಳಾರರ್ ॥ ೭೯ ॥

ಸಿರಿವಂತರಪ್ಪ ಮಾಹೇ- ।
ಶ್ವರರುಂ ವೈಷ್ಣವರುಮೋರ್ವ್ವ ಬಡವನುಮಂ ನಿ- ॥
ತ್ತರಿಪರೆ ನಿಜಸಮಯಿಯನಾ- ।
ದರದಿಂದಂ ಜೈನರಲ್ಲದೆಲ್ಲಂದದೊಳಂ ॥ ೮೦ ॥

ಓರ್ವ್ವಂ ಸಮಯಿಗಳಂ ತಾ- ।
ನೋರ್ವ್ವನೆ ಸಂತೋಸ[2]ವಾಗೆ ಮಾಳ್ಪಂ ಜೈನಂ ॥
ನೂರ್ವ್ವರ್ಮ್ಮಾಹೇಶ್ವರರಿ- ।
ರ್ದ್ದೋರ್ವ್ವಂ ಮಾಹೇಶ್ವರಂಗೆ ಕೆಟ್ಟೆಡೆಗಾಗರ್ ॥ ೮೧ ॥

ಅಟ್ಟೆಂಬ ಸಮಯಿಯುಲ್ಲಿಗೆ ।
ಕೆಟ್ಟಳಿದಾಸತ್ತು ಬಂದನುಣಲುಂ ಪಡೆಯಂ ॥
ತೊಟ್ಟನೆ ಕಲ್ಲಂ ತಾಗಿದ ।
ಮಿಟ್ಟೆಯವೋಲ್ಮಗುಳ್ವನಂತು ನೆಗಳ್ವರೆ ಜೈನರ್ ॥ ೮೨ ॥

ಬಾಡಿದ ಮೊಗಮಂ ದಯೆಯಿಂ ।
ನೋಡಿ ಕರಂ ಪಸಿವ ರೂಪನಱಿದುಣಲಿಡೆಯಂ ॥
ಮಾಡುವರಾರ್ಹತರೆಡೆಯಂ ।
ಮಾಡುವರುಣಸಾಗದಂತು ಸಮಯಿಗೆ ಲೋಗರ್ ॥ ೮೩ ॥

ಅವರನ್ನರಿನ್ನರೆಂಬೀ ।
ಬವರದೊಳೇನಹಿಯ ಮುಖದೊಳಮೃತಂ ಪೇಳ್ಸಂ- ॥
ಭವಿಕುಮೆ ನೋಳ್ಪಡೆ ವಿಪ್ರಂ- ।
ಗೆ ವತ್ಸಳತೆಯುಂಟೆ ವಿಪ್ರಸಮಿತಿಯೊಳೆಂತುಂ ॥ ೮೪ ॥

ಬಡದೇಸಿಗನಿಂತಿವನಾ- ।
ವೊಡಲೆಲ್ಲಂ ಕೆಟ್ಟು ತೊನ್ನನಾದೊಡವಂ ಪ- ॥
ಟ್ಟೆಡೆಯೊಳ್ಕಿಸುಗುಳನೆನಿಸಿ- ।
ರ್ದ್ದೊಡಮಾರ್ಹತವಾಗೆ ರಕ್ಷಿಪರ್ಸ್ಸಲೆ ಜೈನರ್ ॥ ೮೫ ॥

---

೧. ಇ,ಈ—೧ನೆಳ೧; ೨. ಇ—ಷ;

ಮರ್ದ್ದರ್ಗಂ ಗಂಜಿಯುನೆಱೆಯು- ।
ತ್ತಿರ್ದ್ದೊಡವಾಯುಷ್ಯಮುಡಿಗಿ ಬಂದೆಡೆಯೊಳ್ಪೇ- ॥
ಡಿರ್ದ್ದರ್ಗ್ಗಲ್ಲ ಸುಕೃತಮುಮಱಿ- ।
ತ್ತಿರ್ದ್ದಡೆಯಿಂದೆತ್ತಿ ಪೂಜಿಪರ್ಸ್ಸಲೆ ಜೈನರ್ ॥ ೮೬ ॥

ಪೊಲೆಯತ್ತರ್ಗ್ಗಮ್ಮಯ ಕೇರಿಗೆ ।
ಪೊಲೆಯುರ್ಬ್ಬರ್ಗೆ ತುಷ್ಟಿವಾಳ್ಪರೆಂದದನಱಿದುಂ ॥
ಕುಲಜರ್ಸ್ಸರ್ಗ್ಗಮಯಿಗಳಂ ಸಾ- ।
ರಲೀಯರಾರ್ಹರ್ತ್ತರ ತೆಱದೆ ನಿಃಕಪಟತೆಯಿಂ ॥ ೮೭ ॥

ನೋಡಿರೆ ಸ್ಯೆವಪ್ಪ್ರರಿದುಂ ।
ಕೂಡರೆನಲ್ವೇಡ ಸಾಧುಗಳಿಗುಪಸರ್ಗ್ಗಂ ॥
ಮಾಡಿದಪೆವೆಂದೊಡೆಲ್ಲಂ ।
ಕೂಡುವರಾರ್ದ್ದರ್ತ್ತಿ ಗುಣದೊಳಿಂತುಂ ಕೂಡರ್ ॥ ೮೮ ॥

ಆದರದಿಂದಂ ಬೋಧ- ।
ಬ್ಬೋರ್ಧರನಪ್ಪಿದೊಡೆ ಬೂದಿ ಬೂದಿಯೆ ನಾಱೇ- ॥
ತ್ತಾದಮೆನಲ್ನೆಗಳ್ದನ್ನಾರ್- ।
ಗ್ಗಾರ್ದೆಗೆ ದೊರೆಸಮಯಧರ್ಮ್ಮದೆಡೆಗುಳಿದವರ್ಗಳ್ ॥ ೮೯ ॥

ವೃ॥ ಜಿನಧರ್ಮ್ಮಂ ಭುವನೈಕಸೇವ್ಯಮನವದ್ಯಾಚಾರಸಾರಂ ಜಗ- ।
ಜ್ಜನಕಂ ತಾನೆ ಶರಣ್ಯಮಂತದು ಸುರೇಂದ್ರಾ-
ಹೀಂದ್ರದೈತ್ಯೇಂದ್ರ, ಮ- ।
ರ್ತ್ಯರ್ನಿಕಾಯಸ್ತುತಮೆಂದೆ ನಂಬಿ ಪದಪಿಂ-
ಕೈಕೊಳ್ವವಂ ಭವ್ಯನಾ- ।
ತನೆ ಲೋಕೋತ್ತಮನೆಂದು ಪೇಳ್ದನವನೀಶಂ-
ಧರ್ಮ್ಮಮಾಹಾತ್ಮ್ಯಮಂ ॥ ೯೦ ॥

ಕಂ॥ ನೀರಡಿಸಿದವಂಗೆಱದಡೆ ।
ನೀರುಂ ಪುಣ್ಯಕ್ಕೆ ಮೇರೆಯಿಲ್ಲೆನೆ ದುಃಖಾಂ- ॥
ಭೋರಾಸಿಯೊಳದ್ದರ್ವವನಂ ।
ಸಾರಮೆನಿಪ್ಪಱಿದಿನೆತ್ತಿದಂಗರಿದುಂಟೆ ॥ ೯೧ ॥

ಬಸನದ ವಸದಿಂಡಂ ಪು- ।
ಟ್ಟಿಸಿದಂ ಜನಕನೆ ನರೇಂದ್ರ ದೇವೇಂದ್ರ ಜಿನೇಂ- ॥
ದ್ರಸುಖಮನವಯವದಿಂದೆ- ।
ಯ್ದಿಸುವಜಿನಂ ತಿಳಿಪುವಾ ಮಹಾತ್ಮಂ ಜನಕಂ ॥ ೯೨ ॥

ವಸುಧೀಶಸುಖಂ¹ಗೀರ್ವಾ- ।
ಣ¹ಸುಖಂ ನಿರ್ವಾಣಸುಖಮುಮಂ ಕ್ರಮದಿಂ ಪೊ- ॥
ರ್ದ್ದಿಸಲಾರ್ಪ ಧರ್ಮಮಂ ತಿ- ।
ಳ್ಪಿಸುತಿಪ್ಪಾ ಪುಣ್ಯದಿಂದತಃಪರಮುಂಟೆ ॥ ೯೩ ॥

ಎನ್ನವರಿವರಿದಿರವರಿವ- ।
ರೆನ್ನದೆ ದಯೆಯಿಂದಮಖಿಳ ಜೀವಾವಳಿಯಂ ॥
ಸನ್ನುತ ಮುಕ್ತಿಶ್ರೀಯೊ- ।
ಳ್ಪುನ್ನಂ ನೆರಪಲ್ಕೆ ಬಯಸಿ ನೆಗಳ್ವನೆ ಜೈನಂ ॥ ೯೪ ॥

ಅವಿವೆನ್ನದೆಯ್ದೆ ಮೂಜಿಂ ।
ಭುವನದೊಳಂ ತೊಳಲುತಿರ್ಪ ಜೀವಾವಳಿಯಂ ॥
ಭುವನಾಗ್ರಕ್ಕೆಯ್ದಿಸುವ- ।
ತ್ತರ್ವತವಗೇ ಪಿರಿಯರಾ ಮಹಾತ್ಮರೆ ಜೈನರ್ ॥ ೯೫ ॥

ವೃ॥ ಮತಿವಂತಂ ಸತಿದೇವಮೂಢತೆಯುಮಂ ಪಾಷಂಡಿ-
ಮೂಢತ್ವಮಂ ।
ಸತತಂ ಲೌಕಿಕ ಮೂಢತಾಪರತೆಯಂ-
ನಿವ್ಯಗ್ರದಿಂ ಬಿಟ್ಟು ಶಾ- ।
ಸ್ವತಸೌಖ್ಯಕ್ಕಿರದೊಯ್ವಲಾರ್ಪಮಳಚಾರಿತ್ರಂಗಳಿಂ-
ದಾರ್ಹತ ।
ವ್ರತದೊಳ್ಕೂಡಿದನಾವನಾತನೆ ವಲಂ-
ಸಮ್ಯಕ್ತ್ವ ರತ್ನಾಕರಂ ॥ ೯೬ ॥

ಕಂ॥ ಜಿನನಲ್ಲದಾಪ್ತರಂ ಪಿಡಿ- ।
ದು ನೆಗಳ್ವುದು ಕಿಚ್ಚು ಕವಿಲೆ ಮರನಾಯುಧಮೆಂ- ॥

---

೧. ಇ—೧ದೇವೇಂದ್ರ೧;

ಬಿನಿತಕ್ಕಂ ಪೊಡಮಡುವುದು- |
ವನೇಕಮಿವು ನೆಗಳ್ದ ದೇವತಾಮೂಢಂಗಳ್ || ೯೭ ||

ಪರಮಸುಖಕ್ಕೆಯ್ದಿಪ ರುೞ್ಷಿ- |
ಯರನೊಲ್ಲದೆ ದುಶ್ಚರಿತ್ರರಂ ಲೋಲುಪರಂ ||
ಪರಲಿಂಗಿಗಳಂ ಪೊರ್ದ್ದಿ- |
ಪ್ಪಿರವದು ಪಾಷಂಡಿ ಮೂಢಮೆಂಬುದದಕ್ಕುಂ || ೯೮ ||

ಪೊಡವಡುವವರಂ ಕಂಡಡೆ |
ಪೊಡವಡುವರ್ದ್ದೇವರಲ್ಲದಿರ್ದೊಡಮನ್ಯ- ||
ರ್ಕ್ಕಡುವವರಂ ಕಂಡಡೆ ಪೋ- |
ಕುಡುವಪ್ಪಾತ್ರಮಿದಪಾತ್ರಮೆನ್ನಮೂರ್ಢರ್ || ೯೯ ||

ಗುರುವೆಂಬರಿಲ್ಲ ನಿಯಮಿಸು- |
ವರಿಲ್ಲ ಬಳಿಕೋದಿ ನಿಷ್ಠಮಿಲ್ಲೋರ್ವ್ವರನೋ- ||
ರ್ವ್ವರೆ ಕಂಡುಮವರೆ ನೆಗಳ್ದಂ- |
ತಿರೆ ನೆಗಳ್ವುದು ಲೋಕಮೂಢಮೆಂದಱಿಗಱಿವಂ || ೧೦೦ ||

ಕುಲಮೈಶ್ವರ್ಯ್ಯಜ್ಞಾನಂ |
ಬಲಮಾಜ್ಞೆಸುರೂಪುಜಾತಿತಪಮೆಂಬಿವು ಕೇ- ||
ವಲಮೆನ್ನೊಳೆಸೆಗುಮೆಂಬಾ |
ಖಳಂಗೆ ಸಮ್ಯಕ್ತ್ವಮೊಪ್ಪಲೇನಱಿದಪುದೇ || ೧೦೧ ||

ಅನವದ್ಯಚರಿತನೇಂ ಕುಲ- |
ಜನೆನಾಗಮುವಿದನೆನರಸನೇಂ ಬಡವಂಗಾ- ||
ನೆನಲಾಱೆನೊಡಂಬಡೆನೆಂ- |
ಬ ನರಂಗೆ ನೊಪ್ಪಲಱಿಗುಮೆ ಸಮ್ಯಕ್ತ್ವಂ || ೧೦೨ ||

ಕುಲಹೀನಂಗಾನೆಱಗೆಂ |
ಕುಲಜನೆಯಿಚ್ಛಾಮಿಯೆಂದು ಕೈಮುಗಿಯಲ್ವೋ- ||
ಕುಲದಿಂ ಮಿಗಿಲಾನೆಂಬಾ |
ಖಳಂಗೆ ಸಮ್ಯಕ್ತ್ವಮೊಪ್ಪಲೇನಱಿದಪುದೇ || ೧೦೩ ||

---
೧. ಈ—ಖು;

ಕುಲಜಂಗೆ ಮತ್ತಮೋರ್ವ್ವಂ।
ಕುಲಜಂ ಜಗವಱಿಯೆ ನೋಳ್ಪಡೊಳನದಱಿಂದಂ ॥
ಕುಲದೊಳ್ ಜಾತಿಯೊಳೆನಗಾ- ।
ರಿಳೆಯೊಳ್ಸಮರೆಂಬ ಮದಮನುಳಿವುದು ಚದುರಂ ॥ ೧೦೪ ॥

ಎವಗಱಿವುಂಟೆನುತಂ ಪೊಂ- ।
ಗುವರೆಗ್ಗಮ್ಮಿಂತಿನೋದಿನಿಂದಱಿವವನಿಂ- ॥
ದವಧಿಮನಃಪರ್ಯ್ಯಯಮುಂ- ।
ಳ್ಳವರಿಂ ಮಿಗಿಲಭವನಱಿತಮುಳಿವುದು ಮದಮಂ ॥ ೧೦೫ ॥

ಸಾಮಂತಮ್ಮಂಡಳಿಕ- ।
ಬ್ಭೂರ್ಪಮೀಶ್ವರರಿಂದ್ರರರುಹರೆಂಬಿವರೋರ್ವ್ವ- ॥
ಗ್ಗೀಮಾತೊ ಪಿರಿಯರೋರ್ವ್ವ- ।
ತ್ತಾರ್ಮೇಕೈಶ್ವರ್ಯ್ಯಗರ್ವ್ವರಪ್ಪರ್ಮ್ಮನುಜರ್ ॥ ೧೦೬ ॥

ಅಹಮಹಮಿಕೆ ಸಲ್ಲಿಂತೆನೆ ।
ಮಹಿಮೆಯೊಳಾ ಚಕ್ರವರ್ತ್ತಿಗಂ ಸುರಪತಿಗಂ ॥
ಮಹಿಮೆಯೊಳಾ ಸ್ವರ್ಗ್ಗದೊಳಂ ।
ಮಹನೀಯತರಾಜ್ಞೆ ಕೂಡೆ ಸಲ್ಲದದೆಂದುಂ ॥ ೧೦೭ ॥

ಪರಿಕಿಪಡೆ ಚೆಲ್ವರಾರೋ- ।
ರ್ವ್ವರಿನೋರ್ವ್ವಕ್ಕಾಮದೇವರುಂ ಚಕ್ರಾಧೀ- ॥
ಶ್ವರರುಮಮರೇಂದ್ರರುಂ ಚೆ- ।
ಲ್ವರುಂಟೆನಲ್ಸುಜನರುಳಿಗೆ ರೂಪಿನ ಮದಮುಂ ॥ ೧೦೮ ॥

ಉಟ್ಟುಂ ತೊಟ್ಟುಂ ರೂಪಿನೊ- ।
ಳಿಟ್ಟಳವೆಸವಾತನುಳ್ಳದಂ ಬಱಿದಾಗ- ॥
ಲ್ಕೊಟ್ಟುಂ ಪೆಂಡಿರ ನಲವಂ ।
ನಿಟ್ಟಿಸಲಣಮಾಜಿರುಳಿಗೆ ರೂಪಿನ ಮದಮಂ ॥ ೧೦೯ ॥

ಬಡಿದಡೆ ಕಂಡುದಱಿಂದಿ- ।
ಟ್ಟಡೆ ಕಯ್ಯುಂ ಕಾಲುಮುಡಿಯೆ ಪೊಯ್ದಡೆ ಮತ್ತಂ ॥
ಕುಡುಮಂ ಕುರೂಪಿಯೆಂತುಂ ।
ಬಿಡರಬಲೆಯರದಱಿನುಳಿಗೆ ರೂಪಿನ ಮದಮಂ ॥ ೧೧೦ ॥

ಪಿರಿದಪ್ಪಳಾಪದೊಳೇಂ |
ಪರೇಂಗಿತಜ್ಞಂ ಸಮಸ್ತಶಾಸ್ತ್ರಂಗಳೊಳಂ ||
ಪರಿಣತನೆನಿಸಿದನುಂ ಪೆಂ- |
ಡಿರಚಿತ್ತಮನಿಂತುಂಟೆಂದು ನಿಟ್ಟಿಸಲಾಱಂ || ೧೧೧ ||

ಎನ್ನ ಸಮನಾರೊ ಪೇಳಿ- |
ನ್ನನ್ನಂ ಸಮನವನೊ ಧೈರ್ಯ್ಯಮಾದಿಯ ತಪದಿಂ- ||
ದೆನ್ನಲಿಕಾಯಕ್ಲೇಶಿಗ- |
ಳೆಂದೆನಿಬರುಮುಳಿಗೆ ತಪದ ಮದಮಂ ಚದುರಂ || ೧೧೨ ||

ಕೇಸರಿಗೆ ವಾಸುದೇವಂ- |
ಗಾಸರ್ವ್ವೋರ್ವ್ವೀಶ್ವರಂಗೆ ನೆಗಳ್ದಮರೇಂದ್ರಂ- ||
ಗಾಸರ್ವ್ವಜ್ಞನ ಸತ್ವಂ |
ಸಾಸಿರ್ಮ್ಮಡಿಗಧಿಕಮುದಱಿನುಳಿ ಬಳಮದಮಂ || ೧೧೩ ||

ಮುನಿವಂಗೆ ಪೀಡೆ ಮಾಡಿದೆ- |
ನೆನುತಂ ರಾಗಿಸಲುವೇಡ ಸದ್ರುಷ್ಟಿಯದೇ- ||
ಕೆನಲವನ ಪಾಪದುದಯಮೆ |
ಘನತರದುಃಖಮನವಂಗೆ ಮಾಡುವ ಕಥದಿಂ || ೧೧೪ ||

ಮಾಡಿದೆನೆಂಬಭಿಮಾನಂ |
ಬೇಡೇಕೆನೆ ತಾಂ ನಿಮಿತ್ತಮಾತ್ರಮದೆಂತುಂ ||
ಮಾಡುವೆನೆಂಬಡೆ ಮೆಚ್ಚಿತು |
ಮಾಡಲ್ಕೆ ಸಮರ್ತ್ಥನಪ್ಪಡಪ್ಪುದು ಗರ್ವ್ವಂ || ೧೧೫ ||

ತನಗೆಂತುಂ ಕೂರ್ಪ್ಪವರ್ಗಂ |
ಮನದೊಳ್ಮುನಿವರ್ಗ್ಗಮಪ್ಪ ಸುಖದುಃಖಂಗ- ||
ಳ್ಗನಿಸುಂ ರಾಗಿಸವೇಡೇ- |
ಕೆನೆ ನಿಜವಶಮಲ್ಲವವರ ಮಾಡಿದ ಕರ್ಮ್ಮಂ || ೧೧೬ ||

ಸಿರಿ ಪರ್ವ್ವತಮಂ ಗಂಗೆಯು- |
ಮೆರದವರ್ಗಾರ್ತ್ತಿತ್ತು ಪೆತ್ತುವೇಕೀರ್ತ್ತಿಯನಂ ||

ತುರುತರ ಜಸವೆತ್ತಾನುಂ।
ದೊರೆಕೊಳೆ ಜಸಮುಳಿಯೆ ಮದಮನುಳಿವುದು ಜೈನಂ ॥ ೧೧೭ ॥

ವೃ॥ ಶ್ರುತಿ ಪೇಳ್ದಷ್ಟಮದಂಗಳೆಂಬುವಿವೆ-
ದಲ್ವಿಜ್ಞಾನಮೈಶ್ವರ್ಯ್ಯ ಮಾ-।
ಜ್ಞೆತಪಂ ಜಾತಿ ಕುಲಂ ಸುರೂಪು-
ಬಲವೆಂದೆಂತವಂ ಮಾಡೆ ಸ-।
ನ್ಮತಿಯಿಂದಂ ತೊಱೆದೆಯ್ದೆ ಶಾಸ್ವ[1]ತ-
ಸುಖಕ್ಕಾವಾಸಮಪ್ಪಾರ್ಹತ।
ವ್ರತದೊಳ್ನತ್ತಿಪನಾವನಾತನೆ ವಲಂ-
ಸಮ್ಯಕ್ತ್ವರತ್ನಾಕರಂ ॥ ೧೧೮ ॥

ಅಪವರ್ಗೋಚಿತಮಾರ್ಗ್ಗದಿಂದಿನಿತುಮಂ-
ಮಿಥ್ಯಾತ್ವದೊಳ್ಕೂಡಿವ-।
ತ್ರಿಪದೆಯ್ವಂ ತಪಮಾತ್ರಯಂ ತಪಸಿಗ[2]ಳ್ತದ್‌ಜ್ಞಾ-
ನ[2]ಮಾಜ್ಞಾನಮೆಂ-।
ಬ ಪುರಾಣೇಷ್ಟದಿನಾಷಡಾಯತನಮಂ ಸೇವಿಪ್ಪುದಂ-
ಬಿಟ್ಟು ಮಿ-।
ಕ್ಕಪವರ್ಗೋಚಿತಮಾರ್ಗ್ಗದೊಳ್ನಡೆವವಂ-
ಸಮ್ಯಕ್ತ್ವರತ್ನಾಕರಂ ॥ ೧೧೯ ॥

ಕಂ॥ ಎಲ್ಲಾದೆಯ್ವಗಳುಂ ತಾಂ।
ಕಲ್ಲುಂ ಮರನಾಗೆ ಕಾಣ್ಬನಭವಂಗರುಹಂ॥
ಗಲ್ಲದೆ ಪೆಱಗೆಱಗಲ್ತಾ-।
ನೊಲ್ಲನೆನಿಪ್ಪವನೆ ಜೈನನಲ್ಲದನಲ್ಲಂ ॥ ೧೨೦ ॥

ಒಂದೆಸೆಯೊಳ್ ಜಿನಬಿಂಬಮ-।
ನೊಂದೆಸೆಯೊಳ್ ಲಿಂಗವಿಷ್ಣುಬಿಂಬಮನವನಂ-॥
ತೊಂದೆಡೆಯೊಳ್ಪೂಜಿಸುವಾ।
ಸಂದೇಹಿಗೆ ಜೈನನೆಂಬ ಪೆಸರೆಂತೆಸೆಗುಂ ॥ ೧೨೧ ॥

---

೧. ಇ—ಶ್ವ; ೨. ಇ,—ಶಿಳುತಜ್ಞಾನಶಿ;

ದೇಗುಲಮಂ ಕಂಡಲ್ಲಿಗೆ |
ಪೋಗಿ ಮಹೇಶ್ವರನುಮಪ್ಪ ಬಸದಿಗೆ ಬಂದಿ- ||
ರ್ದ್ದಾಗಳೆ ಜೈನನುಮಪ್ಪಾ- |
ಕಾಗೆಗೆ ಸಮ್ಯಕ್ತ್ವಮೊಪ್ಪಲೇನಱಿದಪುದೆ || ೧೨೨ ||

ಎಕ್ಕಲದೇವಿಗೆ ಮಾವ- |
ಲಕ್ಕನಿಗಂ ಬನದ ಬಳರಿಗಂ ಮೈಲಾರಂ- ||
ಗಳ್ಕದೆ ಜಾತ್ರೆಯ ಮಾಳ್ಪಂ |
ಮೊಕ್ಕಳಗಂ ಜೈನನಲ್ಲನಾತಂ ಕಾ[1]ಳಂ || ೧೨೩ ||

ದಿವಸಕರ ಬೃಹಸ್ಪತಿ ಸೋ- |
ಮವಾರದಂದೇಕಠಾಣಮಂ ಪಂಚಮಿಯೊಳ್ ||
ನಾಗರಮಾಡುವ ಕಿವಿಯೊ- |
ಳ್ನಾಗರಹೆಡೆಯಿಡುವಡಲ್ಲವೆಂತುಂ ಜೈನಂ || ೧೨೪ ||

ಪೆಂಡತಿ ಮಾಹೇಶ್ವರಿ ಗಡ |
ಗಂಡಂ ಜೈನಂ ಗಡವನಮಕ್ಕಳ್ಗಡ ಮಾ- ||
ರ್ತಂಡಂಗೆ ಭಕ್ತರೆನಿಪಾ |
ಭಂಡಂಗುತ್ತಮದ ಜೈನವೆಸರಂತೆಸೆಗುಂ || ೧೨೫ ||

ಪದಿನೆಂಟುಂ ದೋಷಂಗಳ- |
ನುದಿರ್ಪ್ಪನಿರ್ದ್ದೋಷಿಯೆನಿಸಿದಂ ಪರಮಾತ್ಮಂ ||
ಪುದಿದಜ್ಞಾನದೆ ರಚಿಯಿಸೆ|
ಸದೋಷನೆಂದೂಳ್ವವಂ ಕುದೃಷ್ಟಂ ಕಷ್ಟಂ || ೧೨೬ ||

ವ|| ಜಿನಗೃಹಮಂ ಮನೋಮುದದೆ ಮಾಡದನಾಪ್ತ-
ಗೃಹಂಗಳಂ ಮಹಾ- |
ಜನಮನೆ ನೋಡಿ ಮಾಡಿಸುವವಂ-
ಶುಚಿಯಪ್ಪುದದತ್ತಲಿಕ್ಕೆ ಕ- |

೧. ಇ—ಕೌ;

ಲ್ಲನೆ ತೆಗೆವಲ್ಲಿ ಸುಣ್ಣಮುಮನಿಟ್ಟಗೆಯುಂ ಸುಡುವಲ್ಲಿ ಸಾವಜೀ- ।
ವನಿಕರದೊಂದು ಹಿಂಸೆಯೊಳೆ ಪಾಪಮೆ-
ಪೊಕ್ಕಳವೆಂದೆನಲ್ಪಲಂ ॥ ೧೨೭ ॥

ಕಂ॥ ಪರತಪಮಂ ಕಸವೆಂದಾ- ।
ಪುರಾಣಮಂ ಪುಸಿಯು ಪುಡಿಕೆಯೆಂದಂದವರಾ- ॥
ಪ್ತರೆ ಠಕ್ಕರೆಂದು ಬಗೆವನೆ ।
ನಿರುತಂ ದರ್ಶನಿಕನಪ್ಪನಲ್ಲದನಲ್ಲಂ ॥ ೧೨೮ ॥

ಅಱುವತ್ತನಾಲ್ಕುಕಳೆಯುಮ- ।
ನಱಿದೊಡವೇಂ ಜೈನನಲ್ಲದಿಪ್ಪವನಂ ತಾಂ ॥
ಕುಱಿಯುಂದಮಾಗೆ ಬಗೆವುದು ।
ಮಱಿದುಮಿವಂ ಯೋಗ್ಯನೆನ್ನದಿಪ್ಪುರ್ದುಜೈನಂ ॥ ೧೨೯ ॥

ಪೊದರು ಮರಂ ಗಿಡು ಪುಲ್ಲೆಂ- ।
ಬುದು ತಿರ್ಯಗ್ಜಾತಿಯೆಂಬುದಲ್ಲದೆ ನರನೆಂ- ।
ಬುದೆ ಜೈನನಲ್ಲದವನಂ ।
ಪದಪಿಂದಂ ಯೋಗ್ಯನೆನ್ನದಿಪ್ಪಂ ಜೈನಂ ॥ ೧೩೦ ॥

[1]ವೈದಿಕವಲ್ಲದೆ ಪರೆಕ- ।
ಲ್ಲಾಪ್ತನಿನ್ನನೆಂದಱಿಯದೆ ಪೆರ್ಗ್ಗಳಪನ.... ॥
ನುತ್ತಮ ಜೈನಂ ಗಿಳಿಯೆಂ- ।
ಬುದುಯೋಗ್ಯನೆನ್ನದಿಪ್ಪುದು ಮಱಿದುಂ....[1] ॥ ೧೩೧ ॥

ಯೋಗ್ಯಂ ತಾನೆನಿಸಿದೊಡಮು- ।
ಯೋಗ್ಯನೆ ಜಿನಮತದ ಸಾರಮಱಿಯದಮನುಜಂ ॥
ಯೋಗ್ಯಂ ತಾನಲ್ಲದೊಡಂ ।
ಯೋಗ್ಯನೆ ಜಿನಸೂಕ್ತದಲ್ಲಿ ರತಿಯುಳ್ಳ ನರಂ ॥ ೧೩೨ ॥

ಪ್ರಳಯಾನಿಳನಿಂ ಕನಕಾ- ।
ಚಳಮೆಂತುಂ ತರಳದಂತೆ ದರ್ಶನಶುದ್ಧಂ ॥

---

೧. ಈ—೧ವೈದಿಕಮಲ್ಲದೆ ಧರ್ಮಮ । ನಾದರಿಸುವೆನಲೆ.ನೆಂದೆನುತ್ತಂ ಪಾತ್ರಂ ॥
ಭೂದೇವರೆ ಜಗದೊಳಗೆಂ । ಬಾದರ.ರಿಗಂಗೆ ಜೈನಪೆಸರೆಂತೆಸಗುಂ ॥೧

ಚಳಿಯಿಸಲಱಿ[1]ಯುಂ ಕುಮತಂ- ।
ಗಳಿನಾಪ್ತಪದಾರ್ತ್ಥದಲ್ಲಿ ದೃಢನಪ್ಪುದಱಿಂ ॥ ೧೩೩ ॥

ಪರಲಿಂಗಿಗಳ ತಪಂ ದು- ।
ರ್ದ್ಧರವೆನುತಂ ಪೊಗಳ್ದು ಭಗವರಂ ಗೊರವರನಾ- ॥
ದರದಿಂ ಸ್ನಾತಕರಂ ಬು॥- ।
ದ್ಧರನೊಂದಲ್ಕಕ್ಕುವೆನ್ನದಂ ದರ್ಶನಿಕಂ ॥ ೧೩೪ ॥

ಚಾರಿತ್ರದಲ್ಲಿ ತಪಗಳೊ- ।
ಳಾರಿಂದಂ ಪಿರಿಯರೆನಿಪ ಪರಲಿಂಗಿಯುಮಂ ॥
ಸೇರಿಂದೆ ಕಷ್ಟಮೆಂದು ವಿ- ।
ಚಾರಿಸುವಂ ಜೈನನನ್ನನಲ್ಲದನಲ್ಲಂ ॥ ೧೩೫ ॥

ಅರಿದೆನಿಪ ತಪದೆ ನೆಗಳ್ದೊಡ- ।
ಮರಿದೆನಿಪ ಚರಿತ್ರದಿಂದೆ ನೆಗಳ್ದೊಡಮೇನೋ ॥
ಪರಿಕಿಸುವೊಡಾಯುಮಿಲ್ಲದ ।
ಸಿರಿಯಿಂದಮೆ ಶುದ್ಧದೃಷ್ಟಿಯಲ್ಲದನೆಸಕಂ ॥ ೧೩೬ ॥

ಪೊಡವಡುಗೆಮು ಜೀಯೆಂಗುಮು ।
ಕುಡೆಕೊಳ್ಗೆಮು ಧರ್ಮ್ಮದಲ್ಲಿ ಮಾಧ್ಯಸ್ಥಿಕೆಯಂ ॥
ನುಡಿಗೆಮು ಪರಸಮಯಿಗಳೊ- ।
ಳ್ಕಿಡದಿಕ್ಕುಮೆ ಸ್ವಾರ್ತ್ಥವಶದ ಸದ್ರುಷ್ಟಿತ್ವಂ ॥ ೧೩೭ ॥

ಇಷ್ಟನೆನಿಸಿರ್ದ್ದ ಮಿಥ್ಯಾ- ।
ದೃಷ್ಟಿಗೆ ಜಿನಧರ್ಮ್ಮದತ್ತಲೆಱಗೆಂಬವೊಲು- ॥
ತ್ಕೃಷ್ಟನೆನೆ ನೆಗಳ್ದ ಸಮ್ಯ- ।
ಗ್ದೃಷ್ಟಿಯುವಂಗೆಱಗೆ ಕಿಡದೆ ಸಮ್ಯಕ್ತ್ವಗುಣಂ ॥ ೧೩೮ ॥

ನುಡಿಯದೆ ಕೂಳಂ ತಿಂಬನೆ ।
ಎಡಹಿದೊಡರಹಂತನೆಂಬವಂ ಜೈನನೆಯು- ॥
ಪ್ಪೊಡೆ ಮೂಗಮೇಣಗೋಣಂ ।
ನುಡಿವವನುಂ ಜೈನನಾಗದೇಕೆಯೊ ಮಾಣ್ಬಂ ॥ ೧೩೯ ॥

---
೧. ಇ—ಬೌ;

ವ್ಯವಹಾರ ಕುಶಲನಾಗ- ।
ಲ್ಕೆವೇಳ್ಪುದೆಂದವನೆ ಪಿಡಿದು ಜಿನಮಾರ್ಗ್ಗಮನೊಂ- ॥
ದುವನಲ್ಲದೆನಿಪ ಲೋಕ ।
ವ್ಯವಹಾರದೆ ತಕ್ಕನಲ್ಲದಲ್ಲಂ ಜೈನಂ ॥ ೧೪೦ ॥

ಆಗಮಮನೆಭಾವಿಸುತಿ- ।
ಪ್ಪಾಗಮಮಾರ್ಗ್ಗದೊಳೆ ನಡೆವ ನುಡಿವಾಗಳ್ತಾ- ॥
ನಾಗಮಭಾಷೆಗಳನೆ ನುಡಿ- ।
ವಾ ಗುಣನಿಧಿ ಜೈನನಕ್ಕುಮಲ್ಲದನಲ್ಲಂ ॥ ೧೪೧ ॥

ಜೈನರೆ ಕಣ್ಣುಂ ಗತಿಯುಂ ।
ಜೈನರೆ ತಾಯ್ತಂದೆ ಸಕಳಮಾದಪದಾರ್ತ್ಥಂ ॥
ಜೈನರೆನಗೆಂದು ವರ್ತ್ತಿಪ ।
ಜೈನಂ ಜೈನರೊಳಗೆಲ್ಲಮುತ್ತಮಜೈನಂ ॥ ೧೪೨ ॥

ಪರಮಾರ್ತ್ಥದಿಂ ಜಿನಾದೀ- ।
ಶ್ವರ ನೆಳ್ಳಂಕೊದಳಿವೆರಸುಮೊದ್ದವನಕ್ಕುಂ ॥
ಪಿರಿದುಂ ತಾತ್ಪರ್ಯ್ಯಂ ಜೈ- ।
ನರೊಳೆಂತುಮಿವಂಗಿದೇನೆನಿಪ್ಪಂ ಜೈನಂ ॥ ೧೪೩ ॥

ಬಹುಳಾಳಾಪದೊಳೇಂ ಮು- ।
ಕ್ತಿಹೇತುತಾವಲ್ಲದೆನಿಪ ಲೌಕಿಕಚರಿತಂ ॥
ಪ್ರಹಸನಪಾತ್ರನೆನುತ್ತಂ ।
ಮಹಿತಾಚಾರದೊಳೆ ನಡೆವನುತ್ತಮ ಜೈನಂ ॥ ೧೪೪ ॥

ಇದುಮುಕ್ತಿಹೇತುವೆಂದೆಂ- ।
ಬುದನಱಿತುಂ ಪೆಱತನಱಿದೊಡೆಂತೆಂದೆನೆನೂ- ॥
ಲ್ವುದು ಗಿಡಿಸಿದೈವವಾಡ- ।
ಲ್ಕದೇಕೆ ಖಳಕರ್ಮ್ಮಬಂಧಮಂ ಬಿಡಿಸುವವಂ ॥ ೧೪೫ ॥

ಪಿರಿದುಂ ನುಡಿಯುಂ ಸುಜನಂ ।
ಸ್ಥಿರಸತ್ವಂ ಮಧುರವಚನನತ್ಯಂತದಯಾ- ॥
ಪರನತಿ ನಿರ್ಮ್ಮಳನೆನಿಸಿದ ।
ನರನಂ ಕಂಡಱಿಗೆ ಭವ್ಯನೆಂದಱಿವಾತಂ ॥ ೧೪೬ ॥

ಮದಮಾತ್ಸರ್ಯ್ಯವಿದೂರಿತ |
ಮೃದುವಚನಂ ಶಾಂತಮೂರ್ತ್ತಿನಿರ್ಮ್ಮಳಮತಿ ಜೀ- ||
ವದಯಾಪರನಪ್ಪನನಱಿ- |
ವುದು ಭಾವಿಸಿ ಭವ್ಯನೀತನೆಂದಱಿವಾತಂ || ೧೪೭ ||

ನಷ್ಟಾಚಾರನನೆಂದುಂ |
ದುಷ್ಟನನುದ್ಧತನನಾರೊಳಂ ಸೆಣಸುವನಂ ||
ಶಿಷ್ಟರನುಡಿಯುಂ ಕೇಳದ |
ಕಷ್ಟನುಮಿವನಲ್ಲ ಜೈನನೆಂದಱಿಗಱಿವಂ || ೧೪೮ ||

ಇದನಿಂಬಾಗಱಿಗೆ ಕುಮಾ- |
ರ್ಗ್ಗದೊಳಾವಂ ನಡೆವನವನೆ ವೈಷ್ಣವನೆಂದೆಂ- ||
ಬುದು ಮೋಣ್ಮಾಹೇಶ್ವರನೆಂ-|
ಬುದು ದಿಟದಿಂ ದೈವಧರ್ಮ್ಮದೊಳಗಱಿಯದವಂ || ೧೪೯ ||

ಅವರಿವರೆನ್ನದೆ ಮಿಥ್ಯಾ- |
ತ್ವವಶದೆ ಮಾಹೇಶ್ವರದ್ದಿಟಕ್ಕೆನೆ ಸಂದಿ- ||
ರ್ದ್ದವರೊಳಗೆತ್ತಾನುಂ ಪು- |
ಣ್ಯವಶದೆ ಸದ್ರುಷ್ಟಿಯಾದ ಕೆಲಬರೆ ಜೈನರ್ || ೧೫೦ ||

ಕಳ್ಳಂ ಪಿರಿದುಂ ಕುಡಿವವ |
ನೊಳ್ಳಿತು ಹೊಲ್ಲೆಂದು ಮಱಿಯನಂತದಱಿಂದಾ- ||
ಕಳ್ಳಿಂ ಮಿಥ್ಯಾತ್ವಮೆ ಮಿಗಿ- |
ಲೊಳ್ಳಿತಃ ಹೊಲ್ಲೆಂದು ಭೇದಮಱಿಯದ ಕಥದಿಂ || ೧೫೧ ||

ಕಳ್ಳಂ ಕುಡಿದಂ ತಿಳಿದಂ- |
ದೊಳ್ಳಿತು ಹೊಲ್ಲೆಂದು ಮಱಿವೆನೆಂದಾನುಂ ತಾ- ||
ನೊಳ್ಳಿತ್ತು ಹೊಲ್ಲದೆಂಬುದ- |
ನೆಳ್ಳನಿತುಂ ತಿಳಿಯದಾ ಕುದೃಷ್ಟಿಯೆ ಕಷ್ಟಂ || ೧೫೨ ||

ಒಳ್ಳಿತ್ತು ಹೊಲ್ಲದೆಂಬುದ- |
ನೊಳ್ಳಿತ್ತಾಗಱಿಯಲಿಯದಂತಾಕಥದಿಂ ||
ಕಳ್ಳಿಂ ಕನಕದಕಾಯಿಂ |
ಗುಳ್ಳದ ವಿಷದಿಂದಮಗ್ಗಳಂ ಮಿಥ್ಯಾತ್ವಂ | ೧೫೩ ||

ವೃ॥ ಜಿತದೋಷಂ ಮದವೆಂಟುಮಂ ತೊಱೆದು-
ದುಃಖಾವಾಸಮಪ್ಪಾಷಡಾ- ।
ಯತನ ಪ್ರೀತಿಯೆನಾವಗಂ ಕಿಡಿಸಿ ಮೂಱುಂ-
ಮೂಢಮಂ ಬಿಟ್ಟು ಸ- ।
ನ್ಮತಿಯೆಂ ಬೆಂಟೆಸೆವಂಗದೊಳ್ನೆಱೆದು ಲೋಕಸ್ತುತ್ಯನಪ್ಪಾರ್ಹತ ।
ವ್ರತದೊಳ್ವರ್ತಿಪನಾವನಾತನೆ ವಲಂಸಮ್ಯಕ್ತ್ವರತ್ನಾಕರಂ ॥ ೧೫೪ ॥

ಕಂ॥ ಇಂತಿಪ್ಪತ್ತೈದುಂ ಮಳ- ।
ಮಂ ತೊಱೆದು ಜಿನೇಂದ್ರಧರ್ಮ್ಮಮಖಿಳಜಗಕ್ಕೋ- ॥
ರಂತಾಯ್ತು ವಂದ್ಯವೆನಗಾ- ।
ಯ್ತುಂತದೆ ಮೋಕ್ಷಪಥಮೆಂಬವಂ ದರ್ಶನಿಕಂ ॥ ೧೫೫ ॥
ಕೆಸಱೊಳಗಬ್ಜಂ ಕಲ್ಲೊ- ।
ಳ್ಮಿಸುಗುವ ಪೊಂಪುಟ್ಟಿಪೊಲ್ಲದಂತಾವೆಡೆಯುಂ ॥
ವಸುಧಾಸೇವ್ಯಂ ಕ್ಷೀರಂ ।
ಪಶುವಿನ ತನುವಿನೊಳು ಪುಟ್ಟಿ ಪೋಲದುತನುವಂ ॥ ೧೫೬ ॥
ಮದಮೂಢಷಡಾಯತನದೊ- ।
ಳೊದವಿದ ಶಂಕಾದಿ ಮಳದೊಳೊಂದದೆ ಸಮ್ಯ- ॥
ಕ್ತ್ವದೊಳೊಂದಿ ದೃಢವ್ರತನ- ।
ಪ್ಪುದಱಿಂದಮೆ ಮುಕ್ತನಪ್ಪನೆಂತುಂ ಭವ್ಯಂ ॥ ೧೫೭ ॥
ನಾರಕ ತಿರಿಕಗ್ಗತಿಯುಂ ।
ಸಾರಂ ಕುತ್ಸಿತಕುದೇಶದೊಳ್ಪುಟ್ಟಿರಣಂ ॥
ದಾರಿದ್ರದ ದೆಸೆಯಱಿಯುರ್ ।
ನಾರಿತ್ವದೊಳೊಂದರೆಲ್ಲಿಯುಂ ದರ್ಶನಿಕರ್ । ೧೫೮ ॥
೨ವಿಕಳೇಂದ್ರಿಯ ಜಾತಿವ್ರತ ।
ನಿರತನನೆಲ್ಲದೊಡವಾರ್ಹತನೆಂತುಂ ಭವಸ- ॥
ಮುದ್ರದೊಳ್ಸುಳಿಯುಂ ದುರ್ಗ್ಗತಿ- ।
ಯೊಳ್ಪುಟ್ಟಂಪಂಚಮಗತಿಯಂಪಡೆಯದಾತನೆಡೆಯೊಳ್ನಿಲ್ಲಂ೨॥೧೫೯॥

---

೧. ಅ—ಶು; ೨. ಈ—೨ವ್ರತನಿರತನಲ್ಲದೊಡವಾ- । ರ್ಹತನೆಂದುಂಭವಸಮುದ್ರ ದೊಳುಸುಳಿಯೆಂ ದು- ॥
ರ್ಗತಿಯೊಳ್ ಪುಟ್ಟಂ ಪಂಚಮ- । ಗತಿಯೊಳ್ ನಿಲ್ಲದಾತನಡೆಯೊಳು ನಿಲ್ಲಂ ॥೨

ಅನುಪಮದರ್ಶನದಿಂ ಕೆ- ।
ಟ್ಟನೆ ಕೆಟ್ಟಂ ತನ್ನ ಚರಿತದಿಂದಂ ಕೆಟ್ಟಾ-॥
ತನೆ ಕೆಟ್ಟನಲ್ಲನದಱಿಂ ।
ಜಿನಧರ್ಮ್ಮಂ ನಚ್ಚಿದಂಗೆ ಕೇಡಿಲ್ಲೆಂತುಂ ॥ ೧೬೦ ॥
ಪರಮಾರ್ತ್ಥಂ ಶಲ್ಯತ್ರಯ ।
ವಿರಹಿತನಮಳಿನ ಚರಿತ್ರಯುತನೆಂದು ತದು- ॥
ರ್ವ್ವರೆ ಪೊಗಳೆ ರೂಢಿವೆತ್ತಂ ।
ಪರಮಶ್ರೀನಾಥನೆನಿಸಿ ಸಿರಿವೆತ್ತ ನರಂ ॥ ೧೬೧ ॥

ವೃ॥ ಅತಿರಮ್ಯಾಂಗುಳಿ ಶಾ[1]ಖವಾಕ್ಪ[1]ಳಿತದಾನಂ-
ವಿಸ್ತೃತಚ್ಛಾಯೆಮೂ- ।
ರ್ಜ್ಜಿತರಾಗಾರುಣಪಲ್ಲವಂ ನಖಮಣಿ-
ಪ್ರೋತ್ಫುಲ್ಲಲೀಲಂ ನಿಜ- ।
ಸ್ಥಿತಿಸೇವ್ಯಂ ವಿನಮದ್ವಿನೇಯಜನಭೃಂಗಂ-
ಭವ್ಯಲೋಕಕ್ಕೆ ಸಂ- ।
ತತಮೀಗಿಷ್ಟಫಲಂಗಳಂ ಪರಮ ಜೈನೇಂದ್ರಾಂಘ್ರಿ-
ಕಲ್ಪಾಂಘ್ರಿಪಂ ॥ ೧೬೨ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣ ಪರಿಣತಾಂತಃಕರಣ ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾಸಮುಯತಿಮಿರಚಂಡಕಿರಣ ಸಕಳಾಗಮಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವವಿರಚಿತಸಮುಯಪರೀಕ್ಷೆಯೊಳು ಸಮ್ಯಕ್ತ್ವ-ಸ್ವರೂಪ ನಿರೂಪಣಂ ಚತುರ್ತ್ಥಾಧಿಕಾರಂ ॥

ಶ್ರೀ ಶ್ರೀ ಶ್ರೀ

---

೧. ಇ—೧ಚೆಮುಸ್ಪ೧;

॥ ಶ್ರೀ ॥

ಪಂಚಮಾಧಿಕಾರಮ್

ಶ್ರೀಮದಮರೇಂದ್ರನಿಚಯ ಶಿ- ।
ಖಾಮಣಿ ಮಾಲಾರ್ಚಿತಾಂಘ್ರಿಯುಗಳಂ ಮುಕ್ತಿ- ॥
ಶ್ರೀಮಹಿತಂ ತ್ರಿಭುವನಚಿಂ- ।
ತಾಮಣಿ ದಯೆಗೆಯ್ಗೆ ವಿಮಳ ರತ್ನತ್ರಯಮಂ ॥ ೧ ॥

ವೃ॥ ಅತಿ ಚಾತುರ್ಯಪದರ್ ವಿವೇಕ-
ನಿಳಯಸ್ಸರ್ವಜ್ಞಸದ್ಭಾವನಿ- ।
ಶ್ರಿತಚಿತ್ತರ್ಗುಣಭೂಷಣರ್ಪರ-
ಹಿತಾಚಾರರ್ಮಹೋತ್ಸಾಹಸಂ- ।
ಯುತರಾಪ್ತಾಗಮಸಚ್ಚರಿತ್ರ-
ನಿಪುಣರ್ಧರ್ಮಾನುರಾಗಾತ್ಮರೀ ।
ಕ್ಷಿತಿಯೊಳ್ಭವ್ಯಸಮಾಜಮೊಂದು-
ವಿಬುಧರ್ಕೃತಾರ್ಥರ್ಗಳುಂ ಕೀರ್ತಿಪರ್ ॥ ೨ ॥

ಕಂ॥ ಮನವಚನಕಾಯದಿಂ ಜೀ- ।
ವನಿಕಾಯಮನೆಯ್ದಿಸಲ್ಕೆ ಪೆಱನಱಿವನೆ ಜೈ- ॥
ನನೆ ಸುಗತಿಗೆಯ್ದುಕುಂ ತಾ- ।
ನೆನೆ ಜಗದೊಳ್ ಜೈನರಿಂ ದಯಾಪರರೊಳರೇ ॥ ೩ ॥

ಒಡಲುಳ್ಳನಿತುಂ ನಸಿದೊಡೆ ।
ಬಿಡಲಾಱಂ ತನ್ನನಿಂತಮೇಧ್ಯದ ಪುೞುವುಂ ॥
ಬಿಡಲಾಱದು ದೇಹಮನೆಂ- ।
ದಡೆ ದೇಹಿಗೆ ದೇಹದಿಂದ ಸಖಿ ಪೆಱತುಂಟೆ ॥ ೪ ॥

ಒಡಗೂಡಿದವರಗಲ್ಕೆಗೆ ।
ಗಡ ಪಿರಿದುಂ ದುಃಖಮಕ್ಕು[1]ಮೆಂದೊಡ[1] ಬ- ॥
ಟ್ಟೊಡಲಂ ಸಲೆ ಪತ್ತಿದುದಂ ।
ಬಿಡುವಾಗಳ್ ಘೋರೆಯುಂಟೆ ದೇಹಿಗೆ ದುಃಖಂ ॥ ೫ ॥

ಎಡಪಿಯು ಮಂಗಾಲಮ್ಮುಳು ।
ನಡೆಯುಂ ತಾನೆಂತು ನೊಂದು ಮಱುಗುವನಂತೆ- ॥
ಲ್ಲೆಡೆಗಳೊಳಂ ಪ್ರಾಣಿಗಳಂ ।
ಮುಡಿಪದೆ ನೋಯಿಸದೆ ಕಾವುದೆಂಬಂ ಜೈನಂ ॥ ೬ ॥

ನಡವೆಡೆಯೊಳ್ನಿಲುವೆಡೆಯೊ[2]- ।
ಳ್ಪಿಡುವೆಡೆಯೊಳ್ ಜೀವನಿಕರಮಂ ರಕ್ಷಿಸದಿ- ॥
ರ್ದ್ದೊಡೆ ಪಾಪಮಕ್ಕುಮೆಂದೆಂ- ।
ದಡಿಗಡಿಗಾರೈದು ನೋಡಿ ನಡೆವಂ ಜೈನಂ ॥ ೭ ॥

ಕಸಗಳವೆಡೆಗಳೊಳಂಸಾ ।
ರಿಸುವೆಡೆಯೊಳಮಕ್ಕಿಗುಟ್ಟುವೆಡೆಯೊಳ್ಸಲೆ ಸೋ- ॥
ಧಿಸಿ ಜೀವನಿಕರಮಂ ರ- ।
ಕ್ಷಿಸುವರೆನಲ್ ಜೈನರಿಂ ದಯಾಪರರೊಳರೇ ॥ ೮ ॥

ಆವಾವ ಮಾಳ್ಕೆಯಿಂದಂ ।
ಜೀವಂಗಳ ನೋವಿ ನಡೆವರಲ್ಲದೆ ಮುಱಿದುಂ ॥
ಸಾವದ್ಯಮೆಂದೊಡೊಮ್ಮೊಱ ।
ಪಾಪಿಗಂಜದುದನಂಜುವರ್ಸ್ಸಲೆ ಜೈನರ್ ॥ ೯ ॥

ತೊತ್ತಿರ ಬಂಟರ ಪಶುಗಳ ।
ಕತ್ತೆಯ ಕಿವಿಮೂಗನರಿವ ಪೀಡಿಪ ಬಿಡದಾ ॥
ಪೊತ್ತುಂ ಕೆಲಸಂಗೊಳ್ವ ನೆ- ।
ಗಳ್ತಿಗಳಂ ನೆಗಳಲೆಂತುಮಱಿಯರ್ಜೈನರ್ ॥ ೧೦ ॥

ದೇವತೆಗೆ ಪರಕೆಗುಡೆ ನಾ- ।
ನಾವಿಧರುಜೆ ಪಿಂಗಿಪೋಗೆ ಬರ್ದುಕಿದೆನೆಂಬ- ॥

---

೧. ಇ—೧ವೆಂದುವೊಡಂ೧; ೨. ಇ—೨ಳ್।ಇ೨;

ರ್ದ್ದೇವತೆಗೆ ಕುಡದೆ ಸತ್ತರೆ |
ತೀವಿದ ಮನೆಗಳನೆ ಪರಕೆಗೊಟ್ಟ[೧]ರ್ಸ್ಸ[೧]ತ್ತರ್ ॥ ೧೧ ॥

ನೀರಂ ತೋಱದೆ ಪಸಿದುದ- |
ನಾರಯ್ಯದೆ ಸೆದೆಯುಱಿದು ನಿಲಿಸದೆ ಪಿರಿದುಂ ॥
ಭಾರಮನೇಱಿಸಿ ಪಸುವಂ |
ದೂರಾಂತರಮೊಯ್ಯದೋವಿ ನೆಗಳ್ವರ್ಜ್ಜೈನರ್ ॥ ೧೨ ॥

ಮುಂಗುರಿ ಮಾರ್ಜ್ಜಾರಂ ಸಾ- |
ರಂಗಂ ಪುಲಿ ಕೋೞಿ ಗಿಡಿಗನೆಂಬಿವೆದಲ್ಜೀ- ॥
ವಂಗಳ್ಗೆ ಬಾಧೆ ಮಾಳ್ಪುವ- |
ವಂ ಗುಣಿಗಳ್ಸಡಪದಾಗಲೆಂಬಂ ಜೈನಂ ॥ ೧೩ ॥

ಕ್ರೂರಮೃಗಪಕ್ಷಿನಿಚಯಮು- |
ನೋರಂತಿರೆ ಪೊರೆದ ಪಾಪಫಲದಿಂ ಮನುಜಂ ॥
ಘೋರತರಮಪ್ಪ ದುಃಖಾಂ- |
ಭೋರಾಸಿಯೊಳಾಳ್ಗುಮೆಂದು ಭೀತಂ ಜೈನಂ ॥ ೧೪ ॥

ತಗರಂ ಕೋೞಿಗಳಂ ಲಾ- |
ವಗೆಗಳನೆಸೆವೆಮ್ಮ ವೋರಿಯುಂ ಪಾಪಿಷ್ಠ- ॥
ರ್ಮ್ಮಗೆ ಬಸನದಿಂದೆ ಪೋರಿಪ- |
ರಗಣಿತಗುಣರಱಿದು ತೊಱೆದು ನೆಗಳ್ವರ್ಜ್ಜೈನರ್ ॥ ೧೫ ॥

ಸಂದಗುಣಮುಳದೊಳತ್ಯಾ- |
ನಂದಮನರ್ಬ್ಬಗೆವರೊಳ್ವನಲ್ಲದೆ ಹಿಂಸಾ- ॥
ನಂದದೆ ಬೊಬ್ಬಿಱಿದಾಡುವ |
ರೆಂದಡೆ ರಾಗಿಸಲುಮೆಂತುಮಱಿವರ್ಜ್ಜೈನರ್ ॥ ೧೬ ॥

ಕುಡುಗೋಲಂ ಕೂಱಿಗೆಯುಂ |
ಕೊಡಲಿ ಕುರಿ[೨]ಂಡಿ[೨]ಗೆಯನುಳುವ ಹರಗುವ ಕಱಿಪಿಂ ॥
ಬಿಡುವವಗಳ್ವಾ ಮುಟ್ಟಂ |
ಕುಡರೆರವಂ ಪೆಱಿಗರ್ಗೆ ಪಾಪಭೀತರ್ಜ್ಜೈನರ್ ॥ ೧೭ ॥

---

೧. ಇ—[೧]ಟ್ಟುಂಸ[೧]; ೨. ಇ—[೨]ರುಂಜಿ[೨];

ಇಂತಪ್ಪ ಧಾನ್ಯನಿಚಯಮ- ।
ನಿಂತಪ್ಪೆಡೆ ಬೆಳುವುದಿಲ್ಲಿ ಜಳಚರವೊಳವಿ- ॥
ಲ್ಲಿಂತಪ್ಪಡವಿಗಳೊಳು ಮೃಗ ।
ಸಂತತಿಯುಂಟೆಂದು ಪೇಳನೆಂತುಂ ಜೈನಂ ॥ ೧೮ ॥

ಕುತ್ತಮಿನಿಸಾದಡನ್ಯ- ।
ರ್ಮೃತ್ತೆನಿಸದೆ ಬಳರಿಗೊಯ್ದು ಕುಡುವಕ್ಕುರ್ಱಿಯಂ ॥
ಸತ್ತವರ್ಗಳಿದ್ದರ್ ಬಪ್ಪರ್ಡ- ।
ಮೆತ್ತಾನುಂ ಹಿಂಸೆಗೆಯ್ಯಲಱಿಯರ್ಜೈನರ್ ॥ ೧೯ ॥

ವೃ॥ ತನಗೆ ಕಡಂಗಿ ಮಿತ್ತುಸುರೆ ಮಾನಿಸರಂ ಕುರಿಯಂ-
ಬಳಾರಿಗಾ- ।
ಪ್ಪರ್ನಿತನೆ ಕೊಟ್ಟು ಜೀವಿಸುವೆನೆಂದಳಿಮೋಹದೆ-
ಕೊಲ್ವ ಪಾಪ ಕ- ।
ರ್ಮ್ಮನೆನಿಮಿಷಾರ್ದ್ಧಮಂಬದುರ್ಕನಾಗಳೆ-
ಸಾವನಮೋಘಮೆಂತು ಸ- ।
ತ್ತನನೆಳದೊಯ್ದು ಘೋರನರಕಂಗಳೊಳಿಕ್ಕುವ-
ರೊಲ್ದು ನಾರಕರ್ ॥ ೨೦ ॥

ಕಂ॥ ದೇವತೆಯ ಮುಂದೆ ಕೊಂದಡೆ ।
ಜೀವಂಗಳನಾಗ ಸಾವವಂ ಬದುರ್ಕುವನೆಂ- ॥
ದೀವಿಧದೆ ಕೊಲ್ವನರನಾ- ।
ದೇವತೆಗಳ ಕಾದ ಬಟ್ಟೆಯುಳ್ಳಡೆ ತೋಱಿಂ ॥ ೨೧ ॥

ಮಾತಿಂ ಮುನ್ನಂ ನಿನ್ನಂ ।
ಘಾತಿಸಿದೆನೆನುತ್ತ ನುಡಿವರಿತರನ್ನಿರುತಂ ॥
ಮಾತಾಡುವಲ್ಲಿ ಪೆಱತಂ[1] ।
ಘಾತಿಸಿದೆನೆನಲ್ಕೆ ಜೈನರಱಿವರೆ ಮಱೆದುಂ ॥ ೨೨ ॥

ಭಾವಿಸುವನಾವನೆಲ್ಲಾ ।
ಜೀವಮುಮಂ ತನ್ನಮಕ್ಕಳಿಂತೆಂತವನಂ ॥

---

೧. ಇ, ಈ—ರಂ;

ಭಾವಿಸುಗುಂ ಭೂವಳಯಂ ।
ದೇವನಿವಂ ಮನುಜನಲ್ಲನೆಂದಾ ಪೊತ್ತುಂ ॥ ೨೩ ॥

ಎನಿತೊಳವು ಧರ್ಮ್ಮಶಾಸ್ತ್ರಮ- ।
ವನಿತುಮನಱಿವನ್ಯಸಮಯಿ[1]ಯುಂ[1] ಭಾವಿಪೊಡೀ ॥
ಜಿನಸಮಯಿಯಲ್ಲಿ ಕಡೆಪ- ।
ಟ್ಟನೊಳಂ ಸಮನಾಗಲೆಂತುಮಾಱಂ ದಯೆಯೊಳ್ ॥ ೨೪ ॥

ಹಿಂಸಾದಿ ದೋಷಚಯಮುಮಂ ।
ತಾಂ ಸಲೆ ಮಾಡುತ್ತಲಿಪ್ಪ ಪಾಪಿಗೆ ದುರಿತ- ॥
ಧ್ವಂಸಂ ಮಾಡುವ ಜಿನವಚ- ।
ನಂ ಸೊಗಯಿಸದಿನಿಬರಿರ್ದ್ದು ಪೇಳ್ದಡಮೆಂತುಂ ॥ ೨೫ ॥

ದಯೆಯಿಲ್ಲದನ್ಯ ಸಮಯಿಗ- ।
ಳ ಯಥೇಷ್ಟಚರಿತ್ರದಿಂದೆ ಜೈನಚರಿತ್ರಂ ॥
ಪ್ರಿಯಮಾದುದಂತೆ ದಲ್ ರೂ- ।
ಢಿಯ ತಮಮಿಲ್ಲದೊಡೆ ಭಾನುವೇಸೆಸೆದಪನೇ ॥ ೨೬ ॥

ಜೀವಂಗೆ ಸೌಖ್ಯನಿಳಯಂ ।
ಸಾವದ್ಯನಿವೃತ್ತಿಸಪ್ತರಿದ್ಧಿಯುಮದಱಿಂ- ॥
ದಾವೊಂಗಮುಕ್ಕುಮೆಂತುಂ ।
ಭಾವಿಸಿ ದಯೆಯಿಂದಮಿನ್ನತಃ ಪರಮುಂಟೆ ॥ ೨೭ ॥

ಆವಂಗಂ ತನ್ನಿಂದಂ ।
ಸಾವುಂ ಕೇಡುಂ ಭಯಂಗಳುಂ ವಿಕಳತೆಯುಂ ॥
ನೋವುಮೆನಸುಂ ಗಡಾಯ್ತೆನ- ।
ಲಾವಂ ಸಲೆ ನುಡಿಯನಂದುಮಾತನೆ ದೇವಂ ॥ ೨೮ ॥

ಪುಸಿಯಂ ನುಡಿವವರ್ಗಳ ಮಾ- ।
ನಸಿಕ್ಕೆಯುಂ ಗುಣಮುಮಳಿಗುಮಂತವರಂ ಮ- ॥
ನ್ನಿಸರಾರುಂ ಭಾವಿಸುವಡೆ ।
ಪುಸಿಯದೆ ತಾ ಮೊದಲು ಪಾತಕಂಗಳೊಳೆಲ್ಲಂ ॥ ೨೯ ॥

---

೧. ಇ—[1]ಯಮುಂ[1];

ವೃ॥ ಪರದಾರಾಭಿಗಮಕ್ಕೆಹೇತುವಳಿಪಿಂ-
ಗನ್ಯಸ್ವಮಂ ಕೊಳ್ವ ದು- ।
ಶ್ಚರಿತಂಗಂ ಪುಸಿಬಾಳ್ಕೊದಲ್ನುಡಿಗುಮಂತಾ-
ವಾರ್ತೆಯಂ ಮದ್ಯಪಾ- ।
ನರತಂ ಮೇಣ್ಮೃಗಯಾನುರಕ್ತನದಱಿಂದಂ-
ವಾನೃತತ್ಪಾತಕಂ ।
ಪರಮೆಂಬೀ ನುಡಿಯುಂ ವಿಚಾರಿಸದವಂ-
ಪಾಪಕ್ಕೆ ಪಕ್ಕಾಗನೇ ॥ ೩೦ ॥

ಕಂ॥ ಮಱೆದಪ್ಪಡಮೆಂದುಂ ನುಡಿ- ।
ದಱಿಯುಂ ದಿಟಮಪ್ಪನುಡಿಗಳಂ ಮಾಣದೆ ಪೊ- ॥
ಚ್ಚಱಿತನದಿ ನುಡಿವನೆನಿಸಿ- ।
ಲ್ಲಱಿಗುಲಿಗಂ ^೧^ವೋಗೆ^೧^ ಸೂನೃತವ್ರತಮೆಂತುಂ ॥ ೩೧ ॥

ಇವಳವಳು ಚೆಲ್ವರೂಪಿನೊ- ।
ಳಿವಂಗೆ ಪೊನ್ನುಂಟು ಕೊಲ್ವುದೀ ತೆಱದಿಂದಿ- ॥
ನ್ನಿವನಂ ದಂಡಿಪುದೆನಲೇ- ।
ನವಶ್ಯಮರಿದಪರೆ ಜೈನರೆಂದುಂ ಮಱೆದುಂ ॥ ೩೨ ॥

ಪರಪರಿವಾದಮನೆಂತುಂ ।
ಪಿರಿದಪ್ಪರ್ತಿಯೊಳೆ ಕೇಳರುತ್ತಮ ಗುಣಮುತ್ತ- ॥
ಮರೆನೆಕೇಳುತ್ತಿಪ್ಪರ್ದರು ।
ಪರಮಾನರರದಿಂದೆ ಜೈನಸಮಯಿಗಳಾರುಂ ॥ ೩೩ ॥

ಅನುವದಿಸಿ ಧರ್ಮ್ಮಮಂ ಕಿವಿ- ।
ಗಿನಿದಾಗೆ ಪರತ್ರೆಗಿದುವೆ ಹಿತವೆನಿಸಿದ ಮಾ- ॥
ತನೆ ನುಡಿವರುಳಿದರಂದವಿ- ।
ನನೇಕಮಂ ನುಡಿಯುಲೆಂತುಮಱಿಯುಜ್ಜೈನರ್ ॥ ೩೪ ॥

ಒಡವುಟ್ಟಿದವರ ಕ್ಕಯ್ಯಂ ।
ಪಿಡಿವಂ ಕಳ್ಗುಡಿವನೆಂದು ತಮ್ಮೊಳ್ ಸರಸಂ ॥

೧. ಇ—೧ವೊಗ್ಗ೧;

ನುಡಿವ ದುರಾತ್ಮರ ತೆಱದಿಂ ।
ನುಡಿವರೆ ಮಱದೆಂದುಮಪ್ಪಡಂ ಜಿನಭಕ್ತರ್ ॥ ೩೫ ॥

ಲೋಗರ ಪುಸಿಯಂ ಸೈರಿಸ- ।
ನೇಗೆಯ್ದುಂ ತಾನೆಪುಸಿವನಲ್ಲಂ ಮಿಥ್ಯಾ- ॥
ತ್ವಾಗರ್ವ್ವಮಿಲ್ಲ ಗುಣಿ ಭೂ- ।
ಭಾಗದೊಳಿವನೆಂದು ಸರಸಮಾಡುಗೆ ಚದುರಂ ॥ ೩೬ ॥

ಕುಲಜಂ ಧರ್ಮ್ಮಜ್ಞಂ ನಿ- ।
ರ್ಮ್ಮಳಚರಿತಂ ಸತ್ಯವಾದಿಯೆಂಬೀನಾಮಂ- ॥
ಗಳನಿರದಪೂರ್ವ್ವಮಾಗಿರೆ ।
ತಳೆದವನಿವನೆಂದು ನುಡಿಗೆ ನುಡಿವಡೆ ಚದುರಂ ॥ ೩೭ ॥
ಮಕ್ಕಳಿಗೆ ಬೆಣ್ಣೆಯೊಳ್ಳು[೧]- ।
ದ್ದಿಕ್ಕುವವೊಲ್ಪೆಱಗೆ ಪೇಳ್ವಮಾತುಗಳೊಳ್ತಂ- ॥
ದಿಕ್ಕುವ ನಱನಂ ಜೈನಂ- ।
ಮೊಕ್ಕಳಿಗರ ತೆಱದೆ ನುಡಿಯಲಱಿಯನದೆಂತುಂ ॥ ೩೮ ॥

ಮಧುರವಚನಂ ಮನಕ್ಕ- ।
ತ್ಯಧಿಕಸುಖಪ್ರಾಪ್ತಿಹೇತುವಪ್ಪವೊಲಮೃತಾಂ- ॥
ಬುಧಿಯುಂ ಮಳಯಜರಸಮುಂ ।
ವಿಧುಕರಮುಂ ತಣ್ಪನೀಯಲೇನಾರ್ತ್ತಪುವೇ ॥ ೩೯ ॥

ವೃ॥ ಅಪವರ್ಗ್ಗೋಚಿತಮಾರ್ಗ್ಗಮಸ್ತದುರಿತಾಂತಕ್ಕಂ-
ಸದಾಚಾರಸೌ- ।
ಖ್ಯಪದಂ ಸಜ್ಜನಸನ್ನುತಂ ಬಗೆಯೆ ಸತ್ಯಂ ನಾಸ್ತಿಸತ್ಯಾತ್ಪರಂ ।
ತಪಮೆಂದಿರ್ದ್ದಪುದಾಗವೋಕ್ತಮದಱಿಂದಾರಾದೊಡಂ-
ಸತ್ಯವಾ- ।
ಕ್ಯಪವಿತ್ರೀಕೃತವಕ್ತ್ರರಾಗಿ ಪಡೆಯಿಂ-
ನಿರ್ವ್ವಾಣ ಕಲ್ಯಾಣಮಂ ॥ ೪೦ ॥

ಕಂ॥ ಹಾಗದ ಭಾಗಂ ಕೆಟ್ಟಂ- ।
ದಾಗಳುಮೊಡಲುರಿಗುಮೆಂತು ತನಗದಱಿಂದಂ ॥

---

೧. ಈ—ಳ್ಳ;

ಲೋಗರ ಕಸವರಮಂ ಕೊಳ- |
ಲಾಗದು ಕೊಂಡಂದು ಕಿಡುಗುವೆರಡುಂ ಭವಮುಂ || ೪೧ ||

ಇವನೆತ್ತುಂಗೋಳಂ ನೀ- |
ಮಿವನಂ ನಂಬದಿರಿಮೆಂದು ಕಂಡವರ್ಗಳ್ಸಾ- ||
ಱುವರತ್ತಮಿತ್ತಲುತ್ತಲು |
೧ಭವಮುಂ ಬಾಯುಳಿವ ದುರ್ಗ್ಗುಣಂಗಳು ಮೊಳವೆ೧ || ೪೨ ||

ಪರಮಾರ್ತ್ಥಂ ಲೋಗರ ಕಸ- |
ವರದೊಳ್ ತರಲಾಗ ಕಲ್ಪಚಿತ್ತವರ್ತ್ತನದಿಂ ||
ಪರಿಹರಿಸಿ ತಾಳ್ದುವೆಂ ಸ- |
ಚ್ಚರಿತಮನೆಂದೆಱೆನೆಱೆಯೆ ತೊಱೆವಂ ವ್ರತಿಕಂ || ೪೩ ||

೨ಪೆಱರಿ೨ಯುದದನುಮಾರುಂ |
ಮಱದುದುವಂ ಬಿರ್ದ್ದವಂ ಪೆಱರ್ಬ್ಬಯ್ತ್ತುದುದಂ ||
ಮಱೆದುಂತಾಂ ಸ್ವೀಕರಿಸ- |
ಲ್ಪೆಱರಂ ಕೈಕೊಳಿಸಲಾಗದೆಂಬಂ ಜೈನಂ || ೪೪ ||

ಕಳ್ಳರ ನಂಟರ್ತ್ತನಮುಂ |
ಕಳ್ಳರ ದೆಸೆಯಿಂದೆ ಧನಮನರ್ಜ್ಜಿಸುವುದುಮಾ- ||
ಕಳ್ಳರ್ಗ್ಗೆಡೆಗುಡುವುದುಮದು |
ಕಳ್ಳತನಂ ಬ್ರತದ ಹಾನಿಯೆಂಬಂ ಜೈನಂ || ೪೫ ||

ತುಪ್ಪದೊಳಗೆಣ್ಣೆಯುಂ ಲೇ- |
ಸಪ್ಪಾ ಹೊನ್ನೊಳಗೆ ಬೆಳ್ಳಿಯುಂ ಧನದಳುಪಿಂ- ||
ದುಪ್ಪಿನೊಳು ಮಣ್ಣುನೆಂತುಂ |
ತಪ್ಪಿಲ್ಲದೆ ನಡೆವನೆಂಬನಾಗಲ್ ಬೆರಸಲ್ || ೪೬ ||

ಪಿರಿದಪ್ಪ ಕೋಲ್ಗಳಿಂದಂ |
ಪಿರಿದೆನಿಸಿದ ಕೊಳಗದಿಂದ ಮುಂ ತಾಂ ಕೊಂಡಂ- ||
ತಿರೆ ಪೆಱರ್ಗೆ ಕುಡುಗೆ ಕುಂದಿಸಿ |
ಪರದುಗೆಯಲ್ಸಲ್ಲದೆಂದು ನೆಗಳ್ವಂ ಜೈನಂ || ೪೭ ||

---

೧. ಇ—೧ಭವಮುಂ ಸ್ತೇಯಂ ಬಾಯುಳಿವ ದುರ್ಗ್ಗುಣ ವೊಳವೆ ||೧; ೨. ಇ—೨ಪೆಱರಱಿ೨;

ಪೆಱರೊಡವೆಯನಳಿಪಿಂದಂ ।
ಕಿಱಿಕಿಱಿದಂ ಮಱಸಿಕೊಳ್ವನಾಣಿಲ್ಲದವಾ- ॥
ಯ್ವೆಱಗುಲಿಯುಮೆಯ್ಯೊಳಂ ನಿಲ- ।
ಲಱಿಗುಮೆ ಕಳಲಾಗದೆಂಬ ಸ್ತುಬ್ರತಮನಿಸುಂ ॥೪೮॥

ಇನಿದುಂಬಂ ವಿಷಸೇವನೆ- ।
ಗಿನಿಸಂ ತಾಂ ಬಯಸುವಂತೆ ದುಶ್ಚರಿತಂ ಸ- ॥
ಜ್ಜನವಿದ್ವಾಂದದೆ ಕುಲಟಾಂ- ।
ಗನೆಯೊಳ್ನೆರೆಯಲ್ಕೆ ಕರಮೆ ಬಯಸುತಮಿಪ್ಪಂ ॥ ೪೯ ॥

ವೃ॥ ಬಸನಂ ಕೈಗಣ್ಮೆ ತವ್ಮೊಲ್ದರನೆ ಪಿಡಿದು-
ಬಲ್ಲಂದದಿಂ ನಲ್ಮೆಯಂ ಪ- ।
ತ್ತಿಸಿ ಚಿತ್ತಂ ಬೆತ್ತುಮೆಚ್ಚಂ ಸಲಿಸಿ ನಲವ-
ತಾಣಂಗಳೊಳ್ ಜಾಣರಂ ಜೊ- ।
ತ್ತಿಸಿ ತತ್ಸಂಕೇತಸದ್ವಾಕ್ಯವಯವದಿನಿರು-
ಳ್ಪೋಪರಾತ್ರೀಶನಂ ವಂ- ।
ಚಿಸುತಂ ತಮ್ಮಣ್ಣನೆಂಬರ್ವ್ವನಯುವತಿಯರೋ-
ಜಾರನಂ ಜಾರೆಯರ್ಕಳ್ ॥ ೫೦ ॥

ಕಂ॥ ಎಮ್ಮಣ್ಣನೆಮ್ಮ ಸೋದರ- ।
ನೆಮ್ಮಯ್ಯಂ ಮಾವನೆಮ್ಮಮುತ್ತೈಯ್ಯಂ ಮ- ॥
ತ್ತೆಮ್ಮ ಗುರುವೆಂದು ಮಱೆಯುವ- ।
ನಮ್ಮೊಱೆಯುವನಾಗೆ ಜಾರೆಯರ್ವ್ವಂಚಿಸುವರ್ ॥ ೫೧ ॥

ತಮ್ಮಂ ಪೆತ್ತಮ್ಮಂ ಕಿಱಿ-
ಯಮ್ಮಂ[೧] ತಮ್ಮಣ್ಣತಮ್ಮನೆಂದೆನುತಂ ತಾಂ[೧] ॥
ತಮ್ಮಣ್ಣನ ತಮ್ಮಳಿಯನ ।
ತಮ್ಮನ ಮೊಱೆಗೊಳ್ವರಾಗಿ ಮೊಱೆವಾದರಿಯರ್ ॥ ೫೨ ॥

---

೧. ಇ—೧ಮತ್ತೆಮ್ಮ ತಮ್ಮನೆನುತಂ ಮತ್ತಂ೧;

ಸಲೆ ಮುಡಿಯುಂ ಸಲಿಸಿಪುದುಂ ।
ಕೆಲಸಂ ನೋಳ್ಪಂತೆ ನೀಱಿರಂ ನೋಡುವುದುಂ ॥
ಮೊಲೆಗೆಲನಂ[1] ತೋಱುವುದುಂ ।
ಕುಲಟೆಯರ್ಗಿವೆ ಮೊದಲ ವಿದ್ಯೆ ಭಾವಿಸುವಾಗಳ್ ॥ ೫೩ ॥

ಕಡು ನೀಱೆಯರಂ ಲೋಗರ ।
ಮಡದಿಯರಂ ಸೋಂಕಿ ಸೋಂಕಿ ಕುಳ್ಳಿಪ್ಪನಿತಂ ॥
ಪಡೆಯದೊಡೆ ಮಱುಕದಿಂದಂ ।
ನುಡಿಮೆಯ್ಯಿ ಕಣ್ಗಬ್ಬುಗೊಳ್ವೆನೆಂಬಂ ಪಾಣ್ಬಂ ॥ ೫೪ ॥

ವೃ॥ ಪದೆದೆದ್ದೊರ್ವ್ಯನೆ ಬಂದು ಪೊಕ್ಕು ಮನೆಯಂ-
ಮಿಥ್ಯಾಪ್ರಳಾಪಂಗಳಿಂ ।
ಪದಪಿಂದಮ್ಮನೆಯಾಳ್ಮನಂ ಮಱಿಸುತಂ-
ಜಾರಾನನಾಂಭೋಜಮಂ ।
ಮುದದಿಂದಂ ನಡೆನೋಡಿ ತಾಂ ತನಗಮಿಂಬಾ-
ದಾಗಳಾಪಾಣ್ಬೆಯೆಂ- ।
ದುವನೆಂಗುಂ ಸುಳಿಯುತ್ತ ಪೊತ್ತುಗಳೆಗುಂ-
ಜಾರಂ ಮಹಾಕ್ಲೇಶದಿಂ ॥ ೫೫ ॥

ಕಂ॥ ತನ್ನಿಚ್ಛೆಕಾರ್ತಿ ಗಡ ಕಡು ।
ಚೆನ್ನೆಗಡಂ ಪಿಡಿದೊಡೆಳಸಿ ತಾಂ ಪೇಳ್ವುದು ಗೆ- ॥
ಯ್ವನ್ನಳ್ಗಡ ದೊರೆಕೊಂಡೊಡೆ ।
ಮನ್ನಿಸದಿರ್಩ನೆ ವಿಚಿತ್ರದೂರಂ ಜಾರಂ ॥ ೫೬ ॥

ತಮಗೆ ಪೊದಳ್ದುದವಿದ ತಾ- ।
ಣ ಮನೋಹರ ಸುರತಭವನಮುಂ ಪಾಸುಂ ಮಂ- ॥
ಚಮುಮಾಗಿರೆ ನೆರೆವರ್ಮ್ಮ- ।
ಯ್ಗೆ ಮೆಚ್ಚಿದೆಡೆಯಲ್ಲಿ ಜಾರೆಜಾರಾನೀಕಂ ॥ ೫೭ ॥

ತುರಿಪದೆ ಗೋಹಳಿಯಡೆಯೊಳ್ ।
ಪೊರಳ್ವರುಂ ಪಾಳ್ಮರಂಗಳೊಳ್ ಪೊರಳುವುದುಂ ॥

---

೧. ಇ—ಗಂ; ೨. ಇ—ಡೆ;

ಕರವೊಪ್ಪಿರೆ ಪಾಣ್ಬಂ ತಾಂ ।
ನರಕಂಗಳೊಳಿಂತೆ ಪೊರಳ್ವನೆಂಬುದನೀಗಳ್ ॥ ೫೮ ॥

ಲೋಗರ ಪೆಂಡಿರೊಳಾವಿ- ।
ನ್ನೇಗೆಯ್ದುಂ ನೆರೆವವಲ್ಲೆವಾಂ ಕೆಲಬತ್ತಾರ್- ॥
ವಾಗಳು ಮನದೊಳ್ ಸದ್ಗುಣ- ।
ಮಾಗಿರೆ ಪೊಗಳಿಸುವರಿಂತು ಗಾವಿಲರೊಳರೇ ॥ ೫೯ ॥

ವೃ॥ ಎಲ್ಲರುಮಾಗಳುಂ ಪೆಱರ ಪೆಂಡಿರೊಳೋತೊಡ-
ಗೂಡುತಿಪ್ಪರೋ- ।
ವಲ್ಲದೆ ಬಿಟ್ಟೆವೆಂಬವರವೋಲ್ಸಲೆ ಭಿಜ್ಜಿನೆ ಬೀಗಿ ರೂಢಿಗೆಂ- ।
ದೆಲ್ಲರ ಮುಂದೆಯುಂ ಪೊಗಳಿಪಂ.
ಮರುಳಲ್ಲನೆ ಕಂಡು ಕನ್ನದೊ- ।
ಳ್ಕೊಲ್ಲದರುಳ್ಳಡಲ್ಲಿ ಪೊಗಳಿಪ್ಪುದು ತನ್ನಯ-
ಶೌಚವೃತ್ತಿಯಂ ॥ ೬೦ ॥

ಕಂ॥ ಪರಲಲನೆಗೆ ತಪ್ಪಿದನಂ ।
ಧರಣೀಶಂ ಕಂಡು ಕನರದಿದ್ದರ್ಡೆ ಬಳಿಯಂ ॥
ಪರನಾರಿ ದೂರನೇನಾಂ ।
ದೊರೆಯಾರೆನಗೆಂದು ಪೊಗಳಿಪುದು ತನ್ನೊಳ್ಪಂ ॥ ೬೧ ॥

ತನ್ನ ಸತಿಯೊಡನೆ ನಕ್ಕಡೆ ।
ಮನ್ನಿಸುವಡೆ ಪೆಱರ ನಿಱಿವನಂತಿರೆ ಪೆಱರಂ ॥
ತನ್ನಂತು ಬಗೆದು ಲೋಗರ ।
ಚೆನ್ನೆಯರಂ ಬಯಸಲಾಗದಱಿವುಳ್ಳ ನರಂ ॥ ೬೨ ॥

ಪುರುಷಂ ಕಂಡಡೆ ಕೊಲ್ವಂ ।
ಧರಣೀಶಂ ಕಂಡು ಕವರ್ವನೆಲ್ಲಂ ಬಯ್ವ- ॥
ಪ್ಪರಿಭವಮನೆ ಮಾಳ್ಕುಮಿಹಂ ।
ಪರದೊಳುಮದಱಿಂದ ಕಷ್ಟಮಸತೀಸಂಗಂ ॥ ೬೩ ॥

ಮಸದಂಗಜನಸಿಲತೆಯೆನಿ- ।
ಪಸತಿಯ ಮನಬಯಸಿ ಮೇಲೆದೆಗದೊಡವೇನಾ- ॥

ಟಿಸಲಾಗದಱಿವನುಂ ಪೊ- |
ನ್ನಸುರಿಗೆಯೆನೆ ಮೂಗನರಿಸಿಕೊಳ್ವುದು ಚದುರೆ || ೬೪ ||

ವೃ|| ಪೆರ್ಮೊಲೆ ಚರ್ಮಮಾಂಸಭರಿತಂ-
ಪೊಱಗಾಗೊಳಗಂ ವಿಚಾರಿಸಲ್ |
ಸೊರ್ಮುಡಿ ಸೀರಹೇನಹುಳುಹುತ್ತು-
ನಿರೀಕ್ಷಿಸುವಕ್ಷಿಹಕ್ಕು ಸಿ- |
ಳ್ಪುಣ್ಣುವ ಕಾಣ ತಾಣವಧರಾಮೃತಮುಂ-
ರುಧಿರದ್ರವಂ ಜಡ- |
ಕ್ಕೆರ್ಮನವಕ್ಕೆ ಪೆರ್ಮತನಮುಂ-
ಬಱಿದೇಱಿಸಿ ಸೂಱಿವೋದಪರ್ || ೬೫ ||

ಕಂ|| ಪರವಧುಗೆ ಸೋಲ್ತು ತಮ್ಮಯ |
ಪುರುಳೆಲ್ಲಮನಿತ್ತು ರಾಗದಿಂದಂತವರೊ- ||
ಳ್ನೆರೆದು ನರಕಕ್ಕೆ ವೋಪುದು |
ಸುರಿಗೆಯ ಕಿತ್ತಿಱಿಸಿಕೊಳ್ವ ತೆಱನಂ ಪೋಲ್ಕುಂ || ೬೬ ||

ವೃ|| ಕಿಡಿಕಿಯನೊಲ್ದು ನೋಡಲೊಡವೊರ್ಮೆಯೆ-
ಪಿಂಗುವು[೧]ದೊಳ್ಪು[೧]ದಿಟ್ಟಿಗ- |
ಳ್ನಡೆ ನೆಗೆವಾಸೆಯಿನ್ನುಡಿದೊಡಾಗಡೆ-
ಪೋಪುದು ಲಕ್ಷ್ಮಿ ಸೋಲದೊ- |
ಳ್ತೊಡರ್ದೊಡಗೂಡಿದಾಕ್ಷಣದೆ-
ಕುಂದುವುದಾಯುವೆನಲ್ಕೆ ನೋಡಲುಂ |
ನುಡಿಯಲುವೋತು ಕೂಡಲುಮಪೇಕ್ಷಿಸಲುಂ-
ಗುಣಿಗಳ್ಗೆ ತಕ್ಕುದೆ || ೬೭ ||

ಧರೆ ಪೊಗಳ್ವಂತು ದಾನಮನನೂನ-
ಮೆನಲ್ಕನವೊಲ್ದು ಮಾಡಿ ಭಾ- |
ಸುರಮುನಿಸಿದ್ಧರ್ ದೇವನಿಳಯಂಗಳನೇಳಿಸಿ ರೂಢಿವೆತ್ತನುಂ |

೧. ಇ—೧ದಿಲ್ಲ೧;

ಪರವಧುಗಾಸೆಗೆಯ್ಯೆ ಕೆಡುಗುಂ ಗತಿ ಸಾಸಿರ-
ನೋಂಪಿಯೊಂದೆ ಪಾ- ।
ದರದೊಳಿ ಕೆಟ್ಟು ಪೋಕುಮೆನೆ ಸಂದ-
ಸುಭಾಷಿತಮೇಕೆ ತಪ್ಪುಗುಂ ॥ ೬೮ ॥

ಕಂ॥ ಕಡುನೀೞಿಯುರಪ್ಪನ್ಯರ ।
ಮಡದಿಯುರಂ ಕಂಡು ಸೋಲ್ತು ಮೇಳದಿನವರೊ- ॥
ಳ್ನುಡಿಯದೆ ಗುರುದೆಯ್ವಂ ತ- ।
ನ್ನೊಡವುಟ್ಟಿದರೆಂದು ಬಗೆಯುತಿಪ್ಪಂ ಜೈನಂ ॥ ೬೯ ॥

ವೃ॥ ಪರನಾರೀಜನಮಂಬಿಕಾಜನಕ ಪುಣ್ಯಸ್ತ್ರೀಯರುಚ್ಛಿಷ್ಟದಾ- ।
ಗರಮಪ್ಪಾ ಪಡಿಗಕ್ಕೆ ಭರ್ತೃಹರಿತ ಸ್ತ್ರೀಯುಂಪರ[೧]ತ್ಯಕ್ತಸುಂ- ।
ದರಿಯುಂ ತೊತ್ತಿನ ಮೇಧ್ಯಭಾಜನದ-
ಸಾಮ್ಯಸ್ಥಾನಮೆಂದಿಂತುಕೊ- ।
ಕ್ಕರಿಪಂ ಸನ್ನುತಮುಕ್ತಿಲಕ್ಷ್ಮಿಯೊಲವಂ-
ಪೆತ್ತಲ್ಲದೇಂ ಮಾಣ್ಬನೇ ॥ ೭೦ ॥

ಕಂ॥ ಕೊಡಗೂಸು ತೊತ್ತುಸಯ್ಯಮಿ ।
ತುಡುಗುಣಿ [೨]ಪಾದರಿಗೆ[೨]ಱಂಡೆಕೀಳ್ಜಾತಿಯುವ- ॥
ಳ್ಕಿಡಿಕಿಯೆನಿಪವಳೊಳೊಲವಂ ।
ನುಡಿಯಲ್ಕೆನಗಾಗದೆಂಬನುತ್ತಮ ಜೈನಂ ॥ ೭೧ ॥

ಆಗಳುವಂಗಜನಳಿಪಿಂ ।
ರಾಗದೆ ಪೆರ್ಚಿರ್ಷ್ಟಬಸನದಿಂ ವನಿತೆಯರೊಳ್ ॥
ಭೋಗಿಸುವುದು ಸಚ್ಚರಿತಂ- ।
ಗಾಗದು ಪರಮಾರ್ತ್ಥಮೆಂದು ಬಿಡುವಂ ಜೈನಂ ॥ ೭೨ ॥

ಸ್ತ್ರೀವಿಷಯದೊಳಾಪೊಳ್ತುಂ ।
ಭಾವಿಸಿ ಕಡುರಾಗಿಯಾಗಿ ಸೇವಿಸನುಂ ತಾಂ ॥
ಭಾವಜರುಜೆಗೌಷಧಮುಂ ।
ಸೇವಿಸುವಂದದೊಳು ಸೇವಿಪಂ ತದ್ವ್ರತಿಕಂ ॥ ೭೩ ॥

೧. ಇ—ರಿ; ೨. ಇ, ಈ—೨ನೊಸಣಿಗೆ೨;

ಕುಲವಧುವನೊಲ್ಲದಳಿಪಿಂ ।
ಕುಲಟೆಯರೊಳ್ನೆರೆದು ಪಳಿಗೆ ನಾಣ್ಚದೆ ಕರಮು- ॥
ಗ್ಗಲಿಪವರ್ಗದೆಂದುವೆಂದುಂ ।
ನಿಲಲಱಿಯವು ಮೋಕ್ಷದಾಯಕಂ ಸಚ್ಚರಿತಂ ॥ ೭೪ ॥

ಭವಕಾರಣದಿಂದ್ರಿಯಮ- ।
ಮವಱಿಳಿಪಿಂ ಮೊದಲ ಶತ್ರುತಾನುಂ ಚಿತ್ತ- ॥
ಕ್ಕವಕಾಶವಾಗಿ ಚೇತೋ- ।
ಭವನುಂ ಪಗೆಪಗೆಗೆ ಪಕ್ಕುಗುಡುವುದೆ ಚದುರಂ ॥ ೭೫ ॥

ಆಗ್ರಹದಿಂದಪ್ಪುಭಯಪ- ।
ರಿಗ್ರಹಮುಂ ನೆರಪಿ ತಣಿಯದೆಲ್ಲಾ ಪೊತ್ತುಂ ॥
ವ್ಯಗ್ರಮನನಾಗಿ ಚಿಂತಿಸು- ।
ವುಗ್ರಂಗೇನುಭಯ ಜನ್ಮದೊಳಮುಂಟೆ ಸುಖಂ ॥ ೭೬ ॥

ಎನಿತಂ ಮಱಿಗಿದೊಡಂ ಮು- ।
ನ್ನಿನ ಭವದೊಳ್ ಕೊಟ್ಟ ದಾನ ಫಲವಿಲ್ಲದ ನೋ- ॥
ಳ್ಧನಧಾನ್ಯಪರಿಗ್ರಹವೆಂ- ।
ಬಿನಿತುಂ ತನಗಾಗಲಱಿಯವೆಲ್ಲಂದದೊಳಂ ॥ ೭೭ ॥

ತನಗೆ ಶುಭೋದಯಮಾದೊಡೆ ।
ಧನಧಾನ್ಯಪರಿಗ್ರಹಂಗಳೆಯ್ತುರುತಿಕ್ಕುಂ ॥
ತನಗೆ ಶುಭೋದಯಮಿಲ್ಲದ- ।
ನೆನಿತುಂ ಮಱುಗಿದೊಡವಾಗದೆಂಬಂ ಜೈನಂ ॥ ೭೮ ॥

ಧರೆ ತನ್ನದೆಂಬರದನಾ- ।
ಳ್ವರು ಲೋಗರುವಲ್ಲಿಗಲ್ಲಿಗೆಲ್ಲಂ ತಾನೊಂ- ॥
ದರಮನೆಯೊಳಿಪ್ಪನರಸಿನ ।
ಪುರುಳಿಂತುಟು ಪೆಸರೆ ತನ್ನದುಳಿದವರ್ಗೆ ಮೊಸರ್ ॥ ೭೯ ॥

ವೃ॥ ಕಱವುವು ಗೋಸಹಸ್ರಮೊಳವಾದೊಡಮೊಬ್ಬಳ-
ಪಾಲೆಕುಂಭಮುಂ ।
ನೆಱದಿರೆ ಲಕ್ಕೆಗಳ್ ಬೆಳದುಮೊಪ್ಪಿಡಿ-
ಯಕ್ಕಿಯ ಕೂಳ ಚೆಲ್ವುವೆ- ।

ತ್ತಱಿಕೆಯುನೂಱುಮಾಡಮನೆ ಮಾಡಿಯು-
ಮೋವರಿಯೊಂದಱಿಲ್ಲಿ ನೀ- ।
ನೊಱಿಗುವೆ ಮಿಕ್ಕಲಂಪಳನೆ ವಸ್ತುಗಳಂ-
ನೆಱೆ ನೀನೆ ಭೋಗಿಪಾ ॥ ೮೦ ॥

ಕಂ॥ ಧನಧಾನ್ಯವಸ್ತ್ರಭೂಮಂ- ।
ಡನವಾಹನಸಾರವಸ್ತುಕೋಟಿಗಳೊಳ್ನೀ-॥
ನನುಭವಿಸುವೆಯೊಂದನೆ ಮ- ।
ತ್ತಿನದೆಲ್ಲಂ [1]ಪೊಱಗೆ[1]ಕಾಣ್ಬೆ ಕಾಣುತವಱಿಯಾ ॥ ೮೧ ॥

ಸತತಂ ಧನಧಾನ್ಯಂಗಳ- ।
ನತಿಮೋಹದೆ ನೆರಪಿ ಮಱುಗುತಿಪ್ಪಾತಂ ದು- ॥
ರ್ಗ್ಗತಿಗೆಯ್ದುಗುವತಿಮೋಹಂ ।
ಗತಿಗೆಡಿಸುಗುಮೆಂಬ ಜೈನವಚನಂ ಪುಸಿಯೆ ॥ ೮೨ ॥

ಎನಿತೆನಿತಂ ಪೆರ್ಚ್ಚುಗುಮಂ- ।
ತನಿತನಿತೊಡನೊಡನೆ ಪೆರ್ಚ್ಚುತಿಕ್ಕುಂ ಮೋಹಂ ॥
ಧನದಿಂ ಪರಿಜನದಿಂದೆಂ- ।
ದಿನಿತಱಿನಗ್ಗಳವನೊಲ್ಲೆನೆಂಬಂ ಜೈನಂ ॥ ೮೩ ॥

ಎಂತು ದೊಱೆಕೊಂಡು ಬಂದೊಡ- ।
ಮಂತದೆ ಸುಖವಾಗಿ ಸಮತೆಯಿಂದಾ ಪೊತ್ತುಂ ॥
ಸಂತುಷ್ಟರಾಗಿ ನಡೆಯಲ- ।
ದೆಂತುಂ ಜೈನರವೊಲನ್ಯರೇನಱಿದಪರೆ ॥ ೮೪ ॥

ಧನಧಾನ್ಯಂ ಲೋಹಂ ಕೆಯಿ ।
ಮನೆ ಬಂಟತೆರ್ತ್ತುಗಳ್ ಸುವರ್ಣ್ನಂ ವಸ್ತ್ರಂ ॥
ಮನೆಮುಟ್ಟು ಭಾಂಡವೆಂಬಿವ- ।
ನಿನಿತಱಿನಗ್ಗಳಮನಾಳೆನೆಂಬಂ ಜೈನಂ ॥ ೮೫ ॥

ವೃ॥ ಇವರಿಂದಗ್ಗಳಮಾಂ ಪರಿಗ್ರಹಿಸೆನೆಂದಾ ಮಾರ್ಗ್ಗದಿಂದಲ್ಲಿ ಮಿ- ।
ಕ್ಕವನೋರಂತಿರೆ ದಾನದಿಂ ತವಿಸದಾತಂ-
ಲೋಭದಿಂ ಕೂಡಿ ದುಃ- ।

೧. ಇ, ಈ—[1]ಪೆಱಗ್ಗೆ[1];

ಖವನುಂ ಲೋಗರ ಲಕ್ಷ್ಮಿಯುಂ ಸುಖಮುಮಂ-
ನೋಡಲ್ಕೆ ತಾನಾಱದಿ- |
ರ್ಪ್ಪವನುಂ ಶಾಸ್ವತ ಲಕ್ಷ್ಮಿಯುಂ ಪಡೆಯು-
ಲೇಗೇಗೆಯ್ದೊಡಂ ಬಲ್ಲನೇ || ೮೬ ||

ಕಂ|| ಲೋಗರ ಸಿರಿಯುಂ ಕಾಣ್ಬುದು- |
ಮಾಗಳ್ಕೆಟ್ಟಪ್ಪೆನೆಂದು ಬಯಸಲ್ ಜೈನಂ- |
ಗಾಗದೆ ಪುಣ್ಯದೆ ಪಡೆದುದು |
ಪೋಗದು ಮುಳಿದಂದು ನಿಷ್ಫಲಂ ಮಾಣ್ಬುದದಂ || ೮೭ ||

ಇಹದೊಳು ದಾರಾದಿ ಪರಿ- |
ಗ್ರಹವೆಂಬುದು ಭವನಿಬದ್ಧಮಾತ್ಮಂಗದಱಿಂ ||
ಬಹುವಿಧದೆ ಪೋದೊಡಂತದು |
ಮಹನೀಯ ಸುಖೈಕಹೇತುವೆಂಬಂ ಜೈನಂ || ೮೮ ||

ವೃ|| ಮಱುಗದಿರೆನ್ನ ಪೆಂಡರಿವರೆನ್ನ ಸುತರ್ಪ್ಪರಿವಾರಲನ್ನದೆಂ |
ದಱಿಯದೆ ನಿನ್ನ ನಚ್ಚಿನ ಶರೀರಮೆ ಮುನ್ನಿನ-
ಮಾಳ್ಕೆಯಲ್ತದೇ- |
ತೆಱಪಡೆಮಾತಪಾಯವೆನಿಸಿರ್ದ್ದವು ನಿನ್ನವೆ ಬೇಱವೆಲ್ಲವೆಂ- |
ದಱಿದೆಲೆ ಭವ್ಯ ನಿನ್ನೊಡನೆ ಬಪ್ಪವನಪ್ಪಿಸ ಸುವ್ರತಂಗಳಂ || ೮೯ ||

ಕಂ|| ಮನೆಯೊಳ್ತನ್ನಯ ಮಕ್ಕಳು |
ಜಿನಧರ್ಮ್ಮಮನೆಂತುಮೊಲ್ದರಪ್ಪಡೆ ಬಳಿಯಂ ||
ಜಿನಸಮಯಿಗಳ್ಗೆ ತವಿಪುದು |
ಧನಮುಂ ಮನೆಯುವರ್ಗೆ ತವಿಪದಿಪ್ಪುದು ಜೈನಂ || ೯೦ ||

ವ್ರತಮಿಲ್ಲದ ಸುತರಂ ಪೆಂ- |
ಡತಿಯುಂ ಕೂರ್ತ್ತನ್ನ ವೃಂದಮೆನ್ನದೆ ಖಳಸಂ- ||
ತತಿಯುಂ ತೊತ್ತಂ ಪೊರೆಪೊಂ- |
ದುತೆಱದೆ ಕೂಳಿಕ್ಕುತಿಪ್ಪನುತ್ತಮ ಜೈನಂ || ೯೧ ||

ಪುಳುಗಳನೆನಿತಂ ಪೊರೆದುಂ |
ಫಲಮುಂಟೆ ಸಗಣದೊಳಗೆ ದುಸ್ಸಂತತಿಯಿಂ ||

ಫಲಮುಂಟೆ ಲಘುಕರ್ಮಿಗೆ ।
ಚಳಮತಿಯಿಂ ಪುಳಿತ ಪುಳುಗಳಂ ಪೊರೆವಂದಂ ॥ ೯೨ ॥

ಸಲೆ ಪಲವಾಡುತ್ತಂ ನಿ- ।
ರ್ಮಳಧರ್ಮಮನುಳಿದು ನಾಡ ಕಲ್ಲಂ ಮರನಂ ॥
ಕುಲದೈವಮೆಂದು ಪೂಜಿಸಿ ।
ಪೊಲೆಗಲಸುವ ಪೆಂಡಿರಿಂದ ಬೇ೧ಳಗ೧ದು ಧರ್ಮಂ ॥ ೯೩ ॥

ಜಿನರುಮನರ್ಚಿಸುತಿರ್ಪುದು ।
ಜಿನಮುನಿಗಳ್ಗನ್ನದಾನಮಂ ಕುಡುವುದು ಮ- ॥
ತ್ತಿನ ಪಾರುವರುಮನೂಡುವು- ।
ದಿನಿತಱೊಳೆಗ್ಗುಂಟೆ ಪೇಳಿವೆಂಬರ್ಪೆಂಡಿರ್ ॥ ೯೪ ॥

ಋಷಿಯರ್ಗ್ಗಲ್ಲದೆ ಕೂಳಂ ।
ಪಸಿದವರ್ಗಿಕ್ಕುವುದು ದೋಷವೇನೆಂದುಂ ದೂ- ॥
ಷಿಸಿ ಮಹಳಮಿಕ್ಕಿದೊಡೆ ಪೇ- ।
ಳೊಸರ್ವುದದು ಜೈನಭಕ್ತಿಯೆಂಬರ್ಪೆಂಡಿರ್ ॥ ೯೫ ॥

ಪುರುಳಿಲ್ಲದ ಜೈನಂ ವ್ಯಂ- ।
ತರಮಂ ಮಿಥ್ಯಾಲಯಂಗಳಂ ಪಾರುವರಂ ॥
ಪಿರಿದುಂ ಕೊಂಡಾಡಲ್ ಜೈ- ।
ನರಲ್ಲರೆ ನೋಡಿಮಿವರನೆಂಬರ್ಪೆಂಡಿರ್ ॥ ೯೬ ॥

ತನ್ನಂತಿರೆ ಮಾಳ್ಪಂ ಸವ- ।
ಣಂ ನಂಟರ್ನ್ನಲ್ಲರೇಕೆಯೆಂಬರ್ಪ್ಪಣಮಂ ॥
ತನ್ನ ಸಮಯಕ್ಕೆ ಕುಡಿಮೆಂ- ।
ಬನ್ಯರ ನುಡಿಗೇಳಲಾಗದೆಂಬಂ ಜೈನಂ ॥ ೯೭ ॥

ಮದುವೆಗಿದು ಪೆತ್ತಮಕ್ಕಳಿ- ।
ಗಿದು ಬಾಳ್ಪೊದಲೆನ್ನದುಳ್ಳುದಂ ಸವಣರ್ಗ್ಗಿ- ॥
ಕ್ಕಿದಪಂ ಕೂರ್ಪ್ಪವರಿಂ ಪೇ- ।
ಳ್ವುದು ಬುದ್ಧಿಯನೆಂದು ದೂಱುತಿರ್ಪರ್ಪೆಂಡಿರ್ ॥ ೯೮ ॥

೧. ಇ—೧ಳೆಯ೧;

ನೆರಮನೆಯುವ^೧ರೆನ್ನಂ ಜಾತ್ರೆಗೆ^೧ ।
ಕರದೊಡೆ ಬರಲೀಯುನೆನ್ನ ಗಂಡಂ ಪೊಲೆಯುಂ ॥
ಕರಮುಬ್ಬುಟೆಯಾತಂ ವೆಂ^೨ ।
ತರಂಗಳಂ ನಾಯ್ಗಳೆಂಬನೆಂಬರ್ ಪೆಂಡಿರ್ ॥ ೯೯ ॥

ಕೂಸಿಂಗೆ ಕುತ್ತವಾದೊಡೆ ।
ದೇಶದ ಬಳರಿಯರ್ಗೆ ಕುಡುವರೊಳ್ಳರ್ಚ್ಚನೆಯುಂ ॥
ಶಾಸನ ದೇವತೆಗೆಂದೊಡೆ ।
ವೀಸದವುಷ್ಪಮುಮನೀಯರಱಿಗುಲಿ ಪೆಂಡಿರ್ ॥ ೧೦೦ ॥

ಪೊಲೆಯರ ತೆಱದಿಂ ನೆಗಳ್ದಂ ।
ಕುಲನಾಶಕನಕ್ಕೆ ತನುಜನಾದಡೆ ಸಾಲ್ಗುಂ ॥
ಲಲನೆಯರ್ಗೆ ರಾಜಸುತನಂ ।
ಸಲೆ ಪೊರೆವಂದದೊಳೆ ಪೊರೆವರಱಿಗುಲಿ ಪೆಂಡಿರ್ ॥ ೧೦೧ ॥

ದಾನಕ್ಕೆ ಕೊಟ್ಟುದಂ ನೆರೆ ।
ತಾನಿಕ್ಕದೆ ^೩ಋಷಿ^೩ಯರಂ ಚಟಾರಿಸಿ ಚೈತ- ॥
ಜ್ಞಾನಿತರುವರಿಗೆ ಬಸನ ।
ಕ್ಕೇನೆಂದುದ ಕೊಟ್ಟು ಪೆಂಡಿರ ಸುಗತಿಗಿಳಿವರ್ ॥ ೧೦೨ ॥

ಮಗನ ಬಸನಕ್ಕೆ ಕೊಡುವ- ।
ರ್ಮ್ಮಗಳ್ಗೆ ಸಾಚರ್ತ್ತಮಿರ್ಪ್ಪರುಳ್ಳುದನೆಲ್ಲಂ ॥
ಜಗದೀಶ್ವರ ಪೂಜೆಗೆ ತಪ- ।
ಸಿಗೆಂದೊಡೊಬ್ಬುಳಮನಿಕ್ಕರಱಿಗುಲಿವೆಂಡಿರ್ ॥ ೧೦೩ ॥

ಪರಮ ಸುಖದತ್ತ^೪ಲೆಯ್ದಿಪ ।
ಗುರುಗಳ ನೋದಿ^೪ಪಡೆ ಮುಳಿವರಾರುಂ ಕೊಂದುಂ ॥
ತರುವರಿಗಳುಮಂ ಪೊರೆಯು- ।
ತ್ತಿರಲಿರಲೇನುವೆನ್ನರಱಿಗುಲಿವೆಂಡಿರ್ ॥ ೧೦೪ ॥

೧. ಇ—೧ರುಂಜಾತ್ರೆಗೆ೧; ೨. ಇ—ಬ್ಯಂ; ೩. ಇ—೩ಪಿರಿ೩; ೪. ಇ, ಈ—ಡಿ;

ನಿರುಪಮ ಸುಖದೊಳ್ಕೂಡುವ ।
ಪರಮ ಮುನೀಶ್ವರರು ಪೇಳ್ದುದನ್ನೋನರಣಂ ॥
ತಿರಿವ ಬಡಱಿಂಡೆ ಪೇಳ್ದಡೆ ।
ಪರಿದಾಗಡೆ ನೋನುತಿರ್ಪ್ಪರಲಸದೆ ಪೆಂಡಿರ್ ॥ ೧೦೫ ॥

ಪಡೆವಂ ಗೋತ್ರಕ್ಕೆಲ್ಲಂ ।
ಕುಡುವಂ ಮೂಲಿಂಗಭಕ್ತನೆನಿಪಂದೀಗ- ॥
ಳ್ಪಡೆಯುಂ ಮುಂಕೂರ್ಪ್ಪವರೊ- ।
ಳ್ನುಡಿಯುಂ ಜಿನಭಕ್ತನದಿನೆಂಬರ್ ಪೆಂಡಿರ್ ॥ ೧೦೬ ॥

ಲಿಂಗಕ್ಕೆಱಗದೊಡೊಸೆದು ಜಿ- ।
ನಂಗೆಱಗದೊಡಂತೆ ಬೆಸವುತಿಪ್ಪರ್ಪೆಂಡಿರ್ ॥
ಲಿಂಗಂಗೆ ಭಕ್ತರೆಂದೋ- ।
ರ್ವ್ವಂಗೀವರೆ ಭಕ್ತಿಮಾಡ[೧]ಲಾತ ಪ್ರಿಯರ್[೧] ॥ ೧೦೭ ॥

ಅಱಿಕೆಯು ಸದ್ಗುರುಗಳ ಕಂ- ।
ಡಱಿನಂ ಪತ್ತಿಸಲೆಮನೆಗೆ ಬರಲಿವನಾಯುವ ॥
ಕೊಱದುದು ಕಿಡಿಸಿದನಿನ್ನೇ- ।
ತಱಿ ಬಾಳುವೆ ಮನೆಯನೊಲ್ಲೆವೆಂಬರ್ಪೆಂಡಿರ್ ॥ ೧೦೮ ॥

ಮನೆಯುಂ ಮಕ್ಕಳನೊಕ್ಕಲು- ।
ತನಮುಂ ಬಿಡುವಂತು ಧರ್ಮ್ಮಮುಂ ಪೇಳ್ವಂತೇಂ ॥
ನಿನಗೇನುಮುಂಟೆ ನೀಂ ಕೆ- ।
ಮ್ಮನೆ ಬಾರದಿರಣ್ಣಾ ಪೋಗಿಮೆಂಬರ್ಪೆಂಡಿರ್ ॥ ೧೦೯ ॥

ಪೊಂದರುತಿರೆ ಗಂಡಂ ಸಾ- ।
ಯೆಂದಡೆ ಜೀಯೆಂದು ಪೇಳ್ದೊಡಂ ಮಾಡುವರಿಂ- ॥
ತೊಂದುದಿನ [೨]ಬೀಯು[೨]ಮಿಲ್ಲದೊ- ।
ಡಂದಾಗಳ್ಮಾತುಗೇಳರಱಿನಂ ಮರೆವರ್ ॥ ೧೧೦ ॥

ಪುರುಷನ ಚಿತ್ತಂ ಬಿಡಿಯು- ।
ಲ್ಪರಮಶ್ರಾವಕಿಯರಪ್ಪಲತ್ತಲ್ ಬರಿಯುಂ ॥

---

೧. ಇ—[೧]ಲಾಪ್ರಿಯುವೆಂಡಿರ್[೧]; ೨. ಇ—[೨]ವಿನಯು[೨];

ಕರಗಮುಮಂ ಪೊಱಿನಂ ತಾ- ।
ನಿರದೀವಗ್ಗಾ೯ಗೆಂದು ಸಲೆ ತಾಟಕಿಯರ್ ॥ ೧೧೧ ॥

ಉಡಲುಂ ತುಡಲುಂ ನಿಚ್ಚಂ ।
ಕುಡೆ ಗಂಡಗಂಜಿ ಜೈನೆಯರುಮೆಂದೆಂಬ- ॥
ಪ್ಪ೯ಡಪಿಲ್ಲದೊಡಾಬ್ರತಮಂ ।
ಬಿಡುವಪ್ಪೊ೯ಲೆಯರವೊಲೆಸಪರಱಿಗುಲಿವೆಂಡಿರ್ ॥ ೧೧೨ ॥

ನಾ॰ರಿಯರಜ್ಜಿಯ ರೂಪಂ ।
ವೈರಾಗ್ಯದೆ ಕೊಂಡುಮೆಲ್ಲಿಯುಂ ತಮ್ಮವರಂ ॥
ಕೂಡೆ ತಿರಿತಂದು ರಕ್ಷಿಪ- ।
ರಾರಾಧ್ಯನದೆಸೆಯನೊಲ್ಲರೆಂತುಂ ಕೆಲಬರ್ ॥ ೧೧೩ ॥

ಕಿಱಿಯುಂದು ೨ತೊಟ್ಟುವಮ॰ಢಮ- ।
ನಿಱಿಯದೆ ಮನೆಗಳೊಳು ಬಳೆದ ಸತಿಯಜ್ಜ್ವ೯ನ- ॥
ಕೈಱಿಗುವರಲ್ಲದೆ ಭಕ್ತಿಯಿ- ।
ನೆಱಿಗುವರೆ ಪೆಂಡಿರೆಂದು ನಂಬುಗೆ ಜೈನಂ ॥ ೧೧೪ ॥

ಎನಿತವಗುಣಂಗಳೊಳವಂ- ।
ತನಿತಕ್ಕಂ ನೋಳ್ಪಡಾವಗಂ ತಾಮೆತವ- ॥
ಮ್ಮ೯ನೆಯೆನಿಪ ಪೆಂಡಿರಿಂದಂ ।
ಜಿನಧಮ್ಮ೯ಂ ಬೆಳಗದಿನಿತನಱಿವುದು ಜೈನಂ ॥ ೧೧೫ ॥

ಪುರುಷಂ ಸದ್ರುಷ್ಟಿತ್ವಂ ।
ದೊರೆಕೊಂಡೊಡವೆನೊ ತಾಯ್ವಿರುಂ ಸ್ತ್ರೀಯರನೇ- ॥
ಕಿರಲಿತ್ತ ಪರವರಿನದಂ ।
ಪರಿಭವಿಸುವೆನೆಂದು ಪೊಂಗುಗುಂ ಮಿಥ್ಯಾತ್ವಂ ॥ ೧೧೬ ॥

ಮನೆಯುಂ ಮಕ್ಕಳನೊಕ್ಕಲು- ।
ತನಮಂ ಬಿಡಲಾಱನೇವೆನೆನೆ ಪೊಲೆಯನಣಂ ॥
ವನಿತೆ ನಿರಂಕುಶೆ......... ...[೩] ।
ಯೆನಗೆಂದೊಡೆ ಗೆಯ್ದು ಪೊರೆವನಲ್ಲಂ ಜೈನಂ ॥ ೧೧೭ ॥

---

೧. ಇ—ವಾ; ೨. ಇ—೨ತೊಡಗಿಯುಂಮುನ।ಮು೨; ೩. ಈ—೩ಶೆಗೆನಿಸಂ೩;

ನೆಱೆ ಧರ್ಮ್ಮಮನೊಲ್ಲದರಂ ।
ತೊಱೆವುದು ತೊಱೆಯಲಣಮಾಱದಿರ್ದ್ದಡೆ ಬಿಯಮಂ ॥
ಕಿಱಿದನಱಿದೀವುದುಳ್ಳುದ- ।
ನಱಿನಱಿವರ್ಗ್ಗಿತ್ತು ತಪಿಪುದಱಿವುಳ್ಳಾತಂ ॥ ೧೧೮ ॥

ಪಿರಿದುಂ ದುಃಖದೆ ನೆರಪಿದ ।
ಪುರುಳಂ ಧರ್ಮ್ಮಕ್ಕೆ ತವಿಸಿ ಶಾಸ್ವತಸುಖದೊ- ॥
ಳ್ನೆರೆಯದೆ ಧರ್ಮ್ಮಮನೊಲ್ಲದೆ ।
ತರುವರಿಗಳಿಗಿತ್ತು ವಿತ್ತಮಂ ತವಿಸುವುದೆ ॥ ೧೧೯ ॥

ಪಲವುಂ ಮಾತಿನೊಳೇನೋ ।
ಫಲಮಪ್ಪುದು ದಾನದೇಳ್ಗೆಯಿಂ ಸುಬ್ರತದಿಂ ॥
ಸಲೆ ನೆಗಳ್ವವನುಂ ಪಡೆವುದು ।
ಕುಲತಿಲಕನನೋರ್ವ್ವಜೈನನಂ ಗುಣನಿಧಿಯಂ ॥ ೧೨೦ ॥

ಜಿನಬಿಂಬಮನಂಬಿಪ್ಪನು ।
ಜಿನಧರ್ಮ್ಮಮೆ ಧರ್ಮ್ಮಮೆಂದು ಮಿಗೆ ನಂಬುವನುಂ ॥
ಜಿನಸಮಯಿಗೆ ದಾನಮನೀ- ।
ವನುಮೆನ್ನ ಸುಪುತ್ರನೆಂದು ಪೊರೆವಂ ಜೈನಂ ॥ ೧೨೧ ॥

ಮಕ್ಕಳನಿಂಬಿಂ ಋಷಿಯರ ।
ಪಕ್ಕದೊಳೋದಿಪುದು ಯೋಗ್ಯರಪ್ಪರ್ಪಿರಿದುಂ ॥
ತಕ್ಕುದನಱಿವರ್ದ್ದಯೆಯಿಂ- ।
ಬಕ್ಕಟ[1] ವಚನಮನೆ ನುಡಿವರಱಿನಱಿದೆಸಪರ್ ॥ ೧೨೨ ॥

ಕಲಿಸದೆ ಮುಂಪೆಱಪೆಱವಂ ।
ಕಲಿಪುದು ಮಕ್ಕಳನೆ ದೇವತಾರಾಧನೆಯಂ ॥
ಕಲಿಪುದು ಗುಣಗಣಮಂ ತಾಂ ।
ಕಲಿಪುದು ಸ[2]ತ್ಪುತ್ರರ[2]ಱಿದು ದಾನಮನೀಯಲ್ ॥ ೧೨೩ ॥

ಕಲಿಸದೆ ವಿದ್ಯೆಗಳನಣಂ ।
ಕಲಿಪುದು ಮಕ್ಕಳನೆ ಮುನ್ನೆ ಜೈನಾಗಮಮಂ ॥

---

೧. ಇ—ರ; ೨. ಇ, ಈ—೨ತ್ಪಾತ್ರವ೨;

ಕಲಿಸಿದೊಡೆಲ್ಲಾ ಗುಣವಂ ।
ಕಲಿಸಿದ ತೆಜಿನಕ್ಕುಮೆಂದು ನೆಗಳ್ವಂ ಜೈನಂ ॥ ೧೨೪ ॥

ಇಗಿಸುವಿಡುವ ಪೊಯ್ವ ಕುತ್ತುವ ।
ಮಸೆಯಂ ಪತ್ತಿಸುವ ಕೈದು ಬಿನ್ನಣಮಂ ಯಿೀ- ॥
ಕ್ಷಿಸಲಾಗ ಸುತರನಾ ದು- ।
ರ್ವ್ಯಸನಂ ದೋಷಕರನೆಂಬನುತ್ತಮ ಜೈನಂ ॥ ೧೨೫ ॥

ಇಂತಿರೆ ಕಲಿಸಲು ಧರ್ಮ್ಮದ ।
ಸಂತತಿಯುಂ ಕಿಡದೆ ನಡೆಗುಮಲ್ಲದೆ ಸುತರಂ ॥
ತಂತಮ್ಮಿಚ್ಛೆಗೆ ಬಿಟ್ಟಡೆ ।
ಸಂತಾನಂ ಕಿಡುಗುಮೆಂದು ನೆಗಳ್ವಂ ಜೈನಂ ॥ ೧೨೬ ॥

ಆಭರಣದೊಳಗೆ ತಾನೊಂ- ।
ದಾಭರಣಂ ಸುರಿಗೆವೊಂದ ಕಟ್ಟುವನುಳಿದಂ- ॥
ತೇಭಂಡಂ ಸುಗತಿವರಂ- ।
ಗಾಭರಣಂ ಲೋಕಮಿತ್ರಮಾರ್ಹತಮಲ್ತೆ ॥ ೧೨೭ ॥

ಗಂಡಂ ಬೆಸಸಿದೊಡೋಸದೆ ।
ಗೊಂಡರ್ಹತ್ಪೂಜೆಯಂ ಸುದಾನಮುಮಂಕೈ- ॥
ಕೊಂಡೊಲ್ದು ಮಾಡುತಿಪ್ಪಾ ।
ಪೆಂಡತಿಯುಂ ಪಡದವಂ ನಿಧಾನಂ ಬಡೆದಂ ॥ ೧೨೮ ॥

ಪುರುಷಂ ತೀರಮೆಯಿಂದಂ ।
ಪರದೇಶದೊಳಿರ್ದ್ದರಿತ್ತಲುತ್ತಮಪಾತ್ರಂ ॥
ಬರೆ ಸಾಲಂಗೊಂಡುಂ ಬಿ- ।
ತ್ತರದಿಂದಿಕ್ಕುವಡೆ ಧರ್ಮ್ಮಪತ್ನಿಯೆನಿಕ್ಕುಂ ॥ ೧೨೯ ॥

ವ್ರತಮುಂ ಗುಣಮುಂ ಶೀಲಮು- ।
ಮತಿಶಯಮೆನೆ ಜೈನಭಕ್ತಿಯೆನೆ ನೆಗಳ್ದಾ ಪೆಂ- ॥
ಡತಿಯುಂ ಪಡೆದ ಮಹಾತ್ಮಂ ।
ಕೃತಾರ್ತ್ಥನಿಹಪರಸುಖಂಗಳಿಂ ಪಡೆದಾತಂ ॥ ೧೩೦ ॥

---

೧. ಇ—ಎ;

ನಂದನರುಂ ನಂಟರುಮೊಡ- ।
ವಂದಪ್ಪರೆ ಕೊಂಡು ಮುಳುಗುವಪ್ಪುರ್ಣ್ಯಂ ತಾ- ॥
ನೊಂದುಮೊಡವಕ್ಕುಮೆಂದದ ।
ನೆಂದುಂ ಪೆರ್ಚಿಸುವವನಿತೆಯುಂ[೧] ಸತಿಯಕ್ಕುಂ ॥ ೧೩೧ ॥

ನವಗೆಂದಾ ತಾಯ್ತಂದೆಯ- ।
ರವರಿತ್ತರೆ ಮೊದ[೨]ಲನೊಳ್ಪಿನಿಂ ಪಡೆವಂ ಮ- ॥
ತ್ತವರಂ ಪುಣ್ಯಮೆ ಪಡಯಿಪು- ।
ದವಶ್ಯಮೆಂ[೩]ನಱಿದೊ[೩]ಳೆಸಪ ಮಿಥುನಮೆ ತೀರ್ತ್ಥಂ ॥ ೧೩೨ ॥

ಮಕ್ಕಳ ಮಱಿಗಳ ಸುಖದುಃ- ।
ಖಕ್ಕಾದಂ ಮಱುಗಲಾಗದಂತವರ್ಗ[೪]ಱಿದಿಂ[೪]- ॥
ದಕ್ಕುಂ ಸೌಖ್ಯಂ ಪಾಪದಿ- ।
ನಕ್ಕುಂ ದುಃಖಮವು ತಮಗೆ ವಶಮಲ್ಲದಱಿಂ ॥ ೧೩೩ ॥

ಬಸುಱೊಳಿರೆ ತಾಯು ಪೊಱಮಡೆ ।
ವಸುಧೆಗೆ ಪೊಱೆಯಾಗಿ ಬಾಳ್ವ ಮಗನಂ ಪೆತ್ತಂ- ॥
ಗಸಣಿಯನೆ ಪೆತ್ತನೊಳ್ಪಿಂ- ।
ದೆಸಗುವನಂ ಪೆತ್ತ ತಂದೆ ನಿಧಿಯಂ ಪೆತ್ತಂ ॥ ೧೩೪ ॥

ಮನೆಯೊಳಗುಳ್ಳುದನೆಂದುಂ ।
ಜಿನಮಹಿಮೆಗೆ ತವಿಸುತಿಪ್ಪ ಮಗನಂ ಪೆತ್ತಂ ॥
ಮನವಾರೆ ವಸ್ತುವಾಹನ ।
ಧನಕನಕಸಮೃದ್ಧಮಪ್ಪ ಸಿರಿಯಂ ಪೆತ್ತಂ ॥ ೧೩೫ ॥

ಬಗರಗೆಯೊಳೊಱೆತೆಯುಳ್ಳ- ।
ನ್ನೆಗಮೆನಿತಂ ತೋಡಿಕೊಂಡಡನ್ನಿತ್ತ್ರವದಂ- ॥
ತಗಣಿತಪುಣ್ಯಮದುಳ್ಳ- ।
ನ್ನೆಗಮೋರ್ವ್ವಂಗೀಗೆ ತವದುದನವೇಗೆಯ್ದುಂ ॥ ೧೩೬ ॥

ಶುಲಭಂ ಪಡೆಯಲ್ಬಕ್ಕುಮೆ ।
ಸಲೆ ಪಿರಿಯರನೆತ್ತಲಾನುಮೊಂದೆವಸಂ ನಿ- ॥

---

೧. ಇ—ಮಾ; ೨. ಈ—ಡ; ೩. ಆ—೩ದದಱಿ೩ೊ೩; ೪. ಇ—೪ದಱಿಂ೪;

ರ್ಮ್ಮಳಜೈನರಸಲ್ಲದೆ ಪಡೆ- ।
ಯಲಾಗದೆಂದೊಲ್ದು ತುಷ್ಟಿಮಾೞ್ಪಂ ಜೈನಂ ॥ ೧೩೭ ॥

ಸದಮಳವಱಿನಱಿವಾತಂ ।
ವಿದಿತಂ ದ್ರವ್ಯಗುಣಪರ್ಯ್ಯಾಯಂಗಳಿನಾವಂ ॥
ವಿದಿತಾಧ್ಯಾತ್ಮನವಂ ದೋಃ- ।
ಷದೂರನಾತಂ ಗೃಹಸ್ಥ[1]ರೊಳ್ ಸತ್ಪಾತ್ರಂ[1] ॥ ೧೩೮ ॥

ಪಲವುಂ ಮಾತಿನೊಳೇಂ ದ್ರ- ।
ವ್ಯಲಿಂಗಿಯುಂ ಭಾವನಾಪರಂ ಜೈನಂ ನಿ- ॥
ರ್ಮ್ಮಳನಾತನೆ ಸತ್ಪಾತ್ರಂ- ।
ದಲೆಂದು ಸಂತುಷ್ಟಿಮಾೞ್ಪನಱಿವುಳ್ಳಾತಂ ॥ ೧೩೯ ॥

ನಿಧಿಬರ್ಪ್ಪಂತಿರೆ ಬಂದೊ- ।
ರ್ಮ್ಮೆ ದಾನಿಯುಂ ಮೋಹದೊಱ್ ಋಷಿನೆನೆಯಿಸುವಂ- ॥
ದದೆ ಮನೆಗೆ ಬಂದು ನೆಸಯಿಪ- ।
ನದಱಿಂದಮಪೂರ್ವ್ವಪಾತ್ರನುತ್ತಮ ಜೈನಂ ॥ ೧೪೦ ॥

ಒಕ್ಕಲಿಗನಕ್ಕೆ ಪಂಚಮ- ।
ನಕ್ಕೆಮಸದ್ದೃಷ್ಟಿಯಾಗೆ ಕಾಲಂ ಕರ್ಚ್ಚ- ॥
ಲ್ತಿಕ್ಕುದು ಜೈನಂಗೇಕೆನೆ ।
ಚಿಕ್ಕಯ್ಯಂ ಶೂದ್ರನೆಂದು ಕಚ್ಚರೆ ಕುಲಜರ್ ॥ ೧೪೧ ॥

ಒಕ್ಕಲಿಗಂ ಋಷಿಯಾದೊಡೆ ।
ಚಿಕ್ಕಯ್ಯನೆ ಕಾಲನೆಂತು ಕರ್ಚ್ಚವರದಱಿಂ ॥
ಒಕ್ಕಲಿಗಂ ಬ್ರತಿಯಾದಂ- ।
ದಕ್ಕುಂ ಕರ್ಚ್ಚಲ್ಕೆ ಮದಮನುಳಿಗೆ ಕುಲಜ್ಞಂ ॥ ೧೪೨ ॥

ಅಧಿಗಮಸದ್ದೃಷ್ಟಿಗೆ ನವ- ।
ವಿಧಪುಣ್ಯಮುಮೇೞುಗುಣಮುಮಮರ್ದಿರೆ ತನ್ನೊ- ॥
ಳ್ನಿಧಿದೊರಕೊಂಡಂತೆನಗೆಂ- ।
ದು ಧಾರ್ಮ್ಮಿಕಂ ತುಷ್ಟಿವಡಿಸವೇಳ್ಕುಂ ಜೈನಂ ॥ ೧೪೩ ॥

---

೧. ಇ—೧ಸ ಸತ್ಪಾತ್ರನವಂ೧;

ಪರಮ ಜಿನಪತಿಯೊಳಂ ಬಿ- |
ತ್ತರದಿಂದಂ ದೇಶಯತಿಯೊಳಂ ಸ್ನೇಹಪರಂ ||
ಪರಿನೆಗಳೆ ತುಷ್ಟಿಯೊಳ್ತ- |
ಳ್ತಿರದಿಂ ಮೋಕ್ಷಾಂಗನಾಧಿಪತಿಯೆಂತಕ್ಕುಂ || ೧೪೪ ||

ಅರಸಂಗಮರಸಿಗಂ ಪು- |
ಟ್ಟಿ ರಾಜಸುತನೆನಿಸಿ ಭೂಪನಪ್ಪವೊಲಱಿತಂ ||
ದೊರಕೊಳೆ ಭವ್ಯಂ ನಿಯಮದಿ- |
ನರುಹಂತಾನಕ್ಕುಮದಱಿನರ್ಚ್ಚಿಪುದಱಿವಂ || ೧೪೫ ||

ಬ್ರತಗುಣಸುಚರಿತ್ರಸಮ- |
ನ್ವಿತನಾತ್ಮಜನಾಗೆ ಪುತ್ರನೆಂಬುದು ಜೈನಂ ||
ಬ್ರತಗುಣಚರಿತ್ರಮಿಲ್ಲದ |
ಸುತನಂಜಂತೆಂಗೆ ತನುಜನಪ್ಪುದಱಿಂದಂ || ೧೪೬ ||

ಪರಮಾಜಿನಂಗೆಱಗದರಂ |
ಪೊರದಡೆ ಫಲಮಿಲ್ಲ ಪಾಪದಾಶ್ರವಮಕ್ಕುಂ ||
ಪರಿಹರಿಸುವುದಾರ್ಹತರನು |
ಪೊರೆವುದು ಪುಣ್ಯಂದಲೆಂದು ಪೊರೆವಂ ಜೈನಂ || ೧೪೭ ||

ವೃ|| ಮದುವೆಗೆ ಮಾಣಿಗಾತ್ರೋಡಮೆಯೆಲ್ಲಮನೋವದೆ-
ಕೊಟ್ಟು ಲೇಸಮಾ- |
ಡಿದನೆನೆ ರೂಢಿಗಾಟಿಸದೆ ಜೈನಗೃಹಾಳಿಗೆ-
ಭವ್ಯಕೋಟಿಗೀ- |
ವುದು ಧನಮಂ ಸ್ವಯಂಭುಪತಿಗೊಪ್ಪಿರೆ-
ಕಟ್ಟಿದಪಟ್ಟಮಂ ಮನೋ- |
ಮುದದಿನಧಃಕರಿಪ್ಪುದಘಮಂ ಜಸಮಪ್ಪುದು-
ವಿಶ್ವಧಾತ್ರಿಯೊಳ್ || ೧೪೮ ||

ಕಂ|| ದುರಿತಾರಿಯನೋಲಗಿಸದೆ |
ತಿರಿದೆಂದುಂ ಬಂದ ಬಸುರುಮಂ ವೃಂದಮುಮಂ ||

---

೧. ಇ, ಈ—ಬೆಂ;

ಪೊರೆಯಲ್ಕೆ ಮಱುಗುವಾತಂ ।
ನರಕಕ್ಕಿಳಿವಂದದಾರ್ಗ್ಗೆ ಕೈಯೆಡೆಗುಡುವಂ ॥ ೧೪೯ ॥

ರತ್ನತ್ರಯಮುಂ ಪಾಲಿಪ ।
ಪತ್ನಿಗೆ ಮಕ್ಕಳಿಗೆ ಬೇಳ್ಪುದೆಲ್ಲಮನಿತ್ತುಂ ॥
ರತ್ನದ ತೊಡಿಗೆಯನಿತ್ತುಂ ।
ಯತ್ನದೆ ರಕ್ಷಿಸುವನೆಂಬನುತ್ತಮ ಜೈನಂ ॥ ೧೫೦ ॥

ಉಂಡುಟ್ಟು ತೊಟ್ಟ ನಂಟರ ।
ತಂಡಂ ತಮಗಾಗಿ ಬದ್ಧ[೧]ನಂ ದುಃಖಂ ಮುಂ- ॥
ಕೊಂಡೊಯ್ಯೆ ಕಾಯರಾರ್ಹತ ।
ರುಂಡಡೆ ನರಕಕ್ಕೆ ಪೋಗಲೀಯದೆ ಕಾವರ್ ॥ ೧೫೧ ॥

*ದೋಷಿಗಳಂ ಪೊರೆದೊಡ[೨].... ।
....[೨] ॥
.... ।
ಪೋಪರ್ಬ್ಬಿಡರಾವಕಾಲಮುಂ ಭವ್ಯರ್ಕ್ಕಳ್ ॥ ೧೫೨ ॥

ಮುನ್ನಿನ ಭವದಿಂದೀಗ- ।
ಳ್ತನ್ನೊಡವಂದನೆ ಪರಿಗ್ರಹಂ ತನುಧನವೇಂ ॥
ತನ್ನವೆ ತನ್ನವರಲ್ಲರು- ।
ಮೆನ್ನುತ ನಿಸ್ಸಂಗನಾಗೆ ಬಗೆವುದು ಜೈನಂ ॥ ೧೫೩ ॥

ಸಂಗಮನೆ ತೊಱೆವುದೆಂತುಂ ।
ಸಂಗವ್ಯಾಸಕ್ತನಾದೊಡೆಂತುಂ ವಿದ್ವ- ॥
ತ್ಸಂಗಮನೆಮಾಳ್ಪುದದೆ ನಿ- ।
ಸ್ಸಂಗಕ್ರಿಯೆಗುಚಿತಭೇಷಜಂ ತಾನಕ್ಕುಂ ॥ ೧೫೪ ॥

---

೧. ಇ—ರ್ದ್ದ; ೨. ಇ—೨ವೊಡ।ಪೋಗಿರ್ಪ್ಪರೆ ಸ್ವರ್ಗಕ್ಕಂ ಪೊಡೆ......॥೨;

*ಈ— "ಪಾಪಿಗಳಂ ಪೊರೆದಂದೊಡ ।
ಪರೆ ಪೋಗಿರ್ದ್ದ ಬರ್ಪ್ಪರೆ ಸ್ವರ್ಗಕ್ಕಂ... ॥
ಪಾಪಮುಕ್ತಿಗೆ ವೋಗದೆ- ।
ಪೋಪರ್ಬಿಡದಾವಕಾಲಮುಂ ಭವ್ಯಜನಂ ॥"

ಪುಸಿಯಂ ನುಡಿಯಲ್ಲೊರ್ಗೆಗರ ।
ಕಸವರಮಂ ಕೊಳ್ಳರನ್ಯವಧುಗಳಿಪರ್ವ್ಮೊರ್ಗೆ ॥
ಹಿಸಿ ನೆಗಳ್ವರಲ್ಲ ಹಿಂಸೆಯ ।
ದೆಸೆಯಣವಿಲ್ಲೆನಿಸಿ ನೆಗಳ್ವರಾರ್ಹತ ನಿರತರ್ ॥ ೧೫೫ ॥

ವೃ॥ ನುಡಿವುದು ಸತ್ಯಮಂ ಮಡಿಪದಿಪ್ಪುದು-
ಜೀವಮನನ್ಯಕಾಂತೆಯಂ ।
ಕಡೆಗಣಿಸಿಪ್ಪುದನ್ಯಧನಮಂ ಕಳಲಾಟಿಸಲಾಗದೆಂದಿವಂ ।
ನುಡಿಯಲೆ ಬಲ್ಲರಾತೆಱದಿನಾಚರಿಸರ್-
ಪೆಱರಾಗಮೋಪ್ಪದಿಂ ।
ನುಡಿಯಲೆ ಬಲ್ಲರುತ್ತಮಗುಣಾನ್ವಿತರಾರ್ಹತರೆಂತು-
ನೋಳ್ಪಡಂ ॥ ೧೫೬ ॥

ಕಂ॥ ನುಡಿಯೊಂದಂದಂ ಲೋಗರ ।
ನಡೆತಾನೊಂದಂದವಿತರರೀ ಮಂಡಳದೊ- ॥
ಳ್ನುಡಿಯುಂ ನಡೆಯುಂ ನೋಡುವ ।
ಡೆ¹ಡಂಬವಿಲ್ಲೆನಿಸಿ² ನೆಗಳ್ವರಾರ್ಹತರೆಲ್ಲಂ ॥ ೧೫೭ ॥

ಅಯ್ದಂ ಬ್ರತಕ್ಕೆ ಭವ್ಯನು ।
ಮೆಯ್ದಂದುಂ ಜೈನಚರಣಮಂ ಭಾವಿಸುವಂ ॥
ದೆಯ್ದುಗುಮಿದನೊಲ್ಲದನೇ- ।
ನೆಯ್ದಲ್ಕಾರ್ತಪನೆವಿಮಳಮುಕ್ತಿಶ್ರೀಯಂ ॥ ೧೫೮ ॥

ಎಂತೀ ಬ್ರತಂಗಳೊಳ್ತಾ- ।
ವೆಂತುಂ ನಡೆಯಲ್ಕೆ ಮಾಱದರೆ ಬಪ್ಪರಿದುಂ ॥
ಭ್ರಾಂತಾತ್ಮರಾಗಿ ನಡೆದ- ।
ತ್ಯಂತಂ ದುಶ್ಚರಿತರೆಯ್ದುವದ್ದುರ್ಗತಿಯಂ ॥ ೧೫೯ ॥

ವೃ॥ ಜೀವಂಗಳ್ಗತಿದುಃಖಮಪ್ಪ ನರಕಾವಾಸಂಗಳಂ-
ಮಾಡುಗುಂ ।
ಸಾವದ್ಯಪ್ರಮುಖಾಗ್ರದೋಷಮದಱಿಂದಾಶಕ್ತಿವೇಡಲ್ಲಿ ಸ- ।

---

೧. ಇ—೧ದೇವಂ ಬದಿಲೆನಿಸಿ೧; ೨. ಇ—ಇ;

ದ್ಭಾವಂ ಜೈನರೊಳಾಗೆ ನೀಂ ನೆಗಳೆ ಸಚ್ಚಾರಿತ್ರದಿಂ ತಪ್ಪದಾ।
ದೇವತ್ವಂ ದೊರೆಕೊಳ್ಗುಮಲ್ತೆ ಬಳಿಯಂ-
ನಿಶ್ರೇಯಸಂ ಕೂಡುಗುಂ ॥ ೧೬೦ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣ ಪರಿಣತಾಂತಃಕರಣ ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾಸಮಯತಿಮಿರಚಂಡಕಿರಣ ಸಕಳಾಗಮಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವವಿರಚಿತಮಪ್ಪಸಮಯಪರೀಕ್ಷೆಯೊಳು ಪಂಚಾಣುವ್ರತ ವರ್ಣ್ನನಂ ಪಂಚಮಾಧಿಕಾರಂ ॥

ಶ್ರೀ ಶ್ರೀ ಶ್ರೀ

॥ ಶ್ರೀ ॥

ಷಷ್ಠಾಧಿಕಾರಮ್

ಶ್ರೀಮತ್ರಿಲೋಕವಂದ್ಯಮು- ।
ಹಾಮಹಿಮಾಸ್ಪದನನಂತಗುಣಗಣನಿಳಯಂ ॥
ಕಾಮಹರನನಘನಮಳಂ ।
ಪ್ರೇಮದೆ ದಯಗೆಯ್ಗೆ ವಿಮಳರತ್ನತ್ರಯಮಂ ॥ ೧ ॥

ವೃ॥ ನುಡಿವುಸಿಯೊಳ್ ಪೊದಳ್ದಿರದು ದಾನದ-
ಪೊಂಪುಳಿಲೋಭದಾಸೆಯೊ ।
ಳ್ತೊಡರದು ಶೌಚದೇಳ್ಗೆ ಪಳಿಯೊಳ್ಕಳೆಗೊಳ್ಳದು-
ಕೀರ್ತಿಕಲ್ಮಷ- ।
ಕ್ಕೆಡೆಗುಡದೊಳ್ಪು ಬಂಜೆಯೆನೆ ಸಂದಿರದುನ್ನತ-
ಹೀನವೃತ್ತಿಯಂ ।
ಗೆಡೆಗೊಳಲೆಂತುಮೊಲ್ಲದೆನೆ ಬಣ್ಣಿಸಲಾಗ್ಗಳ-
ಭವ್ಯಕೋಟಿಯಂ ॥ ೨ ॥

ಕಂ॥ ಶುಭಮತಿಗಳ್ಗಾಗದು ರಾ- ।
ತ್ರಿಭೋಜನಂ ದುಃಖಭಾಜನಂ ನಿಶ್ಚಯಮೆಂ-॥
ದಭಿಭವವಿಪರಾಗಿ ದಿವದೊ- ।
ಳ್ಸಭೋಜನಂ ಗೆಯ್ವರಲ್ಲರೇ ಜೈನವರರ್ ॥ ೩ ॥

ಇರುಳುಣ್ಮಡೆನ್ನರುಂ ಕಾ- ।
ಣರು ಸೂಕ್ಷ್ಮಮೆನಿಪ್ಪ ಪುಳುಗಳಂ ಕಾಣ್ಬರ್ನೋ- ॥
ಡಿರೆ ಪಗಲೊಳುಣ್ಬರದಱಿಂ ।
ಪರಿಕಿಸಿ ನೇಸರೊಳಗುಣ್ಬೆನೆಂಬಂ ಜೈನಂ ॥ ೪ ॥

ಇರುಳುಣ್ಬುದಾಗದೇಕೆನೆ ।
ಹರಿಹರಬುದ್ಧರ ತಪಸ್ವಿಗಳ್ಗುಣಮಲ್ಲೆಂ- ॥
ದಿರುಳುಣಸನೊಲ್ಲರೆಂದಡೆ ।
ಪರತ್ರೆಯೊಳ್ದುಃಖಮಕ್ಕು ಮುಳಿಗಱಿವಾತಂ ॥ ೫ ॥

ಹಿಂಸಾದಿದೋಷರಹಿತಂ ।
ಮಾಂಸಾದನಮದ್ಯಮಧುಗಳಂ ಪರಿಹರಿಪಂ ॥
ತಾಂ ಸಚ್ಚರಿತ್ರನೆನಿಸುವ- ।
ವಂ ಸೌಖ್ಯಾಸ್ಪದಮನೆಂತುಮೆಯ್ದದೆ ಮಾಣಂ ॥ ೬ ॥

ಎರಡಾಲಬಸುರಿಯೌದುಂ- ।
ಬರದರಳಿಯ ಮರದ ಪಣ್ಣುಮಂಗಿಣ್ಣುಮನಂ ॥
ತಿರೆ ಬಿಲ್ವಫಲಮುಮಂ ಪರಿ- ।
ಹರಿಪುದು ಸಚ್ಚರಿತನೆಂದುತೊಱೆವಂ ಜೈನಂ ॥ ೭ ॥

ಪೂವಿನ ಬಾಡುಗಳಂ ಕ್ರೀ- ।
ರಾವ[೧]ನವನಜದ[೧] ಫಳಂಗಳಂ ಬಳ್ಳಿಯುಮಂ ॥
ಶ್ರಾವಕನಪ್ಪಂಗಾಗದು ।
ಸೇವಿಸಲಂತಲ್ಲಿ ಪುಳುಗಳೊಳವಪ್ಪುದಱಿಂ ॥ ೮ ॥

ಮಳೆಗಾಲದೊಳೆಲೆವಾಡಂ ।
ಹಳೆಯೆಳ್ಳಿಂ ಹಿಳಿದತೈಲಮುಂ ಬಿಸತತಿಯುಂ ॥
ಮೊಳೆಯಲ್ಲಮನುಪ್ಪುಂಗಾ- ।
ಯ್ಗಳನಾಗಲ್ಸೇವಿಸಲ್ಕೆ[೨]ವೆತ್ತಂ[೨] ಜೈನಂ ॥ ೯ ॥

ಕಳೆದುಂಬುದು ಕೂಳೊಳಗಣ ।
ನೊಳ[೩]ವಂ ತಲೆನವಿರನಿಱಿಪೆಯುಂ ಪರಿಕಿಪೊಡೆಂ ॥
ಗಡ್ಡೆಗಳಂ ಕೂಳೆಡೆ ದೋ- ।
ಷಮೆಂಬುದಂ ಕಂಡು ನೆಗಳಲರಿಯನಂತಿರೆ ಜೈನಂ ॥ ೧೦ ॥

ಶಲ್ಯಂಗಳೊಳಗೆ ವೇತದ ।
ಖಿಲ್ಯಬ್ಬಿಡದುಣ್ಬರಗ್ರ ಮುನಿಗಳ್ಪಲರೇಂ ॥

---

೧. ಇ—೧ನಿಜಾತದ೧; ೨. ಇ—೨ಭೀತಂ೨; ೩. ಇ, ಈ—ಣ;

ಲೌಲ್ಯರೊ ಭಾವಿಸಲದ ಮಾಂ- ।
ಗಲ್ಯಂ ಪೆಸಗೊಂಡಬಳಿಯಮುಣ್ಬರೆ ಜೈನರ್ ॥ ೧೧ ॥

ಪರಸಮಯದ ಯತಿಪತಿಗ- ।
ಳ್ಕರವತಿಗೆಯ ನೀರನರ್ತ್ಥಿಯಿಂದೀಂಟದರೆಂ ॥
ಪರಮಜಿನಸಮಯದಲ್ಲಿಯ- ।
ದರವುಱಿಗನುಮದನೆ ಕಂಡು ಕುಡಿಗೆಮ ನೀರಂ ॥ ೧೨ ॥

ಕರವತಿಗೆಯ ಕೊಳೆನೀಪ್ಪಾರ್- ।
ವ್ವರಿಗಂ ಭಗವರಿಗಮಂತೆ ವ್ಯಾಧರಿಗಂ ತಾಂ ॥
ಪರಮಂ ಪವಿತ್ರರುಂ ಜೈ- ।
ನರಲ್ಲಿ ಪೊಲೆಯರ್ಗ್ಗಮಾಗದೆಂತುಂ ಕುಡಿಯಲ್ ॥ ೧೩ ॥

ಬುಧರುಂ ಕರವತಿಗೆಯ ಪೋ- ।
ಲಧಮರ್ಕ್ಕಸು ವನದೆ ಸಮಯೆ ಕುಡಿವರ್ನ್ನೀರಂ ॥
ಮಧುವೆಂದು ತುಪ್ಪಮಂ ಪರ- ।
ವಧುವೆಂಡಾರ್ತ್ತಿಯ ವಧುವನನುಭವಿಸುವವೋಲ್ ॥ ೧೪ ॥

ತೊಗಲಕೊಳೆ ತುಪ್ಪಮಂ ಪಂ- ।
ದೊಗಲೊಳ್ಪುಳುವೆರಸುತೀವಿದಾ ನೀರುಮನುಂ- ॥
ಡು ಗಡಂ ತಮ್ಮಾಚಾರಕೆ ।
........ಮಿಗಿಲಾವೆಂ[1] ಪಿರಿಯರೆಂಬರ್ಕ್ಕೆಲಬರ್ ॥ ೧೫ ॥

ಕರವತಿಗೆಯನೀರಂ ಪಾ- ।
ದರಕ್ಕೆ[3] ದೊಟ್ಟೆಜಿಯೆ ಸಿಪ್ಪರೆಂತುಂ ಕುಡಿಯ- ॥
ರ್ಕ್ಕರವತಿಗೆ ಪೊಂಚಿಸಂಪಾ- ।
ದರಕ್ಕೆ[4] ತೊಗಲಕ್ಕುಮಲ್ಲದಂದೇಕೊಲ್ಲರ್ ॥ ೧೬ ॥

ವೃ॥ ಪಸುಸಾಯಲ್ಪೊಲೆಯರ್ಕ್ಕಳೆಯ್ದಿ-
ಸುಲಿಯಲ್ಮಾತಂಗರಾತೋಲನ- ।
ದ್ದಿಸಿಪೊಳ್ದಾಱಲಗಿಟ್ಟು ನೇಱಿದಳವಂ ಕೆಂಪುಂ-
ತಗುಳ್ದೆಯ್ದೆಸೋ- ।

೧. ಇ—ಳಿ; ೨. ಇ—ರಂ।ಜಗಕ್ಕೆ ಮಿಗಿಲುತಾವೆಂ; ೩. ಇ—ಕ್ಷೆ; ೪. ಇ—ಕ್ಷೆ;

ಧಿಸಿ ಸುದ್ಧ್ಯೆಸಿದಸಮ್ಯಗಾರವೆಸದೊಳ್ ಚೆಲ್ವಾದವಂತೀವಿದಾ ।
ರಸವರ್ಗ್ಗಂಗಳ ನುಣ್ಬೆವೆಂಬಜಡರಂ-
ಕೈಕೊಳ್ವರೇ ಶ್ರಾವಕರ್ ॥ ೧೭ ।

ಕಂ॥ ನರಕಕ್ಕೆಮಗೆರಡಿಲ್ಲದೆ ।
ಬರವುಂಟೆಂದೆಯ್ದೆ ನಂಬಿಸಲ್ನಾರಕರಂ ॥
ನಿರುತಂ ಬಳಿನೀಗ್ರ್ಗಡಿವಂ- ।
ತಿರೆ ಕುಡಿವಕ್ಕ್ರರವತಿಗೆಯ ನೀರಂ ಪಲಬರ್ ॥ ೧೮ ॥

ಅಡಗಂ ತಿಂಬವರುಂ ಕೆಲ-।
ವೆಡೆಯೊಳ್ಗೋಮಾಂಸಮೆಂದು ಸೂರುಳುಗೆಯ್ವ-॥
ರ್ಕ್ಗಡುತಿಷ್ಪರೆನಿಪಪುರುಪ- ।
ರ್ಕ್ಗಡಿವುದೆ ಗೋಚಮ್ಮ್ರವಾರಿಯುಂ ಕಿಸುಗುಳಮುಂ ॥ ೧೯ ॥

ಏಮಾತೋ ನುಡಿಯಲ್ಕಿಂ ।
ಗೋಮಾಂಸಂ ತಗದು ಹೊಲೆಯನಲ್ಲದವಂ ತಾಂ ॥
ಗೋಮಾಂಸಂ ಗೋಚಮ್ಮ್ರಂ ।
ತಾಮೆರಡುಮವೊಂದೆ ನೋಳ್ಪಡುಂಟೆ ವಿಕಲ್ಪಂ ॥ ೨೦ ॥

ಸಲೆ ಪಸುವನೆ ಸೇವಿಸುವಂ ।
ಹೊಲೆಯಂ ಮೊದಲಾಗಿ ಜೈನನಾದಡೆ ಕುಡಿಯಂ ।
ಕುಲಹೀನನಾಗಿಯುಂ ತೋ ।
ಗಲ೧........೧ಕೊಳೆನೀರನೆಂದೊಡಕ್ಕುಮೆ ಕುಡಿಯಲ್ ॥ ೨೧ ॥

ಸುತ್ತಿಯೊಳುಣ್ಬಡೆ ಮುಟ್ಟುಪ- ।
ಡೆತ್ತಣದತಿ ವಿಮಳಚರಿತನೆನಿಸಿದೊಡಂ ತಾ- ॥
ನುತ್ತಮನಲ್ಲಂ ದಲ್ಕರ- ।
ವತ್ತಿಗೆ ಸಿದ್ಧಿಗೆ ತದಂಗಮುಂ ಬಿಡದನ್ನಂ ॥ ೨೨ ॥

ವೃ॥ ಕಡುಮುಳಿದಟ್ಟಿದಾನವನಿಕಾಯಮನುತ್ತಮ-
ರಾಜಪುತ್ರರಂ ।
ಮಡಿಪಿದರೆಂದು ಪೇಳ್ವಕಥೆಯುಂ ಸಲೆನಿಚ್ಚಲು-
ಮತ್ಥ್ರಯಿಂದಮು- ।

---

೧. ೩—೧ತೆಜ್ರಿಟ೧;

ಣ್ಪೆಡೆಯೊಳೆ ಕೇಳುತಿರ್ಪ್ಪರುಳಿದವರ್ಮ್ಮರೆ-
ದಪ್ಪಡವೊಂದುಪೊಲ್ಲದಂ ।
ನುಡಿದೊಡ ಕೇಳ್ದುಮುಣ್ಬರೆ ಸದಾಚರಿತಜ್ಜಿನ-
ಭಕ್ತರೆಲ್ಲಿಯುಂ ॥ ೨೩ ॥

ಕಂ॥ ಪಿರಿದಪ್ಪಾದರದಿಂದಂ ।
ಪುರಾಣಮಂ ಕೇಳ್ವರಲ್ಲದಾತೆಱದಿಂದಂ ॥
ಚರಿಯಿಸುವರಲ್ಲರನ್ಯ- ।
ಪ್ಪರಮಾರ್ತ್ಥಂ ಜೈನಸಮಯದವರ್ಗಳೆ ಬಲ್ಲರ್ ॥ ೨೪ ॥

ಒಂದಂದದಾಗಮಂ ಪೆಱ- ।
ತೊಂದಂದ ಚರಿತಮನ್ಯಸಮಯಿಗಳೊಳ್ಕಾ- ॥
ತೊಂದು ಮನೆ ವಾರ್ತ್ತೆಯೊಂದೆನಿ- ।
ಪಂದಂ ಮಱೆದಂತುಮಿಲ್ಲ ಜಿನಸಮಯಿಗಳೊಳ್ ॥ ೨೫ ॥

ಹಿಂಸಾದಿ ದೋಷರಹಿತಂ ।
ಸಂಸಾರ ಶರೀರಭೋಗನಿರ್ವೇಗಪರಂ ॥
ಮಾಂಸ ಮಧು ಮದ್ಯ ವಿರತನ- ।
ವಂ ಸೌಖ್ಯಾಸ್ಪದಮನೆಯ್ದುವುದು ಪಿರಿದಾಯ್ತು ॥ ೨೬ ॥

ಪರಮ ಜಿನೋದಿತ ಮಾರ್ಗ್ಗದೆ ।
ಗುರುಗಳು ಪೇಳ್ದಂತೆ ಸಚ್ಚರಿತ್ರದೆ ನಡೆದಂ- ॥
ದುರಿಗೊಡ್ಡಿದರಗಿನಂತಿರೆ ।
ಕರಗುವುದಚ್ಚರಿಯೆ ನರಸ[೧]ನೆರಪಿದ ದುರಿತಂ ॥ ೨೭ ॥

ಉಟ್ಟಡೆ ತೊಟ್ಟಡೆ ಸವಿಯೆನ- ।
ಲಟ್ಟಡುಗೆಯನುಂಡಡೊಲ್ದು ಗಣಿಕೆಯ ಕೆಲದೊ- ॥
ಳ್ಪಟ್ಟಡಮನಿತುಂ ತನುವಂ ।
ಮುಟ್ಟುಗುಮಾನಂದ ರೂಪನಂ ಮುಟ್ಟುಗುಮೆ ॥ ೨೮ ॥

ಪೆಱವಱ ಕೂಟದ ಸುಖವೇ- ।
ತಱ ಸುಖವದು ನಿಜದಿನಾದ ಸುಖಮದು ಸುಖದೊ- ॥

---

೧. ಇ, ಈ—ರ;

ಳ್ನೆಱಿದ ಸುಖಮೆಂಬ ತತ್ವಮ- ।
ನಱಿಯದವಂ ¹ದ್ವೈತ¹ಸುಖಮೆ ಸುಖಮೆಂದಿಪ್ಪಂ ॥ ೨೯ ॥

ಉಣಿಸಿಂ ತಂಬುಲದಿಂ ಭೂ- ।
ಷಣ ಗಣಿಕಾಗಾನ ವಸ್ತ್ರಮಾಲ್ಯಾದಿಗಳಿಂ ॥
ತಣಿಯೆನಣಂ ಚರ್ವಿತಚ- ।
ರ್ವ್ವಣ²ಣಮಾ² ಪಿಷ್ಟಪೇಷಣಕ್ಕಂ ಮೂಢಂ ॥ ೩೦ ॥

ಪುದ್ಗಳಮನೆ ಪಾಟಿಸುವ- ।
ಸ್ಸ್ವರ್ಗ್ಗತಿಯುಂ ಬಯುಸರುಳಿದರೆಲ್ಲಂದದೊಳಂ ॥
ಸದ್ಗತಿಯಪ್ಪಂತೆಸಪರು ।
ಪುದ್ಗಳಮಂ ಬಾತ್ತೆರ್ಮಾಡಿ ಪೊರೆಯರ್ ಜೈನರ್ ॥ ೩೧ ॥

ತನುಸೌಖ್ಯಮಕ್ಕುಮೆಂದೆನಿ- ।
ತೆನಿತಂ ತೊಳೆದೊಡಮದಕ್ಕೆ ಕೊಳೆ ಸಹಜಮದೆಂ- ॥
ತೆನೆ ಸಂಸ್ಕಾರಶತೇನಾ- ।
ಪಿನಗೂಥಃ ಕುಂಕುಮಾಯತೆ ಯೆಂಬ ತೆಱಂ ॥ ೩೨ ॥

ವೃ॥ ಅಮೃತಾಹಾರಮಮೇಧ್ಯಮಾಗಳೆ ಸುಗಂಧಾಲೇಪನಂ-
ಮೆಯಿವಲಂ ।
ಸುಮನೋದಾಮಮಮೂಲ್ಯಮುತ್ತಮಮೆನಿಪ್ಪಾ ವಸ್ತ್ರಮಸ್ಪೃಶ್ಯಮ ।
ಕ್ಕುಮದೀ ದೇಹದೊಳೊಂದಿದಾಗಳೆನೆ-
ಮತ್ತೀ ದೇಹಮಂ ಸೌಖ್ಯಮ- ।
ಕ್ಕುಮಿದೆಂದಾಗಳುಮೇಕೆಯೊ ತೊಡರ್ದಪರ್ದ್ದ-
ರ್ಮ್ಮೋ³ಹದಿಂ ಮಾನಸರ್ ॥ ೩೩ ॥

ನರವಿನ ಪುಳಿತ್ತಮೇಧ್ಯದತವರ್ಮ್ಮನೆ ಕೀವಿನ-
ಕೊಂಡಮೆಲ್ವಿನಾ- ।
ಗರವಳಿದೋಲ ಪೆರ್ವ್ವಡುಕೆಜಂತುಗಳಾಗಳುಮಿಪ್ಪತಾಣ ನೆ-।
ತ್ತರ ನೆಲೆ ವೆರ್ಚ್ಚಿನಿಂದ ಮಡುವೀ ಕಡುಗಪ್ಪಮೆ-
ನಿಪ್ಪದುಃಕಳೀ- ।
ವರಮಿದನೊಳ್ಳಿತೆಂಬರಱಿವಿಲ್ಲದವಪ್ಪೆಣನೆಂಬರಾರ್ಹತರ್ ॥ ೩೪ ॥

---

೧. ಇ—೧ದ್ವೈತ್ಯ೧; ೨. ಇ—೨ಣಕ್ಕನಾ೨; ೩. ಇ—ಸು;

ಕಂ॥ ಕೊಳೆಯೊಡಲನೆ ಪಾಲಿಸುತಂ ।
ವಿಳಸದ್ಧರ್ಮ್ಮಮನೆ ಬಿಸುಟು ಭೋಗಿಸುವಮುದಾ- ।
ವಿಳನಂ ಭೋಗಿಸು ವಸ್ತುಗ- ।
ಳೊಳಗಣ ಪುಳುವೆಂಗೆ ಭೋಗಿಯೆನವೇಡಜೀವಂ ॥ ೨೫ ॥

ವೃ॥ ಕರಮಿಂಬಾಗಿರೆ ತಿದ್ದಿರ್ದ ಬೈತಲೆಯನಕ್ಷಿದ್ವಂದ್ವಮಂ-
ಮುಚ್ಚುವಂ- ।
ತಿರೆ ನೇಣಂ ತಲೆ ಸುತ್ತಿಕೊಂಡು ಪಿರಿದುಂ-
ಪೂಮಾಲೆಯಿಂ ಸೂಡಿ ನಿ- ।
ಬ್ಬರಮಪ್ಪಂತಿರಲಿ[೧]ಟ್ಟು ಗಂಜಿವಡೆಯಂ-
ಸೊಪ್ಪಾಗದಂತುಟ್ಟು ಬ- ।
ಬ್ಬರಮಂ ಪೂಸಿ ತೊಳಲ್ವರಿಂತು ನೆಗಳಲ್-
ಜೈನೋತ್ತಮಂ ಬಲ್ಲನೇ ॥ ೨೬ ॥

ಅವರಿವರನ್ನರಿನ್ನರುವರೆವರೆನುತ್ತಮೆ ರೂಪುಗಾಣುತಂ ।
ಕವಿಪದಮೀವ ಜನ್ನಿವರಮಂ ಬಲಮುಯ್ವನೊಳಿಕ್ಕಿ-
ನೋಳ್ಪ ಕೆ- ।
ಟ್ಟವರೊಡಗೂಡುತಿರ್ಪ್ಪ ಪೆಱನನ್ನನುಮಾನಿರೆ-
ಬಲ್ಲನಾವನೀ ।
ಭುವನದೊಳೆಂದು ಕೊ[೨]ಳನವೊಲೇಂ-
ಪಳಿಕೆಯ್ವನೆ ಕೆಟ್ಟ[೩] ಜೈನನಂ ॥ ೨೭ ॥

ಕಂ॥ ಶೃಂಗಾರವೃತ್ತಮಂ ಪು- ।
ಣ್ಯಾಂಗನೆಯರ ಕೆಲದೊಳೋದುವಾಗ್ರಹದಿಂ ಪಾ- ।
ಪಂಗೊಳ್ವರಲ್ಲದೇಂ ಪಾ- ।
ಠಂಗೊಳ್ವರೆ ಪುಣ್ಯಹೀನರ ಜಿತಸ್ತುತಿಯಂ ॥ ೨೮ ॥

ವೃ॥ ನೆಲನಂ ನೋಡಿ ತುರುಂಬನೋಸರಿಸು-
ತುಂತೆಂತೆನ್ನನುಂ ಪಾಡುತುಂ ।
ಪಳಿಯುತ್ತುಂ ಸುಚರಿತ್ರರೊಂದೆಸಕಮಂ-
ಪುಣ್ಯಾಂಗನಾನೀಕದೊ- ।

---

೧. ಇ—ಲು; ೨. ಇ—ಕಾ; ೩. ಇ—ಟ್ಟು;

ಕ್ಕೆಲಗೊಂಡಾಡುತ ವೇಣಗೋಣತನದಿಂ ಮಾತಾಡುತುಂ ರಾಗದಿಂ।
ಸುಳಿವುತ್ತಿಪ್ಪವರಂತಿರಾರ್ಹತರದೇನೇಗೆಯ್ದುಡಂ ಬಲ್ಲರೆ ॥ ೩೯ ॥

ಕಂ॥ ಎಲೆಗಳ ಬಾಯೆಂದೆನ್ನದೆ।
ಬೆಲೆವೆಣ್ಗಳೊಳೊಲ್ದು ನಲಿವುದೆಲ್ಲಂದದೊಳಂ॥
ತಲೆಗೆ ನರೆಬಂದ ಬಳಿಯಂ।
ಸಲೆ ನೋಳ್ಪುದು ತಪಮನೆಂದು ನುಡಿವರ್ಮ್ಮಿಂಡರ್ ॥ ೪೦ ॥

ಲಲಿತಾಂಗಿಯರೊಳ್ ರಾಗದೆ।
ನಲಿದಾಡುವ ವಯಸದಂದು ಮಾಡದೆ ತಪಮಂ॥
ಸಲೆ ಮಾಳ್ಕೆ ದೈವದಿಂದಂ।
ತಲೆ ಬೋಳಾಯ್ತೆನಿಪ ಮುಪ್ಪಿನೊಳ್ನರನೆಂಬರ್ ॥ ೪೧ ॥

ಪೋಪೋಯೆನಲೊಡಮಾಗಳ್।
ಪೋಪುದರಿಂ ಕರೆಯಲೊಡನೆ ಬಪ್ಪುದಱಿಂದಂ॥
ರೂಪೋಪಜೀವಿಗೆಱಗಿ।
ಪ್ಪಾ ಪುರುಷಂ ಗ್ರಾಮಸಿಂಹಮಂ ನೆನೆಯಿಸುಗುಂ ॥ ೪೨ ॥

ಮೆಚ್ಚಿದ ತೆಱದಿಂದಿಂದ್ರಿಯ-।
ದಿಚ್ಛೆಗಳಂ [೧]ಸಲಿಸಿ[೧] ಸಾವಪದನೊಳ್ತನುವಂ॥
ಮೆಚ್ಚಿಸುವೆಂ ತಪಕೆಂಬಂ।
ಕಿಚ್ಚಿದ್ದಡೆ ಬಾವಿದೋಡುವವನಂ ಪೋಲ್ಕುಂ ॥ ೪೩ ॥

ಚೆನ್ನೆವುದೋ ಸಚ್ಚರಿತಂ।
ಚೆನ್ನಲ್ಲದೆ ದೇಹಿಗೆಂದು ನೆಗಳ್ವಜ್ಜೈರ್ನ-॥
ಚ್ಚೈರ್ನ್ನಿಂಗೆ ಮಱುಗಿಮಾಣದೆ।
ಚೆನ್ನನೆ ಪಾಟಿಸುವರಾಗಳುಂ ವಿಕಳಾತ್ಮರ್ ॥ ೪೪ ॥

ಜಿನಗಂಧೋದಕದಿಂದಂ।
ಜಿನರಂ ಪೂಜಿಸಿದ ಗಂಧಮಾಲ್ಯಾದಿಗಳಿಂ॥
ತನುವನಲಂಕರಿಸಿಪ್ಪಾ-।
ತನೆ ಚೆಲ್ವಂ[೨]ಸತಿ[೨]ಯನೊ[೩]ಲಿಪವಂ ಸಲೆಸಲ್ವಂ[೩] ॥ ೪೫ ॥

---

೧. ಇ—೧ಸೂಸಿ೧; ೨. ಇ—೨ಲ್ವಂಮುಕ್ತಿಸ೨; ೩. ಇ—೩ಲಿಸಲೆಸಲ್ವಂ೩;

ಮಣಿಕನಕಚಯ ಮಹಾಭೂ- ।
ಷಣಮೆ ಮನುಜಂಗೆ ವಿಮಳರತ್ನತ್ರಯಭೂ- ॥
ಷಣನಾವನಂ[೧]ತವಂ ಭೂ- ।
ಷಣನಖಿಳ ಧರಾತಳಕ್ಕೆ ಭಾವಿಸುವಾಗಳ್ ॥ ೪೬ ॥

ಮನುಜಂಗಲ್ಪದಿನಂ ಜೀ- ।
[೨]ನವ[೨]ಜಿತೊ[೩]ಳ್ತಾಂ ಬ[೩]ಳಿಕೆ ಕೆಲವು ದಿವಸಂ ಪೋದಂ- ॥
ದೆನಿತಂ ನೆರಪಿದಪಂ ಪು- ।
ಣ್ಯನಿಚಯಮಂ ಮಿಕ್ಕ ದಿನದೊಳೆಂಬಂ ಜೈನಂ ॥ ೪೭ ॥

ನೆತ್ತಂ ಚದುರಂಗಂ ಬಾ ।
ಗುೞ್ಗತ್ತಂ ಕಡದೊಂಟಿಗೊಟ್ಟೆ ಜೂದೆಂಬಿವನಾ- ॥
ಡುತ್ತಮಿರಲಾಗದಾಗಮ- ।
ದತ್ತಲ್ಯನವಾಗ ಪೊತ್ತುಗಳವನೆ ಚದುರಂ ॥ ೪೮ ॥

ವೃ॥ ಬವರದ ಬಿತ್ತು ವಂಚನೆಯ ಪುತ್ತೞಿವಿಂಗತಿ-
ಸಾಸಹೇತು ದು- ।
ರ್ವ್ಯವಸಯಕಾರಣಂ ಪರಿಭವಕ್ಕೆಡೆವಿತ್ತದ
ಕೇಡು ರೌದ್ರಸಂ- ।
ಭವಮಸುಖಾಸ್ಪದಂ ಗುಣಗಣಪ್ರವಿನಾಶಿಯೆನಿಪ್ಪ ಜೂದನಾ- ।
ನಾಡುವ ನರನೆಯ್ದನೇ ಸಕಳ ಹಾನಿಯನುತ್ತಮ-
ಸೌಖ್ಯಹಾನಿಯುಂ ॥ ೪೯ ॥

ಪೆಡತಲೆ ಮಿಗೆ ನೋಗುಂ ಕ- ।
ಣ್ಕಿಡುಗುಂ ಮೆಯಿ ಬೇನೆಗೆಯ್ದು ಮಾಯುವ್ಯೋಳ್ಪುಂ ॥
ಕಿಡುಗುಂ ಮೂಲವ್ಯಾಧಿಯು ।
ಮಡಸುಗುಮಿಂತಿನಿತೆ ಜೂದಿನಿಂದಪ್ಪಫಲಂ ॥ ೫೦ ॥

ವೃ॥ ಉಡುಗಳ ಸೊಕ್ಕಿದಂದದೊಳೆ ಗೆಲ್ವೆಡೆಯೊಳ್ ಸಲೆ-
ಬಾಯ್ಗೆ ಬಂದುದಂ ।
ನುಡಿದೊಡಳಲ್ದು ಸೋಲ್ತು ಪದದೊಳ್ ದೆಸೆಗಾಣದೆ-
ಮಾನ್ಯರಪ್ಪರಂ ।

---

೧. ಇ—ನಾಂ; ೨. ಇ—೨ವನವ೨; ೩. ಇ—೩ಳುಬ೩;

ಜಡಿವರನರ್ತ್ಥಂ ಬಗೆಯುರಂತದಱಿಂದಮೆ-
ಜೂದನಾಡಲುಂ |
ನುಡಿಯುಲುವಾಗ ಸದ್ಗುಣಿ ವಿಚಾರಮನೆಯ್ದುವ-
ನಪ್ಪುದೂಸಱಿಂ || ೫೧ ||

ಕಂ| ಬಿಡದಾಡುವನಿತು ಪೊತ್ತುಂ |
ತೊಡರ್ದು ವಿಭಾವದೊಳೆ ಬಸನಿ ತನ್ನುಮನಱಿಯಂ ||
ಬಿಡುವುದದಱಿಂದೆ ಬಸನಮು |
ನಡಿಗಡಿಗಾತ್ಮಸ್ವಭಾವಮಂ ನೆನೆಗಱಿವಂ || ೫೨ ||

ಬಸನಂಗಳಲ್ಲಿ ಚಿತ್ತಂ |
ಬಸದಪ್ಪವೊಲಮಳಮಪ್ಪ ಜೈನಾಗಮದೊಳ್ ||
ಬಸದಾಗೆಮರ್ತ್ತ್ಯನೇಂ ಸಾ- |
ಧಿಸನೇ ನಿರ್ವ್ವಾಣಪದವಿಯಂ ಕ್ರಮದಿಂದಂ || ೫೩ ||

ಅಱಿಯುವಮಾರ್ಗ್ಗಕ್ರಮ ನಿ- |
ಶ್ಚಯ ನಿಪುಣರುಮನಿಶಮುತ್ತಮೋತ್ತಮ ಸುಖಮಂ ||
ಬಯುಸುವವಂ ಭಾವಿಸುವುದು |
ದಯಾನ್ವಿತಂ ಶ್ರೀಜಿನೇಂದ್ರವಚನಾಮೃತಮಂ || ೫೪ ||

ಉತ್ತಮಸುಖಮಂ ಬಯುಸುವ- |
ರೆತ್ತಾನುಂ ಪೊತ್ತುಪೋಗದಿರ್ದ್ದಾಗ ಮುನೀಂ ||
ದ್ರೋತ್ತಮರ ಪಕ್ಕದೊಳು ಕೇ- |
ಳುತ್ತಿಪ್ಪುದು ಮೋಕ್ಷಮಾರ್ಗ್ಗಮಂ ಸನ್ಮತಿಯಿಂ || ೫೫ ||

ಪಿರಿದಪ್ಪ ಭಕ್ತಿಯಿಂ ಜಿನ- |
ಪುರಾಣಮಂ ಪೇಳ್ವುದಱಿಯದಿರ್ದ್ದಡಮೇನಾ- ||
ದರದಿಂ ಕಬ್ಬಿಗನಪ್ಪಂ |
ಪರಮನನೋಲಗಿಪುದೊಂದು ಮುಕ್ತಕದಿಂದಂ || ೫೬ ||

ಕವಿತೆ ಕಡು ಲೇಸು ಕಬ್ಬಂ |
ನವರಸಭರಿತಂ ನಲೆಂದು ಮಿಥ್ಯಾಕಥೆಯಂ ||

೧. ಇ—ಲ;

ಅವಚಱದೆ ಕೇಳ್ವನಾದು- ।
ರ್ವಿವೇಕಿ ಜೈನಮನೆ ಕೇಳ್ವನೆಂದುಂ ಜೈನಂ ॥ ೫೭ ॥

ಅಂಗನೆಯರ ಕೆಯ್ತುಂಗಳ- ।
ನಂಗೆನೆಯರ ರೂಪನನ್ಯಚರಿತಗಳುದ್ಯಾ- ॥
ನಂಗಳನೊಪ್ಪುವ ಪೊಸವೆಳು- ।
ದಿಂಗಳನಾದರದೆ ಪೇಳನೆಂತುಂ ಜೈನಂ ॥ ೫೮ ॥

ಜಿನನ ಚರಿತಂಗಳಂತ- ।
ಜ್ಜಿನಮಾರ್ಗ್ಗದೆ ನಡೆದು ಭವ್ಯರೆಯ್ದಿದ [1]ಕಥೆ[1]ಯಂ ॥
ಜಿನಧರ್ಮ್ಮಕಥೆಗಳಂ ದೇ- ।
ವನಿಕಾಯಸ್ತುತಿಯ ಪೇಳ್ವನುತ್ತಮ[2]ಜೈನಂ ॥ ೫೯ ॥

ಕರಮನುರಾಗದೊಳೆ ಮನೋ- ।
ಹರಮಪ್ಪೆಡೆ[3]ಯಲ್ಲಿ ನೋಡಿ ಪೊಗಳನುಳ್ತಂ[3]ಕಳೆಯು- ॥
ತ್ತಿರದಲ್ಲಿ ಪೊಳ್ತುಗಳವಡೆ ।
ಪರವೋತ್ಸವದಿಂದೆ ಮಾಳ್ಕೆ ಜಿನಪೂಜೆಗಳಂ ॥ ೬೦ ॥

ಮಂಗಳನಿಳಯನನರ್ಚ್ಚಿಸಿ ।
ಸಂಗೀತಮನಲ್ಲಿ ಮಾಡಿ ನೋಳ್ಪುದು ಮುದದಿಂ- ॥
ದಂಗನೆಯಪ್ಪಾಡೆಗುಣೋ- ।
ತ್ತುಂಗನನೋಲಗಿಸೆರಾಗಿರಾಗದಮೆಯ್ಯೊಳ್ ॥ ೬೧ ॥

ಜಿನರನೆ ಬಿಡದೋಲಗಿಪಂ ।
ಜಿನಚರಿತಮನರ್ತ್ಥಿಯಿಂದೆ ಕೇಳುತ್ತಿಪ್ಪಂ ॥
ಜಿನಸಮಯಿಗ[4]ಳಂ ಪೊರೆವವ[4]- ।
ನನಂತಸುಖಭಾಗಿಯುಳಿದುದೇನುಮನೊಲ್ಲಂ ॥ ೬೨ ॥

ಬಸನಂಗಳೊಳಗೆ ಪರಮ ।
ವ್ಯಸನಂ ಪರಮಾತ್ಮಚಿಂತೆಯುದನೊಲ್ಲದೆ ದು- ॥
ರ್ವ್ಯಸನಕ್ಕೆ ಪುಣ್ಯಪುರುಷರ್ ।
ಬಸವಾಗಿ ಮನುಷ್ಯಭವಮನುಳಿವುದು ಚದುರೆ ॥ ೬೩ ॥

---

೧. ಇ—೧ಗತಿ೧; ೨. ಇ—೨ತಮನಲ್ಲದಾಡಂ೨; ೩. ಇ—೩ಗೆಯ್ದಿ ಬರಿದೆಪೊಳ್ತಂ೩; ೪. ಇ—೪ಳೊಡನಾಡುವ೪;

ಪರಮಾಗಮಭಾವನೆಯುಂ ।
ಪರಮೇಶ್ವರ ಪೂಜೆಯಿಂದೆ ಪರಮ ಧ್ಯಾನಂ ॥
ನರಗ್ಗೆ ಪೆಱಿರುಂ[1]ಟೆ ಬಸನಮ- ।
ನೆರ[2]ಡೆಣಿಸದೆ ಬಿಟ್ಟು[2] ಪಡೆವುದುತ್ತಮಸುಖಮಂ ॥ ೬೪ ॥

ಒಡಲೆಂಬುದೊಂದು ಮೊದಲಂ ।
ಪಡೆದಾ ಮೊದಲಿಂದೆ ಲಾಭಮಂ ಬಯಸುವವಂ ॥
ಪಡೆವುದು ರತ್ನತ್ರಯಮಂ ।
ಪಡೆದಾಗಳನಂತಸೌಖ್ಯಭಾಜನನಕ್ಕುಂ ॥ ೬೫ ॥

ಬಡವನುಮೆಂಬೀ ಮಾತಂ ।
ನುಡಿಯಲು ಸದ್ದೃಷ್ಟಿಗಾಗದೇಕೆನೆ ಜಗದೊ- ॥
ಳ್ಪಡೆಯಲ್ಬಾರದ ನಿಧಿಯಂ ।
ಪಡೆದುದಱಿನನರ್ಘ್ಯನೂತ್ನರತ್ನತ್ರಯಮಂ ॥ ೬೬ ॥

ಬಡವನೆ ರತ್ನತ್ರಯಮಂ ।
ಪಡೆದಾತಂ ಪುಣ್ಯಮೂರ್ತಿ ಸಿರಿಯೊಡೆಯಂ ನೋ- ॥
ಳ್ಪಡೆ ತಾಂ ರತ್ನತ್ರಯಮಂ ।
ಪಡಯದವಂ ಭಾಗ್ಯಹೀನನವನೆ ದರಿದ್ರಂ ॥ ೬೭ ॥

ವೃ॥ ಅಮಿತಪ್ರೋಕ್ತನಜನ್ಮದುರ್ಲ್ಲಭಮನಾಂ-
ತ್ರೈಲೋಕ್ಯದೊಳ್ ನೋಳ್ಪಡು- ।
ತ್ತಮಮಂ ನಿರ್ಮ್ಮಳದೃಷ್ಟಿಲಕ್ಷ್ಮಿಯುಮ-
ಮನುದ್ಯದ್ಬೋಧಮಂ ಸಚ್ಚರಿ- ।
ತ್ರಮುಮಂ ಪುಣ್ಯದೆ ಪೆತ್ತನೆನ್ನ ತೆಱದಿಂದಾನ್ತೋರ್ಂತ-
ರೆಂದೆಯ್ದಿ ಪೇ- ।
ಳ್ದು ಮನೋರಾಗದೆ ರಾಗಿಪಂ ಭುವನದೊಳ್ಧನ್ಯಂ-
ಪೆಱರ್ದ್ಧನ್ಯರೇ ॥ ೬೮ ॥

೧. ಇ—ತುಂ; ೨. ಇ—೨ಡರೊಳಂನಿಲಿಸಿ೨;

ಮಿಗೆ ದುಃಖಂಗಳನುಂಡು ಬಂದು ಬಳಿಕೀ-
ಮಾನುಷ್ಯದೊಳ್ಸಪ್ತಧಾ- ।
ತುಗಳಿಂದಿಂದ್ರಿಯವರ್ಗ್ಗದಿಂ ಪುದಿದ ಕಲ್ಕಂ-
ಗೂಡುವಂತೆಯ್ದೆ ಕೂ- ।
ಡಿಗುಣಕ್ಕಾಗರಮಾಗಿ ನಿಂದ ತನುವಂ-
ಪೆತ್ತರ್ತ್ಥಿಯಿಂ ಜೈನದೊ- ।
ಳ್ನಿಗಳಂ ತಾನೆನಿಪಂ ಭವಾಬ್ಧಿತಟಮಂ
ಸಾರಲ್ಕದೇನಾರ್ಪ್ಪನೇ ॥ ೬೯ ॥

ಪಡೆಯಲ್ಬಾರದುದಂಮನುಷ್ಯಭವಮಂ
ಮುಮ್ಮಾಡಿದೊಂದೊಳ್ಪಿನಿಂ ।
ಪಡೆದಂ ಪ್ರೀತಿಯಿನಾರ್ಹತಕ್ಕೆಱಿಗುಗುಂ-
ಪುಣ್ಯಾತ್ಮನತ್ತೊಂದಱೊ ।
ಳೊತ್ತಡಗುರ್ಗ್ಗಂ ಮೂಢನದಂತೆ ಭಾಗ್ಯವಶದಿಂ
ರತ್ನಾಕರಸ್ಥಾನದೊ ।
ಳ್ಪಡೆಗುಂ ರತ್ನಮನೋರ್ವ್ವನಲ್ಲಿ ನಡೆಗುಂ-
ಭಾಗ್ಯೇತರಂ ಸೇದೆಯಿಂ । ೭೦ ॥

ಕಂ॥ ಇಟ್ಟೆಡೆಯಾಗಲೊಡಂ ಧೃತಿ- ।
ಗೆಟ್ಟು ಚರಿತ್ರಮನೆ ತೊಱೆವರುಳಿದರ್ಜ್ಜೀವಂ ॥
ಬಿಟ್ಟುಪುದೆಂಬೆಡೆಗಳೊಳಂ ।
ಬಿಟ್ಟಪೆವೆಂದಪರೆ ಜೈನರೆಂತುಂ ಬ್ರತಮಂ ॥ ೭೧ ॥

ವ್ಯಗ್ರಮನರನ್ಯರೆಂತುಮ- ।
ವಗ್ರಹಮೆಂದುದನೆ ಮತ್ತಮನುಭವಿಸುವರಾ- ॥
ರಾಗ್ರಹಿಸಿದೊಡಂ ಮರೆದುಮ- ।
ವಗ್ರಹಮೆಂದುದನೆ ಜೈನರನುಭವಿಸುವರೆ ॥ ೭೨ ॥

ಎಡಱಡಸಿದಲ್ಲಿ ಪುಸಿಯುಂ ।
ನುಡಿಯಲ್ಪೊಲ್ಲದುದನುಣಲುಮಕ್ಕುಮೆಯನುತಂ ॥
ನುಡಿವ ದುರಾತ್ಮರ ತೆರದಿಂ ।
ನುಡಿವರೆ ಮಾಡುವರೆ ಜೈನರೊಳ್ಪಲ್ಲದುದಂ ॥ ೭೩ ॥

ನೋಡದು ಕಣ್ಪರವಧುವಂ |
ಕೂಡದು ದುಶ್ಚರಿತದಲ್ಲಿ ಚಿತ್ತಂ ಮನಮು- ||
ಲ್ಲಾಡದು ಪರೀಷಹಕ್ಕೆನೆ |
ನಾಡಾಡಿಯ ಮನುಜರಳವೆ ನಿರುಪಮ ಜೈನರ್ || ೭೪ ||

ಪುಸಿ ದೈವದ ಪುಸಿಯುಱಿತದ |
ಪುಸಿ ಧರ್ಮ್ಮದ ಪುಸಿವ ಬಲ್ಮೆಯೋದುಗಳಂ ತಾಂ ||
ಪಸರಿಸುವ ಠಕ್ಕ ಸಮಯುದ |
ದೆಸೆವೋಗರದೆಂತುಮಾವತೆಱದಿಂ ಜೈನರ್ || ೭೫ ||

ಮನದೊಳ್ಕಪಟಂ ವಚನದೊ- |
ಳನೃತಂ ಸಂಚಿತಮೆನಿಪ್ಪ ಚಾರಿತ್ರದೊಳೊಂ- ||
ದಿನಿಸು ಕಳಂಕಮುಮಿಲ್ಲೆಂ- |
ಬಿನೆಗಂ ನೆಗಳಲ್ಕೆ ಜೈನರೆಲ್ಲಂ ಬಲ್ಲರ್ || ೭೬ ||

ಅಱಿವುಂ ನೆಱವುಂ ಮನದೊ- |
ಳ್ತಱಿಸಲವುಂ ಧರ್ಮ್ಮದಲ್ಲಿ ಪಾಪದ ದೆಸೆಯೊಳ್ ||
ಪೆಱಪಿಂಗುವುದಿದು ಸಹಜಂ |
ಜಱುಚಲ್ಲದು ಜೈನಸಮಯಿಗೆಂದುಂ ನಿರುತಂ || ೭೭ ||

ದೊರೆಯೆಂದವಗುಣಿಗಳ ನಾ- |
ದರಿಸಂ ತಕ್ಕೆಡೆಗೆ ತಕ್ಕುದಂ ಕುಡುವಂ ಲೋ- ||
ಗರೊಳಹಿತನಾಗಿ ನೆಗಳಂ |
ಧರಿತ್ರಿಯೊಳ್ ಜೈನಧರ್ಮ್ಮಮಂ ನೆಮ್ಮಿದವಂ || ೭೮ ||

ಪಡದೊಡಮೆಯೆಲ್ಲಮಂ ಬ- |
ಯ್ತಿಡನೆಂದುಂ ಜೈನಪೂಜೆಗಂ ದಾನಕ್ಕಂ ||
ಕುಡುವರೆನೆ ಭವ್ಯಸಮಿತಿಯ |
ಪಡೆದರ್ತ್ಥಂ ಸಫಲಮನ್ಯರರ್ತ್ಥಂ ವಿಫಲಂ || ೭೯ ||

ಬೇವು ಕರಂ ಪಣ್ತಡೆ ಕಾ- |
ಕಾವಳಿಗುಪಯೋಗ್ಯವೆಂಬನುಡಿವೋಲ್ಪಿರಿದುಂ ||
ಭಾವಿಸಲಜ್ಞಾನಿಯೆ ಪಡೆ- |
ದಾವಿತ್ತಮಪಾತ್ರದಾನದಲ್ಲಿಗೆ ಯೋಗ್ಯಂ || ೮೦ ||

ಅನುವಶನೀತಂ ಚಾರಿ- ।
ತ್ರನಿಯುಕ್ತಂ ಪಲರೊಳೆನಿಸಿ ನೆಗಳ್ದಿರ್ದ್ದವನುಂ ॥
ಜಿನಸಮಯಿಯಲ್ಲಿ ಕಡೆಪ- ।
ಟ್ಟವನಂದದಿ ನಿಯಮದಿಂದಲೆಂತುಂ ನಡೆಯಂ ॥ ೮೧ ॥

ದೇವನಿವನಲ್ತೆ ತಪದಿಂ ।
ಭಾವಿಸುವಂದಿನಿಸುವನ್ಯ ಸಮಯದ ಮುನಿಯುಂ ॥
ಶ್ರಾವಕನ ಸಚ್ಚರಿತ್ರಮ- ।
ನಾವಂದದೊಳಂ ಸಮಂತು ಪೋಲಲ್ನೆಗಳಂ ॥ ೮೨ ॥

ದೂರದ ಬೆಟ್ಟದ ತೆಱದಿಂ ।
ನೇರಿತ್ತಾಗಿಕ್ಕುಮಲ್ಲದೊಳಗಂ ನೋಡಲ್ ॥
ಸಾರತರಮಲ್ತು ಪೊಕ್ಕುವಿ- ।
ಚಾರಿಸುವಡೆ ಜೈನನಲ್ಲದವನ ಚರಿತ್ರಂ ॥ ೮೩ ॥

ದೀನಮನರಾರ್ತ್ತ ರೌದ್ರ- ।
ಧ್ಯಾನಿಗಳತ್ಯಂತ ಪಾಪಕೋಪಾನ್ವಿತರ- ॥
ಜ್ಞಾನಪರಾಯಣರಮಳ ।
ಧ್ಯಾನಾನ್ವಿತರಪ್ಪ ಜೈನರಲ್ಲದ ಮನುಜರ್ ॥ ೮೪ ॥

ಅಮರ್ದಿರಲೆನಿತಂ ತಮ್ಮಂ ।
ಸಮಱಿದೊಡಂ ಸದ್ಗುಣಂಗಳನ್ಯರ ಮೆಯ್ಯೊ- ॥
ಳ್ಸಮಱಿದೊಡಂ ಸದ್ಗುಣಗಣ- ।
ಮಮರ್ದಿಕ್ಕುಂ ಭವ್ಯಸಮಿತಿಗೆಲ್ಲಂದದೊಳಂ ॥ ೮೫ ॥

ಮತ್ತಿನ ಪರಸಮಯಿಗಳೊ- ।
ಳ್ಪತ್ತಿಸಿದೊಡವೊಳ್ಪು ಜೈನಸಮಯಿಗೆ ನಿರುತಂ ॥
ಪತ್ತುವ ತೆಱದಿಂ ಪತ್ತದ ।
ಪಿತ್ತಳೆ ಸಂಸ್ಕಾರವಶದೆ ಪೊನ್ನಾಗದವೋಲ್ ॥ ೮೬ ॥

ಕಲ್ಲಾಗಿ ಪಲವು ಕಣಿಗಳೊ- ।
ಳಲ್ಲಿಯೆ ಮೇಲಪ್ಪುವಪ್ಪತೆಱದಿಂ ಗುಣದಿಂ- ॥

ದೆಲ್ಲಾ[1]ತೆಱದಿ[1] ಮನುಷ್ಯರಿ- |
ಗೆಲ್ಲಂ ಮೇಲಾಗಿ ಜೈನರುತ್ತಮರಾದರ್ || ೮೭ ||

ದೀವಳಿಗೆಯ ಕಳ್ತಲೆಯೊಳ್ |
ದೀವಿಗೆಗಳು ಬೆಳಪ ತೆಱದೆ ಕಲಿಕಾಲದೆ ಮಿ- ||
ಥ್ಯಾವೃತತಮಿಸ್ರರಪ್ಪ ಜ- |
ನಾವಳಿಗಳ ನಡುವೆ ಬೆಳಗುತಿರ್ಪ್ಪರ್ಜ್ಜೈನರ್ || ೮೮ ||

ಶ್ರಾವಕನಲ್ಲದೊಡಂ ಪು- |
ಣ್ಯಾವಹಮೆಂದೊಂದು ಪೂ[2]ರ್ವ್ವದೊಳ್ಮಿಂದುಣ್ಬಂ ||
ಶ್ರಾವಕಭೋಜನಮೆಂದೊಡಿ- |
ದೇವಣ್ಣಿಪುದುತ್ತಮಿಕ್ಕೆಯಂ ಶ್ರಾವಕನೊಳ್ || ೮೯ ||

ಬರಿಸದ ಪರ್ವ್ವದೊಳಂ ಪರಿ- |
ಹರಿಸಿದೊಡಂ ಪುಣ್ಯಮೆಂಬರೆಂದೊಡೆ ಸಲೆ ಕೊ- ||
ಕ್ಕರಿಸಿ ಮಧುಮಾಂಸಮಂ ಪರಿ- |
ಹರಿಸಿದ ಪುಣ್ಯಾಧಿಕಂಗೆ ಸರಿಯೇ ಕುಲಜರ್ || ೯೦ ||

ಪಾರ್ವ್ವರ ಮನೆಗಳೊಳುಣ್ಬುದು |
ಪಾರ್ವ್ವಂ ಮಿಕ್ಕವರ ಮನೆಯ ನೀರಂ ಕುಡಿಯಲ್ ||
ಪಾರ್ವ್ವಂಗೆ ಸಲ್ಲದೆಂಬಾ |
ಪಾರ್ವ್ವಂ ವೇದದೊಳಗಱಿಯನಱಿದಡೆನುಡಿಯಂ || ೯೧ ||

ಖ್ಯಾತಿವಡೆದಿರ್ದ್ದ ನಾಲ್ಕುಂ |
ಜಾತಿಗಳೊಳ್ಮದುವೆಯಾಗಲಕ್ಕುಂ ಪಾರ್ವ್ವಂ- ||
ಗೀತೆಱದಿನೆಂಬರೇನಾ |
ಜಾತಿಗಳಿಕ್ಕಿದುದನುಣ್ಣೆವೆಂಬರಿದಱಕಂ || ೯೨ ||

ಅಮಳಿನ ಚರಿತನ್ನಾಲ್ಕುಂ |
ಸಮಯದ ಮುನಿಪತಿಗಳಾರ ಮನೆಗಳೊಳಟ್ಟ- ||
ನ್ನಮನುಣ್ಬರವರೆ ಲೋಕೋ- |
ತ್ತಮರವರೇ ಕುಲಿನರೆಲ್ಲಿಯುಮುಂಬುದು ಪಾರ್ವ್ವಂ || ೯೩ ||

---

೧. ಇ—೧ವುಳಿಯ೧; ೨. ಇ, ಈ—ಪ;

ಭೂದೇವನೆನಿಪ ವಿಪ್ರಂ- ।
ಬಾದೆನೊ ತಪಸ್ವಿಗೆಱಗುವಂ ತಪಸಿಗಡಾ ॥
ಭೂದೇವಂಗೆಱಗುವರೇ ।
ಮೇದಿನಿಯೊಳ್ಮುನಿಗಳದಱಿನೆಂತುಂ ಪಿರಿಯರ್ ॥ ೯೪ ॥

ಅಪವರ್ಗ್ಗಲಕ್ಷ್ಮಿ ಸ್ವರ್ಗ್ಗಂ ।
ತಪೋಧನಂಗಾಗಳಲ್ತೆ ಪಾರ್ವ್ವಂಗದಱಿಂ ॥
ತಪಸಿಯೆ ವಂದ್ಯಂ ಜಗದೊ- ।
ಳ್ತಪಸ್ವಿಯಿಂದತ್ತಮಲ್ತೆ ಪಿರಿಯರುವೊಳರೆ ॥ ೯೫ ॥

ಅಪವಿತ್ರಂ ಮೂಢಂ ತಾ- ।
ನೆಪವಿತ್ರಂ ವಿಪ್ರಗೃಹದೊಳಟ್ಟಡುಗೆಗಳಂ ॥
ಸುಪವಿತ್ರ ಜೈನರಿಕ್ಕಿದೊ- ।
ಡೆ ಪಾರ್ವ್ವರುಣರೊಲ್ಲರಾತ್ಮಗೃಹದಡುಗೆಗಳಂ ॥ ೯೬ ॥

ಗೋರಸದೊಳ್ಕೂಡಿದ್ದಾ- ।
ಹಾರಮನಾಗೋಸ್ತದಲ್ಲಿ ಗೋವಳನಿಕ್ಕ- ॥
ಲ್ಕಾರೋಗಿಸಲಕ್ಕುಂ ಗಡ ।
ಚಾರಿತ್ರಾನ್ವಿತರ ಮನೆಯೊಳುಣ್ಬರೆ ಪಾರ್ವ್ವರ್ ॥ ೯೭ ॥

ಜಳಮಂ ಕೊಳ್ವಸ್ಸರ್ಗಲೆ ನಿ- ।
ರ್ಮ್ಮಳ ವಸ್ತ್ರದೆ ಸೋಧಿಸಿದ್ದುದಂ ನಿಚ್ಚಮುಮಂ ॥
ಬಳಸುವರಿಹಪರಸೌಖ್ಯದ ।
ಫಲಮನಪೇಕ್ಷಿಸುವ ಪುಣ್ಯವಂತಜ್ಜೈನರ್ ॥ ೯೮ ॥

ನೀರಂ ಸೋಧಿಪುದಿಂಬಾ- ।
ಗಾರೈವುದು ಪುಳಿಬೆರಟಿಯೊಳಗಣ ಪುಳುವಂ ॥
ಸಾರೈಸುವಲ್ಲಿ ದಯೆಯಿಂ- ।
ದಾರೈವುದೆನಿಪ್ಪ ಮನೆಗಳಲ್ಲವೆ ತೀರ್ತ್ಥಂ ॥ ೯೯ ॥

ಬಾಡಂ ಸೋಧಿಸಿ ಬೋನಂ ।
ಮಾಡುವ ಋಷಿಯರನೆ ನಿಲಿಪ ಪೊತ್ತಾಯಿತ್ತೀಗ- ॥
ಳ್ನೋಡಿಂ ನಿಱಿಸಿಂ ಪೋಸಂ ।
ಮಾಡಿಯೆನಿತ್ತಿರ್ಪ್ಪ ಮನೆಗಳಲ್ಲವೆ ತೀರ್ತ್ಥಂ ॥ ೧೦೦ ॥

ಎನಿತಾನುಂ ತೆಱದಿಂದಿಂ- ।
ಬಿನೆ ಸೋಧಿಸಿ ಸೌಖ್ಯಮಾಗಿಯಡುವುದಱಿಂದಂ ॥
ಜಿನಸಮಯಿಯೆನಿಸಿದವರ್ಗಳ ।
ಮನೆಯೆಂತುಂ ಪೂತಮುಣ್ಬುದಲ್ಲಿ ಕುಲೀನರ್ ॥ ೧೦೧ ॥

ಸೋಧಿಸಿಯಟ್ಟಡುಗೆಗಳಂ ।
ಸೋಧಿಸಿ ಬಡ್ಡಿಸೆ ಮುನೀಂದ್ರರುಣ್ಬೆಡೆಗಳೊಳೊ- ॥
ಲ್ದಾದರದಿನುಣ್ಗೆ ಪಾರ್ವ್ವಂ- ।
ಬಾದೆನೊ ಮುನೀಂದ್ರರಿಂದೆ ಪಿರಿಯರೇ ಪಾರ್ವ್ವರ್ ॥ ೧೦೨ ॥

ವರವಿಪ್ರೋತ್ತಮರಿರ್ದ್ದಂ- ।
ತಿರೆ ಪಙ್ತಿಯೊಳುಣ್ಬ ಜೈನನೋರ್ವ್ವಂಗತ್ಯಾ- ॥
ದರದಿಂ ಯತ್ನದಿನಿಕ್ಕೆಂ- ।
ಬರೆಂದೊಡೀ ಜೈನರಿಂದೆ ಸುಚರಿತರೊಳರೇ ॥ ೧೦೩ ॥

ಜಡನೆಲ್ಲಿಯುಮೆನಿಸದನುಂ ।
ಪಡೆಗುಂ ಸನ್ಮತಿಯನತ್ತಲುತ್ತಮಸುಖಮಂ ॥
ಪಡೆಗುಮದರಿಂದೆ ಭವ್ಯಂ- ।
ಗೆಡೆಗೊಂಡನು ಪಡೆಗುವೆಸೆವಿಹಂಪರಸುಖಮಂ ॥ ೧೦೪ ॥

ದೊರೆಯಾಗರೆಮಗೆ ದೇವರ ।
ದೊರೆಯೆನಿಸಿದ ಕುಲದವರ್ಗ್ಗೆ ನೆಲೆಯಾದಧರಾ- ॥
ಮರ ಕುಲದೊಳ್ ಪುಟ್ಟಿದನುಂ ।
ಪುರುಷಾಧಮನೆನಿಕುಮಲ್ತೆ ಜಿನಮತಬಾಹ್ಯಂ ॥ ೧೦೫ ॥

ಚೆಚ್ಚರಿಗಂ ಪರಿವಾಯುಂ- ।
ತುಚ್ಚಳನತ್ಯುಗ್ರಕೋಪಿ ಮೂರ್ಕ್ಖಂ ಕೆಸಱೊ- ॥
ಳ್ಕಿಚ್ಚಿಡುವನೆನಿಪ ಖಳನುಂ ।
ಬಿಚ್ಚರಿಗನೆನಿಕ್ಕುಮೊಂದಿ ಜೈನರ ಕೆಲದೊಳ್ ॥ ೧೦೬ ॥

ಜೈನರ ಕೆಲದೊಳ್ಪೆಳೆದಾ ।
ಮಾನಸನರೆಯೆಱನಿಱಿವರೊಳ್ಕೂಡಿದೊಡಂ ॥
ತಾನಿದಿರಂ ಕೊಲಲಱಿಯಂ ।
ದಾನಂಗೊಳ್ವಂತಿರವರ ಕೊಟ್ಟುದೆ ಕೊಳ್ವರ್ ॥ ೧೦೭ ॥

ಖಳಸಂತತಿಯಿಂ ಪತ್ತಿದ ।
ಕಳಂಕಮಂ[೧] ಕಮನೆ ಚೆಚ್ಚರಂ ಭವ್ಯಜನಂ- ॥
ಗಳ ವಚನವೆಂಬ ನಿರ್ಮ್ಮಳ ।
ಜಳದಿಂ ಕರ್ಚ್ಚುವುದು ಸೌಖ್ಯಮಂ ಬಯಸುವವಂ ॥ ೧೦೮ ॥

ವೃ॥ ಎನ್ನಯ ನಂಟರೆನ್ನಯ ಸಹೋದರರೆನ್ನಯ-
ಪುತ್ರಪೌತ್ರರಿಂ- ।
ತೆನ್ನಯ ಧಾನ್ಯವೆನ್ನಯ ವಿಭೂಷಣವೆನ್ನ ನಿವಾಸವೆನ್ನ ಕೆಯಿ ।
ಎನ್ನಯ ಪೊಂಗಳೆಂದವನೆ ಕೂಡೆ ಪಲುಂಬುತು-
ಮಾರ್ತ್ತದಲ್ಲಿ ಚಿ- ।
ತ್ತಂನಿಲೆ ಜೀವಮಂ ಬಿಡುವರಾರ್ಹತರಲ್ಲದ-
ಮೂಢಜೀವಿಗಳ್ ॥ ೧೦೯ ॥

ಕಂ॥ ಎಲ್ಲೆಲ್ಲಿ ಪುಟ್ಟಿದೊಡಮಂ- ।
ತಲ್ಲಿಯೆ ತಾಂ ಪಿರಿದು ಮೋಹಮಕ್ಕುಂ ಜೀವಂ- ॥
ಗೆಲ್ಲೆಡೆಯೊಳಮದಱಿಂದಂ ।
ಬಲ್ಲಂದದೆ ಬಿಡುಗೆ ಮೋಹಮಂ ತತ್ವವಿದರ್ ॥ ೧೧೦ ॥

ಪರಲೋಕಮನೆಯ್ದಲ್ಕಸ[೩]- ।
ವ[೪]ರವೆಂಬುದನಱಿದು ಚೆಚ್ಚರಂ ಬಾಹ್ಯಾಭ್ಯಂ- ॥
ತರದ ಪರಿಗ್ರಹಮಂ ಪರಿ- ।
ಹರಿಸಲ್ ಜಿನಸಮಯವಲ್ಲದವರಾರ್ತ್ತಪರೆ ॥ ೧೧೧ ॥

ಆವೆಡೆಯೊಳ್ ಪುಟ್ಟುವೆನಾ- ।
ನಾವೆಡೆಯೊಳ್ ಜೀವಿಸುವೆನೊ ಶರಣೆನಗಾರೆಂ- ॥
ದೀ ವಿಧದಿಂದಜಿನಱಿಯದ ।
ಜೀವಂಗಳ್ಪಿರಿದುಮುಱುಗುಗುಂ ಸಾವೆಡೆಯೊಳ್ ॥ ೧೧೨ ॥

ಮಿಡಮಿಡ ಮಿಡುಕುವನಸುವಂ ।
ಬಿಡುವಾಗಳು ದುಶ್ಚರಿತ್ರರಾರ್ಹತರಸುವಂ ।

---

೧. ಇ, ಈ—ಪಂ; ೨. ಽ—೨ಲ್ಲಲ್ಲಿಯೆಪಿ೨; ೩. ಇ—ವ; ೪. ಇ—ಸ.

ಬಿಡುವಾಗಳ್ಕಲ್ಯಾಣಂ ।
ಕಡಂಗಿತೆನಗೆಂದು ಬಿಡುವನುತ್ಸವದಿಂದಂ ॥ ೧೧೩ ॥

ವೃ॥ ಶ್ರುತಿ ಪೇಳ್ದಂದದೆ ಸರ್ವ್ವಜೀವದಯೆಯೊಳ್ಕೂಡಿರ್ದ್ದ-
ಧರ್ಮ್ಮಕ್ಕೆ ಸ- ।
ನ್ನತಿಯಂ ತಂದು ಯಥೋಚಿತಾಚರಣದಿಂದಂ-
ವರ್ತ್ತಿಸುತ್ತಿರ್ಪ್ಪವಂ ।
ಮತಿವಂತಂ ತನಗಪ್ಪ ಮೃತ್ಯುವನದಂ ಸತ್ಪಾತ್ರಮಂ-
ದಾನಿಪಾ- ।
ರುತಮಿಪ್ಪಂತಿರೆ ಪಾರುತಿಪ್ಪನಭಯಂ-
ಸಾವಾಗಲಿರ್ದ್ದಲ್ಲಿಯುಂ ॥ ೧೧೪ ॥

ಮನೆಯುಂ ಪುತ್ರಕಳತ್ರಮಿತ್ರಧನಧಾನ್ಯವ್ರಾತಮಂ-
ಬಿಟ್ಟು ಪಂ- ।
ಚನಮಸ್ಕಾರಮನಾಲಿಸುತ್ತಮವನೋದುತ್ತಂ-
ಮನಂದಂದು ದೇ- ।
ವನೆ ತಾನಾಗಿ ಸಮಾಧಿಯೊಳ್ನಿಱಿದು ಬೇಗಂ-
ದೇಹಮಂ ಬಿಟ್ಟು ಜೈ- ।
ನನವೋಲ್ಸ್ವರ್ಗ್ಗಮನೆಯ್ದಲೇನಱಿವನೇ-
ಸದ್ಧರ್ಮ್ಮಮಾರ್ಗ್ಗೇತರಂ ॥ ೧೧೫ ॥

ಕಂ॥ ಸರ್ವ್ವಜ್ಞನಲ್ಲಿ ಮನಮಂ ।
ನಿರ್ಬ್ಬಂಧದೆ ನಿಲಿಸಿ ಜೀವಮಂ ಬಿಟ್ಟಾತಂ ॥
ಸರ್ವಾರ್ತ್ಥಸಿದ್ಧಿಗಧಿಪಂ ।
ಸರ್ವ್ವಜ್ಞನೆ ಸಿದ್ಧನೆನಿಸುಗುಂ ಕ್ರಮದಿಂದಂ ॥ ೧೧೬ ॥

ಇನ್ನರಿವರೆಂದು ಬಣ್ಣಿಸು- ।
ವನ್ನರೆ ಲೋಕೈಕಸಾರಸರ್ವ್ವಸ್ವರೆನಿ- ॥
ಪ್ಪನ್ನರೆ ಸಮಸ್ತಗುಣಸಂ- ।
ಪ್ಪನ್ನರೆ ಜಿನಭಕ್ತರೆಂದೆ ಬಣ್ಣಿಪುದು ಜಗಂ ॥ ೧೧೭ ॥

ವೃ॥ ಪರಮಾರ್ತ್ಥಂ ಸತ್ಯದೊಳ್ ಶೌಚದೊಳು-
ಪರಹಿತೌದಾರ್ಯ್ಯದೊಳ್ ಪೆರ್ಮ್ಮೆಯೊಳ್ ಸ- ।
ಚ್ಚರಿತವ್ಯಾಪಾರದೊಳ್ ನಿರ್ಮ್ಮಳವೆನಿಸಿದ-
ವಿಜ್ಞಾನದೊಳ್ ಮೋಕ್ಷಲಕ್ಷ್ಮೀ- ।

ಶ್ವರದಿವ್ಯಶ್ರೀಪದಾರಾಧನದೊಳಧಿಕಶಾಂತತ್ವದೊಳ್-
ಪೆಂಪಿನೊಳ್ ಭ- ।
ವ್ಯರನೆಂತುಂ ಪೋಲಲೇನಾರ್ತ್ತಪರೆ-
ವಿಮಳಸದ್ಬೋಧಸದ್ವೃತ್ತಹೀನರ್ ॥ ೧೧೮ ॥

ಬಯಕೆ ವಿಶಿಷ್ಟಸಂಗಮದೊಳಾರ್ಹತ-
ದೊಳ್ಮತಿದುಶ್ಚರಿತ್ರದೊ- ।
ಳ್ಭಯಮನಿಶಂ ಸದಾಚರಿತದೊಳ್ ರತಿ-
ಧರ್ಮ್ಮದೊಳರ್ತ್ತಿ ಶಕ್ತಿ ತ- ।
ಮ್ಮಯ ಮನಮಂ ನಿವಾರಿ[1]ಪಡ[1]ಮನ್ಯರ-
ಸದ್ಗುಣದಲ್ಲಿ [2]ಹರ್ಷ[2]ಬು- ।
ದ್ಧಿಯೆ ನಿಜವಾಗಿ ವರ್ತ್ತಿಸುವ ಭವ್ಯರೆ ಭಾಪಿಸೆ ದೇವರಲ್ಲರೆ ॥ ೧೧೯ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣ ಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರಚಂಡಕಿರಣ ಸಕಳಾಗಮಪದಾರ್ತ್ಥ
ನಿಪುಣ ಮಹಾಕವಿ ಬ್ರಹ್ಮದೇವವಿರಚಿತ-
ಮಪ್ಪಸಮಯಪರೀಕ್ಷೆಯೊಳುಸಚ್ಚ-
ರಿತ್ರವರ್ಣ್ಣನಂ ಷಷ್ಠಾಧಿಕಾರಂ ॥

ಶ್ರೀ ಶ್ರೀ ಶ್ರೀ

---

೧. ಇ—[1]ಪೆಡೆ[1]; ೨. ಇ—[2]ಪುರುಷ[2];

॥ ಶ್ರೀ ॥

ಸಪ್ತಮಾಧಿಕಾರಮ್

ಶ್ರೀಗೆ ವಚಶ್ರೀಗೆ ಜಯ- ।
ಶ್ರೀಗೆ ಯಶಶ್ರೀಗೆ ತಾವೆ ನೆಲೆಯಾಗಿ ಜಗ- ॥
ಕ್ಕಾಗಳುಮಭಿಮತ ಸುಖಮಂ ।
ಬೇಗಂ ಕುಡುವಭವಚರಣಮೀಗೆಮಗೊಳ್ಪಂ ॥ ೧ ॥

ಅತಿನಿರ್ಮ್ಮಳ ಗುಣಸಂಗದಿ- ।
ನತಿಶಯ ಸದ್ವೃತ್ತರುಚಿರಮಣಿನಿಚಯದಿನೀ- ॥
ಕ್ಷಿತಿಯೊಳ್ ಭಾವಿಸುವೊಡಲಂ- ।
ಕೃತಿಯವೊಲೆಸದಿರ್ಪ್ಪರಲ್ತೆ ಜೈನಮುನೀಂದ್ರರ್ ॥ ೨ ॥

ವೃ॥ ಖರಕರ ತಪ್ತಮಪ್ಪ ತನುತಾಪಮನಾಱಿಸಲಬ್ಜವಿಷ್ಟರಂ ।
ಧರಿಯಿಸಿದಂ ಕಮಂಡಳುವಿನೊಳ್ ಜಳಮಂಜಳ-
ಧಿಸ್ಥನಾದನಾ- ।
ಹರಿಹರರಿಂದ್ರಸಿಂಧುವನೆಪೊತ್ತುವನೆತ್ತಿಯೊಳಾಂತನಂತು ನಿಂ- ।
ದುರಿವ ನಿದಾಘದೊಳ್ ಋಷಿಯರಂದದೆ-
ಕಲ್ನೆಲೆನಿಲ್ವನಾವವಂ ॥ ೩ ॥

ಕುಳಿತೆವರುದ್ಧಮೆಂದಱಿಯ ಮಾರ್ಗ್ಗಮಗೋಚರ-
ಮಾಗಿ ಕೊಳ್ವಪೆ- ।
ರ್ಮ್ಮಳೆಯ ಪೊನಲ್ಗೆ ಶೈಳಕುಳವಳ್ಕುಱೆ-
ಬೀಸುವ ಗಾಳಿಗೆತ್ತಲುಂ ।

---

೧. ಇ, ಈ—ಲಾ;

ಮೊಳಗುವ ಮೇಘ ಘುಗ್ಗರ್ಜ್ಜನೆಗೆ ಪೊಯ್ವ-
ಸಿಡಿಲ್ಗೆ ನಗೇಂದ್ರದಂತೆ ಸಂ- ।
ಚಳಿಸದ ಜೈನಯೋಗಿಯವೊಲೇಂ ನಿಲಲಾರ್ಪ್ಪರೆ-
ವೃಕ್ಷಮೂಲದೊಳ್ ॥ ೪ ॥

ಪರೆದಂಗೋಪಾಂಗದೊಳ್ಪತ್ತಿರೆ ಹಿಮಪಟಳಂ-
ಹೈಮನಂಗಾಗಿ ಬೀಸು- ।
ತ್ತಿರೆಸುತ್ತಂ ಶೈತ್ಯವಾರ್ಧ್ಧಿಗೇಂದುಗಳನುಗುಳ್ವ-
ಸಿಂಧೂದಕಂ ಸೋಂಕಿಪೊಗು- ।
ತ್ತಿರೆ ಶುದ್ಧ ಧ್ಯಾನದಿಂದಂ ಸ್ಫಟಿಕಮಣಿ ದೃಢ-
ಸ್ತಂಭಮೀನಿಂದುದೆಂಬಂ- ।
ತಿರೆ ನಿಲ್ವಬ್ಬೆಗಳ್ಳವಾಸ ಬ್ರತದನಿಯಮದಿಂದಂ-
ಜಿನೇಂದ್ರವ್ರತೀಂದ್ರರ್ ॥ ೫ ॥

ಕಂ॥ ಸ್ತುತಿಯಿಸೆ ಧರಿತ್ರಿ ಸೂರ್ಯ್ಯ- ।
ಪ್ರತಿಮಾಯೋಗದೊಳೆ ಪೂಣ್ದು ವಿಶ್ರುತ ಜೈನ- ॥
ವ್ರತಿನಿಲ್ವನಿ[1]ತರ[2]ಮುನಿನಿಜ ।
ಕುತಪದೊಳಂ ನಿಲ್ಲದವನದೇಂ ನಿಂದಪನೆ ॥ ೬ ॥

ಭುವನನುತಮಾಗೆ ಪಕ್ಷೋ- ।
ಪವಾಸ ಮಾಸೋಪವಾಸಮಂ ನಿಯಮದೆ ಮಾ[3]- ॥
ಡುವ ಜಿನಮುನಿ ನಿರತಂ ಮಾ- ।
ಳ್ಪವರುಷದಂದೊಂದು ಚವುತಗಾವುದು [4]ಗಾನಂ[4] ॥ ೭ ॥

ನೂಲಿಕ್ಕುವಡುಪವಾಸಮ- ।
ನಾಲಸ್ಯದಿನೊರ್ಮೆ ಮಾಡುವಪ್ಪೆಱರೆನತುಂ ॥
ಸಾಲಮುಪವಾಸಮೊಂದು ನಿ- ।
ರಾಲಸ್ಯದಿನೊಂದು ಮಾಡುವಜ್ಜಿನಮುನಿಗಳ್ ॥ ೮ ॥

ತುಱಿಸಮ್ಮಲಮಂ ಧರಿಯಿಪ- ।
ರೊಱಗಕ್ಕರ್ಕ್ಕುಟದ ತೆಱದೆ ಕುಳ್ಳಿಪ್ಪತ್ತರ್- ॥

---

೧. ಇ—ಗ; ೨. ಇ—ಗರತಗ; ೩. ಇ—ಕೂ; ೪. ಇ, ಈ—ಳಗಹನಂಳ;

ಮೊಱಗಿಪ್ಪರೊಂದೆ ಮಗ್ಗುಲೊ- ।
ಘುಱ[3]ರಾತ್ರಿ ಪ್ರತಿಮೆನಿಲ್ವರಾರ್ಹತ ಮುನಿಗಳ್ ॥ ೯ ॥

ತೋಳುಂ ಬೀಸ[1]ದೆ ಬರ್ಪ್ಪಡೆ ।
ಬಾಳಂ ಬೀಸಿದರೆಯೆಂದು ದಯೆಯಿಂದೊಳ್ಪಂ ॥
ಪಾಲಿಸಿ ಜಿನಮುನಿಗಳ್ಳೀ- ।
ವಾಳಿಯನಿಂಬಾಗಿ ರೋವಿನಿಯಮದೆ ನಡೆವರ್ ॥ ೧೦ ॥

ಬಹುವಿಧಮಾರ್ಗ್ಗಕ್ರಮಮಂ ।
ರಹಸ್ಯದಿಂ ತಮಗೆ ತಾಮೆ ಕೈಕೊಂಡುಂ ನಿ- ॥
ರ್ವ್ವಹಿಸುವ ಋಷಿಯರ್ಗ್ಗಂಗಳ ।
ಗಹನಮೆ ಸದ್ಗುರು ನಿರೂಪಿತ ಬ್ರತನಿಯಮಂ ॥ ೧೧ ॥

ಅಡವೆಳ್ವರಡುವರಡದಿ- ।
ರ್ದ್ದಡೆ ಬೇಡಿಯುಮುಣ್ಬರುಳಿದ ಯತಿಗಳ್ ಧೃತಿಗೆ- ॥
ಟ್ಟಡ[2]ಮಱಿದುಮೊಡಂಬಡರುಂ ।
ಅಡುವರೊ ಹಿತಮೆಂದು ನೋಳ್ಪಡಂ[2] ಋಷಿಯರ್ಕಳ್ ॥ ೧೨ ॥

ಮನೆಮನೆದಪ್ಪದೆ ಪರಿಪರಿ- ।
ದನವರತಂ ತಿರಿವರನ್ಯಸಮಯದಯತಿಗಳ್ ॥
ಜಿನಸಮಯದಲ್ಲಿ ಕಡೆಪ- ।
ಟ್ಟನುಮೆನಿಸೆಡಱಡಸಿದಲ್ಲಿಯುಂ ತಿರಿದಪನೇ ॥ ೧೩ ॥

ಸವಿ[3]ಯಾದ[3]ಡುಗೆಗಳಿಂತಿವೆ ।
ಸವಿಯಾದವೆನುತ್ತಮುಣ್ಬರಿತರಬ್ರತಿಗಳ್ ॥
ಸವಿಯಂ ಬಣ್ಣಿಸದೀವ- ।
ಸ್ತುವೆಂತುಟೆಂದುಸುರದುಣ್ಬರೀ ಜಿನಮುನಿಗಳ್ ॥ ೧೪ ॥

ಮನೆಯಿಲ್ಲದ[4]ರಿಗೆ........[4] ।
ಜಿನಮುನಿಗೆ ತಪೋಧನಂಗೆ ತಾಯ್ತುಂದೆವಿರಾ- ॥

---

೧. ಇ—ಸಿ; ೨. ಇ—೨ರಡಿಸಮ್ಮಾರ್ಜಿ³ದುವೊಡಂ। ಬಡರಡುವರೊ ಹೇತುನೋಳ್ಪಡಂ೨;
೩. ಇ, ಈ—೩ಸನಿಯು೩; ೪. ಈ—೪ದವಗ್ಗೇ(ಽ ತಾಂ।೪;

ಜಿನಭಕ್ತರೆ ನಿಶ್ಚಯವೆಂ- ।
ದೆನಿತಾನುಂ ಯತ್ನದಿಂದೆ ರಕ್ಷಿಪರಱಿವರ್ ॥ ೧೫ ॥

ಅಕ್ಷಯನಿಧಿಯೆನಿಸಿದ ಗುಣ- ।
ದಕ್ಷಯಮುಂ ಬಗೆಯರನ್ಯ ಸಮಯದ ಮುನಿಗ- ॥
ಳ್ದಕ್ಷಿಣೆಯುಂ ಬೇಳ್ಪಂದದೆ ।
ಮೋಕ್ಷಾರ್ತ್ಥಿಗಳಪ್ಪರುಷಿಯರಱಿವರೆ ಬೇಡಲ್ ॥ ೧೬ ॥

೧ಕಳ್ಪಿ೧ಟ್ಟು ಪೆಱರ್ಗೆವಿನಯಂ ।
ಮಾಳ್ಪುದುಮಭಿಮಾನಮೆಲ್ಲ ಮರೆಬಿಟ್ಟೞಿಪಿಂ ॥
ಬೆಳ್ಪುದುಮಾಪ್ತಾಗಮಮುಂ ।
ಮೆಳ್ಪಡದುದುಮೆಂತುಮಿಲ್ಲಿರಿಷಿಯರ ಮನದೊಳ್ ॥ ೧೭ ॥

ಚಿತ್ತನಿರೋಧಂ ತಪಮೆಂ- ।
ಬುತ್ತಮವಚನಮನೆ ಮನದೆಗೊಂಡಾಪೊತ್ತುಂ ॥
ಚಿತ್ತಮನಾಗಮದಲ್ಲಿಯೆ ।
ಪತ್ತಿಸುವಂತೇನೊ ಋಷಿಯರಾದರೆಲೋಗರ್ ॥ ೧೮ ॥

ಬಲವಂತಮಾಗಿ ಕರ್ಮ್ಮಂ ।
ಚಳಿಯಿಸಿದೊಡಮಿತರಲಿಂಗಿಯಂದದೆ ಜೈನಂ ॥
ಚಲಿಯಿಸಲಱಿಗುಮೆ ಕಲುಗಳು ।
ಚಳಿಯಿಸುಗುಂ ಪರ್ವ್ವತಂಗಳೇಂ ಚಳಿಯಿಕುಮೆ ॥ ೧೯ ॥

ಮುಱುಗಿಸೆ ಪರಿಷಹಂಗ- ।
ಳ್ಕೆಱಿಧೈರ್ಯ್ಯಂಗಿಡುವರನ್ಯಯತಿಗಳ್ ಜೈನ- ॥
ರ್ಮ್ಮಱಿದುಂ ಧೈರ್ಯ್ಯಂಗಿಡುವರೆ ।
ತುಱುಬೆಚ್ಚುವತೆಱದೆ ಬಸವನೇಂ ಬೆಚ್ಚುವನೆ ॥ ೨೦ ॥

ವೃ॥ ದೊರೆಕೊಳ್ಳಂ ನೆಱೆ ವಿಘ್ನಮಕ್ಕುಮೆನುತಂ-
ನಿಚ್ಚಂತಪೋದ್ಯೋಗಮುಂ ।
ದೊರೆಕೊಂಡುದ್ಧತ ವಿಘ್ನಭೀತಿ ವಶದಿಂ ಬಿಟ್ಟಿಪ್ಪನಾ-
ಮುದ್ಯಮುಂ ।

---

೧. ಇ, ಈ—೧ಕೀಳ್ಪ೧;

ದೊರೆಕೊಂಡೆಲ್ಲಿಯುಮೆಂತುಮಾವತೆಜದಿಂದಂ-
ವಿಘ್ನಸಂಘಾತಮೊ- ।
ತ್ತರಿಸುತ್ತಿರ್ದ್ದೊಡಮಾರ್ಹತಂ ಬಿಡುವನೆ-
ನಿರ್ಯ್ಯಾಣಕಾಲಂಬರಂ ॥ ೨೧ ॥

ಕಂ॥ ಪುಲಿಪಟ್ಟಿಮೆಳೆಯುನಾವ್ಯಗ ।
ಕುಲಮೆಂತುಂ ಪೊರ್ದ್ದದಂತೆ ಸಯ್ಯುಮದೊಳ್ನಿ- ॥
ಶ್ಚಳಮಪ್ಪ ತಪಸ್ವಿಯನಘ- ।
ಕುಳಮೆಂತುಂ ಪೊರ್ದ್ದಲಂತದೇನಾರ್ತ್ತಪುದೆ ॥ ೨೨ ॥

ಪಿರಿದುಂ ಪಾಪೋತ್ಕರಮಂ ।
ನೆರಪಿಗುಣಂಗಳನೆ ಮಱಸೆ ಬಾರದಭವಮಂ ॥
ಬರಿಸುವ ಕರ್ಮ್ಮಮನಲೆಯು- ।
ಲ್ನಿರಾಕುಳಂ ಋಷಿಯರಲ್ಲದೇನಾರ್ತ್ತಪರೇ ॥ ೨೩ ॥

ವೃ॥ ನುಡಿನೆರವಾಗಿ ತಮ್ಮೊಳೊಡನೊನೆವ ಸಂಗಡ ಕೂಡಿ-
ಬಂದರಂ ।
ಬಿಡದುಚಿತಜ್ಞರೆ ನವಭವಂಗಳೊಳಂ ಬಿಡದಿರ್ದ್ದೊ-
ಡಲ್ಗೊಡಂ- ।
ಬಡೆಸುಖಮಂ ಕುಡುತ್ತುಮೊಡವಂದ-
ನಿಜಾರ್ಜ್ಜಿತ ಕರ್ಮ್ಮಮಿತ್ರನಂ ।
ಕಿಡಿಸಲೊಡರ್ಚ್ಚುತಿಪ್ಪರೆನೆ ಭವ್ಯರದೆಂತು ಕೃತಘ್ನರಲ್ಲರೆ ॥ ೨೪ ॥

ಕಂ॥ ಅಸಿಧಾರಾವ್ರತಮೆಂಬೀ ।
ಪೆಸರಲ್ಲದೆ ಕಾಣಲಾಗದಂತದನೀಗ- ॥
ಳ್ಪುಸಿಯಲುತ್ತು ಕಾಣಲಾದಪು- ।
ದಸಿಧಾರಾ ಬ್ರತಮಿದೆನಿಪ ತಪದೊಳಮೀಗಳ್ ॥ ೨೫ ॥

ಜಗದೊಳಗುಳ್ಳನಿತಂ ವಿ- ।
ದ್ಯೆಗಳೆಲ್ಲಮನಱಿದುಮಱಿಯದಂತಿರ್ಪ್ಪೊಲಿಪ್ಪ- ॥
ಬ್ಬೆಗೆವಾಗ ಋಷಿಯುರುಳಿದರ್ ।
ಮಿಗೆ ಬೆಸೆಯುತ್ತಿರ್ಪ್ಪರಱಿದೊಡೆರಡಕ್ಕರಮಂ ॥ ೨೬ ॥

ಎನಿತಂ ಬೆಸಗೊಂಡೊಡವಂ- ।
ತನಿತಕ್ಕಂ ತುಳಿಲಬಳಿಯ ಪರಕೆಯ ತೆಱದಿಂ- ॥
ದನುಮಾನಿಸದೆ ಸದುತ್ತರ- ।
ಮನೆಕುಡುವರ್ಪ್ರೇಗಮಂತೆ ಜೈನಬ್ರತಿಗಳ್ ॥ ೨೭ ॥

ಧರ್ಮ್ಮದ ಲಕ್ಷಣಮಿಂತುಟೆ ।
ಧರ್ಮ್ಮದ ಲಕ್ಷಣಮದಿಂತುಟೇಂದೀತೆಱನಂ ॥
ನಿರ್ಮ್ಮಳಮಾಗಿರೆ ತಿಳಿವಡೆ ।
ನಿರ್ಮ್ಮಚ್ಚರನಾಗಿ ಋಷಿಯರೊಳ್ತಿಳಿಗಱಿವಂ ॥ ೨೮ ॥

ಆಗಮದೊಂದರ್ತ್ಥಮನಿಂ- ।
ಬಾಗಿರೆ ತಿಳಿದೋದಿ ಬಳಿಕೆ ಸನ್ಮಾರ್ಗ್ಗಮನೊ- ॥
ಲ್ದಾಗಳುಮಾಶ್ರಿತಗತ್ಯನು- ।
ರಾಗಂ ಪೇಳ್ವಂತು ರಿಷಿಯರಾದರೆ ಲೋಗರ್ ॥ ೨೯ ॥

ದಯೆಯಿಂ ನೆಗಳೆಂದು ನಿಜ ।
ಪ್ರಿಯಸೂನುಗೆ ಪೇಳ್ವರನ್ಯರೇನುವನಿಂತುಂ ॥
ದಯೆಯಿಂ ಪತ್ತಿಸುತಿಪ್ಪ- ।
ರ್ದ್ದಯೆಯಿಂ ಪೋಱೆಯಂಗವಾದೊಡಂ ಸಲೆಜೈನರ್ ॥ ೩೦ ॥

ಉಡಲುಂ ತುಡಲುಂ ಕೊಟ್ಟುಂ ।
ಪಿಡಿತೀವಿದ ಪೊನ್ನನಿತ್ತುವನ್ಯರೊಳನ್ಯ- ॥
ರ್ಪ್ಪಡೆಯದ್ದೋಹಾರಮನುಡ ।
ತುಡಲಿತ್ತುಂ ಕುಡುವರರ್ತ್ಥಿಯಿಂದಂ ಜೈನರ್ ॥ ೩೧ ॥

ಬಾದದ ಶಿಷ್ಯರು ಮನಹಿಂ- ।
ಸಾದಿ ಬ್ರತನಿರತರಾಗೆ ಮಾಳ್ಪರುಮನವೊ- ॥
ಲ್ದಾದರಿಸಿ ಜೈನರಾತ್ಮಜ- ।
ನಾದೊಡಮೆಂ ನಿಯಮಿಸಲ್ಕೆ ಬಲ್ಲರೆಲೋಗರ್ ॥ ೩೨ ॥

ಪ್ರಿಯಮಂ ಕಲಿಸಲ್ಕಱಿಯ- ।
ನ್ನಿಯಮಿಸಿ ಸನ್ಮಾರ್ಗ್ಗದಿಂದೆ ನಡೆಯಿಸಲಱಿಯ- ॥
ರ್ದ್ದಯೆಯಿಂ ಪತ್ತಿಸಲಱಿಯ ।
ನ್ನಿಯಮಾನ್ವಿತರಪ್ಪಜೈನರಲ್ಲದ ಮುನಿಗಳ್ ॥ ೩೩ ॥

ರಸಿಗಳೊಳಗ್ಗಳವಸಿಗಂ ।
ಬಸನಿಗಳೊಳ್ಮಿಕ್ಕಬಸನಿಪುಸಿವಗ್ಗೆದಿಟಂ ॥
ಪುಸಿವವನೆ ಸಪನ್ನಂ ನಿಯ- ।
ಮಿಸಿ ಧರ್ಮ್ಮಪಥಕ್ಕೆ ತಂದು ನಿಲಿಪಜ್ಜೈನರ್ ॥ ೩೪ ॥
ಹೂಜೆಗತನಕ್ಕೆ ನಾಡೊಳ- ।
ಗೋಜಂ ಪುಸಿಯುತ್ತಮಿರ್ಪ್ಪದದೆ ತಮಗೆಂದುಂ ॥
ಸಾಜವೆನೆ ಸಂದಖಳನಂ ।
ಯೋಜಿಸುವರ್ನ್ನಿರ್ವ್ವಿಕಾರಿಯಾಗಿರೆ ಋಷಿಯರ್ ॥ ೩೫
ಅಭಿಮುಖಿಗಳಾಗಿ ಕುಳ್ಳಿ- ।
ರ್ದ್ದಭಕ್ತಿಯಿಂ ಋಷಿಯರೊಡನೆ ಮಾತಾಡಲೊಡಂ ॥
ಶುಭಪರಿಣಾಮಮನಾಂಪ[೧] ।
[ಅ]ಭದ್ರನುಂ ಮಿಕ್ಕಬಸನಿಯುಂ ಕೈಕೊಳ್ಗುಂ ॥ ೩೬ ॥
ಉಪಶಮ ಗುಣಮಂ ಪಡೆವಡೆ ।
ಜಪಮುಂ ತಪಮುಂ ಸಮಾಧಿಯುಂ ಬೇಳ್ಪುದು ನಿಃ- ॥
ಕಪಟತೆಯುಂ ಋಷಿಯರಪಾ- ।
ದಪದ್ಮಮಂ ಪೊರ್ದ್ದೆ ಶಾಂತನಾಗನೆಮನುಜಂ ॥ ೩೭ ॥
ಆತಡಿಗಿರದೊಯ್ದಿಕ್ಕುವ ।
ಪೋತದವೋಲ್ ಜೈನಯೋಗಿ ಭವಜಳಧಿಯೊಳಾ- ॥
ಳ್ವಾತನುಮಂ ತನ್ನುಮನೊ- ।
ಯ್ದಾತಡಿಗೆಯ್ದಿಸುಗುಮಲ್ಲಿ ಸಂದಯಮುಂಟೆ ॥ ೩೮ ॥

ವೃ॥ ತೊಱೆಯೊಳ್ಪೋಗುತ್ತಮಿರ್ದ್ದಂ ತಡಿಯುಗಿಡುವ-
ನಾಶ್ರಯೆಸ್ಸಿಕಾಯಲ್ಕದೆತ್ತಾ- ।
ನಱಿಯದು ಪೋಗೆನ್ನದೆಂತುಂ ನಿಲಿಸುಗುಮೆನೆ-
ದುರ್ವ್ವಾರ ಸಂಸಾರಮೆಂಬೀ ।
ತೊಱೆಯೊಳ್ ಪೋಗುತ್ತಮಿರ್ದ್ದಂ ನಿಜಚರಣಮನಾ-
ಶ್ರಯೆಸ್ಸಿ ಕಾರುಣ್ಯದಿಂದಂ ।
ತೊಱೆಬಲ್ಪಿಂದೊಯ್ಯದಂತಾಗಿರೆ ನಿಲಿಪರು-
ಸನ್ಮಾರ್ಗ್ಗದಿಂದಂ ಮುನೀಂದ್ರರ್ ॥ ೩೯ ॥

---

೧. ಇ, ಈ—ಸಂ;

ಸೋರೆವೊದಲಾಗಿರೆಪಿಡಿದಿ- ।
ರ್ದ್ದರನಾತಡಿಗೊಯ್ಯಲಾಕ್ಕ್ಯರ್ಮಲ್ಲಿಂಕಷ್ಟಂ ॥
ಗುರುವೊಳನೆ ಸಾರ್ದ್ದರಂ ನಿ- ।
ಸ್ತರಿಸಲ್ವೇಳ್ಪುದುಭವಾಬ್ಧಿತೀರಂಬರೆಗಂ ॥ ೪೦ ॥
ಪಿರಿದುಂ ಲಘುಕರ್ಮ್ಮದೊಳೊಂ- ।
ದಿರದತಿಲಘು ಕರ್ಮ್ಮಯಾಗದಘುಸಂಕುಳದೊಳ್ ॥
ಪೊರೆದಿರ್ದ್ದಪೆಱಂನಿಸ್ತರಿ- ।
ಸಿದಪನೆ ತಾಂ ಕಲ್ಲದೋಣಿಯುಂದದಮುನಿಪಂ ॥ ೪೧ ॥

ವೃ॥ ಬಗೆಗೊಳ್ಪಂತಿರೆ ಧರ್ಮ್ಮಮಂ ತಿಳಿಪ ಸಚ್ಚಾರಿತ್ರದಿಂ-
ನಿಶ್ಚಯಂ ।
ನೆಗಳ್ವಂತಾಗಿರೆ ಯೋಜೆಯಿಂದೆ ಪುದಿಗುಂ-
ನಿರ್ಬ್ಬಂಧದಿಂ ಜೈನನಿ- ।
ಟ್ಟಗೆಯುಂ ಬು[1]ಚ್ಚಿದರಂತೆಚೆಚ್ಚರಿಕೆಯಿಂದಂ-
ದೀಕ್ಷೆಗೊಟ್ಟಾತನಂ ।
ಮುಗುಳ್ದುಂ ನೋಡದೆ ಪೋಪರನ್ಯಮುನಿಗಳ್ನೋ-
ಳ್ಪಾಗಳಂತೆಲ್ಲಿಯುಂ ॥ ೪೨ ॥

ಕಂ॥ ಪರವಶದಿಂ ಕ್ಲೇಶದುರಂ- ।
ತರನಾಗಿರ್ದ್ದೊಳ್ಪನಱಿಯುಧಾವತಿವಡುವಾ ॥
ನರಪಶುವಂ ಧರ್ಮ್ಮಧುರಂ- ।
ಧರನಾಗಿರೆ ಸಿ[3]ಕ್ಷೆಗೊ[3]ಳಿಪ[3]ರೆಂತುಂ ಋಷಿಯರ್ ॥ ೪೩ ॥

ವೃ॥ ಜಳನಿಧಿಮೇರೆಯುಂ ಮಿಗದೆ ನಿಂದುದು ಧಾರುಣಿ-
ಧಾನ್ಯವರ್ಗ್ಗಮಂ ।
ಬೆಳೆವುದು ಸತ್ಯಶೌಚಸುಚರಿತ್ರದೊಳೊಂದಿದು-
ದೀ ಜಗಜ್ಜನಂ ।
ಬೆಳಗಿದುದೆಯ್ದೆಧರ್ಮ್ಮದ[4]· [4]ಉತ್ತಮಮಾದುದು-
ದಾನದೇಳ್ಗೆನಿ- ।
ರ್ಮ್ಮಳಗುಣಜೈನಯೋಗಿಗಳ ನಿಶ್ಚಳವೀರ-
ತಪಪ್ರಭಾವದಿಂ । ೪೪ ॥

---

೧. ಇ, ಈ—ಚು; ೨. ಇ—ದೀ; ೩. ಇ—ಶಗೋಪಶ; ೪. ಇ—ಳದಳಉಳ;

ದಱಿ ಜೀವಂಗಳೊಳಾಗಳುಂ ಮತಿಜಿನೇಂದ್ರ-
ಶ್ರೀಪದಾಬ್ಜಂಗಳೊ- ।
ಳ್ಪಯಮಾದುಶ್ಚರಿತಂಗಳೊಳ್ ರತಿಯೆ ಸಚ್ಚಾರಿತ್ರ-
ದೊಳ್ಸಂತತಂ ।
ಪ್ರಿಯಮಾಪ್ತಾಗಮ ತತ್ವದೊಳ್ತಮಗೆನಲ್ಸಂ-
ದಿರ್ದ್ದಪುಣ್ಯಾತ್ಮರಂ ।
ನಯದಿಂ ಬಣ್ಣಿಸರಾರೊ ಭವ್ಯಜನರಂ ಲೋಕೈಕ-
ಮಾಂಗಲ್ಯರಂ ॥ ೪೫ ॥

ಕಂ॥ ಹೇಯಕ್ಕೆರಗದುದುಮುಪಾ- ।
ದೇಯಕ್ಕೆರಗಿರ್ದ್ದ ಬುದ್ಧಿಯುಂ ನಿಜವೆನಿಸಂ- ॥
ದಾಯತಿಗೆ ಕೊಟ್ಟದಾನಂ ।
ಶ್ರೀಯನನೂನಮೆನೆದಾನಿಗೀವುತ್ತಿಕ್ಕುಂ ॥ ೪೬ ॥

ವೃ॥ ಈವುದು ತನ್ನ ಶಕ್ತಿಗನುರೂಪಮೆ ತತ್ಫಲ-
ದೇಳ್ಗೆ ಕಲ್ಪಭೂ- ।
ಜಾವದಿ ಖೇಚರೇಶ್ವರ ಪದಾವಧಿ ಚಕ್ರಧರ-
ಪ್ರಕೃಷ್ಟಭೋ- ।
ಗಾವಧಿ ದೇವರಾಜವಿಭವಾವಧಿ ಮುಕ್ತಿವಧೂವಿಳಾಸ ಸೌ- ।
ಖ್ಯಾವಧಿಯೆಂದೊಡಿಂ ಫಲಮನೆವೊಗಳ್ವುದೊ-
ಪಾತ್ರದಾನದಾ ॥ ೪೭ ॥

ಗಾಹೆ॥ ೧ತಂ೧ಜಾತಣೇಣದುಂಥುಂ ದುಂಥುಂಪಿ೨ಯು-
ಅಹಿಮುಹೆಗರಳಂ।
ಪಂತಾಪಂತವಿಸೆ ಸಂದಿಂಜಂಸಂಪಂ೩ತಪಂ೩ತೇಹಿ ॥

ಕಂ॥ ಬಿಡವೇಳ್ಪವಸ್ತುಹೇಯಂ ।
ಕಡಂಗಿ ಕೈಗೊಳ್ವುದಿಂತುಪಾದೇಯಮಿವಂ ॥
ಬಿಡದಱಿದು ಕೈಕೊಳಲ್ಬ- ।
ಲ್ಲಡವಂ ವ್ರತಿ ಪೊಲ್ಲದಂಬಿಸುಟ್ಟೊಳು ಗುಣಮಂ ॥ ೪೮ ॥

೧. ಇ—೧ತವಿ೧; ೨. ಇ—ಬ ೩. ಇ—೩ತಸುಪಂ೩;

ಹೇಯಮುಪಾದೇಯಮೆನಿ- ।
ಪ್ಪಾಯೆರಡುಮನಱಿದು ನೆಗಳದಾಗಮಧರನ. ॥
ಪ್ಪಾಯತಿಯಂ ಯತಿಯನವೇ- ।
ಡಾಯತಿ ೧ಪೋತ್ತ್ಮನ೧ಲೆಂದುಮನ್ನಿಪುದಱಿವಂ ॥ ೪೯ ॥
ಉತ್ತಮತಪದಿಂ ತನ್ನಂ ।
ಬಿತ್ತರಿಸುವ ಬಲ್ಮೆಯಲ್ಲದಾಗಮಧರನಂ ॥
ಪೊತ್ತಗೆಯೆಂಬುದು ಜಗಮುಂ।
ಪೊತ್ತಗೆಯೊಳಗಿರ್ದ್ದವೇಳ್ಪಿನಿಂ ನೆಗಳ್ದಪುದೆ ॥ ೫೦ ॥
ಹೇಯದೊಳಾದೊಲವುಮುಪಾ- ।
ದೇಯದೊಳೊಲವಿಲ್ಲದಿಪ್ಪುದುಂ ನಿಜವೆನೆ ಸಂ- ॥
ದಾಯತಿಗೆ ಕೊಟ್ಟದಾನಂ ।
ಪಾಯಸಮಂ ಪುಲಿಯ ನೂಡಿ ಪೊರೆದಂತಕ್ಕುಂ ॥ ೫೧ ॥

ವೃ॥ ಎಂತುಮಸತ್ಯಮಂ ನುಡಿಯರೊಳ್ಪಿ-
ನೊಳಾರ್ಜ್ಜಿಪನರ್ತ್ಥಮಂ ಬಳಿ- ।
ಕ್ಕಂತದನೋಜೆಯಿಂ ತವಿಸುಗುಂಮತಿವಂತನ-
ಧರ್ಮ್ಮಮಾರ್ಗ್ಗದಿಂ ।
ಸಂತತಮರ್ತ್ಥಮಂ ಪಡೆದು ರೂಢಿಗೆದಾನಮು-
ನೀವನೆಗ್ಗನಾ- ।
ಮುಂತಣ ಪಾರ್ವ್ವರಂ ಬಿಡಿದು ಪಿಂದಣಪಾರ್ವ್ವರಿ-
ಗೀವಮಾಳ್ಕೆಯಿಂ ॥ ೫೨ ॥
ಸುರವಂದ್ಯಂ ಜಿನನಾಪ್ತನೆಂದುದಯೆಯೊಳ್ಮಾಡಿರ್ದ್ದ-
ಸೌಖ್ಯಕ್ಕೆ ದಾ- ।
ಗರಮಂ ಸನ್ಮತಿಯಿಂದೆ ನಂಬಿದಯೆಯಿಂ-
ಕೈಕೊಂಡುಸನ್ಮಾರ್ಗ್ಗದೊ- ।
ಳ್ನಿರುತಂತಾನಡೆದಾರುಮಂ ನಡೆಸುತಿಪ್ಪಂ ಪಾಪಭೀತಂ-
ಮಹಾ- ।
ಪುರುಷಂ ಸಜ್ಜನವಂದ್ಯನಾಗುಣನಿಧಾನಂ-
ಪಾತ್ರನತ್ಯುತ್ತಮಂ ॥ ೫೩ ॥

---

೧. ಇ—೧ಪೊತ್ತಗೆದ೧;

ಕಂ|| ಮಾನಧನಂ ನಿರ್ಲೋಭ್ಯಂ |
ದಾನಕ್ಕುಪಯೋಗ್ಯನುತ್ತಮಂ ಸತ್ಪಾತ್ರಂ ||
ದೀನಂ ಕಷ್ಟಂ ಖಳನ- |
ಜ್ಞಾನಿಯೆನಿಪ್ಪವನಪಾತ್ರಮೆಂದಱಿಗಱಿವಂ || ೫೪ ||

ಅನುಪಮ ಚರಿತಂ ನಿಃಪ್ರಿಯು- |
ನನಘಂ ಸತ್ಪಾತ್ರನಿರಲ[೧]ಪಾತ್ರಕ್ಕಿತ್ತೊ ||
ನ್ನನವದ್ಯದಾನಮದು ಭ- |
ಸ್ಮನಿಹುತಮೆಂಬಂತೆ ಮೇಲೆ ನಿಃಫಲಮಕ್ಕುಂ || ೫೫ ||

ಅನವರತಂ ದಯೆಯಿಲ್ಲದ |
ಮುನಿಗಳ ನೂಡುವುದಱಿಂದಮೊಲ್ದೀರ್ವ್ವಂ ಜೈ- ||
ನನನೂಡುಗೆ ಸಾಸಿರಸು- |
ತ್ತನೊಂದುಗಂಟುಱುಗುಮೆನಿಸುಗುಂ ಫಲದೆಡೆಯೊಳ್ | ೫೬ ||

ಬಹುಳಾಳಪದೊಳೇನಾ- |
ಗ್ರಹದಿಂ ತೀರ್ತ್ಥಂಗಳೆಲ್ಲಮಂ ನೋೞ್ಪುದಱಿಂ ||
ಮಹನೀಯಮನ್ನದಾನದ |
ಮಹಿಮೆದಲದು ಪಾತ್ರಪತಿತಮಾದೊಡನಂತಂ || ೫೭ ||

ಮನೆಯಿಲ್ಲದ ನಾಗಾರಿಗೆ |
ಜಿನಮುನಿಗೆ ತಪೋಧನಂಗೆ ದಯೆಯಿಂ ನಿಚ್ಚಂ ||
ಮನಮೊಲ್ದೀವುದು ದಾನಮ- |
ನನಂತ ಸೌಖ್ಯಮನೆ ಬಯಸುಪಂ ಮತಿವಂತಂ || ೫೮ ||

ಕಷ್ಟಕುಲದಲ್ಲಿ ಪುಟ್ಟಿ ನಿ- |
ಕೃಷ್ಣನುಮೆನೆ ಸಂದ ಪೊಲೆಯನುಂ ಬ್ರತದಿಂದು- ||
ತ್ಕೃಷ್ಟಮೆನೆ ಬಾಳ್ವಡಾತನೆ |
ಸಿಷ್ಟಂ ಸಂತುಷ್ಟಿಮಾಳ್ಪುದವನಂ ಜೈನಂ || ೫೯ ||

ಮನೆಮನೆದಪ್ಪದೆ ಪರಿಪರಿ- |
ದನವರತಂ ಬೇಳ್ಪರಲ್ಲಿ ಪರಲಿಂಗಿಗಳುಂ ||

೧. ಇ—ತ;

ಜಿನಸಮಯುದಲ್ಲಿ ಕಡೆಪ- ।
ಟ್ಟನುಮೆನಿಸೆಡಱಿಡಸಿದಲ್ಲಿಯುಂ ತಿರಿದಪನೆ ॥ ೬೦ ॥

ಬ್ರತಮಂ ಬೇಳ್ಪಂ ನಿಜಿಸಲು- ।
ಕೆ ತಪಸಿಯುಂ ಬೇಳ್ಪನಣ್ಮಮತ್ತಂತೆಮಹಾ- ॥
ಬ್ರತಮಂ ಬೇಳ್ಪಂ ಗುರುಗಳ ।
ನಿಂತಿರೆ ಬೇಳ್ಪವಲ್ಲ ಪೊನ್ನಂ ಜೈನಂ ॥ ೬೧ ॥

ಮಾನಧನಂಗಿಕ್ಕುವವೋ- ।
ಲ್ದೀನಂಗಿಕ್ಕುವರೆ ಭಕ್ತರಾಹಾರಮನೊ- ॥
ಲ್ದಾನೆಗಳ ನೂಡುವಂದದಿ- ।
ನೇನೋ ಕೋಳಿಗಳನೂಡಿದಪ್ಪರೆ ಪೇಳಿಂ ॥ ೬೨ ॥

ಪೊಡೆವಟ್ಟುಂ ಪ್ರಾರ್ತ್ಥಿಸಿಯುಂ ।
ಕುಡೆಕೊಳ್ವಜ್ಜೈನರುಳಿದರಂದದೆ ದಾನಂ ॥
ಗುಡಿಮೆಂದು ಬೇಡಲರಿವನೆ ।
ಕಡೆಪಟ್ಟನುಮಾಗಸಾವಡೆಂತುಂ ಜೈನಂ ॥ ೬೩ ॥

ದಾನಮನೀವುದು ಪಾತ್ರ- ।
ಕ್ಕಾನತನಾಗಿತ್ತಡುತ್ತಮಂ ಕರೆದಿತ್ತಾ ॥
ದಾನಂಮಧ್ಯಮನಧಮಂ ।
ದೀನತೆಯಿಂ ಬೇಡಲಕ್ಕೆ ಕೊಟ್ಟಾದಾನಂ ॥ ೬೪ ॥

ವಿದಿತಮ ಸತ್ಕಾರದೊಳೊಂ- ।
ದಿದದಾನಂ ದಾನಮಾಗಲಱಿಯದುಮತ್ತಂ ॥
ಸದಮಳಗುಣನಿಧಿಗೀವುದು ।
ಸದಯಂ ತಾನಾಗಿ ದಾನಮಂ ಮತಿವಂತಂ ॥ ೬೫ ॥

ವೃ॥ ನೆಟ್ಟನೆದಾನಿಪಾತ್ರನಿಧಿಯುಂ ದಯೆಯೆಂಬಿವು-
ಕೂಡಿಬಂದೊಡೆಂ ।
ನೆಟ್ಟನೆ ತನ್ನೊಳೊಂದಿನಿಲೆಭಕ್ತಿಯಥೋಚಿತಮಾಗೆ ದಾನಮಂ ।
ಕೊಟ್ಟನನಂತಮಪ್ಪ ಫಲಮಂ ಪಡೆಗುಂ ಪದವಟ್ಟುಬಿತ್ತಿದಂ ।
ಇಟ್ಟಳವಪ್ಪುದೊಂದು ಬೆಳಸಂ ಪಡೆವಂತೆ ಸಮಸ್ತ-
ಧಾತ್ರಿಯೊಳ್ ॥ ೬೬ ॥

ಕಂ॥ ಬುದ್ಧಿಯುನೆ ಮೆಱೆದುಪಡೆದಾ ।
ಶುದ್ಧಾಭಾವದೊಳೆ ಪಡೆದಪಣಮಂ ಬಂದ ॥
ಶ್ರಾದ್ಧಂ ಮಾಡದೆ ಕುಡುವುದು ।
ಸಿದ್ಧಾಯತನಕ್ಕೆ ಭವ್ಯಸಮಿತಿಗೆ ಚದುರಂ ॥ ೬೭ ॥

ಕೀರ್ತ್ತಿಗಪೇಕ್ಷಿಸಿವೃ೧ತ್ತಮ- ।
ನಾರ್ತ್ತದೆ ಪಡೆದೊಲ್ದುಬಂದ ಪಾತ್ರಪ್ರಕರ- ॥
ಕ್ಕಾರ್ತ್ತೀವುದೆ ಭವ್ಯಾಳಿಗೆ ।
ಕೂರ್ತ್ತೀವುದು ವಿಮಳಕೀರ್ತ್ತಿಯುಂ ಬಯಸುವವಂ ॥ ೬೮ ॥

ಜೈನಂಗೆ ತವಿಸಿದೊಡಮೆಯೊ- ।
ಳೇನುಂ ನೋವಿಲ್ಲ ಪೊಲೆಯುನಕ್ಕುಮಪಾತ್ರಂ ॥
ಜ್ಞಾನೇತರಂ ಕುದೃಷ್ಟಿಕು- ।
ಲೀನಂಗಂ ಕೊಟ್ಟಕಾಣಿನೋವಂ ಮಾಳ್ಕುಂ ॥ ೬೯ ॥

ಬ್ರತಗುಣ ಸುಚರಿತ್ರ ಸಮ- ।
ನ್ವಿತನಪ್ಪಸುಪಾತ್ರವೆಯ್ದೆನಿಸ್ತರಿಕುಂಸಂ ॥
ಶ್ರುತಿಯೆಂಬ ಸರಥಿಯಿಂ ದುಃ- ।
ಕೃತಿಯುಪ್ಪಕುಪಾತ್ರಮದ್ದುಗುಂ ದುರ್ಗ್ಗತಿಯೊಳ್ ॥ ೭೦ ॥

ಶ್ರೀಯುಂ ಶಾಶ್ವತ ಸೌಖ್ಯ- ।
ಶ್ರೀಯುಂ ಬಯುಸುವೊಡೆ ದಾನಿದಾನಂ ಪಾತ್ರಂ- ॥
ದೇಯುವೆನಿಪ್ಪುವನಱಿವುದ- ।
ನಾಯಾಸದೆ ಜೈನಸೂಕ್ತಿಯಿಂ ಮತಿವಂತಂ ॥ ೭೧ ॥

ವೃ॥ ಶ್ರೀರಾಮಾರಮಣೀಯುಪಾದಕಮಳಂ ದುರ್ವ್ವಾರ-
ಸಂಸಾರಕಾಂ- ।
ತಾರಾತ್ಯುಗ್ರದವಾನಳಂ ನಿಖಿಳಲೋಕೈಕಾ-
ಶ್ರಯುಂ ದೇವರಾ- ।
ಜಾರಾಧ್ಯಂ ಸ್ಮರಶಾಸನಕ್ಷಪಿತಕಾಳಂ ದೇವದೇವಂ ಗುಣಾ- ।
ಧಾರಂ ರಕ್ಷಿಸುತಿಕ್ಕೆ ಭವ್ಯಜನಮುಂ ಶ್ರೀವೀರಭಟ್ಟಾರಕಂ ॥ ೭೨ ॥

---

೧ ಇ—ನಿ:

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣ ಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರಚಂಡಕಿರಣ ಸಕಳಾಗಮಪದಾರ್ಥ
ನಿಪುಣ ಮಹಾಕವಿ ಬ್ರಹ್ಮದೇವವಿರಚಿತ-
ಮಪ್ಪ ಸಮಯಪರೀಕ್ಷೆಯೊಳುತಪೋ-
ಧನಸ್ವರೂಪಕಥನಂ ಸಪ್ತಮಾಧಿಕಾರಂ ||

ಶ್ರೀ ಶ್ರೀ ಶ್ರೀ

॥ ಶ್ರೀ ॥

ಅಷ್ಟಮಾಧಿಕಾರಮ್

ವೃ॥ ಶ್ರೀಮದಶೇಷ ಭವ್ಯಕಮಳಾಕರ ಹಂಸನನಂತದೃಗ್ವಚೋ- ।
ಧಾಮನಪಾರದಿವ್ಯಮುನಿ ಸಂಸ್ತುತಪಾದನತತ್ವದುಸ್ತಮ-।
ಸ್ತೋಮನನಿಂದ್ಯನಕ್ಷಯಗುಣಾಂಬುಧಿ ನಿರ್ಮ್ಮಳನೀ-
ಜಗತ್ರಯ ।
ಸ್ವಾಮಿಜಿನಾರ್ಕ್ಕನೊಲ್ದಿಮಗೆ ಮಾಡುಗೆ ನಿರ್ಮ್ಮಳ-
ದೃಷ್ಟಿಲಕ್ಷ್ಮಿಯಂ ॥ ೧ ॥

ಜಿನಧರ್ಮ್ಮಾಮೃತವಾರ್ದ್ಧಿವರ್ದ್ಧನ ಶಶಾಂಕಂ-
ತೀವ್ರಮಿಥ್ಯಾರಿ ಖಂ- ।
ಡನಚಂಡಾಸಿಕರಂ ಕಷಾಯ ವಿಪುಳಧ್ವಾಂತದ್ವಿಷಂ-
ಭವ್ಯಮಂ ।
ಡನನಾನಂದಿತ ಸನ್ಮುನೀಂದ್ರನಿಕರಂ ರತ್ನತ್ರಯೋದ್ಭಾಸಿ ಸ- ।
ಜ್ಜನಸಂಸ್ತುತ್ಯನನಾಪ್ತ[1]ರಂದಮ[1]ನೆ ಬ್ರಹ್ಮಂ-
ಪೇಳ್ದನಾಮಾರ್ಗ್ಗದಿಂ ॥ ೨ ॥

ಕಂ॥ ಜಗಮೆಲ್ಲಂ ಬೆಂದಡೆಪ- ।
ದ್ಮಗರ್ಭ್ಭನುಂ ಹರಿಯುಮೋರ್ವ್ವನೋರ್ವ್ವರನಱಿದುಂ॥
ಜಗಮಂ ಮಾಡುವ[2]ವೆಂದಿರೆ।
ಭುಗಿಲೆಂದುರಿಲಿಂಗವಾದನೀಶ್ವರನೆಂಬರ್ ॥ ೩ ॥

ಲೋಕತ್ರಯಮುಂ ಬೆಂದಂ- ।
ದಾಕಮಳೋದರನು ವಜ್ಜಭವನುಂತಾವಾ ॥

---

೧. ಇ—೧ರೆಂದುದ೧; ೨. ಇ—ವೆ;

ಲೋಕದೊಳಿರ್ದ್ದರೊಪೇಳಿಮು- ।
ಲೋಕದೊಳಿರ್ದ್ದರೊ ವಿಚಾರಮುಳ್ಳವರ್ಗಳಿದಂ ॥ ೪ ॥

ವೃ॥ ಒಗೆದುರಿಲಿಂಗದೊಂದು ಪವಣಂ ಪರಿಭಾವಿಸ-
ಲಬ್ಜನಾಭನುಂ ।
ನೆಗಳ್ದವಿರಿಂಚಿಯುಂ ಕೆಳಗೆಯುಂ ನೆಱೆಮೇಗೆಯು-
ಮೆಯ್ದುವಲ್ಲಿ ಕೇ ।
ದಗೆ ಗಡಬಮ್ಮನೊಳ್ನುಡಿದು ಮುಂ ಪುಸಿದಿರ್ದ್ದದಱಿಂದ-
ಮೀಶಪೂ ।
ಜೆಗೆ ಪೊಱಗಾದುದೆಂಬರೆಲೆ ಕೇದಗೆಮುನ್ನುಡಿ-
ದಲ್ತುದಕ್ಕುಮೆ ॥ ೫ ॥

ಕಂ॥ ಆಗಳುರಿಲಿಂಗಮೊಗೆದ- ।
ತ್ತಾಗಳದಂ ನೋಳ್ಪೆನೆಂದುನೆಗೆದಬ್ಜಭವಂ ॥
ಗಾಗಳೆ ಕೇದಗೆ ನುಡಿದುದು ।
ಬೇಗಂ ಪುಸಿನುಡಿಯರಿನ್ನವಘಂಟನಂವೊಳವೆ ॥ ೬ ॥

ಉರಿಲಿಂಗವಾದಲಿಂಗಂ ।
ಸುರಮುನಿಗಳು ಶಾಪಮೀಲ್ಕೊಱೆದಾಲಿಂಗಂ ॥
ಧರೆಗಾಪ್ತಮೂರ್ತಿಯಾಯ್ತಿಂ- ।
ಬರಱಿಯದರ್ತಿಗಳಿದು ನೋಡಿದವರಲ್ತೆಂಬರ್ ॥ ೭ ॥

ವೃ॥ ಸುರಮುನಿಸಂಕುಳಂ ನೆರೆದುದಾರುವನಾಂತರ-
ದೊಳ್ತಪಂಗೆಯು- ।
ತ್ತಿರೆತದಧೀಶನಪ್ಪ ಶಿವನಾರಿಷಿಪಳ್ಳಿಗೆ ಬಂದಡಾಮುನೀ ।
ಶ್ವರರ ವಧೂಜನಂ ಮುದದೆ ನೋಡಿ ಮರುಳ್ಗೊಳೆ-
ತನ್ಮುನೀಶರಾ ।
ಗಿರಿಶನಲಿಂಗಮಂ ಪಱಿಯೆ ಶಾಪಿಸೆ ಬಿರ್ದ್ದುದಿ-
ದೆಂಬರೆಲ್ಲರುಂ ॥ ೮ ॥

ಕಂ॥ ಲಲನೆಯರನಿಂತುಕಿಡಿಸಿದ ।
ಖಳನಡುಪಱಿಗೆಂದುಶಾಪಮಂ ಸುರಮುನಿಗ- ॥

---

೧. ಇ—೧೬೩೧;

ಳ್ಕಲುಷದಿನೀಯಲೊಡಂ ಭಿ- ।
ನ್ನಲಿಂಗಮಾಗಿರ್ದ್ದ‌ನೆಂಬರಾಶೈವರ್ಕ್ಕಳ್ ॥ ೯ ॥

ವೃ॥ ಗಿರಿಶನಲಿಂಗಮಂತು ಪರಿದಲ್ಲಿಯೆ ನಟ್ಟಿರೆ ಮುಕ್ಕಳಾಗ್ರ್ಗವಾ- ।
ಗರೆಗಡವತ್ತ ದೇವಗಣಮಾತಿವನಲ್ಲಿಗೆ ಪೋಗಿಪೆಳ್ವುದಾ- ।
ದರದೊಳೆ ಪೋಗಿಪೂಜಿಪುದದಂ ಸುತರಾದಪರೆಂದೊಡೆಲ್ಲರುಂ ।
ಗಿರಿಶನ ಬಿರ್ದ್ದ‌ಲಿಂಗಮನೆ ಪೂಜಿಸಿದಗ್ರ್ಗಡ-
ಪುತ್ರಕಾಂಕ್ಷೆಯಿಂ ॥ ೧೦ ॥

ಕಂ॥ ದಾರುವನದಲ್ಲಿ ಮುನಿಗ- ।
ಳ್ಭೀರ್ಱದೆ ಬಂದೊಂದು ಪಱಿದರುದ್ರನಲಿಂಗಂ ॥
ಧಾರುಣಿಗೆ ದೆಯ್ವಮಾಯ್ತಿಂ- ।
ದಾರಾಧಿಸುತಿಪ್ಪರಱಿತವಿಲ್ಲದ ಶೈವರ್ ॥ ೧೧ ॥

ವೃ॥ ಮರುಳರಸಂಗೆ ಮಲ್ಲಿಗೆಯುಮೊಲ್ಲೆಯು ಜಾಜಿಯು-
ಕಂಪನಾಳ್ವಭಾ- ।
ಸುರಕುಸುಮಂಗಳಂ ಕುಡಲು ಕಾರಣಮಾವುದೊ-
ಬನ್ನಿಯುಕ್ಕೆಯುಂ- ।
ತ್ತರಣೆಯು ಬೆಲ್ಲವತ್ತದ ತೊಳಂಚೆಯು ಪತ್ರೆಯು-
ನೊಂದಿನಿತ್ತು ಚೆ- ।
ಚ್ಚರಮುಮರತ್ವಮಂ ಪಡಯಿಮೆಂಬರದಕ್ಕೆ-
ನಿಮಿತ್ತಮಾದುದೊ ॥ ೧೨ ॥

ಕಂ॥ ಶಾಪದೆ ಪರಿದಾಲಿಂಗ- ।
ಕ್ಕಾಪೊತ್ತುಂ ಬನ್ನಿಯುಕ್ಕೆ ಯುತ್ತರಣೆಗಳೆಂ- ॥
ಬೀ ಪತ್ರೆಯುನರ್ಚ್ಚಿ‌ಪುದಾ ।
ಶಾಪಪ್ರತಿಕಾರಮೆಂದು ಕೇಲಬನ್ಸ್ನ‌ಡಿವರ್ ॥ ೧೩ ॥

ಮುಟ್ಟಿದಡೆ ಮೀಯುವೇಳ್ಪುದು ।
ಮುಟ್ಟಿದೊಡಂ ಸಿದ್ಧಿಹಾನಿ ಸುಗತಿಯೊಳೆಂದುಂ ॥

---

೧. ಇ—ಗ;

ಪುಟ್ಟಿಂ ಕೀಲಿಗನಪ್ಪಂ ।
ಕಁಟ್ಟಿಂ ನಿರ್ಮಾಲ್ಯಮೆಂಬರಿದು ಬಿಸವಂದಂ ॥ ೧೪ ॥

ಒಕ್ಕಲಿಗನ ನೋಲಗಿಸಿದ ।
ತಕ್ಕಂ ಮೊದಲಾಗಿ ಮುಡಿದಪೂವಂ ಮುಡಿವಂ ॥
ತಕ್ಕುದೆ ಲಿಂಗದ ಮಂಡೆಯೊ- ।
ಳಿಕ್ಕಿದ ಪುಷ್ಪಮನೆ ²ಮುಡಿಯು²ಲಾಗೆಂಬಮತಂ ॥ ೧೫ ॥

ದೇವನ ಮಂಡೆಯೊಳಿಕ್ಕಿದ ।
ಪೂವಂ ಮುಟ್ಟಿದೊಡೆ ಮೀವರೆಂದೊಡೆಪೊಲ್ಲಂ- ॥
ದಾವೇಕೆಂದಪೆಮಾಪ್ತಂ ।
ಪಾವನಮಲ್ಲೆಂದು ಸಾಱುತಿಪ್ಪತ್ಕೈರ್ವರ್ ॥ ೧೬ ॥

ಮುಟ್ಟಲ್ಕಣಮಾಗದುದಂ ।
ಮುಟ್ಟಿಯು ಕೈಗರ್ಚ್ಚಕೊಳ್ವತೆಱದಿಂ ಭಕ್ತಂ ॥
ಮುಟ್ಟಿದೊಡೆ ಕರ್ಚ್ಚುತಿಪ್ಪಂ ।
ಮುಟ್ಟುತೆ³ ಕೈಗರ್ಚ್ಚವಂತಿರಾಪ್ತರ ಶುಚಿಯಿಂ ॥ ೧೭ ॥

ಲಿಂಗಮನೆ ಮುಟ್ಟಲೊಡನೆ ಕ- ।
ರಂಗಳನಿಂಬಾಗಿ ಕರ್ಚ್ಚವೇಳ್ಕುಂ ತದ್ಭ- ॥
ಕ್ತಂಗೆಂದು ಪೇಳುತಿಪ್ಪಾ- ।
ತಂಗಳು ಬಲ್ಲಂತಿರುಚಿತಮಂ ಬಲ್ಲವರಾರ್ ॥ ೧೮ ॥

ಜಗದೊಳ್ಪವಿತ್ರಮೆನೆ ಮುಂ ।
ಪೊಗಳ್ತೆವೆತ್ತವರ⁴ ಮನೆಯು..........⁴ ॥
ಸ್ತುಗಳಂ ಮುಟ್ಟಿಯು ಮೀವಡೆ ।
ನೆಗಳ್ತೆಯುಂ ಮಾತುಮೊಂದಿ ನೇರ್ಪ್ಪಟ್ಟಿಕ್ಕುಂ ॥ ೧೯ ॥

ಶಪಥಂ ಮಾಳ್ಪಾಗಳ್ ಕೋ- ।
ಪ⁵ಪಾನಮುಂ ಮಾಳ್ಪರೆಂಬರೆಲ್ಲಂಲಿಂಗ- ॥
ಕ್ಕೆಪ⁶ಸಕ್ರೋಶಂ ತತ್ಕೋ- ।
ಶಪಾನಮಸ್ಪೃಶ್ಯಮೆಂದು ತಿಳಿದಕ್ಕುಡಿಯರ್ ॥ ೨೦ ॥

---

೧. ಇ—ಕೆ; ೨. ಇ—೨ಮುಟ್ಟಿ೨; ೩. ಇ—ನ; ೪. ಇ—ಳರನವರ ಮನೆಯುಮ-ನಾವಳ; ೫ ಇ—ಶ; ೬. ಇ—ಪೆ;

ಉರಿಲಿಂಗವಾದ ಲಿಂಗಂ ।
ಸುರಮುನಿಗಳು ಶಾಪವೀಯೆ ಪಱಿದಾಲಿಂಗಂ ॥
ಧರೆಗಾಪ್ತಮೂರ್ತಿಯಾಯ್ತಿಂ- ।
ಬರಱಿಯದರ್ಬ್ಬಗೆದು ನೋಡಿದವರಲ್ಲೆಂಬರ್ ॥ ೨೧ ॥

ಶ್ಲೋಕ॥ ಸ್ವಯಮೇ[1]ವಗತಾನಾರಿ[1]ಯೊ ನಕಾಮಯತೆ ದ್ವಿಜಃ ।
ನರಕಾವನಿವರ್ತ್ತಂತೆ ಯಾವಶ್ಚಂದ್ರದಿವಾಕರೌ ॥

ಕಂ॥ ಅಭಯ ಪ್ರಸಾದ ಖಟ್ವಾಂ- ।
ಗಭಯಂಕರಶೂಲಶಕ್ತಿಡಮರುಗರುದ್ರಾ- ॥
ಕ್ಷಭುಜಂಗ ಕುಮುದ ಫಲಯು- ।
ಕ್ತಭುಜಂಗಳನುಳ್ಳವಂ ಸದಾಶಿವನಲ್ಲಂ ॥ ೨೨ ॥

ಲಿಂಗಕ್ಕೆ ಭಕ್ತಿಮಾಡುವ- ।
ವಂಗಳ್ತಾಂ ಸ್ವಲ್ಪಸೌಖ್ಯವನು ಕುಡುಗುಂ ಸ್ವ- ॥
ರ್ಗ್ಗಂಗಳ ಸುಖಮಂ ಮುಕ್ತಿಯು- ।
ಮಂ ಗುಣನಿಧಿ ಜಿನನೆ ಕುಡುಗುಮರ್ಚ್ಚಿಸೆ ಜಿನನಂ ॥ ೨೩ ॥

ಅವಯವಮನುಂತೆಮಾಡ[2]ರೆ ।
ಶಿವನಪ್ಪಡೆ ಶಿವನಲಿಂಗಮುಪ್ಪುದನಱಿದಿ- ॥
ರ್ದ್ದವಯವಣಂ ಮಾಡರೆ ತಾಂ ।
ಶಿವಲಿಂಗಕ್ಕಾಯ್ಯರುಚಿತಮಂ ತಪ್ಪುವರೆ ॥ ೨೪ ॥

ಕಮಳಜನಭಾಗ ಮೊದಲದು ।
ಕಮ[3]ಳಾಕ್ಷನ[3]ಭಾಗಮದಱನಡುವದರಿಮ್ಮೇ- ॥
ಗೆಮಹೇಶ್ವರ ಭಾಗಮುಮೆಂ- ।
ದುಮೂವರಂ ಲಿಂಗದಲ್ಲಿ ನಿಲಿಪರದೇನೋ ॥ ೨೫ ॥

ಈ ನೆಲದೊಳಿನಿತು ಕಾಲಮು- ।
ಮಾನಿರ್ದ್ದಂ ಪೂಳ್ದುಲಿಂಗಮಪ್ಪೆಂ ಭ್ರಾಂತೇಂ ॥
ನೀನಗಳ್ಪುದೆಂದು ಕಲುಗಳ ।
ಮಾನಸರೊಳ್ನುಡಿದು ಕನಸುದೋಱಿತ್ತೆಂಬರ್ ॥ ೨೬

---

೧. ೩—೧ವಾಗತಾಂ ನಾರಿಂ೧; ೨. ೩—ಡಿ; ೩. ೩—೩ಳೋದರ೩;

ಒಂದೆರಡು ಮುಂಡದಂತರ- |
ದಿಂದಂ ಧರೆಯೊಳಗೆ ಬಗೆದು ಪೊಣ್ಮಿದಕಲ್ಲಂ ||
ಮಂದಮತಿಗಳು ಸ್ವಯಂಭುವ |
ದೆಂದೂಳ್ವರ್ನ್ಮಿಕ್ಕಕಲುಗಳೇಂ ಮಾಡಿದುವೆ || ೨೭ ||

ಅವಯವ ಸಂಪೂರ್ಣ್ಣವೆನಿ- |
ಪ್ಪುವುಮಾಡಿದ ಕಲುಗಳವನಿಯುಂ ಪೊಣ್ಮಿ ಸ್ವಯಂ- ||
ಭುವು ನಿರುತಮೆನಿಕುಮುಳಿದಂ- |
ತವಲ್ಲವೇ ಸಾಜದಿಂ ಸ್ವಯಂಭುಗಳಲ್ಲಾ || ೨೮ ||

ಅವಯವಮನೆ ಬಣ್ಣಿಸುತಿ- |
ರ್ಪ್ಪವೆಶೈವಸ್ತುತಿಗಳಾತಿವಂ ಪ್ರತಿಗಳೊಳಾ- ||
ವವಯವಮುಮಿಲ್ಲ ಲಿಂಗ- |
ಕ್ಕೆ ವಿರುದ್ಧಂ ಸ್ತುತಿಯುಮಾಪ್ತಮೂರ್ತ್ತಿಯುಮೆಂತುಂ || ೨೯ ||

ಮೃಡನರ್ಚ್ಚಿಪಂಗೆ ವರವಂ |
ಕುಡುವಡೆಕೈ ನೋಳ್ಪಡಕ್ಷಿ ಕೇಳ್ವಡೆ ಕಿವಿಗಳ್ ||
ನುಡಿವಡೆ ಬಾಯಿಲ್ಲೆಂತೋ |
ಕುಡುವಂ ಲಿಂಗಸ್ವರೂಪನಂಗವಿಹೀನಂ || ೩೦ ||

ಭಾವಿಪೊಡವಯವಮಿಲ್ಲದ |
ದೇವನನೇನೆಂದು ಬಣ್ಣಿಪರ್ಪ್ಪೂಜಿಪರಂ ||
ತಾವೆಡೆಯಂ ಜಾನಿಪರಂ- |
ತಾವದನಾ ಭಕ್ತರಲ್ಲಿ ಲಿಂಗದೊಳನಿತುಂ || ೩೧ ||

ಮೊದಲೊಳುಲಿಂಗಂಗಡಬಳಿ- |
ಕದು ತನ್ನೊಳು ಪಂಚವಕ್ತ್ರದಶಭುಜಮಂ ಪೆ- ||
ತ್ತುದು ನೋಡುವಾಗಳಿನ್ನಿಂ |
ತಿದು ಚಿತ್ರಂ ಲಿಂಗವಿಂದ್ರಜಾಲಿಗನಕ್ಕುಂ || ೩೨ ||

ಲಿಂಗಮದುದೆಯ್ದೆ[1]ಮೇಲಾ[1] |
ಲಿಂಗದ ಮೇಲಯ್ದುತಲೆಯ ದಶಭುಜದಾ ರೂ- ||

---
೧. ಇ—೧ಮೆಲ್ಲಾ೧;

ಪಂ ಗಡ ನಿಲಿಸಿಯೆ ಪೂಜಿಪು- ।
ದೇಂ ಗುಂಜನವಾಪ್ತನೆರಡಱೊಳಾತ್ತನೇನೊ ॥ ೩೩ ॥

ಅಯ್ದುಂ ಬಣ್ಣಮೆ ವದನಮು- ।
ವೈದಕ್ಕಂ ಬಿಳಿದು ಮೆಯ್ಯಬಣ್ಣಂತೋಳೀ- ॥
ರಯ್ದುಂ ನೆಱೆಯೆ ಶಿವಂಗೇ- ।
ಗೆಯ್ದುಂ ಬಿಡದೊಲ್ದು ಜಾನಿಪರ್ಮ್ಮತಿಹೀನರ್ ॥ ೩೪ ॥

ನವಬಂಧಕಂಗೆ ವಿರತಿಗೆ ।
ನೆವನೆವದಿಂ ರುದ್ರನಂದು ಪುಟ್ಟಿದ ಕಥದಿಂ ॥
ಶಿವಭಕ್ತರದಂ ಮಱಯಿಸಿ ।
ಶಿವನಭವಂ ಜನಕನಾರುಪಿಲ್ಲೆಂದೂಳ್ವರ್ ॥ ೩೫ ॥

ವೃ॥ ಸತತಂ ಸನ್ಮತಿಯಿಂದೆ ಸದ್ಗುಣಗಣಕ್ಕಾವಾಸ-
ಮಾಗಿರ್ದ್ದ ಶಾ- ।
ಸ್ವತನಂ ಶಂಕರನಂ ಸದಾಶಿವನನಾನಂದಾತ್ಮನಂ-
ಭವ್ಯ ಸಂ- ।
ಸ್ತುತನಂ ದೇವರ ದೇವನಂ ಪೊಗಳದೆಂತುಂ-
ದೈತ್ಯರಂ ಕೊಂದನೆಂ- ।
ದು ತಗುಳ್ದಾಗಳುಮಾಪ್ತನಂ ಪೊಗಳ್ವರಿಂತಜ್ಞಾನದಿಂ-
ಮಾನಸರ್ ॥ ೩೬ ॥

ಕಂ॥*ನರರಸ್ತಿಹಸ್ತಿ ಚರ್ಮ್ಮಂ ।
ಪರೇತವನವೊ[1]ಳಕೆ ಪಾವುಶೂ[2]ಲಂ-
ಮುಸಣದೊಳೆಂಬ[2] ॥
.... ।
ರ್ಕ್ಕಡೆಪಟ್ಟನುಮಿಂತೆ ನೆಗಳ್ವರದನೇವೊಗಳ್ವೆಂ ॥ ೩೭ ॥

---

* ಈ ಪದ್ಯವು 'ಅ', 'ಆ', 'ಇ'— ಪ್ರತಿಗಳಲ್ಲಿ ಅಪೂರ್ಣವಿದೆಯಲ್ಲದೆ, ಎರಡು ಬೇರೆ ಬೇರೆ ಪದ್ಯಗಳು ಮಿಶ್ರವಾಗಿ ಬಂದಂತೆ ಕಂಡುಬರುತ್ತದೆ. ಆ ಪದ್ಯಗಳು 'ಈ' ಪ್ರತಿಯಲ್ಲಿ ಸರಿಯಾಗಿ ಬಂದಂತೆ ಇವೆ. ಅನುಬಂಧದಲ್ಲಿ ಬಂದಿರುವ ಎಂಟನೆಯ ಪ್ರಕರಣದ ೧ ಮತ್ತು ೨ನೆಯ ಪದ್ಯಗಳೆ ಅವು ಆಗಿರುತ್ತವೆ.

೧. ಇ—ದೊ; ೨. ಇ—೨ಲಂ ಥಕ್ಕಾ॥ ಮುಸಣದೊಳೆಂಬರು...೨;

ಊರಿಂಗೆ ಶಲ್ಯಮಂಡನ ।
ಧಾರಿಣಿಯೊಳಮಾಂ[೧]ಗನಿ[೧]ರಲಿ ಸಲ್ಲಿಂಬವೊಲೀ ॥
ಧಾರಿಣಿಯೊಳಿಲ್ಲಮುಗ್ರಂ- ।
ಗೂರಿಂದಂ ಪೊಱಗೆ ಮಾಡುವದ್ದೇಗುಲಮಂ ॥ ೩೮ ॥

ದೇಗುಲದ ನೆಳಲು ಮನೆಗಳ ।
ಮೇಲಾಗದು ಪರಿಯಲೆಂದು ಪೊಱಗಿರಿಸುವರಿಂ- ॥
ಬಾಗಿರೆ ಮಾಡಿಪರೊಳ್ಪಿಂ- ।
ಗಾಗರಮೆನಿಸಿರ್ದ್ದ ಜೈನಗೇಹಮನೂರೊಳ್ ॥ ೩೯ ॥

ಜಗದಧಿಪತಿಯಂ ವಿನಯದೆ ।
ಪೊಗಳದೆ ವಸ್ತುಸ್ತವಂಗಳಿಂದನಿಶಂಕೆ- ॥
ಮ್ಮಗೆ ಕೊಳ್ಳಿಯ ಮನ್ನೆಯರಂ ।
ಪೊಗಳ್ವಂದದೆ ಪೊಗಳುತಿರ್ಪ್ಪರಱಿವಿಲ್ಲದವರ್ ॥ ೪೦ ॥

ಭೂವಿಶ್ರುತರಿವರಾಗಮ ।
ಕೋವಿದರೆನೆ ರೂಢಿವೆತ್ತ ಶೈವಾಚಾರ್ಯ್ಯರ್- ॥
ಕ್ರೀವಿಲು ದುರ್ಜ್ಜನ ನೆಮ್ಮಧಿ- ।
ದೇವನ ಮಾಂಗಲ್ಯನೆಂದು ಬಣ್ಣಿಸುತಿರ್ಪ್ಪರ್ ॥ ೪೧ ॥

ಶ್ವೈರಾಚಾರ್ಯ್ಯರ ಶಾಸ್ತ್ರದೊ- ।
ಳಾರಿಂದಂ ಪಿರಿಯರೆನಿಸಿದಾಗೋ[೨]ವತ್ತಾರ್ ॥
ವೋರಂತೆಸೆದಾ ಶಿವನಂ ।
ಚಾರಿತ್ರವಿಹೀನರೆಂದು ಬಣ್ಣಿಸುತಿರ್ಪ್ಪರ್ ॥ ೪೨ ॥

ಲೋಕದೊಳೆಲ್ಲಂ ಕರಮವಿ- ।
ವೇಕಿಗಳೆನಿಪಾ ಮಹೇಶ್ವರರ್ಕ್ಕಳ ಪುರುಳಂ ॥
ಪ್ರಕಟಿಸುವುದಾಪ್ತನೆನವಿ- ।
ವೇಕಿ ಖಳಂ ಕ್ರೂರನೆಂದೆ ಪೊಗಳ್ದಿಂ ಬಳಿಯಂ ॥ ೪೩ ॥

ಎಲ್ಲಿಲ್ಲದ ಮಾಂಗಲ್ಯನ- ।
ನೆಲ್ಲಂ ಸ್ತುತಿಯಾಗಿ ಪೇಳ್ದೊಡವೆ ಪಾವನಮೆಂ- ॥

---

೧. ಇ—೧ಗಲ್ಯನಿ೧; ೨. ಇ—ಗೊರ;

ದಲ್ಲಲ್ಲಿಗಱಿತಮಿಲ್ಲದ- |
ರೆಲ್ಲಂ ಕಲ್ತವಱಿನೀಶನಂ ಸ್ತುತಿಯಿಸುವರ್ || ೪೪ ||

ಚಳಮತಿಗಳ್ ಶಿವನಂ ನಿ- |
ರ್ಮ್ಮಳನನಮಾಂಗಲ್ಯಮೆಂದು ಬಣ್ಣಿಸೆ ತಮಗಂ ||
ಚಳಮುಂಟೇ ಗುಣಿಗಳು ನಿ- |
ರ್ಮ್ಮಳನೆನಲೇಕಾಗದಂಜದೆಂಬುದು ಪೊಲ್ಲಾ || ೪೫ ||

ಪರಮನನತಿ ನಿರ್ಮ್ಮಳನಂ |
ತಿರಿವನ ಮಾಂಗಲ್ಯನೆಂದು ಶೈವರೆ ನಿಚ್ಚಂ ||
ಪರಮಾದರದಿಂ ಪೊಗಳ್ವ- |
ರ್ಪ್ಪರ ಸಮಯಿಗಳಾಳಿ[1]ಗೊಳ್ವುದೇನದು ತಪ್ಪೇ || ೪೬ ||

ಗಿರಿಶಂ ಪಿನಾಕಿದಕ್ಷೋ |
ಧ್ವರಮಥನಂ ವ್ಯಾಘ್ರ ಚರ್ಮ್ಮವಸನಂ ಲಾಳಾ- ||
ಸುರಮಥನಂ ಶೂಲಿ ಬಳಂ- |
ದರಸೂದನನಾಪ್ತನೆನಲುವೇಡರಿವಾತಂ || ೪೭ ||

ಪರಶುಧರಂ ಸರ್ಪ್ಪಧರಂ |
ಕರಿಚರ್ಮ್ಮಾಂಬರಧರಂ ಪುರಾರಿಮಹೋಗ್ರ- ||
ಸ್ಫುರಿತ ನಿಟಿಳೇಕ್ಷಣಂ ದೈ- |
ತ್ಯರನೆಲ್ಲಂ ಕೊಲ್ವನಾಪ್ತನೆನಲಾಗಱಿವಂ || ೪೮ ||

ಶ್ವೇತನ ಬಿಲ್ಲೊಳ್ನೆಲಸಿದ- |
ನಾತನಪೆಸರವನನೊರ್ಮ್ಮೆ ಕಾದಂಭೂತ- ||
ವ್ರಾತದೊಡಗೂಡಿ ತಿರಿದುಪ- |
ರೇತದೊಳಿರ್ಪ್ಪವನನಾಪ್ತನೆನಲಾಗಱಿವಂ || ೪೯ ||

ಕಾಡಾನೆಯರೂಪಿಂದಂ |
ಕೂಡಿದಗಜೆಯೊಳ್ಗಜಾಸುರನ ಸೀಳ್ದಿ. ||
ಡಾಡಿದನರ್ಜ್ಜುನನೊಳ್ಪೋಣ- |
ರ್ದಾಡಿದನಾಪ್ತನೆನಲಾಗದಱಿವುಳ್ಳಾತಂ || ೫೦ ||

---
೧. ಇ—ಗಿ;

ನರನಂ ಗೆಲುವಂದು ವನೇ- ।
ಚರನಾದಂ ರಜತಗಿರಿಯನೆತ್ತಿದಲಂಕೇ- ॥
ಶ್ವರನಂ ನುಗ್ಗೊತ್ತಿದನೆಂ- ।
ದು ರಾಗದಿಂ ಪೊಗಳಲಾಗದಾಪ್ತನನಱಿವರ್ ॥ ೫೧ ॥

ನರನೊಳ್ ಪೋಣರ್ದಗಿದಿತ್ತಂ ।
ಸರಲಂ ಲಂಕಾಧಿಪಂಗೆ ಖಡ್ಗಮನಿತ್ತಂ ॥
ಸುರರಭಿವರ್ಣ್ಣಿಸೆ ಬಮ್ಮನ ।
ಶಿರಗಡಿದಂ ಪೇಸಿ ಭೂಮಿಯುಂ ಬಲವಂದಂ[1] ॥ ೫೨ ॥

[2]…………………………………… ।
……………………………………[2] ॥
ಧ[3]ರ್ಮ್ಮನನೆಂದತ್ಯಂತಂ ।
ನಿರ್ಮ್ಮಳನಂ ಪೊಗಳಲಾಗಲಱಿವುಳ್ಳಾತಂ ॥ ॥ ೫೩ ॥

ರಾಗದಿ[4]ನಸುಗತಿ[4]ಯೊಳ್ಸಂ- ।
ಭೋಗಿಸುತಿಪ್ಪಲ್ಲಿಗಗ್ನಿಬರೆನಾಣ್ಚಿಕೆಯಿಂ- ॥
ದಾಗಿರಿಜೆ ಪೋಗಿ ತರಿಸಿದ- ।
ನಾಗಳೆ ಷಣ್ಮುಖನಿನಾಪ್ತನೆನಲಾಗಱಿವಂ ॥ ೫೪ ॥

ಮುರಹರನಾಗಸಕೆತ್ತಿದ ।
ಚರಣಮನಜನಲ್ಲಿ ತೊಳೆದ ನಾ ನೀರೆ ಜ[5]ಡಂ ॥
ಸುರಸಿಂಧುವಾಗಿ ಬರುತಿರೆ ।
ಶಿರದೊಳು ತಾಂ ತಳೆದನಾಪ್ತನೆನಲಾಗಱಿವಂ ॥ ೫೫ ॥

ಸುಡುವಂ ಜಗ[6]ಮುಂ ಮತ್ತಂ ।
ಪಡೆವಂ ತ್ರಿಗುಣಾತ್ಮನೊಲ್ದು ತೆಱನಪ್ಪಂ ತಾ- ॥
ನಡಿಗಡಿಗೆನುತಂ ಸುಖಮುಂ ।
ಕುಡುವನುಮೀಯಂದದಿಂದಮುಕ್ಕುಮೆ ಪೊಗಳಲ್ ॥ ೫೬ ॥

---

೧. ಇ—೧ನೊಣೆದಂ । ಗರಳಮನಾಪ್ತನೆನಲಾಗತಾನರಿವುಳ್ಳಂ॥೧;
೨. ಇ, ಈ—೨ಬೊಮ್ಮನ ತಲೆಯುಂ ಕಡಿದಂ।ಬ್ರಹ್ಮೇತಿಗೆ ಪೇಸಿಭೂಮಿಯುಂ ಬಲವಂದಂ೨;
೩. ಇ—ದು; ೪. ಇ, ಈ—೪ನಗಸುತೆಳ; ೫. ಇ, ಈ—ಗ; ೬. ಇ—ಡ;

ದಕ್ಷನಳಿಯಂ ಶಿಖಂಡಿ ಖ- |
ಳಕ್ಷಾಂ[1]ಗಂ ಪಶುವೆನೇಱುವಂತಿರಿವಂ. ಲೋ- ||
ಕಕ್ಷಯ ಕಾರಣನೆಂದಂ- |
ದಕ್ಷಯನಂ ಪೊಗಳಲಾಗದಾಪ್ತನನಱಿವಂ || ೫೭ |

ಪೆಱೆಯುಂ ಸೂಡಿಪ್ಪಂ ಬಾಂ- |
ದೊಱೆಯುಂ ಪೊತ್ತಿಪ್ಪನಗಜೆಯೊಳ್ಕೂಡಿಪ್ಪಂ ||
ಕಱೆಕೊರಲನೆಂದು ಲೋಕ- |
ಕ್ಕೆಱೆಯುನನೀಯಂದದಿಂದಮಕ್ಕುಮೆ ಪೊಗಳಲ್ || ೫೮ ||

ಮಾದೇವನುಗ್ರನಜನೇ- |
ಕಾದಶರುದ್ರಂ ಶಿವಂ ಮಹಾ ಕ್ರೂರನೆನು- ||
ತ್ತಾದಂ ಮುತ್ತುಂ ಮೆಣಸುಂ- |
ಗೋದಂತಿರೆ ಪೊಗಳಲಾಗದಾಪ್ತನನಱಿವಂ || ೫೯ ||

ಕಡು ಮೂರ್ಕ್ಖನೊಮ್ಮೆ ಶಾಂತಂ |
ಕಡುರಾಗಿವಿರಾಗಿ ದುಶ್ಚರಿತ್ರಂ ಶುಚಿಯೆಂ- ||
ದೆಡಬಲದಿಂ ಪಂಕ್ತಿಯೊಳಿ- |
ಪ್ಪೆಡೆಯುಂ ತೋಪ್ಪಾರ್ತಸಾಪ್ತನೆನಲಾಗಱಿವಂ || ೬೦ ||

ವೃ|| ಒಡಲೋರ್ಬ್ಬಾಗಮನಿತ್ತನದ್ರಿಜೆಗೆ-
ಗಂಗಾದೇವಿಯಂತಾಳ್ದಿಯುಂ |
ಜಡೆಯೊಳ್ತಾಂ ಬಸನಂಗಳಂ ತೊಱೆದನಾದೈತ್ಯೇಂದ್ರರಂ-
ಕೋಪದಿಂ |
ಕಡಿದಂ ಮತ್ತೆದಯಾಪರಂ ದನುಜಮೌಳಿವ್ರಾತಮಂ-
ಸೂಡಿಯುಂ |
ಗಡಪೂತಾತ್ಮನನೆಂಬರಿನ್ನವಘುಟಂ ದುರ್ಬ್ಬೋಧ-
ರೊಂದೋದುಗಳ್ || ೬೧ ||

೧. ಇ—ಕ್ಷ್ಮಃ

ಮರುಳೊಡನಾಡುವಂ ಮಸಣದೊಳ್ಪಡುವಂ-
ಪುಲಿದೊಲನುಟ್ಟು ಭೀ- ।
ಕರಕರಿಚರ್ಮ್ಮಮಂ ಪೊದೆವನಸ್ತಿಗಳಂ ತುಡುವಂ-
ಕಪಾಳದೊ- ।
ಳ್ತಿರಿದುಣುತಿಪ್ಪನುಗ್ರಫಣಿಯಂ ಪಿಡಿವಂ-
ವಿಷಭೋಜಿಯೆಂದು ಜಿಂ- ।
ಕರಿಸುವರಿಂತು ಬಾರದಭವಂ ಬರಿಪರ್ವ್ವಿಕಳಾತ್ಮರೀಶನಂ || ೬೨ ||

ಉಡಿ[1]ಪಜಿದೇಕೆಕೈದುವಿಡಿವಂ ಸಲೆಕೈದುಗಳಾಗೆ-
ಬೂದಿಯಂ- ।
ದೊಡೆವುದದೇಕೆ ಬೂದಿಗೊರವಂಗಡ ಪೆಂಡಿರದೇಕೆ-
ಪೆಂಡಿರಾ ।
ದಡೆ ಮದನಾರಿಯೆಂಬ ಬೀರುದೇಕೆಯೊನಾಡೆ-
ವಿರುದ್ಧ ಚೇಷ್ಟಿಯಾ ।
ಮೃಡನೆಸಕಂ ವಿಚಾರಿಸುವಡೆನ್ನರದೇಕೆ-
ವಿವೇಕಮುಳ್ಳವರ್ || ೬೩ ||

ಕಂ|| ಮಾದೇವಂ ದಿತಿಸುತರೊ- ।
ಳ್ಕಾದುವನಣನಲ್ಲ ನಿರ್ಮ್ಮಳಾಂಗಪೂಸಂ ||
ಬೂದಿಯನೆಂತುಂ ಮುಕ್ತಿ ।
ಶ್ರೀದೈತಂ ಮಸಣದಲ್ಲಿ ಪಟ್ಟಿರಲಜಿಯಂ || ೬೪ ||

ನಿರ್ಮ್ಮಳನಪ್ಪಂ ಪೊದೆಯಂ ।
ಚರ್ಮ್ಮಮನತಿ ಶೌಚಿಯಪ್ಪನೊಣಕೆಯೊಳುಣ್ಣಂ ॥
ಧರ್ಮ್ಮೋಪದೇಶಿಯಪ್ಪಂ ।
ದುರ್ಮ್ಮನನೇ ಶಾಂತನಾಪ್ತನಲ್ಲಂ ರುದ್ರಂ || ೬೫ ||

ಭವಹರನಪ್ಪಡಜಾತಂ ।
ಶಿವನಪ್ಪಡೆ ದುಃಖಿಯಲ್ಲನಪಗತಚೇತೋ- ||

೧. ಇ—ಡೆ;

ಭವನಪ್ಪಡಲ್ಲ ಗೌರೀ- |
[೧]ಶ್ವರನವತಾ[೧]ನಪ್ಪೊಡೆಂತುಪುಱಿಯಂ ತಿರಿಯಲ್ || ೬೬ ||
ಶಂಕರನಪ್ಪಡೆ ಲೋಕಭ- |
ಯಂಕರನಲ್ಲನಘನಪ್ಪೊಡಳಿಯಂ ಜಗಮಂ ||
ತಾಂ ಕರ್ಮ್ಮವೈರಿಯಪ್ಪೊಡೆ |
ಮುಂಕೊಂಡೀ ಜಗಮನೆಯ್ದೆ ಮಾಡನವಶ್ಯಂ || ೬೭ ||
ಜಿತಕಾಮನ ಲಂಪಿನೊಳಗ- |
ಸುತೆಯೊಳ್ನಿರೆಯಲ್ಕೆ ಬಲ್ಲನೆನೆಪಾವನಮಂ ||
ಹುತವಹನ ಮುಖದೊಳಿಡುವನೆ |
ಗತಲಿಂಗನುಮಾಗಲಱಿವನೇ ತಾಪಸರಿಂ || ೬೮ ||
ರೂಢಿಯ ಪರಮಾತ್ಮನದೇಂ |
ಕಾಡಾನೆಯ ರೂಪುಗೊಂಡು ಪಿಡಿಯೊಳದೆಂತುಂ ||
ಕೂಡುವನೆ ಕರಿಯ ಸೀಳ್ದೀ- |
ಡಾಡಿಡುವನೆ ಬಿಚ್ಚಿ ಜಡೆಯನೆದ್ದಾಡುವನೇ || ೬೯ ||
ಸಲ್ಲಲಿತ ಸಿಂಹವಿಷ್ಟರ- |
ದಲ್ಲಿ ಜಗತ್ಸ್ವಾಮಿಯಾಗಿ ನೆಲಸಿಪ್ಪನದೇಂ ||
ಬಲ್ಲನೊ ಪಿರಿದುಂ ಶ್ವೇತನ |
ಬಿಲ್ಲಿನ ಕೊಪ್ಪಿನೊಳಿರಲ್ಕೆ ನಾರಿಯ ತೆಱದಿಂ || ೭೦ ||
ಗಣನೆಗೆ ಸರ್ವಜ್ಞನದೇ- |
ನೆಣಿಸುವನೇ ಮಣಿಯನಖಿಳಮಂಗಳನಿಳಯಂ ||
ಪೆಣನಂ ಪೊತ್ತುತೊಳಲ್ವನೆ |
ಗುಣಗಣನಿಧಿ ವಿಷಮನಿರಿಸಲಱಿವನೆ ಕೊರಲೊಳ್ || ೭೧ ||
ಜ್ಞಾನದಿ ಕಾಣ್ಬಾತಂನಾ- |
ನಾನನದಲ್ಲಭಯನಪ್ಪೊಡಾಯುಧಚಯಮಂ ||
ತಾನೆಂತುಂ ಪಿಡಿದಿರನಾ- |
ಜ್ಞಾನಚರಿತ್ರಾತ್ಮನಪ್ಪೊಡುಡುವನೆ ತೊವಲಂ || ೭೨ ||

೧. ಇ—೧ದತಾನೀಶ್ವರ೧;

ಅಱಿನುಂ ದಯೆಯುಂ ಲಜ್ಜೆಯು- ।
ಮಱಿವುಂ ತನಗುಳ್ಳ ಶಂಕರಂ ದಾನವರಂ ॥
ತಱಿವನೆ ಜಗಮಂ ಸುಡುವನೆ ।
ನಿಱಿದೆದ್ದಾಡುವನೆ ಪಶುವನೇನೇಱುವನೇ ॥ ೭೩ ॥

ವೃ॥ ಪ್ರಿಯಮಿನಿಸುಳ್ಳವಂ ಕಡಿಯಲೇನೊಮನಂದರ-
ಲಾಪ್ಪ೯ನೇ ವಿರಿಂ- ।
ಚಿಯತಲೆಯಂ ಜಗತ್ಪ್ರಭುವೆನಿಪ್ಪವನರ್ತ್ಥಿ೯-
ಯೊಳಾಪಿಶಾಚ ಕೋ- ।
ಟಿಯೊಳೊಡಗೂಡಿಯೂಳ್ಪವನೆ ಪಾವನ-
ಮೂತ್ತಿ೯ಮಹೇಶನೊಲ್ದು ತಾ- ।
ಳ್ದಿಯುಮಿರಬಲ್ಲನೇ ಹರಿಯಪಾದಜಲಂಗಳ-
ನುತ್ತಮಾಂಗದಿಂ ॥ ೭೪ ॥

ಕಂ॥ ಲೋಕಾಗ್ರದಲ್ಲಿ ದಿವಿಜಾ- ।
ನೀಕಸ್ತುತ್ಯಂ ಸದಾಶಿವಂ ನೆಲಸಿರೆ ಮ- ॥
ತ್ತೇಕೆ ಮತಿಹೀನರಾತ್ಮನ- ।
ನೇಕಾತ್ಮಕನೆನುತವಾಗಳುಂ ಬಣ್ಣಿಸುವರ್ ॥ ೭೫ ॥

ನೆಲನಾಕಾಶಂ ಮರುತಂ ।
ಜಲಮಗ್ನಿಶಶಾಂಕ ಸೂಯ್ಯ೯ರಾಪ್ತನತನುವೆಂ- ॥
ದಲಸದುಲಿವವರ ನುಡಿಯೊ- ।
ಳ್ಫಲಮಿಲ್ಲ ಸದಾಶಿವಂಗಿವಲ್ಲವು ತನುಗಳ್ ॥ ೭೬ ॥

ಅಡುವ ಸುಡುವಗ್ನಿಕಚ್ಚ೯ವ ।
ಜಳವೆಂದುಮ್ಮೆಟ್ಟುವಗುಳ್ವ ಪರಗುವಮಲಮಂ ॥
ಬಿಡುವ ನೆಲ[೧]........ನಾಪ್ತ[೧] ।
ಗೊಡಲುಗಳೆನಲಾಗಪವನಶಶಿದಿನಪರುಮಂ ॥ ೭ ॥

ಶಿವಗೋಪುರದೊಳಗಂ ಕೆ- ।
ಪ್ಪುವೆರಸು ಪುಗಲಾಗದೆಂದೊಡಾತನ ತನುವ- ॥

೧. ಈ—೧ನೆಂಬಿವಾಪ್ತಂ೧;

ಪ್ಪವನಿಯನಪ್ಪುದೆ ಪೇಳ್ಕೆ- ।
ಪ್ಪುವೆರಸು ಮುಟ್ಟಲ್ಕೆ ಭಕ್ತರೆನಿಸಿದ ಶೈವರ್ ॥ ೭೮ ॥

ಎಂಟುವೊಡಲುಗಳುದಯ್ಸು- ।
ಕ್ಕುಂಟಾದಡೆ ಭಕ್ತನಪ್ಪವಂ ನಡೆಯಲ್ಕೇ- ॥
ಱಂಟೆ[೧]................[೧] ।
[೨]........[೨]ನೀರು ಸುಡಲು ಕಿಚ್ಚುಗಳುಂಟೆ ॥ ೭೯ ॥

ಕುಂದುವ ಪೆಚ್ಚುರ್ವವನಂದಿಸೆ ।
ನಂದುವ ಮೂರ್ತ್ತಿಗಳನಾಪ್ತನಕ್ಷಿತಿಗಳೆನ- ॥
ಲ್ಕೊಂದೊಂದಕ್ಕಿವು ಸೇರಿದ- ।
ವೆಂದುಂ ತಾವಲ್ಲದದಱಿನೆನಲಾಗಱಿವಂ ॥ ೮೦ ॥

ಜ್ಞಾನಾಂಬಕನಮಳ ಗುಣಾ- ।
ಧಾರಂ ಸರ್ವ್ವಜ್ಞನೆಂಬುದಲ್ಲದೆ ಚಂದ್ರಾ- ॥
ರ್ಕ್ಕಾನಳನೇತ್ರತ್ರಯನೆಂ- ।
ಬೀನುಡಿಯಂ ನುಡಿಯಲಾಗದಱಿವುಳ್ಳಾತಂ ॥ ೮೧ ॥

ವೃ॥ ಜ್ಞಾನದಿನಲ್ತೆ ಸರ್ವ್ವಗತನಂತಸುಖಾಸ್ಪದನಾಪ್ತನೆನ್ನದ- ।
ಜ್ಞಾನದಿನಲ್ತೆ ದೇಹಿಗಳ ದೇಹದೊಳಿದ್ದುರ್ವ-
ಶುಭಾಶುಭಂಗಳಂ ।
ತಾನೊಸೆದುಂಬಕಾಲದೊಳೆ ಸರ್ವ್ವಗತಂ ಸಕಳಾತ್ಮನೆಂಬರ- ।
ಜ್ಞಾನಿಗಳನ್ನನಾದಡೆ ಸದಾಶಿವನಲ್ಲನನಂತದುಃಖಿತಂ ॥ ೮೨ ॥

ಕಂ॥ ಒಂದಂದಂ ಧ್ಯಾನಂ ಮ- ।
ತ್ತೊಂದಂದಂ ಪ್ರತಿಮೆಯುಳಿದ ಸಮಯಿಗೆ ನೋಳ್ಪ- ॥
ದೆಂದುಂ ಧ್ಯಾನಮುಮಾಪ್ತನು- ।
ಮೊಂದಂದವು ಪಲವು ಭೇದಮಿಲ್ಲಾರ್ಹತದೊಳ್ ॥ ೮೩ ॥

ಶಿವನೊಂದು ಮೂರ್ತ್ತಿಯಂದಮ- ।
ನವಯುವದಿಂ ನೋಡಿಬಳಿಕೆ ನೆನೆಯಲ್ಕೇಳ್ಕುಂ ॥

---

೧. ಈ—೧ನೆಲಂ ಕುಡಿಯಲ್ಕೇ೧; ೨. ಇ—೨ಜ್ಞಂಟೇ ಬೆಙ್ರೆ೨;

ಶಿವನುಂ ಸಾಜಮೆ ಗಡಪೇ- ।
ಳ್ವಿವರಿಸಿ ನೆನೆವಂದಮಾವುದವನಂ ಭಕ್ತರ್ ॥ ೮೪ ॥

ಶಿವಶಿವಯೆಂಬುದು ಲೋಕಂ ।
ಶಿವಮೆಂಬುದು ಸುಖಮದಕ್ಕೆ ನೆಲೆಯೆನಿಪಾತಂ ॥
ಶಿವಬುದ್ಧಿಯೊಳಂ ಯೆಂಬರು ।
ಶಿವತತ್ವಜ್ಞರ್ಕ್ಕರಂ ವಿವೇಕವಿಹೀನರ್ ॥ ೮೫ ॥

ಧ್ಯಾನಿಪೊಡೆಲಿಂಗರೂಪಂ ।
ಧ್ಯಾನಿಪುದೋ ಪಂಚವಕ್ತ್ರಮಂ ದಶಭುಜಮಂ ॥
ಧ್ಯಾನಿಪುದೊ ನಾಟ್ಯರೂಪಂ ।
ಧ್ಯಾನಿಪುದೋತಸುಗಳೆಂಟುಮಂ ಧ್ಯಾನಿಪುದೊ ॥ ೮೬ ॥

ಪೆಂಡತಿವೆರಸಿದದೆಯ್ವಂ ।
ಪೆಂಡಿರ್ ಪೂಜಿಪಡೆ ಪೆಂಡಿರಲ್ಲದದೆಯ್ವಂ ॥
ಗಂಡಂಗಾಪ್ತಂ ಗೊರವರ ।
ತಂಡಕ್ಕಂ ಬೇಱೆಮೂರ್ತ್ತಿ ಮಾಹೇಶ್ವರರೊಳ್ ॥ ೮೭ ॥

ಪೆಂಡಿರ್ಗ್ಗಂ ಮಕ್ಕಳ್ಗಂ ।
ಗಂಡರ್ಗ್ಗಂ ತಪಸ್ವಿಯರ್ಗ್ಗವಾಪ್ತಂ ಧರಣೀ- ॥
ಮಂಡಳದೊಳ್ ಜಿನಬಿಂಬಮ- ।
ಖಂಡಿತಮೊಂದಂದದಿಂದಮಾಹರ್ತಮೆಸೆಗುಂ ॥ ೮೮ ॥

ದೇವಸ್ತುತಿ ಲೋಕಕ್ಕಖಿ- ।
ಳಾವನಿಯೊಳ್ಪಲವು ಭೇದಮಂತಲ್ತರ್ಹ- ॥
ದ್ದೇವಸ್ತುತಿಯೊಂದಂದಂ ।
ಭೂವಳಯದೊಳದಱನಾರ್ಹತಂತತ್ಸೇವ್ಯಂ ॥ ೮೯ ॥

ಏಡಿಸುವ ಮರುಳಪಡೆಯೊಡ- ।
ನಾಡುವ ದಿವಿಜರೊಳೆ ತೋಟಿಮಾಡುವ ಪಲವಂ ॥
ಬೇಡುವ ವಿಕಳನನಾಪ್ತಂ ।
ಮಾಡಿಮಗುಳ್ದಿಱಗಲಾಗದಱವುಳ್ಳಾತಂ ॥ ೯೦ ॥

ಅನುಪಮಗುಣನಖಿಳಜಗ- ।
ಜ್ಜನಹಿತಕರನೆನಿಸಿದಂ ಮಹಾದೇವಂ ದೈ- ॥
ತ್ಯನಿಕಾಯಮೆಲ್ಲಮಂ ಕೊ- ।
ಲ್ವನಣಂ ಮಾದೇವನಲ್ಲ ಸುಭಟರ ದೇವಂ ॥ ೯೧ ॥

ಶಂಕರನಖಿಳಜಗಕ್ಕಂ ।
ಶಂಕರನೆನೆಸಂದನಪ್ಪನನಿತುಮನಳಿವಂ ॥
ಶಂಕರನಲ್ಲಂ ಲೋಕ ಭ- ।
ಯಂಕರನಾಹೆಸರ್ಗೆತಕ್ಕನಲ್ಲನವಶ್ಯಂ ॥ ೯೨ ॥

ರಾಗದ್ವೇಷ ವಿವರ್ಜ್ಜಿತ- ।
ನಾಗಿರ್ದನುದೆಯ್ವಮೆಂಬರಗಜೆಯುಮೆಯ್ಯೊಳ್ ॥
ರಾಗಂ ದೈತ್ಯರದೆಸೆಯಿಂ- ।
ದಾಗಿಕ್ಕುಂದ್ವೇಷಮೆರಡುಮೀಶಂಗೆ ನಿಜಂ ॥ ೯೩ ॥

ಪಾದದ ಬೆಳ್ಳಿಯನೊಂದಿನಿ- ।
ಸೂದಲೊಡಂ ತನ್ನ ಸಾಜಮಂ ತೋಱುವವೋ- ॥
ಲ್ಮಾದೇವನೆಂದು ಪರಿಕಿಪೊ- ।
ಡಾದೈತ್ಯರನಳಿದನೆಂಬುದದೆಂಬದಿಕ್ಕುಂ ॥ ೯೪ ॥

ವೃ॥ ಮೊದಲಿಂದಂ ಮೃಡನರ್ದ್ಧನಾರಿನೃಪಶಿರೋಮಾಳಾ-
ಧರಂ ಚರ್ಮ್ಮಮಂ ।
ಪೊದೆದಿರ್ಪ್ಪಂ ಜಗಮೆಲ್ಲಮಂ ಸುಡುವನುಣ್ಬಂ-
ಸುತ್ತಿಯೊಳ್ಮತ್ತಮಾ- ।
ಡದ ಗೊಡ್ಡಂಗಳನಾಡುತಿರ್ಪ್ಪನೆನುತಂ-
ಬಣ್ಣಿಪ್ಪುದಂ ಕೇಳ್ವನ- ।
ಲ್ಲದೆ ಸನ್ಮಾರ್ಗ್ಗದೆ ಮುಕ್ತಿಗೆಯ್ದಿದುದನೆಂತುಂ-
ಕೇಳ್ವೆವಿಲ್ಲೆಲ್ಲಿಯುಂ ॥ ೯೫ ॥

ಪರಮಜ್ಞಾನಾತ್ಮಕಂ ಶಂಕರನಘಹರಣಂ-
ಮೋಕ್ಷಲಕ್ಷ್ಮೀಪ್ರದಂ ಮು- ।
ಕ್ತಿರಮಾಕಾಂತಂ ಕೃತಾಂತಾಂತಕನನಘನನಂಗಾ-
ಪಹಂ ನೋಷದೂರಂ।

ಪರಮಾನಂದಂ ತ್ರಿಲೋಕೀಪತಿಗುಣನಿಧಿ-
ಸರ್ವ್ವಜ್ಞನೆಂಬೀಪೆಸರ್ದೆ- ।
ವರದೇವಂ ಶ್ರೀಜಿನೇಂದ್ರಂಗಮಗುರ್-
ಮುಳಿದರೊಳ್ಪತ್ತವಿಂತಪ್ಪನಾಮಂ ॥ ೯೬ ॥

ಕಂ॥ ಪರಮೇಶ್ವರನನಘಂ ಜ್ಞಾ- ।
ನರೂಪನೆಂದಿಟ್ಟು ಕಟ್ಟಿಕೊಂಡೇನಾನುಂ ॥
ನರರಱಿಯರೆಂಗುವಕ್ಕಟ ।
ಮರುಳರಸಂ ರುದ್ರನಲ್ಲನನ್ನನವಶ್ಯಂ ॥ ೯೭ ॥

ಆನಂದಮೂರ್ತ್ತಿಯೆಂದ- ।
ಜ್ಞಾನಿಗಳಾರ್ತ್ತದೊಳೆ ಬೇವನಂ ಬಣ್ಣಿಪರೊ- ॥
ಲ್ದಾನಂದಮೂರ್ತ್ತಿಯೆಂಬಭಿ- ।
ಧಾನಂ ಜಿನನಲ್ಲದವರೊಳೇಂ ಸಂದಪುದೆ ॥ ೯೮ ॥

ಭವಮೆಂಬುದು ಸಂಸಾರ- ।
ಕ್ಕವಿಶೇಷಂ ನಾಮಮುದಱಿಪೆಸರ್ಗೊಂಡಾತಂ ॥
ಶಿವನಲ್ಲಂ ಜಿನನೆಸೆದಾ ।
ಶಿವನಾನಂದ ಸ್ವರೂಪನಪ್ಪುದಱಿಂದಂ ॥ ೯೯ ॥

ಪರಮಜ್ಞಾನಮಯಂ ಶಂ- ।
ಕರನಭವಂ ಲೋಕವಂದ್ಯನೆನುತಂ ಮೂಢಂ ॥
ಮರುಳೊಡನೆ ಕೂಡಿಯಾಡುವ ।
ಮರುಳಂ ಪುರುಳಾಗೆ ಮಾಡಿ ಕೊಂಡೊಲ್ದಪರ್ ॥ ೧೦೦ ॥

ನಿಶಿತಪ್ರಜ್ಞೆಯಿನಭವಂ ।
ವಿಶೇಷಗುಣಯುಕ್ತನಾಪ್ತನೆಂದಱಿಯದವ- ॥
ರ್ಪ್ಪಸು[1]ಗಳವರ್ಗಧಿಪನಾಗಿಯೆ ।
ಪಸು[2]ಪತಿಯೆನೆರುದ್ರನಿಂತು ರೂಢಿಗೆ ಸಂದಂ ॥ ೧೦೧ ॥

ಗೌರೀಪತಿ ಶಲ್ಯಧರಂ ।
ಭೈರವನಹಿಧಾರಿ ಲೋಕಮಂ ಸುಡುವಂ ದೈ- ॥

---

೧. ಇ—ಶು; ೨. ಇ—ಶು;

ತ್ಯಾರಿಸದಾಶಿವನಲ್ಲ ವಿ- ।
ಚಾರಿಸೆ ಬೇಱಿರ್ೋವ್ವರ್ನೆಂಬರೆಲ್ಲಿದನಾತಂ ॥ ೧೦೨ ॥

ಇದ್ದೆಡೆಯಱಿದಾಗಮದಿಂ ।
ಪೊದ್ದುವುದೋಲಗಿಪುದಾಪ್ತನಂ ಜೈನಂ ತ- ॥
ನ್ನಿರ್ದ್ದೆಡೆಯುಮನಾ ಈಶ್ವರ- ।
ನಿರ್ದ್ದೆಡೆಯುಮನಱಿಯರೆಂಬರೆಂತೋಲಗಿಪರ್ ॥ ೧೦೩ ॥

ಮನದೊಳ್ ಘೋ[೧]ಳಾ ಘೋ[೨]ಳಾ- ।
ಯೆನುತಿರ್ದ್ದಡೆ ಸಾಲ್ಗುಮಾಪ್ತನಿಂತಪ್ಪವನೆಂ- ॥
ದನಿಶಂ ಚಿಂತಿಸವೇಡಾ- ।
ತನುಭಕ್ತರನಱಿದು ಪೊರೆವನೆಂಬಮೂರ್ಖರ್ ॥ ೧೦೪ ॥

ಹರಿಯುಂ ಪಂಕಜಭವನುಂ ।
ಪರಮೇಶನನಿನ್ನುಮಱಿಯರೆಂದೊಡೆಮತ್ತೀ ॥
ನರರೆತ್ತಱಿದಪರೆಂಬ ।
ಪ್ಪರಮನನಱಿಯದೊಡೆ ಪೂಜಿಸಿದಪರೆ ಕೊರಡಂ ॥ ೧೦೫ ॥

ಸರಸಿಜಭವಾದಿ ಸುರರುಂ ।
ಗಿರಿಶನ ಗುಣಗಣಮನಱಿಯರಭಿವರ್ಣ್ಣಿಸಲೆಂ- ॥
ಬರ ಮಾತು ತಕ್ಕುದೆಂತೆನೆ ।
ಗಿರಿಶಂಗೊಳ್ಗುಣಮದೇನುಮಿಲ್ಲಪ್ಪುದಱಿಂ ॥ ೧೦೬ ॥

ವೃ॥ ಕರದೊಳ್ ಶೂಲಮುಮಂ ವಿಷೋರಗಮುಮಂ-
ಭಾಳಾಕ್ಷಿಯೊಳ್ಕೂಡೆದ- ।
ಳ್ಪುರಿಯಂ ತಾಳ್ದಿಮಹೋಗ್ರನೆಂಬ ಪೆಸರಂ ಕೈಕೊಂಡನಂ-
ಪೊರ್ದ್ದಿರಬಿ- ।
ತ್ತರದಿಂ ನಿತ್ತರಿಸಲ್ಕೆಬಾರದೆನುತಂ ನಿಶ್ಚಯಿಸಿ ಬಿಟ್ಟುಂ ಜಿನೇ- ।
ಶ್ವರನಂ ಶಂಕರನಂ ಗುಣಾಕರನನತ್ಯಾನಂದದಿಂ-
ಪೊರ್ದ್ದುವರ್ ॥ ೧೦೭ ॥

ಕಂ॥ ಶಾಂತಾತ್ಮನ ನುಡಿಗಳ್ಕಿವಿ- ।
ಯಂ ತಣಿಪುಗುವೆಸಕಮಖಿಳಜನ ಹಿತಕರಮೆಂ- ॥

---

೧. ಇ—ಘೇ; ೨. ಇ—ಘೀ;

ದಿಂತುತಿಳಿದೋಲಗಿಪ್ಪುದ- ।
ನಂತಸುಖಾಸ್ಪದಮನೋಲ್ವನಾಪ್ತನ ಗುಣಮಂ ॥ ೧೦೮ ॥
ಸರಸಿಜಭವಂಗೆ ವಿಷ್ಣುಗೆ ।
ಸರಸಿಜಮಿತ್ರಂಗೆ ಸಿಖಿಗೆ ಚಂಡಿಕೆಗೀತಂ ॥
ಗುರುದಯ್ವಮೆಂಬರವರೆಲೆ ।
ಗಿರಿಶನುಮೋಲಗಿಪನೆಂಬರಾರೋದೈವಂ ॥ ೧೦೯ ॥
ಕಮಳಭವಂ ಕಾಲ್ಗರ್ಚಿದ ।
ಕಮಂಡಲೋದಕಮೆ ವಿಷ್ಣುಪಾದದಿನಿಳಿತಂ- ॥
ದಮರ ನದಿಯಾದುದೇದೂ- ।
ಳ್ವಮಹಾತ್ಮರ ಬಾಯ್ಗೆ ಮುಚ್ಚುಳಪ್ಪರೆ ಚದುರರ್ ॥ ೧೧೦ ॥
ವೃ॥ (*ದುರುಜಟಿ ಧೂರ್ಜ್ಜಟಿಯೆನುತಧೂರ್ಜ್ಜಟಿಯಿಂ-
ತೆನುತುಂತೆ ಬ್ರಹ್ಮನುಂ ।)
ಪಿರಿದೆನಿಸಿರ್ದ್ದ ಭಕ್ತಿಯೊಳು ವಿಷ್ಣುಮನೆಯ್ದೆ-
ಸಹಸ್ರನಾಮದಿಂ ।
ಗಿರಿಸುತೆನಿಚ್ಚಲುಂ ಸ್ತುತಿಯಿಸುತ್ತಿರಲೀಶನಿನಿತ್ತು-
ವೇಳ್ಕುಮೆ ।
ಹರಿಹರರಾಮರಾಮಯೆನೆ ನಾಮಸಹಸ್ರ-
ಮನೋದಿದಾಫಲಂ ।
ದೊರೆಕೊಳಲಾರ್ಕ್ಕುಮೆಂದನೆನುತಂ ಸಲೆಬಣ್ಣಿಪರೀಗ-
ವೈಷ್ಣವರ್ ॥ ೧೧೧ ॥
ಕಂ॥ ಹರಿತನ್ನಯ ಕಣ್ಣಂ ಕಳೆ- ।
ದು ರುದ್ರನಂ ಪೂಜಿಸಿದಡೆ ಕಣ್ಣುಮನಿತ್ತಂ ॥
ಹರನೊಸೆದು ಚಕ್ರಮಂ ಕೂ- ।
ರ್ತ್ತಿರದಿತ್ತಂ ವಿಷ್ಣುಗೆಂಬರಾ ಶಿವಭಕ್ತರ್ ॥ ೧೧೨ ॥
ಗಿರಿಶಂ ಸ್ತುತಿಯಿಸಿದಂ ದಿನ- ।
ಕರನಂ ದಿನಕರಸಹಸ್ರನಾಮದಿನವನಾ- ॥

* 'ಈ' ಪ್ರತಿಯಲ್ಲಿ ಈ ಸಾಲು ಇಲ್ಲ. ಅ, ಆ, ಇ—ಪ್ರತಿಗಳಲ್ಲಿ ಬಂದಿರುವ ಈ ಸಾಲು ಯಾವದೋ ಪದ್ಯದ ಒಂದೇ ಸಾಲೆಂದು ಕಾಣುತ್ತದೆ.

ಗಿರಿಜೆಗೆ ಕಲಿಸಿದನೆಂಬರು ।
ಸರಸಿಜಮಿತ್ರನುಮನೀಶನಾರಾಧಿಪನೇ ॥ ೧೧೩ ॥

ಮೊದಲೊಳ್ಮನ್ನಂ ಪೊಡೆವಡು- ।
ವುದು ಸೂರ್ಯ್ಯಂಗಿಪ್ಪದೇವತಾರಾಧನೆ ಮಾ- ॥
ಳ್ಪುದು ಬಳಿಕವೆಂದುಪೇಳ್ದಂ- ।
ದದಿನೀಶನ ಮತದೆ ಶೈವರೆಲ್ಲಂ ನೆಗಳ್ವರ್ ॥ ೧೧೪ ॥

ಶೌರಾರಾಧನೆಯುಂ ಕೌ್ರಂ- ।
ಚಾರಿಗೆ ತಿಳಿವಂತು ಶೌರಸಂಹಿತೆಯುಂ ವಿ- ॥
ಸ್ತಾರದೆ ಪೇಳ್ದಂ ಕ್ರಮದಿಂ ।
ಗೌರೀಪತಿಯೆಂದು ಶೈವರೆಲ್ಲಂ ನುಡಿವರ್ ॥ ೧೧೫ ॥

ವೇದಂ ಸ್ವಯಂಭುವಲ್ಲಾ ।
ವೇದಮನೀಶ್ವರನೆ ಪೇಳ್ದನೆಂಬರ್ಮೊದಲೊ- ॥
ಳ್ವೇದದಕಿಚ್ಚನೆ ಪೊಗಳ್ವುದು ।
ಮಾದೇವಂಗಿಪ್ಪ ದಯ್ವಮುಂ ಕಿಚ್ಚಕ್ಕುಂ ॥ ೧೧೬ ॥

ಮುರಹರ ಸರಸಿಜಭವ ರು- ।
ದ್ರನುಮೀಶ್ವರನುಂ ಸದಾಶಿವಂ ಬೆರಸಿಂತ- ॥
ಯ್ವರುಮೊಂದಿಪ್ಪರ್ಚಿ್ರಂಡಿಯು ।
ಚರಣಂಗಳ ಮೊದಲೊಳೆಂದು ಕೌಳರ್ಪೇಳ್ದರ್ ॥ ೧೧೭ ॥

ದೇವರ್ಕಳಾದರೆಲ್ಲಂ ।
ಸೇವಿಪರೀಶ್ವರನನೆಂಬರವರನೆ ಮತ್ತಂ ॥
ಸೇವಿಪರೀಶ್ವರನೆಂಬ- ।
ರ್ದೇವಂ ಸೇವಕರ್ಗೆ ತಾನುಮೇಂ ಸೇವಕನೇ ॥ ೧೧೮ ॥

ಬಲ್ಲಿದ ದೇವರ್ಕಳ್ನೆರ- ।
ದೆಲ್ಲಂ ಬಂದೆಮ್ಮದೇವರಂ ಸೇವಿಪರೆಂ- ॥
ದಲ್ಲಲ್ಲಿಗೆಂಬರರುಹನ- ।
ದೆಲ್ಲಿಯುಮೋಲಗಿಪನೆಂಬುದಂ ಕೇಳ್ದರಿಯೆಂ ॥ ೧೧೯ ॥

ವೃ॥ ಶ್ರೀಯುಂ ಚಕ್ರಿಗೆ ದೇವರಾಜಪದಮಂ ಶಕ್ರಂಗೆತೇಜೋಧಿಕ- ।
ಶ್ರೀಯುಂ ತೀವ್ರಕರಂಗೆ ಬುದ್ಧಿಯೊದವಂ ಬುದ್ಧಂಗೆ ರಾಜದ್ವಚ- ।

ಶ್ರೀಯಂ ವಾಕ್ಪತಿಗಿತ್ತನೆಂದು ಪೊಗಳ್ವಗೌರೀಶನಂ-
ನಿರ್ವೃತಿ-।
ಶ್ರೀಯೊಳ್ನಿಂದ ಜಿನಂಗೆ ಕೊಟ್ಟುದನೆ ಕೇಳಲ್ಪಂ-
ದುದಿಲ್ಲೆಲ್ಲಿಯುಂ ॥ ೧೨೦ ॥

ಕಂ॥ ತ್ರಿಗುಣಾತ್ಮನದೇನಂ ಮಾ- ।
ಡುಗುಮಮಿತಗುಣಾಂಬುರಾಸಿ ಜಿನನಾಥನೆಮಾ- ॥
ಡುಗು ಗುಣಮುಮಂ ವಂ- ।
ದಿಗೆ ಸತ್ತ್ವರಜಸ್ತಮಂಗಳಂ ವೀತರಾಗನಭವನುಮೀಗುಂ ॥ ೧೨೧ ॥

ಮಾಂಗಲ್ಯನಿಳಯನಪ್ಪನು ।
ಮಾಂಗಲ್ಯಪ್ರದನೆನಿಕ್ಕುಮಾಶ್ರಿತರ್ಗೆಂತುಂ ॥
ಮಾಂಗಲ್ಯಪ್ರದನಲ್ಲನ।
ಮಾಂಗಲ್ಯಚರಿತ್ರನೆನಿಪ ಗೋಸನೆವೋದಂ ॥ ೧೨೨ ॥

ಮಂಗಳಮನೊಸೆದುಮಾಳ್ಪನ ।
ಮಂಗಳನೆನಿಸಿದ್ದುಮುಗ್ರನೆಂಬತ್ತಾರ್ಗಂ ಬೀ- ॥
ಳ್ವಂಗಡಲೋಗರನುದ್ಧರಿ- ।
ವೆಂ ಗಡ ಕೆಡೆಬೀಳ್ವರೆಂಬರೆಂಬಂತಿಕ್ಕುಂ ॥ ೧೨೩ ॥

ಕೋಪಪ್ರಸಾದಮೆಂಬಿವೆ ।
ಶಾಪಾನುಗ್ರಹ ಸಮರ್ತ್ಥಮಾಗಲೆವೇಳ್ಕುಂ ॥
ಕೋಪಪ್ರಸಾದವಿಲ್ಲದ ।
ಕಾಪುರುಷಂ ದೇವನಲ್ಲನೆಂಬಮೂರ್ಖರ್ ॥ ೧೨೪ ॥

ಗಿರಿಶಂ ತನ್ನಂ ಪೂಜಿಪ ।
ಗೊರವರಿಗೊಲ್ದಿತ್ತು ಮಾಳ್ಪುದಕ್ಕೆಮಮುಳಿದಾ ॥
ಗೊರವರ ಸಾಪಿಸೆ ದುಃಖದೆ ।
ಪೊರಳುತ್ತಿರ್ದ್ದಂಗಡಕ್ಕಟಾದುರಿತಹರಂ ॥ ೧೨೫ ॥

ಕಲುಷದೆ ಶಾಪಿಸೆತಾಂ ಭಿ- ।
ನ್ನಲಿಂಗಿಯಾಗಿರ್ದ್ದನೀಶನೆಂಬರ್ಮೂರ್ತ್ತಂ ॥
ತೆಲೆಬೆನಕನುಂ ಕುಮಾರನು- ।
ಮಲಿಂಗಿಗೆಂತಾದರಘಟಮೋಶೈವಮತಂ ॥ ೧೨೬ ॥

ಉರಿದಪನೀಶನದೋರ್ವ್ವನ ।
ಗೊರವನ ಶಾಪದಿನೆನುತ್ತವಸುಧಾರೆಯನಾ- ॥
ದರದಿಂ ಕಟ್ಟಿಸುವರ್ಬ್ಬಡ ।
ಗೊರವರ ಶಾಪದೊಳೆ ಬೇವನಾಪ್ತನುಮಲ್ಲಂ ॥ ೧೨೭ ॥

ಲೋಗರು ಮಾಡಿದಪಾಪಮ- ।
ನಾಗಡೆ ಗಡಕಳವರುದ್ರನುಂ ಬ್ರಹ್ಮಘ್ನಾ-॥
ಪೋಗೆಂದು ಸುರರುಮೆಂದಡೆ ।
ಪೋಗಿ ತೊಳಲ್ದಂ ಗಡಕ್ಕಟಾದುರಿತಹರಂ ॥ ೧೨೮ ॥

ಲಿಂಗಂ ತನಗಿಲ್ಲದನ- ।
ರ್ದ್ಧಾಂಗದೊಳಗಸುತೆಯನೇಕೆ ತಾಳ್ದಿದನಂತಾ ॥
ಗಂಗೆಯುಮಂ ಪೊತ್ತಿರ್ದ್ದಪ- ।
ನಂಗಜಹರನೆನಿಸಿಕೊಳ್ವನಂತದು ವ್ಯರ್ಥಂ ॥ ೧೨೯ ॥

ಪುಸಿದಂ ಮಹೇಶ್ವರಂ ಗೂ- ।
ರ್ವ್ವಸಿಯೊಳ್ಮಱೆವಾಳ್ದನಾತ್ಮಜಾತಿಯೊಳಿರಲಾ- ॥
ಟಿಸಿದಂ ಶಾಪಂ ಚಿತ್ತಂ ।
ವಿಸರುಹಭವನಾಪ್ತನೆನಲಿವೇಡಱಿವಾತಂ ॥ ೧೩೦ ॥

ಮೃಡನಿಂ ತನ್ನಯ ತಲೆಯುಂ ।
ಕಡಿಪಡೆದಂ ಮರೆಯರೂಪಿನಿಂ ತನುಜೆಗೆಸೋ- ॥
ಲ್ತೊಡವರ್ದ್ದಂ ನಾಣಿಲಿ ನಿ- ।
[1]ಗ್ಗಡಿ[1] ನಿಜದಿನಪೂಜ್ಯನಾಪ್ತನೆನಲಾಗಱಿವಂ ॥ ೧೩೧ ॥

ಹರನ ವಿವಾಹೋತ್ಸವದೊಳ್ ।
ಗಿರಿಜೆಯ ಮೆಯಿಸೋಂಕೆ ಹರುಷದಿಂದಂ ವೀರ್ಯ್ಯ- ॥
ಕ್ಷರಣಂ ದೊರೆಕೊಳೆ ಸಿಗ್ಗಿಂ- ।
ದೊರಸಿದನಾಪ್ತನೆನಲಾಗದಱಿವುಳ್ಳಾತಂ ॥ ೧೩೨ ॥

ಜಗಮುಂ ಪೂಳ್ವಂ ಗಡ ಪ- ।
ದ್ಮಗರ್ಬ್ಭನಂತನಿತು ಶಕ್ತಿಯುಳ್ಳಂ ತಾನೇ- ॥

---

೧. ಙ—೧ಗ್ಗುಣಿ೧;

ಕೆ ಗಡಂ ನಿಜಶಿರಮಂ ಕಿ- ।
ತ್ತುಗೆಯೆತ್ತಿದ ಮೃಡನನಿನಿಸುಮಾಣಿಸಲಾಱಿಂ ॥ ೧೩೨ ॥
ಜಗಮಂ ಗಡಮಾಡಿದ ಪ- ।
ದ್ಮಗರ್ಭನೊಂದಕ್ಕೆ ಮುಟ್ಟುವಲ್ಲದೆ ಪೋದಂ ॥
ಮಿಗೆ ಹರಿಹರರುಂ ಮತ್ತು- ।
ರ್ವ್ವಿಗೆ ಪಲರುಂ ದೇವರಾಗಿ ನಿಂದರದೆಂತೋ ॥ ೧೩೪ ॥
ಪರಮೇಷ್ಠಿ ಜಗಜ್ಜನಕಂ ।
ಗುರುವಿಮಳ ವಚೋಭಿರಾಮವರಚತುರಾಸ್ಯಂ ॥
ಪರಮಬ್ರಹ್ಮಂ ಮತ್ತಿನ- ।
ದರ ಉರಿಗಂ ಬ್ರಹ್ಮನಲ್ಲ ಸಂಚಿತ ಕರ್ಮ್ಮಂ ॥ ೧೩೫ ॥
ಮೀನಾದನೆ ಸುಡುಪಾದಂ ।
ಮಾನವ ಕೇಸರಿಯುಮಾಗಿ ಪಂದಿಯುಮಾದಂ ॥
ದಾನವರಂ ಕೊಲಲೆನಿಪ- ।
ಜ್ಞಾನಿಯನಾಪ್ತನೆನಲಾಗದಱಿವುಳ್ಳಾತಂ ॥ ೧೩೬ ॥
ವೃ॥ ಅನುಮಿಷ ಕೂರ್ಮ್ಮಶೂಕರನೃಕೇಸರಿ ವಾಮನ-
ರಾಮರಾಮ ರಾ- ।
ಮನೃಪಸಮಂತಭದ್ರಮುನಿಕಲ್ಕಿಗಳೆಂಬಿವು ಪತ್ತಿಸುತ್ತಿರ- ।
ಲ್ವನರುಹನಾಭನಂ ತರದೆ ಕೇಸರಿಮೂರ್ತ್ತಿಯ-
ದೆಂದು ಕೂಡೆಭೂ- ।
ಜನಮುದನರ್ಚ್ಚಿಕುಂ ಪರಮನೆಂದಭಿಧಾನಮು-
ನಿಟ್ಟುಮೋಹದಿಂ ॥ ೧೩೭ ॥
ಕಂ॥ ಮುರರಿಪುಗೆ ಸೂಳುಸೂಳೊಳೆ ।
ಬರೆಕರದೊಳು ಶಂಖಚಕ್ರಮುದ್ಗರಪದ್ಮಂ ॥
ಪರಿವಡಿಯಿಂ ಪೆಸರ್ಗಳ್ಪ- ।
ನ್ನೆರಡಾದವು ಮೂರ್ತ್ತಿಭೇದಮಾವೈಷ್ಣವರೊಳ್ ॥ ೧೩೮ ॥
ಒರಿಸದ ಮಾಸಂಗಳ್ ಪ- ।
ನ್ನೆರಡಱೊಳಂ ಕ್ರಮದೆ ವಿಷ್ಣುಗಕ್ಕುಂ ಗಡಪ- ॥
ನ್ನೆರಡು ಪೆಸರೇಕರೂಪಂ ।
ಹರಿನಾಮಕ್ಕಿಲ್ಲ ಬಗೆವೊಡಿಂತುಟೆ ನಿರುತಂ ॥ ೧೩೯ ॥

ಚಕ್ರಧರ ಪ್ರತಿಕೃತಿಗಳ |
ಚಕ್ರಾಂಕಿತಮಪ್ಪಚಿಕ್ಕಕ[1]ಲ್ಲೆಂಬಬುಧರ್- ॥
ಚಕ್ರದ ಮೂರ್ಧಸ್ಸರ್ತ್ಪಥ|
ವಕ್ರವರ್ತ್ಮತ್ತೊಂದು ಗುಂಡುಮಂ ಹರಿಯೆಂಬರ್ ॥ ೧೪೦ ॥

ಪಿರಿದಪ್ಪುದೊಂದು ನಿದ್ರೆಯು |
ಭರದಿಂ ಸರನಿಧಿಯೊಳೊಂದಿ ಪಾವಿನ[2]ಪಸೆ[2]ಯೊ॥
ಳ್ಕೊ[3]ರೆವುತ್ತ ನಾಲ್ಕು ತಿಂಗ- |
ಳ್ವರೆಗಂ ಪಟ್ಟಿರ್ಪನಾಪ್ತನೆನಲಾಗಱಿವಂ ॥ ೧೪೧ ॥

ತಾಂ ಕೊಲಲಾಱಿದೆಯುಂ ಮುಳಿ- |
ಸಿಂ ಕೌರವ ಬಲಮನಂದು ವೆಳೆತನಂಗೊಂ- ॥
ಡುಂ ಕೌಂತೇಯರಿನಾಬಲ- |
ಮಂ ಕೊಲಿಸಿದನಾಪ್ತನಪ್ಪನೆನಲಾಗಱಿವಂ ॥ ೧೪೨ ॥

ಬಸುಱೊಳಗೆ ಬೈತುಹರಿ ರ- |
ಕ್ಷಿಸುವಂ ಗಡ ಜಗಮನಸುರರಲ್ಲಿರದೇನೊಂ- ॥
ದೆಸೆಯೊಳು ಪೋಗಿರ್ದ್ದರೆ ಪೇ- |
ಳ್ಮಸಗಿಕೊಲಲ್ತಕ್ಕುದೇ ಶರಣ್ಪೊಕ್ಕವರಂ ॥ ೧೪೩ ॥

ಧರೆಗೊಡೆಯಂ ಚಕ್ರೇಶಂ |
ತಿರಿವನೆ ಬಲಿಯುಲ್ಲಿ ಬೇಡಿ ಮೂಱಡಿನೆಲನಂ ॥
ಸಿರಿಯೊಡೆಯಂ ಕೀಳಾಳಾ- |
ಗಿರಲಱಿವನೆ ಪರಿಸುತಂ ಕಿರೀಟಿಯರಥಮಂ ॥ ೧೪೪ ॥

ಜಾನಿಪಡೆ ಚತುರ್ಭುಜಮಂ |
ಜಾನಿಪುದೋಮೇಣ್ದಶಾವತಾರದರೂಪಂ ॥
ಜಾನಿಪುದೊ ಯೋಗಯುತನಂ |
ಜಾನಿಪುದೋ ಜಳಧಿಶಯನನಂ ಜಾನಿಪುದೋ ॥ ೧೪೫ ॥

---

೧. ಇ—ವ; ೨. ಇ—ಪೆರೆ; ೩. ಇ—ಳ್ಕೊ;

ಎಣಿಕೆಯ ಪದಿನಱುಸಾಸಿರ ।
ಗಣಿಕೆಯರೊಳ್ಸೆರೆವ ಮೂರ್ತಿಯಂ ಧ್ಯಾನಿಪುದೋ ॥
ತ್ರಿಣಯನನೆರ್ದೆಯೊಳ್ನೆಲಸಿ- ।
ರ್ಪ್ಪಣಕದ ಮೂರ್ತಿಯನೆ ವೈಷ್ಣವಂ ಧ್ಯಾನಿಪುದೋ ॥ ೧೪೬ ॥

ಅಸುರರ^೧ರೆಯುಟ್ಟಿ ಕಡುಮುಳಿ- ।
ದಸುರರನಿಱಿದೊಂದು ಮೂರ್ತಿಯಂ ಧ್ಯಾನಿಪುದೊ ॥
ಮಸಗಿಧನಂಜಯರಥಮುಮ- ।
ನೆಸಗುವ ಮೂರ್ತಿಯನೆ ವೈಷ್ಣವಂ ಧ್ಯಾನಿಪುದೊ ॥ ೧೪೭ ॥

ಆ ಮಾಧವನಂ ಶಾಲ- ।
ಗ್ರಾಮಂ ಶಿವನಾಭಿಯೆಂಬ ಕಿಱುಗಲ್ಗಳೊಳಂ ॥
ಪ್ರೇಮದಿನಂ ಜಾನಿಸುವುದೊ ।
ಕಾಮಿಸಿ ಜಾನಿಸುವವಂಗದಾವುದೊ ಲಕ್ಷಂ ॥ ೧೪೮ ॥

ನರಸಿಂಹನೆಂಬ ನಾಮಂ ।
ಪರಿಕಿಸುವಡೆ ಪುರುಷ ಸಿಂಹನೆಂಬಂದಮದಂ ॥
ನರರಜ್ಞಾನದೆ ಹರಿಕೇ- ।
ಸರಿವದನನುಮಾದನೆಂಬರದು ಕೂಡುಗುಮೆ ॥ ೧೪೯ ॥

ಪರಿಕಿಸಿ ಮೂಱುಂಲೋಕದ ।
ಪುರುಷರೊಳುತ್ತಮನೆನಿಪ್ಪ ಪೆರ್ಮೆಯನಾತಂ ॥
ಪುರುಷೋತ್ತಮನಲ್ಲದೆ ಕಾ- ।
ಪುರುಷೋತ್ತಮ ಕುಟಿಳವೃತ್ತಿಯೊಳ್ತಾನೆಸಪಂ ॥ ೧೫೦ ॥

ಅಚ್ಯುತ ಸುಖಾಸ್ಪದಂ ಕ- ।
ರ್ಮ್ಮಚ್ಯುತನಖಿಳಾಮರೇಂದ್ರ ಸಂಸ್ತುತ್ಯಂತಾ- ॥
ನಚ್ಯುತನೆಂಬುದು ಸುಖಿಗಳು- ।
ಮಚ್ಯುತನೆನಲಾಗ ಸಾವಪುಟ್ಟುವನರನಂ ॥ ೧೫೧ ॥

ಬಲಿಯಂ ಕಟ್ಟಿದನಸುರರ ।
ಬಲಮೆಲ್ಲಮನಳಿದನೆಯ್ದೆ ನೆಲನಂ ಪೊತ್ತಂ ॥

---

೧. ಇ—ಸೆ;

ಸಲೆಪಾರ್ವ್ವರ ಕಾರುಣ್ಯದೆ ।
ಬಲದಿಂದಾನೆಂದು ವಿಷ್ಣುವಂ ಪೊಡೆವಡುವಂ ॥ ೧೫೨ ॥

ವೃ॥ ಸವಳದೆ ಬೇಳ್ಪವಂಗೆ ಸುರಸಾನ್ನಮನಿಕ್ಕುವವಂಗೆ ವೇದತ- ।
ತ್ವವ ನೆಱೆಬಲ್ಲವಂಗೆ ಪತಿಭಕ್ತೆ[೧]ಗೆ ಮಾಸಸಹಸ್ರಜೀವಿತ- ।
ಗ್ಗ್ರವಯುವದಿಂದೆ ತಿಂಗಳುಪವಾಸಮನಿಂಬಿನೆ-
ಮಾಳ್ಪವಂಗೆಮಾ- ।
ಧವನತಿಭಕ್ತಿಯಿಂದೆಱಗುವಂ ಗಡ ಕೇಳಿಮಿದಾಪ್ತ-
ಲಕ್ಷಣಂ ॥ ೧೫೩ ॥

ಕಂ॥ ಆದಿತ್ಯ ಹೃದಯುವಂ ನೀ- ।
ನೋದುವುದೆಂದಜ್ಜುರ್ನನಂಗೆ ನಾರಾಯಣನ- ॥
ತ್ಯಾದರದೆ ಪೇಳ್ವನೆಂದದ- ।
ನೋದುವರೆಲೆ ಕೃಷ್ಣನರ್ಕ್ಕನಂ ಸ್ತುತಿಯಿಪನೇ ॥ ೧೫೪ ॥

ದೇವಕಿಗೋಪಿಗವಾವಸು- ।
ದೇವಂಗಂ ಪುಟ್ಟಿದೇವಕೀಸುತನಾದಂ ॥
ಶ್ರೀವಾಸುದೇವನಾದಂ ।
ಭೂವಳಯದೊಳಿದುವೆ ಸಿದ್ಧಮಜನೆಂತಾದಂ ॥ ೧೫೫ ॥

ಪದಿನಾಱು ಸಾಸಿರಂ ಮೇ- ।
ಣ್ಸದತಿಯರಂ ಸೂಱೆಗೊಟ್ಟು ಕೃಷ್ಣಂ ಕಡೆಯೊ- ॥
ಳ್ಪದತಳಮನೆ ನಡೆ....ಪೊಂ- ।
ದಿದನೆಂಬರ್ವ್ವಿಷ್ಣುಭಕ್ತರದಱೆನನಾಪ್ತಂ ॥ ೧೫೬ ॥

ವಸುದೇವನತನಯುಂ ಕ್ಷೀ- ।
ರಸಮುದ್ರನಿವಾಸಿ ನರನ ತೇರೆಸಗುವನ- ॥
ಲ್ಲಸುರಧ್ವಂಸಿಯುಋ ಮತ್ತೊಂ- ।
ದೆಸೆಯೊಳು ಹರಿಯಿಪ್ಪನೆಂಬರೆಲ್ಲಿದನಾತಂ ॥ ೧೫೭ ॥

ಹರಿಹರರಂ ಪೂಜಿಪ ಭ- ।
ಕ್ತರೆಲ್ಲಮುವರಿರ್ದ್ದತಾಣಮುಂ ಪಿರಿದಾನುಂ ॥

೧. ಈ—ಕ್ತೆ;

ಪರಿಕಿಸಲೊಲ್ಲಕ್ಕೆಲಮನೆ ।
ಪರಿಪರಿದೋಲಗಿಸುತಿರ್ಪ್ಪರಱಿವಿಲ್ಲದವರ್ ॥ ೧೫೮ ॥

ಮುಂದೆ ಜಿನೇಶ್ವರರಾದಪ- ।
ರೆಂದಿದನಿಂಬಾಗಿ ತಿಳಿದು ಹರಿಹರರಂ ನಿ- ॥
ಸ್ಸಂದೇಹವಾಗಿ **ಪೂಜಿಸು** ।
ವಂದಿಸಿತಾಳ್ದಿತ್ತುಬಱಿದೆ **ಪೂಜಿಸೆ** ವಿಫಲಂ ॥ ೧೫೯ ॥

ಹರಿಯುಂ ಹರನುಂ ನೋಳ್ಪಡೆ ।
ಪರಸಮಯಿಗಳೆನಿಸಿ ಮತ್ತೆ ಕರ್ಮ್ಮದ ವಶದಿಂ ॥
ಧರೆಯು ಕೆಳಗಿರ್ದ್ದೊಡಂ ಮಾ- ।
ನ್ಯರೆ ಪೊಱಮಟ್ಟಂತೆ ತೀರ್ತ್ಥಕರರಪ್ಪುದಱಿಂ ॥ ೧೬೦ ॥

ರಾಮನುಮಂ ಲವಕುಶರಂ ।
ಭೀಮಾರ್ಜ್ಜುನ ಧರ್ಮ್ಮಪುತ್ರನಕುಳಾನುಜರಂ ॥
ಶ್ರೀಮಜ್ಜಿನೇಶರೆನುತುಂ ।
ಪ್ರೇಮದಿ ನೆನೆವಂದು ಸಫಲಮಲ್ಲದೊಡಫಲಂ ॥ ೧೬೧ ॥

ಆ ಪೊತ್ತುಂ ಜೋಯಿಸಿಗ- ।
ಪ್ಪಾಪಗ್ರಹಮೆಂದು ಪೆಸರನಿಡೆ[1]........[1]ಸಂ- ॥
ತಾಪಕರಂ ಕುವಳಯರಿಪು ।
ಶಾಪಂ ಬೆತ್ತಾತನಾಪ್ತನೆನಲಾಗಱಿವಂ ॥ ೧೬೨ ॥

ಎನಗತಿಭಕ್ತನಿವಂ ಸೂ[2]- ।
ರನೆಂದು ದಯೆಯಿಂದ ಬ್ರತಮನೀಯದೆ ಭಕ್ತಂ- ॥
ಗೆನಿತುಂ ಪೀಡೆಯನಿತ್ತುಂ- ।
ಟೆನೆಯೆಡೆಯೊಳ್ಕಾಳ್ಪನಾಪ್ತನೆನಲಾಗಱಿವಂ ॥ ೧೬೩ ॥

ಸೌರಂ ಸೂರ್ಯ್ಯನನರ್ಚ್ಚಿಪೊ- ।
ಡೋರಂತೆಂ ಚಂದ್ರಕುಜಬುಧಾಮರಗುರುದೈ- ॥

---

೧. **ಇ**—೧ಸಂದಂ೧; ೨. **ಇ**—ಸೌ;

ತ್ಯಾರಾಧ್ಯಮಂದ ಫಣಿಗಳ- ।
ನಾರಾಧಿಪನೊಂದು ಮಣಿಗೆ ತಂದನಿಬರುಮಂ ॥ ೧೬೪ ॥

ವೃ॥ ಪರಿಕಿಸೆ ಸೌರ್‍ಯ್ಯರಚ್ಚಿಸುವ ಸೂರ್‍ಯ್ಯನ-
ಮೂರ್‍ತ್ತಿಯುದೊಂದೆ ಮೂರ್‍ತ್ತಿಯೇ ।
ಕರಯುಗಮೊಂದಱೊಳ್ಕರ ಚತುಷ್ಟಯುಮೊಂದ-
ರೊಳೊಂದು ಮೂರ್‍ತ್ತಿಯೊ- ।
ಳ್ಸಿರಮುಮನೇಕ ಮಾಯುಧದೊಳೊಂದಿದ-
ಕಯ್ಯುವನೇಕವಲ್ಲಿ ಭೀ- ।
ಕರತರ ರೌದ್ರಮೂರ್‍ತ್ತಿಯೆರಡೊಂದು ಮನೋಹರ-
ಮೂರ್‍ತ್ತಿಭಾವಿಸಲ್ ॥ ೧೬೫ ॥

ಕಂ॥ ಚಳಬುದ್ಧಿಗಳಪ್ರಯೋಜನ- ।
ತಿಳಕಂ ಮಾರ್‍ತ್ತಂಡ ಭೈರವಂ ರಣಜಯುಮೆಂ- ॥
ದೆಳೆಯೆಡೌಳ್ಸಾರಾರಾಧನೆ ।
ಪಲವುಂ ತೆಱನೆಂದುಪೇಳ್ವರಾಸಮಯುದವರ್ ॥ ೧೬೬ ॥

ಉದಯುದೊಳೀಶಂ ಮಧ್ಯಾ- ।
ಹ್ನದೊಳಗಧರನಸ್ತಸಮಯುದೊಳ್ಕಮಳಜನ- ॥
ಪ್ಪುದು ಸಾಜಂ ಸೂರ್‍ಯ್ಯಂಗೆಂ- ।
ದಿದನೊಳ್ಪೆರ್ಪ್ಪಲರುಮಿನ್ನವಘುಟಿತಮೊಳವೇ ॥ ೧೬೭ ॥

ಬಿಂಬಂಗೊಳ್ವೇದಂ ಗಡ ।
ಬಿಂಬಾಂತರ್ವರ್‍ತ್ತಿಗಡಯುಜುರ್ವ್ವೇದಂ ತ- ॥
ದ್ಬಿಂಬ ಪ್ರಭೇದ [1]ಸಾಜಮು[1] ।
ದೆಂಬದ್ದಿನಕರನನಿನ್ನಪಘುಟಿತಮೊಳವೇ ॥ ೧೬೮ ॥

ಸೌರಂ ಜಾನಿಸುವಾಗಳ್ ।
ಭೋರನೆ ನಭದಲ್ಲಿ ಪರಿವಪಳಿಕಿನವೃತ್ತಾ- ॥
ಕಾರಮನೆ ಜಾನಿಪನೋನೋ[2] ।
ಭೈರವನಂ ಪದ್ಮಹಸ್ತನಂ ಧ್ಯಾನಿಪನೋ ॥ ೧೬೯ ॥

---

೧. ಇ—೧ಸಾಮಜ೧; ೨. ಇ—ಪೇ;

ಪಲವುಂ ಮೊಗಮುಂ ತಾಳ್ದಿದ ।
ಪಲವುಂ ಕೈಗಳೊಳೆ ಕೈದುವಿಡಿದಿರ್ದ್ದನನಾ- ॥
ನಳಿನಪ್ರಿಯ ರೂಪಂ ಮೇ- ।
ಣ್ಗೆಲೆವೇದ ತ್ರಿತಯಮೂರ್ತ್ತಿಯಂ ಧ್ಯಾನಿಪುದೊ ॥ ೧೭೦ ॥

ಮುರಹರ ಪುರಹರ ದಶಶತ- ।
ಕರ ಮೂರ್ತ್ತಿಗಳೆನಿತು ಮೊಳವು ಜಾನಿಪಭಕ್ತಂ- ॥
ಗರಿದೆಂತುಂ ನಿಟ್ಟಿಸುವಡೆ ।
ನಿರುತಮದೊಂದಲ್ಲದಾಪ್ತರವರುಮದೆಂತೊ ॥ ೧೭೧ ॥

ದುರಿತಧ್ವಂಸಕರಂ ಭಾ- ।
ಸ್ಕರನಖಿಳಜಗಜ್ಜನಾಬ್ಜಮಿತ್ರನೆದಲ್ಭಾ- ॥
ಸ್ಕರನಲ್ಲದಂತದಂ ಭಾ- ।
ಸ್ಕರನಲ್ಲಂ ನಭದೊಳೆಯ್ದೆ ತಿಟ್ಟನೆತಿರಿವಂ ॥ ೧೭೨ ॥

ಸದಮಳ ಕೇವಳ ಬೋಧ- ।
ಪ್ರದೀಪದಿಂ ಜಗಮನಾವಗಂ ಬೆಳಗಿ ಮಹಾ- ॥
ಭ್ಯುದಯಕರನೆನಿಸಿದಂ [1]ದಿವ- ।
ದ ದೇವನಾದಂ ಪ್ರಭಾಕರರುಮೆಂತಾದರ್[1] ॥ ೧೭೩ ॥

ವೃ॥ ನೆಲದೊಳಗಿರ್ಪ್ಪರ್ ನೀರಧಿಯೊಳಿರ್ಪ್ಪರ್-
ಕುಭೃತ್ಕುಲದಲ್ಲಿಮಿರ್ಪ್ಪರ್ ಬಾ- ।
ನೊಳಗೆ ತೊಳಲ್ವನಂತುಮುಸುರರ್ಬ್ಬಗೆಯಲ್-
ಬಗೆಯಲ್ ಜಘನ್ಯತಾ ।
ನೆಲೆಗಳನೆಯ್ದರುತ್ತಮ ಸುದೃಷ್ಟಿಗಳಪ್ಪವರೂರ್ದ್ಧ-
ಲೋಕದೊಳ್ ।
ನೆಲಸುವರುತ್ತಮ ಬ್ರತಿಕರಲ್ಲದೊಡಂ ದೃಢದರ್ಶ-
ನಾನ್ವಿತರ್ ॥ ೧೭೪ ॥

ಕಂ॥ ಜೋತಿಷ್ಕನಾಗಿ ಪುಟ್ಟಂ ।
ಖ್ಯಾತಿಯ ಸಮ್ಯಕ್ತ್ವಮುಳ್ಳನರನೆನೆಮತ್ತಾ ॥

---

೧. ಇ—೧ದೇ। ವರದೇವಂ ತಾಂ ಪ್ರಭಾಕರಂ ಸೌಖ್ಯಕರಂ೧;

ಜ್ಯೋತಿಷ್ಕದೇವನಂ ತಾ- ।
ನೇತಕ್ಕೋಲಗಿಪನಱಿತಮುಳ್ಳ ಮಹಾತ್ಮ್ಯಂ || ೧೭೫ ||

ಅಱುವತ್ತನಾಲ್ಕು ಭೈರವ- ।
ರಱುವತ್ತಱಮೇಲೆ ನಾಲ್ಕೆ ಯೋಗಿನಿಯರುಮೆಂ- ॥
ಬಱಿಕೆಯದೆಯ್ವಮಿವಿನಿತುಂ।
ಕುಱಿವೇಡವುಮಚ್ಚಿರ್ಸಲ್ಕೆವೇಡವನಱಿವಂ || ೧೭೬ ||

ಜನನಿಯ ಯೋನಿಯೊಳೊಗೆವುದು ।
ಕನಿಷ್ಟವೆನಗೆಂದು ತೇಳತೆಱದಿಂದಂ ತಾಂ ||
ಜನನಿಯ ಬಸಿಱಿಂ ಸೀಳ್ದೊಗೆ- ।
ದನಾಪ್ತನಲ್ಲೆಂತುಮಪ್ರಬುದ್ಧಂ ಬುದ್ಧಂ || ೧೭೭ ||

ಬಸುಱೊಳಗೆ ಪಲವು ಪುಳುವಿನ ।
ಕಿಸುಗುಳದೊಳಗದ್ದನಮೆದು ನವಮಾಸಂ ಸೈ- ॥
ರಿಸಿತಾಯಯೋನಿಯಿಂದಂ ।
ನುಸುಳ್ವವೇದನೆಗೆಯಾಱಬುದ್ಧಂ ಬುದ್ಧಂ || ೧೭೮ ||

ಸಕಳ ಪರಿಗ್ರಹಮಂ ಬಿ- ।
ಟ್ಟಕಾಮಿಕಂ ಯೋಗಯುಕ್ತನೆನಿಪಂ ಗಡದೊಂ- ॥
ದು ಕಷಾಯ ವಸನವನೆಪೊದೆ- ।
ದುಕೊಂಡು ಬಿಡಲಾಱದಿದ್ದನೇನೋ ಬುದ್ಧಂ || ೧೭೯ ||

ಕ್ಷಣದಿಂದಂ ಗಡ ಬೆರಲಿಂ- ।
ದೆಣಿಸುವನೋ ವಸ್ತುವೆಲ್ಲಮಂ ಬುದ್ಧಂ ತಾಂ ||
ಕ್ಷಣಿಕನೆನಿಸಿದ್ದ ಸಕಳಮ- ।
ನೆಣಿಸುವ ತೆಱನಾವುದಲ್ಲಿ ತಾನಿಲ್ಲದವಂ || ೧೮೦ ||

ಜ್ಞಾನಂ ಸಂತತಮೆನುತಂ ।
ಜ್ಞಾನಿಕರಂ ಕ್ಷಣದಿನತ್ತಲಿರನೆಂದೆನುತಂ ||
ಜ್ಞಾನಿಸುತಿಪ್ಪನದೇನೋ ।
ಮೋನದಿನಾಭಿಕ್ಷು ತನ್ನ ನಿಲವಱಿಯದವಂ || ೧೮೧ ||

ತಾನೊಳನಾಗಿಬಳಿಕ್ಕಂ ।
ಜ್ಞಾನದಿನಱಿವುದು ಸಮಸ್ತವಸ್ತುವನೆಲ್ಲಂ ॥
ತಾನಱಿದೊಡಱಿತವಳಿಗುಮೆ ।
ಭಾನುದ್ಯುತಿ ಭಾನುವಿಲ್ಲದೇಂ ಬೆಳಗುಗುಮೆ ॥ ೧೮೨ ॥

ಅಗಣಿತ ಗುಣನಿಧಿ ಮುಕ್ತಿಯೊ- ।
ಳಗಲದೆ ಲೋಕಾಗ್ರದಲ್ಲಿ ನಿಂದಮಹಾತ್ಮಂ ॥
ಸುಗತನಿನಿತಿಲ್ಲದಾತಂ ।
ಸುಗತನೆ ತಾನಾತ್ಮವಧೆಯೊಳೊಂದಿದಪುರುಷಂ ॥ ೧೮೩ ॥

ಒಣಗು ಪಸಿ ಜೀವನಿಕರಂ ।
ಪೆಣನೆನ್ನದೆ ಸುಡುವುದುಂತೆ ಪೊರ್ದಿದನಿತಱಿೊ- ।
ಳ್ಗುಣಲೇಶವೆಂತು ಮಿಲ್ಲೆಂ- ।
ದೆಣಿಸಮ್ಯಕ್ತಿಹೀನರಾಪ್ತನೆಂಬಕ್ಕಿರ್ಚ್ಚಂ ॥ ೧೮೪ ॥

ಇದು ರಮ್ಯವೆನಿಸಿದಲ್ಲಿ- ।
ಪ್ಪುದುದಪ್ಪಂ ದೇವಗೃಹದೊಳಿಪ್ಪುದು ಮೋಣೆ- ॥
ನ್ನದೆ ಪೊಗೆವುತವೊಲೆಯೊಳಗಿ- ।
ಪ್ಪುದು ದೈವಮೆನಲ್ಕೆ ಸಲ್ಲದಱಿವುಳ್ಳಾತಂ ॥ ೧೮೫ ॥

ಎನ್ನನೆ ಪೂಜಿಪರಾಗಳು- ।
ವೆನ್ನನೆ ಪಿಡಿದಿಪ್ಪರೊಳ್ಹಿತಂ ಮಾಡುವೆನಾ- ॥
ನೆನ್ನದೆ ಮನೆಯುಂ ಸುಡುತಿ- ।
ಪ್ಪನ್ನಗ್ನಿಯುನೆಂತುದೈವವೆಂಬಚ್ಚರ್ದುರರ್ ॥ ೧೮೬ ॥

ಮನೆಮುಟ್ಟಂ ಸೀರೆಗಳೆಂ- ।
ಬಿನಿತುಮನೊಂದಿನಿಸುವಗ್ನಿಮುಟ್ಟಿದೊಡವನಾ ॥
ಮನೆಯಿಂದೆ ಕಳೆವರೆನ್ನರು- ।
ಮೆನಲ್ಕೆ ಪೊಲೆವಟ್ಟುದಾಗದಿಕ್ಕುರ್ಮೆದೆಯ್ವಂ ॥ ೧೮೭ ॥

ದ್ವಾದಶಗಣ ಪರಿವೇಷ್ಟಿತ- ।
ನಾದಿಬ್ರಹ್ಮಂ ಜಿನೇಶ್ವರಂ ಗಣಪತಿ ಮ- ॥
ತ್ತಾದೊರೆಯುನಲ್ಲದನನೆಂ- ।
ತಾದನೊ ಗಣಪತಿ ಗಜಾನನಂ ವಿಕಟಾಂಗಂ ॥ ೧೮೮ ॥

ಜನಕಂ ತಾಂ ಸ್ಥಾಣುಗಡಂ |
ಜನನಿಯೆ ಸುಪರ್ಣ್ಣೆಗಡ ತಾಂ ವಿಶಾಖಂ ಗಡ ವಾ- ||
ಹನವದು ಶಿಖಿಗಡ ಬಹುಮುಖ- |
ನೆನೆಸಂದ ಕುಮಾರನೀಯಲಱಿಗುಮೆಫಲಮಂ || ೧೮೯ ||

ಕಡೆಯಿಲ್ಲದ ಸಂಸೃತಿಯೆಂ- |
ಬಡವಿಯೊಳಿಗಿರಿಯೆಂಬ ಶಬರನಂ ಜ್ಞಾನಿಮೃಗಂ ||
ಕೆಡೆಯಲು ಮಾಡಿದ ಕುಳಿಗಳು |
ಗಡಮೆಂದಱಿ ಹರಿಹರಾದ್ಯನಾಪ್ತಗೃಹಂಗಳ್ || ೧೯೦ ||

ಪೆಣನಂ ಪೆಸಗೊಳೆ ದೋಷಂ |
ಪೆಣದೊಳು ಕುಳ್ಳಿದ್ದು ಮಾಂಸಮಂ ತಿಂಬಾಕ- ||
ಳ್ಪ್ರಣಿಯಂ ಭೈರವಿಯಂ ನಿ- |
ಗ್ಘ್ರಣಿಯಂ ಪೂಜಿಪನನಂಟಲಾಗದು ಜೈನಂ || ೧೯೧ ||

ತುಡುವನೆಲುಗಳನೆಯಜಿನಮ- |
ನುಡುವಂ ಪೊದೆವಂ ಕಪಾಳದೊಳ್ತಿರಿದುಂಬಂ ||
ಮೃಡನದಱಿನಮಾಂಗಲ್ಯಂ |
ಬಿಡದವನಂ ಜಾನಿಪವನಮಾಂಗಲ್ಯಕರಂ || ೧೯೨ ||

ಆರಯ್ಯದಾಪ್ತನಂದಮ- |
ನಾರೇನಂ ದೆಯ್ವಮೆಂದು ಸೇವಿಪರದನೊ- ||
ಲ್ದಾದರಿಸುವ ಮರುಳಗಳವಿ- |
ಚಾರಿಗಳೀಥರೆಯ ಮನುಜರಱಿವಿಲ್ಲದವರ್ || ೧೯೩ ||

ಹರಿಹರಕಮಳಾಸನರೆಂ- |
ಬರ ನೆಗಳ್ವ ನೆಗಳ್ತೆಯಿಂದೆ ಸರ್ವಜ್ಞತ್ವಂ ||
ದೊರೆಕೊಂಡುದೆಂದು ನಿರುತಂ |
ಪರಮನ ಮುನ್ನರಿದು ಬಳಿಕ ಸೇವಿಪುದವರಂ || ೧೯೪ ||

ಸಂಸಾರಿ ಜೀವನೀತೆಱ- |
ದಿಂ ಸಾರ್ದ್ದಂ ಲಬ್ಧಿಕೂಡೆ ಸನ್ಮಾರ್ಗ್ಗಮನಾ- ||

---
೧. ೩—೪;

ದಂ ಸೂಕ್ತದತ್ತಣಱಿವಿಂ- ।
ದಂ ಸಮ್ಯಗ್ದೃಷ್ಟಿಯಾಗಿ ತಪಮಂ ಕೊಂಡಂ ॥ ೧೯೫ ॥

ಇಂತಪ್ಪ ತಪದೊಳೆಸಗಿದ- ।
ರಿಂತಪ್ಪ ಗುಣಂಗಳೊಡನೆ ಕೂಡಿದರೊಳ್ಪಿಂ- ॥
ದಿಂತಪ್ಪೆಡೆಗೆಯ್ದಿದರೆಂ- ।
ದಿಂತಱಿದಾಪ್ತರುಮನಱಿದು ಪೂಜಿಪುದಱಿವಂ ॥ ೧೯೬ ॥

ಈತೆಱದಿಂದಂ ಕೆಡಿಸಿದ- ।
ನೀತೆಱದಘಚಯಮನಿನಿತು ಬೋಧಾದಿಗುಣ- ॥
ವ್ರಾತದೊಳೊಂದಿದನೆಂದೆಂ- ।
ದೀತೆಱವಿಂ ತಿಳಿವುದಾಪ್ತರಪ್ಪರೊಳೆಲ್ಲಂ ॥ ೧೯೭ ॥

ಇದುದೆಯ್ವಂ [1]ತಾನಿ[1]ದದ- ।
ಯ್ವದಸದ್ಗುಣಮೆಂತುಟೆಂದು ನೋಳ್ಪಡಮಿನ್ನಿಂ- ॥
ತಿದುದೋಷದೊಳೆನಿಸಿದ ದೆ- ।
ಯ್ವಮುಮಂ ತಾನಱಿದು ಸೇವಿಪುದು ಮತಿವಂತಂ ॥ ೧೯೮ ॥

ಜ್ಞಾನಮಯಂ ನಿರ್ಮ್ಮಳನಖಿ- ।
ಳಾನಂದಕರಂ ಗುಣಾಂಬುನೀರಧಿಮುಕ್ತಿ- ॥
ಶ್ರೀನಾರೀವರನೆಂಬಭಿ- ।
ಧಾನಮನುಳ್ಳಾತನಾಪ್ತನುಳಿದನನಾಪ್ತಂ ॥ ೧೯೯ ॥

ಪಿರಿದುಂ ಕೋಟಲೆಗೊಳಿಸುವ ।
ದುರಿತಾರಾತಿಗಳನಾವಗಂ ಗೆಲ್ದುದಱಿಂ- ॥
ದರಹಂತನೆಂಬನಾಮಂ ।
ಪರಮಜಿನಂಗಲ್ಲದುಳಿದರೊಳ್ಸಂದಪುದೆ ॥ ೨೦೦ ॥

ತ್ರಿಜಗನ್ನಾಥಂಗನಘಂ- ।
ಗಜಿನೇಂದ್ರಂಗಾತ್ಮಜನಿತಮತ್ಯಂತಸುಖಂ ॥
ನಿಜಮಲ್ಲದೆ ಸಂಸಾರಿಗ- ।
ಳಜಹರಿಹರ ಬುದ್ಧಸೂರ್ಯ್ಯರೊಳ್ಕೂಡುಗುಮೆ ॥ ೨೦೧ ॥

---

೧. ಇ—೧ಮತ್ತಿ೧;

ಅಱಿವಿನ ಕಾಣ್ಕೆಯ ಸೌಖ್ಯದ ।
ನೆಱವಿಯೊಳೊಂದಿಪ್ಪನಾಪ್ತನಲ್ಲದೆ ಸತತಂ ॥
ಪೆಱವಱಿನಪ್ಪಲ್ಪಸುಖ- ।
ಕ್ಕೆಱಗಿಪ್ಪವರಾಪ್ತರಲ್ಲರಜ್ಞಾನಯುತರ್ ॥ ೨೦೨ ॥

ಆನಂದಮೂರ್ತಿಯೆಂದ-।
ಜ್ಞಾನಿಗಳಾರ್ತ್ತದೊಳಿಬೇವನಂ ಬಣ್ಣಿಪರೊ- ॥
ಲ್ದಾನಂದಮೂರ್ತಿಯೆಂಬಭಿ- ।
ಧಾನಂ ಜಿನನಲ್ಲದವರೊಳೇಂ ಸಂದಪುದೇ ॥ ೨೦೩ ॥

ಉಟ್ಟುಂ ತೊಟ್ಟುಂ ತಿಳಕಮ- ।
ನಿಟ್ಟುಂ ಪೆಂಡಿರನೆ ರಾಗದಿಂದೆರ್ದೆಯೊಳ್ತಂ- ॥
ದಿಟ್ಟುಂ ನಲಿವವರಕ್ಕಟ ।
ಕೊಟ್ಟಲ್ಲದೆ ಮಾಣರಿದಿರ್ಗೆ ಮುಕ್ತಿಶ್ರೀಯುಂ ॥ ೨೦೪ ॥

ವನಿತೆಯರ ಸುತರ ಮೋಹದಿ- ।
ನನವರತಂ ಮಱುಗುತಿಪ್ಪ ಸಂಸಾರಿಯನಾ- ॥
ಪ್ತನೆನುತಿಪ್ಪವರಿಂತೀ ।
ಮನುಜರುಮಂ ದೈವಮೆನ್ನದಿಪ್ಪುದಿದೇನೋ ॥ ೨೦೫ ॥

ಪರಸಮಯದದಯ್ವಕ್ಕಂ ।
ಪರಸಮಯದ ದೇವಋಷಿಸಮೂಹಕ್ಕಂ ಪೆಂ- ॥
ಡಿರು ಮಕ್ಕಳುಮೊಳರಾಯ್ತಾ- ।
ಪ್ತರಿಕ್ಕೆ ಮುನಿಗಳ್ಗೆ ಸಲ್ಲ ಜಿನಶಾಸನದೊಳ್ ॥ ೨೦೬ ॥

ಈತೆಱದ ಚರಿತಮಂ ನೆಗ- ।
ಳ್ದಾತಂ ಸಂಸಾರಿಯಲ್ಲದಾಪ್ತಂ ತಾನ- ॥
ಲ್ಲಾತನನಾರಾಧಿಸುವವ- ।
ನೇತೆರದಿಂ ಪಡೆಯಲೆಂತುಮಱಿವನೆ ಸುಖಮಂ ॥ ೨೦೭ ॥

ಸ್ವಾರ್ತ್ಥಂ ಸದ್ದ್ರುಷ್ಟಿತ್ವಂ ।
ವ್ಯರ್ತ್ಥಂ ಮಿಥ್ಯಾತ್ವಮೆಂದು ನಿಶ್ಚಯಿಸುವವಂ ॥

ಸ್ವಾರ್ತ್ಥಪರನಲ್ಲದಾತಂ ।
ಸ್ವಾರ್ತ್ಥ ೧ಭ್ರಾಂತಂ೧ ವಿವೇಕಶೂನ್ಯನಧನ್ಯಂ ॥ ೨೦೮ ॥

ವೃ॥ ಹರಿಹರ ಪದ್ಮಸಂಭವರ ಮೂರ್ತ್ತಿಗಳೊಂದೆನು-
ತಿರ್ಪ್ಪರಲ್ಲಿಯುಂ ।
ಹರನೆಗಡಂ ಪಿತಾಮಹಕಪಾಳದೊಳುಂಬನೆನುತ್ತ-
ಮಿರ್ಪ್ಪರಾ ।
ಮುರಹರನಂಗಮಂ ಪೆಗಲೊಳಿಟ್ಟು ತೊಳಲ್ವರು-
ತಿರ್ಪ್ಪನೆಂ೨ಬರೀ- ।
ಧರೆಯ ಮನುಷ್ಯರೆಂತುಮಱಿಯೇಂ ದಿಟ ಮತ್ತಿದ-
ನೆಂತುನಂಬುವರ್ ॥ ೨೦೯ ॥

ಕರಿಕಂ ಶ್ರೀಪತಿ ಹೇಮವರ್ಣ್ಣನಜನೀಶಂ ಶ್ವೇತ-
ವರ್ಣ್ಣಂ ಮುಖಂ ।
ಮುರವಿಧ್ವಂಸಿಗದೊಂದೆ ನಾಲ್ಕುಮುಖಮಾ-
ಬ್ರಹ್ಮಂಗೆ ಪಂಚಾಸ್ಯಮಾ- ।
ಗಿರಿಜೇಶಂಗೆ ಬಳಿಕ್ಕ ಮೂವರೊಡಲುಂ ಜೀವಂಗಳುಂ-
ಚಿತ್ತಮುಂ ।
ಪರಿಣಾಮಂಗಳುಮೊಂದೆಯಲ್ಲ ಬಳಿಕೆಂತೊಂದಾದರಾ-
ಮೂವರುಂ ॥ ೨೧೦ ॥

ಕಂ॥ ಮೃಡಹರಿವಿರಿಂಚಿಗಳು ಮುಂ- ।
ಪಡೆದರೊ ಕುಲವಳಿಯಿದಲ್ಲ ಪೊಂಗೊಟ್ಟುಂ ಮೇ- ॥
ಣ್ಪಡೆದರೊ ವರದಿಂದಂ ಮೇ- ।
ಣ್ಪಡೆದರೊ ದೇವತ್ವಮಂ ವಿಚಾರಿಸುವುದಿದಂ ॥ ೨೧೧ ॥

ವೃ॥ ಕುಲವಳಿಯಿಂದ ಮೇಣ್ಪಡೆದರಪ್ಪಡೆ ದೇವರೆನಿಪ್ಪ-
ರೂಢಿಯಿ- ।
ನ್ನಲಿಗೆಮ ಗೋಪಿಗಂ ಕ್ರಮದೆ ಪುಟ್ಟಿದರೀರ್ವ್ವರಿ-
ನಾಮಹೇಶ್ವರಂ ।

೧. ಇ—೧ಭ್ರಂಶಂ೧; ೨. ಇ—ರೆಂ;

ಬೆಲೆಗಳನಿತ್ತಡಿಲ್ಲ ತಪವಿಲ್ಲತಿರಾಗಿಗಳಂತುವಿಲ್ಲ ಭೂ- ।
ತಳದವರೇಕೆ ದೇವತನಮಂ ಬಱಿದೇಱಿಪರಯ್ಯ-
ಮೂವರೊಳ್ ॥ ೨೧೨ ॥

ಪಲರುಂ ಬ್ರಹ್ಮರಡಂಗೆ ಕೋಟಿಯುಗ ಪರ್ಯ್ಯಂ-
ತಂಬರಂ ವಿಷ್ಣುಗ- ।
ಳ್ಪಲರುಂ ಸಾವುತಿರಲ್ಕೆ ರುದ್ರನಳಿವಂ ತಾನೋರ್ವ್ವ-
ನಾರುದ್ರರುಂ ।
ಪಲರುಂ ಸಾವುತಿರಲ್ಕೆ ರೋಮಮುದಿರ್ಗು೦ ದಲ್-
ರೋಮಜಂಗೆಂಬರೆಂ- ।
ತೆಲೆ ಪದ್ಮೋದ್ಭವ ಕೃಷ್ಣರುದ್ರರನದೇಂ ದೇವರ್ಕ್ಕ-
ಳೆಂದರ್ಚ್ಚಿಪರ್ ॥ ೨೧೩ ॥

ಕಂ॥ ಏಗೆಯ್ದುಂ ದೂಷಿಸಲಣ- ।
ಮಾಗದುಮೋರ್ವ್ವಂ ಕಪಾಳಿತರುವರಿವೋರ್ವ್ವಂ ॥
ಗೋವಳಸುತರಂ ಮಗಳೊಡ- ।
ಗೂಡಿದತ್ರೈಪುರುಷರಾದರೆಂತೊಜನಾಪ್ತರ್ ॥ ೨೧೪ ॥

ಎಲೆಹರಿಹರರುಂ ರೌದ್ರಾ- ।
ವಿಳರಲ್ಲ ದಯಾತ್ಮರೆಂದು ಪೇಳದೊಡೇನೋ ॥
ಕಳಶದ ಮೇಗಣ ತಿಸುಳದ ।
ವಿಳಾಸಮುಂ ಮಿಱುಪಚಕ್ರಮುಂ ಸೂಚಿಸವೇ ॥ ೨೧೫ ॥

ನರಸಿಂಹನಾ ಹಿರಣ್ಯಾ- ।
ಸುರನಂ ಗಜದೈತ್ಯನಂ ಹರಂ ಸೀಳ್ದಭಯಂ. ॥
ಕರರೂಪು ಪೇಳ್ಗುಮಾಯೀ- ।
ರ್ವ್ವರದಯೆಯಂ ದೇವಗೃಹದ ನೆಲೆಗಳೊಳವರಂ ॥ ೨೧೬ ॥

ಅವರವರ ದಯ್ವದಂದಮ- ।
ನವರವರಾಗಮದೊಳವರ ಕಥೆಗಳೊಳಂ ನೋ-॥
ಡುವಡವೆ ದೂಷಿಸಿದವುವಿ- ।
ನ್ನವರನ್ಯನ್ನುಡಿಯೆ ಮುಳಿವರಾ ಸಮಯದವರ್ ॥ ೨೧೭ ॥

ಎಲ್ಲಿಲ್ಲದ ಮಾಂಗಲ್ಯಮ- ।
ನೆಲ್ಲಂ ಸ್ತುತಿಮಾಡಿ ತಮಗೆ ಪೊಗಳದು ಪಲುಗುಂ ॥
ಸಲ್ಲಗಡಂ ಲೋಗರದಂ ।
ಪೊಲ್ಲೆನಲೇನಿಂತದರಸನಾಣೆಯೊ ಪೇಳಿಂ ॥ ೨೧೮ ॥

ಉಳ್ಳುದನುಳ್ಳಂತೆಂದೊಡೆ ।
ಕೊಳ್ಳೆಂದೆತ್ತಲ್ಕೆವೇಡಮತಿವಂತರ್ತ್ತ- ॥
ಮೊಳ್ಳಿದನೆಂದಡೆ ದೇವರ- ।
ನೊಳ್ಳಿದರಲ್ಲೆಂದು ಪಳಿಯುರಂತೇಗೆಯ್ದುಂ ॥ ೨೧೯ ॥

ಬಾದೆಂ ದೂಷಿಸಲಣಮದು- ।
ಮಾಗದು ಹರಿಹರ ಹಿರಣ್ಯಗರ್ಭರನಾವೇ- ॥
ದಾಗಮುಮುಸ್ಮೃತಿಯುಮ- ।
ದಾಗಳುಮೆನುತಿರ್ಪ್ಪವಿನ್ನವೊಳನೇದೆಯ್ವಂ ॥ ೨೨೦ ॥

ಮಿಡಿದೊಡೆ ಬಿರಿವುದೆನಿಪ್ಪಾ ।
ಮಡಕೆಯುಲಡಲೆಂತು ಬರ್ಪ್ಪದಂತೊಂದಿನಿಸಂ ॥
ನುಡಿಯುಂ ಸೈರಿಸಲಾಱವು ।
ಗಡದೆಯ್ವಮುಮವರ ೧ತಪ೧ಮುಮೇನಾದಪುವೋ ॥ ೨೨೧ ॥

ಪೊನ್ನೆಂತುಂ ಪರಿಕಿಸುವೊಡೆ ।
ಪೊನ್ನಪ್ಪಡೆ ದೂಷಿಸಲ್ಕೆವೇಡೆನಲಾಗಾ ॥
ಪೊನ್ನೆಕಿಸುವಪ್ಪೊಡೆಂಬುದು ।
ತನ್ನಾಪ್ತಂ ಶುದ್ಧನಪ್ಪೊಡೆನಲಾಗಱಿವಂ ॥ ೨೨೨ ॥

ಜಿನನಾಥಂಗಂ ಮತ್ತಾ ।
ಜಿನೋಕ್ತಮಪ್ಪಾಗಮಕ್ಕಮಾಜಿನಧರ್ಮ್ಮ- ॥
ಕ್ಕನಿತುಂ ದೂಷಣೆಯಿಡಲಱಿ- ।
ವನೆ ದೂಷಣೆಯಿಡುಗೆ ಕೋಟಿದಿನಮುಮನಿತ್ತಂ ॥ ೨೨೩ ॥

ದೂಷಿಸಲಱಿವವರುಳ್ಳಡೆ ।
ದೂಷಿಸುಗದನಾಗದೆನ್ನೆವಾವನ್ಯರವೋ- ॥

---

೧. ಇ—೧ಮತ೧;

ಲ್ದೂಷಿಸುವಂಗೆಡನಿತ್ತೆಂ ।
ದೋಷಮಿದುಂಟಪ್ಪೊಡೆಂತುಮಾರ್ಹತಮತಮಂ ॥ ೨೨೪ ॥

ಪದಿನೆಂಟು ದೋಷದಿಂದಂ ।
ಪುದಿದನನುಂತಾಪ್ತನಲ್ಲದೆಂದೋದುವರ- ॥
ಲ್ಲದೆ ದೋಷನಿಚಯದಿಂದಂ ।
ಪುದಿದರುಮಂ ಬಿಡದೆ ಪೂಜಿಪರ್ವ್ವಿಕಳಾತ್ಮರ್ ॥ ೨೨೫ ॥

ಕರ್ಮ್ಮಾದಿ ದೋಷದೂರಂ ।
ನಿರ್ಮ್ಮಳನೆಮ್ಮಾಪ್ತನೆಂದು ಪೊಗಳ್ವರ್ಪ್ಪಲರುಂ ॥
ಕರ್ಮ್ಮದೊಳು ತೊಡರ್ದನಮೆವರ- ।
ನೊರ್ಮ್ಮೆಯುಮಱಿಯುತ್ತಮಿರ್ದ್ದಪಲೆಪ-
ಮೂರ್ಮ್ಮರ್ಕ್ಕರ್ ॥ ೨೨೬ ॥

ಎಡೆವಿಡದದೆಯ್ವಧರ್ಮ್ಮದೊ- ।
ಳಿಡದಘಮಂ ತಮ್ಮಮತದೊಳಂ [1]ಕಂಡುಮದಂ[1] ॥
ಕಡೆಗಣಿಸುವರಂತದೆ ದ- ।
ಲ್ಕಡೆಗಣಿಸರೆ ತಮ್ಮತಾಯನಾಣಂ ಕಂಡರ್ ॥ ೨೨೭ ॥

ಭಾವಕರಾಗಮದೊಳ್ ಸಂ- ।
ಭಾವಿತ ಚಿತ್ತರ್ವ್ವಿಚಾರರಪ್ಪವರುಂತುಂ ॥
ಭಾವಿಸಿತಿಳಿದುಂ ತಮ್ಮಯ ।
ದೇವರ ಪೊಲ್ಲಮೆಯನಂತುಮಿಂತುಂ ಬಿಡುವರ್ ॥ ೨೨೮ ॥

ವೃ॥ ಮನದವಿ[2]ಮೋಹದಿಂದೆ ಲವಮಾಘನಕಲ್ಪ-
ಮಹೀಜಮೆಂದು ಸಾ- ।
ರ್ದ್ದನವರತಂ ಮರುಳ್ಗಳರಸಂ ನಮೆವಂತಿರೆ-
ಸಂಶಯಾತ್ಮಕಂ- ।
ಘನತರ ಕರ್ಮ್ಮಸಂಗತನನಿಷ್ಟಸುಖಪ್ರದನೆಂದುನಚ್ಚಿ ಕೆ- ।
ಮ್ಮನೆ ಬಿಡದರ್ಚ್ಚಿಪಪ್ಪರಮನೆಂದಭಿಧಾನಮ-
ನಿಟ್ಟುವೊಹಿತರ್ ॥ ೨೨೯ ॥

---

೧. ಇ—೧ಕಡುಮುದದಿಂ೧; ೨. ಇ—ಳಿ;

ಕಂ॥ ದೆಯ್ವಮಿದೆಂದಱಿಯದೆ ಮುಂ- ।
ಗಯ್ವಲದಿಂ ಜೈನರಲ್ಲದರ್ಪ್ಪಿರ್ದಿಡಿದುದೆಪೇ- ॥
ಳ್ದಿಯ್ವಮೆನುತ್ತಂ ಮಿಥ್ಯಾ ।
ದೆಯ್ವಂಗಳ್ಗೆಱಿಗಿ ಬಱಿದೆಕಿಡುವರ್ಕ್ಕರ್ಡೆಯೊಳ್ ॥ ೨೩೦ ॥

ಮನೆವೆಗ್ಗಡೆ ಚಟ್ಟಪನಿಂ- ।
ದೆನಿನ್ನೆತಾನಾದಮ್ಮೆಲನುಂ ಮಾಳಚಿಯುಂ ॥
ಜನಕಾಪ್ತರಾದರೆನೆ ಮು- ।
ನ್ನಿನ ಹರಿಹರರಾಪ್ತರಾಗದೇಕೆಯೊ ಮಾಣ್ಬರ್ ॥ ೨೩೧ ॥

ಇಂತಪ್ಪನಾಪ್ತನೆಂಬುದ- ।
ನೆಂತುಂ ಭವ್ಯಂಗೆ ತೋಱಿದಾತನಮನಮುಂ ॥
ಭ್ರಾಂತಿರೆ ಪುದಿಯುತ್ತಿರ್ಕ್ಕುಮ- ।
ನಂತಂ ನೆಱಿಮಱಿಸಿ ದರ್ಶನಾವರಣೀಯಂ ॥ ೨೩೨ ॥

ನರನನದೆಂತುಂ ಜ್ಞಾನಾ- ।
ವರಣೀಯಂ ಜಿನರನಱಿಯಲೀಯದೆ ಮುಚ್ಚು- ॥
ತ್ತಿರೆ ತತ್ಕರ್ಮ್ಮದ ವಶದಿಂ ।
ನರನೊಲ್ಲಂ ದುರಿತಹರನನಱಿವೋದುಗಳಂ ॥ ೨೩೩ ॥

ನಿಲೆವಾಸಿಸಿ ಪಲವುಭವಂ ।
ನೆಲಸಿದ ಮಿಥ್ಯಾತ್ವದೊಂದು ದುರ್ವ್ವಾಸನೆಯುಂ ॥
ಸಲೆವಾಸಿಸಿದಾತಂ ಪೊ- ।
ರ್ದ್ದಲೊಲ್ಲನತಿವಿಮಳ ಜೈನನುದ್ವಾಸನೆಯಂ ॥ ೨೩೪ ॥

ಒಡಲೊಳ್ಪತ್ತಿರ್ದ್ದಸುವಂ ।
ಬಿಡೆಪೊಡೆನೋವೆಂತುಟಂತೆ ಮಿಥ್ಯಾತ್ವಮುಮಂ ॥
ಬಿಡಿಪೆಡೆಯೊಳಕ್ಕುಮದಱಿಂ ।
ಬಿಡಲಱಿವನೆ ಲಬ್ಧಿಹೀನನೆಂತುಂ ಜೀವಂ ॥ ೨೩೫ ॥

ದೂರತರ ಭವ್ಯನಪ್ಪನ- ।
ನೋರಂತೆ ಪಥಕ್ಕೆ ತಪ್ಪೆನೆಂಬಂ ಕಲ್ಲೊ- ॥
ಳ್ನಾರೆತ್ತುವನಂ ನೆಳಲೊ- ।
ಳ್ಪೋರುತಿಪ್ಪವನತೆ ಜಿನನನುಕಱಿಸಿಕ್ಕುಂ ॥ ೨೩೬ ॥

ನಿಟ್ಟೆವುದಿದಕ್ಕೆ ಮೋಕ್ಷದ।
ಬಟ್ಟೆಯನಿಂತಮ್ಮುಮಱಿಯದೇಂ ಮುಕ್ತಿಯನೇಂ ॥
ಕೊಟ್ಟುಕಿಡಿಸಿಹರೆ ಜಿನನಂ।
ನಿಟ್ಟೆಯಿನೋಲಗಿವುದಮಿತ ಸೌಖ್ಯಮನೋಲ್ಪಂ ॥ ೨೩೭ ॥

ಪಗರಣಿಗರಂತೆ ಬಹು ರೂ-।
ಪುಗಳಿಂದಾಡುವರನಾಪ್ತರೆಂದಾಪೊತ್ತುಂ ॥
ಬಗೆಯದೆ ಬಗೆವುದು ಬಗೆಗೊಂ-।
ಡಗಣಿತ ಗುಣನಿಧಿಯನಮಳನಂ ಜಿನಪತಿಯುಂ ॥ ೨೩೮ ॥

ಪೊಡವಡುವುದಭವಚರಣ-।
ಕ್ಕೆಡಂಬಡಡ್ಡಸದ ಪೆಱವುದಯ್ವಂಗಳವೇಂ ॥
ಕುಡುಗುಮೆ ಸುಖಮಂ ನಿರುತಂ।
ಕುಡುಗುಂ ಜಿನಚರಣಸೇವೆಶಾಸ್ವತ ಸುಖಮಂ ॥ ೨೩೯ ॥

ಸಕಳಂಕಂ ವಿಕಳಾತ್ಮಂ।
ವಿಕಾರಿ ಕಲ್ಯಾಣಕಾರಿಯಕ್ಕುಮೆ ಭಕ್ತಂ- ॥
ಗಕಳಂಕಾತ್ಮಂ ಪಂಚ-।
ಪ್ರಕಾರ ಕಲ್ಯಾಣಭಾಗಿಯಪ್ಪನೆ ಮಾಳ್ಕುಂ ॥ ೨೪೦ ॥

ದಯೆಯಿಂದವನಂತಚತು-।
ಷ್ಟಯಾತ್ಮಕನೆ ಕುಡುಗುಮನಿಶಮಾರಾಧಿಸುವಂ- ॥
ಗೆ ಯಥಾರ್ತ್ಥಮನಂತಚತು-।
ಷ್ಟಯಮಂ ಸಂಸಾರಿಜೀವನೇನಂ ಕುಡುಗುಂ ॥ ೨೪೧ ॥

ಶಾಂತೀಶನೆ ಮಾಳ್ಕುಂ ತಾಂ।
ಶಾಂತಿಯನುಳಿದಾತನಾರ್ತ್ತ ರೌದ್ರಾನ್ವಿತನುಂ ॥
ಶಾಂತಿಯನೆರದಂಗೀವುದೆ।
ಶಾಂತಿಯೆ ತನಗಿಲ್ಲದಾತನೇನಂ ಮಾಳ್ಕುಂ ॥ ೨೪೨ ॥

ಪರಮ ತಪೋನುಷ್ಠಾನದೆ।
ನೆರೆದಂ ಮುಂ ಮುಕ್ತಿರಮೆಯೊಳೆನಿಪನೆ ಕುಡುಗುಂ ॥
ವರಮುಕ್ತಿಶ್ರೀಯುಂ ತಾ-।
ನೆ ರಾಗಿಯಪ್ಪಂ ಪೆಱಂಗದೇನಂ ಕುಡುಗುಂ ॥ ೨೪೩ ॥

ತನಗಿಲ್ಲದದೆಯ್ವಂ ಮ- |
ತ್ತಿನವಂಗಿತ್ತಪುದೆ ವರವನೆಂಬವೊಲೊಳ್ಪಂ ||
ತನಗಾಗಿಸಲಾಱದ ದೇ- |
ವನಿಕಾಯಂ ಪೆಱರ್ಗೆ ಮಾಡಿದಪ್ಪುದೆ ಸುಖಮಂ || ೨೪೪ ||
ಜಿನನಲ್ಲದ ಸಂಸಾರಿಗ- |
ಳನೆ ಮೂಢದ್ದೇವರೆಂದು ನಂಬಿದೊಡಮಿ- ||
ರ್ದ್ದನಿತಲ್ಲದೆ ಫಲವಿಲ್ಲೆಂ- |
ತೆನೆ ತುದಿಯೊಳ್ಕಾಜುಕಾಜೆ ಮಣಿಮಣಿಯೆಪಲಂ || ೨೪೫ ||
ಉಡದಬೆಡಂಗುಂ ಪೆಂಡಿರೊ- |
ಳೊಡಗೂಡದ ಸುಖಮುಮಾಯುಧಂಗಳನೆಂತುಂ ||
ಪಿಡಿಯದ ವೀರಮುಮುಣ್ಣದ |
ಕಡುದಣಿವುಂ ನಿನಗೆ ಸಹಜಮರುಹದ್ದೇವಾ || ೨೪೬ ||

ವೃ|| ಉಡದಬೆಡಂಗು ಭೂಷಣವಿಭೂಷಿತನಲ್ಲದ-
ಚೆಲ್ವುಕಯ್ದುವಂ |
ಪಿಡಿಯದ ವೀರಮುಣ್ಣದ ತನುದ್ಯುತಿ ಪೂಸದಕಂಪು-
ಪೆಂಡಿರೊ- |
ಳ್ತೊಡರದಪಾರಭೋಗಸುಖಮೀಹಿದರ್ಗೆ[1] ದೆಣ್ದಿಱಿದಾ-
ಮಹಾಸ್ಪದಂ |
ಪಿಡಿಯದನೆನ್ನದಪ್ಪುರ್ದ ಜಿನನಾಥನೊಳೊಪ್ಪುಗು-
ಮೆಂತುನೋಳ್ಪಡಂ || ೨೪೭ ||
ನಾಡೊಳಗುಳ್ಳ ಕೂಡಕುಳಿದೇವರನೋಲಗಿಸುತ್ತ-
ಮಿದ್ದೊಡೇಂ |
ಕೂಡುಗುಮೇ ಸುಖಾಸ್ಪದಮದೆತ್ತಣಮಾತು-
ಜಿನೇಂದ್ರ ಸೇವೆಯಿಂ |
ಕೂಡುಗುಮಿಂದ್ರವಂದ್ಯವಿಭವಂ ಮರುಳ[2]ಣ್ಣತೆ-
ಮಿಕ್ಕುವೇಕೆ ನೂ- |
ಱಾಡಿನಬಾಲಮಂ ಮುರಿದೊಡೇಂ ಮಿಳಿ[3]ಯುಕ್ಕುಮೆ-
ಕಣ್ಣಿಯುಕ್ಕುಮೆ || ೨೪೮ ||

---

೧. ಇ—ಸ; ೨. ಇ—ಣ; ೩. ಇ—ಣೆ;

ಕಂ|| ಪರಹಿತನಲ್ಲ ಜಿನೇಂದ್ರಂ |
ಪರಮಾರ್ತ್ಥಂ ಸ್ವಹಿತನೆಂಬರಧ್ಯಾತ್ಮವಿದ- ||
ಪ್ಪರ್ರಹಿತನಾತ್ಮಹಿತಂ ಜೀ- |
ವರಾಸಿಹಿತಕಾರಿ ತೀರ್ತ್ಥಕರನಪ್ಪುದಱಿಂ || ೨೪೯ ||

ವೃ|| ಪರಮಶ್ರೀಮಲ್ಲತಾಲಂಬನಲಲಿತತರಾನಲ್ಪಕಲ್ಪ-
ದ್ರುಮಮಂ ದೇ- |
ವರದೇವಂ ಶ್ರೀಜಿನೇಂದ್ರಂ ಕುಡನೊಸೆದು ಜಗಕ್ಕೆಂಬರ-
ಜ್ಞಾನಿಗಳ್ತ- |
ತ್ಪರಮೋಕ್ಷ್ಮವ್ರಾತವಾಗ್ಮಾತ್ರದೊಳೆ ಸಕಳ ಲೋಕೈಕ-
ಸಾಮ್ರಾಜ್ಯ ಸೌಖ್ಯಂ |
ದೊರೆಕೊಳ್ಗುಂ ದೇಹಿಗೆಂದಂದಭವವಿಭುತೆಯುಂ-
ಬಣ್ಣಿಸಲ್ಪಲ್ಲನಾವಂ || ೨೫೦ ||

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-
ದಾರ್ತ್ಥ ನಿಪುಣ ಮಹಾಕವಿ ಬ್ರಹ್ಮದೇವ-
ವಿರಚಿತಮಪ್ಪಸಮಯಪರೀಕ್ಷೆಯೊ-
ಳಾಪ್ತ ಸ್ವರೂಪನಿರೂಪಣ-
ಮಷ್ಟಮಾಧಿಕಾರಂ ||

ಶ್ರೀ ಶ್ರೀ ಶ್ರೀ

॥ ಶ್ರೀ ॥

ನವಮಾಧಿಕಾರಂ

ಶ್ರೀದಿವಿಜರಾಜಪೂಜಿತ ।
ಪಾದಾಂಬುಜನನುಪಮಾನನಮಳಿನ ವಿದ್ಯಾ- ॥
ದ್ಯೈತನೆಮಗೀಗೆ ಜಿನನ- ।
ತ್ಯಾದರದಿಂದಂ ತ್ರಿಮೂಢಗಜಮೃಗರಾಜಂ ॥ ೧ ॥

ವೃ॥ ಮತಿವಂತಂ ಸಲೆದೇವಮೂಢತೆಯುಮಂ ಪಾಷಂಡಿ-
ಮೂಢತ್ವಮಂ ।
ಸತತಂ ಲೌಕಿಕಮಪ್ಪಮೂಢತೆಯುಮಂ-
ನಿರ್ವ್ಯಾಜದಿಂ ಬಿಟ್ಟು ಶಾ- ।
ಸ್ವತಸೌಖ್ಯಕ್ಕಿರದೊಯ್ಯಲಾರ್ಪ್ಪವಿಳಸಚ್ಚಾರಿತ್ರ-
ದಿಂದೊಂದಿದಾ- ।
ರ್ಹತದೊಳ್ವರ್ತಿಪನಾವನಾತನೆವಲಂ ಸಮ್ಯಕ್ತ್ವರತ್ನಾಕರಂ ॥ ೨ ॥

ಕಂ॥ ಜಿನನಲ್ಲದಾಪ್ತರಂ ಪಿಡಿ- ।
ದು ನಮೆವುದುಂ ಕಿಚ್ಚುಕವಿಲೆಮರನಾಯುಧಮೆಂ- ॥
ಬಿನಿತಕ್ಕಂ ಪೊಡವಡುವುದು- ।
ಮನೇಕಮಿವುಬಗೆಯೆ ದೇವತಾಮೂಢಂಗಳ್ ॥ ೩ ॥

ಹರಿಹರ ದಿನಕರ ವೈಶ್ವಾ- ।
ನರರೆಂಬರ್ದೇವರಲ್ಲದಿರ್ದ್ದಡೆ ಚಕ್ರೇ- ॥
ಶ್ವರನುಂ ಪ್ರಧಾನರುಂ ಭೂ- ।
ಪರುಮೇಕೆಯೊ ಕೊಂಡುಕೊನೆಯರೆಂಬಮೂರ್ಖರ್ ॥ ೪ ॥

ಜಿನನೋರ್ವ್ವನೆ ದೇವಂ ಮು- ।
ತ್ತಿನದೆಯ್ವಂ ದೆಯ್ವಮಲ್ಲದಿರ್ದ್ದೊಡೆ ಚಕ್ರೇಶ್ವ- ॥
ರನ ಗುರುಮಯ್ಯನುಂ ವಿ- ।
ಪ್ರನಿಕಾಯಮುಮೇಕೆ ಪಿರಿಯರೆಂಬಮೂರ್ಖರ್ ॥ ೫ ॥

ಇದುದಯ್ವುಮಲ್ಲದಿರ್ದೊಡೆ |
ಮುದದಿಂ ಬ್ರಾಹ್ಮಣರುಮರಸರುಂ ಯೋಗ್ಯರುಮಿಂ- ||
ತಿದನೇಕಾರಾಧಿಪರೆಂ- |
ದನಿತಂ ತಾಂ ಕೊಂಡುಕೊನೆವುದದೆ ಮೂಢತ್ವಂ || ೬ ||

ಪೊಡೆಮಡುವವರಂ ಕಂಡಡೆ |
ಪೊಡೆವಡುವರ್ದೇವರಲ್ಲದಿರ್ದೊಡಮೆಂತುಂ ||
ಕುಡುವವರಂ ಕಂಡಾಗಳೆ |
ಕುಡುವರ್ಪಾತ್ರಮಿದಪಾತ್ರವೆನ್ನದೆ ಮೂಢರ್ || ೭ ||

ವೃ|| ತನಯನನೋರ್ವನಂ ಪಡವೆನೆಂದನುರಾಗದೆ-
ಪೋಗಿಮಲ್ಲಿಕಾ- |
ರ್ಜ್ಜುನನನಹರ್ನಿಶಂ ಮಿಡುಕದೋಲಗಿಸುತ್ತಿರೆ-
ವಿಷ್ಣುಗುಪ್ತನೀ- |
ಶನೆಬರವೀವುದುಂ ತಡದುದೆಂದು ಕನಲ್ದೊಡೆ-
ಯಿಟ್ಟೊಡೊಂದುಪೋ- |
ಳನಿತಱೊಳಿರ್ದುದೊಂದು ಕಡಿಪೀಠದೊಳಿರ್ದಪು-
ದೆಂಬರೆಲ್ಲರುಂ || ೮ ||

ಪೆಸರಿಂಗೊಯ್ಯನೆ ಮುಕ್ಕುವೋದಡೆ ಬಳಿಕ್ಕಾಲಿಂಗಮುಂ-
ಮುಟ್ಟಿಪೂ- |
ಜಿಸಲಾಗೆಂದೊಡೆ ಮಲ್ಲಿಕಾರ್ಜ್ಜುನನೆರಳ್ವೇಳಾ-
ದುದಂ ಕಂಡುಗಂ- |
ಡುಸಮಗ್ರಂ ಸಲೆಜಾತ್ರೆಯಾಗಿ ಭರದಿಂ ಬೆಟ್ಟೇಱಿಯುಂ-
ಘುತ್ತೆ ಪೂ- |
ಜಿಸುವರ್ಪಾತ್ರೆ ಮರುಳ್ಗಳೆಂಬುದನಮೋಘಂ-
ಮಾಳ್ಪವೋಲ್ನಾಡವರ್ || ೯ ||

ಕಂ|| ಶಂಕರ ನಾರಾಯಣನ ಕ- |
ರಂ೧ಕೆವು೧ದು ಯೋಗದ ಕಡೆಯೊಳೊಂದೆ[ಂದೆ]ನು- ||

---

೧. ಇ—೧ಕಡೆವು೧;

ತ್ತಂಕರಿಸಿಟ್ಟೊಡನೆನ್ನದೆ- ।
ಯುಂ ಕಾಣ್ಬಪೆರ್ವೀಗಿ ತುಂಗಭದ್ರೆಯತಡಿಯೊಳ್ ॥ ೧೦ ॥

ಶಂಕರ ನಾರಾಯಣನೆರ- ।
ಡುಂ ಕಾಲುಂ ಪೂಳ್ದು ನೆಲದೊಳಿರ್ದ್ದುದನೇಂ ಕಂ- ॥
ಡುಂ ಕಾಣಕ್ಕಾರ್ಗಳ್ಗಳನೆನು- ।
ತಂ ಕುಮತಿಗಳೊಳೆ ಮೂಢರದು ದಿಟವೆಂಬರ್ ॥ ೧೧ ॥

ಗರೆಯುಳಿಯ ಚಂಗದೇವನ ।
ಪುರಿಯೊಳು ಸಂಗಮಳ ವಿಷ್ಣುದೇವನಮೂಱುಂ ॥
ಕರಮುಂ ಮುಱಿದಿರ್ದ್ದಪು ಯುಗ- ।
ಪರಿವರ್ತ್ತನದಂದು ಕೆಡದುದೆಂಬಮೂರ್ಖರ್ ॥ ೧೨ ॥

ಲಿಂಗಂಗಳು ಬಳದಡೆ ಪೀ- ।
ಠಂಗಳು ಬಿರಿಯುತ್ತಮಿರ್ದ್ದುದೊಡೆಯದವೋಲಾ ॥
ಲಿಂಗದ ತಲೆಯೊಳ್ನಡೆವೊಳೆ- ।
ಯಂ ಗಡ ಬೆಟ್ಟಿದೊಡೆ ಬಳೆಯುವೆಂಬಮೂರ್ಖರ್ ॥ ೧೩ ॥

ಕುಂದುಗುವಾಗಳೆ ಪೆರ್ಚ್ಚುಗು- ।
ಮೆಂದುಂ ಚೈತನ್ಯಲಿಂಗಮಲ್ಲಪೆಮಱಿದುಂ ॥
ಕುಂದುಗುಮೆನೆ ಸಂದೇಹಮು- ।
ದೆಂದುಂ ತಾಂ ಬೆಳವುವಲ್ಲಪಾರ್ತ್ಥಿವಲಿಂಗಂ ॥ ೧೪ ॥

ಹರಲೀಲೆ ಸೂರ್ಯ್ಯಶತಕಮಿ- ।
ವೆರಡುಮನುದ್ಘಟನುಮಾಮಯೂರನುಮಿನಿಸಂ ॥
ವಿರಚಿಸೆ ಶಿವನುಂ ರವಿಯುಂ ।
ನೆರಮಾಗಿರ್ದ್ದೆಯ್ದೆ ಪೇಳ್ವರೆಂಬಮೂರ್ಖರ್ ॥ ೧೫ ॥

ಉರಗನುಮಂ ಕೆಂಜೆಡೆಯುಂ[1] ।
ಸುರನದಿಯುಂ ಪಱಿಯುಮಂ ಕಪಾಳಾವಳಿಯಂ ॥
ಹರಲೀಲೆಯೆಂದು ಬಣ್ಣಿಸು- ।
ತಿರೆ ಖೇಚರರಪ್ಪರೆಂದು ನೆಗಳ್ವಮೂರ್ಖರ್ ॥ ೧೬ ॥

---

೧. ಇ—ಯುಂ;

ಹರನತನುವೆಲ್ಲವಮಂ ಸಾ- ।
ಸಿರವೃತ್ತದೆ ಪೊಗಳೆ ಖಚರರಪ್ಪಂಗಡ ಕೇ- ॥
ಳ್ದನಿತಂ ಬಣ್ಣಿಸುವಾತ- ।
ನ್ನರಸಿಕೆ ಖಚರತ್ವಮಾಗದಿಕ್ಕುಮೆ ಕಡೆಯೊಳ್ ॥ ೧೭ ॥

ಕಿರಣಮುಮಂ ವಾಜಿಗಳುಮ- ।
ವರುಣನುಮಂ ರಥಮನರ್ಕ್ಕಬಿಂಬಮುಮಂ ಬಿ- ॥
ತ್ತರದಿಂ ಬಣ್ಣಿಸೆ ಸಗ್ಗಂ ।
ದೊರೆಕೊಳ್ಗುಂ ಸೂರ್ಯ್ಯಶತಕದಿಂಗಡಚಿತ್ರಂ ॥ ೧೮ ॥

ಕಿರಣಮುಮಂ ಮಂಡಳಮಂ ।
ಖರಕರನಂ ಪೊಗಳ್ದುಪಡೆಗೆ ಫಲಮಂ ಸೌರಂ ॥
ತುರಗಮುಮಂ ಸ್ಯಂದನಮುಮ ।
ವರುಣನುಮಂ ಪೊಗಳ್ದೊಡೆಮಗಮೀಗುಮೆಬರಮಂ ॥ ೧೯ ॥

ನಟನಂ ಸ್ತುತಿಯಿಸಲೊಡನು- ।
ದ್ಭಟನುಂ ಮಲುಹಣನುಮಾಶರೀರಂ ಬೆರಸಾ- ॥
ನಟನ ಬೆಸದಿಂದ ವ್ಯಂದನ ।
ವಿಟೀಜನಂ ಕೊಂಡುಪಾಱಿ ಪಾಱಿದನೆಂಬರ್ ॥ ೨೦ ॥

ಸುರಲೋಕಕ್ಕೇಳ್ವೆಡೆಯೊ- ।
ಳ್ದೊರೆಕೊಳ್ಳವು ದೇಹಮೆಂದು ಮರ್ತ್ತ್ಯರದೇಹಂ ॥
ಬೆರಸೇಳ್ವರಕ್ಕುಮಂತುಂ ।
ಗಿರಿಶನಮುದವರ್ಗ್ಗಳಱಿಯದೇನೋ ನುಡಿವರ್ ॥ ೨೧ ॥

ಕಡಿದಡೆ ಬಾಣಂಕಯ್ಯಂ ।
ಗಡಕೂಡೆ ಕೊನರ್ತ್ತುದಾ ಮಯೂರನತೊನ್ನಾ- ॥
ದೊಡಲುಂ ಸುವರ್ಣ್ಣಮಾದುದು ।
ಗಡದೇವರ ವರದಿನೆಂದು ಮುಗ್ಧರ್ನ್ನುಡಿವರ್ ॥ ೨೨ ॥

ಭಗವತಿಯುಂ ಸ್ತುತಿಯಿಸಲಾ ।
ಭಗವತಿ ಮೇಧಾವಿರುದ್ರನಿರ್ದ್ದತ್ತಲ್ತ- ॥

---

೧. ಇ,ಈ—ನ;

ನ್ನ ಗೃಹವೊಳಗಾಗಿ ತಾಂ ಗಡ ।
ಮಗುಳ್ದಿತ್ತಳ್ಕಳೆದ ಕಣ್ಣನೆಂಬಮೂರ್ಖರ್ || ೨೩ ||

ನಯವಿದರುಂ ಪಂಡಿತರುಂ ।
ನಿಯೋಗಿಗಳುಮವರಪೆಂಡಿರುಂ ೧ನೀ-ಲಜೇ೧- ||
ಷ್ಠೆಯನಾರುಂ ನೋಂತುವರದೆ ।
೨ಯನಿಸುಗುಂ ತಮಗೆಯುತಿರಿಯುತ್ತಮಿರ್ದ್ದಡಂ-
ಮೂರ್ಕ್ಖಜನಂ೨ || ೨೪ ||

ರಾವಣನಂ ರಾಘುವನಂ ।
ಭೂವಲ್ಲಭನಪ್ಪನಳನುಮಂ ಪಾಂಡವರಂ ॥
ದೇವತೆ ಗಡ ಕದಡಿದಳೆಂ- ।
ದಾವಿಧದಿಂ ಜೇಷ್ಠೆಯೆಂಬರಱಿವಿಲ್ಲದವರ್ || ೨೫ ||

ಅಂಬುಳುವಾದಡೆ ಷಣ್ಮುಖ- ।
ನೆಂಬರು ಸೀವಳಿಗೆಯಾಗೆ ಸಲೆ ಮಾರಿಯಹು- ॥
ಣ್ಣೆಂಬರು ತುಱಿಯಾದಡೆ ಫಣಿ- ।
ಯೆಂಬರ್ ಮತಿಹೀನಜನರದೇನಂ ಮಾಡರ್ || ೨೬ ||

ಹರನೋರ್ವ್ವ ವಿಧವೆಯೊಳ್ನೋ- ।
ಲ್ತಿರಲಾಱದೆ ನೆರೆದೊಡೊಗೆದನವಧೂತಮುನೀ- ॥
ಶ್ವರನಾಱಿಂಡೆಯುಮಂ ಪಾ- ।
ರ್ವ್ವರಾರೆ ಬಗ್ಗಿಸಿದನೀಶನೆಂಬಶ್ಶೈವರ್ || ೨೭ ||

ಗಿರಿಜೇಶಂ ತೆಱದಂ ಜೇ- ।
ಡರದಾಸಿಗೆ ಪಡಿಯನೊರ್ವ್ವಮಗನಂ ಕೊಂದಾ- ||
ಸಿರಿಯೂಳನಿಕ್ಕಲುಂಡ- ।
ಚ್ಚರಿಯೆನೆ ಚೋಳ್ನಾಡೊಳೆತ್ತಿದಂ ಗಡ ಮಗನಂ || ೨೮ ||

ಪಾಡಿದಡೆ ಪಾಡುವಂ ಮ- ।
ತ್ತಾಡಿದೊಡಿರದಾಡುತಿರ್ಪ್ಪನಾಕುಂಬಱಿನಿಂ ||

---

೧. ಈ—೧ನೀನಲಜೇ॥ಷ್ಠೆ೧; ೨. ಈ—೨ನಿಯತಂ ಫಲವಾಯ್ತುವೆಂದು ನುಡಿದ-ಮೂರ್ಖರ್೨;

ಕೂಡಿಪ್ಪನೀಶನೆಂದಿಂ ।
ತಾಡುವರಱಿವಿಲ್ಲದವರ್ಗಳಾರಿಯನಾಡೊಳ್ ॥ ೨೯ ॥

ಏನೆಂಬುದೊ ಚೋಳನ್ನಾಡೊಳು ।
ಮೀನಂ ಕೈವರ್ತ್ತನೀಯೆತನಗಿತ್ತವನಂ ॥
ಮಾನವಪತಿ ದಂಡಿಸೆ ಬಿಡು ।
ನೀನೆಂದೀಶ್ವರನೆ ಪರಿದು ಬಿಡಿಸಿದನೆಂಬರ್ ॥ ೩೦ ॥

ಅವಿವೇಕಿ ತೋಱಿಗೆ ಗಂಗಾ- ।
ಸ್ತವಮೆಂಬುದನೋರ್ವ್ವನರ್ತ್ಥಿಯಿಂದುಸಿರ್ದೊಡದಂ ॥
ಕವಿಪುಂಗವರ್ಕ್ಕಳೋದುವ- ।
ರವಶ್ಯಮವಿವೇಕಿಬಱಿಯ ನೀರೆಂದಱಿಯರ್ ॥ ೩೧ ॥

ವರರುಚಿ ತನ್ನಂ ಸ್ತುತಿಯಿಸೆ ।
ಸುರನದಿ ಮೆಚ್ಚಿತ್ತಳಿರಡು ಕಂಕಣಮನವಂ ॥
ನರಪತಿಗೆ ತೋಱಿನೆವದಿಂ ।
ವರರುಚಿಗಡ ತನಗೆ ಮುಳಿದ ಪೊಲೆಯನನಳಿದಂ ॥ ೩೨ ॥

ಮುಕ್ಕುಳಿಸಿಯುಗುಳೆ ಪಾರ್ವ್ವ- ।
ರ್ಮಿಕ್ಕವರಂ ಬಯ್ವರಕ್ಕಟಾಪೇ೧ಲಂತಾಂ (ಕಚ್ಚರ್) ॥
..................................೧ ।
ಲ್ತಕ್ಕುದೆ ತಮಗೀಶನರಸಿಗಂಗೆಯಬಾಯೊಳ್ ॥ ೩೩ ॥

ಮರಗಳ್ ಪಾಱುಗುಮಿಂದ್ರನ ।
ಪುರಕ್ಕೆ ಬೇರ್ವ್ವೆರಸು ಕಿತ್ತುತುಱುಗೊಳೊಳ್ಸ- ॥
ತ್ತರನಾಗಳಂತೆ ಬೇಗಂ ।
ಸುರಗಣಿಕೆಯರೊಯ್ವರೆಂಬರಱಿವಿಲ್ಲದವರ್ ॥ ೩೪ ॥

ಜೀವನು ತಾಂ ಗಡಪೋಗದು ।
ದೇವೇಂದ್ರಪುರಕ್ಕೆ ದೇವಗಣಿಕೆಯರೊಯ್ವ- ॥
ರ್ಜ್ಜೀವಮನೆಂದಿಂತೂಳ್ವ- ।
ರ್ಜ್ಜೀವಂ ಭಾವಿಪೊಡಮೂರ್ತ್ತನೆಂತದನೊಯ್ವರ್ ॥ ೩೫ ॥

---

೧. ಇ—೧ಲಂ ಕಚ್ಚರ್॥ ಲ್ತಕ್ಕುದೆ ಶಲ್ಯಮನಿಕ್ಕ ।೧;

ಲಿಂಗಂಗಳ್ ಬೆಳವಡೆ ವೃ- ।
ಕ್ಷಂಗಳ್ಪೂಱುವಡೆ ಕಡಿದ ಕೈ ಕೊನರ್ವಡೆ ದೇ- ॥
ಹಂಗಳ್ವೆರಸಮರೇಂದ್ರಪು- ।
ರಂಗಳ್ಗೊಯ್ವ[1]ಡೆ ತಾಂ ಮನುಜರಿನ್ನರಘುಟಿತ-
ಮಿನಿತುಂ[1] ॥ ೩೬ ॥

ವಟ[2]ಸಾವೃತ್ತಿ[2]ಯನೋಂಪಿಗೆ ।
ವಟವೃಕ್ಷದ ಕೆಳಗೆ ಸೀರೆಯುಂ ತುಡುಗೆಯುನ- ॥
ಕ್ಕಟ ಕೊಟ್ಟು ಕಿಡದೆ ಕೊಡುವುದು ।
ದಿಟವೊಲ್ವಡೆ ಸೌಖ್ಯಮುಂ ಜಿನಂಗರ್ಚ್ಚನೆಯುಂ ॥ ೩೭ ॥

ಗಿರಿಗಳ ಕೆಱೆಗಳ ಮರಗಳ ।
ತೊಱೆಗಳಕೆಯ್ಗಳ ಸಮೀಪದೊಳ್ನೋಂತಡದೇಂ ॥
ದೊರೆಕೊಳ್ಗುಮೆ ಸುಖಮುದಱಿಂ ।
ಪರಮಂಗರ್ಚ್ಚನೆಯನಿತ್ತು ಪಡೆವುದು ಸುಖಮಂ ॥ ೩೮ ॥

ಖಂಡೇಂದುಧರನನರ್ಚ್ಚಿಸಿ- ।
ಯಿಂಡೆಗಳುಚ್ಚಳಿಸಿ ಕಯ್ಗೆ ಬಾರದೊಡಾಗ- ॥
ಳ್ಕಂಡೆಯನರಿದೇಱಿಸುವಂ ।
ಕಂಡಕ್ಕರ್ಂಟಣೆಸಿರಾಯನೆಂದಿಂತೂಳ್ವರ್ ॥ ೩೯ ॥

ಬೆನಕಂ ಕೆಯಿಕೆಟ್ಟಡೆ ಕಾ- ।
ವನೆಕೆಱೆಯೇರಿಯಲ್ಲಿ ಕೆಱೆಯೊಡದಡೆಕಾ- ॥
ವನೆಕೆಮ್ಮನಱಿತಮಿಲ್ಲದ ।
ಮನುಷ್ಯರಲ್ಲಲ್ಲಿಗೇಕೆ ನಿಱಿಪರೊ ಪೇಳಿಂ ॥ ೪೦ ॥

ಬೆನಕಂಗಿಕ್ಕಿದೊಡಂ ಭೂ- ।
ತನಿಕಾಯಕ್ಕೊಯ್ದು ಸರುಗಮಂ ಪೂಸಿದೊಡಂ ॥
ಮನೆದೆಯ್ವಕ್ಕಿಕ್ಕಿದೊಡಂ ।
ಘನವಾಗದು ಬೆಳಸುನಿಯುತಮೆಂಬರುವೊಳರೆ ॥ ೪೧ ॥

---

೧. ಇ—೧ಡೆ ಮನುಜರಘುಟಿತಮಿನಿತುಂ ॥೧;
೧. ಈ—೧ಡೆ ಮರ್ತ್ಯಜರಘುಟಿತಮಿನಿತುಂ ॥೧;
೨. ಇ, ಈ—೨ಸಾವಿತ್ರಿ೨;

ಸಾಯಿರ ಖಂಡುಗವಮಂ ಬೆಳ- ।
ದಾವೊಕ್ಕಲಮಗನದೊಂದು ಕಂಬಮನೊಯಿದಿ- ॥
ಟ್ಟಾಯಾರಿನ ಬಾಡುಬ್ಬೆಗೆ ।
ಸಾಯಿರಮಂ ಬೆಳದನೆಂದು ನುಡಿವಮೂರ್ಖರ್ ॥ ೪೨ ॥

ಕಡಗದುಡಿಯುಂತಿರಿದ್ದೊಡೆ ।
ಪೊಡೆವಡುವರು ಪೂರ್ನ್ನರಾದೊಡಂ ಪೂರ್ಣ್ಣಮಿಯೊ- ॥
ಳ್ಪೊಡೆವಡರದೆಂತೊ ಚಂದ್ರಂ- ।
ಗೆಡಂಬದಿಂ ಮೂಢಜನದ ನೆಗಳ್ತೊಂದಂದಂ ॥ ೪೩ ॥

ತಿಂಗಳ್ನರಮಮೃತಮನಾ- ।
ತಿಂಗಳು ಸುರಿದಪುದೆಬಯಸಿ ನೋಡುವರೆಲ್ಲಂ ॥
ತಿಂಗಳೊಳೊಂದು ದಿನಂ ಬೆಳು- ।
ದಿಂಗಳು ಜಾತಿಯೊಳೆ ವಿಷಮನುಗುಳ್ವುದೆ ನೋಡಲ್ ॥ ೪೪ ॥

ಸೊಡರಂ ಪೊತ್ತಿಸಿದವರ್ಗ- ।
ಳ್ಪೊಡೆವಡುವಮ್ಮರ್ನ್ನವದನೆ ಕಂಡವರಾರುಂ ॥
ಪೊಡವಡುವರಲ್ಲದೇಕೆಯೊ- ।
ಪೊಡವಡರದುವೆಲ್ಲಿಯುರಿವಕಿಚ್ಚಿಂಗವರ್ಗಳ್ ॥ ೪೫ ॥

ನಾಲಗೆಯುಂ ಕೊಯ್ದರ್ಚಿಸೆ ।
ಲೀಲೆಗಳಿಂ ಮತ್ತೆ ಕೊನರಿಪಂ ಗಡ ಪಲರ್ಗಂ ॥
ನಾಲಗೆಯನಡಸಿ ಕೊಯ್ದಡೆ ।
ನೀಲಗಳಂ ಕುಡಿದೆ ತಾನೆಬಕ್ಕುಮಿದೇನೋ ॥ ೪೬ ॥

[೧]ಮೊದಲ[೧]ಡಸಿ ಕೊಯ್ಯೆನಾಲಗೆ ।
ಕೊದಲಿಸಿ ನುಡಿಯಲ್ಕೆ ಬಕ್ಕುಮದಱಿನದಿಕ್ಕಾರ್ಯ ॥
ತುದಿಮೂಗನಕ್ಕೆ ಭಕ್ತನ ।
ತುದಿಕೊಡಕೆಯನಕ್ಕೆ ಕೊಯ್ಯೆ ಕೊನರ್ವಡದಕ್ಕುಂ ॥ ೪೭ ॥

ಒಡಲನಿತುಂ ತೊನ್ನಿಂ ನಸಿ- ।
ದೊಡೆ ಬುದ್ಧವಿಹೀನನೋರ್ವ್ವದೇವಂ ಮೆಯ್ಯುಂ ॥

---

೧. ಇ—೧ಬಡ೧;

ಕುಡುತಿಪ್ಪನೆಂಗು ಪಿರಿದುಂ ।
ಕುಡಲಱಿಯಂ ನಿನಗೆ ಕರ್ಮ್ಮಮುಂಟೆನೆ ಮಗುಳ್ವರ್ ॥ ೪೮ ॥

ವೃ॥ ದೊರೆಕೊಳೆ ಕುಷ್ಠರೋಗಮದನೀಕ್ಷಣದೊಳ್ಕಳೆದಪ್ಪ-
ನೆಂದೊಡೇಂ ।
ಪರಿವರೊ ದೇವನಲ್ಲಿಗೆ ಕೆಲರ್ಗ್ಗತಿರೂಕ್ಷಣದಿಂದ-
ತಾಂ ತೊಳ- ।
ಲ್ತರೆರುಜೆಪಿಂಗುಗುಂ ನಿಯಮದಿಂ ಕಳೆವಂತಿರೆ-
ದೇವನೆನ್ಗರು- ।
ಷ್ಕರಗುಿಡಮೋವಿರುದ್ಧ ರಸ ಭಸ್ಮಮೊವರ್ಮ್ಮ-
ಕಟುತ್ರಿಕಾದಿಯೋ ॥ ೪೯ ॥

ಕಂ॥ ಏ ಮಾತೋ ಪೊಗಳಿದೊಡೇಂ ।
ಸೋಮೇಶ್ವರ ದೇವನಿತ್ತಪಂ ಮೇಗಳನೆಂ- ॥
ದೀಮಹಿಯ ಮೂಢರೆನಲೊಡ- ।
ನಾಮಾತಂ ನಂಬಿಪೋಗಿ ಪಡೆಯದೆಬರ್ಪ್ಪರ್ ॥ ೫೦ ॥

ಮೆಯ್ಯಂ ಕಣ್ಣಂ ಕಾಲಂ ।
ಕಯ್ಯಂ ಮುಂ ರುದ್ರನಿತ್ತುದಂ ಕೇಳ್ದಿರ್ದ್ದುಂ ॥
ಮೆಯ್ಯಱಿಯಿನ್ನೀಮುಂಜೀ- ।
ನೆಯ್ಯಂ ಕೊಟ್ಟಪನೆ ಪೇಳಿಮೆಂಬಮೂರ್ಖರ್ ॥ ೫೧ ॥

ಮುನ್ನಿನಪಾಪಂ ಪಱಿದೊಡೆ ।
ಪೊನ್ನಕ್ಕುಂ ೧ಪುರು೨ಳುಮಕ್ಕುಮಾತನಮೆಯ್ಯುಂ ॥
ತೊನ್ನುಂ ಪೋಕುಂ ಮೆಯ್ಯಂ ।
ಪೊನ್ನಂ ದೇವರ್ಕ್ಕಳಾಗ್ಗೆಮೀಯರದೆಂತುಂ ॥ ೫೨ ॥

ಜೀವಂ ಪಾಪದ ಫಲದಿಂ ।
ಸ್ಥಾವರ ಪಶುಪಕ್ಷಿಯೋನಿಯೊಳ್ಪುಟ್ಟಿರೆಯುಂ ॥
ತಾವಿಂಬಾಗಿರೆ ತಿಳಿದುಂ ।
ದೇವರಿಗೆಱಿಗುವವೊಲೆಱಿಗುತಿಪ್ಪಮೂರ್ಖರ್ ॥ ೫೩ ॥

---

೧. ಇ—ನ್ನ; ೨. ಇ—ಗ; ೩. ಇ—೩ಹರ೩;

ಸ್ಥಾವರಮುಪ್ಪೇಕೇಂದ್ರಿಯ |
ಜೀವಂಗಿಡುಮರನೆನಿಪ್ಪುವಘಮುಮಂ ಕೆಡಿಸ- ||
ಲ್ತಾವಾಪ್ಪುರ್ವೆ ನೆಗಳ್ದರುಹ- |
ದ್ದೇವನನೋಲಗಿಸಿ ಪಡಯಿಯಿಹಪರ ಸುಖಮಂ || ೫೪ ||
ಜ್ಞಾನಿಯೆ ನಾನೆಂಬವನುಂ |
ತಾನಱಿಯಂ ಮರನನಿಟ್ಟುವದಂ ಬಲವರುತಂ ||
ಜಾನಿಸುತಮಿರ್ಪ್ಪನಾಮರ- |
ನೇಂ ನೆಗೆಗುಮೆ ಪೊತ್ತುಕೊಂಡು ಸಗ್ಗಕ್ಕವನಂ || ೫೫ ||
ಬಗೆವೊಡದೇನಾನುಂ ಬಾ- |
ತ್ತೆರ್ಗಲ್ಲದೆನಿಪರಳಿಗೊಲ್ದು ಪೊಡೆವಡುವ ನರಂ ||
ಚಿಗುರಿಂ ಪೂವಿಂಕಾಯಿಂ |
ಸೊಗಯಿಪಮಾಪಿಂಗೆ ಪುಣಿಸೆಗೆಱಿಗಲ್ವೇಡಾ || ೫೬ ||
ಎನಿತಾದುವರಳಿ ಯೆಲೆಗಳ- |
ವನಿತುಂ ವಿಷ್ಣುಪ್ರತಿಷ್ಠೆಯೆಂದೆನೆಮತ್ತಂ- ||
ತನಿತು[೧]ಮುದ್ರಿದಾಗಳ[೧]ಮರ- |
ನನಿಟ್ಟವಂಗಾಗದಿಕ್ಕುಮೋಕಿತ್ತಫಲಂ || ೫೭ ||
ಪುಲಿಗಿಲು ಮುತ್ತರಣೆಯುಮಂ- |
ತೆ ಲೊಕ್ಕಿಯುಂ ಮತ್ತೆಮುತ್ತಮಾಯೆಕ್ಕೆಯುಮಂ ||
ಕೊಲೆಯುಂ ಬನ್ನಿಯುಮರನುಂ |
ಕುಲದಯ್ವವಿದೆಂದುಕೊಂಡು ಕೊನವಮೂರ್ಢರ್ || ೫೮ ||
ಪಾಪದ ಫಲದಿಂ ಯೋನಿಯೊ- |
ಳಾಪೊತ್ತುಂ ನಮೆವಪಶುಗೆ ಪೊಡೆವಟ್ಟಡದೇಂ ||
ಪೋ[೨]ಕುಮೆ[೨] ತನ್ನಯ ಮಾಡಿದ |
ಪಾಪಂ ಮತಿಹೀನರನಿತನಪ್ಪಡಮಱಿಯರ್ || ೫೯ ||

ವೃ|| ಧರೆಯುಂ ಮೂವತ್ತಮೂದೇವರು ಮಹೀಕುಳಮುಂ-
ನಾಲ್ಕು ವೇದಂಗಳುಂ ಭಾ- |
ಸ್ಕರನುಂ ತಾರೇಶನುಂ ವಹ್ನಿಯುಮುಮರಮುನಿ-
ವ್ರಾತಮುಂ ಸಿದ್ಧರುಂ ಕಿ- |

---

೧. ಇ—೧ಮುದಿದ್ದಾರ್ಗಳುಂ೧; ೨. ಇ, ಈ—೨ಪುದೆ೨;

ನ್ನರರುಂ ಗಂಧರ್ವ್ವರುಂ ಗೋಕುಲದತನು-
ವಿನೊಳ್ನಿಂದುವೆಂದಂದೆ ಮೂಢ- |
ರ್ವ್ವರಿದೊಂದುಂ ಭಕ್ತಿಯಿಂದಂ ಪೊಡೆವಡು-
ವರದಕ್ಕೆದ್ದ್ರ್ ಸುಶ್ರೂಷೆಗೆಯ್ದರ್ || ೬೦ ||

ಕಂ|| ಹರಿಹರ ಪಂಕಜಭವರುಂ |
ನರಸುರಪನ್ನ[1]ಗರಖಚರ ಮುನಿಗಳುನಿರುತಂ ||
ಸರಿಗಾಡುವ ಪಶುವಿನೊಳ- |
ಲ್ಲಿರಲೇಂ ತಾನೆಂತೊ ತೊನಸೆಯೋ ನೊಣವುಗಳೋ || ೬೧ ||

ಬಡಕಪ್ಪಡಿ ತನ್ನಿಪ್ಪಾ |
ಗುಡಿಸಂಬಲ್ಲಿತ್ತು ಮಾಳ್ಪನೆಲ್ಲಂದದಿನೆಂ- ||
ದೊಡೆ ದೇವನಗಲದಿಪ್ಪಾ ([2]ಪಶುವಂ) |
ಕೆಡೆಯಲ್ಕಣಮೀಯದಂತುರಕ್ಷಿಸವೇಡಾ[2] || ೬೨ ||

ಕುಲಹೀನರೆನಿಸಿದವರುಂ |
ಪೊರೆಯುರುಮಾಪೊತ್ತುವೊದೆದು ಬಡಿಯುತ್ತಿರೆಯುಂ ||
ಸಲಿನಮೆವಾವಿಸಮೆಯ್ಯೋ- |
ಳ್ತಲೆಮುಟ್ಟೆಂತೆಂತುನಿಂದರಾ ದೇವರ್ಕ್ಳ್ || ೬೩ ||

ಪಶುವಿನ ಪಡುಕೆಯನಾತ- |
ಕ್ಕಲಸದೆ ಪರಿದೆಯ್ದಲಾಗಲೊಯ್ಯನೆ ನಡೆದಂ- ||
ಗಸಮ ಸುಖಾಸ್ಪದಮಕ್ಕುಂ |
ಪುಸಿಯಲ್ಲದು ದೇವರಿಪ್ಪತಾಣಮದೆಂಬರ್ || ೬೪ ||

ಆವಿನತೊವಲಿನ ಗಂಧ- |
ಕ್ಕೇವಯಿಸದೆ ಮಾಳ್ಪಸಮ್ಮಗಾಜಿಂಗಂ ಮ- ||
ತ್ತೇವಯಿಸದೆ ಸೇವಿಸುವಂ- |
ಗಾವುದು ಫಲವೆಂದು ತಿಳಿಗೆ ಭಕ್ತರಮತದೊಳ್ || ೬೫ ||

ಅತಿರುಚಿರಬಾಳವತ್ಸಾ- |
ನ್ವಿತಗೋಕುಲದಿಂದಮೆಸಗು ಮಾವನಮನೆ ಭೂ- ||

---

೧. ಈ—ನ್ನ; ೨. ಈ—೨ಬಡಹಸುವಂ ಕೆಡೆಯದೆಂತುರಕ್ಷಿಸವೇಡಾ |೨;

ನುತವಾ ಮಹಾತ್ಮನೆಂಬ- ।
ಶ್ರ್ಯತ ಸಂಖೆಯ ಪಶುವನಾಳ್ವನವನೇನೆಂಬರ್ ॥ ೬೬ ॥

ಲೋಕದೊಳಗುಳ್ಳದೇವಾ-।
ನೀಕಮದೊಂದಾವಿನಲ್ಲಿ ನೆಲಸಿರ್ಪ್ಪುದೊಮೇ- ॥
ಣ್ಗೋಕುಲದೊಳಲ್ಲಿಗಲ್ಲಿಗ- ।
ನೇಕಂ ರೂಪಾಗಿ ನೆಲಸುವುದೊ ಪೇೞಿಮಿದಂ ॥ ೬೭ ॥

ಮುನ್ನಿನ ಪಾಪದ ಫಲದಿಂ- ।
ದಿನ್ನುಂ ನಮೆವುತ್ತಮಿರ್ಪ್ಪ ಪಶುಗೆಱಗುವವಂ ॥
ತೊನ್ನಂಗೆ ತುೞಿಲುಗೆಯ್ದಂ- ।
ಗೆನ್ನಂತಾಗೆಂದನೆಂಬುದನೆ ನೆನೆಯಿಸುಗುಂ ॥ ೬೮ ॥

ಕವಿಲೆಗಳ ಪೆಱಗೆ ಪರಿಪರಿ- ।
ದವುಸರಗಾಡುತ್ತಮಿರ್ದ್ದಡಂತಿರೆಬಲಗೊಂ- ॥
ಡಿವುದೆಯ್ವೆಂದು ಪೊಡೆವಡು- ।
ವವರಂದದೆ ಜೈನರಲ್ಲಿ ಕುತ್ಸಿತರೆಱಗರ್ ॥ ೬೯ ॥

ಶಿಷ್ಟನವಿವೇಕಿಯಾದಡೆ ।
ಕಷ್ಟಂ ಪಶುಕಲ್ಪನೆಂಬರೆಂದಂದದಱಿಂ ॥
ಕಷ್ಟಂ ಪೆಱತುಂಟೆಂಬರ ।
ಕಷ್ಟಮುಮಂತಂತದಕ್ಕೆ ಬಿಡದೆಱಗುವವಂ ॥ ೭೦ ॥

ಒಮ್ಮಾನಂ ಗಱವಾವಿಂ- ।
ಗೊಮ್ಮೆಯುಮೆಱಗುತ್ತಮಿರದೆ ಕೊಡವಾಲ್ಗರವಾ ॥
ಎಮ್ಮೆಗೆಱಗುವುದು ಪಶುವಿಂ ।
ನೂರ್ಮ್ಮಡಿ ಫಲಮೀಗುಮದಱಿನೆಱಗುಗೆ ಭಕ್ತರ್ ॥ ೭೧ ॥

ಆಡಿಂಗೆ ಮೆಲ್ಲನೆಱಗುಗೊ ।
ಕೋಡುಳ್ಳಾವಿಂಗೆ ಮತ್ತೆತಲೆವಾಗುಗೆಮ- ॥
ತ್ತಾಡಿಂದಿಮ್ಮಡಿಕೋಡು- ।
ಳ್ಳಾಡೆ[೧]ಮ್ಮೆಗೆ ತಾನುಮೊಲ್ದು ಪೊಡೆವಡುಗೆ ಫಲಂ ॥ ೭೨ ॥

೧. ಇ—ದೆ;

ಇಂತಱಿವರೊಳರೆ ಪಶವಿನ ।
ಪಿಂತೊಳ್ಳಿತುಮುಂತಮೇಧ್ಯಮೆಂದೆಂಬರಿದಿ- ॥
ನ್ನಂತೆಸಲೆಸರಗವಾಡುವು- ।
ದಂತದಱಿಂಮುಖಮಮೇಧ್ಯಮೆಂಬರದುಚಿತಂ ॥ ೭೩ ॥

ಸುರಿತಪ್ಪಕವಿಲೆಯುಚ್ಚೆಯ- ।
ನಿರದೊಯ್ಯನೆ ತಳಿದು ತಮ್ಮತಲೆಯೊಳ್ಕುಡಿವಾ- ॥
ನರರುಂ[1] ಗುರುಮಂ ತೆಂ[2]ಗುಂ ।
ನಿರುತಂ ಕೃತವಱಿವದೈವಮಾವುದೊ ಪಶುವಿಂ ॥ ೭೪ ॥

ಜೀವಂ ಕರ್ಮ್ಮವಿಪಾಕದ ।
ಪಾವುಂ ತೇಳಾಗೆಪಲಬರುಂ ಭಾವಿಸುಗುಂ ॥
ಕಾವುವೆ ತಮ್ಮಂ ಪುಳುಗಳು ।
ಭಾವಕರೆ ಕಱಿದುಮಾಣರೊಳ್ಳಕ್ಕರಿಗರ್ ॥ ೭೫ ॥

ನಾಡೆಯುಮುಚ್ಚಿರ್ಸುವರಮೆ- ।
ಯ್ಯೇಡನಣಂ ಕಾಯಲಾಱಿವೆಂತುಂ ನೊಣೆದೀ- ॥
ಡಾಡುವ ಸಾರಂಗದ ಮೆ- ।
ಯ್ಯೇಡನೆ ಕೆಡಿಸುವುವು ನಾಗರೇಂ ಸನ್ನಿದವೋ ॥ ೭೬ ॥

ಕೆರಕುಂ ತುಱಿಯುಂ ತೊನ್ನುಂ ।
ಶರೀರದೊಳ್ತೋರೆ ತಂತ್ರದಿಂ ಕಿಡಿಸಜೆ ನಾ- ॥
ಗರಮಾಟಮೆಂದು ಕಿವಿಯೊಳು ।
ಮುರಿದಿಟ್ಟುಂ ಪಲರುಮಚ್ಚಿರ್ಪಪ್ಪುತ್ತುಗಳಂ ॥ ೭೭ ॥

ಪಾವಂ ಕೊಲ್ವರುಸುಟೆಂ[3] ।
ಮೀವಪ್ಪೆಱಿರಿಂದಮಾದೊಡಂ ನಡುವಿರುಳುಂ ॥
ಪಾವಿನಸಾವಂ ಕೇಳ್ದುಂ ।
ಮೀವಪ್ಪಾವಿಂಗೆ ಭಕ್ತರಾಗಿ ಮರುಳ್ಗಳ್ ॥ ೭೮ ॥

ಕೆಱಿತೊಱಿಭಾವಿಗಳಂ ಪೊ- ।
ಕ್ಕಱುಚುತ್ತಂ ಬೆಂದನಾಗನಂ ಪೆಸಗೊಂಡುಂ ॥

೧. ಇ—ರು; ೨. ಇ—ತಿಂ; ೩. ಇ—ಟ್ಟೆಂ;

ಮೊಱೆಯಿಡುವರು ಮನೆಮನೆಯದೆ ।
ತೆಱೆವೇಳ್ಪಡೆ ನಾಗರಿಂತೆಗಾವಿಲರೊಳರೆ ॥ ೭೯ ॥
ಕಚ್ಚದಿರಿಮೆಂದು ಭಯದಿಂ ।
ನಿಚ್ಚಂ ಮೊಱೆಯಿಟ್ಟುಪುತ್ತನರ್ಚಿಸುತಿರೆಯುಂ ॥
ನಚ್ಚಿನನಾಗರದೆಂತುಂ ।
ಕಚ್ಚದೆಮಾಣ್ದಪವೆ ಭಕ್ತರಂ ತೊಡರ್ದಾಗಳ್ ॥ ೮೦ ॥
ನಡುಗಿ ಪೊಡೆವಡುವುದುಂ ಮೊಱೆ- ।
ಯಿಡುವುದುಮೇಕಣ್ಣಪಿಡಿದು ಪಲ್ಗಳೆದುಂ ಪಾ- ॥
ವಡಿ[1]ಗನಮೆಯ್ಯಂ....[1] ।
ಕಿಡಿಸಲ್ಕಾರ್ತಪುವೆ ತಮ್ಮ ನಚ್ಚಿನನಾಗರ್ ॥ ೮೧ ॥
ಅಸುವೆವೊರಲೊನಕೆ ಗೂಟಂ ।
ಪೊಸತಿಲು ಮನೆಮನೆಯ ಕಂಭವೊಲೆಪಡಿಪಾಲುಂ ॥
ಪೊಸೆವಮರನಂ ಬಿಲಂ ತೊಳ- ।
ಲಿಸಮಸ್ತಂ ದೆಯ್ವಮಿಂತಿವೆಂಬಮೂರ್ಖರ್ ॥ ೮೨ ॥
ದಾರಿಯ ಹೊರೆಯಣಗುಡ್ಡೆಯ- ।
ನೂರಸಮೀಪದ ಮರಂಗಳಂ ಕಲುಗಳನಂ- ॥
ಭೋರುಹವನಮಂ ಭಕ್ತಿಯಿ- ।
ನೋರಂತಿರಲರ್ಚಿಸುತ್ತಮಿಪ್ಪಮೂರ್ಖರ್ ॥ ೮೩ ॥
ದೇವಾರ್ಚನೆಗೆಯ್ದಲ್ಲಿಂ ।
ಪಾವುಗೆಯಂ ಮೆಟ್ಟಿನಡೆದು ಮನೆದೆಯ್ವಕ್ಕಂ ॥
ಗೋವಾಜಿ ಗಜಾಶಸ್ತ್ರಂ ।
ಗಾವಿಲ ರತಿಯಿಂದೆ ತಾಮುಪೊಡೆವಡುತಿಪ್ಪರ್ ॥ ೮೪ ॥
ಮಾರಬ್ಬೆ ಮಸಣಿವಾಸಿಣಿ ।
ಬೀರಂ ಮೈಲಾರನೆಂಬಿವರರೂಪಂ ವಿ- ॥
ಸ್ತಾರಿಸಿಮಾಡಿಸಿದಾತಂ ।
ನಾರಕ ದುಃಖದೊಳೆ ಮುಱುಗುಗುಂ ಪಲಕಾಲಂ ॥ ೮೫ ॥
ಪಲವುಂ ಪ್ರಾಣಿಗಳಂ ನಿ- ।
ಚ್ಚಲುಮಳಿಯಲುಮದ್ಯಮಾಂಸಮಂ ಸೇವಿಸಲುಂ ॥

---

೧. ಈ—೧ಗನೆನಿಪವನಮೆಯ್ಯಂ೧;

ನಲಿವವರ್ಗಳ ಬಳರಿಯದೇ- ।
ಗುಲಮಂ ಮಾಡಿಸುವರರ್ತ್ಥಿಯಿಂ ಪಾಪಿಷ್ಠರ್ ॥ ೮೬ ॥

ಅತಿಶಯವಾಗಿರೆ ಪೂರ್ವ್ವಾ- ।
ರ್ಜ್ಜಿತಪುಣ್ಯದ ಫಲಮನುಣುತತಾವುಂ ಮೂಢ- ॥
ರ್ಮ್ಮತಿಗೆಟ್ಟೀ ಭವದೊಳ್ ದೇ- ।
ವತೆಗಳನರ್ಚ್ಚಿಸಿದೊಡಾಯ್ತು ಸಿರಿತಮಗೆಂಬರ್ ॥ ೮೭ ॥

ರಿತುಮತಿಗೆನಿಜೇಶನಸಂ- ।
ಗತಿಯಿಂ ಸುತರಾಗೆದೇವರಿತ್ತಾವರವಿಂ ॥
ಸುತರಾದರೆಂಬರಂತಾ ।
ಸುತರಂ ಬಂಜೆಯರ್ಗೆದೇವರೀಯದದೇನೋ । ೮೮ ॥

ನಿಜಕರ್ಮ್ಮವಶದಿನೆಯ್ತಂ- ।
ದು ಜನಿಯಿಕುಂ ಜೀವಮಲ್ಲದಂತದನಾರ್ಗ್ಗಂ ॥
ಶ್ರೃಜಯಿಸಲುಬಕ್ಕುಮೇ ಮೂ- ।
ಢಜನಂ ವರವೀಯೆ ಪಡದೆವೆಂಬರಿದಘುಟಂ ॥ ೮೯ ॥

ಸಂತತಧನಧಾನ್ಯಂಗಳ- ।
ನಂತಿಲ್ಲದಸಿರಿಯನಿದಿರ್ಗೆ ಕುಡುವರೆನುತ್ತಂ ॥
ಭ್ರಾಂತಾತ್ಮರರ್ತ್ಥಿಯಿಂದಂ ।
ವ್ಯಂತರದೇವರನೆ ನಿಚ್ಚಮರ್ಚ್ಚಿಸುತಿರ್ಪ್ಪರ್ ॥ ೯೦ ॥

ಪೂಜಿಸಿದವರ್ಗ್ಗೆಬೇಳ್ಪುದ- ।
ನಾಜನ್ಮದೊಳೀವದೆಯ್ವಮುಳ್ಳಡೆಬಳಿಯುಂ ॥
ರಾಜಾಶ್ರಯಮೇವುದೊಸಲೆ ।
ಪೂಜೆಗಳಂ ಕೊಟ್ಟುಕಟ್ಟಿಕೊಳ್ವುದು ಪೊನ್ನಂ ॥ ೯೧ ॥

ಉತ್ತಮ ಮಾಹೇಶ್ವರರುಂ ।
ಮತ್ತಾವೈದಿಕರುಮಂತೆವೈಷ್ಣವರುಂ ತ- ॥
ಮ್ಮುತ್ತಮಿಕೆಯನೊಕ್ಕಾಗಡೆ ।
ಸತ್ತಪೆವೆಂದಂಜಿ ಬಳರಿಗರ್ಚ್ಚನೆಗುಣಿವರ್ ॥ ೯೨ ॥

ಪೆಂಪೇಂ[1] ನೆಱೆತೊಱೆದರಿಸಿನ- |
ಮಂ ಪೇಸದೆ ಪೂಸಿಕಟ್ಟಿ ಬಾಸಿಗಮಂ ಕೋ- ॥
ಲಂ ಪಿಡಿದು ಕುಣಿವರರ್ಚ್ಚನೆ- |
ಯಿಂಪಳಿವರನಱಿಯರನ್ಯ ಸಮಯಿಗಳಾರುಂ ॥ ೯೩ ॥

ಪೊಲೆಯುರ್ಪ್ಪಱೆಯುಂ ಬಾಜಿಸಿ |
ನಲಿದರ್ಚ್ಚನೆಯಾಡಿ ಮುಟ್ಟಿನೋಳ್ಪರನೆಲ್ಲಂ ॥
ಪೊಲೆಗಲಸಿ ಬಂಧುಜನಮುಂ |
ಪೊಲೆಯುರುವೊಂದೆಡೆಯೊಳೊಂದೆ ನರಕಕ್ಕಿಳಿವರ್ ॥ ೯೪ ॥

ಮಾರಬ್ಬೆ ಮಸಣಿಮಾಸಿಣಿ |
ಬೀರಂ ಮೈಲಾರನೆಂಬಿವರನೋಂಪಿಗಳೊಳ್ ॥
ಪೋ[2]ರುವರಂ ಪೊಲೆಯುರ್ಬ್ಬಂ- |
ದೋರಂತಿರೆ ಮುಟ್ಟಲಕ್ಕುಮೆಂಬಪಾರ್ವ್ವರ್ ॥ ೯೫ ॥

ಘನಕರ್ಮ್ಮವಶದೆ ಮುನ್ನಂ |
ಮನುಜಂ ತನ್ನಿಂ ಕನಿಷ್ಠನಂ ಪೂಜಿಸುವಂ- |
ದನುಚಿತಮೆನೆ ಮತ್ತಿನ ಬೀ- |
ರನಗುಡಿಗಳಮುಂದೆ ಕುಣಿವುದಾವುಚಿತಗುಣಂ ॥ ೯೬ ॥

ಭಾವಿಸುತುಂ ತನಗೆ ಮಹಾ- |
ದೇವಂ ತಾನಿಪ್ಪುದೆಯ್ದುಮೆಂಬಮರ್ತ್ತಂ ॥
ಬೋವದೆ ದೇವತೆಗಳುಮಂ |
ಸೇವಿಪನೆಂದಂದು ನಗಿಸಿಕೊಳ್ವನೆ ತನ್ನಂ ॥ ೯೭ ॥

ಪೆಱತಿನಿಯುಂ ವ್ಯಂತರಮಂ |
ಪಱೆಕರುಮಂ ಪೂಜಿಸಲ್ಕೆವೇಳ್ಕುಮೆನುತ್ತಂ ॥
ಜಱುಚುವರೆಂತುಃ ಭುವನ- |
ಕ್ಕೆಱೆಯನನೋಲಗಿಪೆವೆಂಬ ರೂಢಿಯ ಶೈವರ್ ॥ ೯೮ ॥

ನರಪತಿಯುಣಾಗಂ ಸೊಣಕಡಿ |
ಕರುಮಂ ಪೊಲೆಯುರುಮನೋಲಗಿಪ್ಪುದೆ ಭುವನೇ- ॥

೧. ಇ, ಈ—ಪಂ; ೨. ಇ, ಈ—ಪಾ;

ಶ್ವರನಂ ಪೂಜಿಸುವಂ ವ್ಯಂ- ।
ತರಮಂ ಪೂಜಿಸುವುದುಚಿತಮೆ ಗುಣವಂತಂ ॥ ೯೯ ॥

ಕುಲದೆಯ್ವದ ಪೆಸರಂ ಮ- ।
ಕ್ಕಳಪೆಸರ್ಗಳನಿಟ್ಟು ಷೋಡಶಕ್ರಿಯೆಗಳನಾ- ॥
ಕುಲದೆಯ್ವದಮುಂದಿರಿಸಿಯು ।
ಚಳಮತಿಗಳು ಮಾಳ್ಪರಂಜಿ ಮೂಢಜನಂಗಳ್ ॥ ೧೦೦ ॥

ಸಂತತಿಗೆ ಬಸಿಱೊಳಿರ್ದ್ದ- ।
ಲ್ಲಿಂ ತೊಡಗಿರ್ದ್ದೆಯ್ದೆ ಷೋಡಶಕ್ರಿಯೆಗಳುಮಂ ॥
ವ್ಯಂತರರ ಮುಂದೆ ಮಾಡದೆ ।
ಶಾಂತಾತ್ಮನ ಜಿನನಮುಂದೆ ಮಾಡುಗೆ ಶುಭದಂ ॥ ೧೦೧ ॥

ಸಿರಿಯಿಲ್ಲದಂದು ದೆಯ್ವಂ ।
ಬರಲೊಲ್ಲವು ಲಕ್ಷ್ಮಿಬಂದು ಸಾರ್ದ್ದಿರ್ದ್ದಾಗ- ॥
ಲ್ಪರಿತಪ್ಪುವೆ ಮೂಢ ಜನಂ ।
ಸಿರಿಮಾ[1]ಡಲ್ಕಲಸದಾಡುವವ್ಯಂತರಮಂ ॥ ೧೦೨ ॥

ಸಿರಿಯಾಗೆದೆಯ್ವದಚ್ಚಂ ।
ತುರಿಪದೆ ಮಾಡಿಸಿದರೊಕ್ಕಲಂ ಪೀಡಿಸುವ- ॥
ಸ್ಸಿರಿಪೋಗೆತನ್ನರೂಪಂ ।
ಕರಗಿಸಿದೊಡೆ ಮುಳಿಯದೇಕೆಯೊ ಮುರುಟಿಕ್ಕುಂ ॥ ೧೦೩ ॥

ಸೀರಿಗೆಪೇಲಂ ಕಳೆಯೆನೆ ।
ಮಾರಿಯುದಂ ಕಳೆಗೆತಿನ್ನುನೀಂ ಪೇಲನೆನಲ್ ॥
ಮಾರಿ[2]ಯುದ[2]ತಿಂಗೆಯೆಂದಿಂ- ।
ತಾರಾನುಂ ನುಡಿವರಾಕೆ ಕುನ್ನಿಯೊಪೇಳಿಂ ॥ ೧೦೪ ॥

ಪಸಕಾಲದೊಳೆಱೆಯುಪನಾ- ।
ಗಸದಬ್ಬೆಬಳಾರಿ ಭೈರವಂ ಮೈಲಾರಂ ॥
ಮುಸಣಿ ಮಾರಬ್ಬೆಯೆಂದಿಂ- ।
ತುಸತ್ತರಾಭಕ್ತರೇಕೆಯೋ ಕೊಂಡಾಡರ್ ॥ ೧೦೫ ॥

---

೧. ಇ—ಮೂ; ೨. ಇ—ಭೂ;

ದೆಯ್ವದಜನ್ನಿಗೆಯುಮನಾ- ।
ದೆಯ್ವದ ಬಣ್ಣಮುಮನಚ್ಚುಮಾಕಳ್ಕೆರ್ಗಂ- ॥
ಡೊಯ್ವಲ್ಲಿ ಕಾಯಲಾಱದ ।
ದೆಯ್ವಂಗಳ್ತಮಗೆ ಭಕ್ತರಂ ಕಾದಪವೆ ॥ ೧೦೬ ॥

ವೃ॥ ಮನೆಯುವರಟ್ಟುದಂ ತನಗೆ ಮೀಸಲನಚ್ಚಿರ್ಸ-
ದನ್ನ[1]ಮುಣ್ಬರಾ ।
ಮನೆಗಧಿದೆಯ್ವಮಾಗಿ ಗಡ ಕನ್ನವನಿಕ್ಕುವ ಕಳ್ಳರಂಕರಂ ।
ತಿನಲಣಮಾಱದಿರ್ದೊಡಮಿದೊಮ್ಮಿಗೆ-
ಕೂಗಿಡಲಾರ್ತರ್ಗಳಿಲ್ಲನಾ- ।
ಯ್ತನದೊಳೆ ಮೀಸಲೆಂಬುದಱಿನೊಕ್ಕುದ-
ನುಂಡಳೆದೇವಿಸಾವಳೆ ॥ ೧೦೭ ॥

ಕಂ॥ [2]ಉಸಿರಿಂ[2]ಗುಸಿರಂ ಕುಡುವುದು ।
ಮಸಣದ ಮಾರಕ್ಕಕಾವುನಿವೊಮ್ಮೆಯುವಾ- ॥
ಗಸದಬ್ಬೆವೀರಭೈರವ ।
ದೆಸೆದೆಯ್ವಮನೀವುವಮ್ಮವೆಂಬಮೂರ್ಖರ್ ॥ ೧೦೮ ॥

ಮಸಗಿದುದು ಬೇನೆಯುಂಮಾ- ।
ಣಿಸುದೇವತೆಯೆಂದು ಪರಕೆಯುಂ ನುಡಿದೊಡೆಮಾ- ॥
ಣಿಸುವಳೆ ದೇವತೆ ವೇದನೆ- ।
ಯು ಸಮಾಪ್ತಿಯೊಳೆರವಿಗೊಳ್ವದೊಡೆ ನುಂಗುವರೇ ॥ ೧೦೯ ॥

ದೇವತೆ ಪೆಱರನದೆಂತುಂ ।
ಕಾವಳುಗಡತನ್ನಪೆಮ್ಮಗಂ[3]ಜೋಕಾರಂ[3] ॥
ಸಾವಾಗಕಾಯಲಾಱದ ।
ಕೀವಿಲು[4]ಪೇಳ್ವೆಱರ್ಗೆ ಮಾಡಲಾಪ್ಪರ್ಗಳೆ ಸುಖಮಂ ॥ ೧೧೦ ॥

ಕುಱಿಯುಂ ಕಳ್ಳಂ ಕೂಳಂ ।
ನಱುನೆಯ್ಯುಂ ಬೇಡಿತಿಂಬಪಿರುತಿನಿಬರವಂ ॥
ಪೆಱರ್ಗೆ ಕುಡಲಱಿಯಳೆಂಬುದ- ।
ನಱಿಯದ ಪಶು ಮನುಜನಲ್ಲ ಕುರಿಗಳ ಭಾವಂ ॥ ೧೧೧ ॥

---

೧. ಇ—ಲ್ಲ; ೨. ಅ—೨ಸಿಸುವಿಂ೨; ೩. ಇ—ಜೋಕೊವರಂ೩; ೪. ಇ—ಲಿ;

ವೃ॥ ಕುಱಿದಿನಲರ್ತಿಯುಳ್ಳಡವಱುದ್ರ್ದೆಡೆ-
ಗಾಣಳೆದೇವಿತನ್ನ[೧]- ।
[೨]ಱಿವಿನಮೆಯ್ದ್ವಿ ಮೆಚ್ಚಿದನಿತಂ ತಿನಲಾಱಳೆ-
ಕೆಮ್ಮನಾಕೆಯುಂ ।
ಕುಱಿತಡತಿಂಬತಮ್ಮಬಸನಕ್ಕವನೊಯ್ದು-
ದುರಾತ್ಮನಾಗಳುಂ ।
ತಱಿವರದೇಕೆತಮ್ಮಸವಿನಾಲಗೆಯಂ ಸವಿಗೆಯ್ಯಲಾಱರೇ ॥ ೧೧೨ ॥

ಬನದಬಳಾರಿ ಕೊಲ್ಲಗಿರದಕ್ಕಳಿಕಾಂಚಿಯು-
ಕಾಮುಕೋಟಿಯೆಂ- ।
ಬಿನಿಬರುಮೆಕ್ಕರೋಕನಸುದೋಱಿದರೂಡುವ-
ಮೆಂದುರಂಗಮಂ- ।
ಮನವೊಸೆದಿಕ್ಕಿಕೊಂಡುಕುಱಿಯಂ ಕೆಲಬರ್ದುರ್ವ-
ಱುದುಂಬಿಮುಂಡೆಯು- ।
ಮ್ಮನೆಯೊಳಗುಳ್ಳುದಂತವಿಸಿ ಗಂಡರನೇಂ-
ಕುಱಿಮಾಡಿತಿಂದಪರ್ ॥ ೧೧೩ ॥

ಅಸುರರನಾಸುರಂ ಮುಸಗಿಕೊಂದಡೆ ತಿಂಬಬಳಾರಿ-
ಬಂಧುಮಾ- ।
ನಸರನೆ ಬೇಡಿತಂದಪಳು ಬಲ್ಲುಗ್ಱಿಯಂ ಕುಱಿ-
ಖಂಡನೆಯ್ದಿ ಮೆಯ್ದಿ- ।
ವಸವೊಳಸೋರ್ವಿನಂ ಪಿಡಿದುಗುಕ್ಕಿಸಲಾಱಳೆ-
ದುಂದುಱುಂಬೆಯು- ।
ಬ್ಬಸನಿಗಳಾಗಿಗಾವಿಲರನಾಪೆಸರಿಂ-
ಕುಱಿಮಾಡಿತಿಂದಪರ್ ॥ ೧೧೪ ॥

ಕಂ॥ ಮಾನಸರಂ ತುರಗಂಗಳ- ।
ನಾನೆಗಳಂ ಪರಕೆಗುಡುವಡವುಬೆಲೆಪಿರಿದೆಂ- ॥
ದೂನಂ ಬೆಲೆಯುಪ್ಪುದಱಿಂ- ।
ದೇನೊಂದಂ ಬಳರಿಗೊಯ್ದುತಿ[೩]ಱಿವಕ್ಕುರ್ಱಿಯಂ ॥ ೧೧೫ ॥

---

೧. ಇ—ಚೆ; ೨. ಇ, ಈ—ಕ್ಯೊ; ೩. ಇ, ಈ—ತ;

ಪಶುವೆಮ್ಮೆ ಕುಱಿಗಳೆಂಬಿವು ।
ವಸುಧೆಗೆ ಪಯನಲ್ಲಿ ಪಿರಿಯ ಬೆಲೆಗಳ ಪಶುವಂ ॥
ಬಸನಿಗಳೊಲ್ಲದೆ ಕುಱಿವೆಲೆ ।
[೧]ಪಶು[೧]ವಂ ಬೆಲೆಯಾಸೆಯಿಂದೆ ತಿಂದಪರಲ್ತೆ ॥ ೧೧೬ ॥

ಕುಱಿಗಳಕತದಿಂ ಜಗಮಂ ।
ಭಱಿಕೆಯ್ಯದೆ ಮಾಣ್ದರುಂತೆ ಪಿಱಿತಿನಿಗಳ್ಗಂ-॥
ತಱಿಯಲು ಕರಿತುರಗಾಳಿಯ- ।
ನಱಿಕೆಯ ಮಾನಸರನಾಗಳುಂ ಪಾಪಿಷ್ಠರ್ ॥ ೧೧೭ ॥

ಬಳರಿಯದೇಗುಲಮಂ ಕುಱಿ- ।
ಗಳನೋವದೆ ತೀವಿ ಪುಗಿಸುವುದು ಕುಱಿಗಳನಾ ॥
[೨]......................................[೨] ।
ಬಳರಿಯನಳಿದಪವೆನೋಳ್ಪವದನೊಂದಿನಿಸಂ ॥ ೧೧೮ ॥

ವೃ॥ ಮನೆಗೆಲಸಕ್ಕೆ ಸಯ್ತುಮೊಗಸಲ್ಕಣಮಾಱದೆ-
ನೋಡಿಹೂಂಕ್ರುತ ।
ಧ್ವನಿಮಿಗಲಿತ್ತಲಾಗುಳಿಸಿ ತೇಗಿದೊಡಾಗಳೆ-
ಬಂದುತಮ್ಮತೊ- ।
ತ್ತಿನ ಚರಣಂಗಳಂ ತಲೆಯೊಳಿಟ್ಟಕಟೆಂಬುದು-
ದೇವಿಕಾವುದೆಂ- ।
ದಿನಿತುಭಯಂ ಮಿಗಲ್ಕೆರವಿಗೊಳ್ವರಿದೇಕೆ-
ಕೆಲಮ್ಮರುಳ್ಗಳೋ ॥ ೧೧೯ ॥

ಬ್ರತಗುಣಸಚ್ಚರಿತ್ರಯುತರಪ್ಪಮಹಾತ್ಮರ-
ಮೇಲೆವಂದು ದೇ- ।
ವತೆತನಗೊಲ್ದುದಂಪರಕೆವೇಡಿದೊಡಪ್ಪುದು-
ನಂಬರಿಂತಿದಂ ।
ಸಿತಗೆ ನಿಕೃಷ್ಟೆ ದುಶ್ಚರಿತೆ ತೊಳ್ತೆನಿಸಿರ್ದ್ದಳ-
ಮೇಲೆವಂದು ದೇ- ।
ವತೆನುಡಿದಪ್ಪಳೆಂದಡ[೩]ವಿವೇಕಿಗಳಂತದನೇಕೆ ನಂಬುವರ್ ॥ ೧೨೦ ॥

---

೧. ಇ—೧ವಸು೧; ೨. ಇ—೨ಬಳರಿಯಳಿದಪಳೆಕುಱಿಗಳು೨; ೩. ಇ, ಈ—ಡೆ;

ಕಂ|| ತಲೆಬೋಳಿಸಿ ಹೊಂತಂ ಮಿಡಿ- |
ದಲೆಗುಡುವಕ್ಕೆಂಡದಿಂದೆ ಮೀವರ್ತ್ತಮ್ಮಂ-||
ಗುಲಿ೯ಯುಂ ಕಡಿವಬ್ಬರಿಯೊಳ್ |
ಸುರಿಗಿಗಳಂ ಕುತ್ತಿನಡೆದು ಪರಕೆಯನೀವರ್ || ೧೨೧ ||

ಗಂಡುಡೆಯುಡಿಪಪ್ಪೆಣ್ಣಂ |
ಗಂಡುಮನೋರಂದದಿಂದೆ ಪೆಣ್ಣುಡೆಯುಡಿಪ- ||
ರ್ತ್ತಂಡದೆ ತಿರಿವಕ್ಕುತ್ತಂ- |
ಗೊಂಡುಬರ್ದುಂಕಿದೊಡೆದೇವಿಕಾದಳೆನುತ್ತಂ || ೧೨೨ ||

ಪತ್ತುಂ ಬೆರಲೊಳ್ಸೊಡರಂ |
ಪತ್ತಿಸುವಪ್ಪೇಲಬೆರಟಿಗಳ ನಿಱಿಯಿಸುವ- ||
ಕ್ಕುತ್ತಂ ಬಟ್ಟಂ ಕಮ್ಮಾ- |
ಯತ್ತದೆ ಬದುಕಿದೊಡೆ ಮೂಢರೀಪರಕೆಗಳಂ || ೧೨೩ ||

ಬೆಚ್ಚಿಪಿಱಿತಿನಿಗೆ ಪರಕೆಯ-|
ನಚ್ಚನಯೆಂದಾಡಿ ಪೊಲೆಯರೊಡಗಲಸದೆ ದಿ- ||
ವ್ಯಾಚ್ಚನೆಯುಂ ಸಕಳಸುರೇಂ- |
ದ್ರಾರ್ಚ್ಚಿತ ಚರಣಕ್ಕೆ ಕೊಟ್ಟು ಪಡೆವುದು ಸುಖಮಂ || ೧೨೪ ||

ಪರಕೆಗಳನಿತ್ತೊಡಂ ತಾ |
ಪರತ್ರೆಗವು ಫಲದಮಲ್ಲ ದಾನಂ ಪರಮೇ- ||
ಶ್ವರಪೂಜೆಯೆ ಶಾಂತಿಕರಂ |
ಪರತ್ರೆಯೊಳ್ ಸುಖಮನೀಗುಮೆಂತುಂ ಸಫಲಂ || ೧೨೫ ||

ಪುರುಳಿಲ್ಲದ ಪಿಱಿತಿನಿಗ- |
ಳ್ವರವಂ ಕೊಟ್ಟಪುವೆ ಮರುಳೆ ಪೂಜಿಸಿದಿನಿಸುಂ ||
ಪರಮಜಿನೇಂದ್ರನ ಪದಪಂ- |
ಕರುಹಮನೋಲಗಿಸು ಪಡವೆಯಿಹಪರ ಸುಖಮಂ || ೧೨೬ ||

ಬೇಡಿದ ವರಮಂ ಕುಡುವಡೆ |
ರೂಢಿಯ ಚಾವುಂಡಿ ಕಾಳಿಮಾಳಚಿಯೆಂಬಾ ||

---

೧. ಇ—ರಿ;

ಜೋಡೆಯುರವರಂ ಪೂಜಿಸ- ।
ವೇಡಿಹಪರಸುಖಮನೋಲ್ವಡರ್ಚ್ಚಿಸು ಜಿನನಂ ॥ ೧೨೭ ॥

ನೀರಂ ಪೊಸೆದುಂ ಬೆಣ್ಣೆಯ- ।
ನಾರಾನುಂ ಪಡೆದರೊಳರೆವರವೀಗುಮೆಮ್ಮೈ- ॥
ಲಾರಂ ಕೇತಂ ಕಾಟಂ ।
ಮಾರಿಗೆ ಮುಸಣಿಗೆಯೆನಿಪ್ಪಕೊಳೆದೆಯ್ವಂಗಳ್ ॥ ೧೨೮ ॥

ತೊಱೆಗಳ ದೀರ್ಘಿಕೆಗಳ ಪೆ- ।
ರ್ಗ್ಗೆಱೆಗಳ ತಡಿಯಲ್ಲಿರಂಗಮಂಬರೆದುಂ ಬೊ- ॥
ಬ್ಬಿಱಿದು ಸುರಿದಲ್ಲಿ ಪಲವುಂ ।
ತೆಱದಡುಗೆಯನಿತ್ತು ಬಱಿದೆಕಿಡಿಪಮೂರ್ಖರ್ ॥ ೧೨೯ ॥

ನಡುಬೀದಿಯೊಳಂ ಪಶುಗ- ।
ಳ್ಪಡುವೆಡೆಯೊಳಮೂರಪಿರಿಯ ಚೌವಟ್ಟದೊಳಂ ॥
ತೊಡೆದು ಬರೆದಲ್ಲಿ ರಂಗಮ ।
[1]ನುಡಿ[1]ಗೆಗಳಂ ಸುರಿದುಸೂಸಿ ಕೆಡುವಮೂರ್ಖರ್ ॥ ೧೩೦ ॥

ಮಾರಿಯನೆ ಮನೆಗೆದಂದುಂ ।
ಮಾರಿಯನೂರಿಂಗೆದಂದುವಡಗಿಂ [2]ಕೂಳಿಂ[2]- ॥
ದಾರಂಭದ ಬೆಳಸಿಂದಂ ।
ಭೋರನೆಪಱೆಮೊಳಗಲೂಡಿ ಕಳಿಪುವರವರಂ ॥ ೧೩೧ ॥

ವೃ॥ ನೆರಪಿದುದೊಂದು ಪಾಪಫಲದಿಂದೆ ಕುಯೋನಿ-
ಗಳೊಳ್ನಿರಂತರಂ ।
ತಿರಿತರುತಿಪ್ಪಜೀವನಿಕರಕ್ಕೆಱಗುತ್ತಿರೆ ಸೌಖ್ಯಮಕ್ಕುಮೆ ।
ತಿರಿದುಣತಿಪ್ಪಕಪ್ಪಡಿಯನೋಲಗಿಸುತ್ತ-
ಮಹಾವಿಭೂತಿಯೊ- ।
ಳ್ನೆರವೆನಮೋಘಮೆಂದುಮನವಾಲು[3]ಡಿವಂಗದು-
ಕೂಡದಂತೆವೋಲ್ ॥ ೧೩೨ ॥

ಕಂ॥ ಇವರೀದೆಯ್ವಕ್ಕೆಱಗುವ- ।
ರಿವರವೊಲಾಮೆಱಗಿದಪ್ಪೆವಿನ್ನೆಂದೆನುತಂ ॥

---

೧. ಇ, ಈ—೧ನಡು೧; ೨. ಇ, ಈ—೨ಕಳ್ಪಿಂ೨; ೩. ಇ—ಲ್ಗ;

ತಮತಮಗೆಱಗುವರಂ ಕಂ-।
ಡವರಾಪ್ತನತೆಱನನೇನುಮಱಿಯಮೂರ್ಖಧರ್ ॥ ೧೩೩ ॥

ಸತತಂ ಸಚ್ಚಾರಿತ್ರದೊ-।
ಳತಿಶಯಮೆನೆನಡೆಯಲಾಪ್ಪರೋಲ್ವಜ್ಜನನಂ ॥
ಬ್ರತದೊಳ್ನೆಱೆಯಲ್ಕಾರದೆ।
ಮತಿಹೀನಪ್ಪಲವುದೆಯ್ವಮಂ ಪೂಜಿಸುವರ್ ॥ ೧೩೪ ॥

ಜಿನಸಮಯದವರ್ಗೆ ಜಿನನೋ-।
ರ್ವನೆದೆಯ್ವಂಮತ್ತಿನವರ್ಗೆಪಶುಮೃಗಖಗಮುಂ ॥
ಮನೆಮುಟ್ಟುಂ ಕುಗ್ಗುಗಳುಮಿಂ-।
ತನೇಕಮೊಳವೊಂದುದೆಯ್ವಮಲ್ಲವುನಿರುತಂ ॥ ೧೩೫ ॥

ಜಿನಪತಿಭಾಷಿತರುಂ ಜ್ಞಾ-।
ನನಿಧಾನಮಿದೆಂದು ಭಕ್ತಿಯಿಂ ಪೂಜಿಸುವ- ॥
ರ್ಮ್ಮನಮೊಸೆದು ಸರಸ್ವತಿಯುಂ।
ವಿನೇಯಜನಮನ್ಯದೆಯ್ವಮಂ ಪೂಜಿಪುದೇ ॥ ೧೩೬ ॥

ಸುರವಂದ್ಯಜಿನೇಶನತೊ-।
ತ್ತಿರೆಂದು ಮನ್ನಿಸುರವಲ್ಲದಾದರದಿಂ ವ್ಯಂ- ॥
ತರಮಂ ಪೂಜಿಸಲಱಿವರೆ।
ಪಿರಿದುಂ ಮತಿವಂತರೆನಿಸಿದಾರ್ಹತಭಕ್ತರ್ ॥ ೧೩೭ ॥

ಸರ್ವಜ್ಞನಲ್ಲದುಳಿದರ-।
ನೋರ್ವರುಮಂ ದೆಯ್ವಮೆಂದುಮನ್ನಿಸುವಾತಂ ॥
ನಿರ್ಬುದ್ಧಿಯಕ್ಕುಮಲ್ಲದ-।
ಪೂರ್ವಸುಖಶ್ರೀಯನೆಂತುಮಱಿವನೆಪಡೆಯಲ್ ॥ ೧೩೮ ॥

ವೃ॥ ಪ್ರತಿರೂಪಕ್ಕನುರೂಪಮಾಗಿರದೆ ಕೀಳ್ಕೀಲಾಗೆ-
ರೂಪಂ ನಿಜಾ-।
ಯ್ಯತೆಯಿಂ ನೋಳ್ಪಜನಕ್ಕೆ ಕಣ್ಗೆದಿಟದಿಂ-
ತೋರ್ಪಂತೆ ಕರ್ಮ್ಮಾನುರೂ-।

೧. ಇ—ಪು;

ಪತೆಯಿಂ ಕರ್ಮಿರ್ಗೆ ಪುಣ್ಯಪಾಪಫಲಮಂತಾಂ-
ತೋಪ್ಪರ್ದೇವತ್ವದು- ।
ನ್ನತಿಯುಂ ತಾಳ್ದಿದನರ್ಹನೀಗೆಮಗೆ ಮುಕ್ತಿ-
ಶ್ರೀಸುಖಾವಾಪ್ತಿಯಂ ॥ ೧೪೯ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-
ದಾರ್ಥ ನಿಪುಣ ಮಹಾಕವಿ ಬ್ರಹ್ಮದೇವ
ವಿರಚಿತಮಪ್ಪಸಮಯಪರೀಕ್ಷೆಯೊಳು
ದೇವತಾಮೂಢಸ್ವರೂಪನಿರೂಪಣಂ
ನವಮಾಧಿಕಾರಂ ॥
ಶ್ರೀ ಶ್ರೀ ಶ್ರೀ

॥ ಶ್ರೀ ॥

ದಶಮಾಧಿಕಾರಂ

ಶ್ರೀನಾರೀಸಂಸ್ತುತನ- ।
ಜ್ಞಾನಾಂಬುಧ ತೀವ್ರಪವನನಮಳಿನವಿದ್ಯಾ- ॥
ಧೀನಂ ಗುಣನಿಧಿ ಸಮ್ಯ- ।
ಜ್ಞಾನಮನೊಸೆದೆಮಗೆಮಾಳ್ಕೆ ವೀರಜಿನೇಂದ್ರಂ ॥ ೧ ॥

ಪರಮಮುಖಚಂದ್ರನಿಂ ವಿ- ।
ಸ್ತರಮಾಗಿದ್ರ್ಧಗೆವ ವಚನಚಂದ್ರಿಕೆ ದುರ್ಬ್ಧೋ- ॥
ಧರಕುಮತ ತಿಮಿರ ಪಟಳಮು- ।
ನಿರಲೀನಿತ್ತಪುದೆ ಭವ್ಯಸಮಿತಿಯ ಮನದೊಳ್ ॥ ೨ ॥

ವೃ॥ ಜನನಿಯ ಗರ್ಭದಿಂದೊಗೆಯದಾತನ [೧]ಮೂರ್ತನಂ....[೧] ।
ಜನಿಯಿಸಿತಾಗಮಂ ಶಿವನಜಾತನ ರೂಪಕನೆಂಬರನ್ನನ- ।
ಪ್ಪನಮತಮಂತೆ ಶೂನ್ಯಮದಱಿಂ ಜಿನನಾಥನ-
ಮೂರ್ತನಾಮಹಾ- ।
ತ್ಮನಿನೊಗೆದಾಗಮಂ ಸಕಳತತ್ತ್ವವಿನಿಶ್ಚಯಮೆಂದೆನಂಬಿರೆ ॥ ೩ ॥

ಕಂ॥ ಶಿವನೆಂಬನಜಾತಂಗಡ ।
ಶಿವಂಗೆ ರೂಪಿಲ್ಲ ಮೂರ್ತಿಯಿಲ್ಲದ ಪುರುಷಂ ॥
ಶಿವತತ್ತ್ವಮನೆಂತಱಿಪಿದ- ।
ನವಳಿಲ್ಲ ಗಡವಳ ಮಕ್ಕಳೊಳವೇಂ ಪೇಳಿಂ ॥ ೪ ॥

ಕಿವಿಕಣ್ಮೆಯಿ ನಾಲಗೆಯೆಂ- ।
ಬಿವಱಿಂ ಪೆಸರಿಂದವೊಂದು ರೂಪಿನೊಳಿದ್ದಂ ॥
ವಿವರಿಸಿ ಪೇಳ್ಗುಂ ತತ್ತ್ವಮ- ।
ನವಿಲ್ಲದಾಶಿವನೆ ಪೇಳ್ವತೆಱನೆಂತಕ್ಕುಂ ॥ ೫ ॥

---

೧. ಇ, ಈ—೧ಮೂರ್ತನಮೂರ್ತನಪ್ಪನಂ೧;

ಆಗಳುಮಾಪ್ತನ ವಚನಂ।
ರಾಗಾದಿಗಳಿಲ್ಲದಿಪ್ಪಡಾಪ್ತಂ ದೋಷ- ॥
ತ್ಯಾಗಿ ಪುಸಿನುಡಿಯನಂತಱ- ।
ನಾಗಮಮದುಸತ್ಯಮದುವೆ ಲೋಕಸ್ತುತ್ಯಂ ॥ ೬ ॥

ರಾಗದ್ವೇಷಾದಿಗಳಿಂ ।
ಮೋಗಿಲ್ಲದೆ ನುಡಿವನಲ್ಲಿ ಪುಸಿಗಳೆವುಗುಗುಂ ॥
ರಾಗಾದಿ ದೋಷರಹಿತನೊ- ।
ಳಾಗದು ಪುಸಿಪುಸಿಗೆ ಹೇತುವಿಲ್ಲಪ್ಪುದಱಿಂ ॥ ೭ ॥

ಅದಱಿಂದಾಪ್ತನ ವಚನಂ ।
ಸದಸದ್ವಸ್ತುಸ್ವರೂಪ ರೂಪಿತವೆನಿಸಿ-॥
ರ್ದ್ದುದು ಪೇಳ್ದತತ್ವಮಂ ತಾ- ।
ನೊದವಿದಮತಿಯಿಂದೆ ಕೇಳ್ಗೆ ಕೇಳ್ವಂಕ್ರಮದಿಂ ॥ ೮ ॥

ಧರೆಗೇಕವಾಕ್ಯನೆನಿಸಿದ ।
ಪರಮಾತ್ಮನ ಮಾತೆ ನಿಶ್ಚಯಂ ಬಹುಮುಖದಿಂ ॥
ಮರುಳಾಟದಿಂದಮೂಳ್ವಾ- ।
ಪ್ತರ ಕುಮತಂ ತಥ್ಯಮಾಗಲೇನಱಿದಪುವೆ ॥ ೯ ॥

ತರ್ಕ್ಕನೆನಿಸಿದ್ದುರ್ನ್ನಯಮಂ ।
ನಿಕ್ಕುವಮಾಗಱಿದು ನುಡಿದೊಡಾಲಿಸಿ ಕೇಳ್ವಂ- ॥
ಗಕ್ಕುಂ ಸಂತೊಸಮಲ್ಲದೊ- ।
ಡಕ್ಕುಂ ಹೃದ್ರೋಗಮಱಿಯದೂಳ್ವರ ಮತದಿಂ ॥ ೧೦ ॥

ವೃ॥ ಸುತ್ತಿದದರ್ಶನಾವರಣ ಕರ್ಮ್ಮಮನೋವದೆ-
ತೂಳ್ದಿಬೋಧಸಂ- ।
ಪತ್ತಿಯೊಳೊಂದಿ ಲೋಕದೊಳಗುಳ್ಳಪದಾರ್ತ್ಥಮ-
ನೆಯ್ದೆ ಕಂಡುಪೇ- ।
ಳುತ್ತಿರೆ ಕೇಳ್ದದಂ ತಿಳಿಯೆ ಪೇಳ್ವವರಾರೊ-
ಜಗಕ್ಕೆ ಮೋಹದಿಂ ।
ಪತ್ತಿಹರಾದಿಗಳ್ಸಮೆದರಾಗಮಮೆಲ್ಲಮನೆಂಬುದೀ ಜಗಂ ॥ ೧೧ ॥

ಕಂ॥ ಪುಸಿವಡೆ ಪೋಲಲ್ಪುಸಿವುದು ।
ಪುಸಿಯಲ್ಕಱಿಯದೊಡೆ ಮಾಣ್ಪುದಂತಿರದೆಕರಂ ॥
ದೆಸೆಬಿದ್ದಂ ಪುಸಿವಡೆ ಬಾ- ।
ರಿಸಬಪ್ಪುದೆ ಪುಸಿಯಬಸನಮಾಗಿಪ್ಪವರಂ ॥ ೧೨ ॥

ಮುನಿಗಳ ಮಹೇಶ್ವರಾಂಶಂ।
ಜನನಿಯ ಬಸುಱೊಳಗೆ ಪುಗಲೆಪೇಸಿಪವಿತ್ರಂ ॥
ತನುವೆಂದು ಸತ್ತಮಾಣಿಯ ।
ತನುವಂ ಪೊಕ್ಕಿರ್ದ್ದನೆಂಬರಿದು ಬೋಧಫಲಂ ॥ ೧೩ ॥

ಅನುನಯದೆ ಸೋಮಶರ್ಮ್ಮನ ।
ತನಯನ ಪೆಣನೊಳಗೆ ಲಾಕುಳೇಶಂ ಪೊಕ್ಕಾ- ॥
ತನೆಶೈವಾಗಮಮೆಲ್ಲಮ- ।
ನನಂತರಂ ಪೇಳ್ದನೆಂಬರಿದು ಶೈವಮತಂ ॥ ೧೪ ॥

ಸುಡುವಂ ಜಗಮಂ ಜಗಮಂ ।
ಪಡೆವಂ ಪಡೆದುದನೆ ಮತ್ತೆ ಸುಡುವಂ ಲೋಕಂ॥
ಮೃಡನಿಚ್ಛೆಯಿಂದಮಪ್ಪುದು ।
ಗಡಮುಳಿದಡೆ ಬೇವುವೆಂಬರಿನ್ನವು ಪುಸಿಗಳ್ ॥ ೧೫ ॥

ಲೋಕಮನೆಲ್ಲಂ ಸುಡುವಂ- ।
ದಾಕಱಿಕೆೊರಲಾತನೊಳಗೆ ತಾನಿರ್ದ್ದಂತೀ ॥
ಲೋಕಮನೆಲ್ಲಂ ಸುಟ್ಟನೊ ।
ಲೋಕದ ಪೊಱಗಿರ್ದ್ದು ಸುಟ್ಟನೋ ಪೇಳಿಮಿದಂ ॥ ೧೬ ॥

ಜಗಮಂ ಸುಡುವಡೆ ರುದ್ರಂ ।
ಜಗದೊಳಗಿರ್ದ್ದಾತ್ಮಭಕ್ತರೆಲ್ಲರುಮಂ ಮೆ- ॥
ಲ್ಲಗೆ ತೆಗೆದು ಬೇರೆಪೊಱಗಿ- ।
ಕ್ಕುಗುಮೋ ಮೇಣ್ಕೂಡೆ ಸುಟ್ಟುಕಳದನೊಪೇಳಿಂ ॥ ೧೭ ॥

ಮಾಡಿದುದನೆನಿತುಮಳಿಯ- ।
ನ್ನಾಡಾಡಿಯ ನರರುಮೆಂದೊಡಿಂತೀ ಜಗದೊಳ್ ॥
ರೂಢಿಗೆ ಸಂದೀಶಂ ಗಡ ।
ಮಾಡಿದುದಂ ತಾನೆಕಿಡಿಪುದುಚಿತವೆ ಪೇಳಿಂ ॥ ೧೮ ॥

ಮಾಡಲುಮಳಿಯಲು ಮಾರ್ಗ್ಗಂ ।
ಕೂಡದೆನಿಪ್ಪೊಂದು ಲೋಕಮಂ ತಾನೋರ್ವ್ವಂ ॥
ಮಾಡುಗಮದನಳಿಗುಂ ಗಡ ।
ಸೋಡಲಿವಾಡಲಿಯೆ ಮಾಡಿ ಕಿಡಿಸುವಲೋಕಂ ॥ ೧೯ ॥

ಎಲ್ಲಿರ್ದ್ದಂ ಜಗಮಂ ಮಾ- ।
ಳ್ಪಲ್ಲಿಗೆ ಗಡಬಕ್ಕುಮಾವಗಂ ಜಗಮಂ ತಾ- ॥
ನೆಲ್ಲಿರ್ದ್ದು ಮಾಡುವಂ ಪುಸಿ- ।
ಯಲ್ಲೆಂದೆಂದರಿವರಱಿವರಱಿಯದರಱಿವರ್ ॥ ೨೦ ॥

ಮುನ್ನಮೊಳವೆನಿಪವಸ್ತುವ ।
ನಿನ್ನೋರ್ವ್ವಂ ಪಡೆಯುವೇಡಮುನ್ನಮೆಸಿದ್ಧಂ ॥
ಮುನ್ನಿಲ್ಲದುದಂ ಪಡೆವನೆ ।
ಬಿನ್ನಣಮಾಕಾಶದಲ್ಲಿ ಪೂವಡೆವಂದಂ ॥ ೨೧ ॥

ಮೃಚ್ಚಕ್ರದಂಡ[1] ತೋಯದಿ- ।
ನೆಚ್ಚರಿಕುಂ ಕುಂಭಕಾರಕಂ ಮಡಕೆಗಳಂ ॥
ಮೃಚ್ಚಕ್ರಮಿಲ್ಲದಂತವ- ।
ನಿಚ್ಛೆಯಿನಾಮಡಕೆ ನೆನೆದೊಡೇನಾದಪುದೆ ॥ ೨೨ ॥
ಶಿವನಿಚ್ಛೆಲೋಕವರ್ತ್ತನೆ ।
ಶಿವನುಂ ಶೂನ್ಯಂ ತದಿಚ್ಛೆವರ್ತ್ತಿಪತೇಜಿನಂ ॥
ಶಿವರೂಪಮಿಚ್ಛೆಯೆಂಬಡೆ ।
ಭವನಂಗಳನಿಚ್ಚಮಾಡಲಱಿಗುಮೆಪೇಳಿಂ ॥ ೨೩ ॥

ವೃ॥ ಮಾಡುವ ಬುದ್ಧಿಯಿಂ ಶಿವನೆ ಮಾಡುವನೇನು-
ಮನಾಶಿವೇಚ್ಛೆಯಿಂ ।
ಮಾಡಿದ ಪುಣ್ಯಪಾಪಫಲಮಂ ಬಳಿಕಂ ಶಿವಮಾಡುವಂ ಗಡಂ ।
ಮಾಡಿಸಲೂಡಲುಂ ಗಸಣಿಯೇನಿನಿಸುಳ್ಳೊಡೆ-
ಪುಣ್ಯಪಾಪಮಂ ।
ಮಾಡುವನುಂ ಬಳಿಕ್ಕಮದನುಣ್ಬವನುಂ-
ಶಿವನಲ್ತೆಲೋಕದೊಳ್ ॥ ೨೪ ॥

೧. ಇ—ದ;

ಕಂ॥ ಜಡನೆನಿಸಿದಾತ್ಮನೆತ್ತಲು- ।
ವಡಿಮಿಡುಕದೆ ನಿಂದೊಡೀಶ್ವರಪ್ರೇರಣೆಯಿಂ- ॥
ದೊಡಲೆಡೆಯಾಡುಗುಮೆಂಬಡ- ।
ಮೊಡಲೆಂದುದ್ಭವದ ಕಾರ್ಯ್ಯಮಾವುದೊ ಪೇಳಿಂ ॥ ೨೫ ॥

ಜಡನೆನಿಸಿದನಾತ್ಮಂ ತಾ- ।
ನೊಡಲುಮಚೇತನಮವೆರಡರಿಂದಂ ಕಾರ್ಯ್ಯಂ ॥
ನಡೆಯುದದು ಬೇಡಿಯೊಡಲಂ ।
ಮೃಡ[1]ನಂ ಕೇತಯ್ಯ[1]ಪೊತ್ತುತಿರಿತಂದಪನೇ ॥ ೨೬ ॥

ಶಿವನ ವಶಂ ಗಡ ಮೂಱುಂ ।
ಭುವನಮುಮೆಂದೂಳ್ವರಂತುಟಾದೊಡೆ ಜಗಮುಂ ॥
ಶಿವಭಕ್ತರಾಗೆ ಮಾಡದೆ ।
ತಮತಮಗತ್ತಿತ್ತ ಪೋಗಲಂತೇಕಿತ್ತರ್ ॥ ೨೭ ॥

ಶಿವನವಶಂ ಗಡ ಮೂಱುಂ ।
ಭುವನಮುಮದಱಿಂದೆ ಜೈನನಕ್ಕೆಮದೇವಂ ॥
ಶಿವಭಕ್ತರಳಲಲಾಗದು ।
ಶಿವೇಚ್ಛೆಯಿಂ ಜೈನನಾದನೆಂಬುದು ಶೈವಂ ॥ ೨೮ ॥

ವಸುಧೆ ಮೊದಲೆನಿಸಿದೆಂಟುಂ ।
ಪೆಸರ್ಗಳು ತನುಗಳು ಶಿವಂಗವೆನಗಂ ಸಮನಾ-॥
ನಸದೃಶನೆನಲ್ಲೆನಾರಾ- ।
ಧಿಸೆಯುದಱಿಂದೆಂದು ಸರಸಮಾಡುಗೆ ಜೈನಂ ॥ ೨೯ ॥

ಸಮಯಂಗಳೊಳಗದೊಂದುಂ ।
ಸಮಯಂವಂಶಪ್ರಯುಕ್ತಮಲ್ಲದುಬಳಿಕೆಂ- ॥
ತುಮರುಳ್ಗಳೊ ಪಾರ್ವ್ವರ್ತ್ತರ್- ।
ಮ್ಮಮೆಚ್ಚಿದಾಸಮಯದಲ್ಲಿ ಪುಗರದುಚದುರೆ ॥ ೩೦ ॥

ನೆನೆಯಲೊಡಂ ಲೋಕಂಗಳು ।
ಜನಿಯಿಸು[2]ಂದಿವಿಜಮನುಜ ಫಣಿಸಂಕುಳಮುಂ ॥

೧. ಇ, ಈ—ಗನಂತೆಕ್ಕೆಯ್ಯಗ; ೨. ಇ, ಈ—ಗು;

ಜನಿಯಿಸುಗುಂ ರುದ್ರನೀನೆಂ- ।
ದೆನಿತಾನುಂ ಪುಸಿಯುತಿಪ್ಪರಱಿವಿಲ್ಲದವರ್ ॥ ೨೧ ॥

ದಾನವರಂ ಪುಟ್ಟಿಸುವಂ ।
ತಾನೆಗಡಂ ರುದ್ರನಂತು ಪುಟ್ಟಿಸಿದವರಂ ॥
ತಾನೆ ಗಡಕೊಲ್ವನೆಂಬರ- ।
ದೇನೆಂಬುದೊ ಪೆತ್ತಮಕ್ಕಳಂ ಕೊಲ್ವರೆಪೇಳ್ ॥ ೨೨ ॥

ಕೆಲರಂ ನರಕದೊಳಿತ್ತಲು ।
ಕೆಲರಂ ಸ್ವರ್ಗಾಪವರ್ಗಸುಖದೊಳುರುದ್ರಂ ॥
ನಿಲಿಸುವನೆಂಬಪ್ಪೆರ್ತ್ತ- ।
ಗ್ಗೊರ್ಲವರಮೋ ಪೆತ್ತನಪ್ಪಡಂತೇವಾಳ್ವಂ ॥ ೨೩ ॥

ಬೆವಸಾಯಹೀನನಂ ಪೆ- ।
ತ್ತವನುಂ ರಕ್ಷಿಸುವನೆಂದೊಡೊಳ್ಪಿಲ್ಲದೊಡಂ ॥
ಭುವನದ ದೇಹಿಗಳಂ ಪೆ- ।
ತ್ತನೆಂತುಮವಸುಖದಿನೀಶನಿರಿಸಲ್ವೇಡಾ ॥ ೨೪ ॥

ತಿರಿಕವೊರ್ದಲಾಗಿರೆ ಪೆ- ।
ತ್ತರನೆಂತುಂ ಪೊರೆಗುಮೆಂದೊಡಖಿಳ ಜಗಕ್ಕೀ- ॥
ಶ್ವರನೆಗಡಂ ಪೆತ್ತಂ ಜೀ- ।
ವರಾಸಿಯುಂ ಸುಖದಿನೆಂತುಮಿರಿಸಲ್ವೇಡಾ ॥ ೨೫ ॥

ಕೃತಪುಣ್ಯಂಗಳ್ಕುಡುಗುಂ ।
ಗತಪುಣ್ಯಂಗೀತದಿತ್ತದಾನಂ ಸುಖಮುಂ ॥
ಶ್ರಿತಪುಣ್ಯಫಲಮನುಣ್ಬಂ- ।
ತೆತಾನೆದಲ್ಕರ್ತೃಬೋಕ್ತೃಜೀವನೆಮುಖ್ಯಂ ॥ ೨೬ ॥

ಕೃತದುಃಕೃತನುಣ್ಗುಂ ದು- ।
ರ್ಮ್ಮತಿ ಘೋರಮೆನಿಪ್ಪಪಾಪದುಃಖಮನೆಂತುಂ ॥
ಕೃತಸುಕೃತನುಮುಣ್ಗುಂ ಸ- ।
ನ್ಮತಿಸಾರಮೆನಿಪ್ಪ ಸುಖಮನೀಶ್ವರನೂಡಂ ॥ ೨೭ ॥

ಮಾಡಿದ ಪುಣ್ಯಫಲಂಗಳ ।
ನೂಡುವನಂ ಕರ್ತೃವಪ್ಪನಲ್ಲದೆ ಜೀವಂ ॥

ಮಾಡಿದ ಕರ್ಮ್ಮ ಫಲಂಗಳ ।
ನೂಡುವಡಮನೇಕ ಕರ್ಮ್ಮವಶಮೆ ಸಮಸ್ತಂ ॥ ೩೮ ॥

ಬೆನಕಂಗಾನೆಯಮುಖಮುಂ ।
ತನೂಭವಂಗಖಿಳಕರ್ತೃ[೧]ಕಾಮಂ[೧]ಗೆಷಡಾ- ॥
ನನಮಂ ಮಾಣಿಸಲಾಱದ- ।
ನೆನಿತುಂ ಚೆಲುವಾಗಿ ಮಾಡಲಾರ್ಪ್ಪನೆಪೇಱರಂ ॥ ೩೯ ॥

ವೃ॥ ಪರಮಸ್ವಾಮಿ ಜಿನೇಶ್ವರಂ ಪಿರಿಯನೆಂದೆಂದೀಶ್ವರಂ-
ಛತ್ರಚಾ- ।
ಮರಸಿಂಹಾಸನಮೆಂಬಿವಂ ಸಮೆದುದೇವ-
ಗ್ಗ್ರಿತ್ತನಿಲ್ಲೆಂಬುದಂ ।
ಗೊರವಂ ಪಾರುವನಕ್ಕೆ ತಪ್ಪುನುಡಿದಂದೆಲ್ಲಂ-
ಜಗತ್ಕರ್ತೃವೀ- ।
ಶ್ವರನಲ್ಲಂ ಜಗದಿಂದಮೇಂ ಪೊಱಗೊಮಾಳ್ಪಂದಾ-
ಜಿನೇಂದ್ರಾಲಯಂ ॥ ೪೦ ॥

ಕಂ॥ ಉರಿಲಿಂಗಮಾದ ರುದ್ರಂ ।
ವಿರಿಂಚಿಗಂ ಹರಿಗಮಖಿಳ ಜಗಮಂ ಮಾಳ್ಪಂ- ॥
ತಿರೆ ಬೆಸಸಿ ಮಾಡಿದಂಗಡ ।
ವಿರಿಂಚಿ ರಕ್ಷಿಸಿದನಿನಿತುಮಂ ಗಡಕೃಷ್ಣಂ ॥ ೪೧ ॥

ಮೃಡನೀಲೋಕಮನೆಲ್ಲಂ ।
ಪಡೆದನೆನುತಿರ್ಪ್ಪರರೆಬರದು ಪುಸಿ ಬಮ್ಮಂ ॥
ಪಡೆದನೆನುತಿರ್ಪ್ಪರರೆಬ- ।
ರ್ಪ್ಪಡೆದವರಾರಾಗಮಜ್ಞರಪ್ಪರ್ಪ್ಪೇಳಿಂ ॥ ೪೨ ॥

ಜಗಮಂ ಮಾಳ್ಪನೆ ಗಡ ಪ- ।
ದ್ಮಗರ್ಬ್ಬನೋರೊರ್ಮ್ಮೆ ರುದ್ರನುಂ ಮಾಳ್ಪಂ ಮ- ॥
ತ್ತೆಗಡಂ ಕಿಡಿಸುವನೆನುತುಂ ।
ಸಗರ್ಬ್ಬಗೆಡೆಯುತ್ತಮಿರ್ಪ್ಪರಱಿವಿಲ್ಲದವರ್ ॥ ೪೩ ॥

೧. ಇ—೧ಕೊಮರಂ೧;

ಜಡಮತಿಗಳೊಪ್ಪೆ ಲೋಕಂ- ।
ಗಳನಾಹರಿ ಬಸುಱೊಳಿಟ್ಟನಂತಾತನ ಪೊ- ॥
ಕ್ಕುಳಪೂವಿನಲ್ಲಿ ಲೋಕಂ-।
ಗಳನೆಲ್ಲಂ ಮಾಡಿದಜನೆಪುಟ್ಟಿದನೆಂಬರ್ ॥ ೪೪ ॥

ಜಗಮಂ ಬಸಿರೊಳಗಿಡುವಂ ।
ನಗಧರನೆಂಬರು ಕೆಲಂಬರಂ ಸಂಹರಿಪಂ ॥
ಜಗಮಂ ರುದ್ರನೆನುತ್ತುಂ ।
ಮಿಗೆಪುಸಿವಕ್ಕಾರ್ದರಾರೊಕಾಯುದರಾರೋ ॥ ೪೫ ॥

ಲೋಕತ್ರಯಮಂ ಬೇವುದು- ।
ವಾಕಮಳೋದರನುವಜನುಮಂದಾಕಾಲಂ ॥
ಲೋಕಮನೆಸಮೆದರೆಂಬರ- ।
ದೇಕೆಯೊ ಮತ್ತವರನಿಂದು ಪುಟ್ಟಿದರೆಂಬರ್ ॥ ೪೬ ॥

ಅಂದಿನ ಕಮಳಭವಂ ಮ- ।
ತ್ತಂದಿನ ಮಾಧವನೆ ಪೇಳಿಮೆಂದಡವರ್ತ್ತಾ- ॥
ವಂದಿನವರಪ್ಪರಂತವ- ।
ರಿಂದೀಗನಿಮಿತ್ತದಿಂದೆ ಪುಟ್ಟಿದರೆಂಬರ್ ॥ ೪೭ ॥

ಅಡಿಗಡಿಗೆ ಸಾವುತಿಪ್ಪಂ ।
ಗಡರುದ್ರನವೆಂದು ಲೋಕಮಂ ಮಾಡಲ್ಕಾ- ॥
ರೊಡರಿಸುವಲ್ಲೊರ್ೀಕಂ ಬೆಂ- ।
ದಡೆ ರುದ್ರರುಮಿಪ್ಪರೆಂಬರಿದುಬಿಸವಂದಂ ॥ ೪೮ ॥

ಅಱಿದಂ ಬಲಗುಡಿಗಾಡುವ- ।
ತೆಱದಿಂದಂ ಭುವನಕೋಶಮಂ ತೀವುವುದುಂ ॥
ಬಱಿದಾಗೆ ಮಾಳ್ಪುದುಂ ಸಲೆ- ।
ಕಱೆಕೊರಲಾತಂಗೆ ಬಿನದಮೆಂಬಶ್ಶೈರ್ವರ್ ॥ ೪೯ ॥

ಜಗಮಂ ಪರ್ಯ್ಯಾಯದಿಂ ಮಾ- ।
ಡುಗುಮಳಿಯುತ್ತಿರ್ಕ್ಕುಮಾವಕಾಲದೊಳಂ ಮು- ॥
ಕ್ತಿಗೆ ಪೋಗದೆಲ್ಲಿಯುಂ ಸ್ಥಾ- ।
ಣುಗಡಂ ತೊಳಲುತ್ತಮಿರ್ಪ್ಪನೋ ಸಂಸೃತಿಯೊಳ್ ॥ ೫೦ ॥

ಮುಂಮುಕ್ತಿಗೆ ಪೋದನೆ ಜಗ- ।
ಮಂ ಮಾಡಂ ಬಗೆವೊಡದು ಸುಸಿದ್ಧಂ ಪೇಱತೆ ॥
ನಿರ್ಮ್ಮುಕ್ತಿಗೆ ಪೋಪನೆ ರು- ।
ದ್ರಂ ಮಾಡದೆ ಜಗಮನಱಿದು ಮಾಣಲುವೇಳ್ಕುಂ ॥ ೫೧ ॥
ಲೋಕಂ ಸ್ವಯಂಭುವದಱಿೊಳ- ।
ನೇಕಂ ಸರ್ವ್ವಜ್ಞರಪ್ಪರಂತಾದವರುಂ ॥
ಲೋಕಮನೆ ಕಾ[೧]ಣ್ಬರಲ್ಲದೆ ।
ಲೋಕಮನಂತಾರ್ಗ್ಗೆಮಾಡಲುಂ ಬಂದಪುದೆ ॥ ೫೨ ॥
ಲೋಕಮದೊಂದಲ್ತಿನ್ನವ- ।
ನೇಕಂ[೨]....[೨]ಗಳೊಳವುಮತ್ತವಱೊಳಗೀ ॥
ಲೋಕಮದೊಂದೆನುತಿಪ್ಪರ- ।
ನೇಕೆಯೊ ಪುಸಿದಪ್ಪರೆಂದು ಬಾರಿಪರೊಳರೇ ॥ ೫೩ ॥
ಹರನ ಹೃದಯದೊಳಗಿಪ್ಪಂ ।
ಹರಿ ಕೃಷ್ಣನ ಹೃದಯದಲ್ಲಿ ಸಂತೊಸದಿಂದಂ ॥
ಹರನಿಪ್ಪನೆಂದು ಸತತಂ ।
ಧರಾಮರರ್ವ್ವೇದದಿಷ್ಟದಿಂದಂ ನುಡಿವರ್ ॥ ೫೪ ॥

ವೃ॥ ಹರಿಹರರಲ್ಲಿ ಭೇದಮಣಮಿಲ್ಲೆನುತಂ ನುಡಿಯುತ್ತ-
ಮಿಪ್ಪರ್ಪಾ- ।
ರ್ವ್ವರೆ ಶಿವಯೋಗಿಯುಂ ಬಿಡದೆ ದೂಷಿಪ-
ರಾದ್ವಿಜರಂ ತಪಸ್ವಿಗಳ್ ।
ಪಿರಿದುಮೊಡಂಬಡಪ್ಪರಮ ಮಿತ್ರರಸೇವಕ-
ರೋರ್ವ್ವರೋರ್ವ್ವರಂ ।
ಪರಿಕಿಸುತಿರ್ದ್ದ ಪಾರ್ವ್ವರಧಿದೆಯ್ವಮನೋರ್ವ್ವರೆ-
ಮತ್ತೆ ಪೂಜಿಪರ್ ॥ ೫೫ ॥

ಕಂ॥ ವೈದಿಕರೆನೆ ದೂಷಿಸುವ- ।
ರ್ಮ್ಮಾದೇವನ ಪಕ್ಷದವರ್ಗಳಾ ವೈಷ್ಣವರುಂ ॥
ಮಾದೇವನ ದರುಶನಮುಂ ।
ಬಾದೆಂದೂಷಿಸುತಮಿಪ್ಪರ್ರಿದುಮಿತ್ರತ್ವಂ ॥ ೫೬ ॥

೧. ೞ—ನಾ; ೨. ಈ—೨ಲೋಕಂ೨;

ಓರ್ವ್ವನ ಮೂರ್ತ್ತಿಯು ಭಾವಿಸ- ।
ಲೋರ್ವ್ವರ್ಗ್ಗಡಮಲ್ಲಿತನ್ನೊಳಾರಾಧಿಸಿದಂ- ॥
ಗೋರ್ವ್ವಂಬರವಿತ್ತಡೆ ಮ- ।
ತ್ತೋರ್ವ್ವಂ ಮುಳಿದವನನಿಱಿವುದಿನ್ನವು ಕೂಟಂ ॥ ೫೭ ॥

ಮೃಡನಂ ಮೆಚ್ಚಿಸಿ ಸುಖದಿಂ ।
ಪಡೆದಾಯುಧದಿಂದೆ ರಾವಣಂ ವಿಷ್ಣುವಿನೊಳ್ ॥
ಪೊಡದಿಱಿದುಂ ಗಡ ತನ್ನಂ ।
ಕೆಡೆಯೆಚ್ಚಡೆ ಸತ್ತನಿಂತುಟೀಶ್ವರನವರಂ ॥ ೫೮ ॥

ವೃ॥ ಹರಭಕ್ತಂ ಕೋಟಿಲಿಂಗಂಗಳನನವರತಂ ಕಾಸಿನೊಳ್-
ಪೊತ್ತಬಾಣಾ- ।
ಸುರನೆ[೧]ಂಬಂ ಪ್ರೀತಿಯಿಂ ಪೂಜಿಸುತಿರೆಗಡವಾತ್ಸಲ್ಯದಿಂ-
ಮಿಕ್ಕ ಮಾಹೇ- ।
ಶ್ವರನಾನಾರಾಯಣಂ ಕಾಸನೆ ಕಡಿದೊಡೆಲಿಂಗಂ-
ಗಡಂ ಬೀಳೆ ಬಾಣಾ- ।
ಸುರನಾಗಳ್ಸತ್ತನಾಗಳ್ ಶಿವಸಮಯದವರ್ತ್ತ-
ಮ್ಮೊಳಿಂತಾಗವೇಡಾ ॥ ೫೯ ॥

ಪರಮ ಮಹೇಶ್ವರರ್ದ್ದಿತಿಜರಪ್ಪುದಱಿಂ-
ಕೊಲಬಾರದೀಶನಂ ।
ಪರಿಹರಿಸಲ್ಕೆ ಶಕ್ತಿ ಕಿಡುಗುಂ ಕಿಡೆಕೊಲ್ವನೆನುತ್ತಮಂ-
ಬುಜೋ- ।
ದರನಿರದಂದು ಬುದ್ಧವಪುವಂತದನಾಗಳೆ ತಾಳ್ದಿಮೋಹಿಸ- ।
ಲ್ಗಿರಿಶನ ಭಕ್ತಿಯುಂ ಮಱೆಯೆ ದೈತ್ಯರನಂದಳಿದಂ-
ಗಡಚ್ಯುತಂ ॥ ೬೦ ॥

ಕಂ॥ ಓರ್ವ್ವಂ ಜಗವಂ ಮಾಡುವ- ।
ನೋರ್ವ್ವಂ ಮತ್ತದನೆ ಕಾವನಲ್ಲದನೇಂ[೨] ಮ- ॥
ತ್ತೋರ್ವ್ವಂ ಕಿಡಿಸುವನನಿಬರು- ।
ಮೋರ್ವ್ವನೆಗಡಕಡೆಯೊಳಿನ್ನವಘಟಿತಮೊಳವೇ ॥ ೬೧ ॥

---

೧. ಇ—ನಂ; ೨. ಇ, ಈ—ನೆಲ್ಲಂ;

ಓರ್ವರ್ಗಂ ಮಾಡಿದುದಂ ಮ- ।
ತ್ತೋರ್ವರ್ಗಂ ಕಿಡಿಸಿದೊಡೆ ಕೊಲ್ವರೆಲ್ಲಮಿದಂ ಮ- ॥
ತ್ತೋರ್ವರ್ಗಂ ಮಾಡಿದ ಲೋಕಮ- ।
ನೋರ್ವರ್ಗಂ ಗಡಸುಟ್ಟುಮತ್ತೆಯುಂ ಕೂಡಿಪ್ಪರ್ ॥ ೬೨ ॥

ವೃ॥ ಜಗಮಂ ಮಾಡುವನಬ್ಜಸಂಭವನದಂ ಕಾವಂಗಡಂ-
ವಿಷ್ಣುತ- ।
ಜ್ಜಗಮಂ ತಾಂ ಕಡೆಯಲ್ಲಿ ಕೂಡೆ ಸುಡುವಂ-
ರುದ್ರಂಗಡಿನ್ನೇಕ ಮೂ- ।
ರ್ತಿಗಳೊಂದಂದಮದೆಂತೊ ಪುಟ್ಟಿಸಿದವಂಗಂ-
ಕಾದವಂಗಂ ಹರಂ ।
ಪಗೆಯಲ್ತೇ ಸುಡುವಾತನೆಂದು ತಿಳಿಯಮೂರ್ಖ-
ಘಾತ್ಮರೇಗೆಯ್ದಡಂ ॥ ೬೩ ॥

ಕಂ॥ ಹರಿಹರರೆಂತುಂ ಕೊಲ್ವ- ।
ರ್ವಿರಿಂಚಿಬರವಿತ್ತದನುಜರಂ ಮತ್ತಾಮೂ- ॥
ವರುಮೇಕ ಮೂರ್ತಿಗಳ್ಗಡ ।
ನಿರಂತರಂ ತಮ್ಮೊಳಿಂತುನೇಪ್ಪರ್ಡುವೇಡಾ ॥ ೬೪ ॥

ವನಜಭವಂ ದನುಜನ[1]ನೊಂ- ।
ದಿನಿಸಾನುಂ ಭಕ್ತಿಗಿತ್ತುಬರವಂ [2]ಗಜ[2] ಮು- ॥
ಳ್ಳನಿತುಮನಳಿದಪರೆಂದಂ- ।
ದನಿಬರುಮಂ ಕೊಂದರೆಯ್ದೆ ಹರಿಹರರೆಂಬರ್ ॥ ೬೫ ॥

ವಾರಿಜಭವನಂ ನಿಷ್ಠೆಯಿ- ।
ನಾರಾಧಿಸಿ ಸಾಯುದಂತು ಜಗಮಂ ಪಡೆದಾ ॥
ತಾರಕನಂ ಶಂಕರನ ಕು- ।
ಮಾರಕನಳಿದಂ ಗಡಿಂತು ತೊಟ್ಟಿಲ ಚಿಣ್ಣಂ ॥ ೬೬ ॥

ಗಿರಿಶನನಾರಾಧಿಪದೈ- ।
ತ್ಯರೆ ಗಿರಿಶನೊಳೊದಱಿಕಾದುತಿಪ್ಪರ್ಗರ್ಗ್ಗಡಬಾ- ॥

---
೧. ಇ, ಈ—ರ; ೨. ಇ, ಈ—೨ಜಗ೨;

ಱ್ಪಿರೆ ಭಕ್ತರವಿನಯಮುಮಾ |
ಗಿರಿಶನ ದೇವತ್ವದಂದಮುಂ ಕಡುರಯ್ಯಂ || ೬೭ ||

ಭರದಿಂ ದೈತ್ಯರನಾದ್ರ್ದಿಸು- |
ತಿರೆ ರುದ್ರನ ಬಾಣಹತಿಯಿನುಗುತ್ತರುತಿರೆದೈ- ||
ತ್ಯರನೆತ್ತರಪನಿಯೊಳ್ಸಾ- |
ಸಿರವಪ್ಪದ್ರ್ದೈತ್ಯರೆಂಬರಿನ್ನವು ಪುಸಿಗಳ್ || ೬೮ ||

ವೃ|| ಮುನಿಸಿನೊಳಾಂತು ದಾನವನಿಕಾಯದೊಳರ್ವ್ವಿ-
ಸಿಕಾದುವಲ್ಲಿ ರು- |
ದ್ರನನೊಸಲಿಂದೊಸರ್ತ್ತ ಬೆವರಂ ಕಳೆದೊಯ್ಯನೆ-
ಸೂಸಿದಲ್ಲಿ ಮೇ- |
ದಿನಿಯೊಳಗುರ್ವ್ವವೆತ್ತೊಗೆದು ದೈತ್ಯರನೋವದೆ-
ಭದ್ರಕಾಳಿರು- |
ದ್ರನಬೆಸದಿಂದೆ ಕೊಂದಳೆನುತುಂ ಕಥೆವೇಳ್ವರ-
ನಾರೊಬಾರಿಪರ್ || ೬೯ ||

ಕಂ|| ಸಮರಾಂಗಣದೊಳು ರುದ್ರನ |
ಬೆಮರಿಂದಂ ಭದ್ರಕಾಳಿಪುಟ್ಟಿದಳೆನುತಂ ||
ಕ್ರಮಮಱಿಯದ ಜಡರೊಳ್ಪ- |
ರ್ಬ್ಬಿಮರಿಂದೊಗೆವಂತು ರೌದ್ರಿ ತಗುಣೆಯೊ ಪೇನೋ || ೭೦ ||

ಧರೆರಥಮಾಗಿರೆ ಚಂದ್ರಾ- |
ರ್ಕ್ಕರೆಗಾಲಿಗಳಾಗೆ ಕಮಳಜಂ ಸಾರಥಿಯಾ- ||
ಗಿರೆ ರುದ್ರಂ ನಡೆದಂಗಡ |
ಪುರಂಗಳಂ ಕಿಡಿಸಲಿನ್ನವಘಟಿತವೊಳವೆ || ೭೧ ||

ಸುರಗಿರಿ ಬಿಲು ನಾಗೇಂದ್ರಂ |
ತಿರು ಕೃಷ್ಣನೆ ಬಾಣಮಾಗಿರೆಚ್ಚಂ ಮೂಱುಂ ||
ಪುರಮುಂ ಗಡರುದ್ರಂ ಪೇ- |
ಳ್ವರಿಕ್ಕೆಕೇಳ್ವರಿದರಘಟವೆನ್ನರೆಚದುರರ್ || ೭೨ ||

ಗಂಗೆಯುಮಂ ಜೆಡೆಗಳೊಳೆಳೆ- |
ದಿಂಗಳುಮಂ ತಾಳ್ದಿರುದ್ರನಿಪ್ಪಂ ಗಡಪೋ ||

ಗಂಗೆ ನೆಲದಲ್ಲಿ ಬಾನೊಳು |
ತಿಂಗಳು ಸುಳಿಯುತ್ತಮಿರ್ಕ್ಕುಮಿದುಪುಸಿಯೆಸಕಂ || ೭೩ ||

ಒಡಲೋರ್ಬ್ಬಾಗಮನಿತ್ತಂ |
ಗಡಕಾಂತೆಗೆ ಶಂಭು ಶಂಭುಗಂ ಕೊಟ್ಟಳು ತ- ||
ನ್ನೊಡಲೋರ್ಬ್ಬಾಗಮನಗಸುತೆ |
ಗಡಮಿಕ್ಕೆರಡರೆಯನಾರ್ಗ್ಗೆ ಕೊಟ್ಟರೊಪೇಳಿಂ || ೭೪ ||

ಹರನಗಿರಿಸುತೆಯ ತನುಗಳೊ- |
ಳಿರಡರೆಯುಂ ಕಾಣಲಾಗದುಳಿದೆರಡರೆಯುಂ ||
ನರಿತಿಂದವೊ ನಾ[೧]ಯಿತಿ[೧]ಂದವೊ |
ಪರೆದಿರ್ದ್ದವೊ ಪೇಳಿವರ್ದ್ಧನಾರೀಶ್ವರರಂ || ೭೫ ||

ರಾಗದಿ ನಗಸುತೆಯೊಳ್ಸಂ- |
ಭೋಗಿಸುತಿರ್ಪ್ಪಲ್ಲಿಗಗ್ನಿಬರೆ ನಾಚಿಕೆಯಿಂ ||
ಪೋಗಿ[೨]ಗಿರಿಜಾತೆ ಮುನಿಸಿಂ- |
ದಾರೇತಮನಿಟ್ಟನಗ್ನಿಮುಖದೊಳುರುದ್ರಂ || ೭೬ ||

ಅನಲಂ ರುದ್ರನರೇತಮ- |
ನನಿತುಮನಂದಿಂದೆ ಪಾಂಡುರೋಗದಿನಮೆದ- ||
ರ್ಜ್ಜುನನೀಯಲಂದು ಖಾಂಡವ- |
ವನಮಂ ತಿನಲುಂ ನಿರೋಗಿಯಾದನೆಂಬರ್ಗ್ಗೊರವರ್ || ೭೭ ||

ಬಡವೆಯನಾಣಂ ಕಂಡ- |
ರ್ಕ್ಕಡೆಗಣಿಸುವರೆಂದಡಜಿತಮುಳ್ಳರ್ಕ್ಕಲ್ಲೊ- ||
ಳ್ಕಡೆದರ್ಚ್ಚಿಪರೇನುಚಿತಮೆ |
ಮೃ[೩]ಡನಿರ್ದ್ದಂ[೩]ಕರಮೆ ನಾಣಪುತ್ತಿನರೂಪಂ || ೭೮ ||

ಧಾರಿಣಿಯ ಪೆಂಡಿರೆಲ್ಲಂ |
ಗೌರಿಯ ರೂಪೆಂಬರಂತುಟಾದಂದಿನ್ನಾ ||
ಗೌರೀಶಭಕ್ತರೆಂತು ವಿ- |
ಚಾರಿಸರಾ ಪೆಂಡಿರೊಡನೆ ನೆರವದಯುಕ್ತಂ || ೭೯ ||

---

೧. ಇ—ಯ್ತಿಂ; ೨. ಈ—ಗೆ; ೩. ಇ, ಈ—೩ಡಾನಿಯುಂ೩;

ವೃ ಬಳಸಿದ ಪತ್ರೆಯುಂ ಬರುತೆಕೆಪ್ಪಿನ ಕಾಲೊಳೆ-
ನೂಂಕಿ ತನ್ನ ಮು- ।
ಕ್ಕುಳಿಸಿದ ತೋಯದಿಂ ಮಿಸಿಸಿ ಪತ್ರೆಯು-
ನೊಟ್ಟುತಮಿರ್ದ್ದ ಕಬ್ಬಿಲಂ- ।
ಗೆಳಸಿಸ[1]ಯುಂಭುನಿಂ ಬಲದದಾಯುಮನರ್ತ್ಥಿ-
ಯೊಳಿತ್ತನೆಂಬರಾ- ।
ರಳವಿಯೊ ಬಣ್ಣಿಸಲ್ಕವನ ಭಕ್ತಿಯನೀಶನ ದಾನಶಕ್ತಿಯುಂ ॥ ೮೦ ॥

ಕಂ॥ ಮಾತೇನೊ ಪಾರ್ವ್ವರೀಶನ ।
ರೀತಮೆ ಪೊನ್ನೆಂದು ಪೇಳ್ವರಾರೀತದೆಮ- ॥
ತ್ತಾತನನರ್ಚ್ಚಿ ಪುದೆಂಬ- ।
ಬ್ಭೂತಳದೊಳು ತಕ್ಕರಿಂತು ಪೇಳಲುವೇಳ್ಕುಂ ॥ ೮೧ ॥

ಕನಕನಗೇಂದ್ರಂದನು ರು- ।
ದ್ರನರೇತಮದೆಂಬರದುವೆ ಕುಲಶೈಲಂತಾ- ॥
ನೆನುತಿಪ್ಪರಿನ್ನವೋದುಗ- ।
ಳೆನಿತಾನುಂ ಮತ್ತವೊಳವು ಶೈವಾಗಮದೊಳ್ ॥ ೮೨ ॥

ಅವಯುವದಿಂ ಜೀವಂ ಬೊ- [2](ಧಿ) ।
ಗೆ[3]ವರಸು ಸಗ್ಗಕ್ಕೆ ಪಾರುಗುಂ ಸುಕೃತದಿನೆಂ-॥
ಬವರೋದುಗಳಂ ಕೇಳ್ದೂ- ।
ಳುವರೀಗಳುಮದನೆಪಿಡಿದು ಮತಿಗೆಟ್ಟವರ್ಗಳ್ ॥ ೮೩ ॥

ಸಂತತಮನೃತಂ ನುಡಿವರೊ- ।
ಳಂತುಂದಿಟಮಪ್ಪ ನುಡಿಗಳೊಂದೆರಡಕ್ಕುಂ ॥
ಭ್ರಾಂತೆನಲಿಂ ಬೀಳೆಂದೊಡ- ।
ಮೆಂತುಂ ನಂಬುವುದೆ[4]ಕೌಳಸಮಯದ ನುಡಿಯುಂ ॥ ೮೪ ॥

ಪರಿದಿರ್ದ್ದ ಪುದ್ಗಳಂಗ- ।
ಳ್ಗೆರೆದಂಬುದ ಸಮಿತಿ[4]ಯಾಸ[4]ದ್ರವರೂಪಂ ॥

೧. ಈ—ಸ್ತ; ೨. ಇ, ಈ—ಬೊಂ; ೩. ಈ—ದಿ; ೪. ಇ, ಈ—ಳಯಾಗಿಸಳ;

ಸುರಿಯೆ ಸುರೇಂದ್ರನ ಬೆಸದಿಂ ।
ಸರಥಿಯನೀ ರ್ದ್ವಂದು ಸುರಿದವಂಬುದವೆಂಬರ್ ॥ ೮೫ ॥

ವಿಪರೀತಮಲ್ಲವೇ ಮ- ।
ತ್ಸ್ಯಪುರಾಣಂ ಕೂರ್ಮ್ಮಕೃತಪುರಾಣಂ ವಾರಾ- ॥
ಹಪುರಾಣಂಗಳ್ ನರಸಿಂ- ।
ಹಪುರಾಣಂ ತಿರಿಕಜೀವವಱಿವುವೆಪೇಳಲ್ ॥ ೮೬ ॥

ಮೀನಾವೆಪಂದಿಯಂಬ- ।
ಜ್ಞಾನಿಗಳೆಲ್ಲಂ ಪುರಾಣಕರ್ತೃಗಳಾದಂ- ॥
ದೇನೆಂಬುದೊ ಕೇಳ್ವರನ- ।
ಜ್ಞಾನಿಗಳೆನಲಿತ್ತಲುಚಿತಮಂತಾವಱಿವರ್ ॥ ೮೭ ॥

ಪದಿನೆಂಟು ಪುರಾಣಮುಮಂ ।
ಪದಿನೆಂಟು ಸ್ಥಿತಿಯುಮಂ ಪರೀಕ್ಷಿಸಿನೋಳ್ಪಂ ॥
೨ದದುಮತ್ತಂಬೇರಲ್ಲದ ।
....ಮತ೨ವೊಂದಲ್ತು ಸಮಯವೊಂದಾಗಿಕ್ಕುಂ ॥ ೮೮ ॥

ಧರೆಯುಪ್ಪಡಚೇತನವಾ- ।
ಧಿಶಿಗಳ ಚತುರಂಗ ಬಲದಭಾರಮನಾಂ ಪೊ- ॥
ತ್ತಿರಲಾಱೆನೆಂದು ಪೇಳ್ದುದು ।
ಮುರರಿಪುಗೆ ಗಡಿನ್ನವೊಳವೆ ಪುಸಿಗಳನೀಳಂ ॥ ೮೯ ॥

ಧಾರಿಣಿಗೆ ಸೇನೆಯೊದವಿಂ ।
ಭಾರಂ ಪಿರಿದಾಗೆ ದೈತ್ಯರಿಂ ಭಾರತದಿಂ ॥
ಭಾರಮನೆ ಕಳೆಯಲೊಗೆದಂ ।
ನಾರಾಯಣನೆಂದು ಪೇಳ್ವರಱಿವಿಲ್ಲದವರ್ ॥ ೯೦ ॥

ನುಂಗಲ್ಕಾರ್ಪ್ಪಂ ಗಡಲೋ- ।
ಕಂಗಳನವಱೊಳಗಣಸುರರಂ ಕೊಲಲೆಂದಾ- ॥
ತಂ ಗಡ ಹರಿ ಪಲವುಂ ಚೋ- ।
ಹಂಗಳನಿದುಯುಕ್ತಮಾಗಲಱಿಗುಮೆ ಪೇಳಿಂ ॥ ೯೧ ॥

---

೧. ಇ, ಈ—ಸ್ಯ. ೨. ಈ—೨ದದಱಿಮತಂ ಬೇಱಲ್ಲಂ । ತದಮತ೨;

ಮೀನಾವೆ ಪಂದಿಯೆಂದೆನಿ- ।
ತಾನುಂ ರೂಪಾಗಿ ಕೊಲ್ಲದೊಡವೊಳಗಿರ್ದಾ ॥
ದಾನವರಂ ಜಠರಾಗ್ನಿಯಿ- ।
ನೇನುರಿಪಲುಮಾಱದಿರ್ದನೇ ಗೋವಿಂದಂ ॥ ೯೨ ॥

ಧರೆಯುಳ್ಳನಿತುಮನೋರ್ವಂ ।
ಭರದಿಂ ಕೊಂಡೊಯ್ದು ಕೋಣೆಯೊಳ್ಮಡಗಿದನಾ ॥
ಧರೆಯಂ ಮುರರಿಪು ಗಡಶೂ- ।
ಕರನಾಗಿಯೆ ತಂದನೆಂಬರಿನ್ನವು ಪುಸಿಗಳ್ ॥ ೯೩ ॥

ಧರಣಿಯನೆತ್ತಿದನಮರೇ- ।
ಶ್ವರಗಿರಿಯಂ ಕಿತ್ತು ಶರಧಿಯಂ ಕಡೆದಂ ಮು- ॥
ತ್ತಿರದಂತು ತಂದುನಟ್ಟಂ ।
ಹರಿಯಾವಿಯು೧.೧ದದಿಂದೆ ಪುಸಿವರ್ಪಲಬರ್ ॥ ೯೪ ॥

ನೆಲನೆನಿತನಿತುಮನೋರ್ವಂ ।
ಬಲಿಯಿತ್ತಡೆ ಮೂಱುಪಾದಮಾಗಿರೆ ನಡೆದಂ ॥
ಸಲೆ ಮಾನಸರ್ಗ್ಗಮಘಟಂ ।
ಬಲವೈರಿಗಮಳೆಯಲರಿದು ವಿಕ್ರಿಯೆಯಿಂದಂ ॥ ೯೫ ॥

ದೊರೆಕೊಳ್ಗುಂ ವೈಕುರ್ವ್ವಣ ।
ಶರೀರಮುಮರರ್ಗ್ಗೆ ಪಲವುರೂಪಂ ತಾಳ್ದಲು ॥
ಹರಿಗೆ ದೊರಕೊಳ್ಳದೇಕೆನೆ ।
ನರನಾಗಿಯೆ ಮನುಜನಲ್ಲಿ ಪುಟ್ಟಿದಕತದಿಂ ॥ ೯೬ ॥

ವೃ॥ ಮನದನುರಾಗದಿಂ ಹರಿಗೆ ಮೂಱಡಿಯಂ-
ಕೊಡುತಿರ್ದ್ದಡಲ್ಲಿ ಶು- ।
ಕ್ರನೆಗಡವಕ್ರನಾಗಿ ಬಲಿಧಾರೆಯನೆತ್ತಿದೊಡಡ್ಡಮಾಗಿ ಪೊ- ।
ಕ್ಕನನಱಿದಾಗ ವಾಮನನೆದರ್ಭೆಯೊಳಾಸಿ-
ದೊಡಾರೆನಾಂಟಿ ಶು- ।
ಕ್ರನ ಬಲಗಣ್ಣುಮಾಗಳೊಡೆದತ್ತೆನುತಂ ಕಥೆ-
ಗುಟ್ಟುವರ್ ದ್ವಿಜರ್ ॥ ೯೭ ॥

೧. ಇ—೧ನ೧;

ಅರೆಮತ್ತಲ್ನೆಲನಂ ದ್ವಿಜಂಗೆ ಮುದದಿಂದೀಯಲ್ಕೆ-
ತದ್ದಾನದಿಂ ।
ಸುರಲೋಕಂ ದೊರೆಕೊಳ್ಗುಮೆಂಬರದುಕಾಲಂ-
ತನ್ಮುಖಂ ಪಾತ್ರಮಂ ।
ಹರಿಯೆಂದುರ್ವ್ವರೆಯೆಲ್ಲಮಂ ಕುಡೆಬಲೀಂದ್ರ-
ಗಕ್ಕಟಾ ಬಂಧನಂ ।
ದೊರೆಕೊಂಡತ್ತು ಸುಪಾತ್ರದಾನದ ಫಲಂ-
ಕೈಗೆಯ್ಯಲಿಂತೂಡಿತೋ ॥ ೯೮ ॥

ಕಂ॥ ಭುವನಂಗಳೆಲ್ಲಮಂ ಕಾ- ।
ವವಿಷ್ಣುತನ್ನನುಜೆಯಾತ್ಮಜಾತನನಭಿಮ- ॥
ನ್ಯುವನೇಕೆ ಕಾಯನೋ ನಂ- ।
ಬುವುದಾತನನಾರ್ಗ್ಗವೇನುವಂ ಮಾಡದುದಂ ॥ ೯೯ ॥

ಯುಕ್ತಂ ಮನುಷ್ಯಭವದೊ- ।
ಳ್ಮುಕ್ತಿಯಿನಿಪ್ಪುದೆ ಗಜೇಂದ್ರನುಂ ವೈಷ್ಣವದೊ- ॥
ಳ್ಮುಕ್ತಿಯುನೆಯ್ದಿದನೆಂಬುದ- ।
ಯುಕ್ತಂದಲು ತಿರಿಕಗತಿಯೊಳಪ್ಪಡೆ ಮೋಕ್ಷಂ ॥ ೧೦೦ ॥

ಫಣಿಗಳ್ಪೊತ್ತಿರ್ದ್ದಪು ಧಾ- ।
ರಿಣಿಯೆಲ್ಲಮನೊಂದು ಕೂರ್ಮ್ಮನಾಫಣಿಯುಂ ಧಾ- ॥
ರಿಣಿಯುಮನಾಂತಿರ್ದ್ದಪುದೆಂ- ।
ಬಣಕಮನಾರಯ್ಯ ಕೇಳ್ದುದಿಟಮೆನಲಱಿವರ್ ॥ ೧೦೧ ॥

ಕಡೆನೇಣಾಗಿ ಫಣೀಂದ್ರಂ ।
ಕಡೆಗೋಲ್ಕನಕಾದ್ರಿಯಾಗೆ ಕಮಠಂ ತಾಳ್ವಲು ॥
ಕಡೆದಮರಾಸುರರುಂ ಪಾ- ।
ಲ್ಗಡಲಂ ಗಡಯುಕ್ತಿಶೂನ್ಯರಿನ್ನವುಮೊಳವೆ ॥ ೧೦೨ ॥

ವೃ॥ ಧರೆಯಂ ಪೊತ್ತ ಫಣೀಂದ್ರನಂ ಕಮಠನಂ-
ತಂದತ್ಥಿಯಿಂದಂ ಸುರಾ- ।
ಸುರರಾಕ್ಷೀರಸಮುದ್ರಮಂ ಕಡೆಯುತಿರ್ದ್ದಾ-
ಕಾಲದೊಳ್ಬಂದಡಾ- ।

ಧರೆಯೆಂತಿರ್ದ್ದುದದಾರೊ ಪೊತ್ತರಹಿರಾಜಂ-
ರುದ್ರಚಾಪಕ್ಕೆ ಮುಂ- ।
ತಿರುವಾದಂದುಮದಾರೊ ತಮ್ಮೃತನುವಂ-
ಮೋಹಿಟ್ಟರಾಲೋಕಮಂ ॥ ೧೦೩ ॥

ಕಂ॥ ಮಾರಿಗೆ ತಂತ್ರಿಸಿ ಕೇಳ- ।
ಲ್ಧಾರಿಣಿಯುಂ ಶೇಷನುಂ ಗಡಂತೆಗೆದಿರ್ದ್ಧಾ ॥
ಮಾರುದ್ರವೀಣೆಗಿಕ್ಕಿದ- ।
ರಾರೋಪೊತ್ತಿರ್ದ್ದರೆ[೧]ಳೆಯನಂದಂತವರೊಳ್ ॥ ೧೦೪ ॥

ಅಮರ್ದುಂ ಸುರಕುಜಮುಂ ಮ- ।
ದ್ಯಮುಮಿನನುಂ ಸಸಿಯುಮಾನೆಯುಂ-
ಕುದುರೆಯುಮಾ- ॥
[೨]ಕಮಳೀಯ ಮತಂಗನೆಯುರು[೨]- ।
ಮಮರ್ದಂ ಕಡೆವಲ್ಲಿ ಪುಟ್ಟಿದವು ಗಡತಿಳಿಯಿಂ ॥ ೧೦೫ ॥

ಅತ್ರಿಗೆ ಶಶಿಯೊಗೆದಂ ಗಡ ।
ನೇತ್ರದಿವಾಕಸ್ಯಪಂಗೆ ದಿನಪಂ ಜಗತೀ- ॥
ನೇತ್ರನೊಗೆದಂ ಗಡಿಂತಿದು ।
ಚಿತ್ರಂ ಮಾನಸರ ಮಕ್ಕಳೇ ಜ್ಯೋತಿಷ್ಕರ್ ॥ ೧೦೬ ॥

ಅತಿದೂರಂ ಬಗೆಯೆ ಬೃಹ- ।
ಸ್ಪತಿಗಮರಾಧೀಶನಿಪ್ಪ ತಾಣಂ ದೂರಂ ॥
ಸಿತನಿರ್ದ್ದೆಡೆಗಸುರರು ಮಿ- ।
ರ್ದ್ರತಾಣಮಿವರ್ಗವರ್ಗಳೆಂತು ಮಂತ್ರಿಗಳಾದರ್ ॥ ೧೦೭ ॥

ಅನಲಂ [೩]ಮಯುಸುತೆ[೩]ಂತೊಳ್ ಚಂ- ।
ದ್ರನೆಗಡ ಬುಧರಬ್ಬೆಯೊಡನೆ ಗೌತಮನೆಂಬಾ- ॥
ಮುನಿಪಸತಿಯೊಳ್ ಸುರೇಂದ್ರಂ ।
ಮನದಳಿಪಿಂ ನೆರೆದರೆಂಬರಿನ್ನವು ಕಥೆಗಳ್ ॥ ೧೦೮ ॥

---

೧. ಇ, ಈ—ರಿ; ೨. ಇ—೨ಕಮಳೆಯುಮುಮರಾಂಗನೆಯುರು೨; ೩. ಇ, ಈ—
೩ಯುಮುಸತಿ೩;

ಆಱಿಡಿಕಾಱನನಾರುಂ ।
ದೂಱಾದರೆ ಕೊಂದು ಕಡಿದು ಬೇಳ್ವುತ್ತಿರಲಿಂ ॥
ನೂಱಾದಿನ್ನಾತ್ಮಜನಂ ।
ಪೂಱಿದನಾ ಸುನಕಶೇಪನೆಂಬಂ ಮುನಿಪಂ ॥ ೧೦೯ ॥

ಜಳರಾಶಿಯನುಂಗುಟದು- ।
ದ್ದದಮನುಜನಗಸ್ತ್ಯನೆಯ್ದೆ ಕುಡಿದನೆನುತ್ತಂ ॥
ಗಳಪುತ್ತಿರ್ಪ್ಪರ ನುಡಿಯೊಳ್ ।
ಫಲಮಿಲ್ಲಾತಂಗೆ ಜಳಧಿ ಕುಡಿತೆಯ ನೀರೋ ॥ ೧೧೦ ॥

ಬಗೆ[೧]ವುತ್ತಿರೆ ಕುಡಿ ನೀನಿಂ ।
ಬಳೆದಂದೆನ್ನಾಣೆಯೆನಲಗಸ್ತ್ಯನಮಾತಿಂ ॥
ಬಳೆಯುಲ್ಕಮ್ಮದು ವಿಂಧ್ಯಾ- ।
ಚಳವೆಂಬರ್ಪ್ಪಿಟ್ಟವಾಣೆಗೇನಂಜುಗುಮೋ ॥ ೧೧೧ ॥

ಸಗರನೃಪನಗಳ್ದಕುಳಿಧಾ- ।
ತ್ರಿಗೆ ಸಾಗರಮಾಗೆ ಲವಣಜಲಧಿಯೆನುತ್ತಂ ॥
ಮಿಗೆ ಪುಸಿವರು ಜಳಧಿಯನೆ- ।
ನಗುಳ್ದಂ ಮಾಳ್ಪಂತು ಕೆಱೆಯೊ ಭಾವಿಯೊಪೇಳಿಂ ॥ ೧೧೨ ॥

ಸರನಿಧಿಗಂಬಂ ತುಡೆ ಪರ- ।
ಸುರಾಮನದು ತೆಗೆಯೆ ಸಪ್ತಕೊಂಕಣ ಮಾಸಾ- ॥
ಗರದ ತೆಗೆದೆ[೨]ಯೊಳಾಯ್ತಂ- ।
ಬರಱಿಯದಜ್ಜಳಧಿ ಭಯದಿ ನೆಗೆದುದೆ ಪೇಳಿಂ ॥ ೧೧೩ ॥

ಸುರರೆಲ್ಲಂ ಬಡಗಲು ನೆರೆ- ।
ದಿರೆಯಾದೆಸೆ ಕುಸಿದು ತೆಂಕನೆಗೆದೊಡಗಸ್ತ್ಯಂ ॥
ಪರಿದತ್ತಲ್ ನಿಲೆ ವಿಶ್ವಂ- ।
ಭರಿ ಸಮತಳಮಾದುದೆಂಬರಿಳೆ ಕುಸಿದಪುದೆ ॥ ೧೧೪ ॥

ದಿನಕರನುದಯಿಸವೇಡಿ- ।
ನ್ನೆನೆನೆನೆವೊಂದಿಬ್ಬ ಪುರುಷ ಭಕ್ತಿಯ ಮಾತಿಂ ॥

---

೧. ಇ, ಈ—ಳೆ; ೨. ಇ—ಡೆ;

ದಿನಕರನುದಯಿಸಲಂಜಿದ- |
ನೆನುತಂ ಕಥೆವೇಳ್ವರಿನ್ನವಿತರ ಪುರಾಣಂ || ೧೧೫ ||

ವೃ|| ಅರಸರ ಕೊಟ್ಟ ದಾನಮನೆಕೊಳ್ಳದೆ ದೂಷಿಸ-
ಪೊಕ್ಕರಣ್ಯದೊ- |
ಳ್ತಿರಿತರುತಿರ್ಪ್ಪರುಂ ಋಷಿಯರರ್ತ್ಥಿಯೆಪಣ್ಣನೆ-
ಸೇವಿಸಲ್ಕೆ ಕಂ- |
ಡರಸನುಮಾಫಲಂಗಳೊಳಗಿಕ್ಕೆ ಸುವರ್ನ್ನಮ-
ನಿನ್ನಭೋಜ್ಯಮೀ- |
ಮರದ ಫಲಂಗಳಕ್ಕೆನಲೊಡಂ ಪುಳುತಿಂದವ-
ವೆಂಬರೀಗಳುಂ || ೧೧೬ ||

ಕಂ|| ಧರಣೀಶರೀಯೆ ಕೊಳ್ವುದು |
ಪಿರಿದುಂ ದೋಷಂದಲೆಂದು ಪರಿ[1]ದಾಗಳೆಕೊ- ||
ಕ್ಕರಿಸದೆ ಪೆಣನಂ ತಿಂದುಂ |
ನೆರದಗ್ಗ್ರಡ ಸಪ್ತಋಷಿಯರವ್ರುತಾಂಗನೆಯೊಳ್ || ೧೧೭ ||

ತನಗಿರ್ದ್ದಡೆಯಾದಡೆಸುರ- |
ಮುನಿಯೋರ್ವ್ವಂ ನಾಯಮಾಂಸಮುಂ ಪೇಸದೆ ಸೇ- ||
ವನೆಮಾಡಿತಪಂಗೆಯ್ದಾ- |
ತನೆಪೋದಂ ಮುಕ್ತಿಗೆಂಬರಿನ್ನವು ಕಥೆಗಳ್ || ೧೧೮ ||

ಪೊಲತಿಯುಣಲಿಕ್ಕೆ ಶುನಕನ |
ಕಳೆವರಮಂ ಪೊಕ್ಕುಪೇಸದುಂಡಾಮುನಿ ನಿ- ||
ರ್ಮ್ಮಳನಾಗಿ ಮುಕ್ತಿರಮೆಯೊ- |
ಳ್ನಲಿದಂ ನಾಯುಂದನೆಂಬನೆಂಬರ್ತ್ತಕ್ಕರ್ || ೧೧೯ ||

ವೃ|| ಆಕಳಿಗೆಮ್ಮೆಯುಂ ಜವೆಗೆಗೋದುವೆಯುಂ ತುರಗಕ್ಕೆ-
[2]ಕತ್ತೆಯುಂ[2] |
ಲೋಕದನೆಲ್ಗೆ ಕೆಂಗಳವೆಯುಂಬಱುಸೀರೆಗೆ-
ನಾರಸೀರೆಯುಂ |

೧. ಇ—ಷಿ; ೨. ಅ—೨ಹಸ್ತಿಯುಂ೨;

ಶಾಕಟಿಕಕ್ಕೆ ಮತ್ತೆರಥಮಂ ಪ್ರತಿಮಾಡಿದ-
ನೋರ್ವ್ವ ಜೀಯನೆಂ- ।
ದೇಕೆಯೊ ಮೂಢರೊಳ್ವರವನೆನ್ನನುಮೊಪ್ಪಿರೆ-
ಮಾಳ್ಪನೇಪೆಱಂ ॥ ೧೨೦ ॥

ಕಂ॥ ಗೊರವರ ಶಾಪದಿನವುದುಂ- ।
ಬರವೆಲ್ಲಂ ಪುಳಿತವೆಂಬರರಳಿಯುಪಣ್ಣಂ ॥
೧...೧ ।
ಗೊರವರಶಾಪದೊಳೆಪುಳಿತವೇಪೇಳಿಮಿದಂ ॥ ೧೨೧ ॥

ಸಾಮರ್ತ್ಥ್ಯಮುಳ್ಳಪುರುಷಂ ।
ಭೂಮಿಯೊಳವನೋರ್ವ್ವನಾದನೇಬಲ್ಲವರುಂ ॥
ತಾನೊಂದಂ ಮಾಡನೆ ವಿ- ।
ಶ್ವಾಮಿತ್ರಂಗಖಿಳಮಿತ್ರನೇಂ ಪ್ರತಿಯಿಲ್ಲಾ ॥ ೧೨೨ ॥

ಮುನಿಗಳ್ಪೆಱರಂ ಶಾಪಿಸಿ- ।
ದನಿತಱಿನವರ್ಗಳ ತಪಂಗಳಳಿಗುಮದೋರ್ವ್ವಂ ॥
ಮುನಿಪೆಱರಂ ಶಾಪಿಸಿದೊಡೆ ।
ತನಗೆ ತಪಂ ಪೆರ್ಚ್ಚುತಿಕ್ಕುಮೆಂಬರ್ತ್ತಕ್ಕರ್ ॥ ೧೨೩ ॥

ಗೊರವರು ಶಾಪಂಗೊಟ್ಟಡೆ ।
ಸುರೇಂದ್ರರುಂ ಸ್ವರ್ಗ್ಗದಲ್ಲಿ ಸುಖದಿಂದಿರುತಂ ॥
ಧರೆಗೆ ಕೆಡೆತಂದು ಕೀಳ- ।
ಪ್ಪರೂಪಮಂ ತಾಳ್ದಿಸಮೆವರೆಂಬಮೂರ್ಖ್ಖರ್ ॥ ೧೨೪ ॥

ಶಾಪಮನಿತ್ತಡೆ ಕುತ್ಸಿತ- ।
ರೂಪಮನೆಯ್ದುವರನುಗ್ರಹಂ ಮಾಡಿದೊಡಾ- ॥
ರೂಪಂ ಬಿಸುಟ್ಟು ಮುನ್ನಿನ ।
ರೂಪನೆಗಡತಳೆವರೆಯ್ದೆ ಗೊರವರಿನವರ್ಗಳ್ ॥ ೧೨೫ ॥

ಪಿರಿದಪ್ಪ ಪುಣ್ಯಫಲದಿಂ ।
ಸುರೇಂದ್ರರಾದವರ್ಗಳಾಗ ಗೊರವರ ಶಾಪಾಂ- ॥

---

೧. ಇ, ಈ—೧ಪಿರಿದುಂಗೋಳಿಯುಪಣ್ಣುಂ।೧;

ತರದಿಂ ಕಿಡುವಂತೆಂಗಳ ।
ಸುರೇಂದ್ರರಾಜ್ಯರ್ಜಿಸಿದಲಕ್ಷ್ಮಿಬೂದಿಯ ಬೊಟ್ಟೆ ॥ ೧೨೬ ॥

ವೃ॥ ಜವನಿರ್ದ್ದಲ್ಲಿಗೆ ಸತ್ತರಂ ಪಿಡಿದುಕೊಂಡೊಯ್ವುಗ್ರ್ಗಡಂ-
ದೂತರಾ- ।
ಜವನಿಂ ಪೇಳಿನೆ ಚಿತ್ರಗುಪ್ತನವರೊಂದಾಚಾರಮಂ-
ಪೇಳ್ವನಂ- ।
ತವರುಂ ಮಾಡಿದ ಪುಣ್ಯಪಾಪಫಲಮಂ ನೀಮುಣ್ಬ-
ದೆಂದೂಡುವಂ ।
ಜವನಿಂತಾಗಳುಮೆಂಬರಿನ್ನುವಘುಟಂ ದುರ್ಬೋಧ-
ಥರೊಂದೋದುಗಳ್ ॥ ೧೨೭ ॥

ಕಂ॥ ಜವನುಂ ಕರಣಂಗಳುಮಾ- ।
ಜವದೂತರುಮಿಪ್ಪತಾಣಮಾವೆಡೆ ಬರೆಯ- ॥
ಲ್ಕವರಾರ್ಪ್ಪರೆ ಲೋಕದ ಜೀ- ।
ವವನೆಲ್ಲಂ ಲೆಕ್ಕವಲಗೆ ತಾನೆನಿತುಂಟೆ ॥ ೧೨೮ ॥

ಜೀವಂಗಳ ಮೂರ್ತ್ತಂಗಳು ।
ಜೀವಂಗಳು ಪಿಡಿಯಬಕ್ಕುಮೇಕರಣಂಗಳ್ ॥
ಜೀವಂಗಳ್ಮಾಡಿದುದಂ ।
ತಾವೆಂತರಿದಪ್ಪರುಂಟೆ ಕೇವಳಬೋಧಂ ॥ ೧೨೯ ॥

ಪರಕಾಯಂ ಪೊಕ್ಕುಂ ಮು- ।
ತ್ತ್ಯರಜೀವಂ ಶಬವನೆತ್ತಿನಡಯಿಪುವು ಬಳಿ- ॥
ಕ್ಕಿರದೆಮುಗುಳೊಡಲೊಳಾಗಳೆ ।
ಬೆರಸಿಪ್ಪುವು ಗಡಮಹಾತ್ಮರಿಂತಿರೆ ಪುಸಿವರ್ ॥ ೧೩೦ ॥

ಪಾವುತಿನೆ ಸತ್ತವಂಗಾ- ।
ಪಾವಿನ ಜೀವಿಸುವವರಿಸದೊಳ್ ಭಾಗಮನಾ ॥
ಪಾವಡಿಗಂಗಡ ಕುಡುವಂ ।
ಜೀವಿತಮಘು ಭಾಗಿಪಂತು ಪೂವಿನ ಪೊನ್ನೆ ॥ ೧೩೧ ॥

ಅನ್ನಮನಾತ್ತಿರ್ತ್ತವನುಂ ।
ಜನ್ನಮನಿರ್ದ್ದವನುಮೊಳ್ಳಿತಂ ಮಾಡಿದನುಂ ॥

ತನ್ನೊಡನುದ್ಧರಿಪಂ ಗಡ ।
ತನ್ನಿಪ್ಪತ್ತೊಂದು ತಲೆಯ ಪಿತೃಗಳನೆಲ್ಲಂ ॥ ೧೩೨ ॥

ಅಲ್ಲಲ್ಲಿ ಕೂಡೆ ಸತ್ತರ- ।
ನೆಲ್ಲರುಮಂ ಬರಿಸಿತಾನುಮೇನೊಯ್ವನೊಮೇ- ॥
ಣೆಲ್ಲಬರವೇಳ್ದುಪೋಪನೊ ।
ಮೆಲ್ಲನೆ ಸಗ್ಗಕ್ಕೆ ಪೆಱಗೆ ಪಿತೃಗಳನಾತಂ ॥ ೧೩೩ ॥

ಸುರಲೋಕಕ್ಕೆಲ್ಲಂ ಭೂ- ।
ಚರರಪ್ಪ ಮಹೀಶರಾಗಳುಂ ಪೋಪರುಮ- ॥
ಲ್ಲಿರದಂತೆ ಬರ್ಪ್ಪರೆಂಬಾ ।
ಪುರಾಣಮುಂ ನಂಬಿ ಕಲ್ವರಱಿವಿಲ್ಲದವರ್ ॥ ೧೩೪ ॥

ಗುಣಿಯಲ್ಲ ಜೀವನೆಂದುಂ ।
ಕ್ಷಣಿಕಂ ತಾನೆಂದು ನುಡಿವ ಬೌದ್ಧರ ಕುಮತಂ ॥
ಗಣಿದಮೆ ಜೀವಂ ನಿತ್ಯಂ ।
ಗುಣಿಯುಂದಿಂಬಾಗಿತಿಳಿಗೆ ಜೈನಾಗಮದೊಳ್ ॥ ೧೩೫ ॥

ಮೊದಲಿಲ್ಲ (ದ) ನಂತಸಂಸಾ- ।
ರದಿಂದಮುಂ ಮುಕ್ತಿಗೆಯ್ದುವಂ ನೆವರಂ ಪೇ೧- ॥
ಳ್ವುದುತಾಂ ಪುರಾಣಮಂತ ।
ಲ್ಲದುದೆಲ್ಲಂ ಸಿತಗರೂಳ್ವಸಿತಮತಮೆನಿಕುಂ ॥ ೧೩೬ ॥

ಇದು ತಕ್ಕುದು ತಗದಿಂತಿದು- ।
ವಿದು ಸತ್ಪಥವಿಂತಿದಿನ್ನ ಸತ್ಪಥವೆಂದೆಂ- ॥
ದದನಱಿಯದೆ ಕುಮತಿಗಳೂ- ।
ಳ್ವುದನಾಗಮವೆಂದು ನಂಬಲಾಗದು ಚದುರಂ ॥ ೧೩೭ ॥

ಅವಿವೆನ್ನದೆಲ್ಲಮುಂ ನೋ- ।
ಡುವಡಾರ್ಹತಮಲ್ಲದನ್ಯರಾಗಮುಮುಂ ಮ- ॥
ತ್ತವರ ಪುರಾಣಂಗಳು ಮೆಂ- ।
ಬುವೆಲ್ಲಮುಂ ಯುಕ್ತಿಶೂನ್ಯವಘುಟಿತಘುಟಿತಂ ॥ ೧೩೮ ॥

---

೧. ಅ, ಇ—ಕೇ;

ದೇವರ ಕಯ್ಯೊಳ್ಸತ್ತರೆ ।
ಜೀವಂಗಳು ದೇವಲೋಕಮಂ ಪೊರ್ದ್ದುಗುಮೆಂ- ॥
ದೀವಿಧಿಯಿಂದಂ ನುಡಿವ- ।
ರ್ದ್ದೇವರ ಕೊಲೆಯಿಂ ಸಮಾಧಿ ಮರಣಮೆ ಪೇಳಿಂ ॥ ೧೩೯ ॥

ಹರಿಹರರ್ಗೆ ದಾನವರ್ಬ್ಬ- ।
ಕ್ತರಾದೊಡಾಗದೊಡಮಿಕ್ಕೆ ಚಿತ್ತದೊಳಾದಾ- ॥
ದರದಿಂ ಮೋಣ್ಮನಿಸಿಂ ಮಱೆ- ।
ಯರಾಗಿ ಸಗ್ಗಕ್ಕೆ ಪೋಪರೆಂಬಮೂರ್ಖರ್ ॥ ೧೪೦ ॥

ಪಲತೆಱದಿಂ[1]........[1]ಸಂ- ।
ಕುಳಮಂ ಮಚ್ಚರದಿನಿಱಿದರೆಂಬರ ಕಥೆಯೊಳ್ ॥
ಫಲವೇನೋ ಕೇಳ್ವುದು ನಿ- ।
ರ್ಮ್ಮಳಮತಿಯಿಂ ಮೋಕ್ಷಮಾರ್ಗ್ಗಮಂ ಜಿನಮತಮಂ ॥ ೧೪೧ ॥

ಮುನಿಪಂದಧಿಕಂ ಗಡ ದೇ- ।
ವನಿಕಾಯದೆ ಬಯ್ಕೆಗೊಂಡು ದೈತ್ಯರ್ಗ್ಗಿದಾ- ॥
ತನ ಬಸಿಱೊಳಿಕ್ಕಿದಂ ಶ- ।
ಸ್ತ್ರನಿಚಯಮುಮನೆಂಬರಿನ್ನವಘುಟಿತಮೊಳವೆ ॥ ೧೪೨ ॥

ದಿವಿಜತತಿ ಬೈತಕೈದುವ- ।
ನವಸರದೊಳ್ಬೇಡೆ ಸುರಭಿಯಿಂ ನಕ್ಕಿಸೆ ದೇ- ॥
ಹಮನೆಲ್ಲ ನ[2]ಚ್ಚಿಕ[3]ಡೆಕ- ।
ಯ್ದುವಾದವಾ ಗೊರವನೆಲ್ವುಗಡ ಚಿತ್ರತರಂ ॥ ೧೪೩ ॥

ಆಕುಳಮತಿಗಳು ನಿಚ್ಚಂ ।
ಲೋಕಪುರಾಣಮನೆ ಕೇಳ್ವರನ್ಯಸ್ರಲೆ ನಿ- ॥
ವ್ರ್ಯಾಕುಳಮತಿಯಿಂ ಜೈನ- ।
ಲ್ಲೋಕಸ್ತುತ ಜೈನಧರ್ಮ್ಮಕಥೆಯಂ ಕೇಳ್ವರ್ ॥ ೧೪೪ ॥

ಮಾದಂಗನಾಗಿ ಯೋಗದೊ- ।
ಳಾದಂ ನಿಂದಲ್ಲಿ ಪುತ್ತುಪರ್ವ್ವಿದೊಡವನೊಂ- ॥

---

೧. ಇ, ಈ—೧ದಾನವಂ೧; ೨. ಇ—ನು; ೩. ಇ, ಈ—ಕು;

ದಾದಂ ವಾಲ್ಮೀಕಿಯಿನಾ- ।
ದೋದುಗಳೆಂದೊಯ್ಯೆ ಮೂಢರೋದುವರೀಗಳ್ ॥ ೧೪೫ ॥

ನುಂಗಿದನಣುವಂ ಭಾಸ್ಕರ- ।
ನಂ ಗಡ ಕಂಡಿಂದ್ರನಣುವನಂ ವಜ್ರದಿನಿ- ॥
ಟ್ಟಂಗಡ ಸುತಶೋಕದಿನನಿ- ।
ಲಂಗಡ ಮುಳಿದೊಂದು ಮರದ ಪೊಳಲೊಳಗಿರ್ದ್ದಂ ॥ ೧೪೬ ॥

ತಲೆಗಳನರಿದೇಱಿಸಿ ನಿ- ।
ಶ್ಚಳಭಕ್ತಿಗೆ ಸಂದರಾವಣಂಗೊಲಿದಿತ್ತಂ ॥
ತಲೆಗಳುಮಂ ಖಡ್ಗಮನೆಂ- ।
ದಲಸದೆ ಪುಸಿಯುತ್ತಮಿರ್ಪ್ಪರಱಿವಿಲ್ಲದವರ್ ॥ ೧೪೭ ॥

ಕಡಿದೇಱಿಸೆ ತಲೆಗಳನಾ- ।
ಗಡೆರುದ್ರಂ ಮೆಚ್ಚಿತಲೆಗಳನಿತುಮನಿತ್ತಂ ॥
ಗಡ ರಾವಣಂಗಿದಘಟಂ ।
ಕಡಿದಡೆ ಕೊನರ್ವಂತು ತಲೆಗಳರಳಿಯುಮರನೇ ॥ ೧೪೮ ॥

ಅಂದಿನ ಭಕ್ತಿಗೆ ತಕ್ಕುದ- ।
ನಿಂದುವರಂ ಕಡಿದ ತಲೆಗಳಂ ಕೊನರಿಸಿದಂ- ॥
ತಿಂದಿನ ಭಕ್ತಿಗೆ ತಕ್ಕುದ- ।
ನೊಂದಿನಿಸಂ ಕಡಿದು ಬೆರಳನೇಕೆ ಕೊನರ್ಚ್ಚರ್ ॥ ೧೪೯ ॥

ಕೋಡಂಗಳದ್ರಿಯುಂ ತಂ- ।
ದೀಡಾಡಿದೊಡೆಯ್ದೆ ಶರಧಿಯಂ ಕಟ್ಟಿದುದಾ- ॥
ರೂಢಿಯ ರಾಮಂ ಲಂಕೆಗೆ ।
ಕೋಡಗಗಳುವೆರಸಿಪೋಗಿ ಗಡಸಾಧಿಸಿದಂ ॥ ೧೫೦ ॥

ಮೃತಸಂಜೀವನಿಯುಂ ಕಿ- ।
ತ್ತುತಂದುಸತ್ತವರ ಕಿವಿಯೊಳೆಱೆಯೆಪುನರ್ಜ್ಜೀ- ॥
ವಿತಮಾದುದು ರಘುಜಾತ- ।
ಕ್ಷಿತಿಪನಬಲಕೆಂಬರಿನ್ನವಘಟಿತವೊಳವೇ ॥ ೧೫೧ ॥

ರಾವಣನಲ್ಲಂ ರಕ್ಕಸ- ।
ನಾವಿದ್ಯಾಧರನ ತಲೆಗಳುಂ ಪೆಱವಿಲ್ಲಿ ॥

೧.......................................೧।
ಲ್ಲಾ ವಿದ್ಯಾಧರನೆ ಕಾಮದೇವಂ ಮುಕ್ತಂ ॥ ೧೫೨ ॥
ವಾಲ್ಮೀಕಿ ತನ್ನ ಪುಸಿಗಳ।
ಬಲ್ಮೆಯನುತ್ತಮಮೆನಿಪ್ಪರಾಮಾಯಣಮಂ ॥
ಕಲ್ಮಷಮೊದವಿರೆ೨ಪೇಳ- ।
ಲ್ತಾಮಳಿನತೆ..೨ಯೆನಿಪ್ಪುದಾ ಕಥೆಯನಿತುಂ ॥ ೧೫೩ ॥
ಪೊಡವಿಯ ತೀರ್ತ್ಥಂ ಜಗುನೆಯ ।
ನಡುವೆ ಪರಾಶರಮುನೀಶ್ವರಂ ಕೊಡಗೂಸಂ ॥
ಕಿಡಿಸೆಗಡಂ ಬ್ಯಾಸಂಗಡ ।
ಜಡೆದೊಂಗಲ್ವೆರಸಿ ಜಾಲಗಾಱಿತಿಗೊಗೆದಂ ॥ ೧೫೪ ॥
ವ್ಯಾಸಮುನೀಶಂಱಿಂಡೆಗೆ ।
ಪೇಸದೆ ಗರ್ಬ್ಭಮನೆ ಮಾಡೆ ಪುಟ್ಟಿದಸುತರಿಂ- ॥
ದೀಸಕಳೋರ್ವ್ವರೆಗೆಗಡಂ ।
ವ್ಯಾಸಮುನೀಶ್ವರನಿನಾಯ್ತು ಭಾರತವಂಶಂ ॥ ೧೫೫ ॥
ಕೊಂತಿಗೆ ರವಿಬರೆಗರ್ಬ್ಭಮ- ।
ದಂತಾಗಳೆ ಕನ್ನೆತನದೊಳೊಗೆದುದು ನವಮಾ- ॥
ಸಂತೀವದೆ ಕಿವಿಯೊಳಗೊಗೆ- ।
ದಂ ತನಯಂ ಬಳಿಕೆ ಮದುವೆಯಾದತ್ತುಗಡಂ ॥ ೧೫೬ ॥
ಕರ್ಣ್ಣದೊಳೊಗೆದುದಱಿಂದಂ ।
ಕರ್ನ್ನನೆಯಿವನೆಂದು ಕೊಂತಿ ಪೆಸರಿಡೆನೆಗಳ್ದಂ ॥
ಕರ್ಣ್ಣಮಹೀಪತಿಯೆಂಬ- ।
ಕ್ಕರ್ಣ್ಣದೊಳೊಗೆವಂತು ಕರ್ಣ್ಣಶೂಲಮೆ ಕರ್ಣ್ಣಂ ॥ ೧೫೭ ॥
ಕಳಶಂಗಳೊಳಂ ಹೋಮಾ- ।
ನಳನೊಳಮ೩.........೩ಮರನದಿಯೊಳಿಮಂತಾ- ॥
ಗಳೆ ಸುಭಟಪುರ್ಟ್ಟಿ ಮಹಾ- ।
ಬಳರಾದರ್ನ್ನಿರುತಮೆಂಬರಿನ್ನವು ಪುಸಿಗಳ್ ॥ ೧೫೮ ॥

೧. ಇ—೧ನ್ನಾವಾಯುಸೂನು ಕಪಿಯಃ।೧; ೨. ಈ—೨ತಾಂ ಪೇ।ಳಲ್ಮಲಿನಂ ಮತಿ೨;
೩. ಈ—೩ವನಿಯೊಳವ೩;

ಓರ್ವ್ವಳಿತಾಯ್ಗಡ ಮಕ್ಕಳ- |
ನೋರ್ವ್ವಗೊರ್ವ್ವರನೆ ಪಡೆದಳಮರಗ್ರೆಂದಿಂ- ||
ತುರ್ವ್ವರವರರೆಬರು ತಂದೆಯುಂ- |
ಮೋರ್ವ್ವನೆಗಡ ಕಡೆಯೊಳಿನ್ನವಾವ್ಯಾಸಮತಂ || ೧೫೯ ||

ಇಂತು ಪುಸಿಯೊಳವೆ ಖಾಂಡವ- |
ಮಂ ತಣಿಯುಣಲಗ್ನಿಪಾರ್ವ್ವ[1]ನಾಗಿ(ರ್ದ್ದೆ) ಕೇದಂ[1] ||
ಕೊಂತಿಯುತನಯುನನಘುಟಮಿ- |
ದೆಂತಗ್ನಿಯ ಚೇತನಂ ಸಚೇತನಮಾಯ್ತೋ || ೧೬೦ ||

ಸುರಪುರಕೆ ಪಾಱಿದಂಗಡ |
ನರನಿಂದ್ರನ ತೊಡೆಯುನೇಱಿದಂಗಡ ಕೊಂದಂ ||
ಸುರಪತಿಯು ಪಗೆವನಂ ಗಡ |
ನರಂಗೆ ಸಗ್ಗಕ್ಕೆ ಪಾಱಲೇಂಗಱಿಯೊಳವೇ || ೧೬೧ ||

ಗುರುಗಳುಮಂ ಸುತರಂ ಸೋ- |
ದರರಂ ಕೊಲಲಾಱೆನೆಂದಪಾರ್ತ್ಥನನಾಗಳ್ ||
೨.................................೨ |
ತೆರಳ್ಚಿತತ್ವಮನೆ ಪೇಳ್ದುಗಡಕಾದಿಸಿದಂ || ೧೬೨ ||

ಅಂಬುನೆಲೆಯುಲ್ಲಿ ನಿಂದಿ- |
ರ್ದ್ದಂಬುಜನಾಭಂ ನರಂಗೆ ಪೇಳ್ವಂದೆನಸುಂ ||
ಯಿಂಬಿನೆಕೇಳ್ವಾಗಳಾ- |
ನಂಬಿಕ್ಕಲ್ಕಱಿದೆನಿಕ್ಕುಮೋಪೇಳಿಮಿದಂ || ೧೬೩ ||

ವೃ|| ಜಗದೊಳಗೆಲ್ಲಮುತ್ತಮದೊಳುತ್ತಮಮಪ್ಪುದದೆಲ್ಲವಾನೆ ತ- |
ಜ್ಜಗಮನೆ ಪುಟ್ಟಿಪೆಂ ನಡಯಿಪೆಂ೩........೩-
ಕ್ರಮದಿಂದವಾನೆ ಶ್ರಿ- |
ಷ್ಟಿಗೆ ಮೊದಲಾನೆ ನೀನುಸುರದೆತ್ತರಿ ಸೈನ್ಯದ ಮೇಲೆ-
ಪಾರ್ತ್ಥ ಬಂ- |
ಧುಗಳೆನವೇಡ ಮುನ್ನಳಿದೆನೆಲ್ಲರನೆಂದುಸಿರ್ದಂಗಡಚ್ಚುತಂ || ೧೬೪ ||

---

೧. ಈ—೧ರಾಗಿರೆ ತಂದಂ೧; ೨. ಇ, ಈ—೨ಹರಿರಥನುಂ ಹರಿಯಿಸುತಂ।೨; ೩. ಈ—೩ಕಿಡಿಪೆಂ೩;

ಕಂ|| ನೀನವರನಳಿವೆನೆಂಬಭಿ- |
ಮಾನಂ ಬೇಡಾನೆ ಮುನ್ನೆ ಕೊಂದೆಂ ನೋಡಿ- ||
ನ್ನೀನೆಂದು ತೆಱೆಯೆ ಬಾಯುಂ |
ಸೇನೆಗಳ ಪೆಣಂಗಳಿರ್ದ್ದವುದರದೊಳೆಂಬರ್ || ೧೬೫ ||

ನರನರಥಬೇಱ ಬಾಯುಂ |
ಹರಿತೆಱೆಯೆ ಸಮಂತು ಸೇನೆಯೊಳಗಿರ್ದ್ದದೆನು- ||
ತ್ತರೆಬರುನುಡಿವರಿದಘುಟಂ |
ಕುರುಭೂಮಿಯೊಳಿರ್ದ್ದ ಸೇನೆಪೊಕ್ಕುದೆಬಸಿಱಂ || ೧೬೬ ||

ತಾನೆಲ್ಲಿರ್ದ್ದಂ ಕೌರವ |
ಸೇನೆಯದೆಲ್ಲಿರ್ದ್ದುದೇಱದಾರಥಮೆಲ್ಲಿ- ||
ತ್ತಾನಾರಾಯಣನೆನಿತೊಳ- |
ನೇನೆಂಬೆಮೊವಿಷ್ಣುಮಾಯುಮೆಂಬುದಿದಕ್ಕುಂ || ೧೬೭ ||

ಮುಂ ಪದಿನೆಂಟಕ್ಷೋಹಿಣಿ- |
ಯಂ ಪದ್ಮೋದರನೆ ತಾನೆಕೊಂದಂ ಗಡ ಮ- ||
ತ್ತಂ ಪೇಳಿಮೇಕೆಕಾಳಗ- |
ಮಂ ಪಣ್ಣಿದರಯ್ಯ ಪಾಂಡವಪ್ಪರ್ಣನಿಱಯಲ್ || ೧೬೮ ||

ದನುಜರನಳಿದಂ ಪೇಳ[೧] |
೨........೨ಮಂ ಬಂಧುವರ್ಗ್ಗಮಂ ಕೊಲ್ವಾತಂ ||
ಮನಮೊಸೆದು ಕೇಳ್ವನರ್ಜ್ಜುನ- |
ನೆನೆ ಮತ್ತಾ ಧರ್ಮ್ಮದಲ್ಲಿ ಪುರುಳಱಸುವುದೆ || ೧೬೯ ||

ತುಡುವಾಗಳೊಂದು ಬಿಲ್ಲಿಂ |
ಬಿಡುವಾಗಳುಲಕ್ಕೆವೈರಿಸೇನೆಯುಮೊನೆಯೊ- ||
ಳ್ನಡುವಾಗ ಕೋಟಿಯುಪ್ಪುವು |
ಗಡಪಾರ್ತ್ಥನ ಬಾಣವೆಂಬರಿನ್ನವು ಪುಸಿಗಳ್ || ೧೭೦ ||

ಪಲತೆಱದಿಂದಂ ನರಸಂ-|
ಕುಳಮಂ ಕೊಲ್ವವನೆ ಪೇಳಲಾವಮ್ಮದೆ ನಿ- ||

೧. ಇ—ಳ್ವಂ; ೨. ಇ, ಈ—೨ತನುಜರು೨;

ರ್ಮ್ಮಳನಾಗಿ ಗುರುಗಳಂ ಕುರು- ।
ಬಲವೆಲ್ಲಮನಳಿದನಜ್ಜ್ರುನಂ ತಾನಲ್ತೇ ॥ ೧೭೧ ॥

ವೃ॥ ಸುತರಂ ಸೋದರರಂ ಮಹಾಪುರುಷರಪ್ಪಾರಾಧ್ಯರಂ-
ಭೂಪಸಂ- ।
ತತಿಯಂ ಕೊಂದಡೆ ದೋಷವಿಲ್ಲ ನಿನಗೆಂ-
ದೇನಾನುಮಂ ಪೇಳ್ದುಭಾ- ।
ರತಮಂ ಕೃಷ್ಣನೆ ಮಂಜುಮಾಡಿದ ವೃಥಾಳಾಪಂ-
ಗಳಂ ತತ್ವಮೆಂ- ।
ದು ತಗುಳ್ದಾಗಳುವೋದುವರ್ಕ್ಕುಮತಿಗಳ್-
ಶ್ರೀನೀತಿಯೆಂದಂದದಂ ॥ ೧೭೨ ॥

ಕಂ॥ ಪುರುಷಾರ್ತ್ಥಮನೆಣಿಸುವಡಿ- ।
ಷ್ವರುಮಂ ಗುರುಗಳುಮನಳಿದರೋರೋರ್ವರೊಳ- ॥
ಯ್ವರೊಳೆಂದು ಪೇಳ್ವಕಾಂತೇ- ।
ಯರಕಥೆಯಂ ಕೇಳ್ದಡಾಗದಿಕ್ಕುಮೆ ಸಗ್ಗಂ ॥ ೧೭೩ ॥

ವೃ॥ ಪಿರಿಯಂ ಮುನ್ನೆಗಳ್ದಂದದಿಂ ನೆಗಳವೇಳ್ಕುಂ-
ತತ್ಪರಂಗೆಂಬರೆ- ।
ಲ್ಲರುಮಾವ್ಯಾಸನ ತಂದೆಮೀಂಗುಲಿಗೆಯೊಳ್ತ-
ದ್ವ್ಯಾಸನಾಜಿಂಡೆಯೊ- ।
ಳ್ನೆರೆದಂ ತತ್ಪರರಂತೆದಲ್ನೆರೆಯವೇಳ್ಕುಂ-
ತಾವದೇ ಕೊಲ್ಲರಾ- ।
ದರದಿಂ ತತ್ಕೃತಿಪುಣ್ಯಹೇತುವೆನುತುಂ ಕೇಳ್ವಾ-
ಮಹಾತ್ಮರ್ಕ್ಕಳುಂ ॥ ೧೭೪ ॥

ಕಂ॥ ಇತಿಹಾಸಮೆಂದು ಭಾರತ ।
ಕಥೆಯೊಳಗುಪಕಥೆಗಳೊಳಮವಂ ಕೇಳ್ದರ ಸಂ- ॥
ಗತಮುಲ್ಲದೆಲ್ಲಿಗಂ ಸಂ- ।
ತತವಲ್ಲವು ಮೂಡವೆರಡುಗಣನೇ ಕಥೆಯಂ ॥ ೧೭೫ ॥

ವೃ॥ ಪರಿಕಿಸುವೈ ಪರಾಶರತನೂಜ ಭವತ್ಕೃತ-
ಭಾರತಾದಿಯೊಳ್ ।
ವಿರಚಿಸಿ ಪೇಳ್ದಪದ್ಯದ ಭಕಾರಚತುಷ್ಟಮನೆಂದುಮೂಲದಿಂ ।

ಪರರುಚಿ ಸುಟ್ಟುತೋಱಿಬಸಿಱಿಂ ಬೆರಲಲ್ಲಿಯೆ-
ಪತ್ತಿತೆಂಬರಂ- ।
ತಿರಲದು ವಜ್ರಲೇಪಮೆ ತದಾಕೃತಿ ಸತ್ಯವತೀತನೂಭವಂ ॥ ೧೭೬ ॥

ಕಂ॥ ಅಪಶಬ್ದಕುಕ್ಷಿ ನೀನೆಂ- ।
ದು ಪಳಿವುತಂ ಮುಟ್ಟೆ ಕುಕ್ಷಿಯುಂ ಮುಳಿಸಿಂ ಸಂ- ॥
ದ ಪರಾಶರಾತ್ಮಜಾಕೃತಿ- ।
ಯೆಪಿಡಿದುದೋ ಬೆರಲನೆಂಬರಿನ್ನವು ಪುಸಿಗಳ್ ॥ ೧೭೭ ॥

ಪೊಲೆಮುಸಗಿದಿಕ್ಕುವರೆಗಂ- ।
ತಲಸದೆ ಭಾರತಮನೆಯ್ದೆ ಕಿಡೆಪೇಳ್ದುದಱಿಂ ॥
ಪೊಲೆಯುರ ಬಸಿಱೊಳ್ಬಂದ- ।
ಮ್ಮಳಿನಾತ್ಮಂ ವ್ಯಾಸನೆಂಬರಿವನಿದನಱಿಯರ್ ॥ ೧೭೮ ॥

ಕೆಟ್ಟಗೊರಪಂಗೆಱಿಂಡೆಗೆ- ।
ವುಟ್ಟಿದ ಸಂತಾನಮಲ್ಲದೋರೋರ್ವ್ವರಿಗಂ ॥
ಪುಟ್ಟಿದರಲ್ತೆ ಕುಲೀನ- ।
ರ್ಪ್ಪುಟ್ಟಿದರಾ ಪಾಂಡುವಿಂಗೆ ಪಾಂಡುತನೂಜರ್ ॥ ೧೭೯ ॥

ದ್ರೌಪತಿಯುಜ್ಜುನನೋರ್ವ್ವಂ- ।
ಗೋಪಳು ತಾಯಿಗಱುಪಿ ಹಚ್ಚುಕೃಷ್ಣೆಂದಾಡಲ್ಕಂ ॥
ಪಾಪಿಗಳೆಲ್ಲರು ಹಿಮುಕಂ- ।
ಪೋಪರುಮಲ್ಲವರ್ಗಳೊಪ್ಪೆ ಮುಕ್ತಿಗೆ ಸಂದರ್ ॥ ೧೮೦ ॥

ಕವಿತೆಯೊಳುತ್ಕೃಷ್ಟಗರ್ವಡ ।
ವಿವೇಕಿಗಳ್ಗಡ ತಪಶ್ವಿಗಳ್ಗಡತಾವೆಂಬವ- ॥
ರವರಂ ಜ್ಞಾನಮನಱಿ- ।
ವವರಱಿದುಂ ಪೇಳ್ದರೇಕೆ ಪಾಂಡವಕಥೆಯುಂ ॥ ೧೮೧ ॥

ಸವಳದೆ ಭಾರತಮಂ ಕೇ- ।
ಳ್ವವರುಂ ಮತ್ತಿರುಳು ರಾಮುಕಥೆಗೇಳ್ವವರುಂ ॥
ಸುಗತಿಗೆ ನಿರುತಂ ಸಲ್ವ- ।
ರ್ಸವಳದೆ ಕೇಳೆ ಗಡಪೊಲ್ಲರಾಮಾಯಣಮಂ ॥ ೧೮೨ ॥

ಆದಂ ವಾಲ್ಮೀಕವ್ಯಾ- ।
ಸಾದಿ ಕವೀಶ್ವರರನಯದ ಮಿಥ್ಯಾತ್ವಂ ತಾ- ॥
ನೀದೊರೆತೆನಲರೆಗಚ್ಚಿಗ- ।
ರಾದಂನೆಱೆಬಲ್ಲರಾಕವಿಪ್ರಬಲತೆಯಿಂ ॥ ೧೮೩ ॥

ಕುರುಡಕರ್ಕ್ಕರುಡರ ಬಳಿಯುಂ ।
ಪರಿಪರಿದುಂ ತೊಳಲ್ವತೆಱದೆ ವಿಕಳಾತ್ಮಮೂರ್ಖ್ಖ- ॥
ಧರೆ ಪೇಳ್ದಕೃತಿಗಳಂ ಕೇ- ।
ಳ್ವರೆಂಬತರ್ತ್ತವವರ ತೆಱದೆ ಕೇಳುತ್ತಿರ್ಪ್ಪರ್ ॥ ೧೮೪ ॥

ಕುರುಡರ್ಸ್ಸಭೆಯೊಳೆ ಪಲರುಂ ।
ನೆರೆದಿರೆ ಕೆಲರಲ್ಲಿ ಕೋಳಿಗಾರ್ದ್ದಡೆತಾಮುಂ ॥
ಭರದಿಂದಾರ್ವ್ವವೊಲಱಿಯದ ।
ನರನೆಂಬರ ಮಾತಪಿಡಿದು ಬಾಯಂಬಿಡುವರ್ ॥ ೧೮೫ ॥

ರಾಮನುಮಂ ಲವಕುಶರುಂ ।
ಭೀಮಾರ್ಜ್ಜುನ ಧರ್ಮ್ಮಪುತ್ರಲಕುಲಾದಿಗಳಂ ॥
ಶ್ರೀಮಜ್ಜೈನೋತ್ತಮರಂ ।
ಪ್ರೇಮದೆ ಪೇಳ್ವಂದು ಸಫಲಮಲ್ಲದೊಡಫಲಂ ॥ ೧೮೬ ॥

ಎತ್ತೀದುದು ಕೋಣನನಾ- ।
ಮುತ್ತೆಮ್ಮೆಯೆ ಪೋರಿಯೀದುದೆಂಬೋದುಗಳಂ ॥
ಧೂರ್ತ್ತರ್ಪ್ಪೇಳ್ವರೆ ಕುಮತಿಗ- ।
ಳರ್ತ್ಥಿಯಿನಂತವೆ ಪುರಾಣಮೆನುತಂ ಕೇಳ್ವರ್ ॥ ೧೮೭ ॥

ವೃ॥ ಪೆಳವನದೊಂದುಗೋಡೆ ಮೊದಲಾಗೆ ಪಶೂತನಿ-
ಬಂದರೂಪಮುಂ ।
ತಳೆದ ದುರಾತ್ಮರೆಂದು ಪೆಸರ್ಗೊಂಡವರ್ಗೀಲ-
ಗವೀಯದೆಂದೊಡ- ।
ಗ್ಗಳದ ವಿವೇಕಿಗಳ್ಪಲಬರಾಪಶುವಿಂದತಿ ಕಷ್ಟರಾಗಿ ಕಂ- ।
ಟಳಿಸದೆ ಪಾಪಕರ್ಮ್ಮರಕಥಾಶ್ರುತಿಗೇಕೆಯೊ-
ಚಿತ್ತವಿತ್ತಪರ್ ॥ ೧೮೮ ॥

ವಸ್ತುವನವಸ್ತುವೆಂಬರ ।
ವಸ್ತುವನಿದು ವಸ್ತುವೆಂಬದುರ್ವ್ವಿದರಸ್ತ- ॥
ವ್ಯಸ್ತರತಿದುಷ್ಟ್ರನತ್ತಾರ್ತ- ।
ವಸ್ತುಮಿತಸುತತ್ವವಿಮಳಬೋಧವರ್ಜ್ಜಿದರ್ ॥ ೧೮೯ ॥

ಇಱಿದಕ್ಕೊರ್ಡದನ್ನೆರ್ತ್ತರ ।
ತೊಱಿಪರಿಯಿತ್ತೆಂಬಕಥೆಗಳಿಂದಂ ಪುಣ್ಯಂ ॥
ನೆಱೆಸಾಗುರ್ಗಮಪ್ಪೊಡಿನ್ನಾ- ।
ಡೆಱೆಯುರಸಮನೇನ[1] ಕೇಳಿನಿಚ್ಛಂ ಪುಣ್ಯಂ ॥ ೧೯೦ ॥

ಕವಿತೆ ಕಡುಲೇಸು ಕಬ್ಬಂ ।
ನವರಸಭರಿತಂದಲೆಂದು ಮಿಕ್ಕಾಕಥೆ- ॥
ಳ್ಗವಚಱದೆ ಕೇಳ್ವವಂ ದು- ।
ರ್ವ್ವಿವೇಕಿ ಜೈನಮನೆ ಕೇಳ್ವವಂ ಮತಿವಂತಂ ॥ ೧೯೧ ॥

ಮೊದಲಿಂದಂ ನಾಲ್ಕುಂ ಸಮ- ।
ಯದ ಕಥೆಯುಂ ಕೇಳ್ದುತಿಳಿವ ಬಗೆಯುಳ್ಳೊಡೆ ಕೇ- ॥
ಳ್ವುದು ಕೇಳ್ದು ತಾನವಂ ತಿಳಿ- ।
ವುದು ಲೋಕದ ಕಥೆಗಳಂ ಕಥಾರಾಧನೆಯೊಳ್ ॥ ೧೯೨ ॥

ವೃ॥ ಖಿಳಮನ್ಯಾಯ ಪಥಪ್ರವೃತ್ತಮಪಕಾರಪ್ರಾಯ-
ವಪ್ರಾಕ್ತಕಾ- ।
ಶಳಮಪ್ರೌಢಮಸಾರಮನ್ಯರಮತಂ ವಿದ್ವತ್ಸಭಾರಂಜನಂ ।
ಫಲಸಾರಂ ಸರಸಂ ಪ್ರಸನ್ನಮನವದ್ಯಂ ಸನ್ನುತಂ-
ವ್ಯಕ್ತಮು- ।
ಸ್ಖಳಿತಂ ಸರ್ವ್ವಸುಖೈಕ ಹೇತು ಜಗದೊಳ್-
ಶ್ರೀಜೈನವಾಕ್ಯಾಮೃತಂ ॥ ೧೯೩ ॥

೧. ಇ—ಕ; ೨. ಇ, ಈ—ಚ;

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-ದಾರ್ಥನಿಪುಣ ಮಹಾಕವಿ ಬ್ರಹ್ಮದೇವ ವಿರಚಿತಮಪ್ಪಸಮಯಪರೀಕ್ಷೆಯೊಳು ಆಗಮಸ್ವರೂಪನಿರೂಪಣಂ ದಶಮಾಧಿಕಾರಂ

ಶ್ರೀ ಶ್ರೀ ಶ್ರೀ

॥ ಶ್ರೀ ॥

ಏಕಾದಶಾಧಿಕಾರಂ

ಶ್ರೀಮತ್ಸಮಸ್ತಲೋಕ ಶಿ- ।
ಖಾಮಣಿ ಸುರಮನುಜದನುಜನಾಗಾಧಿಪ ಚೂ- ॥
ಡಾಮಣಿ ಸಕಳಜಗದ್ರ- ।
ಕ್ಷಾಮಣಿ ಸನ್ಮತಿಯನೀಗೆ ಸನ್ಮತಿನಾಥಂ ॥ ೧ ॥

ಕ್ರಮದಿಂದುತ್ತಮ ಪುರುಷಂ ।
ಸಮಸ್ತಹಿತವಾಗೆ ಪೇಳ್ದುದುಮಂತಲ್ಲದೆ ಧ- ॥
ರ್ಮ್ಮಮನೆ ಬಿಡದೊಳ್ಳಕಥದಿಂ- ।
ದಮೆ ವೇದಮಪೌರುಷೇಯಮೆಂಬಪ್ಪರ್ವ್ವರ್ ॥ ೨ ॥

ವೃ॥ ಆಗಮಮೆಂಬುದಾಪ್ತಮುಖನಿರ್ಗ್ಗತಮಲ್ಲದೆ ತಾಂ-
ಸ್ವಯಂಭು ವೇ- ।
ದಾಗಮಮುಂಟೆ ಬೇಱಿಸಕಳಜ್ಞನೆ ಲೋಕಮು-
ನೋಜೆಯಿಂದಮಿಂ- ।
ಬಾಗಿರೆ ಕಾಣ್ಬನಾಗಿ ನೆಱಿಪೇಳ್ದುದುಮದಾಪರಮಾತ್ಮನಲ್ಲದಂ- ।
ಗಾಗದು ಪೇಳಲಂತಱಿವನಾಕುಳಮಾಪ್ತನ-
ಸೂಕ್ತಮುತ್ತಮಂ ॥ ೩ ॥

ಕಂ॥ ನುಡಿಯೊಳು ವೇದಮದಲ್ಲಂ ।
ನುಡಿಯಪ್ಪೊಡೆ ಪೌರುಷೇಯಮದಱಿಂ ಪುರುಷಂ ॥
ನುಡಿಯದುದೇನಾಗಸದಿಂ- ।
ದೊಡೆ ಬಿರ್ದ್ದೊಡೆ ವೇದಮದಱಿವತ್ತಿಳಿಯಿಮಿದಂ[೧] ॥ ೪ ॥

---
೧. ಇ—ವಂ;

ಕೊಡದೊಳಗೆ ಗಾಳಿಪೊಕ್ಕವೊ- ।
ಲೆಡೆಯುಱಿಯುದನಕ್ಷರಾತ್ಮಕಂ ಮಾಣದೆ ತಾಂ ॥
ನುಡಿಬಯಲೊಳವೊರೆವುತ್ತಿ- ।
ರ್ದ್ದೆಡೆತಕ್ಕುದು ಪೌರುಷೇಯಮಲ್ಲದುವೇದಂ ॥ ೫ ॥

ವೃ॥ ಗುರುತನ್ನಂ ಬೆಸವೇಳೆಮಾ೧ರ್ಕೈರಳಲೋ೧-
ನೀನೋದಿದಾವೇದಮಂ ।
ತ್ವರಿತಂ ಕಾಱಿನೆಯಜ್ಞವಲ್ಕಿಮುನಿಪಂ ವೇದಂಗಳಂ-
ಕಾಱೆ ತಿ- ।
ತ್ತಿರಿಯಾಗಿರ್ದ್ದುದನಗ್ನಿಪೀರ್ದ್ದೊಡದುತಾಂ-
ತ್ರೈತಿಯ್ಯರ್ವೇದೆಂಬುದೀ ।
ಧರೆಗಾಯ್ತೆಂಬರಿದೆಂತುಟೆಂದಱಿವರಾರ್ವ್ವೇದಂ-
ಗಳುತ್ಪತ್ತಿಯಂ ॥ ೬ ॥

ಗುರು ಮುನ್ನೋದಿಸಿದೊಂದು ವೇದಮನದಂತಾಂ-
ಕಾಱಿಪೋಗಿರ್ದ್ದ ಭಾ- ।
ಸ್ಕರನಂ ಪ್ರಾರ್ತ್ಥಿಸಿವಾಜಿಯಂ ತೊನಸೆಯೊಂದಾ-
ಕಾರದಿಂಪತ್ತಿ ವೇ- ।
ದರಹಸ್ಯಂಗಳನೋದೆವಾಜಿವೆಸರಿಂದಾಯಜ್ಞವಲ್ಕೀಪ್ರತೀ- ।
ತ್ವರನಿಂದಾದುದು ವೇದವೆಂಬರಱಿಯುವ್ವೇದಂ-
ಗಳುತ್ಪತ್ತಿಯಂ ॥ ೭ ॥

ಕಂ॥ ಎಂತಿನನರಥಮನೇಱಿದ ।
ನೇಂತಿಳಿದಂ ಯಜ್ಞವಲ್ಕಿಮಾನಸನಾಗಿ- ॥
ರ್ದ್ದೆಂತುರಗತೊನಸೆಯಾದನ- ।
ದೆಂತೋದಿದನರ್ಕ್ಕನಲ್ಲಿ ವೇದಮನಘಟಂ ॥ ೮ ॥

ಆಸಕಳವರಿಯೆ ನೀಮಿಂ ।
ವ್ಯಾಸಂ ವೇದಮನೆಪೇಳ್ವಕತದಿಂ ವೇದ- ॥
ಬ್ಯಾಸನೆನೆ ಸಂದನದಱಿಂ ।
ಬ್ಯಾಸಕೃತಂ ವೇದವೇಂ ಸ್ವಯಂಭುವೆಪೇಳಿಂ ॥ ೯ ॥

---

೧. ಇ—೧ವಾಕೈರ್ಳಲೊಡಂ೧;

ಅದಱಿಲ್ಲಿ ತನ್ನ ಬಲ್ಲಂ- ।
ದದವಮಾತಂ ಕೂಡಿಮಾಡಲಾಬ್ಯಾಸನಿನಾ- ॥
ದುದುಗಗನದಿಂದವೇಂ ಬಿ- ।
ರ್ದ್ದುದೊ ಭಾವಿಸುವುದು ಸಯಂಭುವಲ್ಲದುವೇದಂ ॥ ೧೦ ॥

ಮೊದಲಿಂದಂ ಮೂಱುಂ ಲೋ- ।
ಕದತೆಱನಂ ಸಕಳತತ್ವಮುಂ ಕ್ರಮದಿಂ ಪೇ- ॥
ಳದೆಬಾಯ್ಗೆವಂದುದಂ ಪೇ- ।
ಳ್ದದಱಿಂ ಕಾಳ್ಕಬ್ಬವೆನಿಕುವೆಂತುಂವೇದಂ ॥ ೧೧ ॥

ವೃ॥ ಕ್ರಮದಿಂ ಧರ್ಮ್ಮಮನಲ್ಲಿಗಲ್ಲಿಗೆಡೆಯೊಳ್-
ಭೂತಾಟವಂ ಪ್ರಾಣಿವ- ।
ರ್ಗ್ಗಮನೋರಂತಿರೆ ಕೊಲ್ವತಿಂಬತೆಱನಂ ಪೇಳ್ವಂದ-
ಮಂಕಂಡನು- ।
ಕ್ರಮದಿಂದಂ ಮುನಿಭಂಡರಾಕ್ಷಸಕೃತಂತಾಂ-
ವೇದಮೆಂದೆಂಬ ಜೈ- ।
ನಮತಂ ತಥ್ಯಮಪೌರುಷೇಯಮೆನಿಪಾವಿಪ್ರೋ-
ಕ್ತಿಯೇಂ ತಥ್ಯಮೆ ॥ ೧೨ ॥

ಕಂ॥ ಇಂತು ಪುಸಿಯೊಳವೆ ವೇದಮ- ।
ನಂತಂಗಡ ಮುನ್ನಬಳಿಕ ವೊಣಗಿಲುಗುಂದಿ- ॥
ರ್ದ್ದಂತವು ಮೂಱಾದವೆಪೇಳ್ ।
ಭ್ರಾಂತಾದವುದೆಮಗೆನೇಣನೆರವಿಯ ನುಡಿಯೊಳ್ ॥ ೧೩ ॥

ವೃ॥ ಜಗದೊಳ್ ವೇದಮನಂತಮೆಂಬರದಱೊಳ್-
ಲಂಕಾಧಿಪಂ ಕಲ್ತಶಾ- ।
ಖೆಗಳಂ ಸಪ್ತಶತಂಗಳೆಂಬರವುಮೇಣಂತಾತ-
ನೊಳ್ಪೋದುವಾ- ।
ನಗೆಯುಲ್ಲಲ್ಲಿಗೆ ಬಾರದೊಲ್ಲದವು ಮೇಣಾದ್ವೀಪ-
ದೊಳ್ನಿಂದುವೋ ।
ಮಿಗೆಬಪ್ಪಾರ್ಗಗಳವೆಲ್ಲಮಂ ತಡೆಯುವರ್ಮ್ಮೇಣಂ-
ದುಕೊಂಡೊಯ್ದರೋ ॥ ೧೪ ॥

ಕಂ॥ ಹಡುಕೆಯ ಕೆಲದೊಳ್ಗೋಹಳಿ- ।
ಯೆಡೆಯೊಳ್ ಭೋರೆಂದು ಸಕಳವಿಪ್ರಜನಂಗಳ್ ॥
ಬಿಡದೋದುವರೆಂತೋಶುಚಿ- ।
ಗೆಡೆಯಾಯ್ತಾವೇದಮಪ್ಪಡಂತೋದುವರೇ ॥ ೧೫ ॥

ಅಪಶಬ್ದಮಪ್ಪುವೇ ಮ- ।
ತ್ತಪಪ್ರಯೋಗಂಗಳಪ್ಪುವಂ ವೇದದೊಳಿ- ॥
ರ್ದ್ದಾಪುವೆಂಬುದುಮಱಿಯಲು ಬಂ- ।
ದಪುವೆ ವೇದಾರ್ತ್ಥಮೆಂದು ನುಡಿವರ್ತ್ತಕ್ಕರ್ ॥ ೧೬ ॥

ಅಲ್ಲಿಗಿದು ತಕ್ಕುದೆಂಬುದ- ।
ನೆಲ್ಲಾಪಯ್ರ್ಯಾಯದಿಂದೆ ಪೇಳದೆಮುಂಬಿ- ॥
ಟ್ಟೆಲ್ಲಿಲ್ಲದುದಂ ಪೇಳ್ವುದ- ।
ನಲ್ಲಲ್ಲಿಗೆ ವೇದಗೂಢಮೆಂಬಮೂರ್ಖ್ಖರ್ ॥ ೧೭ ॥

ಇದು ಯುಕ್ತಮೆಂದು ಪಯ್ರ್ಯಾ- ।
ಯದವೇದಂ ಪೇಳದಿರ್ದ್ದಡಾಮೂರ್ಖ್ಖಮರ್ತ್ಯ- ॥
ತ್ತದಱೊಳಗೇನಾನುಂ ಕಂ- ।
ಡುದು ವೇದರಹಸ್ಯಮೆಂದು ಪೇಳುತ್ತಿಪ್ಪರ್ ॥ ೧೮ ॥

ವೃ॥ ಜಗಮಂ ದ್ರವ್ಯನಿಕಾಯಮುಮಂ ಪದಪದಾರ್ತ್ಥ-
ವ್ಯಕ್ತಿಯಂ ಜೀವನು- ।
ಜ್ಜಗಮಂ ಕರ್ಮ್ಮವಿಪಾಕಮಂ ಬಳಿಕೆ ಸಮ್ಯಜ್ಞಾನಮಂ-
ಪೆತ್ತುಮು- ।
ಕ್ತಿಗೆ ಶುದ್ಧಾತ್ಮನ ಪೋಪುದಂ ಕ್ರಮದೆ ವೇದಂ-
ಪೇಳ್ವುದೆಂದೂಳ್ವರೋ- ।
ದುಗಳೊಳ್ನೋಳ್ಪಡವಿಲ್ಲನಂಬಳವರ್ಗಳ್ ನೋಳ್ಕೆಯ್ದೆ-
ವೇದಂಗಳೊಳ್ ॥ ೧೯ ॥

ಲೋಕದೊಳುಳ್ಳತತ್ವಮುಮನಿಂಬಿನೆ ವಿದ್ಯೆಗಳಾದು-
ವೆಲ್ಲಮಂ ।
ವ್ಯಾಕರಣಾದಿ ಶಾಸ್ತ್ರಮನತೀತಮನಾಗತಮೆಂಬ-
ಕಾಲಮಂ- ।

ಪ್ರಾಕಟಮಾಗಿರೆಲ್ಸ್ದಿತಿಳಿವಂತಿರೆಪೇಳ್ದುದವೇದಮೆಂಬರಂ- ।
ತೇಕೆಯೊ ಬುದ್ಧಿವಂತರದಱೊಂದೊಳಗಂನೆಱೆ-
ನೋಡಲಕ್ಕುಮೆ ॥ ೨೦ ॥

ಜಿನಮತದಲ್ಲಿ ಸಚ್ಚರಿತಮಂ ಕಿಱಿದಂನೆಱೆ-
ಸೂನೆಗಾಱರೊಳ್ ।
ಘನತರ ಹಿಂಸೆಯುಂ ಪಿಶಿತ ಸೇವೆಯನಂತ್ಯಜರಲ್ಲಿ ಜಾರರೊ- ।
ಳ್ತನುಜ ನಿಮಿತ್ತಮೆಂದು ಪರವೆಣ್ಗಳಕೂಟಮ-
ನಿಂತುಪೇಳ್ದೊಡಿಂ- ।
ತನಿತಱಿನಾಯ್ತುವೇದವೆನುತಿಪ್ಪರಮಾತುಚಿತಂ-
ಧರಿತ್ರಿಯೊಳ್ ॥ ೨೧ ॥

ಕಂ॥ ನಿರ್ಮ್ಮಳ ಸುಬ್ರತಯುಕ್ತಸು- ।
ಧರ್ಮ್ಮಮದಿರಲತ್ತನೇಕ ಸಾಧನಸಾಧ್ಯೋ- ॥
ಧರ್ಮ್ಮಯೆನುತ್ತಂ ಸಲೆ ದುಃ- ।
ಕರ್ಮ್ಮಂಗಳ್ಗಿಱಿಗಿ ಪಾರ್ವ್ವರಸುಗತಿಗಿಳಿವರ್ ॥ ೨೨ ॥

ವೃ॥ ಪರಮ ಪದಾಂಬುಜಾರ್ಚ್ಚನೆಗಳಿಂ ಬ್ರತದಿಂ-
ಸುಚರಿತ್ರದಿಂ ಜಿನೇ- ।
ಶ್ವರಮತಮಾರ್ಗ್ಗದಿಂ ನಡೆವನೋಂಪಿಗಳಿಂ-
ವಿಳಸತ್ತಪಂಗಳಿಂ ।
ಪರಮನನೊಲ್ದು ಜಾನಿಪುದಱಿಂ ಜಪದಿಂಪಲವುಂ-
ಪ್ರಕಾರದಿಂ ।
ಪರಿಕಿಸೆ ಸಾಧ್ಯಮಪ್ಪುದದು ಧರ್ಮ್ಮಮೆನಿಪ್ಪುದು-
ಮೋಕ್ಷಕಾರಣಂ ॥ ೨೩ ॥

ಪರಮಜ್ಞಾನಿದಯಾಳುವಾಪ್ತನೆನಲಂತಂತೆಲ್ಲಮುಂ ಕೂಡೆ ಸಂ- ।
ಹರಿಪಾ ಪಾವಕನಾಪ್ತನೆಂಬರಮಳಂ ಸತ್ಯಾತ್ಮಕಂ ಧರ್ಮ್ಮದಾ- ।
ಗರಮಿನ್ನಾಗಮಮೆಂದೊಡಲ್ಲದೆ ವಿರುದ್ಧಾಳಾ-
ಪಮಂ ಪಾಪದಾ- ।
ಗರಮಂ ವಿಪ್ರಸಮೂಹವಾಗಮಮೆನುತ್ತಂ-
ಕೂಡೆಕೊಂಡಾಡುವರ್ ॥ ೨೪ ॥

ಕೊಲೆಯುಮಸತ್ಯಮುಂ ಕಳವುಮನ್ಯವಧೂಜನ-
ಸಂಗಕಾಂಕ್ಷೆಯುಂ ।
ಫಲಮಧುಮದ್ಯಸೇವೆಯುಮಧರ್ಮ್ಮಮಿವಂ-
ಬಿಡವೇಳ್ಕುಮೆಂದೊಡಾ- ।
ಕೊಲೆಯುಮಸತ್ಯಮುಂ ಕಳವುಮನ್ಯವಧೂಜನ-
ಸಂಗಕಾಂಕ್ಷೆಯುಂ ।
ಫಲಮಧುಮದ್ಯಸೇವೆಗಳೆ ಧರ್ಮ್ಮಮೆನುತ್ತಮೆ-
ಮಾಳ್ಪರಾದ್ವಿಜರ್ ॥ ೨೫ ॥

ಕಂ॥ ಇರುಳುಂಬುದಾಗದೆಂಬಡೆ ।
ಇರುಳುಂಬರ್ಸ್ವರ್ಗ್ಗತ್ತು ಪೋದವರನೂಡುವುದುಂ ॥
ಪರಿಹರಿವುದೆನಲದಂ ಪರಿ- ।
ಹರಿಸರ್ವ್ವಿಪರೀತ ಮಾರ್ಗ್ಗದಿಂ ನಡೆವವರ್ಗಳ್ ॥ ೨೬ ॥

ಆಗದುದನಪ್ಪುದಪ್ಪುದ- ।
ನಾಗೆಂಬುದುವಱಿನನೊಕ್ಕಧರ್ಮ್ಮದೆನಡೆವೀ- ॥
ರಾಗಮುಮೂರ್ದ್ಧ್ವಮನೇಱಿದ- ।
ಧೋಗತಿಗಿಳಿಯಲ್ಕೆ ಬಯಸುತಿಪ್ಪರ್ಗ್ಗೆ ನಿಜಂ ॥ ೨೭ ॥

ಕೃತಯುಗದವರ್ಗಾಯುಷ್ಯಂ ।
ಶತಾಬ್ದಮೊಮೇಣದೀಗಕಲಿಯುಗದವರ್ಗ್ಗೀ- ॥
ಮತಿವಂತರಿದಂ ತಿಳಿವುದು ।
ಶತಾಬ್ದಮಾಯುಷ್ಯಮೆಂದು ಪೇಳ್ವುದುವೇದಂ ॥ ೨೮ ॥

ಕೃತಯುಗದೊಳಿಲ್ಲವೇದಂ ।
ಶತಾಯುವೆಂದಂದೆ ನಿಶ್ಚಯಂ ಕಲಿಯುಗದೊ- ॥
ಳ್ಮತಿಹೀನರಿಂದೆ ಪುಟ್ಟಿ- ।
ತ್ತುತುದಿಯೊಳಶ್ಲಾಘ್ಯಮಪ್ಪಮಾರಣವೇದಂ ॥ ೨೯ ॥

ತಾನೆ ನಿಜವಧುಗೆಸುತಸಂ- ।
ತಾನಕ್ರಮದಿಂದೆ ಪುಟ್ಟುತಿರ್ಪ್ಪಂಗಡ ಮ- ॥
ತ್ತೇನೆಂಬುದೊ ವೈದಿಕರ- ।
ಜ್ಞಾನಮಂತಾಗೆ ತಾಯ್ಗೆತಪ್ಪಿದನಲ್ಲಾ ॥ ೩೦ ॥

ಸುತರಂ ಪಡೆಯಲ್ವೇಳ್ಕುಂ ।
ಸುತರಿಲ್ಲದವಂ ಪರತ್ರೆಯೊಳ್ಸಲ್ವಂ ದು- ॥
ರ್ಗ್ಗತಿಗೆ ತಪಂಗಳನುಡಿದುಂ ।
ಸುತರನೆ ಗಡ ಪಡೆದುಮಾಳ್ಪುದತ್ತಲುತಪಮಂ ॥ ೩೧ ॥

ತಂದೆ ನರಕಕ್ಕೆ ಸಂದಾ- ।
ನಂದನನೊಳ್ ಪಿಂದೆಬಗದಪಮ್ರ್ಗನೆಂಬ- ॥
ಮ್ರ್ಗಂದವಮತಿಗಳು ತನೂಜಾ- ।
ಸ್ಯಂದುವನೇ ನರಕಕೂಪದೊಳ್ಬಿರ್ದ್ದವನಂ ॥ ೩೨ ॥

ತನಗೆ ಗುಣವಂತಸೌರಸ- ।
ತನುಜಂ ಪುಟ್ಟದೊಡೇನೊ[1]ಗನಂಕ್ಷ[2]ತ್ರಜನಂ ॥
ವನಿತೆಪಡೆದಂದು ತತ್ಪು- ।
ತ್ರನೆ ಸಗ್ಗಕ್ಕೊಯ್ವನೆಂದು ಮಾಳ್ಪಪ್ಪಾರ್ವ್ವರ್ ॥ ೩೩ ॥

ಮಕ್ಕಳು ತನಗಾಗದೊಡಂ ।
ತಕ್ಕರನಾರಯ್ದು ತನ್ನ ಸತಿಯೊಳ್ನೆರಪ- ॥
ಲ್ಕಕ್ಕುಂ ನಿಶ್ಚಯಮೆಂಬಾ- ।
ತಕ್ಕಪ್ಪಾರ್ದರಕೆ ದೋಷವಿಲ್ಲೆನವೇಡಾ ॥ ೩೪ ॥

ಏನೆಂಬುದೊ ವೈದಿಕರ- ।
ಜ್ಞಾನಮನಾತ್ಮಸತಿ ಜಾರೆಯಾದೊಡೆ ಘೃತದಿಂ ॥
ಯೋನಿಯನೆ ಕಚ್ಚಿರ್ ವಿಧಿಯಿಂ- ।
ದೇನುಂ ಕೊಕ್ಕರಿಸದುಂಬರಂತಾಘೃತಮಂ ॥ ೩೫ ॥

ಶ್ರೀಧರ್ಮ್ಮದಾಂಕೆಯಿಲ್ಲದೊ- ।
ಡೀಧರೆಯೊಳ್ಮಿಕ್ಕಪಾಪಕರ್ಮ್ಮರಮತದಿಂ ॥
ಗೋಧರ್ಮ್ಮಮಕ್ಕುಮಂಗಜ ।
ಬಾಧೆ[3]ನಸತಿಯೊಡ[4]ನೆ[5]ಜಾರರಕಥದಿಂ ॥ ೩೬ ॥

ವೇದಾರ್ತ್ಥದಿಂದೆ ನಡೆವವ- ।
ನಾದರದಿಂ ತಿಂಬುದಡಗನನ್ಯಾಂಗನೆಯಿಂ ॥

೧. ಇ—ಲೋ; ೨. ಈ—ಕ್ಷೇ; ೩. ಈ—ಯಿ; ೪. ಈ—ಳವೋಸ;

ಕೇಡುಸುಖಮಪ್ಪುದಿಂತಿನಿ- ।
ತಾದೊಡೆತಾಂ ಭಕ್ತನೊಲ್ಲದಂ ದೂಷಿಸಿದಂ ॥ ೩೭ ॥

ಅಡುಗೆಗಳಮೀಸಲಂ ಮುಂ ।
ಸುಡುವುದುಬಳಿಕುಣ್ಬುದೆಂಬರಂತವನೆಲ್ಲಂ ॥
ಸುಡೆ ಬೂದಿಯಕ್ಕುಮದಱಿಂ ।
ಕುಡುಗಭವಂಗಮಿತಸೌಖ್ಯಮಂ ಬಯಸುವವಂ ॥ ೩೮ ॥

ಕಿಚ್ಚಿನೊಳಗಿಕ್ಕಿಹವಿಯುಂ ।
ಕಿಚ್ಚಾಗಳೆ ದಿವಿಜಸಮಿತಿಗೊಯ್ದುದನೀಗುಂ ॥
ಚೆಚ್ಚರಮೆಂಬರ್ಗ್ಗಱಿಗಳು ।
ಕಿಚ್ಚಿಂಗೊಳಗಕ್ಕುಮಮರರಲ್ಲಿಗೆ ಪಾಱಿಲ್ ॥ ೩೯ ॥

ಹವಿಯೆಲ್ಲಂ ಬೆಂದಡೆ ಹ- ।
ವ್ಯವಹಂ ಸುರಸಮಿತಿಗೊಯ್ವನೇ ಬೂದಿಯನಾ ॥
ಹವಿಬೂದಿಯಾಗಿ ಪೋದುದು ।
ದಿವಿಜರ್ಗ್ಗಗ್ನಿಯೇನನೀವಂ ಪೇಳಿಂ ॥ ೪೦ ॥

ಪಾವಕನ ಮುಖದೊಳುಂಬ- ।
ರ್ದ್ದೇವರ್ಮ್ಮಕ್ಕಂತು ಪಸಿದು ಪಡುವರ್ಗ್ಗಡಪೇ- ॥
ಳ್ದೇವರ್ಕ್ಕಳಾಕ್ಕೃಶಾನುಗೆ ।
ಭಾವಿಸೆ ಮಡಗೂಳನುಂಬಘ[೧]ರಜೆಗರಕ್ಕುಂ ॥ ೪೧ ॥

ಪಿರಿದಪ್ಪು[೨]ದೊಂದು[೨]ಫಲದಿಂ ।
ಸುರೇಂದ್ರಸೌಖ್ಯಕ್ಕೆ ಯೋಗ್ಯಮಾದಾದಿವಿಜ- ॥
ರ್ನ್ನರರಗ್ನಿಯೊಳಿಕ್ಕಿದುದಱಿ ।
ಬರವನೆ ಗಡ ಪಾರ್ವ್ವರಿನ್ನವೊಳವೇ ದೈವಂ ॥ ೪೨ ॥

ವೃ॥ ಇಂದು ವಿಮಾನಮುಂದಿವಸ ರಾಹುವಿಮಾನಮು-
ದೊಮ್ಮೆಗೊಮ್ಮೆ ಸಾ- ।
ರ್ತ್ತಂದಿರೆ ಚಂದ್ರನುಂ ಕ್ರಮದೆತೋಱುವನೊಮ್ಮೆಯೆ-
ತೋಱದಿರ್ಪ್ಪನೆಂ- ।

೧. ಇ—ಪು; ೨. ಇ, ಈ—೨ಪುಣ್ಯ೨;

ದೆಂದ[1] ವಿಚಾರದಿಂ ತಿಳಿಯದಾಸಸಿಯಿಂ ದಿವಿಜಾಳಿ-
ನಿಚ್ಚಲುಂ ।
ತಿಂದಡೆ ಕುಂದುಗುಂ ಕ್ರಮದೆ ಪೆರ್ಚುಗುಮೆಂದ-
ಪರಯ್ಯ ವೈದಿಕರ್ ॥ ೪೩ ॥

ಕಂ॥ ನೆರದು ಪದಿನಯ್ದು ದಿವಸಂ- ।
ಬರೆಗಂ ಸುರಸಮಿತಿ ತೋಡಿತಿನೆಮತ್ತಂ ವಿ- ॥
ಸ್ತರಿಸುವನೆಂಬಪ್ಪೆ ೯ೕಳಂ- ।
ತಿರೆಪೊರೆವುಗುಱೆಯೆ ದಿವಿಜಸಮಿತಿಗೆ ಚಂದ್ರಂ ॥ ೪೪ ॥

ಕ್ಷಿತಿಯುಱೆವಂತು ಫಣೀಂದ್ರನ ।
ಗತಿವಶದಿಂದಿಂದುಕುಂದೆ ಪೆರ್ಚುತ್ತಿರೆಯುಂ ॥
ಮತಿಹೀನರಿಂದುವಂ ದೇ- ।
ವತೆಗಳು ತಿನುತಿಪ್ಪರೆಂದೊಡಾರ್ನಂಬುವರೋ ॥ ೪೫ ॥

ಬಿಂಬಂಗಳ್ವೇದಂಗಳ ।
ಬಿಂಬಾಂತರ್ವರ್ತಿಗಡಯಜುರ್ವೇದಂ ತ- ॥
ದ್ಬಿಂಬ ಪ್ರಭೆಗಡಸಾಮಮ- ।
ದೇಂಬರ್ದಿನಕರನನಿನ್ನವಘುಟಮುವೊಳವೇ ॥ ೪೬ ॥

ವೇದಂಗಳು ತನುನಿಶ್ಚಯ- ।
ವಾದಿತ್ಯಂಗೆಂದು ಪಾರ್ವರೆಂಬರು ನೋಳ್ಪಂ- ॥
ದಾದಿತ್ಯಂ ರತ್ನಮಯುಂ ।
ವೇದಂ ಬಱೆಯೋದು ಬಗೆವೊಡಿದು ಸಂದೇಹಂ ॥ ೪೭ ॥

ಆದಿತ್ಯಂಗಾಮೂಱುಂ ।
ವೇದಮೆ ತನುವಪ್ಪೊಡಲ್ಲಿ ನಿಲ್ಲದೆ ಬಂದೀ ॥
ಭೂದೇವರ ಬಾಯಿಗಳೊಳಾ[2] ।
ವೇದಂಗಳು ವರ್ತಿಸುತ್ತವೇಕಿರ್ದಪುವೋ ॥ ೪೮ ॥

ವೇದಮೆ[3]..[3]ಸಾವಿತ್ರಿಗ- ।
ಮಾದಿತ್ಯಂಗೆಯ್ದೆಮಂಗಳಸ್ತವದೊ- ॥

---

೧. ಅ—ದು; ೨. ಇ—ಳ; ೩. ಇ, ಈ—೩ಗೋ೬೩;

ಳುದಿವರಾಹುಂಗಂ ಮೆ- ।
ಯ್ಯಾದವು ಗಡ ಬಗೆವೊಡಿನ್ನವಘುಟಿತವೊಳವೇ ॥ ೪೯ ॥

ಮೇರುವಿನೊಳಚ್ಚುಕೀಲಿಸಿ ।
ಧಾರಿಣಿಯಂ ಪೊಱಗೆ ಸುತ್ತಿದಾಬೆಟ್ಟದವೋ- ॥
ಗೋರಂತೆ ೧ಗಾಲಿ೧ಪರಿವುದು ।
ಘೋರನೆ ಗಡ ಪುಸಿಗಳಿಂತು ನಿಡಿಯವುವೊಳವೇ ॥ ೫೦ ॥

ಸಾರಥಿ ಪೆಳವಂ ವಿಷಮ ವಿ- ।
ಷೋರಗನಾ ನೇಣು ಹಯಗಳೇಳಾಕಾಶಂ ॥
ದಾರಿ ರಥಚಕ್ರವೊಂದೆವಿ- ।
ಚಾರಿಪೊಡಾಶ್ಚರ್ಯ್ಯವಿಂದುವರ್ಕ್ಕನಚರಿತಂ ॥ ೫೧ ॥

ಗಗನಂ ಮಾರ್ಗ್ಗಂ ಸ್ಯಂದನ- ।
ದಗಾಲಿಯೊಂದಶ್ವಮೇಳುರಥ೨ನೇಣೇ೨ಪಾ- ॥
ವುಗಳೆರವಿಗಂಬರವಾ- ।
ತುಗಳೊಳ್ಪುರುಳಿಲ್ಲ ಜಿನರ ಪೇಳ್ದುದೆ ತಥ್ಯಂ ॥ ೫೨ ॥

ಅನಿವಿರಿಯ ರಥಮನೆಲ್ಲಿಯುಂ- ।
ವಿನಿಸುಂ ಕಾಣಲ್ಕೆ ಬಾರದಾರಥದೊಳಗಿರ್ದ್ದ- ॥
ವನೆಂತು ಕಾಣಲಾದುದು ।
ದಿನಕರನಂ ಬಗೆವೊಡಿನ್ನವಘುಟಿತವೊಳವೇ ॥ ೫೩ ॥

ವೃ॥ ಭಾನುವ ತೇಜದೊಳ್ಪುದಿದ ದೀಪ್ತಿಯೊಳೊಂದಿದ-
ಸೂರ್ಯ್ಯಕಾಂತ ವೈ- ।
ಮಾನದ ರಸ್ಮಿಗಳ್ ಬೆಳಗುತಿಪ್ಪವುಧಾತ್ರಿಯನೆಂದು ಪೇಳದ- ।
ಜ್ಞಾನಿಗಳಾದಿನೇಶರಥಮುಂ ಬಿಗಿದಿರ್ದ್ದಹಿಯೆಂದು-
ಸುಯ್ಗ್ಗಳಿಂ- ।
ತೀನೆಲನೆಲ್ಲಮಂ ಬೆಳಗುತಿರ್ದ್ದಪುವೆಂದಪರಯ್ಯ ವೈದಿಕರ್ ॥ ೫೪ ॥

ಕಂ॥ ಅನಲಂಗಿರುಳಪ್ಪಾಗ- ।
ಲ್ದಿನಪಂ ಕೊಟ್ಟಾತ್ಮ ತೇಜಮಂ ಮತ್ತದನೊ- ॥

---

೧. ಅ—೧ರಾಗಿ೧; ೨. ಇ—೨ದಾಳಣೆ೨;

ಯ್ಯನೆ ಸವಳದೆ ಕೊಳ್ವಂಗಡ ।
ದಿನಪಂ ತಸ್ಕರರ ಬಾಧೆಗಂಜುವನಕ್ಕುಂ ॥ ೫೫ ॥

ನಿತ್ಯಂಗಳಖಿಳ ಚಂದ್ರಾ- ।
ದಿತ್ಯಗ್ರಹತಾರೆಗಳವಿಮಾನಂಗಳು ತಾ- ॥
ವತ್ಯುತ್ತಮ ರತ್ನಂಗಳ- ।
ವತ್ಯಂತಂದ್ಯೋತಿಮಂತಮಱಿ ಜಿನಮತದೊಳ್ ॥ ೫೬ ॥

ಆಗ್ರಹಿಗಳಪ್ಪ ಮಿಥ್ಯಾ- ।
ತ್ವಗ್ರಹಪೀಡಿತರ ಮತದೊಳೇಂ ತಿಳಿವುದೆ ನಿ- ॥
ಬ್ಯಗ್ರತೆಯಿಂ ಚಂದ್ರಾದಿ- ।
ತ್ಯಗ್ರಹ ತಾರೆಗಳ ಚರಣೆಯಂ ಜಿನಮತದೊಳ್ ॥ ೫೭ ॥

ವಿಶ್ವಂ ಶ್ರೋತ್ರಂ ನೇತ್ರಂ ।
ವಿಶ್ವಂ ವಿಶ್ವಂ ಮುಖಂ ಪ್ರಜಾಪತಿಗೆಂದುಂ ॥
ವಿಶ್ವಂ ಕೈ ವಿಶ್ವಂ ಕಾ- ।
ಲ್ವಿಶ್ವಂ ತಾನಾಪ್ತನೆಂದು ವೈದಿಕರೂಳ್ವರ್ ॥ ೫೮ ॥

ತರದಿಂದೆಯ್ದುವ ಮೊಗದೊಳ್ ।
ಕರದೊಳ್ ತೊಡೆಯೊಳ್‌ಪದಂಗಳೊಳ್ ದ್ವಿಜರುಂ ಭೂ- ॥
ಪರುಮಂತೆವೈಶ್ಯರುಂ ಶೂ- ।
ದ್ರರುಮೋಜೆಯಿನೊಗೆದರೆಂಬರಿನ್ನವು ಪುಸಿಗಳ್ ॥ ೫೯ ॥

ಮೊಗದೊಳ್ಕರದೊಳ್ ಸ್ಥಿರಮೂ- ।
ರು[1]ಗಳೊಳ್ಪಾದಂಗಳೊಳ್ ದ್ವಿಜಾದಿಕುಲಂ ತಾ ॥
ವೊಗೆದಂದುವೆಂಬಠಾವಿನೊ- ।
ಳಗೆ ಯೋನಿಗಳಿಕ್ಕುಮಕ್ಕುಮಲ್ಲದೊಡೆನ್ನರ್ ॥ ೬೦ ॥

ನೀರುಂ ಕಿಚ್ಚುಂ ಗಾಳಿಯು- ।
ಮಾರವಿಯುಂ ಶಶಿಯುಮನಿತು ವೇದಮುಮೆಂದುಂ ॥
ಹಾರುವರ ಬಲದ ಕಿವಿಯೊಳ- ।
ಗೋರಂತಿರಲಿಪ್ಪುವೆಂಬರಘಟಮಿವಿನಿತುಂ ॥ ೬೧ ॥

---

೧. ಇ—ಗು;

ಪುಸಿನುಡಿದೊಡಮುಗುಳ್ದೊಡಮು- ।
ತ್ತೆ ಸೀಂತೊಡಂ ಪತಿತರಪ್ಪರೊಡನಿನ್ನೈತ್ತಾ- ॥
ನುಸಿದೊರ್ಡಡಮಂತಾಗಳ್ಮು- ।
ಟ್ಟೆ ಸುದ್ಧಮೆಂದೂಳ್ವರಱಿಯದಬ್ಬ‍್ರಲಗಿವಿಯಂ ॥ ೬೨ ॥

ದೆಸೆಗೆಟ್ಟ ಮೂಢರೇನು- ।
ದ್ದೇಸವೊ ಸೀತಾಗಳುಗುಳ್ದಡಾಗಳ್ಕಣ್ಣರ್ಂ ॥
ಕಸವು ಪೊಗೆ ಕಿವಿಯನೂದುವ- ।
ರಸುಜನರೆಂತಂತೆ ಮುಟ್ಟುವಬ್ಬ‍್ರಲಗಿವಿಯಂ ॥ ೬೩ ॥

ಪಿತೃದೇವ ಬ್ರಹ್ಮಪಿಶಾ- ।
ಚ ತರ್ಪ್ಪಣಾದಿಗಳೊಳಂತೆ ದೇಹಾರದೊಳಂ ॥
ಸ್ತುತಿಯಿಸುವ ಪದದೊಳಂ ಸಂ- ।
ಸ್ಕೃತದಿಂದಂ ನುಡಿಯೆ ಕಿಡದುಗಡಮೌನಫಲಂ ॥ ೬೪ ॥

⁽¹⁾ಅಸಗಂ⁽¹⁾ ಮುಟ್ಟಿದ ಸೀರೆಯ- ।
ನೆ ಶುದ್ಧಮೆಂದುಟ್ಟುಕೊಂಡು ದೇವರುಮಂ ಪೂ- ॥
ಜಿಸುವರದಂ ಶೂದ್ರಂ ಮು- ।
ಟ್ಟೆ ಶುದ್ಧವಲ್ಲೆಂಬರಿಂತುಟಾವೇದಮತಂ ॥ ೬೫ ॥

ಆಗದು ಪಾರ್ವ್ವಂಗುಣುತಿ. ।
ಪ್ಪಾಗಳು ಕಾಲ್ಗಳನೆಮಣೆಯುಮೇಲಿಡಲಿಂತುಂ- ॥
ಡಾಗಳು ಗೋಮಾಂಸಮದಂ- ।
ತಾಗಳೆ ತಾನಕ್ಕುಮುನ್ನಮೆಂಬಪ್ಪಾರ್ವ್ವರ್ ॥ ೬೬ ॥

ಉಗುರ್ಗಳ ಮೊನೆಯಿಂದಂ ನೀ- ।
ರುಗುತರಲೆಱೆಯಲ್ಕೆ ಕುಡಿಯೆ ಕಳ್ಳುಡಿವತೆಱಿಂ ॥
ತನಗಿತ್ತೆಂದೂಳ್ವುವರೋ- ।
ದುಗಳಂ ಕೇಳ್ದಾಗ ನಗದೆ ಮಾಣ್ಬರೆ ಚದುರರ್ ॥ ೬೭ ॥

ಆಗದು ತಾಱಿಯ ನೆಳಲೊಳ್ ।
ಪೋಗಲು ವಿಪ್ರಂಗೆ ಬೆಳಲನೆಳಲೋಳ್ಮಱೆದುಂ ॥

---
೧. ಈ—೧ಅಗಸಂ೧;

ಪೋಗಲ್ಕೆ ಸಲ್ಲೆನುತ್ತವ- ।
ರಾಗದು ತಿನಲವಱಿಕಾಯನೆನುತಿರವೇಡಾ ॥ ೬೮ ॥

ಎಡಗಯ್ಯೊಳುಣ್ಬಕಂಚಂ ।
ಪಿಡಿದುಣ್ಣದೆ ಬಿಟ್ಟೊಡೆಂಜಲಂತಿಂದಾತಂ ॥
ಬಿಡದಿರ್ದೊಡೆಂಜಲಲ್ಲದು ।
ಗಡ ನಿಶ್ಚಯಮೆಂದು ಕೂಡೆ ವೈದಿಕರೂಳ್ವರ್ ॥ ೬೯ ॥

ಅಂಜುಳಿಯೊಳು ನೀರ್ಗುಡಿಯಲು- ।
ಮಂಜುಳಿಯೊಳಮುಣಲುಮಾಗದೆಂಬತ್ತಾರ್ವೆಂ- ॥
ತಂಜುಳಿಯೊಳರ್ಘ್ಯವೆತ್ತುವ- ।
ರಂಜುಳಿಯೊಳ್ದೇವ ಪೂಜೆಗೆಯ್ವರ್ ಪಾರ್ವರ್ ॥ ೭೦ ॥

ಮಾತುಳವಿವಾಹಮಂ ಮು- ।
ನ್ನಾತೆಱದಿಂ ವಿಷ್ಣುಮಾಡೆ ತಮ್ಮಾಪ್ತಂ ತಾ- ॥
ವಾತನುಮಂ ಮೆಚ್ಚರು ಮು- ।
ತ್ತಾತೆಱದಿಂ ಲಾಳರೇಕೆಮಾಡರೆ ಪೇಳಿಂ ॥ ೭೧ ॥

ಒಂದೊಂದುನಾಡಲಡಗಂ ।
ತಿಂದಡೆದಲು ದೋಷವಿಲ್ಲಮೆಂದಾದಿತ್ಯಂ ॥
ಬಂದಿಲ್ಲಿ ಸೊಕ್ಕಿ ನುಡಿದಂ ।
ಸಂದಯಮೇ ನಿರುತಮೆಂದು ನುಡಿವಪ್ಪಾರ್ವರ್ ॥ ೭೨ ॥

ಇಱಿದನನಿಱಿಯಲ್ವೇಳ್ಕುಂ ।
ನೆಱೆವೇದಮನೋದಿ ಶಾಸ್ತ್ರಮಂ ಕೇಳ್ದನನೆಂ- ॥
ದಱಿಚುತ್ತವಿಪ್ರರೋದಿನ ।
ತೆಱನಿಂತುಟು ಧರ್ಮ್ಮಶಾಸ್ತ್ರಮಿದು ವೈದಿಕರಾ ॥ ೭೩ ॥

ಪ್ರಾಯಶ್ಚಿತ್ತಂ ಸ್ವರ್ಣ್ಣಂ ।
ಸ್ತೇಯಿಗೆ ಗಡ ಮದ್ಯಪಂಗೆ ಕಾಸಿದಕಳ್ಳಂ ॥
ನ್ಯಾಯಿಗೆ ಗುರುತಳ್ಪಗತಂ- ।
ಗಾಯುಧದಿಂದಕಟಲಿಂಗವಿಚ್ಛಿತ್ತಿಗಡಂ ॥ ೭೪ ॥

ವೃ॥ ಒನಕೆಯನೆತ್ತಿ ನೆತ್ತಿಯನೆ ಪೊಯ್ವುಕರಂ ಬಿಸಿದಾಗಿಕಾಸಿ ಕ- ।
ಳ್ಪನೆಕೆಡೆಯಿಕ್ಕಿ ಬಾಯೊಳೆಱೆವರ್ವ್ವಸೆ ಸಾಧನಮಂ ತೆರಳ್ಚಿ ಕೊ- ।

ಯ್ದ ನಿತುಮನಂಜದಂಜುಳಿಯೊಳಿಟ್ಟು ತೊಳಲ್ವುವ-
ಚರ್ಚೆ ಬಾತ್ತೆಯೋ ।
ಜಿನಮತದಿಷ್ಟಮಂ ಕಳೆಗೆ ಮಾಡಿದ ದುಃಕೃತಮಂ-
ನಿರಾಕುಳಂ || ೭೫ ||

ಕಂ|| ದೋಷಕ್ಕೆ ತಕ್ಕುದೆನಿಸಿದ ।
ಶಾಸನೆಯಿಂ ಪಾಪಮುಳಿಗುಮುಱಿಗುಲಿಗಳ ದು- ||
ಶ್ಯಾಸನದಿಂ ಪೋಕುಮೆ ಜಿನ- ।
ಶಾಸನದಿಷ್ಟದೊಳೆ ಪಾಪಮಂ ಕಳೆಗಱಿವಂ || ೭೬ ||

ಮಧುಮಾಂಸಸೇವೆಯುಂ ಪಶು- ।
ವಧೆಯುಂ ಪರದಾರಗಮನಮುಂ ಸಲ್ಗುಮಿದೆಂ- ||
ದದಮತಿವಮ್ಮಱಿಸಿಯುಮು- ।
ನ್ಯಧನಾಪಹ ಮದ್ಯಸೇವೆಗಳ್ಸಲ್ಲೆಂಬರ್ || ೭೭ ||

ಪುಸಿ ಕೊಲೆ ಕಳವು ಪರಸ್ತ್ರೀ- ।
ವ್ಯಸನಮಿವತ್ಯಂತದೋಷಮೆಂಬಮ್ಮರ್ತ್ತಂ ||
ಪುಸಿ ಕೊಲೆ ಕಳವು ಪರಸ್ತ್ರೀ- ।
ವ್ಯಸನಂ ಕೆಲವೆಡೆಯೊಳಕ್ಕುಮೆಂಬರ್ತ್ತ್ಹಕ್ಕರ್ || ೭೮ ||

ಶಾಪಿಸಲಸುವುಂವಸುವುಂ ।
ಪೋಪುವು ಶುಭಮಕ್ಕೆಯೆಂದೊಡಕ್ಕುಂ ಜಗದೊಳ್ ||
ಶಾಪಾನುಗ್ರಹನಿಪುಣರು- ।
ಮೀಪೊನ್ನಿಂಕಳವೆಮಘವನೆಂಬಪ್ಪಾರ್ವರ್ || ೭೯ ||

ಗೋಘ್ನನ ಪಾಪಮುಮಂ ಬ್ರ- ।
ಹ್ಮಘ್ನನಪಾಪಮುಮನೆಮಗೆ ಪೊಂಗುಡಿಮೀಗಳ್ ||
ನಿಘ್ನಂಮಾಡುವೆಮೆಂದು ಗು- ।
ಣಘ್ನಪ್ರೋಂಕೊಂಡುಪಾರ್ವರಸುಗತಿಗಿಳಿವಂ || ೮೦ ||

ಪಿರಿದುಂ ಪಾಪೋತ್ಕರಮಂ ।
ನೆರಪಿದೊಡಮದೊಂದು ಪೊನ್ನನಾತ್ಮೋಮ್ಮೆಧರಾ- ||
ಮರಸಮಿತಿಗಿತ್ತೊಡಘಮೇ- ।
ನಿರಲಱಿಗುಮೆ ಪೋಕುಮೆಂದು ಪೇಳ್ವರ್ತ್ತಕ್ಕರ್ || ೮೧ ||

ಪೊನ್ನುಳ್ಳೊಡಲ್ಪ ದೋಷಿಯು- |
ಮಂ ಸೂಱಿಂ ಬೇಳ್ಪರಧಿಕದೋಷಿದರಿದ್ರಂ ||
ಚಿನ್ನಮನಿತ್ತಡ ಪೋಕುಮೆ |
ನಿನ್ನಘಮೆಂಬರ್ಮ್ಮಹಾತ್ಮರೇನಂ ಮಾಡರ್ || ೮೨ ||

ಬೆಂದಿರ್ದ್ದ ಸೀರೆಗಂ ಪಗ- |
ಲಿಂದತುರಂಗಮುಕಮೆಲ್ಲಿಯುಂ ಸತ್ತರಮೆ- ||
ಯ್ಯಿಂದಾಂಬುದಕಿಂ ಮೆಲುವಂ |
ಮಂದಾಕಿನಿಗೊಯ್ವುದಕ್ಕೆಮುರ್ಹರ್ಪಾರ್ವ್ವರ್ || ೮೩ ||

ಅಲಸದೆಯಾಚಿಪುದಕ್ಕಂ |
ಸಲೆ ಜನ್ನಮನಿಪ್ಪುದಕ್ಕಮುಱಗುಲಿತನಕಂ ||
ಪಲಬರ ಪಾಪಮನೆಂತುಂ |
ಬೆಲೆಯಿಟ್ಟುಂ ಕೊಳ್ವುದಕ್ಕೆಮುರ್ಹರ್ಪಾರ್ವ್ವರ್ || ೮೪ ||

ಕೃತ್ಸ್ನಮನೆ ಮಾಳ್ಪುದೆಂಬರು |
ಕೃತ್ಸ್ನಂ ಮಾಡಲ್ಕೆ ಶಕ್ತಿಯಿಲ್ಲದೊಡೆಮಗಾ- ||
ಕೃತ್ಸ್ನದ ಬೆಲೆಯುಂ ಕೊಟ್ಟಡೆ |
ಕೃತ್ಸ್ನದಫಲಮಕ್ಕುಮೆಂದುಕೊಳ್ವರ್ತ್ತಕ್ಕರ್ || ೮೫ ||

ಕುಡದೆ ಪರಮಂಗೆ ಪೂಜೆಯು- |
ನೊಡಲಂ ದಂಡಿಸದೆ ನಿಯಮದಿಂದಾಪೊತ್ತುಂ ||
ನಡೆಯದೆ ಪಾರ್ವ್ವರ ಮಾತಿಂ |
ಕಿಡಲಱಿಗುಮೆ ಬಱಿದೆ ನರರ ನೆರಪಿದ ದುರಿತಂ || ೮೬ ||

ಕುತ್ತಕ್ಕೆ ಮದ್ದುಮಾಡದೆ |
ಕುತ್ತಂ ಪೋಗೆಂದೊಡಂತೆ ಪೋಕುಮೆನರರಂ ||
ಪತ್ತಿದಪಾಪಂ ಪ್ರಾಯ- |
ಶ್ಚಿತ್ತಂ ಪೊಱಗಾಗಿ ವಚನದಿಂ ಪೋದಪುದೆ || ೮೭ ||

ಒಡಲಂದಂಡಿಸಿ ನಿಯಮದೆ |
ನಡೆಯದೆ ಪೋಕೆಂದುಪಾರ್ವ್ವರೆಂದೊಡೆಪಾಪಂ ||
ಬಿಡೆ ಪೋಪೊಡಂತದುಪೇಳಾ- |
ತುಡುಗುಣಿಯೋ ತಿರಿವಗೊರವನೋ ಪೇಳಿಮಿದಂ || ೮೮ ||

ಮತಿಹೀನರೆಲ್ಲ ನೆರ ದು- |
ರ್ಮ್ಮತದಿಂದೆಸಗಲ್ಕೆಪಱಿಗುಮೆಪಾಪಂ ಸ- ||
ನ್ಮತಿ ಪಾಪಭಂಜನಂ ಪೇ- |
ಳ್ದತೆಱದೆ ನೆಗಳ್ದಂದು ಪಾಱುಗುಂ ಪಾಪಚಯಂ || ೮೯ ||

ಬೆರಳೊಳು ಪುಲ್ಲಿಲ್ಲದೆ ದೇ- |
ವರನರ್ಚ್ಚಿಸೆ ಸಂಜೆವಾಸೆದಾನಂಗುಡೆ ಪಾ- ||
ರ್ವ್ವರಿಗಿಕ್ಕೆ ಸುಕೃತಮಂ ಮಾ- |
ಡೆ ರಾಕ್ಷಸರ್ಪ್ಫಲಮನೊಯ್ವರೆಂಬಪ್ಪಾರ್ವ್ವರ್ || ೯೦ ||

ಪುಲ್ಲಾದುದೆ ಪಾಪದಿನಾ- |
ಪುಲ್ಲೆಂತು ಪವಿತ್ರಮಾಯ್ತೊ ಪೇಳ್ತಾವಂತಾ ||
ಪುಲ್ಲಿಂ ಪವಿತ್ರರಪ್ಪೊಡೆ |
ಪುಲ್ಲಿಂದಂ ಕಷ್ಟವಾಗವೇಳ್ಕುಂ ಪಾರ್ವ್ವರ್ || ೯೧ ||

ಜಲಗಂಧಾಕ್ಷತೆ ಪುಷ್ಪಂ |
ಗಳಿವೆಲ್ಲಂ ಜೈನಪೂಜೆಯಿಂದೆ ಪವಿತ್ರಂ- ||
ಗಳವಕ್ಕುಂ ನಿಜದಿಂದಂ |
ಜಳದರ್ಭಾದಿಗಳೆತಾಮವಲ್ಲ ಪವಿತ್ರಂ || ೯೨ ||

ಮಿಥ್ಯಾಪುರಾಣವಾಕ್ಯಮೆ |
ತಥ್ಯಂ ತಮಗಾಗೆ ದೋಷಿಯಾದೊಡಮೇನಾ- ||
ತಥ್ಯಂ ಪಾತ್ರಮೆನುತ್ತಂ |
ಮಿಥ್ಯಾತ್ವದೆ ಕೂಳನಿಕ್ಕಿಕಿಡುವಮೂರ್ಖರ್ || ೯೩ ||

ಭೂತ ಬಲಿಯಿಕ್ಕುವಲ್ಲಿಗೆ |
ಪಾತಕನುಂ ಬಂದು ದಾನಮಂ ಬೇಡುಗೆ ತಾ- ||
ನಾತಿಥ್ಯಂ ಸ್ವಪಚನುಮ- |
ಕ್ಕಾತಂಗುಣಲಿಕ್ಕುಗೆ ಪುಣ್ಯಹೇತುವೆಂಬಪ್ಪಾರ್ವ್ವರ್ || ೯೪ ||

ವೃ|| ಉಣಲಿದ್ದಾರ್ಪೋಶನಂಗೊಳ್ವೆಡೆಯೊಳೆ-
ಪಿರಿದುಂ ಕಾಂಕ್ಷೆಯಿಂ ಪಾರ್ವ್ವನಂತಾ- |
ಕ್ಷಣದುಣ್ಬಂದನ್ನಮಂ ಬೇಡಿದೊಡೆ ತಳಿಗೆಯುಂ-
ಕೂಳುಮಂ ಕೊಟ್ಟುತಾನಂ- |

ದುಣಿಸಂ ಮಾಣ್ದಂಡವಂಗೋವದೆ ತುಡುಗೆ-
ಯುಮಂ ಸೀರೆಯುಂ ಪೊನ್ನುಮಂ ದ- ।
ಕ್ಷಣೆಗೊಟ್ಟಂಗೊಳ್ಪುಸಾರ್ಗ್ಗಂ ಕುಡದೊಡೆಪಿರಿದುಂ-
ದೋಷಮೆಂಬರ್ಮ್ಮಹಾತ್ಮರ್ ॥ ೯೫ ॥

ಕಂ॥ ಏನೆಂಬುದಣಕಮಂ ಪ್ರ- ।
ಧ್ಯಾನಂಗೆಯ್ದಂಗೆ ತಳಿಗೆವೆರಸಿಯುದವಂ ॥
ಗೂನವಮನೇಱಿಸಿ ಪಾರ್ವ್ವಂ ।
ತಾನಾತನ ಸುಕೃತಮಂಗಡಂ ಕೊಂಡೊಯ್ವಂ ॥ ೯೬ ॥

ಆಪೋಸನಮಂ ಪಿಡಿದಿ- ।
ರ್ದ್ದೋಪಳುಮಂ ಬೇಡೆಕುಡಲುವೇಳ್ಕುಂ ಪಾರ್ವ್ವಂ- ॥
ಗೇಪಚಿರ್ಲ್ಪ್ಪ ಕುಡದೊಡಾಗಳು ।
ಪೋಪಂ ನರಕಕ್ಕೆ ದಾನಿಯೆಂಬತ್ತರ್ಕ್ಕರ್ ॥ ೯೭ ॥

ಕಂಡತ್ಥಿಕಾಱರೊಂದಂ ।
ಕಂಡಿರೆ ಸರ್ವ್ವಸ್ವದಾನಮಂ ಕುಡುವೆಡೆಯೊ- ॥
ಳ್ಪೆಂಡತಿಯುಮನೀವುದುಗಡ ।
ಪೆಂಡತಿಯಂ ಕುಡುವುದಾವಮತದೊಳಗುಂಟೇ ॥ ೯೮ ॥

ವೇದಂ ಧರ್ಮ್ಮಕ್ಕೆ ಮೊದ- ।
ಲ್ವೇದಂ ಮೋಕ್ಷಕ್ಕೆ ಮಾರ್ಗ್ಗಮೆಂಬನ್ನರ್ಾಲ್ಕುಂ ॥
ವೇದದ ಸಾರಂ ಜನ್ನಂ ।
ವೇದಂ ಧರ್ಮ್ಮಕ್ಕೆ ಮೂಲಮತ್ತೆಂತಾಯ್ತೋ ॥ ೯೯ ॥

ಇಂತಪ್ಪೆಡೆಗಳೊಳಿರ್ದ್ದಪು- ।
ವಿಂತಪ್ಪಾ ಬಣ್ಣದಡಗು ಪಶುವಿನೊಳೋರಂ- ॥
ತಂತಿರೆ ಪೇಳ್ವಾಗಮಮಿ- ।
ನ್ನಂತದುತಾಂ ಸೂನೆಗಾಱಮತವೆಂಗಱಿವಂ ॥ ೧೦೦ ॥

ಜನ್ನಕ್ಕೆಕೊಂದ ಪಶುವಂ ।
ಮುನ್ನಿನಯುಗದಂದು ಮತ್ತೆಪಡವರ್ಗ್ಗಡಮ- ॥
ತ್ತಿನ್ನೀಗಳೇಕೆ ಪಡೆಯರೊ ।
ಜನ್ನಕ್ಕೆಂದಳಿದ ಪಲವು ಪಶುಗಳೊಳೊಂದಂ ॥ ೧೦೧ ॥

ಭಾಗದ ಪದೋತ್ಥ ಧೂಳಿಯೊ- ।
ಳಾಗದೆ ಬಹಿರಂಗಮಶುಚಿಯೆಂಬಮ್ಮರ್ತ್ತಂ ॥
ಯಾಗವ್ಯಾಜದಿನವನಾ- ।
ರೋಗಿಸಲವರಂತರಂಗಮೇಂ ಶುಚಿಯಾಯ್ತೋ ॥ ೧೦೨ ॥

ಕುಲಹೀನನೇಳುಬೇಲಿಯ ।
ತಲೆಯುವನುಂ ಸತ್ತಪಶುವನಲ್ಲದೆ ಮುಟ್ಟಂ ॥
ಕುಲಜಂ ಪಶುವಿನ ಗೋಣಂ ।
ನುಲಿದುಂ ತಿಂದಮರಪಥಕೆ ತಾಂ ಗಡಸಲ್ವಂ ॥ ೧೦೩ ॥

ಸೆರಗಿಲ್ಲದೆ ಪಶುವಂ ಕೊಂ- ।
ದರಿದಾವಗಮಟ್ಟುಸುಟ್ಟುತಿಂದುಂ ಪಾರ್ವ್ವ- ॥
ಸ್ಸರ್ಗರಪುರಮಂ ಪುಗುವಂಗಡ ।
ನರಕಂಬುಗುವಾತನೇತಱಿಂದಂ ಪುಗುವಂ ॥ ೧೦೪ ॥

ಪಶುಕರ್ಮ್ಮಂಗೆಯ್ದುದೆ ವೇ- ।
ದ[೧]..ದ[೧]ಸರ್ವ್ವಸ್ವವಲ್ಲಿ ಪೊನ್ನುಳ್ಳಂಗಂ ॥
ಪಶುಕರ್ಮ್ಮಂಗೆಯ್ವುದೆ ಧ- ।
ರ್ಮ್ಮಸಾಧನಂ ವಿಪ್ರತತಿಗೆ ಪೆಱತಿಲ್ಲೊಂದುಂ ॥ ೧೦೫ ॥

ಜಗದೊಳಗಾರುಂ ನೆಗಳದ ।
ನೆಗಳ್ತೆಯುಂ ನೆಗಳ್ದುಸಗ್ಗಮುಂ ಕೊಂಡಪೆವೆಂ- ॥
ಬಗಣಿತ ಸಾಹಸಧನರಿಂ ।
ಮಿಗಿಲೊಳರೆ ಪಾರ್ವ್ವರಿಂದಮತಿಸಾಹಸಿಗರ್ ॥ ೧೦೬ ॥

ಆರಾನುಂ ಕಂಡಪರೆಂ- ।
ದೂರಿಂ ಪೊಱಗೊಯ್ದುವೊಳಱಿದಂತಿರೆ ಪಶುವಂ ॥
ಘೋರಂ ಬಡಿಸಿಯೆ ಕೊಂದದ- ।
ನಾರೋಗಿಪ ವಿಪ್ರಸಮಿತಿಗೆಯ್ಯದುದುಂಟೇ ॥ ೧೦೭ ॥

ಬಸನಿಗಳೊಳು ಮಿಕ್ಕವನುಂ ।
ಪಶುಕರ್ಮ್ಮಂಗೆಯ್ವನೆನ್ನನುಂ ಅರಿದಪನೇ ॥

---

೧. ಈ—೧ಸಾರ೧;

ಪಶುಕರ್ಮ್ಮಂ ಗೆಯ್ವರೆ ಮಿ- ।
ಕ್ಕಸಾಧುಗಳ್ತಮಗೆ ಸಾರ್ವ್ವಡಂ ಸಾಮ್ರಾಜ್ಯಂ ॥ ೧೦೮ ॥

ಜೀವವಧೆಯಿಂದೆ ತತ್ಫಲ ।
ಸೇವನೆಯಿಂ ಸ್ವರ್ಗ್ಗಮಕ್ಕುಮೆಂಬೋದುಗಳಂ ॥
ಭಾವಿಸಿ ನೆಗಳ್ವಾತಂ ನಾ- ।
ನಾವಿಧ ದುಃಖಕ್ಕೆ ತಾನೆ ಭಾಜನನಕ್ಕುಂ ॥ ೧೦೯ ॥

ಗರಳವನೆ ತಿಂದುವಜರಾ- ।
ಮರತ್ವಮಂ ಪಡದೆವೆಂಬರಂದದಿನತಿ ದು- ॥
ಶ್ಚರಿತಪ್ರಾರ್ಪಪದೆ ಸಗ್ಗಂ ।
ದೊರೆಕೊಳ್ಗುಂನಿರುತಮೆಂದು ಕೊಂದದ ತಿಂಬರ್ ॥ ೧೧೦ ॥

ಕೊಲೆಯಿಂದಡಗಿಂ ನಾಱುವ ।
ಪೊಲಸಿಂ ಕರಹಿಂಪಳೋಶರಿಂ ಮದ್ಯಪರಿಂ ॥
ಖಳರಿಂ ಜನ್ನದ ಮನೆಗಂ ।
ಪೊಲೆವನೆಗಂ ಭೇದವಿಲ್ಲನೋಡುವಡೆಂತುಂ ॥ ೧೧೧ ॥

ಸುರಪುರಮಂ ಪರಿದೇಱಲು ।
ಭರವಸದಿಂ ಮಾಳ್ಪಮಾಜನಂ ಕಂಡಕರ್ಮ್ಮ- ॥
ಕ್ಕರಿಪಂತು ಮಾಳ್ಪಧರ್ಮ್ಮದ ।
ಪುರುಳೀ ಧರೆಯುಲ್ಲಿ ಕುಲಕೆ ಬೆಸದಿಪ್ಪವರಂ ॥ ೧೧೨ ॥

ಆಡಂ ಕೊಂದುಂ ಕುಱಿದಱಿ ।
ಮಾಡಿದರಂ ಮುಟ್ಟೆ ಪುಣ್ಯಮುಳಿಯದೆ ಪೋಗಿ- ॥
ರ್ದ್ದಾಡಂ ಕಟ್ಟಿದ ಮರನಂ ।
ನೋಡಿರೆ ಮುಟ್ಟಿದೊಡೆ ಮೀವರೆಂಬಪ್ಪಾರ್ವ್ವರ್ ॥ ೧೧೩ ॥

ಆವತೆಱದಿಂದೆ ಸತ್ತ್ರರ ।
ಜೀವಂಗಳು ಮಗುಳೆ ಬಂದುಲೋಗರ ಬಾಯೊ- ॥
ಳ್ತಾವುಂಡಪುವೆಂದಿಕ್ಕುವ ।
ಗಾವಿಲರೆಸಕಕ್ಕೆ ನಗದೆ ಮಾಣ್ಬರೆ ಚದುರರ್ ॥ ೧೧೪ ॥

ಒಡಲಿಂದಿತ್ತಲು ಜೀವಂ ।
ಬಿಡಲೊಡನಾಕ್ಷಣದೆ ಪೋಗಿ ಪೆಱತೊಂದೊಡಲೊ- ॥
ಳ್ತೊಡರ್ದಿರ್ದ್ದಪ್ಪುದಱಿಂದಂ ।
[1]ಪಡೆಯದು[1] ಪೋಜೀವನೆಂದು ನಂಬಮೂರ್ಖರ್ ॥ ೧೧೫ ॥
ನೆರಪಿದ ಪುಣ್ಯದ ಪಾಪದ ।
ಪರಿಣತಿಯಿಂ ಸ್ವರ್ಗಮರ್ತ್ಯನರಕಂಗಳೊಳಂ ॥
ಪರಿದಾಗಳೆ ಪುಟ್ಟುವರಿ- ।
ಪ್ಪರೆ ತಾರಾಂತರದೊಳನಿಬರುಂ ಸತ್ತವರ್ಗಳ್ ॥ ೧೧೬ ॥
ಕರೆಯಲೊಡಂ ಬಪ್ಪರ್ವು ಸ- ।
ತ್ತ ಜೀವಂ ಪಿತೃನಿವಾಸದಿಂ ಶ್ರಾದ್ಧಂ ಮಾ- ॥
ಳ್ಪರಮನೆಗೆ ಬೇಗವೆಂದೂ- ।
ಳ್ವರಂತುಟಾದಂದು ನಾಲ್ಕುಗತಿಯುಂ ಶೂನ್ಯಂ ॥ ೧೧೭ ॥
ಸತ್ತಸ್ಸರ್ಟ್ಟಾಗಳೆ ಪೋ- ।
ದತ್ತಲು ಪೋಗಿರ್ದ್ದ ಸೆಲೆಯುಂ ಕಂಚುಮನೊಲಿ- ॥
ದಿತ್ತಡೆ ನಭಕ್ಕೆ ಪೋಪ- ।
ರ್ಪ್ಪತ್ತುದಿನಂ ಕಾಗೆಯಾಗಿ ಪಿಂಡಮನುಣ್ಬರ್ ॥ ೧೧೮ ॥
ಪಿಂಡಮನಿಡೆ ಕಾಗೆಯದಂ ।
ಕೊಂಡಡೆ ತಮ್ಮಿತ್ತ ಪಿಂಡಮಂ ಸತ್ತಾತಂ ॥
ಕೊಂಡಕೂರ್ಪರ್ಪವರಿಟ್ಟುದ- ।
ನುಂಡನೆನುತ್ತಾಗಳತ್ತುಮೀವಮೂರ್ಖರ್ ॥ ೧೧೯ ॥
ಪನ್ನೊಂದು ದಿನದೊಳೋರ್ವ್ವಂ- ।
ಗನ್ನಮನಿತ್ತೊಡದನುಂಡು ಪಿತೃಗಳೊಳಾತಂ ॥
ಪನ್ನೆರಡು ದಿವಸದಂದು ಗ- ।
ಡಂ ನಿಯಮದೆ ಪೋಗಿ ಪಿತೃನಿವಾಸದೊಳಿಪ್ಪಂ ॥ ೧೨೦ ॥
ಅಲ್ಲಲ್ಲಿ ಕೂಡೆ ಸತ್ತವ- ।
ರೆಲ್ಲಂ ಪಿತೃಲೋಕದಲ್ಲಿ ನೆಲಸಿಪ್ಪಡೆ ಮ- ॥
ತ್ತೆಲ್ಲಿಯು ಸಗ್ಗಂ ನರಕಮ- ।
ದೆಲ್ಲಿತ್ತೇಂ ಪುಣ್ಯಪಾಪಮುಂ ವೃಥೆಯಲ್ತೆ ॥ ೧೨೧ ॥

---

೧. ಅ—ಬಡಲುಂ೧;

ಮಾಡಿಸಿದೊಡೊಡಂಬಟ್ಟೊಡೆ ।
ಮಾಡಿದೊಡಾತಂಗೆ ಸಾಕ್ಷೆಯೊಳ್ ಪುಣ್ಯಫಲಂ॥
ಕೂಡುಗುಮಲ್ಲದೆ ಸತ್ತಡೆ ।
ಕೂಡದು ಮತ್ತೊಂದು ತಾಣದೊಳ್ ಪುಟ್ಟಿದನಂ ॥ ೧೨೨ ॥

ಜನನೀ ಜನಕ ಸಹೋದರ ।
ತನುಜಾತರ ಮೇಲೆ ಕೆಡದಳಲ್ಪಡೆಯೆನೆ ಕಿ- ॥
ಚ್ಚನೆ ಕೊಟ್ಟು ಸುಟ್ಟುಮವರೆ- ।
ಲ್ವನಾಯಲುಂ ಪಡೆಯೆವೆಂದು ದುಃಖಿಪರರೆಬರ್ ॥ ೧೨೩ ॥

ಸಾಲ್ವಿನೆಗಂ ಮುಳಿದಾತಂ ।
ಕೊಲ್ವೆಂಬರಿಗೆಂಬ್ವೆನೆಂದುಬಳ್ಯುಗ್ಗಂ ಕಾಯ್ವಿಂ- ॥
ದೆಲ್ವುಗಳನಾಯ್ವೆನೆಂಗುಂ ।
ಸಲ್ವುದೆಗುಣಿಗಿಷ್ವರೆಲುಗಳಂ ತಾನಾಯಲ್ ॥ ೧೨೪ ॥

ಉಗುರಂ ತಲೆನ[೧]ವಿರ್ಗಳ ನೆ- ।
ಲ್ವಗಳಂ ಗಂಗೆಯೊಳಗಿಕ್ಕಿದೊಡೆಸುರಪುರದಿಂ- ॥
ದಗಲದೆಮಿಪ್ಪರುಮೆಂಬೋ- ।
ದುಗಳಂ ಕೇಳ್ವಲ್ಲಿ ಗೆಲ್ವನೊಯ್ವುಮೂರ್ಖಧರ್ ॥ ೧೨೫ ॥

ಜೀವಂ ಪೋದಡೆ ಪೆಱಗೆ ಕ- ।
ಳೇವರದಂಗಮನೆ ಗಂಗೆಯೊಳಗಿಕ್ಕಿದೊಡ-॥
ತ್ತಾವನೊ ಸಗ್ಗಮನೆಯ್ದುವ- ।
ನೋವುಬ್ಬಟೆಯಿಂತುಟೆಂಬುದಾಗಲೆವೇಳ್ಕುಂ ॥ ೧೨೬ ॥

ಮಿಂದೊಲ್ಲಣಿಗೆಯ ಹಿಳಿ ನೀ- ।
ರಿಂದಂ ಕಾಲ್ಗಚ್ಚಿ ನೆಲದೊಳಿದ್ದಾರ್ಕೊಳೆ ನೀ- ॥
ರಿಂದಂ ಪಾರ್ವ್ವರ ಮಡಗೂ- ।
ಳಿಂದಂ ಪಿತೃತುಷ್ಟಿಯಕ್ಕುಮೆಂಬಪ್ಪಾರ್ವ್ವರ್ ॥ ೧೨೭ ॥

೧. ಇ—ನಿ;

ಪಿಡಿತಂದು ಪೋರಿಯುಂ ಮಿಡ- ।
ಮಿಡಮಿಡುಕಲ್ಬುಚ್ಚಲೊಡನೆ ಸತ್ತವರಂತಾ- ॥
ಗಡೆ ಸುಗತಿವಡೆವರೆಂಬರ ।
ನುಡಿಯುಂ ಕೇಳ್ದಾಗಳಂತೆ ಬಸವಂ ಬಿಡುವರ್ ॥ ೧೨೮ ॥

ಬಸವಂ ಕೆಯ್ಯಂ ಪೊಕ್ಕಡೆ ।
ಬಸವನ ಕಾಲುಡಿಯ ಬಡಿದು ಕುಡಿಯುಂ ಬೈವಂ ॥
ಬಸವಂ ಬಿಟ್ಟನನದಱಿಂ ।
ಬಸವಂ ಬಿಡೆ ಬೈಗುಳಲ್ಲದಾಗದು ಪುಣ್ಯಂ ॥ ೧೨೯ ॥

ಬಸವಂಗಳ್ಕೊರ್ವ್ವಿ ಕರಂ ।
ವಸಮಲ್ಲದೆ ಪೊರ್ದ್ದಿ ಸಾಗು ಮೇಣಿಱಿಗುಂ ಮಾ- ॥
ನಸರನದಱಿಂದಮೆಂತುಂ ।
ಬಸವಂ ಬಿಟ್ಟಂಗೆ ಪಾಪಮದೆಮೊದಲೊಡ್ಡಂ ॥ ೧೩೦ ॥

ವೃ॥ ಕ್ರಮದಿಂದೊಪ್ಪಿಡಿ ತುಯ್ಯಲಾಮಿಷಚಯಂ-
ಖಳ್ಗಾಮಿಷಂ ಕಾಳಿಶಾ- ।
[1]..[1]ಕರಿವೆಂಟುಂ ಸಲೆವತ್ಸರದಶಾಬ್ದಾನೇಕ ಸಂವತ್ಸರ ।
ಪ್ರಮಿತಂ ತೃಪ್ತಿಕರಂಗಳಂ ಪಿತೃಸಮೂಹಕ್ಕಿಕ್ಕಿ-
ದಂದೆಂಬರೆಂ- ।
ತೊ ಮರುಳ್ಗೊಂಡರೊ ಪಾರ್ವ್ವರಾಪಿತೃಗಳಂ-
ಮತ್ತೇಕೆ ತಾವೋದುವರ್ ॥ ೧೩೧ ॥

॥ ಶ್ಲೋಕ ॥

ಜನ್ಮನಾಜಾಯತೆ ಶೂದ್ರಃ ಕ್ರಿಯಾಯಾದ್ವಿಜಮುಚ್ಯತೆ ।
ಶ್ರುತೇನ ಶ್ರೋತ್ರಿಯೊಜ್ಞೇಯೊ ಬ್ರಹ್ಮಚರ್ಯ್ಯೇಣ-
ಬ್ರಾಹ್ಮಣಃ ॥ ೧ ॥

ಕಂ॥ ನೃಪನಾದಿಯಾಗೆ ಕಡೆಯೊ- ।
ಳ್ಶ್ವಪಚಂಬರಮಾವಜಾತಿಯುಂ ಮಾಡಲುವೇ- ॥
ಡ ಪುನರ್ಬ್ಭವರನಿಬರುಮಂ ।
ತೆ ಪಾರ್ವ್ವನಲ್ಲಂ ಸ್ವಯಂಭುವಾದಡೆ ಪಾರ್ವ್ವಂ ॥ ೧೩೨ ॥

---

೧. ಈ—೧ಬಮಿ೧;

ಕುಲವೊಂದೆ ಸಾಲ್ಗುಮೆಂಬ- ।
ಕ್ಕುಲವೇಂ ಸ್ವರ್ಗಕ್ಕೆ ಕೊಂಡು ಪೋಕುಮೆತಮ್ಮಂ ॥
ಸಲೆಸನ್ಮಾರ್ಗದೆ ನಡೆಯದೆ ।
ಕುಲಜಂ ಸ್ವರ್ಗಕ್ಕೆ ಪೋದುದುಳ್ಳಡೆ ಪೇಳಿಂ ॥ ೧೩೩ ॥

ನೂತನಮಣಿಗುಣವಿಲ್ಲದೆ ।
ಜಾತಿತ್ವದೆ ಪೂಜ್ಯಮಲ್ಲದಂತಿರೆ ಪಾರ್ವಂ ॥
ಜಾತಿತ್ವದಿಂದೆ ಪೂಜ್ಯಂ ।
ಜಾತಿಗುಣಾನ್ವಿತನಾದೊಡಧಿಕಂ ಪೂಜ್ಯಂ ॥ ೧೩೪ ॥

ಪೊಲೆಯನ್ನರ್ಗಳ್ಗೊಂದಂದದೆ ।
ಸಲೆನೆಗಳ್ದುಂ ಪೊಲೆಯನಲ್ಲದಲ್ಲಂ ತಾನುಂ ॥
ಕುಲಜರವೊಲುಸನ್ಮಾರ್ಗದೆ ।
ಸಲೆನಡೆವಡೆ ಕುಲಜನಲ್ಲ ತಾನುಂ ಪೊಲೆಯಂ ॥ ೧೩೫ ॥

ಪೊಲೆಯಂ ನರಕಕ್ಕಿಳಿಗುಮೆ- ।
ಕುಲಜಂ ಸ್ವರ್ಗಕ್ಕೆ ನೆಗೆಗುಮೆನೆಗೇಯಂ ನಿ- ॥
ರ್ಮ್ಮಳಚರಿತನಾವನಾತನೆ ।
ಕುಲಜಂ ಸ್ವರ್ಗಮವಂಗೆಯಿದಿರ್ಬಂದಿಕ್ಕುಂ ॥ ೧೩೬ ॥

ಕುಲಜಂ ನರಕಂಬುಗುವಡೆ ।
ಕುಲಜನೆ ಬೇಡೆಂದು ಮಾಣಿಕುಮೆ ದುಃಕೃತಮುಂ ॥
ಪೊಲೆಯಂ ಸ್ವರ್ಗಂಬುಗುವಡೆ ।
ಪೊಲೆಯನೆ ಪೊಗಲೆಂದು ನೂಂಕುವರೆ ಸುಚರಿತನಂ ॥ ೧೩೭ ॥

ಕುಲಜಂಗಮ ಕುಲಜಂಗಂ ।
ಪೊಲೆಯಂಗಂ ಸಚ್ಚರಿತ್ರದಿಂದಲ್ಲದೆ ನಿ- ॥
ಶ್ಚಳಸೌಖ್ಯಮಾಗದದರಿಂ ।
ಕುಲಮೊಪ್ಪಿಡಿತವುಡುವಿ[^೧]ಱದು ಚರಿತಮಮೂಲ್ಯಂ ॥ ೧೩೮ ॥

ಏನೋ ವಶದಿಂದಾತ್ಮಂ ।
ತಾನೆಂ ತಪ್ಪಲ್ಲಿ ಪುಟ್ಟಿದೊಡಮುಮಳನೆ ಸ- ॥

೧. ಇ—ವೆ;

ಜ್ಞಾನಿಯೆ ಪೋನ್ನೆನುತಿರ್ದ್ದರ್ ।
ತಾನುತ್ತಮಮೆಂತು ಜೀವನಂತಿರೆ ಶುದ್ಧಂ ॥ ೧೪೯ ॥

ವೃ॥ ಪರಿಕಿಸೆ ಜಾತಿಯೆಂದನಿತಱಿಂ ಗುಣವಿಲ್ಲದೆ-
ರತ್ನಮಾದೊಡಂ ।
ಪಿರಿದುಮಪೂಜ್ಯಮೆಂದೊಡಱಿವಿಲ್ಲದನುತ್ತಮ-
ಜಾತಿಯಾದೊಡಂ ।
ನರಪಶುತಾನೆನಿಪ್ಪಗುಣವಿಲ್ಲದಪಾರ್ವ್ವನು-
ಮೇಕದಂಡಿಯುಂ ।
ಗೊರವನುಮೆಂತು ಪೂಜ್ಯರೊ ಸುಬೋಧ-
ಚರಿತ್ರವಿಹೀನರಪ್ಪವರ್ ॥ ೧೫೦ ॥

ಕಂ॥ ಆಯುಷ್ಯಂ ನಿಡಿದಕ್ಕೆಮ- ।
ಮಾಯುಷ್ಯಂ ಪೆರ್ಚ್ಚದಮಳಮುನಿಗಳು ಪುಣ್ಯ- ॥
ಶ್ರೀಯಕ್ಕೆನೆ ಮುಪ್ಪಿಲ್ಲದ ।
ಸಾಯದ ಸತ್ವದವಿಯಕ್ಕುಮಿದನಱಿಗಱಿವಂ ॥ ೧೫೧ ॥

ಅಜ್ಞರ ಕುಮತದೊಳಂ ಸ- ।
ರ್ವ್ವಜ್ಞರ ತನ್ಮತಮೆ ತಥ್ಯಮೆನುತುಂ[1]....[1] ॥
ಪ್ರಜ್ಞಂ ತತ್ವಜ್ಞಂ ಧ- ।
ರ್ಮ್ಮಜ್ಞಂ ಕೇಳ್ವವರೊಳವರೆತಾಂ ಸರ್ವ್ವಜ್ಞಂ ॥ ೧೫೨ ॥

ಕೊಲೆಯುಡಗ ತಿಂಬುದಂಪರ- ।
ಲಲನೆಯರೊಳ್ನೆರೆವುಪಾಯಮನೆಪೇಳ್ವುದಱಿಂ ॥
ಕೆಲಬರೆ ವೇದಮನೋಲ್ವ- ।
ರ್ಪ್ಪಲರುಂ ಪುಣ್ಯಾತ್ಮರದಱಿದೆಸೆಯುಂ ಪೊರ್ದ್ದರ್ ॥ ೧೫೩ ॥

ಅನಿತುಂ ವೇದಂಗಳನಾ- ।
ವನುಧರ್ಮ್ಮಮನಾಪುರಾಣಮುಮನಾಜ್ಞಾಸಿ- ॥
ದ್ಧನುಮಂ ಹೇತುಗಳಿಂ ನೆ- ।
ಟ್ಟನೆಮುಱಿಯಲ್ಸಲ್ಲದೋಷಮೆಂಬತ್ತರ್ಕ್ಕರ್ ॥ ೧೫೪ ॥

೧. ಈ—೧ಕೇಳ್ವಂ೧;

ಎನಿತೆನಿತು ನೋಳ್ಪಡಂ ಮ- ।
ತ್ತನಿತನಿತೆ ವಿಚಾರಸಹಮೆನಿಪ್ಪುದಱಿಂದಂ ॥
ಜಿನಮತಮಂ ಸೋಧಿಸಲಾ- ।
ಗೆನಲೊಲ್ಲತ್ತಿರ್ಗಳಿವುದೆಂತುಮೆಂಬಜ್ಜೈರ್ನರ್ ॥ ೧೪೫ ॥

ಜಿನಮತಮನೋಜೆಯಿಂ ಕೇ- ।
ಳ್ದನಪ್ಪೊಡವನಿಪತಿ ಪಾರ್ವ್ವರುಂ ಗೊರವರುಮಂ ॥
ಮನೆವುಗಲು ಮೀಯಯನೆಂಬುದ- ।
ನೆ ನಿಶ್ಚಯಂ ಗೆಯ್ದುಕೇಳಲಾಗದನೆಂಬರ್ ॥ ೧೪೬ ॥

ಶಿವವಿಷ್ಣುಸೂರ್ಯ್ಯ ಶಶಿಲೋ- ।
ಕವಿವೊಲಳವಲ್ಲದಿಲ್ಲಜಿನಲೋಕಮದೆಂ- ॥
ಬವರನುಡಿತಕ್ಕದನಿತ- ।
ಕ್ಕವೊಡೆಯುನಪ್ಪಂಗೆ ಬೇರದೇಕೆಯೊಲೋಕಂ ॥ ೧೪೭ ॥

ಮಾದೇವನಬಮ್ಮನ ಲ- ।
ಕ್ಷ್ಮೀದೈತನಧರ್ಮ್ಮವೊಳವು ಜೈನರ ಧರ್ಮ್ಮಂ ॥
ವೇದಕ್ಕೆ ಬಾಹ್ಯಮೆಂಬರ ।
ಬಾದುಚಿತಂ ದುಃಕೃತಕ್ಕೊಡಂಬಡದುದಱಿಂ ॥ ೧೪೮ ॥

ಸರ್ವ್ವಜ್ಞರೆಂದು ಕೆಲಬ- ।
ರ್ಸ್ರರ್ವ್ವಂ ವಸ್ತುಗಳಮಾಮೆಪೆಱಿತಿಲ್ಲೆನುತಂ ॥
ನಿರ್ಬ್ಬಂಧದೆ ನುಡಿವವರೊಳು ।
ಸರ್ವ್ವಜ್ಞತೆಯೆಂತು ಪೇಳುಸಮನಿಸದಪುದೋ ॥ ೧೪೯ ॥

ಅಱಿವವನೊಳಱಿತವೊಂದಿರೆ- ।
ಯುಱಿಯಲ್ಪಡುವವಱಿಮೇಲೆಯುಱಿವೆಯ್ದುಗುವಿ- ॥
ನ್ನಱಿಯಲ್ಪಡುವುವು ಮತ್ತಾ- ।
ನೆನಲಂತಾನಱಿವನಱಿವನೇನಂ ಕಾಣ್ಬಂ ॥ ೧೫೦ ॥

ಸರ್ವ್ವಗತನಾತ್ಮನೆಂಬಡ- ।
ಮುರ್ವ್ವಿಯೊಳತ್ತಿತ್ತವೋಪ ಬಂದಪರೇಂಬೀ ॥
ಪರ್ವ್ವಿದರ್ದ್ದ ಮಾತು ಶೂನ್ಯಂ ।
ಸರ್ವ್ವಗತತ್ವಕ್ಕೆ ಹಾನಿಬಗೆವೊಡದೆಂತುಂ ॥ ೧೫೧ ॥

ಏಕಾತ್ಮನೆಂದು ನುಡಿವರ- ।
ದೇಕೆಯೊ ಜಡರವನಿಯೊಳಗೆ ಸುಖದುಃಖಮನೇ- ॥
ನೇಕತ್ವದಿನುಂಡಪನೆಯು- ।
ನೇಕಂರೂಪಿಂದೆ ಪಲರುಮುಣ್ಣುತಿರ್ದಪ್ಪರ್ ॥ ೧೫೨ ॥

ಬಲ್ಲಾಳ್ಗೆ ಬಟ್ಟೆಸಯ್ತೆಂ- ।
ದೆಲ್ಲಿಲ್ಲದ ಸಿತಮತಂಗಳಂ ಪುಸಿವುದಿದಂ ॥
ಸಲ್ಲವ್ಮೊಳೆಂದು ಬಾರಿಸ- ।
ಬಲ್ಲರೆ ಪೇಳ್ ಜೈನದವರ್ಗಳಲ್ಲದದೆಂತುಂ ॥ ೧೫೩ ॥

ಜಟವಟಿಗರ ಪೇಳ್ದೋದನೆ ।
ದಿಟಮೆಂದದನೊಲ್ದು ಕೇಳ್ವರಲ್ಲದೆಪಿರಿದುಂ ॥
ಘುಟಿಯಿಸರಿವೆನ್ನರೇನ- ।
ಕ್ಕಟಪಂಡಿತರೆನಿಸಿದವರುಮಜ್ಞಾನತೆಯಿಂ ॥ ೧೫೪ ॥

ಇರೆಸದಸದಾದಿ ವಸ್ತು- ।
ಸ್ವರೂಪಕಥನಪ್ರವೀಣಜಿನಭಾಷಿತಮುಂ- ॥
ಇರೆಪೇಳ್ದ ಕುಮತಮಂಕೇ- ।
ಳ್ವರೆಗ್ಗರಮೃತಮಿರೆನಂಜನೆಂಜಲಿಸುವುದೇ ॥ ೧೫೫ ॥

ವೃ॥ ಭ್ರಮಿತಮನಹ್ಲಾದಂಗೆ ಫಣಿದಷ್ಟನನಾಲಗೆಗೆಂತುತಿಕ್ತವ- ।
ಗ್ಗ॑ಮೆ ಮಧುರಂಗಳಾಗಿ ಮಧುರಂಗಳೆತಿಕ್ತ-
ರಸಂಗಳಾಗಿ ಸಂ- ।
ಕ್ರಮಿಸುಗುಮಂತೆ ಕಿಲ್ವಿಷವಿಷಂ ಪುದಿದಿರ್ದ-
ಕುದೃಷ್ಟಿಗಾತ್ಮತ- ।
ತ್ವಮೆಮೃಷತತ್ವಮಾಗಿ ಮೃಷತತ್ವಮೆ ತತ್ವಮೆ-
ಯಾಗಿ ತೋಱುಗುಂ ॥ ೧೫೬ ॥

ಬಗೆವಂದನ್ಯರಕೂಡೆಮಾಡಿದ ಕುತರ್ಕಂಗಳ್ಕರಂ-
ಭ್ರಾಂತಿ ಹೇ- ।
ತುಗಳತ್ಯಂತಮಳೀಮಸಂಗಳವನೋದಲ್ವೇಡ-
ಸೌಖ್ಯಾಭಿಲಾ- ।

ಹಿಗಳೋರಂತಿರೆ ಕೇಳಿ ಭಾವಿಸುಗೆ ಲೋಕಾನಂದಮಂ-
ಜೈನಸೂ- ।
ಕ್ತಿಗಳಂ ಮೋಕ್ಷಫಲಪ್ರದಾಯಿಗಳನಾತ್ಮಜ್ಞಾನ-
ಸಾರಂಗಳಂ ॥ ೧೫೭ ॥

ಕಂ॥ ತೆಗೆದು ಕಯ್ಯಿಕ್ಕಿದೊಡೆಯುಂ ।
ಬಿಗಿದೊಡವೇಂ ಪುದೆಯಿಸದತೆಱದವೊಲೆನಿತಂ ॥
ಪುಗಿಸಿದೊಡಂ ಜೈನಮತಂ ।
ಪುಗಲೀನಱಿದಪುದೊ^೧^ದೋಷ^೧^ಕರ್ಮ್ಮನಮತಮಂ ॥ ೧೫೮ ॥

ಪುದುಳಿದನಲ್ಲದನಂ ಕಲಿ- ।
ಸಿದೊಡಂ ತಿಳಿಪಿದೊಡವೇಂ ನಿಲಲ್ಕಱಿಗುಮೆ ಚಿ- ॥
ತ್ತದೊಳಾಪ್ತನ ವಚನಮದು ಪು- ।
ಸಿದೊಡಂ ಪುಂಡಾಗಲೆಂತು ಮಱಿಯುದತೆಱದಿಂ ॥ ೧೫೯ ॥

ಬಾದಿನೊಳೆ ಶೈವಸೌಗತ ।
ವೈದಿಕ ವೈಷ್ಣವರೆನಿಪ್ಪವರ್ನ್ನಿಜಚರಿತ- ॥
ಕ್ಕಾದಮನು ಸಾರಿಯಾಗಿರ- ।
ಲೋದುಮನಾಪ್ತನುಮನಂತೆ ಮಾಳ್ಪರೆ ಜೈನರ್ ॥ ೧೬೦ ॥

ವೃ॥ ಜಗಮಂ ಹಿಂಸಾನೃತಾದ್ಯ ಬ್ರತವಿಷಮವಿಷೋ-
ಗ್ರಾಗ್ನಿಪರ್ವ್ವಿತ್ತುಮತ್ತಾ- ।
ವಗಮಾಕಿರ್ಚ್ಚಿಂಗೆಪೆರ್ಚ್ಚಂ ಪಡೆಗುಮವಿದಿತಾತ್ಮಜ್ಞ-
ವಾಕ್ಯೇಂಧನಂ ಸಂ- ।
ದೆಗಮೇನಜ್ಞಾನಮಾರ್ಗಾಚರಣನಿರತಮೆಚಿಯುದೆ-
ಪೊರ್ದ್ದದಿಪ್ಪ- ।
ನ್ನೆಗವೀಜೈನೇಂದ್ರವಾಕ್ಯಾಮೃತಜಳಧಿ ತರಂಗೋಚ್ಚಳ-
ಚ್ಛೀಕರೌಘಂ ॥ ೧೬೧ ॥

೧. ಇ, ಈ—೧ಸಾಸ೧;

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-
ದಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವ
ವಿರಚಿತಮಪ್ಪಸಮಯಪರೀಕ್ಷೆಯೊಳು
ವೈದಿಕವಿಡಂಬನಮೇ-
ಕಾದಶಾಧಿಕಾರಂ

ಶ್ರೀ ಶ್ರೀ ಶ್ರೀ

॥ ಶ್ರೀ ॥

ದ್ವಾದಶಾಧಿಕಾರಂ

ಶ್ರೀಗೆವಚಃಶ್ರೀಗೆ ಜಯು- |
ಶ್ರೀಗೆ ಯಶಃಶ್ರೀಗೆತಾನೆ[೧]ನೆಲೆಯಾಗಿ ಜಗ- ||
ಕ್ಕಾಗಳುಮಭಿಮತಸುಖಮಂ |
ಬೇಗಂ ಕುಡುಗ[೨]ಭವನೆಮಗೆತಾಂ ಸನ್ಮತಿಯಂ || ೧ ||

ಗುರುಗಳಣಮಿಲ್ಲ ನಿಯಮಿಸು- |
ವರಿಲ್ಲಬಳಿಕೋದಿನಿಷ್ಟಮಿಲ್ಲೋರ್ವ್ವರನೋ- ||
ರ್ವ್ವರೆ ಕಂಡುಮವರ್ನ್ನೆಗಳ್ದುದೆ- |
ಮಿರೆತಾನುಂ ಲೋಕಮೂಢಮೊಂದಱಿಗಱಿವಂ || ೨ ||

ನಿಟ್ಟೆಯೊಳಿ ಕಿವುಡಬೆನಕನ |
ನಿಟ್ಟಲೆ ಕೇಳೆಮ್ಮಕಾರ್ಯ್ಯಮಂ ತೀರ್ಚ್ಚೆಂಬಂ ||
ಬಟ್ಟೆಯು ಕಣ್ಣೊಳು ಕಲ್ಗಳ |
ನಿಟ್ಟವರೆಲೆ ಬೀರತಣೆಯುನಿತ್ತುಂ ಮೂಢರ್ || ೩ ||

ಕನ್ನಡಿಯುಂ ತಂದಿತ್ತಡೆ |
ಮುನ್ನಾಕಾಶಕ್ಕೆ ನೆಲಕೆ ಬೆಸಮುಟ್ಟಿಂಗಂ ||
ತನ್ನಯು ಕಟ್ಟಿದ ಸುರಿಗೆಗೆ |
ಮನ್ನಣೆಯಿಂ ತೋಱಿಬಳಿಕೆನೋರ್ಪ್ಪರ್ಮೂರ್ಢರ್ || ೪ ||

ತವಗುಣ ಬಡ್ಡಿಸೆ ಮೀಸಲ- |
ನವಿವೇಕಿಗಳಿಕ್ಕಿ ಕಿಚ್ಚಿನೊಳ್ಕಿಱಿದಂ ಮಿ- ||
ಕ್ಕಗುಳಂ ಪೊಱಿಗಣ್ಗೀಡಾ- |
ಡುವರುಣ್ಬರ್ನ್ನೆಲದೊಳಿಕ್ಕಿ ಕಿಱಿದಂಬಳಿಯಂ || ೫ ||

---

೧. ಇ—ನೆ; ೨. ಇ—ವ;

ಬದರಿಯ ಬನ್ನಿಯ ರಥಚ- ।
ಕ್ರದೆಲೆಗಳಂ[1]ತೀವೆ[1]ತಲೆಯೊಳಿಟ್ಟ್ರಾತಂಗ- ॥
ಭ್ಯುದಯಮುಮೊಳ್ಪುಣಸುಂ ಮೆ- ।
ಚ್ಚಿದ ಸುಖಮುಂ ಕೂಡಿಬಕ್ಕುಮೆಂಬಮೂರ್ಖ್ಯಧರ್ ॥ ೬ ॥

ಮೊಸರೊಕ್ಕಡೆ ಹಾಲೊಕ್ಕಡೆ ।
ನೊಸಲೊಳು ಬೊಟ್ಟಿಟ್ಟುಕೊಳ್ವಬೀದಿಗಳೊಳ್ ಧಾ- ॥
ನ್ಯಸಮಾಜಮೊಕ್ಕಡವನೆ- ।
ತ್ತಿ ಸೇಸೆಯೊಳ್ತಲೆಯೊಳಿಟ್ಟುಕೊಳ್ವಮೂರ್ಖ್ಯಧರ್ ॥ ೭ ॥

ನಡು ಬೀದಿಯೊಳಂ ಗೋಹಳಿ- ।
ಯಡೆಗಳೊಳಂ ಭಾಗ್ಯವಂತರುಂ ಭಯವಶದಿಂ- ॥
ದಡಕೆಯ ಭಾಗಂ ಬಾಯಿಂ ।
ಕೆಡದೊಡದಂ ಕಳದುಕೊಂಡು ಮೆಲುವಮೂರ್ಖ್ಯಧರ್ ॥ ೮ ॥

ಸಿರಿಪರ್ವ್ವತಕ್ಕೆ ಗಂಗೆಗೆ ।
ಕುರುಭೂಮಿಗೆ ಸಾಮಿಗಿತ್ತಸೇತುಗೆರಾಮೇ- ॥
ಶ್ವರನಲ್ಲಿಗಿತ್ತ ಸೋಮೇ- ।
ಶ್ವರಕ್ಕೆ ತಿರಿತಪ್ಪರಂತು ಜಾತ್ರೆಗೆ ಮರುಳ್ಗಳ್ ॥ ೯ ॥

ಎರಡುಂ ಗ್ರಹಣಂಗಳೊಳು- ।
ತ್ತರಾಯಣಂಗಳೊಳುಮೆಲ್ಲತಾಣದೊಳೆಂದುಂ ॥
ಪರಿತಂದು ಗಂಗೆನಿಯಮದೆ ।
ಬೆರಸಿಕ್ಕುಂ ಗಡವಿಚಿತ್ರವಿನ್ನವುಮೊಳವೇ ॥ ೧೦ ॥

ವೃ॥ ಕಡಲೇಳುಂ ಮೊದಲಾಗಿ ನಾಡತೊಱೆಯೆಲ್ಲಂ-
ನೆತ್ತಿ[2]ಸಂಗ[2]ಕ್ಕೆ ಸಂ- ।
ಗಡದಿಂ ಬಪ್ಪವು ಭಾಸ್ಕರಗ್ರಹಣದಿಂದಿಂಗೆಂ-
ಬರಂತಾದೊಡಾ- ।
ಮಡುಮುನ್ನಂ ಪಿರಿದಾಗದೇಕೆ ಪಳೆಯುಂ-
ತಾಗಿಪ್ಪುದೇನೆಂಬರೀ ।
ನುಡಿಯಂ ವೇದಜಡಾತ್ಮರೀ ಜಗಜನಕ್ಕೀಯಂದದಿಂ-
ವ್ಯಾಜಿಪರ್ ॥ ೧೧ ॥

---

೧. ಇ—೧ತಿವೆದು೧; ೨. ಇ—೨ಸಗ್ಗ೨;

ಧಾತ್ರಿಯೊಳುಳ್ಳದೈತ್ಯಬಲಮುಂ ಚತುರಂಗ ಸಮನ್ವಿತಂ-
ಮಹಾ- ।
ಕ್ಷತ್ರಿಯ ವರ್ಗ್ಗಮಂ ತಱಿದತಾಣಮೆ ಪಾವನ-
ಮಂತದಂ ಕುರು- ।
ಕ್ಷೇತ್ರಮನೊಮ್ಮೆ ಮೆಟ್ಟಿದೊಡೆ ಪುಟ್ಟುವರಲ್ಲ-
ಮಮೋಘಮೆಂಬುದಂ ।
ಜಾತ್ರೆಮರುಳ್ಗಳೆಯ್ದೆ ಬಲವಪ್ಪರನೇಕರು ಮಿಂತು ಸಂತತಂ ॥ ೧೨ ॥

ಕಂ॥ ರಣದೊಳು ಕುರುಬಲ ಮುಂ^೧ಳಿದೊಡ ।
ಕುರುಭೂಮಿಯೆ ತೀರ್ತ್ಥಮಕ್ಕುಮಪ್ಪಡೆದೂರಂ ॥
ಪರಿಯಲ್ಕೇಡ ಸಮೀಹಿತೆ ।
ದೊರೆಕೊಳ್ಗುಂ ನೃಪರಕಾದಿದೆಡೆಗಳ್ಪಲವುಂ ॥ ೧೩ ॥

ದಿವಿಜಾಸುರ ಪಾಂಡವ ಕೌ- ।
ರವಬಲಮಳಿದಿರ್ದ್ದ ಭೂಮಿಯೊಳ್ಪಣಮಂ ಬಿ- ॥
ತ್ತುವುದುಂ ಭಂಡಿಯ ಪ- ।
ಣವಕ್ಕುಂ ತತ್ಸುವರ್ಣ್ಣಮೆಂಬಮೂರ್ಖರ್ ॥ ೧೪ ॥

ಪರಿತಂದು ಸಯ್ತು ಪೆರ್ದ್ದೊಱೆ ।
ಸಿರಿಪರ್ವ್ವತದಲ್ಲಿ ತೊಲಗಿದೊಡೆ ಕಂಡುಮಹೇ- ॥
ಶ್ವರನಾರ್ದ್ದನಕ್ಕಟಂದಿಂ ।
ಪಿರಿದುಂ ತಾಂ ಪೇದ್ದಪರಿದುದೆಂಬಮೂರ್ಖರ್ ॥ ೧೫ ॥

ಅರಸುಮಗನೋರ್ವ್ವನಲ್ತೊಂ- ।
ದರಸನಪೆರ್ಗ್ಗಡೆಯ ಮೇಲೆ ಬೆಳ್ಪೊನ್ನಪಂ- ॥
ತಿರೆತಳಿಯೆ ನೀರನೀರದ- ।
ನರಸಂ ನೀರ್ದ್ದಳಿದು ಕಳೆದನೆಂಬಮೂರ್ಖರ್ ॥ ೧೬ ॥

ವೃ॥ ನರಪತಿಯೋರ್ವ್ವನರ್ಘ್ಯಮನಿನಂಗಭಿಮಂತ್ರಿಸಿ-
ಪೊನ್ನಬಟ್ಟಲೊ- ।
ಳ್ಕಿರವಿಸಿ ಕೊಟ್ಟೊಡೆಯ್ದೆರವಿಯುಂ ಸುರದಾಗಳ-
ದಲ್ತೆಬಪ್ಪುದುಂ ।

೧. ಇ, ಈ—ಮು:

ಬದರಿಯ ಬನ್ನಿಯ ರಥಚ- ।
ಕ್ರದೆಲೆಗಳಂ೧ತೀವೆ೧ತಲೆಯೊಳಿಟ್ಟಾತಂಗ- ॥
ಭ್ಯುದಯಮುಮೊಳ್ಪುಣಸುಂ ಮೆ- ।
ಚ್ಚಿದ ಸುಖಮುಂ ಕೂಡಿಬಕ್ಕುಮೆಂಬಮೂರ್ಖರ್ ॥ ೬ ॥
ಮೊಸರೊಕ್ಕಡೆ ಹಾಲೊಕ್ಕಡೆ ।
ನೊಸಲೊಳು ಬೊಟ್ಟಿಟ್ಟುಕೊಳ್ವಬೀದಿಗಳೊಳ್ ಧಾ- ॥
ನ್ಯಸಮಾಜಮೊಕ್ಕಡವನೆ- ।
ತ್ತಿ ಸೇಸೆಯೊಳ್ತಲೆಯೊಳಿಟ್ಟುಕೊಳ್ವಮೂರ್ಖರ್ ॥ ೭ ॥
ನಡು ಬೀದಿಯೊಳಂ ಗೋಹಳಿ- ।
ಯಡೆಗಳೊಳಂ ಭಾಗ್ಯವಂತರುಂ ಭಯವಶದಿಂ- ॥
ದಡಕೆಯ ಭಾಗಂ ಬಾಯಿಂ ।
ಕೆಡದೊಡದಂ ಕಳದುಕೊಂಡು ಮೆಲುವಮೂರ್ಖರ್ ॥ ೮ ॥
ಸಿರಿಪರ್ವ್ವತಕ್ಕೆ ಗಂಗೆಗೆ ।
ಕುರುಭೂಮಿಗೆ ಸಾಮಿಗಿತ್ತ ಸೇತುಗೆರಾಮೇ- ॥
ಶ್ವರನಲ್ಲಿಗಿತ್ತ ಸೋಮೇ- ।
ಶ್ವರಕ್ಕೆ ತಿರಿತಪ್ಪರಂತು ಜಾತ್ರೆಗೆ ಮರುಳ್ಗಳ್ ॥ ೯ ॥
ಎರಡುಂ ಗ್ರಹಣಂಗಳೊಳು- ।
ತ್ತರಾಯಣಂಗಳೊಳುಮೆಲ್ಲತಾಣದೊಳೆಂದುಂ ॥
ಪರಿತಂದು ಗಂಗೆನಿಯಮದೆ ।
ಬೆರಸಿಕ್ಕುಂ ಗಡವಿಚಿತ್ರವಿನ್ನವುಮೊಳವೇ ॥ ೧೦ ॥

ವೃ॥ ಕಡಲೇಳುಂ ಮೊದಲಾಗಿ ನಾಡತೊಱೆಯೆಲ್ಲಂ-
ನೆತ್ತಿ೨ಸಂಗ೨ಕ್ಕೆ ಸಂ- ।
ಗಡದಿಂ ಬಪ್ಪವು ಭಾಸ್ಕರಗ್ರಹಣದಿಂದಿಂಗೆಂ-
ಬರಂತಾದೊಡಾ- ।
ಮಡುಮುನ್ನಂ ಪಿರಿದಾಗದೇಕೆ ಪಳೆಯಂ-
ತಾಗಿಪ್ಪುದೇನೆಂಬರೀ ।
ನುಡಿಯಂ ವೇದಜಡಾತ್ಮರೀ ಜಗಜನಕ್ಕೀಯಂದದಿಂ-
ವ್ಯಾಜಿಪರ್ ॥ ೧೧ ॥

---

೧. ಇ—೧ತಿವೆದು೧; ೨. ಇ—೨ಸಗ್ಗ೨;

ಧಾತ್ರಿಯೊಳುಳ್ಳದೈತ್ಯಬಲಮುಂ ಚತುರಂಗ ಸಮನ್ವಿತಂ-
ಮಹಾ- ।
ಕ್ಷತ್ರಿಯ ವರ್ಗ್ಗಮಂ ತಱಿದತಾಣಮೆ ಪಾವನ-
ಮಂತದಂ ಕುರು- ।
ಕ್ಷೇತ್ರಮನೊಮ್ಮೆ ಮೆಟ್ಟಿದೊಡೆ ಪುಟ್ಟುವರಲ್ಲ-
ಮಮೋಘಮೆಂಬುದಂ ।
ಜಾತ್ರೆಮರುಳ್ಗಳೆಯ್ದೆ ಬಲವಪ್ಪರನೇಕರು ಮಿಂತು ಸಂತತಂ ॥ ೧೨ ॥

ಕಂ॥ ರಣದೊಳು ಕುರುಬಲ ಮು೧ಳಿದೊಡ ।
ಕುರುಭೂಮಿಯೆ ತೀರ್ತ್ಥಮಕ್ಕುಮಪ್ಪಡೆದೂರಂ ॥
ಪರಿಯಲ್ಕೇಡ ಸಮೀಹಿತೆ ।
ದೊರೆಕೊಳ್ಗುಂ ನೃಪರಕಾದಿದೆಡೆಗಳ್ಪಲವುಂ ॥ ೧೩ ॥

ದಿವಿಜಾಸುರ ಪಾಂಡವ ಕೌ- ।
ರವಬಲಮಳಿದಿರ್ದ್ದ ಭೂಮಿಯೊಳ್ಪಣಮಂ ಬಿ- ॥
ತ್ತುವುದುಂ ಭಂಡಿಯ ಪ- ।
ಣವಕ್ಕುಂ ತತ್ಸುವರ್ಣ್ಣಮೆಂಬಮೂರ್ಖರ್ ॥ ೧೪ ॥

ಪರಿತಂದು ಸಯ್ತು ಪೆರ್ದ್ದಱಿ ।
ಸಿರಿಪರ್ವ್ವತದಲ್ಲಿ ತೊಲಗಿದೊಡೆ ಕಂಡುಮಹೇ- ॥
ಶ್ವರನಾರ್ದ್ದನಕ್ಕಟಂದಿಂ ।
ಪಿರಿದುಂ ತಾಂ ಪೇರ್ದ್ದಪರಿದುದೆಂಬಮೂರ್ಖರ್ ॥ ೧೫ ॥

ಅರಸುಮಗನೋರ್ವ್ವನಲ್ತೊಂ- ।
ದರಸನಪೆರ್ಗ್ಗಡೆಯ ಮೇಲೆ ಬೆಳ್ತೊನ್ನಪಂ- ॥
ತಿರೆತಳಿಯೆ ನೀರನೀರದ- ।
ನರಸಂ ನೀರ್ದ್ದಳಿದು ಕಳೆದನೆಂಬಮೂರ್ಖರ್ ॥ ೧೬ ॥

ವೃ॥ ನರಪತಿಯೋರ್ವ್ವನಗ್ಘ್ಯಮನಿನಂಗಭಿಮಂತ್ರಿಸಿ-
ಪೊನ್ನಬಟ್ಟಲೊ- ।
ಳ್ನಿರವಿಸಿ ಕೊಟ್ಟೊಡೆಯ್ದಿರವಿಯುಂ ಸುರದಾಗಳ-
ದಲ್ತೆಬಪ್ಪುದುಂ ।

---

೧. ಇ, ಈ—ಮ:

ಪರನೃಪನೋರ್ವ್ವನಾತ್ಮಸಚಿವರ್ಕ್ಕಳಿನಗ್ಘ್ಯ್ವಮ-
ನಾಣೆವಿಟ್ಟುತಾಂ ।
ನಿಲಿಸಿದನೆಂಬರಿನ್ನವಘಟಂಗಳನಾವನೊ ಕೇಳ್ದು-
ಸ್ವೈರಿಪಂ ॥ ೧೭ ॥

ಕಂ॥ ಕರಿದಂ ಬಿಳಿದಂ ಬಿಳಿದಂ ।
ಕರಿದಾಗಿರೆ ಮಾಳ್ಪಪೋಪ ಬಟ್ಟಲುಗಳನಂ- ॥
ಬರದೊಳ್ನಿಲಿಪ ಮಹೀಭುಜ- ।
ರರಸುಗಳಲ್ಲವರ್ಗಳಿಂದ್ರ ಜಾಲಿಗರಕ್ಕುಂ ॥ ೧೮ ॥

ಅರಸುಮಗನೋರ್ವ್ವನಂ ಸುಡು- ।
ತಿರಲಾಗಡೆ ಬಂದುಪಾವುಗಡಬೇವುದು ತ- ॥
ದ್ಧರಣೀಶ್ವರನೊಡನೆನುತಿ- ।
ಪ್ಪರನುಡಿದಿಟಮೆಂದು ಮೂಢರವರಂತೂಳ್ವರ್ ॥ ೧೯ ॥

ಆಯುಷ್ಯಂ ಪೆರ್ಚ್ಚುಗುಮಿಂ- ।
ತೀಯೌಷಧದಿಂದಮೆಂದು ಪೇಳ್ದಡೆನಂಬಿ- ॥
ರ್ದ್ದಾಯುಷ್ಯಂ ಪೆರ್ಚ್ಚುಗುಮೆಂ- ।
ದಾಯೌಷಧಸೇವೆಗೆಯ್ವರಳಿಪಮೂರ್ಖರ್ ॥ ೨೦ ॥

ಮೊದಲೊಳು ಧಾತ್ರಂ ಸಮಕ- ।
ಟ್ಟಿದನಿನಿತಲ್ಲದೆ ವಿಶೇಷಮಾಯುಷ್ಯಮನಾ- ॥
ರೊದವಿಪರೆಂದು[೧]ಗಳಂ ಮಾ- ।
ಣದೆ ಪೀರುತಿಪ್ಪರಾಸೆಯಿಂದಂ ಮೂಢರ್ ॥ ೨೧ ॥

ಸೇವಿಸಿದಡೆ ಪಲಕಾಲಮ- ।
ನೀವಿಧದಿಂದಂಗಮೇಧ್ಯಮುಮಂ ಮೂತ್ರಮುಮಂ ॥
ಸೇವಿಸೆ ಮೆಯ್ಯುಂ ಪೂಸುವ ।
ಕೀವಿಲನಾಶ್ರಯಿಸಿ ಪೇಳ್ದು ಕೇಳ್ವಮೂರ್ಖರ್ಕ್ಕರ್ ॥ ೨೨ ॥

ದೆಸೆಗೆಟ್ಟ ರಾಜಮರರು- ।
ದ್ದೆಸದಿಂ ನಿಜಗೂಥಮೂತ್ರ ಸೇವನೆಗೆಯ್ವಾ- ॥

---

೧. ಇ—ಮದ್ದು;

ಕಿಸುಗುೞಿ ಪೇೞ್ದಿಂದುಂ ಮಾ- |
ನಸವಾೞ್ವಂ ಬಾೞ್ವನವನ ನುಡಿಜನ ಹಿತಮೋ ‖ ೨೩ ‖

ಮೃಡನಂ ಜಾನಿಸುವೆಡೆಯೊ- |
ೞ್ಪಿಡೆ ಚಕ್ಕಣವಿಂದೆ ನಾಲ್ಕೆರಲ್ಕೆರ[1]ದಿಪ್ಪಂ- ‖
ದದಯೋಗಿಯೆಂದು ನುಡಿವರ |
ನುಡಿಯುಂ ನಂಬಲ್ಕೆ ಸಲ್ಲ ಚಾತುರ್ಯ್ಯಪರಂ ‖ ೨೪ ‖

ಪೃ‖ ಇದು ಪುಸಿನನ್ನಿಯೆಂದಱಿಯದಾರಿಣಮೋಚನ-
ತೀರ್ತ್ಥಮೆಂಬ ಕೊಂ- |
ಡದೊಳಿರದಿಕ್ಕಿದಾಗಕರಿದಾಗಡೆತಾಂ ಬಿಳಿದಪ್ಪುದನ್ನವ- |
ಪ್ಪುದಕಮನೊಮ್ಮೆ ಮೀಯೆಗಡಕೊಂಡರಿಣಂಗಳ-
ದೋಷಮಂತೆ ಪೋ- |
ಪುದುಗಡ ಸಾಲ್ವಸಾಲಿಗರ್ಗೆನಿಗ್ಗಮುಮಲ್ಲದೆ-
ಪೋಪಡಾರಿಣಂ ‖ ೨೫ ‖

ಕಂ‖ ಕೊಂಡದೊಳಿರ್ದ್ದಡೆ ಸಾಲಂ- |
ಗೊಂಡರಿಣಂ ಪೋಕುಮಪ್ಪೊಡೆಲ್ಲಂ ಸಾಲಂ- ‖
ಗೊಂಡು ಪರಿದಲ್ಲಿ ಮೀವುದು |
ಕೊಂಡಾತನನಿತ್ತಲಡಿಸಿತಗೆಯುದೊಡಕ್ಕುಂ ‖ ೨೬ ‖

ಅಱಿಕೆಯು ಪುರಾಣದಿಪ್ಪದಿ |
ನುಱಿಮಿಂದವರೊರ್ಮ್ಮೆ ಪೋಗಿರಿಣಮೋಚನಮುಂ ‖
ಮೊಱೆಯೋ ಕೊಟ್ಟಂ ತಗೆದಂ- |
ದಱಿವಿನ್ನಿರ್ನೀಮೆಂದು ಓಡಿಗೆತೊವಲಂ ಚದುರಂ ‖ ೨೭ ‖

ಓರ್ವ್ವನೆ ತನ್ನಂ ತೋರ್ಪ್ಪಂ |
ಪರ್ವ್ವದೊಡಾ ತುಂಗಿಭದ್ರೆಯೊಳು ಗೌತಮಿಯೊ- ‖
ಳ್ಪರ್ವ್ವತದೊಳ್ಗಂಗೆಯೊಳೆಂ- |
ದುರ್ವ್ವರಱಿವಿಲ್ಲದವರ್ಗಳೇನಂ ನುಡಿಯರ್ ‖ ೨೮ ‖

೧. ಇ—ಗ;

ಕಂಡಿರೆ ನರನುರಿಯೆಣ್ಣೆಯ |
ಕೊಂಡಮನವಯವದೆಪೊಕ್ಕು ಮಿಕ್ಕಿದ ಮರ್ದ್ದಂ ||
ಕೊಂಡಾಸಿದ್ಧಂ ಬೆಳ್ಳಿಯ |
ಗುಂಡಾಗಿರ್ದ್ದಪ್ಪನೆಂದುನುಡಿವಮೂರ್ಖರ್ || ೨೯ ||

ಮನುಜನೊಡಲಣ್ಣಕಲ್ಲುಂ |
ಕನಕಮುಮೇನಾಗಲಱಿಗುಮೆಮದ್ದಿಂದಂ ||
ಕನಕಮುಮಕ್ಕೆಮಜೀವಮು- |
ದಿನಿಸುಂ ಗುಂಡಿನೊಳಮಿಲ್ಲನೃಪನೆಂತಕ್ಕುಂ || ೩೦ ||

ಅಸುರನ ಮೆಯ್ಯೆಲುಗಳುತಾಂ |
ಕಿಸುಗುಳಮುಂ ರತ್ನಮಾದುವೆಂದತಿಮೂಢ- ||
ರ್ಪುಸಿನುಡಿವರ್ಬ್ರಹವರ್ಣ್ನ- |
ವಸುಂಧರಾವಾಕ್ಯಮೆಂಬ ಪುಸಿಯುಂ ತಕ್ಕುಂ || ೩೧ ||

ಗಾವಿಲನದೋರ್ವ್ವ ಪಾರ್ವ್ವಂ |
ಧಾವತಿಯಿಂ ನಭದೋಣೊಣಗಿಕ್ಕಿದೊಡಂದಾ ||
ಧಾವತಿಯೊಡವಪ್ಪುದೆನ- |
ಲ್ತಾವದನೀಕ್ಷಿಸಿದರಂತೆ ನುಡಿವಮೂರ್ಖರ್ || ೩೨ ||

ಚಿರುಕುಟಮನುಟ್ಟುಕಯ್ಯೋ- |
ಳ್ತಿರಿದುಣುತಂ ದೆಸೆಗೆನಗುತುಮಾತು[೧]ತ್ತಿಪ್ಪಾ ||
ಮರುಳೊಂದಂ ನುಡಿದೊಡದಂ |
ನಿರುತಮದಾದೇಶವಚನಮೆಂಬಮೂರ್ಖರ್ || ೩೩ ||

ಕ್ರಿಯೆಯಿಂ ನೆಗಳ್ದವಕಾರ- |
ತ್ರಯಮುಂ ನೆಱೆಬಲ್ಲೆನೆಂಬತಕ್ಕನೊಳಂ ಕ- ||
ಳ್ಳಿಯಕಾಯುಮಿಲ್ಲವಾಯ್ತಾ- |
ದಿಯಮಾತಂ ನಂಬಲಾಗದೆಂತುಂ ಜೈನಂ || ೩೪ ||
ಮಗನಂ ಪಡೆವಂತಿರೆ ಬಂ- |
ಜೆಗೆಮರ್ದ್ದಂ ಮಾಳ್ಪೆನೆಂಬಸಾಸಿಗನೇಂತಾಂ ||

---

೧. ಈ—ಡು;

ಪುಗಿಸುವನೆ ಜೀವವಂತದು- |
ವೆ ಗರ್ಭದೊಳುಮುರ್ದ್ದಿಮೋಣದಕ್ಕುಮೆ ಜೀವಂ || ೩೫ ||

ಮಕ್ಕಳನೆ ಪಡವೆನೆಂಬ ಬ- |
ಯಕ್ಕೆಯೆ ಪಿರಿದಾಗೆ ಪುಲಿಯ ಕಣ್ಣಂಮಾತಿಗೆ- ||
ಟ್ಟುಕ್ಕೆವ ಮಿಕ್ಕಿದ ಮುರ್ದ್ದಂ |
ಮೊಕ್ಕಲಿಗರ್ಕೊಟ್ಟುಜನ್ನದಡಗಂ ತಿಂಬರ್ || ೩೬ ||

ಅನುದಿನಮಾತ್ಮೇಶನ ಸಾ- |
ಧನಸೇವನೆಯಿಂದೆ ಬಂಜೆಗಾಗದಬಸಿಱ[೩]ೊಂ- ||
ದಿನಿಸಂ ಜನ್ಮದೊಳಿ[೧]ಳಿದಾ- |
ಡಿನ[೨]ಮೂತ್ರ[೨]ಮನೊಮ್ಮೆ ಸವಿದೊಡೇನಾದಪುದೆ || ೩೭ ||

ಕುತ್ತುಂಗುಳಿಗಂ ಗರ್ಭಮು- |
ದೊತ್ತುಂಬದಿನಕ್ಕುಮಲ್ಲಿ ನೆಲಸಲ್ಜೀವಂ ||
ಮತ್ತೆ ಪಟುಮುರ್ದ್ದನುಂಡುಂ |
ಪೆತ್ತಪಳೇ ಜೀವನಲ್ಲಿ ನೆಲಸ[೪]ದೊಡೆಂತುಂ || ೩೮ ||

ಕನಕಮುಮಂ ಮಕ್ಕಳುಮಂ |
ನಿನಗಾಂ ಮಾಡಿದಪೆನೆಂಬ ತಕ್ಕನಮಾತಂ ||
ಜಿನಸಮಯಿ ನಂಬಬೇಡೊ- |
ಳ್ಪಿನೊಳಕ್ಕುಂ ಮಾಡುವವರ ವಶವಲ್ಲದಱಿಂ || ೩೯ ||

ತಮತಮಗೆಡಂಬಕರ್ಬ್ಬ- |
ಲ್ಲೆಮೆಂದು[೪]ಥದ್ರಿಸಿಲವೇ[೪]ದವಸ್ಯವಯುಸ್ತಂ- ||
ಭಮನರ್ತ್ಥಮುಳ್ಳಿನಂ ಪೊ- |
ರ್ದ್ದಿಮಾಡುತಂ ಪಱಿಯೆತಿಂದುನೊಚ್ಚನೆನೆಗೆವರ್ || ೪೦ ||

ಅಱಿದವನಾ ವಿದ್ಯೆಗಳಿಂ |
ನೆಱಿಸುಖಿಯಾಗಿಪ್ಪನಲ್ಲದೆಲ್ಲಾನಾಡಂ ||
ನೆಱೆಪೊಕ್ಕುತಿರಿದು ತಿಂಬನ |
ತೆಱನಱಿವವರಿನಿತನಱಿದುಮೆಂತೊಳಗಪ್ಪರ್ || ೪೧ ||

೧. ಇ—ಳ; ೨. ಇ—ಃವೋಂಥ್ರ೨; ೩. ಇ—ಸಿ: ೪. ಇ—ಳಖಿದ್ರಿಸಲೆವಾಳ;

ನರಿತೊಡರ್ವಂತಿರಲೇಂ ಕೇ- |
ಸರಿತೊಡರ್ಗಮೆ ಬಲೆಯೊಳಂತೆಡಂಬಿಸಿತಿರಿತ- ||
ಪ್ಪರತೆಱೆಯೊಕ್ಕಲೆನಿಪ್ಪ- |
ನ್ಯರತೆಱದಿಂತೊಡರಲೆಂತುಮಱಿವನೆ ಜೈನಂ || ೪೨ ||

ಪರಮಜಿನೋದಿತಮಲ್ಲದ- |
ದರವುರ ವಿದ್ಯೆಗಳನಱಿವವಂ ತೋಱಿದೊಡ- ||
ಚ್ಚರಿಯೆನ್ನನೀವೆಲ್ಲಂ ಡೊಂ- |
ಬರ ವಿದ್ಯೆಗಳೆಂದೆ ಬಗೆವನುತ್ತಮ ಜೈನಂ || ೪೩ ||

ಮರಗಳ ಪೊರಸುಗಳ ನೆಳ- |
ಲ್ಪರಿದೊಡಕುಱಿನಡೆದ(ಡೆ)[೧]ಮಾರಿ[೧]ಪೊರೆದೊಡೆಪೋಕುಂ ||
ಸಿರಿಯುಂಬರಂತುಪೋಗಲು |
ಸಿರಿಗಾಳಿಯುಸೋಡರೆ ನೆಗಳ್ದಪುಣ್ಯಾಧಿಕರಾ || ೪೪ ||

ಇದುಯುಕ್ತಮಪ್ಪುದಲ್ತೆ- |
ನ್ನದೊಂತಿ ತಲೆಯುಲ್ಲಿ ಬೀಳಿಬೋಳಿಸ[೨]ರಾಯುಂ- ||
ದದಬುದ್ಧಿವಂತರಂತದು |
ತುದಿಮೂಗಿನ ಮೇಲೆ ಕೆಡೆದಡದನೇಗೆಯ್ವರ್ || ೪೫ ||

ದೇವಾರ್ಚ್ಚನೆದಾನಂ ಸಂ- |
ಧ್ಯಾವಂದನೆ ಜಪವೆನಿಪ್ಪುವಂ ಮಾಳ್ಪಾವಿ- ||
ಪ್ರಾವಳಿಗೆ ದರ್ಭೆಯಿಲ್ಲದೊ- |
ಡಾವನಫಲಮಲ್ಲಿಮಸುರರುಂ ಗಡಕೊಳ್ವರ್ || ೪೬ ||

ಕಳದೊಳ್ತೂರಿದ ಭತ್ತಮ- |
ನಳೆಯದೆ ನಿಂದಂದುದನುಜನಾಧಾನ್ಯಮನಾ- ||
ಗಳೆಕೊಳ್ವರೆಂಬರಳದಡೆ |
ಕೊಳಲರಿಯರೆ ತಮಗೆ ಬಾರ್ತ್ತೆಯುಳ್ಳಡೆ ದನುಜರ್ || ೪೭ ||

ಪಗವದ ಭತ್ತಂ ಕಿಡದಂ |
ತಗಲದೆ ಕಾಪಿರಿಸಿದೊಂದು ಬೆರಣೆಯುಬೆನಕಂ ||

೧. ಇ, ಈ—೧ಧೂಳಿ೧; ೨. ಇ, ಈ—ಪ;

ನಗೆಯಲ್ತು ಕಾದಡಕ್ಕುಂ ।
ಪಗವಮನಿರುಳಗಳ್ದು ಕೊಳ್ವ ಕಳ್ಳರನಿನಿಸುಂ ॥ ೭೮ ॥

ಇಂತಿವು ಮೊದಲಾಗಿರೆ ಪಲ- ।
ವುಂತೆಱದಾ ಮೂಢವೆಲ್ಲಮಂ ಸನ್ಮತಿಯಿಂ- ॥
ದಂ ತಿಳಿದು ಬಿಸುಟು ಜಿನಮತ- ।
ದಿಂ ತಪ್ಪದೆ ನೆಗಳುತಿಪ್ಪನುತ್ತಮ ಜೈನಂ ॥ ೭೯ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-
ದಾರ್ಥನಿಪುಣ ಮಹಾಕವಿ ಬ್ರಹ್ಮದೇವ
ವಿರಚಿತಮಪ್ಪ ಸಮಯಪರೀಕ್ಷೆಯೊಳು
ಲೋಕಮೂಢಸ್ವರೂಪನಿರೂಪಣಂ
ದ್ವಾದಶಾಧಿಕಾರಂ
ಶ್ರೀ ಶ್ರೀ ಶ್ರೀ

॥ ಶ್ರೀ ॥

ತ್ರಯೋದಶಾಧಿಕಾರಂ

ವೃ॥ ಕೆಲರಂ ಸಂಸ್ಕೃತಿಮೋಹದಿಂ ಕೆಲಬರಂ ಮಾಯಾ-
ಪ್ರಪಂಚಗಳಿಂ।
ಕೆಲರಂ ದುಶ್ಚರಿತಂಗಳಿಂ ಕೆಲಬರಂ ಸದ್ಧರ್ಮ-
ಮಾರ್ಗಂಗಳಿಂ।
ಕೆಲರಂ ಮೆಚ್ಚಿದ ವೃತ್ತಿಯಿಂ ನಡೆಸುತುಂ ದೇಹಂ-
ಗಳೊಳ್ಸಂತತಂ।
ನೆಲಸಿರ್ದ್ದಾಡುವನೆಯ್ದೆ ಕರ್ಮ್ಮಮಹಿಪಂ ಮುಮ್ಮಾ-
ಡಿದೊಂದಂದಮಂ ॥ ೧ ॥

ಕಂ॥ ಬೇಡುಕರವನಿಪರಾದೊಡೆ ।
ರೂಢಿಯ ಸತ್ಕುಲಜರಪ್ಪ ಭೂಮೀಶ್ವರರಂ ॥
ನೋಡಲುವಾಱದತೆಜಿನಂ ।
ಮಾಡುವರೊಳುಮುಳ್ಳ ಜೈನರಂ ಕಂಡುಕೆಲರ್ ॥ ೨ ॥

ವೃ॥ ಜಗದಾನಂದನನಾದಿದೇವನನಶೇಷಾರಾಧ್ಯನಂ-
ಮೋಕ್ಷ ಲ- ।
ಕ್ಷ್ಮೀಗತಿಪ್ರೀತನನಾಪ್ತನೆನ್ನದೆ ಮಹಾಮಿಥ್ಯಾತ್ವದಿಂ-
ಮೂಢ ಜೀ- ।
ವಿಗಳೊಳ್ಪಿಲ್ಲದನಾಪ್ತರಂ ಪಲರುಮಂ ತಾನಾಪ್ತರೆಂ-
ದೊಲ್ದುಪೊ- ।
ದ್ಧಿರ್ಗುಣಂಗೆಟ್ಟುಜಿನೇಂದ್ರನಾಪ್ತನಣವಲ್ಲೆಂ-
ದೂಳ್ವರಜ್ಞಾನಿಗಳ್ ॥ ೩ ॥

ತನಗೆಂತೆಂತಿಚ್ಛೆಯಿಂ ಪಾಳಿಸಿನಡೆವಮೃತಾಂಭೋಜ-
ನಾಭಾರ್ಕಸ್ಕಹವ್ಯಾ- ।
ಸವಗಿ೯ಗ೯ಂದುಂ ರಾಗದಿಂ ತಾನೆಱಗಿಸುವನಿಳಾ-
ಲೋಕದಿಂ ಮೋಹರಾಜಂ ।
ಮುನಿಪಂ[೨] ಕೊಂಡಾಡಿ ತನ್ನಂ ಕಿಡಿಸಿ ಭವಮಹಾ-
ಪಾಶಮಂ ಕೂಡಿಕೊಯ್ವಾ ।
ಜಿನನಾಥಂಗೇಕೆಯೋಲೋಕಮನೆಱಗಿಸುವಂ-
ಶತ್ರುವಿಂತಾಗವೇಡಾ ॥ ೪ ॥

ಕಂ॥ ಪರಮ ಜಿನನೊಡನೆ ತಮ್ಮಾ- ।
ಪ್ತರನಾಮತದೊಡನೆ ತಮ್ಮಮತಮಂ ಮತ್ತಾ ॥
ಚರಿತದೊಡನೋಜೆಯಿಂ ನಿಜ ।
ಚರಿತಮು[೩]ನೊರೆದೆಯ್ದ[೩]ನೋಡಿದೂಷಿಪುದೆಗ್ಗೇ ॥ ೫ ॥

ಎಮ್ಮಾಪ್ತಂ ನಿಮ್ಮಗಳ ನೀಂ ।
ನೆಮ್ಮಾಗಮುಮುಮಳಮೆಮ್ಮ ಚರಿತಂ ಲೇಸೆಂ- ॥
ದುಮ್ಮಱಿದು ಮುಸಿರರೇಕೆನೆ ।
ತಮ್ಮಾಪ್ತರ ಪುರುಳನಱಿವಕತದಿಂ ಚದುರಂ ॥ ೬ ॥

ಜಿನ[೪]ನಂ[೪]ನನು..ಮಿ[೫]ನ್ನಾ- ।
ಜಿನಸೂಕ್ತಮುದಂತುಟೆಂತುಟೋಧರ್ಮಮಿದೆಂ- ॥
ತೆನಲಱಿಯದೆ ಮೂರ್ಕ್ಖರ್ತ್ತ- ।
ಮ್ಮನೆಜ್ಜೈನಮುದೊಳ್ಳಿತಲ್ಲದೆಂದಿಂತೂಳ್ವರ್ ॥ ೭ ॥

ಅರಹಂತನೆದೆಯ್ವಂ ಮಿ- ।
ಕ್ಕರೆಲ್ಲರುಂ ದೇವರಲ್ಲರೇ ಗುಣಿಗಳ್ ಜೈ- ॥
ನರೆಮಿಕ್ಕರೆಲ್ಲರುಂ (ದೇವರಲ್ಲರೇ) ಕ- ।
ಷ್ಟರೆಪೇಳಿಮೆನುತ್ತೆ ಕಚ್ಚಿಕೊಳ್ವಮೂರ್ಖರ್ ॥ ೮ ॥

ಜಿನಮತಮೊಲೇಸುಗಡಮು- ।
ತ್ತಿನಮತದೊಳ್ಕೊಂದು ತಿಂಬುದಂತಿದ್ದುದೆ ಪೇ- ॥

---

೧. ಇ—ನ; ೨. ಇ—ಸಂ; ೩. ಇ—ಣನೋರಂತೆಇ; ೪. ಈ—ಳನನ್ನಂಳ: ೫. ಇ, ಈ—ನಿ;

ಳಿನಿತೊಳ್ವಂ ವೇದಮನೊಂ- ।
ದಿನಿಸುಂ ಕೇಳ್ದಱಿಯರಕ್ಕುಮಾಮತಿವಂತರ್ ॥ ೯ ॥

ಜಿನಧರ್ಮ್ಮವೊಳ್ಳಿತೆಂದುಸಿ- ।
ರ್ದನಿತಱೊಳೇಂ ಕನಲ್ದುಕಾಯ್ದು ಕಳ್ಗುಡಿವರೆ ಮು- ॥
ತ್ತಿನ ಸಮಯಿಗಳೆಲ್ಲರುಮೆಂ- ।
ದುನಾಡೆಯುಂ ಗುಂಡುಗೊಳ್ವರುಪಶಮನಿರತರ್ ॥ ೧೦ ॥

ಶ್ರಾವಕರಲ್ಲರೆ ಪಾರ್ವ್ವ- ।
ಸ್ರ್ಸೇವಿಸುತ್ತಿರ್ದ್ದಪರೆಮಾಂಸಮಧುಗಳನೆಂಬರು ॥
ಸೇವಿಸುವರವನೆ ಮತ್ತಂ ।
ಶ್ರಾವಕತನದಿಂದಮಿಂತುಟಾಗಲೆವೇಳ್ಕುಂ ॥ ೧೧ ॥

ಶಿವವಿಷ್ಣು ಸೂರ್ಯ್ಯಶಶಿಲೋ- ।
ಕವೆಂಬಿವೊಳಪಲ್ಲದಿಲ್ಲ ಜಿನಲೋಕಮದೆಂ- ॥
ಬವರನುಡಿತಕ್ಕು........ ।
ವೊಡೆಯುನಪ್ಪಂಗೆ ಬೇಱದೇಕೆಯೊಱೋಕಂ ॥ ೧೨ ॥

ಧರಣೀತಳದೊಳಗ್ಗೆ ಮಹೇ- ।
ಶ್ವರರುಂ ವೈದಿಕರೆ ಪಲಬರಲ್ಲದೆ ಜೈನ- ॥
ಪ್ರ್ಪರಿದಿಲ್ಲೆಂಬರದಂತುಟೆ ।
ಸರಿವಂತಕ್ಕೆಲರು ಮುಳಿದವಪ್ಪ್ಪಲವುತೆಱಿಂ ॥ ೧೩ ॥

ಪಿರಿದುಂ ಶುಲಭಂ ಕಲ್ಗಳು ।
ಪರಿಕಿಸುವಡೆ ಶುಲಭವಲ್ಲ ಮಾಣಿಕಮೆಂಬಂ- ॥
ತಿರೆಶುಲಭವನ್ಯಸಮಯಂ ।
ಪರಮಸುಖಾವಾಸಮಪ್ಪ ಜೈನಮಶುಲಭಂ ॥ ೧೪ ॥

ಬಲ್ಲಹನುಂ ಸಾಮಂತರು- ।
ಮೆಲ್ಲಾ ಪ್ರಜೆಯುಂ ಶಿವಂಗೆ ಭಕ್ತರೆ ಜೈನಂ ॥
ಪೊಲ್ಲಪ್ಪಕತದೆ ಕೈಕೊಳ- ।
ಲೊಲ್ಲನ್ನ್ಯಾಡವರ್ಗಳದಱಿನೆಂಬಮೂರ್ಖರ್ಕ್ಕರ್ ॥ ೧೫ ॥

ಜಿನಧರ್ಮ್ಮವೊಳ್ಳಿತಪ್ಪಡೆ ।
ಜನಮೆಲ್ಲಂ ಪೊರ್ದ್ದದೇಕೆ ಮಾಣ್ಬರೆಪೇಳಿಂ ॥

ಜ೧ನರಾಗಮುಳ್ಳಕತದಿಂ ।
ಜನಮೆಲ್ಲಂ ಶೈವರಪ್ಪರೆಂಬಮೂರ್ಖರ್ಕ್ಕರ್ ॥ ೧೬ ॥

ಧನಮುಂ ಧಾನ್ಯಮುಮಕ್ಕುಂ ।
ತನಯರ್ ಪಲರಪ್ಪರೀಶಭಕ್ತರಿಗೆಂದುಂ ॥
ಜಿನಸಮಯಂಬೊಕ್ಕವರ್ಗಳ- ।
ಮನೆನೆಗಳ್ದೊಡೆಯುಂಟೆತೋಱಿಮೆಂಬಮೂರ್ಖರ್ಕ್ಕರ್ ॥ ೧೭ ॥

ಬಡತನಮಕ್ಕುಂ ಮೆಯ್ಯುಂ ।
ಕಿಡುಗುಂ ಮತ್ತಾಯು ಕುಂದುಗುಂ ಜೈನಂ ಬೊ- ।
ಕ್ಕಡೆಪೊಲ್ಲೆಂಬದೂರ್ಷಣೆ ।
ಯಿಡಲಱಿಯರದಕ್ಕೆಶೈವರುಂ ವೈದಿಕರುಂ ॥ ೧೮ ॥

ವೃ॥ ಶಿರಿವಂತಂ ತಾನೆನಲ್ಜೀವಿಸಿದನಿವನೆ ಸದ್ಭಕ್ತಿಯಿಂ-
ಮುನ್ನೆಮಾಹೇ- ।
ಶ್ವರನಾಗಿರ್ದ್ದಂದು ಮತ್ತಾರ್ಹತದೊಳೆಸಗಲೀ-
ತಂಗೆದಾರಿದ್ರಮಾಯ್ತೆಂ- ।
ದರೆಬಮೂರ್ಖಧಾತ್ರರಪ್ಪರ್ಸ್ಸರಿಯುಮವನ-
ದಾರಿದ್ರಮುಂ ಪೂರ್ವ್ವಜನ್ಮಾಂ- ।
ತರಕರ್ಮ್ಮಂ ಮತ್ತದಂಬಿತ್ತಿದನೆ ಬೆಳಸನುಣ್ಬಂದದಿಂ-
ದುಣ್ಬಸಾತ್ಮಂ ॥ ೧೯ ॥

ಕಂ॥ ಈತಂ ವಿವೇಕಿಭಾವಕ- ।
ನೀತಂ ಲೇಸಲ್ಲರಂದುಜಿನಮಾರ್ಗ್ಗದೊಳಂ- ॥
ತೇತಕ್ಕೆ ನಡೆವನೆನ್ನದೆ ।
ಬೂತಿನವೋಲಂದಚಂದಗೆಡೆವದೂರ್ಧತ್ತರ್ ॥ ೨೦ ॥

ವರಜಿನಧರ್ಮ್ಮದೊಳೀತಂ ।
ಸ್ಥಿರನಾದಂ ಲೇಸುಗೆಯ್ದನೆನ್ನದೆ ತಮ್ಮಂ- ॥
ತಿರೆ ಮಾರ್ಪ್ಪರೊಲ್ದುಚಂದನ ।
ಗೊರವನ ಕತೆಮಾಡಿ ಜೈನರೇಂ ದುಶ್ಚರಿತರ್ ॥ ೨೧ ॥

೧. ಇ—ಜಿ;

ತಮ್ಮಂತಿರೆ ಮಾಡಲ್ಪಿರಿ- ।
ದುಮ್ಮಱುಗುವರೆಲ್ಲರೀತನುತ್ತಮನಾದಂ ॥
ನಮ್ಮಂಕುಲದೊಳಗೆಂಬುದ- ।
ನೇಂಮಱೆದುಂ ನುಡಿಯಲಾಪರೇ ಪಾಪಿಷ್ಟರ್ ॥ ೨೨ ॥

ತಾಂತಿರಿವಗೊರವಿ ಬೆನಕನು- ।
ಮಂ ತಿರಿಸಿದಳೆಂಬ ಕಥೆಯೊಳಱಿವಿಲ್ಲದೆ ಕೆ- ॥
ಟ್ಟಂತುಂ ನಿಲ್ಲದೆ ಜೈನರು- ।
ಮೇಂ ತಮ್ಮವೊಲಾಗೆ ಮಾಡಲಪ್ಪಿರ್ಗವರೆಬರ್ ॥ ೨೩ ॥

ನಿಟ್ಟೆಯೊಳೆ ಸಂಜೆವಾಸಂ ।
ಕೆಟ್ಟನಿವಂ ವಿಪ್ರಜೈನನೆನವೇಡಱಿನಂ ॥
ಬಿಟ್ಟೊಳ್ಳ ಸಂಜೆಮಂತ್ರದ ।
ಪುಟ್ಟಿದಮನೆ ಪೊಲ್ಲವೇದಮದಱಿಂದೊಲ್ಲಂ ॥ ೨೪ ॥

ಪುಟ್ಟಿಲ್ಪಡೆಯದ ಕುಲದೊ- ।
ಳ್ಪುಟ್ಟಿಯುಮಾಸಂಜೆಮೋಹಮೆಂಬಿವನೆಲ್ಲಂ ॥
ಬಿಟ್ಟು ಸವಣರನೆ ಕೂಡಿಯೆ ।
ಕೆಟ್ಟಂ ಕುಲದಿಂದೆ ಕೆಟ್ಟನೆಂಬಪ್ಪಾರ್ವರ್ ॥ ೨೫ ॥

ಶ್ರಾವಕರಾದೊಡೆ ಸಾಲ್ಗುಂ ।
ಹೇವಂ ತನಗಿಲ್ಲ ಶೂದ್ರತಳಿಗೆಯೊಳುಂಬಂ ॥
ಭಾವಿಸುವರಲ್ಲ ಕುಲವೇಂ ।
ಶ್ರಾವಕರಿಂ ಕಿಡುವರೆಂಬರಱಿಗುಲಿಪಾರ್ವರ್ ॥ ೨೬ ॥

ಅನುಪಮರತ್ನತ್ರಯ ಮಂ- ।
ಡನನಮಳನುಮುತ್ತಮಂ ಪವಿತ್ರಾತ್ಮನೆನಿ- ॥
ಪ್ಪ ನರಂ ಕಿಡುಕಂ ಗಡವೊಲೆ- ।
ಯನಂದದಿಂ ಪೇಸದೆಸಪನುತ್ತಮನೆಗಡಂ ॥ ೨೭ ॥

ಸಲೆಕಿಚ್ಚುದೈವಮೆಂಬ[1]. ।
ಕೊಲೆಯಾದಂ ವೇದಮೆಂಬರಡಗಂತಿಂದುಂ ॥

---

೧. ಇ—ಬೀ;

ಸಲಿವುದು ಚರಿತ್ರಮೆಂಬಾ- |
ಮಳಿನಾತ್ಮರ್ತ್ತಗಮ್ಮ ಕೆಟ್ಟ ಕೇಡಂ ಕಾಣರ್ || ೨೮ ||

ಕೊಲೆ ಹೊಲೆಯು[1]ಲ್ಲದಧರ್ಮ್ಮದ |
ಸಲೆನೆಗಳ್ವುದು ನರಕಹೇತುವೆಂಬಪ್ಪರಿದುಂ ||
ಕೊಲೆಹೊಲೆಯುಳ್ಳಱನಂ ಪೊ- |
ದ್ದಲೆ ಸುಖಹೇತುವೆಂಬರಾಱಡಿಕಾಱರ್ || ೨೯ ||

ಅಮಳಿನ ಜಿನಧರ್ಮ್ಮಂ ಪೊ- |
ಲ್ಲಮಳಿನಮಪ್ಪನ್ಯ ಧರ್ಮ್ಮವೊಳ್ಳಿತ್ತೆಂದಾ- ||
ದಮೆಮೆಚ್ಚಿದಂದದಿಂ ನುಡಿ- |
ವಮನುಷ್ಯಂ ಶ್ವೇತಕೃಷ್ಣ ಕಾರಣನಲ್ಲಾ || ೩೦ ||

ಪಲತೆರದಿಂ ಸನ್ಮಾರ್ಗ್ಗದಿ- |
ನಲಸದೆ ನಡೆವವರ್ಗಳೊಲ್ದು ಜೈನವ್ರತಮಂ ||
ಸಲಿಸಲ್ತಾಮಾಱದೆ ನುಡಿ- |
ಯಲುವಾಗದು ಜೈನಸಮಯಿಯೊಡನೆಂದೊಳ್ವರ್ || ೩೧ ||

ಮಲಮಂ ತಳೆವಪ್ಪರ್ಗ್ಗಲ್ಲಂ |
ಸುಲಿಯನ್ನಿರ್ಗ್ಗಂದುಣ್ಬರುಟ್ಟುದಂ ಬಿಟ್ಟಿಪ್ಪರ್ ||
ತ್ತಲೆವಱಿವರೆಂದುಪಳಿವ- |
ರ್ಮ್ಮಳಿನಾತ್ಮರು ಘೋರವೀರತಪಮೆಂದಱಿಯರ್ || ೩೨ ||

ಆರಾನುಂ ನಿಲಿಸಿದೊಡಾ- |
ಹಾರಂಗೊಂಡಲ್ಲಿ ನೀರನಾಗಳೆ ಕುಡಿವರ್ ||
ವೀರಬ್ರತಮೆಂದಱಿಯ |
ನ್ನಿರ್ನೀರಂ ಕಾಱಿದಡೆ ಕುಡಿಯರೆಂಬಕ್ಕರ್ಪ್ಪರ್ || ೩೩ ||

ವೃ|| ನಡೆವಾಗ[2]ಳ್ಜೀವಸಂಘಾತ[2]ಮನವಯುವದಿಂ-
ಮೆಟ್ಟರೆತ್ತಾನುವಾರೊ- |
ಳ್ನುಡಿವಾಗಳ್ಸತ್ಯಮಂ ಬಿಟ್ಟಳುಪಿನುಡಿಯರೇ-
ಗೆಯ್ದೊಡಂ ಪಾಪದತ್ತ- |

---

೧. ಇ, ಈ—ಯಿ; ೨. ಇ—೨ಜಿನಸಂಗತಾ೨;

ಲ್ತೊಡರಶ್ರುಗದ್ಧಾತ್ಮರೆಂಬೀ ಪುರುಡಿನೊಳೆನಸುಂ-
ತಮ್ಮ ಬಳ್ಳಕ್ಕಿಹಳ್ಳಂ।
ಬಿಡಿದೋಡಲ್ಜೈನರಂ ಕಂಡಡೆ ಕಡುಮುಳಿವ-
ಕ್ರೋಧದಿಂಪಾಪಕರ್ಮ್ಮರ್ ॥ ೩೪ ॥

ಕಂ॥ ನೀರಂಗಾಳಿಪರುಂಬಾ-।
ಹಾರಮನಿಂಬಾಗೆ ಸೋಧಿಪರ್ ಜಿತದೋಷ-॥
ಚ್ಚಾರಿತ್ರವಂತರಂ ಬಿಡೆ।
ಕಾರಣದಿಂ ಭವ್ಯತತಿಗೆ ಮುಳಿವರ್ಕ್ರಷ್ಪರ್ ॥ ೩೫ ॥

ಸಚ್ಚರಿತರಲ್ಲದವರಂ।
ಮೆಚ್ಚರ್ಮತ್ತವರಮನೆಯ ಸುಣ್ಣಮನೊಲ್ಲರ್ ॥
ಚಚ್ಚರಿಗರಲ್ಲರೆನುತುಂ।
ಚುಚ್ಚುಳರಾರ್ಹತರ್ಗೆಬಱಿದೆ ಮುಳಿಯುತ್ತಿಪ್ಪರ್ ॥ ೩೬ ॥

ಉತ್ತಮನೆನೆ ಮಾಹೇಶ್ವರ।
ವೃತ್ತಿಯೊಳೆಸಗುತ್ತಮಿರ್ದ್ದ ಕಳ್ಗುಡಿವವರಂ॥
ಪತ್ತಿದಡೆ ಮುಳಿಯರಾರ್ಹತ-।
ರತ್ತೆಱಗಿದೊಡಂತೆ ಕಿನಿಸುವದ್ದುಶ್ಚರಿತರ್ ॥ ೩೭ ॥

ಪೊಲೆಯರ ನೆಗಳ್ತೆಯಂದದೆ।
ಸಲೆನೆಗಳ್ದನನೇನುವೆನ್ನರಂತೆಂತುಂ ನಿ-॥
ರ್ಮ್ಮಳಚರಿತರಪ್ಪಜೈನರ।
ತಲೆಗಂಡಡೆ ಬಱಿದೆಕಿನಿಸುವನ್ನಿರ್ಬ್ಭಾಗ್ಯರ್ ॥ ೩೮ ॥

ಜ್ಞಾನಿಗಳಂ ನೆಗಳ್ದುತ್ತಮ।
ದಾನಿಗಳಂ ಕಂಡುಮಿಂಡರಜ್ಞಾನದೆ ತಾ-॥
ವಾನೆಯನೇಱಿದರಂದದೆ।
ಯೇನಾನುಂ ನುಡಿವರಣಕಮಂ ಪಾಪಿಷ್ಪರ್ ॥ ೩೯ ॥

ಬೆಂದಮಗಂದಿರು ಜೈನದೊ-।
ಳೆಂದುಂ ನಯದಿಂದ ನುಡಿಯರೆಂತುಂ ತಮ್ಮಾ-॥

---
೧. ಇ—ರೆ;

೧ಯುಂ ಕುಂದಲು ತನ್ನಭವಿ- ।
ಷ್ಯಂ ಪೋ೧ಕಂಡಾದಾಗಳೆಕ್ಕಸೆಕ್ಕಂಗೆಡೆವರ್ ॥ ೪೦ ॥

ಜಡತೆಯೊಳೆ ಬೆಂದನಲ್ಲಂ ।
ಗಡಮುಳಮಂ ತಿಂದುಪರಿವನಲ್ಲಂ ವಿಬುಧಂ ॥
ಗಡವಿಮಳ ಚರಿತರಂ ಕಂ- ।
ಡಡೆಕಾಯ್ದುಡೆ ತಕ್ಕನೆನಿಸಿದೊಳ್ಳಕ್ಕರಿಗಂ ॥ ೪೧ ॥

ಜಿನಗೇಹಂ ಜಿನಬಿಂಬಂ ।
ಜಿನಾಗಮಂ ಜೈನರೆಂಬವಚನಂ ಕಿವಿವೋ- ॥
ಲಿನಿತಱಿನಲ್ತಾನಂದಂ ।
ಜನಿಯಿಸುಗುಂ ಭವ್ಯಸಮಿತಿಗಿದು ನಿರ್ವ್ಯಾಜಂ ॥ ೪೨ ॥

ಜಿನರಂ ಜೈನಾಲಯಮಂ ।
ಜಿನಮತಮಂ ಜೈನಸಮಯಿಗಳುಮಂ ಪೆಸರ್ಗೊ- ॥
ಡನಿತಱೊಳೆಕಿನಿಸುವಂ ಭ- ।
ವ್ಯನಲ್ಲದಂ ಭವದವಾಗ್ನಿಯೊಳ್ಬೇವಾತಂ ॥ ೪೩ ॥

ಅತಿನಿರ್ಮ್ಮಳವೆನಿಸಿದ ಜಿನ- ।
ಮತಮಂ ಸನ್ಮಾರ್ಗ್ಗದಿಂದೆ ನಡೆವಾಭವ್ಯ- ॥
ಪ್ರತತಿಯುಮಂ ಪಿರಿದುಂ ಕಾ- ।
ಣುತೆ ನರಕಕ್ಕಿಳಿವ ಮನುಜರಲ್ಲದೆ ಮುಳಿಯರ್ ॥ ೪೪ ॥

ಅಡಗಂ ತಿಂದುಂ ಕಳ್ಳಂ ।
ಕುಡಿದುಂ ಪಲತೆಱದ ಪಾಪಮಂ ಮಾಡುವರಂ ॥
ನಡೆನೋಡಿ ಪುಣ್ಯಮೀಕ್ಷಿಸಿ- ।
ದೊಡೆ ಪಾಪಂ ಶುಚಿಗಳಪ್ಪ ಜೈನರನೆಂಬರ್ ॥ ೪೫ ॥

ವ॥ ಬಳರಿಗೆಕೊಂಡು ಪೋಗಿ ಕುಱಿಯಂ ತಱಿದಲ್ಲಿಯೆ-
ತಿಂದುಪೀದ್ದರ್ಕ- ।
ಳ್ಗಳನಡಗಿಂಡೆಯಾಡುವರೆ ಮೆಚ್ಚುವರರ್ಚ್ಚನೆಯುಂ-
ತ್ರಿಲೋಕಮಂ- ।

---

೧. ಈ—೧ಯುಂದಲು ತಮ್ಮ ಭವಿಷ್ಯಂ । ಕುಂದಲು೧;

ಗಳನಿಳಯುಂಗೆ ಜೈನನಿಳಯುಕ್ಕತಿಭಕ್ತಿಯಿನೊಯ್ಯೆ-
ಕಾಣಾತುಂ ।
ಮುನಿದು ಕನಲ್ವರಂತವರ್ಗೆ ದುಃಸಹನಾರಕ-
ದುಃಖಭಾಜನಂ ॥ ೪೬ ॥

ಕಂ॥ ಅಡಗಿಂಡೆಯಾಡಿ ಕಳ್ಳಂ ।
ಕುಡಿದುಂ ಪೊಲೆಯರೊಡಗೂಡಿಯಾಡುವರಂ ಕಂ- ॥
ಡಡೆ ನಲಿವರಾಗಳುಂ ಕಂ- ।
ಡಡೆ ಮುಳಿವರು ಸಚ್ಚರಿತ್ರರಂ ದುಶ್ಚರಿತರ್ ॥ ೪೭ ॥

ಚರಿತಂಗಳೊಳ್ನಿಕೃಷ್ಟರ ।
ಚರಿತಮುಮಂ ದೆಯ್ವದಲ್ಲಿಪಶುವಂ ಪಶು ವಂ ॥
ಪಿರಿದಾನುವೋಲ್ವರುತ್ತಮ ।
ಚರಿತ್ರರಂ ಜಿನರನೋಲ್ವರೇ ಪಾಪಿಷ್ಟರ್ ॥ ೪೮ ।

ವೃ॥ ಪದಪಿಂ ಸನ್ಮಾರ್ಗದಿಂದಂ ನಡೆದುಕುಪಥಮಂ-
ಬಿಟ್ಟುನಿಸ್ಸೀಮ ಸೌಖ್ಯಾ- ।
ಸ್ಪದಮಂ ಬೆಳ್ವಾಮಹಾಭವ್ಯರಸುಚರಿತಮಂ-
ಕಂಡುದುರ್ಮಾರ್ಗಮಂ ಪೊ- ।
ದ್ದಿದವಂದಿರ್ತನ್ಮಹಾಭಾಗರನವಯುವದಿಂ-
ಕೆಟ್ಟರೆಂದೂಳ್ವರತ್ಯು- ।
ಗ್ರದವಾಗ್ನಿಸ್ತರ್ವನಾಂತಸ್ಥರನಕಟಕಟಾಬೆಂದ-
ರೆಂಬಂದದಿಂದಂ ॥ ೪೯ ॥

ಕಂ॥ ಮಿಕ್ಕಗುಣಂಗಳ ಭವ್ಯರ- ।
ನುಕ್ಕೆವನಜ್ಞಾನದಿಂದೆ ಕಿಡೆನುಡಿವುದೆ ಬೆ- ॥
ಟ್ಟಕ್ಕೆ ನರಿಯೂಳ್ವಮಾಳ್ಕೆಯೊ- ।
ಲಕ್ಕುಂಯಿತರರಮಹತ್ವಮೇಂ ಕೆಟ್ಟಪುದೆ ॥ ೫೦ ॥

ಮಚ್ಚರದಿಂ ಜಿನಮತಮಂ- ।
ತುಚ್ಚಳನಪ್ಪನ್ಯಸಮಯಿಪೊಲ್ಲೆಂದೊಡದೇಂ ॥

೧. ಇ—ಳು;

ಪೊಚ್ಚಂ ಬೋಕುಮೆವಾಯುಸ- |
ವೆಚ್ಚಮನಿಕ್ಕಿದೊಡೆ ವಾರ್ದ್ಧಿಗಕ್ಕುಮೆಭಂಗಂ || ೫೧ ||
ಕಿಡಿಪೇಂ ಕರ್ಮ್ಮಮನೋಳ್ಪಂ |
ಪಡವೆನೆನುತ್ತಿರಲಾತ್ಮನಾತ್ಮನಕಾಲಂ ||
ಪಿಡಿದು ದಱಿದಱನೆ ಕರ್ಮ್ಮ- |
ಕ್ಕಳಿಪಿಂದೆಳೆದೊಯ್ದು ನೂಂಕುಗುಂ ಸಂಸೃತಿಯೊಳ್ || ೫೨ ||

ವೃ|| ಮತಿಹೀನರ್ಕ್ಕೆಲರಕ್ಕಟೂರ್ದ್ಧ್ವಗತಿಗೊಯ್ಯಲ್ಕಾ-
ಪ್ತರ್ಜೈನೋದಿತ |
ಬ್ರತಮಂ ಕೈಕೊಳಲಾಱದೆಯ್ದೆ ಕುಮತಾಚಾರಂ-
ಗಳಿಂ ಸಂದಧೋ- |
ಗತಿಯಂ ಬೇಗಮೆ ಸಾರ್ವ್ವರಂತುಟೆದಲಿನ್ನೆಂತಪ್ಪನುಂ-
ಸಂದಧೋ- |
ಗತನಾಗಿರ್ದ್ದಪನೊರ್ವ್ವಳನ್ನೆಗೆದಿರಲ್ಕೆಂತಪ್ಪನುಂ ಬಲ್ಲನೇ || ೫೩ ||

ಕಂ|| ಬಿಡದನ್ಯಮಾರ್ಗ್ಗಧರ್ಮ್ಮದಿ |
ನಡೆವಂದದೆ ಜೈನಧರ್ಮ್ಮಮಾರ್ಗ್ಗದೊಳಿಂತುಂ ||
ನಡೆಯಲ್ಬಕ್ಕುಮೆ ಪಾಪಿಗೆ |
ಕಡಲೆಗಳಂ ತಿಂಬವೊಗ್ಗು ಕಲ್ಗಳೊಳುಂಟೇ | ೫೪ ||

ಜಿನಮಾರ್ಗ್ಗಮನೊಲ್ಲದೆ ಬಿ- |
ಟ್ಟು ನಂಬಿಲೋಗರಕುಮಾರ್ಗ್ಗದೊಳ್ನಡೆದಿನ್ನಿಂ- ||
ದ್ರನೆನಪ್ಪೆನೆಂಬನೆಸಕಂ |
ಕನಸಿನ ಭತ್ತಕ್ಕೆ ಗೋಣಿಯಾಂಪಂತಕ್ಕುಂ || ೫೫ ||

ಮಳಿನಾತ್ಮಂ ಧರ್ಮ್ಮದ್ವಿಷ- |
ನಳಿಕನೆನಿಪ್ಪಾಕುದೃಷ್ಟಿಯುಂ ಕಂಡಿನಿಸುಂ ||
ಮುಳಿಯುಂ ಲಬ್ಧಿವಿಹೀನಂ |
ಖಳಕರ್ಮ್ಮಗ್ರಸ್ಥನೆಂಗೆದರ್ಶನ ಶುದ್ಧಂ || ೫೬ ||

ಅಧನಂ ನಿಧಿಯಂ ಪಡೆದಿ- |
ರ್ದ್ದಧಾರ್ಮ್ಮಿಕಂಗಂಜುವಂತೆ ಜೈನಬ್ರತಮಂ ||

ನಿಧಿಯಂ ಪಡೆದಾವಮಾನವ- ।
ನಧಾರ್ಮ್ಮಿಕಂಗಂಜಿ ಮುಚ್ಚಿ೯ಯನುಭವಿಪನದಂ ॥ ೫೭ ॥
ತೆಱನಱಿಯದೊಂದಚಂದಂ- ।
ಜಱುಚುವುದುಂ ಸಚ್ಚರಿತ್ರರಂದುಚ್ಚದುದಂ[1] ॥
ಪಱಿಕತನಂ ನಿಜವೆನಿಪುದು- ।
ಮಱಗುಲಿಯಪ್ಪಂಗೆ ನಾಡೆ ಸಹಜಮಿವಿನಿತುಂ ॥ ೫೮ ॥

ವೃ॥ ದೂಷಿಸಿದಪ್ಪರೆಲ್ಲರುಮನಾಗಳುಮಾರ್ಹತ-
ರೆಂಬರಂತವ- ।
ದ್ದೂರ್ಷಿಸಿದಪ್ಪರೇಂ ಬಱಿದೆ ತಮ್ಮನೆಗಳ್ತೆಗಳಲ್ತೆ ತಮ್ಮುಮಂ ।
ದೂಷಿಸಿದಪ್ಪುವಲ್ಲವೆ ವಿಶುದ್ಧಚರಿತ್ರರೆನಿಪ್ಪ ಜೈನರಂ ।
ದೂಷಿಸಲಾರ್ಗ್ಗೆವಂದಪುದೊ ನಿರ್ಮ್ಮಳರಂ-
ಬ್ರತಯುಕ್ತರಪ್ಪರಂ ॥ ೫೯ ॥

ಕಂ॥ ಚಳಮತಿಗೆ ಧರ್ಮ್ಮಮಂ ನಿ- ।
ರ್ಮ್ಮಳಮಪ್ಪಂತಾಗಿ ತಿಳಿಪುತಿರ್ದ್ದೊಡಮೆಂತುಂ ॥
ತಿಳಿಯದನಂತುಟೆ ತಿಳಿಗುಮೆ ।
ಕೊಳೆವಾವಿಂಗೆನಿತನೋದೆಯುಂ ಗಾರುಡಮುಂ ॥ ೬೦ ॥

ಮುದುಗುದುರೆ ತಿರ್ದ್ದೆ ಬಡವಾ- ।
ದುದೆಂಬತೆಱದಿಂ ಯಥೇಷ್ಟನಂ ಸದ್ಗುರುಗಳು- ॥
ಮಿದಿಯುತ್ತಿರ್ದ್ದೊಡಮೆಂತುಂ ।
ಮೃದುವಪ್ಪನೆಗುಣದೊಳೊಂದಿಯುಂ ನಿಂದಪನೇ ॥ ೬೧ ॥

ಪುಟ್ಟುವಪೊಂದುವರುಜೆಗಿದೆ ।
ನೆಟ್ಟನೆಮರ್ದ್ದೆನಿಸಿನೆಗಳ್ದ ಜಿನಶಾಸನಮುಂ ॥
ಬಿಟ್ಟುಳಿದುದಱೊಳೆಸಗುವವಂ ।
ಪುಟ್ಟದೆ ಮಾಣ್ಬನೆ ಭವಾಬ್ಧಿಯೊಳ್ಮತಿಹೀನಂ ॥ ೬೨ ॥

ಯಮುನೆಂಬಸೋರೆವೊಗಂ ಬಂ- ।
ದು ಮುಳಿಗಿಸಲ್ಜನ್ಮಜಳಧಿಯೊಳ್ ದೇಹಬಹಿ- ॥

೧. ಇ—ರಂ;

ತ್ರಮದೊಡೆಯೆ ಜೈನಪೆಂಬಾ- ।
ಪ್ರಮಾದವಲಗೆಯನೆ ಪಿಡಿಯದವನಡಿಗಿಳಿಗುಂ ॥ ೬೩ ॥

ಒಳ್ಳಿದನೆನಿಸದೆ ಬಳ್ದಂ ।
ಕಳ್ಳರೊಳೊಡಗೂಡಿಯುಂ ಮಹಾತಪಮಂ ಕೈ- ॥
ಕೊಳ್ಳದೆ ನರಕದೊಳದ್ದಂ ।
ಕಳ್ಳನತಾಯಂತೆ ಮಱುಗುತಿರ್ಪ್ಪದೆ ಕಡೆಯೊಳ್ ॥ ೬೪ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-
ದಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವ
ವಿರಚಿತಮಪ್ಪಸಮಯಪರೀಕ್ಷೆಯೊಳು
ಕುದೃಷ್ಟಿಲಕ್ಷಣನಿರೂಪಣಂ
ತ್ರಯೋದಶಾಧಿಕಾರಂ
ಶ್ರೀ ಶ್ರೀ ಶ್ರೀ

॥ ಶ್ರೀ ॥

ಚತುರ್ದಶಾಧಿಕಾರಂ

ಶ್ರೀದಿವಿಜರಾಜಪೂಜಿತ ।
ಪಾದಾಂಭೋಜದ್ವಯಂ ಗುಣಾಂಬುಧಿ ಮುಕ್ತಿ-॥
ಶ್ರೀದೈತನೆಮಗೆ ಮಾಳ್ಕೆ ಶು- ।
ಭೋದಯಮಂ ದುಶ್ಚರಿತ್ರತನುಚಂಡಕರಂ ॥ ೧ ॥

ಪರಮಸುಖಕ್ಕೆಯ್ದಿಪ ರುಷಿ- ।
ಯರನೊಲ್ಲದೆ ದುಶ್ಚರಿತ್ರರಂ ಲೋಲುಪರಂ ॥
ಪರಲಿಂಗಿಗಳಂ ಪೊರ್ದ್ದಿ- ।
ಪ್ಪಿರವಿದುಪಾಷಂಡಿ ಮೂಢವೆಂಬುದದಕ್ಕುಂ ॥ ೨ ॥

ದೋಷಿಯರುಂತು ಸುಕರ್ಮ್ಮಂ ।
ದೋಷಾವಿಳಮಪ್ಪುದದೆವಿಕರ್ಮ್ಮಂ ನಿಲಲಾ- ॥
ದೋಷದೊಳೇಕವಿಮರ್ಶ್ಮಂಸಂ ।
ಪಾಷಂಡಿಯೆನಿಕ್ಕುಮಲ್ಲಿನಿಂದ ದುರಾತ್ಮಂ ॥ ೩ ॥

ಆರತಪಮುಗ್ರಮುಪಶಮ-।
ಮಾರೊಳು ನೆಲಸಿಪ್ಪುದಖಿಳ ಜೀವಂಗಳಿಗಿ- ॥
ನ್ನಾರೋದಯಪರರುತ್ತಮ- ।
ರಾರವರ್ಗಳು ಯತಿಗಳೆಂದು ನಂಬುವುದಱಿವಂ ॥ ೪ ॥

ದೆಯ್ವಂಶುಚಿಯೆಂದಱಿದಾ ।
ದೆಯ್ವದ ಪೇಳ್ದೋದಿನಿಂದೆ ಮಾಳ್ಪುದುಮದುವುಂ ॥
ದೆಯ್ವಮೆ ವರವಿಲ್ಲದೊಡೇ- ।
ಗೆಯ್ವುದೊ ತಪಮಾಳ್ದನಿಲ್ಲದಾಳಿನಮಾರ್ಗ್ಗಂ ॥ ೫ ॥

ಮುಂಬಿಟ್ಟು ಪಲರಮನೆಗಳೊ- ।
ಳಂ ಬಿಡದೆ ತೊಳಲ್ದುತಿರಿವರೆಸಕಂ ಪೊಲ್ಲೆಂ- ॥
ದೆಂಬುದನಾರಿಯರಿಕ್ಕಿದೊ- ।
ಡುಂಬುದು ಕೂಳ್ಪಕ್ತನೀತನೆಂದಡೆ ಗೊರವರ್ ॥ ೬ ॥

ಪಶುವಿನತೊವಲೊಳ್ತೀವಿದ ।
ಕಿಸುಗುಳಮೆನಿಸಿರ್ದ್ದ ತುಪ್ಪಮಂ ನೀರಂ ಸಂ- ॥
ಕಿಸದುಂಡು ದಾನಿಯುಂ ಬ- ।
ಣ್ಣಿಸುವಮ್ರ್ಮಿಷ್ಟಾನ್ನದಾತನೆನುತುಂ ಗೊರವರ್ ॥ ೭ ॥

ಉಂಡಲ್ಲಿಯೆ ನೀಗ್ರ್ಗಡಿವರ- ।
ನುಂಡಲ್ಲಿಯೆ ಖಾ^೧ದ್ಯಮುಪ್ಪವಂ ಮೆಲುವವರಂ ॥
ಕೊಂಡೊರಿವರೆಂತುಮುನಿಗಳ ।
ಖಂಡಿತ ತಪದಿಂದೆ ನೆಗಳ್ದರಾರೆಂದೆನ್ನರ್ ॥ ೮ ॥

ತಂಬುಲಮನಿಕ್ಕಿ^೨ದೊಡಮೆಂ- ।
ತುಂ ಬೇಡಿಯುಮಲ್ಲಿಮೆಲ್ಲರುಂಡಿಂಬಳಿಯಂ ॥
ತಿಂಬಕ್ರ್ಜಜ್ಜಯುಮಂ ಸೀ- ।
ತಾಂಬುಗಳಂ ಕುಡಿವರಱಿತವಿಲ್ಲದಶೈವರ್ ॥ ೯ ॥

ವೃ॥ ಪಸಿವಾದಾಗಳೆ ಬೇಗಮುಂಡುಪಲವುಂ-
ಪರ್ಯ್ಯಾಯದಿಂ ನೀರನೀಂ- ।
ಟಿಸರಾಗಾತ್ಮಕರಾಗಿ ರಾಜವಿಟಚೋರವ್ಯಾಪ್ತಿಯಂಪೇಳ್ದು ತ- ।
ಮ್ಮ ಸಮಾನಂ ಪೆರರಿಲ್ಲ ಸಯ್ಯಮಿಗಳೆಂದೆಲ್ಲಂದದಿಂ-
ಪೋಗಿ ಪಾ- ।
ಡಿಸುವಕ್ರ್ಕಳಮುಖ್ಯರಾಮುನಿಗಳೇನಂ-
ಮಾಡರೇಗೆಯ್ಯರೋ ॥ ೧೦ ॥

---

೧. ಕ—ವೂ; ೨. ಇ—ಕ್ಕ;

ಕಂ|| *ಸಮೆಯಿಗಚರ್ಚ್ಯವಪಲ್ಲಂ ಸುಲಿ |
ವೃ|| *ಪುಣ್ದ್ದು ತಪಮಂ ಮಾಡುತ್ತುಮಿ- |
ರ್ದ್ದಲ್ಲಿಯುಂ ವನಿತಾಸಂಗಮನಾಸೆವಟ್ಟಳಿಪಿನಿಂ-
ಹಾಸ್ಯಕ್ಕೆಪಕ್ಕಾಗಿ ಚೆ- |
ನ್ನನೆಪಾಟಿಪ್ಪರಾದಾಗಳುಂ ಗೊರವರೇನಂ-
ಮಾಡರಜ್ಞಾನಿಗಳ್ || ೧೧ ||

ಕಂ|| ಸದಮಳ ಚರಿತ್ರದಿಂ ನೆಗ- |
ಳದೆಮೆಚ್ಚಿದತೆಱದೆ ನಲಿದು ಸವಳದೆ ಸಾಧು- ||
ತ್ವದೊಳೊಂದಿ ಬೆಣ್ಣೆಯಂ ನುಂ- |
ಗಿದ ಬೆಕ್ಕಿನತೆಱದಿನಿಪ್ಪಮುನಿಯುಂ ಮುನಿಯೇ || ೧೨ ||

ಆಡದ ಗೊಡ್ಡಂಗಳನೊ- |
ಲ್ದಾಡಿ ಕೆಲಮುರ್ಖನಿಗಳಂತ್ಯಜೊಳ್ಮುಕ್ತಿಯೊಳಂ ||
ಕೂಡುವೆವೆನುತಿಪ್ಪರದೇಂ- |
.ಕೂಡಲು ಬಪ್ಪಂತೆಮುಕ್ತಿಮನೆವೆಂಡತಿಯೇ || ೧೩ ||

ವೃ|| ಅಪದಸ್ಥಂ ವಿಷವಕ್ತ್ರಕಂ ದ್ವಿರಸನಂ ಮಿತ್ರದ್ವಿಷಂ-
ವಕ್ರಗಾ- |
ಮಿ ಪರೋಪದ್ರವಕಾರಿ ದುಷ್ಟಮತಿ ಛಿದ್ರಾನ್ವೇಷಿ ಹಿಂ-
ಸೈಕಲೋ- |
ಲುಪನತ್ಯಾಮಿಷದತ್ತಚಿತ್ತನೆನೆಪಾವಂ ಪೋಲ್ತು-
ಲೋಕಕ್ಕೆ ವ- |
ರ್ತಿಪ ದುರ್ವೋದನನುಗ್ರನಂ ತಪಸಿಯೆಂಬ-
ಮೂರ್ಖಧರೀಲೋಕದೋಳ್ || ೧೪ ||

ಕಂ|| ಎಱಗಿ ಬಸನಕ್ಕೆ ತಮ್ಮುಮ- |
ನಱಿಯದೆ ಪೊತ್ತೊಂದು ಬಣ್ಣವಾಗಿಪ್ಪವರೇ-||

*ಈ ಪದ್ಯದಲ್ಲಿಯ ಸಾಲುಗಳು ಒಂದು ಕಂದದ ಮತ್ತು ಬೇರೊಂದು ವೃತ್ತದ ಸಾಲುಗಳಾಗಿವೆ. ಇವಕ್ಕೆ ಸಂಬಂಧಿಸಿದ ಕಂದ ಮತ್ತು ವೃತ್ತ ಅನುಬಂಧದಲ್ಲಿ ೧೪ನೆಯ ಅಧಿಕಾರದ ೧, ೨ ಪದಗಳಾಗಿ ಬಂದಿವೆ.

ಸಱಿವರೆ ಜೈನರ ತೆಱದಿಂ ।
ಪಱಿದಿಕ್ಕಲು ಬಲ್ಲಿತಪ್ಪ ಕರ್ಮ್ಮದತೊಡರಂ ॥ ೧೫ ॥

ಸೋಧಿಸದಟ್ಟುದನುಂಬ- ।
ವ್ಯಾಧಿಸುವಬ್ಬಡದೆ ಜೆಡೆಗಳೊಳಗಣಪೇನಂ ॥
ಬಾಧಿಪರಿಲಿಯಂ ಬೆಕ್ಕಂ[1]. ।
ಬಾಧಿಸಲಾಗೆಂದು ಪೆಱರ್ಗೆಪೇಳ್ವಗ್ಗೊರವರ್ ॥ ೧೬ ॥

ತತ್ತಬಳೆತಾಳಗೊಟ್ಟೆಯೆ- ।
ನುತ್ತಾದಂರುಷಿಯರೊಡನೆ ಜಡಮತಿಗಳು ಪೋ- ॥
ರುತ್ತಿಪ್ಪರಲ್ಲದೆಂತ- ।
ತ್ಯುತ್ತಮಸನ್ಮಾರ್ಗ್ಗದೊಳಗನರಿವರೆಪೇಳಿಂ ॥ ೧೭ ॥

ವೃ॥ ಅಱಿಯಜ್ಜೀವದ ಕರ್ಮ್ಮದೊಂದು ಗತಿಯಂ ।
ಸನ್ಮಾರ್ಗ್ಗಮಿಂತಪ್ಪುದೆಂ- ।
ದಱಿಯಜ್ಜೈನರ ಮಾರ್ಗ್ಗದಿಂದೆ ತಿಳಿಯಲ್ತ-
ಮ್ಮಿಚ್ಛೆಯಿಂದಂ ಕೆಲ- ।
ರ್ಜ್ಜಱುಚುತ್ತಿಪ್ಪರಿದಕ್ಕುಮೆಂದು ಮಱಿಯ-
ಮ್ಮೇಲಪ್ಪಕಾರ್ಯ್ಯಕ್ಕೆ ಬೊ- ।
ಬ್ಬಿಱಿದಾರ್ದ್ದೆತ್ತಲೆ ಬಲ್ಲರಲ್ಲದಱಿಯಸ್ಸರ್ವ್ವಜ್ಞ-
ಸದ್ಭಾವಮಂ ॥ ೧೮ ॥

ಕಂ॥ ಜಾಱಲ್ತುಮುಕ್ತಿಪಥಮಂ ।
ತೋಱಲ್ಕರಿದಪರೆ ಜೈನರಲ್ಲದಮವರಂ ॥
ದೂಱಲ್ಕೆವೇಡ ಕುರುಡಂ ।
ತೋಱಿದಪನೆ ಕಟ್ಟಿಬಡಿದಡಂ ಸತ್ಪಥಮಂ ॥ ೧೯ ॥

ಕಟ್ಟಳಿಪರಾಗಿ ಶಿಷ್ಯಂ ।
ಕೊಟ್ಟುದನೊಲ್ದಿಸಿಕೊಳ್ವರಾಪ್ತನರೂಪಂ ॥
ಸಿಟ್ಟಿಸುವುದೆನ್ನರಱನಂ ।
ಬಿಟ್ಟೆಸಪವ್ವಾದಹೀನರೆನಿಸಿದಬೋಧರ್ ॥ ೨೦ ॥

೧. ಇ—ಕ್ಕಿಂ;

ಸೀರೆಗೆವಿಮಿನಿಸಾನುಮಲಂ- ।
ಕಾರಕ್ಕಂ ಮಱೆಗಿ ಶಿಷ್ಯನಂ ಮುನ್ನಂ ಸ- ॥
ಚ್ಚಾರಿತ್ರಂ ಮಾಡದೆ ದೇ- ।
ಹಾರಮನೀಯಲ್ಕೆಮಱುಗುತಿಪ್ಪಗ್ಗೊರವರ್ ॥ ೨೧ ॥
ತನ್ನೊಲ್ದಮಾರ್ಗ್ಗದಿಂ ಶಿ- ।
ಷ್ಯಂ ನೆಗಳೆಮಲಿಂಗದವರಕಂಡಡೆ ಸಾ- ॥
ಲ್ಗಂ ನಿಚ್ಚಲುಮೆಂಬಪ್ಪಿರಿ- ।
ದುನ್ನತಿಯುಮೊಗರುಗಳಿಂತೆ ನಿಯಮಿಸರ್ವೇಳ್ಕುಂ ॥ ೨೨ ॥
ಪತ್ತಿಸುಗುಂ ದಯೆಯಿಂ ಸಲೆ ।
ಪತ್ತಿಸುಗುಂ ಸಚ್ಚರಿತ್ರಮುಂ ಸದ್ಗುರುಪೋ- ॥
ಪತ್ತಲೆ ಪೋಕೆಮತಿಷ್ಯನೆ- ।
ನುತ್ತುಂ ಬಿಟ್ಟಿಪ್ಪಗುರುವೆ ಸದ್ಗುರುವಲ್ಲಂ ॥ ೨೩ ॥

ವೃ॥ ಸವಳದೆ ಸಂಜೆವಾಷಿದಪೆವೆಂದು ನಿಬಂಧದೆಕಚ್ಚಿರ್ಣ-
ಕಾಲ್ಗಳಂ ।
ದಿವಸಕರಂಗೆನೀದ್ದ್ರಳಿಕಿದೇಗುಲಮಂ ಬಲಗೊಂಡು-
ಮೂಱುಸೂಳ್ ।
ಶಿವಶರಣೆಂದುನಿಂದೆಱಗಿ ಬಂದು ಯಥೇಷ್ಟದಿ-
ನಾಡಿಮತ್ತೆಯುಂ ।
ಶಿವಗತಿಗೊಳ್ಗೆಯೆಂಬರಿನಿತುಳ್ಳಡೆಧಾರ್ಮ್ಮಿಕ-
ರಲ್ತೆಶೈವರೊಳ್ ॥ ೨೪ ॥

ಕಂ॥ ಲಿಂಗಕ್ಕೆರಗುವುದುಂ ಪಾ- ।
ರ್ವ್ವಂಗೆಲೆಯೆರಡಡಕೆಯೊಂದನೀವುದುಮಿವು ಧ- ॥
ರ್ಮ್ಮಂಗಳು ಬ್ರತಗುಣಚಾರಿ- ।
ತ್ರಂಗಳಿವೊಂದಿನಿಸುಮಿಲ್ಲ ಶೈವರಿಗೆಲ್ಲಂ ॥ ೨೫ ॥

ವೃ॥ ತುರಿಪದೆಕೊಂಡು ಪೋಗಿ ಕರವತ್ತಿಯನೋತದ-
ನಿಟ್ಟುಬಾಸುವಂ ।
ನರಕದ ಮೇಲೆ ಬಾಸಿಬಳಿಕೊಯ್ದದನೋಡಗೆದೆ-
ತೀವಿತಂದು ಬಿ- ।

೧. ಇ, ಈ—ವ;

ತ್ತರದೆಸಣಂಗೆ ಬಾಸಲೆಳೆದಾಜಳದಿಂಡೆಯು-
ಮೀಸಿಲಿಂಗದೇ- ।
ವರನದನರ್ಚ್ಚಿಸಕ್ಕಟಕದಣ್ಣೆಲುಗಳ್ಗತಿಗೊಳ್ಪತಕ್ಕಿನಿಂ ॥ ೨೬ ॥

ಕಂ॥ ರೂಢಿಯ ಶಲ್ಯಧರಂಗಿವು ।
ನಾಡೆಯುಮುಚಿತಂದಲೆಂಬವೋಲಭಿಷೇಕಂ ॥
ಮಾಡುವರೊಲ್ದಂ ಮಾವಿಗ[1] ।
ಕೋಡಿಂ ಪಂ[2]ದೊವಲನೀರಿನಿಂ ಜೇನೆಯ್ಯಿಂ ॥ ೨೭ ॥

ಲಿಂಗಂಗಡ ದೆಯ್ವಂ[3]ಚರಿ- ।
ತಂಗಡ ವೇದೋಕ್ತವಱನದೆಸೆಯುಱಿ[2]ಯದ ಪಾ- ॥
ರ್ವ್ವಂಗಡಪಾತ್ರಂ ತನಗೆನ- ।
ಲಿಂ ಗುಣಮುಱಿಸುವುದೆ ಶೈವ ಬೋಧರೊಳೆಂತುಂ ॥ ೨೮ ॥

ಪಾಗಕ್ಕೆಕೊಂಡುದರ್ಬ್ಬೆಯು- ।
ಮಾಗಳುಮದನಿಟ್ಟುಕೊಂಡು ಬೆರಲೊಳು[4]ಬೋಧೋ[4]- ॥
ದ್ಯೋಗದೊಳುಲಿಂಗ ಭಕ್ತನಿ- ।
ಯೋಗದೊಳಿರ್ದ್ದಪ್ಪರಱನನಱಿವರತೆಱದಿಂ ॥ ೨೯ ॥

ವೃ॥ ಕೊಲೆಯುಮಸತ್ಯಮುಂ ಕಳವುಮನ್ಯವಧೂಜನ-
ಸಂಗಕಾಂಕ್ಷೆಯುಂ ।
ಫಲಮಧುಮದ್ಯಸೇವೆಯುಮಧರ್ಮ್ಮಮಿವಂ-
ಬಿಡು ಸಚ್ಚರಿತ್ರನಾ- ।
ಗೆಲೆ ಶಿವಭಕ್ತ ಚರ್ಮ್ಮಜಳಮಂ ತೊಱೆ[3] ಸಂತತ-
ಮೆಂದು ಪೇಳ್ವ ನಿ- ।
ರ್ಮ್ಮಳಶಿವಯೋಗಿಯಿಲ್ಲದಱಿನಂತವರಲ್ತೆ-
ಯಥೇಷ್ಟಚೇಷ್ಟಿತರ್ ॥ ೩೦ ॥

ಗತದೋಷಂ ಜಿನನಾಪ್ತನೆಂದಱಿಪಿ ಸಮ್ಯಜ್ಞಾನ-
ದೊಳ್ಮಾಡಿ ಸು- ।
ವ್ರತಚಾರಿತ್ರಮನೋಜೆಯಿಂ ಕಲಿಸಿ ಸಮ್ಯಜ್ಞಾನ-
ಸನ್ಮಾರ್ಗ್ಗ ಸಂ- ।

೧. ಇ. ಈ—ನ; ೨. ಇ—ರಿ; ೩. ಇ—ದ; ೪. ಇ, ಈ—ಳಚೋರೋಳ;

ಯುತನಪ್ಪಂತಿರೆ ಮಾಡವೇಳ್ಪುದು ಯಥಾರ್ತ್ಥಂ-
ಜೈನನಂ ಮಿಕ್ಕವಂ- ।
ಗೆ ತಗುಳ್ದಿಂತವನೆಯ್ದೆ ಪೇಳ್ದಫಳವೋಂ-
ಸದ್ವೃಷ್ಟಿಯಲ್ಲೀತಱಿಂ || ೩೧ ||

ಕಂ॥ ಪೊನ್ನಂ ಬೆಳಗುವವೋಲ್ಕ- ।
ಬ್ಬೊರ್ನ್ನಂ ಬೆಳಗಿದೊಡೆ ಬಣ್ಣಮೇನೆಸಗುಮೆ ಭ- ||
ವ್ಯೋನ್ನತನಂ ತಿಳಿಪುವವೋ- ।
ಲನ್ನಾನಿಗೆ ತಿಳಿಪೆವಿಮಳನಕ್ಕುಮೆ ಪಿರಿದುಂ || ೩೨ ||

ಮನವಾರ್ತ್ತೆಗೆ ಮಾಹೇಶ್ವರ ।
ತನಕ್ಕೆಗುರುವೆಂಬುದಿಲ್ಲತನತನ೧ಗಾ..೧ ||
ಜ್ಜಿನಸಮಯಿಗೆ ಗುರುಗಳು ನಿ- ।
ಚ್ಚನಿಚ್ಚಲುಂ ನಿಯಮದಿಂದೆ ಶಿಕ್ಷಿಸವೇಳ್ಕುಂ || ೩೩ ||

ಪೊಸಮಡಕೆಯೊಳಡುವಬ್ಬ- ।
ಡ್ಡಿಸಿದ೨ಪ್ಪನ್ನೀಮುಮು೨ಣ್ಬುದೆಂದುಕರಂ ಪಾ- ||
ತ್ಥಿಸುವಗ್ಗುರುಗಳನಿಂತ- ।
ಪ್ಪ ಸುಚರಿತರ್ ಜೈನರಲ್ಲದವರ್ಗಳಶಿಷ್ಯರ್ || ೩೪ ||

ವೃ॥ ಮೊದಲೊಳ್ದೀಕ್ಷೆಯನಿತ್ತುಸಚ್ಚರಿತದಿಂ ದೇವಾರ್ಚ್ಚನಂ-
ಮಾಳ್ಪುದೆ- ।
ನ್ನದೆ ಮಾಂಸಂ ಮಧುಮದ್ಯಮೆಂಬಿನಿತುಮಂ-
ಸೇವಿಪ್ಪುದಂತಲ್ಲಿ ಪೊ- ।
ರ್ದದು ದೋಷಂ ದಿಟಮೆಂಬವೋಲುಸುರದಿದ್ದಿ-
ಪ್ಪಾತನಂ ಯೋಗಿಯೆಂ- ।
ಬುದೆ ಸನ್ಮಾರ್ಗ್ಗವಿಹೀನನಂ ಕಪಟನಂ ಪಾಪಿಷ್ಠನಂ-
ಕಷ್ಟನಂ || ೩೫ ||

ಕೊಲ್ಲದಿರೆಂಬಕೊಂಕಿ ನುಡಿದಕ್ಕಟನೀಂ ನರಕಕ್ಕೆಱಿಕ್ಕಟಂ ।
ಸಲ್ಲದಿರೆಂಬ ಪಾದರದ ಪಂಬಲನೀಂ ಬಿಡುವೆಂಬ೩. . .೩ ।

---

೧. ಈ—೧ಗೊಲ್ವ೧; . ೨.೩, ಈ—ಪಾರ್ವ್ವರು೩. ೩—೩ತೃಷ್ಣೆಯಂ೩;

ಗೆಲ್ಲದಿರೇವೆನೆಂಬ ಕಳಲಾಗದುಮೀಗಲಶಕ್ಯಮೆಂಬ ಮಾ-।
ತಲ್ಲದೆ ಮಂಗಳಂ ಪೆಱವು ಮಂಗಳವಿಲ್ಲೞಿದೇಂ ಜಿನೇಶ್ವರಾ ॥ ೩೬ ॥

ಕಂ॥ ಎಂತೆಂತುಪಿಕ್ಕಿನೋಳ್ಪಡ- ।
ಮಂತಂತಾಪ್ತನೊಳಮಾಗಮಂಗಳೊಳಂ ಮ- ॥
ತ್ತಂತವರಚರಿತ್ರದೊಳ ।
..[1]ತ್ಯಂತಂ ಮುಖ್ಯಮುಪ್ಪದದೆ ತತ್ಸಮಯಂ ॥ ೩೭ ॥

ವೃ॥ ಅನುಪಮಶಾಂತಮೂರ್ತಿಯೆನಿಪಾಪ್ತನೆಯಾಪ್ತ-
ಮುಖಾರವಿಂದ ಸಂ- ।
ಜನಿತ ದಯೋಕ್ತಿಯಿಂ ದಯೆಯೊಳೊಂದಿದ-
ಶುದ್ಧಚರಿತ್ರದೊಳ್ಪಿನಿಂ ।
ಜಿನಸಮಯಂ ಜಗಕ್ಕೆದಯೆಯಂ ಸಲೆಬೀಱುಗ-
ಮಾವಮೆಯ್ಯೊಳೊಂ- ।
ದಿನಿಸುಮನಪ್ಪಡಂ ದಯೆಯನನ್ಯರೊಳಂ ಪಡೆಯಲ್ಕೆ-
ಬಕ್ಕುಮೇ ॥ ೩೮ ॥

ಕಂ॥ ದಯೆಮೂಲಂ ಧರ್ಮಕ್ಕಂ ।
ದಯೆಜೈನದೊಳಲ್ಲದಿಲ್ಲಮುಗ್ಧಜನಂಗ- ॥
ಳ್ದಯೆ ತಮಗುಂಟೆಂಬನ್ನೆ- ।
ರ್ದ್ದಯರಪ್ಪುದನಱಿಯುತಿರ್ದ್ದು ಮೋಹಿಸುತಿರ್ಪ್ಪರ್ ॥ ೩೯ ॥

ವೃ॥ ಘನರೌದ್ರಾತ್ಮಕನುಗ್ರನಾಪ್ತವಚನಂ ತಾನಲ್ಲ-
ಮತ್ತೋರ್ವ್ವ ಪಾ- ।
ರ್ವ್ವನಪುತ್ರಂಗತನಾದ ಮಾಣಿಯೊಡಲಂ-
ಪೊಕ್ಕಿರ್ದ್ದತಲ್ಲಾಕುಳೇ- ।
ಶನ ಪೇಳ್ದಾಗಮಮುಂ ದಯಾನ್ವಿತಮುಮಲ್ಲಾ-
ಚಾರದೊಳ್ನೋಳ್ಪುದೊಂ-- ।
ದಿನಿಸಾನುಂ ದಯೆಯಿಲ್ಲ ಭಾವಿಸುವೊಂಡಿತೆಲ್ಲಂದದಿಂ-
ಶೈವರೊಳ್ ॥ ೪೦ ॥

---

೧. ಇ—ಮ;

ಕಂ|| ದಯೆಮೂಲಂ ಜಿನಮತದೊ- |
ಳ್ದಯೆಬೌದ್ಧರೊಳುಂಟು ಕಿಱಿದುಮಾಹೇಶ್ವರರೊ- ||
ಳ್ದಯೆಯಿಲ್ಲಾ ವೈಷ್ಣವರೊ- |
ಳ್ದಯೆಯಿಲ್ಲಾಗಮದೊಳಾಪ್ತನೊಳ್ನಡವಡೆಯೊಳ್ || ೪೧ ||

ಎಲೆಹರಿಹರರುಂ ರೌದ್ರಾ- |
ವಿಳರಲ್ಲ ದಯಾತ್ಮರೆಂದು ಪೂಣ್ದೊಡೇನೋ ||
ಕಳಶದ ಮೇಗಣತಿಸುಳದ |
ವಿಳಾಸಮುಂ ಮಿಱುಪಚಕ್ರಮುಂ ಸೂಚಿಸವೇ || ೪೨ ||

ನರಸಿಂಹಸಾಹಿರಣ್ಯಾ- |
ಸುರನಂ ಗಜದೈತ್ಯನಂಹರಂ ಸೀಳ್ದಭಯಂ- ||
ಕರರೂಪೆ ಪೇಳ್ಗುಮಾಯಿೀ- |
ರ್ವ್ವರದಯೆಯಿಂ ದೇವಕುಲದ ನೆಲೆಗಳೊಳೆಲ್ಲಂ || ೪೩ ||

ದಯೆ ತಮ್ಮಾಪ್ತರೊಳಿಲ್ಲದ |
ದಯೆಯುನವರ್ಕ್ಕದ್ದುತಪ್ಪರೇಲಿಂಗಿಗಳಾ ||
ದಯೆ ಜಿನನೊಳುಳ್ಳಕತದಿಂ |
ದಯೆಯುನೆಮುಂದಿಟ್ಟು ಜೈನರೆಸಗುತ್ತಿಪ್ಪರ್ || ೪೪ ||

ಧ್ಯಾನಿಪೊಡಾಪ್ತಂ ರೌದ್ರ- |
ಧ್ಯಾನಿ ಮಹಾಬ್ಯಸನಿಯಿಂತೆ ತಾಮುಂ ರೌದ್ರ- ||
[1]........... ....[1] |
ಧ್ಯಾನಿಗಳಾಗಲ್ತೆ ಬಗೆವರೇಂ ವಿಸ್ಮಯಮೋ || ೪೫ ||

ರಾಗದ್ವೇಷಂಗಳ್ತ- |
ಮ್ಮಾಗಿರೀಶನೊಳಿಡಿದು ತೀವಿದಂತಿರ್ದ್ದವು ಮ- ||
ತ್ತಾಗುಣಮಾತನಸಮಯಿಗೆ |
ಯೋಗಗ್ರಂಥಂಗಳೆಲ್ಲಿಬಂದವೊಚೋದ್ಯಂ || ೪೬ ||

೧. ಇ, ಈ—೧ಧ್ಯಾನಿಗಳಾಗದೆ ಧರ್ಮ್ಮ೧;

ವೃ॥ ದಯೆಯುಂ ಸದ್ವೃತ್ತಮುಂ ರುದ್ರನೊಳಱಿಸು-
ವೊಡಿಲ್ಲಂತವಂ ಪೇಳ್ವಡೆಂತುಂ।
ದಯೆಯೊಳ್ಕೂಡಿರ್ದ್ದ ಸದ್ವೃತ್ತಮನದನಱಿಗುಂ-
ಕಟ್ಟಿಕೊಂಡೀಶಭಕ್ತ-।
ರ್ದ್ದಯೆಯಯಂ ಸನ್ಮಾರ್ಗ್ಗಮಂ ಪೇಳ್ವಡೆ ಮಟದೊಳಗಾ-
ಪೊಸ್ತಕಂ ಬೆಚ್ಚನಿಕ್ಕುಂ।
ದಯೆಯುಂ ಸದ್ವೃತ್ತಮುಂ ಶೈವರನಡವಳಿ-
ಯೊಳ್ನೋಪ್ಪಡಿಲ್ಲೆಂದುಮೆಂತುಂ ॥ ೪೭ ॥

ಉಡುವುದು ಚರ್ಮ್ಮಮುಂಬುದು ಕಪಾಳಮು-
ದಲ್ಲದೆಪೇಸದಾಗಳುಂ।
ತುಡುವುದು ಶಲ್ಯದೊಳ್ಸಮೆದ ಭೂಷಣ-
ಮಿಪ್ಪೆಡೆಕಾನಕೋಪದಿಂ-।
ಪಿಡಿವುದು ಶೂಲಮಿಂತುಟು ನಿಜಾತ್ಮಗನ-
ಮಾರ್ಗ್ಗಮದಂ ಬಿಸುಟ್ಟು ಮೀ-।
ಗಡಿನವರೇಕೆ ಸಚ್ಚರಿತರಾದಪೆವೆಂಬರಿದೇಂ-
ವಿಡಂಬಮೋ ॥ ೪೮ ॥

ಕಂ॥ ಕತೆಯುಲ್ಲದಂತುಟೇ ಪಶು-।
ಪತಿಚರಿತಂ ಪುಸಿಯನಲ್ಕೆ ಬೇಡೀಗಮಹಾ-॥
ಬ್ರತಿಗಳೆವೇಂದಲುವಂತಿವೆ।
ತೊಟ್ಟುಸುತ್ತಿಯೊಳಮುಂಡಪರ್ತ್ತತ್ಪಥದಿಂ ॥ ೪೯ ॥

ಕ್ರಮದಿಂ ವರ್ತ್ತಿಸುವಾಕಾ-।
ಳಮುಖಾಖ್ಯಕಪಾಳಿಪಾಶುಪತಶೈವರೊಳೋ-॥
ರ್ವ್ವಮಹಾಬ್ರತಿಗೊರವಂ ರು-।
ದ್ರಮಾರ್ಗ್ಗದಿಂ ನಡೆವರುಳಿದಮೂವರ್ನ್ನಡೆಯರ್ ॥ ೫೦॥

ಸ್ವಪಚರ್ನ್ನೆಗಳ್ದ್ದಂದಂದದೆ।
ಸ್ವಪಚಾಚಾರಮಿದೆಂದುಪೇಸಿ ಬಿಡದೆಸಗುವುದುಂ॥

---

೧. ಇ, ಈ—ಪ್ತ;

ತಪಮೆಂದೊಡಿನ್ನದೇನೆಂ- ।
ದಪುದೋಶೈವಂಗೆ ನೆಗಳಲಾಗದುದುಂಟೇ ॥ ೫೧ ॥

ಅಱಿಗುಲಿಗೊರವಸ್ಸ್ವರ್ಪಿಸೆ ।
ಪಱಿದಿದ್ದಾರುದ್ರಲಿಂಗಮದು ದೆಯ್ವಮೆನು- ॥
ತ್ತೆಱಗುವರೆಂದಡೆ ಮತ್ತಿ- ।
ನ್ನಱಿತಮನಱಿಸಲ್ಕೆವೇಡ ಮಾಹೇಶ್ವರರಂ ॥ ೫೨ ॥

ವೃ॥ ಪೇಸದೆ ಚರ್ಮ್ಮವಂ ಪೊದೆವಸುತ್ತಿಯೊಳಂ-
ಬಿಡದುಣ್ಬಶಲ್ಯಮಂ ।
ಪೇಸದೆತೊಟ್ಟು ಪೇಸಿಕೆಯುಮಿಲ್ಲದೆ ಕೊಲ್ವನ-
ನಾಪ್ತನೆಂಬರಿಂ ।
ಪೇಸದೆ ತಾನುಮಾಪ್ತನವೊಲಾಚರಿಪಂ ಪ್ರತಿಯೆಂ-
ಬರೆಂದೊಡಿಂ ।
ದೋಸಿಗರಾರೊ ಪೇಸಿಕೆಯುಮಿಲ್ಲದರಾಗ್ಗಳ-
ಶೈವರಂದದಿಂ ॥ ೫೩ ॥

ಕಂ॥ ಆಗುರಿಯಾಗೆಂದೆಂಬವೊ- ।
ಲಾಗಿರಿಜಾಧಿಪನದೊಂದು ದೇವತ್ವಕ್ಕಂ ॥
ವಾಗುಣಿಗಳೆ ಸಮಧರ್ಮ್ಮ- ।
ದ್ಯೋಗಿಗಳೆನಿಪವರೆ ಭಕ್ತರಾಗಲೆತಕ್ಕರ್ ॥ ೫೪ ॥

ಅಱಿನಿಂತುಟೆಂದು ನಿಶ್ಚಯ ।
ಮಱಿವುವದಂತಿಕ್ಕೆ ಬಸನದೊಳ್ತೊಡರ್ದಕರಂ ॥
ಮಱುಗಿಮತಿಗೆಟ್ಟು ತಮ್ಮಮ- ।
ನಱಿಯರಣಂ ಜ್ಞಾನಹೀನರೆನಿಸಿದದೇವರ್ ॥ ೫೫ ॥

ದೇವಕ್ಕಳಾದರೆಲ್ಲಂ ।
ಸೇವಿಸುವಮ್ಮಕ್ಕರೀಗಕೌಳಾಚಾರ್ಯ- ॥
ಸ್ಸೇವಿಪರೆಂದೊಡೆ ಮದ್ಯಮ- ।
ನೇವೊಗಳ್ವುದೊ ದೂಷಿಸಲ್ಕೆ ಸಲ್ಲದನೆಂಬರ್ ॥ ೫೬ ॥

ನುಡಿವವರೆತ್ತಾನುಂ ಪುಸಿ ।
ನುಡಿದೊಡೆ ಕಳ್ಗುಡಿವನಂತೆ ಮೆಯ್ಯರಿಯದಿಪಂ ॥

ನುಡಿದಪ್ಪರೆಂಬರೆನೆ ಕ- ।
ಳ್ಗುಡಿವುದಱಿಂದತ್ತಪಾತಕಂ ಪೆಱತುಂಟೆ ॥ ೫೭ ॥

ವೃ॥ ಪ್ರಿಯಮಂ ನೀನೇಕೆಮದ್ಯಪ್ರಿಯನೊಳಱಿಸು-
ವೈ ಮದ್ಯಪೀ ಸೌಹೃದಂ ನಾ- ।
ಸ್ತಿಯೆನಿಪ್ಪಾವಾಕ್ಯಮಂ ಭಾವಿಸದೆ ಮರುಳೆ-
ಮದ್ಯಾನುರಕ್ತಾತ್ಮನಾರ್ಗ್ಗಂ ।
ಪ್ರಿಯಮಂ ತಾಂ ಮಾಡನುರ್ವ್ವೀವಳಯದೊಳದಱಿಂ-
ಮದ್ಯಪಾಕಿಂನಕುರ್ವ್ವಂ- ।
ತಿಯೆನುತ್ತುಂ ಪಂಡಿತರ್ಕ್ಕಳ್ನುಡಿವರದನೆನೀಂ-
ಚಿತ್ತದೊಳ್ತಾಳ್ದಿರೆಂದುಂ ॥ ೫೮ ॥

ಕಂ॥ ಮೊಱೆಯಱಿಯದಾಗಳುಂ ಕೃತ- ।
ಮಱಿಯಂ ಕಳ್ಗುಡಿದ ಪಾತಕಂ ತನ್ನಂ ತಾ- ॥
ನಱಿಯನೆನೆ ಬಗೆವೊಡಿಂತವ- ।
ನಱಿದಪನೆ ದೂರವಪ್ಪಮೋಕ್ಷದ ಪಥಮಂ ॥ ೫೯ ॥

ಆರ್ಪ್ಪನಿತಂ ಸೇವಿಸಿಯುಂ ।
ದರ್ಪ್ಪಾಂಧತರಾಗಿ ಬಸನಮಂ ಪಾಳಿಸಿಯುಂ ॥
ಕೂರ್ಪ್ಪುವೆರಸಿಪ್ಪರ್ಕೌಳ- ।
ರ್ತ್ತೋರ್ಪ್ಪರೆ ಸನ್ಮಾರ್ಗ್ಗದಂದಮಂ ಜೈನರವೋಲ್ ॥ ೬೦ ॥

ನಾರಾಯಣನಾಪ್ತಂಗಡ ।
ಚಾರಿತ್ರಂ ಕರ್ಮ್ಮಜಳಮನುಂಬುದುಗಡಮ- ॥
ತ್ತಾರಿಕ್ಕಿದೊಡಂಬರ್ಗ್ಗಡ ।
ಘೋರನೆ ಸಗ್ಗಕ್ಕೆ ಪರಿಯದಿಪ್ಪರೆ ಭಗವರ್ ॥ ೬೧ ॥

ತಿರಿವಲ್ಲಿ ಪಾತ್ರೆಯೊಳ್ಭ- ।
ಕ್ತರೇನನಿಕ್ಕಿದೊಡಮದೆ ಪವಿತ್ರಂ ಬೌದ್ಧ- ॥
ರ್ಪ್ಪರಿಹರಿಸಲಾಗದೆಂದೆಂ- ।
ಬರಮತಮುಂ ತಪದಮಾರ್ಗ್ಗಮಲ್ಲ ಕುಮಾರ್ಗ್ಗಂ ॥ ೬೨ ॥

ಪಗಲುಮಿರುಳುಂಡು ಮಿಕ್ಕಿರ- ।
ಡಗುಳುಳ್ಳೊಡೆ ಕೊಳ್ವಿವಿಲ್ಲದಂದು ಪವಾಸಂ ॥
ಜಗದೊಳಗೆಯುಗ್ರ ತಪಮುಂ ।
ಮಿಗಿಲೆಂಬರಸೌಖ್ಯಮೆಂಬುದಂ ತಾವರಿಯರ್ ॥ ೬೩ ॥

ಉಣಲಱಿಯಂ ತಂಗೂಳಂ ।
ಗುಣಮುಳ್ಳ ಗೃಹಸ್ಥನೆಂದೊಡಿಂ ತಪಸಿಗೆ ಪೇ- ॥
ಳುಣಲಕ್ಕುಮೆ ತಂಗೂಳಮಿ- ।
ದಣಕಂ ತಂಗೂಳನುಣ್ಬ ಬೌದ್ಧರಚರಿತಂ ॥ ೬೪ ॥

ತಂಗೂಳೆಂಬುದು ನಿಯಮ- ।
ಸ್ಥಂಗಾಗದು ದೋಷದೂಷ್ಯಮೆನಲೇನಱಿದುಂ ॥
ತಂಗೂಳನುಣ್ಬುದದೆ ನಿಯ- ।
ಮಂ ಗಡ ತುರುಗಾವಗೋವನಕ್ಕಂ ಬೌದ್ಧಂ ॥ ೬೫ ॥

ಆದೆಡೆಯೊಳುಂಡು ನಿಚ್ಚಂ ।
ಬೀದಿಯೊಳೊಱಗಿದ್ದು ತಾನೆ ದೇವನೆನುತ್ತಿ- ॥
ರ್ಪ್ಪಾದೊಡ್ಡನೊಡನೆ ನುಡಿಯಲು ।
ಮಾದರಿಸಲುಮೆಂತುಮಾಗದಱಿವುಳ್ಳಾತಂ ॥ ೬೬ ॥

ಆಚಾರಹೀನನಧಿಕಂ ।
ನೀಚಂ ಕಳ್ಗುಡಿದು ವಾಸುದೇವನೆನಾನೆಂ- ॥
ಬಾಚಪಳನೊಡನೆ ಮಱೆದುಸ- ।
ಮಾಚರಿಸಲುಮಾಗದೆಂಬನುತ್ತಮ ಜೈನಂ ॥ ೬೭ ॥

ಮಿಂಡಾಟಮಾಗಿ ಮೆಚ್ಚಿದ ।
ಱಂಡೆಯರೊಳ್ನೆರೆದು ವಿಕೃತಿವೇಷದೆ ಜಗಮಂ ॥
ಕಂಡಜ್ಞಾನಿಯೆನೆಂಬನ ।
ಮುಂಡಿಂಗೊಳಗಾಗದಿಪ್ಪವಂ ಸತ್ಪುರುಷಂ ॥ ೬೮ ॥

ನಡೆವವರಾರುಣ್ಬವರಾ- ।
ರ್ನುಡಿವವರಾರ್ಸರ್ವ್ವಮೆಲ್ಲಮೋರ್ವ್ವನೆಬೊಮ್ಮಂ ॥
ಗಡಮೆಂದು ಮೆಚ್ಚಿದಂದದೆ ।
ನುಡಿವರ ನುಡಿಗೇಳದಿಪ್ಪುದೆಂದುಂ ಗುಣಿಗಳ್ ॥ ೬೯ ॥

ಕುಡುವನೆತಾಂ[೧]..........[೧] ।
ಕುಡೆಕೊಳ್ವಂತಾನೆ[೨]........................ ॥
.... ।
....[೨] ॥ ೨೦ ॥

ಕಷ್ಟಕ್ರಿಯೆಗಳೊಳೊಂದಿ ಯ- ।
ಥೇಷ್ಟಂ ನಲಿದಾಡಿ ಸಾಧುವೇಷದಿ ನಿವರ್ಗಳ್ ॥
ಶಿಷ್ಟರೊಳೆ ಬದ್ಧಮಿಥ್ಯಾ- ।
ದೃಷ್ಟಿಗಳೊಪ್ಪಿಪ್ಪ ತೆಱನನಱಿವರತೆಱದಿಂ ॥ ೨೧ ॥

ವೃ॥ ಕುಲಜರೇವೆಂದು ಪಂಡಿತರೇವೆಂದು ಮುನೀಂದ್ರರೇ-
ವೆಂದು ಪೆಂಪಿನೊ- ।
ಳ್ಕಲೆದು ಪರತ್ರೆಗಾಟಿಸಿಕೆಲಮ್ಮರ್ಱಿಗಳ್ಗುಡಿ-
ದಾತ್ಮಭಾವಮೆ- ।
ವ್ಮೊಳೆ ಶಿವತತ್ವವೆವ್ಮೊಳೆ ವಿಮುಕ್ತಿಯು-
ವೆವ್ಮೊಳೆನಿಂದುದೆಂಬ ಗಾ- ।
ವಿಲರ ನೆಗಳ್ತಿ ದುರ್ಯ್ಯಶದೊಳೊಂದಿ ನಿಗೋಧ-
ದೊಳೊತ್ತದಿಕ್ಕುಮೆ ॥ ೨೨ ॥

ಕಂ॥ ಪರಿದು ಪಿಡಿತಂದು ಪುಲ್ಲೆಯ ।
ಗೊರವಂಗುಣಲಿಕ್ಕಿ ಮೀಸಿ ಸೂಳೆಯೊಳವನಂ ॥
ನೆರಪಿದೊಡವಂಗೆ ಸಗ್ಗಂ ।
ದೊರೆಕೊಳ್ಗುಂ ನಿರುತಮೆಂದು ನೆಗಳ್ವಮೂರ್ಖರ್ ॥ ೨೩ ॥

ಆಪ್ತನ ಮಾರ್ಗ್ಗದೆ ನಡೆಯರ- ।
ನಾಪ್ತಾರಾಧಕಸಮಾಜಮಾರ್ಹತರಂತ- ॥
ಲ್ಲಾಪ್ತನ ಪೇಳ್ದೊಂದೋಜೆಯೊ- ।
ಳಾಪ್ತಂ ನೆಗಳ್ವಂತೆ ನೆಗಳ್ವರೊಲ್ದಂತೆಸಗರ್ ॥ ೨೪ ॥

---

೧. ಈ—೧ಕುಡುವುದುತಾಂ೧;

೨. ಈ—೨ದೇವನಿತ್ತಂಗೊಳ್ವಂ ॥ ನುಡಿವವನುಂ ತಾನೆಂಬನ । ನುಡಿಯಂ ಕೈಕೊಳ್ಳ-
ದಿಪ್ಪರ್ನಂ ಮತಿವಂತಂ ॥೨;

ಆಪ್ತನರೂಪಿಂದಂ ಮ- ।
ತ್ತಾಪ್ತನ ಮಾರ್ಗ್ಗದೊಳಮೆಸಗರನ್ಯರುಮೊಳ್ಪಂ- ॥
ದಾಪ್ತನರೂಪಂ ಕೈಕೊಂ- ।
ಡಾಪ್ತನ ಮಾರ್ಗ್ಗದೊಳೆಬಿಡದೆ ನಡೆವಜ್ಜೈನರ್ ॥ ೭೫ ॥

ವೃ॥ ಜಿನನುಂ ಬುದ್ಧನುಮೆಂತು ವರ್ತ್ತಿಸಿದರಂತಾ-
ಮಾರ್ಗ್ಗದಿಂದಾ ಜಿನೇ- ।
ಶನ ತದ್ಬುದ್ಧನ ಯೋಗಿಗಳ್ ಮಱಿಯಿಪಲ್ಲರ್ಗೀ-
ಕ್ಷಿದ್ರನುಂ ಪಾರ್ವ್ವತೀ- ।
ಶನುಮಿಪ್ಪಂದದೆ ವ್ಯಾಧರುಂ ಭಗವರುಂ-
ಸ್ತ್ರೀಸಂಯುತಂ ವಸ್ತ್ರಮುಂ- ।
ಡನ ಶಸ್ತ್ರಾನ್ವಿತರಾಗಿ ವರ್ತ್ತಿಸರದಂತೇನಾಪ್ತರಂ-
ಮೆಚ್ಚರೋ ॥ ೭೬ ॥

ಕಂ॥ ಅಡಗಿಂಗಂ ಕಳ್ಳಿಂಗಂ ।
ಮಡಕೆಯಿನಿಪ್ಪವರೆ ಗುರುಗಳಾಚಾರಂ ಕೊಂ- ॥
ಡಡೆ ತಿಂಬ ಕುಡಿವಬಸನಮೆ ।
ಗಡಕೌಳರ ದೀಕ್ಷಿತಂಗೆ ಗಹನಮೆ ಮೋಕ್ಷಂ ॥ ೭೭ ॥

ಹಿಂಸಾದಿ ದೋಷಚಯಮುಮಂ ।
ತಾಂ ಸಲೆಮಾಡುತ್ತಮಿರ್ಪ್ಪಪಾಪಿಗೆ ದುರಿತ- ॥
ಧ್ವಂಸಂ ಮಾಡುವ ಜಿನಧ- ।
ರ್ಮ್ಮಂ ಸೊಗಯಿಸದೆನಿಬರಿರ್ದ್ದು ಪೇಳ್ದಡಮೆಂತುಂ ॥ ೭೮ ॥

ಅರಸಂ ಬೇಂಟೆಯ ನಾಡು- ।
ತ್ತಿರೆಸಾಗುಂ ನಾಡಕೆಯಿಗಳಂ ಮೇವಮೃಗೋ- ॥
ತ್ಕರಮುದಱಿಂದಂ ಪುಣ್ಯಂ ।
ದೊರೆಕೊಳ್ಗುಂ ನೃಪತಿಗೆಂಬರಾಱಿಡಿಕಾಱಿರ್ ॥ ೭೯ ॥

ಅಱಿನಂ ಬಗೆಯದೆ ಬೇಂಟೆಗೆ ।
ಪೊಱಮೆಂದಂದುದ್ದಮೇಱಿಸವಳದೆ ನಿಚ್ಚಂ ॥
ಪಱಿಯುಂ ಪಾಯಿಸುತಿಪ್ಪಂ ।
ಪೆಱತೇಂ ಬೆಟ್ಟೇಱಿಮೃತ್ಯುಗರೆವಂತಕ್ಕುಂ ॥ ೮೦ ॥

ಸವಳದೆ ದೇಹಾರಂ ಗೆ- |
[೧]ಯ್ದುವ[೧]ಹಿತಮೆಮಗೆಂದು ಜೈನರಲ್ಲದನ್ಯಪರಾ- ॥
ಟವಿಕರ ತೆಱದಿಂದಂ ಬೇಂ- |
ಟೆವೋಪರಿಂತಪ್ಪವಿಹಿತಮೆಲ್ಲಿಯುಮುಂಟೇ ॥ ೮೧ ॥

ಒಕ್ಕಲನೆಂತುಂ ರಕ್ಷಿಸು- |
ವಕ್ಕಟಿಯನುಳ್ಳಭೂಮೀಪಾಳ[೨](ರುಂ) ತಲೆ[೩]ಮುಟ್ಟು ॥
ಒ[೩]ಕ್ಕಲಕೆಯ್ಗೇಱುವಂ |
ಪಕ್ಕಿಗಳಂ ಕವಣೆಗೊಂಡು ಕಾಯಲುವೇಳ್ಕುಂ ॥ ೮೨ ॥

ಶಿವದೀಕ್ಷೆಗೊಂಡು ನೀನುಂ |
ಶಿವನೆನಿಸಿಯೆ ಮಂತ್ರಮೂರ್ತ್ತಿಯಾಗಿದ್ದಂ [೪]ಮಾ- ॥
ಯವನೂಡಿದೊಡೆ[೪]ಶಿವನಂ ಮಾಂ- |
ಸವ[೫]ನೂಡಿದೊಡೆ[೫]ದೋಷಮಕ್ಕುಮೆನ್ನಗೊರ್ಗರವರ್ ॥ ೮೩ ॥

ಜೈನರ ಕಡೆಪಟ್ಟವನುಂ |
ಜೇನೆಯ್ಯಂ ಮುಟ್ಟಿಕಯ್ಗಳಂ ಕಚ್ಚುವರಿ- ॥
ನ್ನೇನೆಂಬಮಿತರರೊಂದ- |
ಜ್ಞಾನಮನಾಪ್ತಂಗವೆಱದುತಾಮುಂ ಕುಡುವರ್ ॥ ೮೪ ॥

ಎಮ್ಮಾಪ್ತನೀಶನುಣ್ಬಂ |
ಬೊಮ್ಮನ ಡೋವಿಗೆಯೊಳೆಮಗೆ ಗೋಚರ್ಮ್ಮದೊಳೀ- ॥
ಕಮ್ಮ[೬]ಬಳಸಲ್ಕೆ ಸಲ್ಲಂ |
ನಿರ್ಮ್ಮಾಣೆಂಬಂತೆ ನೆಗಳ್ವರಾ ಶಿವಭಕ್ತರ್ ॥ ೮೫ ॥

ಪಶುವೋಲಂ ಬೇಯೆನೆ ಮಾ- |
ನಸನಂ ಮೊದಲಾಗಿ ಪಗೆವನಿಱಿಯನದಂ ಭಾ- ॥
ವಿಸಿ ದೇವಾರ್ಚ್ಚನೆಗೆಯ್ವ- |
ಪ್ಪಶುವಂ ಕೊಲಲಾಗದೆಂದು ಪೇಳ್ವಗೊರ್ಗರವರ್ ॥ ೮೬ ॥

---

೧. ಇ, ಈ—೧ಯ್ದುವಿ೧; ೨. ಇ—ಳಂ; ೩. ಇ—೩ಮು॥ಟ್ಟೊ೩; ೪. ಇ—ಮಾಂ॥ ೪ಸಮನುಂಡಡೆ೪; ೫. ಈ—೫ನೂಡಿದ೫; ೬. ಇ—ಡಿ; ೭. ಇ—ರ್ಮ್ಮ;

ಮಿಗೆಬಸನದಿಂದೆ ಕೊ[1]ಲೆಕೊಂ- ।
ದುಗಡಂ ಸಗ್ಗಕ್ಕೆ ಪಾಟಿಸಲುವಡೆಮತ್ತೀ ॥
ಜಗದೊಳ್ಪೆಱತಿಕ್ಕೆಮ ಸೂ- ।
ನೆಗಾಱಿನುಂ ಜಾಲಗಾಱಿನುಂ ಮಾಣ್ದಪರೇ ॥ ೮೭ ॥

ಮಿಡುಕುವಿನಂ ಪ್ರಾಣಿಗಳಂ ।
ಮಡಿಪಿದೊಡಂ ದೋಷವಿಲ್ಲ ದೇವಾರ್ಚ್ಚನೆಯು- ॥
ಳ್ಪಡೆಸಾಲ್ಗುಮೆಂಬ ಮುನಿಗಳ ।
ನುಡಿಯಂ ಕೇಳ್ದಾಳಿಗೊಳ್ಪದಿಪ್ಪರೆ ಚದುರರ್ ॥ ೮೮ ॥

ಇತ್ತಲುಲಿಂಗಮನೆರ್ಚ್ಚಿಪ- ।
ರತ್ತಲ್ಕುಱಿದನ್ನಿಮೆಂಬರಾಕೌಳಮರ್ಮ- ॥
ತ್ತತ್ತಲು ಹೋಮಮಂ ಮಾಡುವ- ।
ರಿತ್ತಲು ಸುಂಟಿಗೆಯನೊಯ್ದುಕಾಸುವರೆಂಬರ್ ॥ ೮೯ ॥

ಸಂದಿಸಿ ದೇಹಾರದ ಮು- ।
ಟ್ಟೊಂದೆಸೆಯೊಳ್ಮಾಂಸಮೊಂದು ದೆಸೆಯೊಳು ಕಾಸಿಂ ॥
ಪಿರಿದನೆ ನಡೆವರ್ಮ್ಮಱಿದೆಂ- ।
ದುಂ ಶಿಕ್ಷಿಸಿಯುಮಱಿಯರಧಮರ ಶಿಷ್ಯರ್ ॥ ೯೦ ॥

ಶಿವಮೂರ್ತ್ತಿಯಾಗಿ ಬಳಿಯಂ ।
ಶಿವನಂ ಪೂಜಿಸಲೆವೇಳ್ಕುಮಾಶೈವಮತಂ ॥
ಶಿವಮೂರ್ತ್ತಿಯಾದವಂ ಮಾ- ।
ಡವೇಡಮಧುಮದ್ಯ ಸೇವೆಯಂ ತಾವೆನ್ನರ್ ॥ ೯೧ ॥

ಪೊಲೆಯುಮ್ಮುಟ್ಟೆಸರೆಂತುಂ ।
ಪೊಲಸಂ ಪಾಲ್ಗಲನನೆಂದೊಡಱಿವುಳ್ಳಾತಂ ॥
ಪೊಲಸಂ ಮುಟ್ಟೆವುದೇ ಪೇ- ।
ಳ್ಸಲಲಿತಧರ್ಮ್ಮಾಮೃತೈಕಭಾಜನತನುವಂ ॥ ೯೨ ॥

ಪೊಲಸಟ್ಟಕಲನನೆಂತುಂ ।
ಕಲಸರ್ಮ್ಮಡಕೆಗಳೊಳೆಂದೊಡಂತದನಱಿದುಂ ॥

---

೧. ಇ, ಈ—ಸ;

ಪೊಲಸಂ ತಿಂಬವನೊಡನೇಂ |
ಕಲಸುವುದೇ ಸಚ್ಚರಿತ್ರರಪ್ಪಮಹಾತ್ಮರ್ || ೯೩ ||

ಅಡಗನರಿಪಲ್ಲಿ ಕತ್ತಿಗೆ |
ನಡೆಕಯ್ಯಂ ನೊಂದು ಬಿದಿರ್ದು ಶಿವಯೆಂಬರ್ಮ್ಮ- ||
ತ್ತಡಗಿನೊಳಿರ್ದ್ದೆಲುವಣಲಂ |
ನಡೆ ಶಿವಶಿವ ಎಂಬರುಣತಮಾಶಿವಭಕ್ತರ್ || ೯೪ ||

ಅಡಗಿನೊಳಿಱಿಂಪೆಯುಂ ಕಂ- |
ಡಡೆ ಮುಟ್ಟುಪಡಾದುದೆಂದು ಬಾಸುವರುಣುತಂ ||
ಗಡಶೈವಮುರ್ಟ್ಟುಪಡಾ- |
ದಡೆ ಸುವ್ರತ ನಿರತರಪ್ಪಡಂತೇಕುಣ್ಬರ್ || ೯೫ ||

ಪೊಲೆಗೇವೈಸರು ತೊಗಲಿನೊ- |
ಳಲಸದೆ ನೀಗ್ರುಡಿಯುತಿರ್ಪ್ಪರಡಗಂ ತಿಂಬರು ||
ಪೊಲೆಯರ ತೆಱದಿಂ ನೆಗಳ್ವರು |
ಪೊಲೆಯರ ಪೆಸಗೊಂಡಡುಣ್ಣರಾ ಸಚ್ಚರಿತರ್ || ೯೬ ||

ತನ್ನೊಡಲ ಪುಣ್ಣುಮಂ ಮು- |
ಟ್ಟಿನೋಡ ಕೈಗಚ್ಚಿಕೊಳ್ವರಂ[1]ಶುಗಳಪು- ||
ಣ್ಣನದೆಂತುಂ ತಿಂದಪಂ ನೋ- |
ಡನಾಡೆಯುಂ ಮಾಂಸರಾಜಿಯಂ ಸಾಸಿಗರೋ || ೯೭ ||

ಒಡಲೆಂಬ ಪುಳಿತಮಾಂಸದ |
ಪಡುಕೆಯ ಭಾರಮನದೇನುಮಂ ಬಗೆಯದೆ ನಿ- ||
ಗ್ಗದಿಜೀವಂ ಪಶುಗಳ ಬ- |
ಲ್ಲಡಗಂ ಸಲಿಪೇಱಿತಗ್ಗಿನರಕಕ್ಕಾಳ್ಗಂ || ೯೮ ||

ವೃ|| ಅವಚಱಿದೆಯ್ದಿ ತನ್ನೊಡಲ ತೋಲತಡಂಗ-
ದೊಳೊಟ್ಟಿಕ್ಕೊಂಡುಮಾಂ- |
ಸವನೆನಗಾವನುಂ ಸರಿಯೆಪೇಳೆನುತುಂ-
ಜಿನಧರ್ಮ್ಮಮೆಂದೊಡಂ- |

---

೧. ಇ—ಪ;

ತವರ ಮೊಗಕ್ಕೆವಾಯ್ವುರಸನೇನಱಿದಪ್ಪನೆ ನಾಡೆ-
ನೋಡೆ ರಾ- ।
ರವದೊಳಗದ್ದುರ್ ತಾನಱಿಯದಿದ್ದರ್ಪನೇ-
ನಿಜಭೂಪತಿತ್ವಮಂ ॥ ೯೯ ॥

ಭೂವನಿತೇಶನುತ್ತಮಕುಲಪ್ರಭವಂ ನರರೆಲ್ಲಮಾಗಳುಂ ।
ದೇವಮಹಾಪ್ರಸಾದಮೆನೆ ರೂಢಿಗೆ ಸಂದನೃಪಂ-
ವ್ರತಂಗಳಿಂ ।
ದೇವಸಮಾನನಾಗಿ ಸುಚರಿತ್ರ ಪವಿತ್ರಿತಗಾತ್ರನಲ್ಲದಂ ।
ಭೂವರನತ್ತ್ವವಾ[೧]ಕನವನಂದದೆ ಪೇಸದೆ ಮಾಡುವಾನೃಪಂ ॥ ೧೦೦ ॥

ಕಂ॥ ಮದ್ಯಮನರಸಿಯರೊಲ್ದು ನಿ- ।
ವೇದ್ಯಮನಾಗೌರಿಗಿತ್ತೊಡಲ್ಲದೆ ತಮಗಂ॥
ಹೃದ್ಯವೆನಿಸದುಗಡಂ ಕಡು- ।
ಚೋದ್ಯಮೊ ಮೀಸಲುಗೆ ಸಲುಗೆಗೆಯ್ವರೆ ಭಕ್ತರ್ ॥ ೧೦೧ ॥

ಅರಸರನಡಗಂ ಮಾಣಿಸ- ।
ಲರಸಿಯರಂ ಮದ್ಯಸೇವೆಯಿಂ ಮಾಣಿಸಲುಂ ॥
[೨]ಭರವಸ[೨]ರೆನಿಪ್ಪ ಮುನಿಗ- ।
ಳ್ಪರಸಮಯದೊಳಾರುಮಿಲ್ಲ ಜೈನರೆ ತುಲಭಂ ॥ ೧೦೨ ॥

ಬ್ರತಮುಂ ಶುಚಿತ್ವಮುಂ ಸುಚ- ।
ರಿತಮುಂ ಪೊಲೆಯಂಗೆ ಜೈನನಾದೊಡೆಸೆ[೩]ಲ್ಗುಂ ॥
ಯತಿಪತಿಗಂ ಭೂಪತಿಗಂ ।
ವ್ರತಾದಿಗಳ್ಸಲ್ಲಕಾಳಸಮಯಿಗಳೆಂತುಂ ॥ ೧೦೩ ॥

ಪೊಲಸಿಂಗಂ ಕಳ್ಸಿಂಗಂ ।
ಕುಲಜರ್ಮ್ಮೊದಲಾಗಿ ಪೆಸರನಿಕ್ಕಿಯುಂ ಕಡೆಯೊಳ್ ॥
ಪೊಲೆಯನುಮೆಂತುಂ ಮುಟ್ಟಂ ।
ಕುಲಜನದೊಂದೆಸೆಯೊಳಿಕ್ಕೆ ಜೈನರೊಳೆಲ್ಲಂ ॥ ೧೦೪ ॥

---

೧. ಇ—ಸಾ; ೨. ಇ—೨ಅರಸಹ೨; ೩. ಇ, ಈ—ಸಾ;

ವ್ರತಸಚ್ಚರಿತ್ರಹೀನರ ।
ಕ್ಷಿತಿಪತಿಯುಕ್ಕವನತನುಜನಪ್ಪುದಱಿಂದಂ ॥
ಬ್ರತನಿರತನಪ್ಪಪೊಲೆಯನ ।
ಸುತನಪ್ಪುದು ಪುಣ್ಯಮುಭಯಭವಮುಂ ಸಫಲಂ ॥ ೧೦೫ ॥

ಪೇಸಿಕೆಯಿಂದಂ ಬಿಡುಗುಂ ।
ಸಾಸಿರ್ವರೊಳೋರ್ವಶೂದ್ರನಲ್ಲದೆ ಪಿರಿದುಂ ॥
ದೋಷಂಬಿಡೆಂದು ಗೊರವಂ ।
ಸಾಸಿಸೆ ಮಾಣಿಪನೆ ಮಾಂಸಮಂ ಜೈನರವೋಲ್ ॥ ೧೦೬ ॥

ಅಡಗಂತಿಂಗೆಮ ಕಳ್ಳಂ ।
ಕುಡಿಗೆಮ ಕೊಲೆ ಪುಸಿಗೆ ಕಳವು ಪರಲಲನೆಯೊಳಂ- ॥
ಪಡುಗೆ ಶಿವಭಕ್ತನಾಗಿ- ।
ರ್ದ್ದಡೆ ಪೊರ್ದ್ದವು ಪಾಪಮೆಂಬರಾಱಡಿಕಾಱರ್ ॥ ೧೦೭ ॥

ಮಾಡಲ್ಕಣವಾಗದುದಂ ।
ಮಾಡಿಯುಮೆಲುದಂದದಿಂದೆ ನಡೆದುಂ ಶಿವನಂ ॥
ನೋಡಿದನಿತಱೊಳೆ ಸುಖದೊ- ।
ಳ್ಕೂಡುವರೊಲ್ಲದರುಮೊಳರೇ ಶೈವಬ್ರತಮಂ ॥ ೧೦೮ ॥

ವೃ॥ ಪತಿಯನೆಗಳ್ತೆಯಂ ಬಿಡದೆಸಾಮಿಯುಚಂದಮ-
ಚಂದಮೆಂದು ಸಂ- ।
ಗತವಚನಂಗಳಂ ನುಡಿದುಲೋಕದವರ್ನೆ-
ಗಳುತ್ತಿರಲ್ಕುಮಾ- ।
ಪತಿಯುವಿರುದ್ಧಮಾರ್ಗ್ಗದೆಸಕಕ್ಕೊಳಗಾಗದೆ-
ಶೈವರೊಳ್ಕಲ- ।
ರ್ಗ್ಗತಿಗಳಲತ್ತಿರ್ಯಿಂ ಸುಚರಿತಂಗಳೊಳೊಂದು-
ವರೇಂ ವಿಡಂಬವೋ ॥ ೧೦೯ ॥

ಕಂ॥ ತುಡುವಂ ಶಲ್ಯಮನಜಿನಮ- ।
ನುಡುವಂ ಸುತ್ತಿಯೊಳಮುಣ್ಬನಾಪ್ತಂ ಮತ್ತಾ ॥
ಮೃಡಮುನಿಗಳಂತೆ ನೆಗಳ್ವ- ।
ನ್ನಡೆಯುಲುತಾವೆಲ್ಲರೇಕೆಯೋ ಮೃಡಭಕ್ತರ್ ॥ ೧೧೦ ॥

ಭೋಗಮನನ್ಯಭವಂಗಳೊ- ।
ಳಾಗಿಪುದಂತಿರ್ಕೆ ಭಕ್ತರರ್ತ್ಥಿಯೊಳುಣುತಿ- ॥
ಪ್ಪಾಗಳು ಕೇಳ್ದಡೆ ಮುಟ್ಟುಪ- ।
ಡಾಗದೊಡದೆ ಸಾಲ್ಗುಮೀಶ್ವರಸ್ತವನಂಗಳ್ ॥ ೧೧೧ ॥

ತಮ್ಮಾಪ್ತನೀಶನುಣ್ಬಂ ।
ಬಮ್ಮನಡೋಯಿಗೆಯೊಳಾತನಂ ಸೇವಿಸಿ ಮ- ॥
ತ್ತಂ ಮಾಣದೇಕೆ ಮುಟ್ಟುಪ- ।
ಡಂ ಮಾಡುವರಾಪ್ತನಿಂದೆ ಶುಚಿಗಳಿಶ್ಶೈವರ್ ॥ ೧೧೨ ॥

ಕಡುಸಕಳರ್ತ್ತಾಯಿಂದಂ ।
ಗಡಕುಲಜರ್ಮ್ಮಕ್ಕಳೆಂಬವೋಲ್ತಮ್ಮಾಪ್ತಂ ॥
ಮೃಡನೆಸಕಮುಮಂ ಮೆಚ್ಚದೆ ।
ನಡವರ್ಸ್ಸತ್ಪಥದೆ ತಮಗದೇಕೆಯೊ ಸಲ್ಗುಂ ॥ ೧೧೩ ॥

ತಮಗೆ ನಿಜಾಪ್ತರ ಚಾರಿ- ।
ತ್ತಮೆವೇಳ್ಕುಮದೇಕೆ ತಳಿಗೆಯುಂ ಬಾಜಿಪರು- ॥
ತ್ತಮಮಂ ನುಡಿಯೆಂಬರದೇ- ।
ಕೆ ಮಹೇಶ್ವರರುಣುತಮಿರ್ದ್ದು ಜೈನರತೆಱದಿಂ ॥ ೧೧೪ ॥

ಕಳ್ಳೆನ್ನದಿರಡಗೆನ್ನದಿ- ।
ರೊಳ್ಳಿತ್ತಂ ನುಡಿಯಿಮೆಂದು ನಿಯಮಿಸುವಂತೇ- ॥
ನೊಳ್ಪಿದನೆ ನಿಜಾಪ್ತಂ ಮ- ।
ತ್ತೊಳ್ಪಿತ್ತೈಶೈವಸಮಯದವರ್ಗಳಚರಿತಂ ॥ ೧೧೫ ॥

ಮನೆಯೊಳಗಹಿಯುಂ ಪೊಕ್ಕಂ- ।
ತೆ ನಿಚ್ಚಲುಂ ಕೂಡೆತಳಿಗೆಯುಂ ಬಾಜಿಸಲುಂ- ॥
ಬ ನಿಮಿತ್ತಮೇಕೆ ತಾಮೇಂ ।
ಜಿನಭಕ್ತರತೆಱದೆ ಶುಚಿಗಳೇ ಶಿವಭಕ್ತರ್ ॥ ೧೧೬ ॥

ವೃ॥ ಮುಟ್ಟುಪಡೆಂಬುದೆಂತುಮಣಕಂ ನಿಶಿಭೋಜಿಗೆ-
ಮದ್ಯಮಾಂಸಮಂ ।
ಮುಟ್ಟುವವಂಗೆ ಸೋಧಿಸದೆ ನಿರ್ದ್ದಯೆಯಿ-
ಮ್ಮೊಗೆತಂದನೀರ್ಗ್ಗಳಿಂ ।

ದಟ್ಟುವದನುಣ್ಣುವಂಗೆ ಕರವತ್ತಿಯನೀಗ್ಗುಡಿ-
ವಂಗೆ ನೋಡುವಂ ।
ದಿಟ್ಟಳವಿಟ್ಟವೇಲಿಗ¹ದೆ ಬಾಜಿಪಕಾಂಸಮುಮುತ್ತ-
ಮೋಕ್ತಿಯಿಂ ॥ ೧೧೭ ॥

ದೋಷಮನಾಪ್ತರೊಳ್ಪುಸಿಯನಾಗಮದೊಳ್-
ರತಿಯಂ ತಪಸ್ವಿಯೊಳ್ ।
ಪೇಸದೆಮದ್ಯಮಾಂಸ ರುಚಿಯಂ ಬ್ರತದೊಳ್-
ಕೊಲೆಯಂ ಸ್ವಧರ್ಮದೊ- ।
ಳ್ವಾಸನೆಮಾಡಿ ಮುಗ್ಧರನಧೋಗತಿಗದ್ದು-
ವಡುದ್ದಿಗಂ ವಚೋ- ।
ನ್ಯಾಸಮ ಪಾರಿಪಂಥಿಕರವೋಲಳಿದತ್ತಪವರ್ಗ-
ಮಾರ್ಗಮಂ ॥ ೧೧೮ ॥

ಹರಿಹರ ಸೂರ್ಯ ಭೈರವಿಯುಮೆಂಬರದೆಯ್ವ-
ಮುಧರ್ಮಕರ್ಮಮಂ ।
ವಿರಚಿಪವೇದಮಾರ್ಗಮುಮುಕೃತ್ಯಪರಾಯಣ-
ರಪ್ಪವೈದಿಕ- ।
ಪ್ಪರಮುಮೆನಿಪ್ಪಪಾತ್ರಮೊಸೆದೀವೆಡೆಗೆಂದೊಡೆ-
ಮತ್ತದೇಕೆಯೋ ।
ಪುರುಳಱಿಪರ್ವಿಚಾರಪರರೀ²ತೆಱಿದಿಂ ನೆಗಳುತ್ತ-
ಮಿಪ್ಪರೊಳ್ ॥ ೧೧೯ ॥

ಕಂ। ನಚ್ಚಿದ ತಮ್ಮಯದೆಯ್ವಂ ।
ಕಿಚ್ಚಪ್ಪುದಱಿಂದಮದನೆ ಭಾವಿಸಿ ಪಾರ್ವ- ॥
ರ್ಕಿಚ್ಚಿನವೊಲುಗ್ರರಾದರ- ।
ದಚ್ಚರಿಯಲ್ಲಾಪ್ತನನ್ನರಾಗರೆ ಭಕ್ತರ್ ॥ ೧೨೦ ॥

ಕಿಚ್ಚಿಲ್ಲದುರಿವಸಾಸಿಗ- ।
ರಿಚ್ಚೆಗೆ ನೆರವಾಯ್ತುವೇದವಿನ್ನೇತೆಱಿಕಾ- ॥

೧. ಇ, ಈ—ರ; ೨. ಇ—ಕೀ;

ಳ್ಕಿಚ್ಚಿಂಗೆ ಗಾಳಿ ನೆರವನೆ ।
ಮೆಚ್ಚಿದ ತೆಱದಿಂದೆ ಜಗಮನುಱಿಪರೆ[೧] ಜಗದೊಳ್[೧] ॥ ೧೨೧ ॥

ದೊರೆಕೊಳ್ಗೆ ಜನ್ನಮದೆ ತಾಂ ।
ದೊರೆಕೊಳ್ಳದ ಬಡವನಾದೊಡಂ ತಾಂ ಕ್ರತುವಂ ॥
ತಿರಿದುಂ ಮಾಡುವೆವೆಂಬ- ।
ರ್ಪ್ಪರಿದುಂ ನರಕಕ್ಕೆಪರಿವತಕ್ಕುಳವರ್ಗ್ಗಳ್ ॥ ೧೨೨ ॥

ವಿನಯದೆ ಪೊಡವಟ್ಟಡೆ ನಿಜ ।
ತನಯನುಮಂ ಜನ್ನಮಿದ್ದ್ರ್ಜಾರಿಗೆಯಂ ಸೂ- ॥
ಡೆನುತಂ ತಾಯ್ಗ್ಗಡಪರಸುವ- ।
ರೆನೆ ಪಾಪಮೋ ಪರಧರ್ಮ್ಮಮಾನ್ವಿಜರ್ಗೆಲ್ಲಂ ॥ ೧೨೩ ॥

ಪೊನ್ನಿಲ್ಲದೊಡಂ ತಿರಿದುಂ ।
ಜನ್ನಂ ಮಾಳ್ಪುದುರಾತ್ಮರಿನ್ನೆತ್ತಾನುಂ ॥
ಪೊನ್ನುಳ್ಳಡೆ ಕುಱಿವಿಂಡಂ ।
ಜನ್ನದ ನೆವದಿಂದೆ ಬಱಿದುಮಾಡರೆತಕ್ಕರ್ ॥ ೧೨೪ ॥

ಬಯಕೆಗೆ ಪಶುವಂ ಕೊಲ್ವವ- ।
ರಯುಸಕ್ಕಂಜುವರೆ ಕೊಂದುಕೊಳ್ವಾತಂ ಹಿಂ- ॥
ಡೆಯ ಕೂಳ್ಗೆ ಹೇಸುವನೆ ನಿ- ।
ರ್ದ್ದಯರೆನಿಸಿದ ಕುಪಾತ್ರಕಂಠರೇನಂ ಮಾಡರ್ ॥ ೧೨೫ ॥

ಅವಿವೇಕದೆ ದೇಹಿಗಳಾ- ।
ದುವೆಲ್ಲಮುಂ ಕೊಂದು ಜನ್ನವಿರವೇಳ್ವಾಪೇ- ॥
ದವನೆ ಪಿಡಿದಿಪ್ಪವಂ ಪೇ- ।
ಸುವನೆ ಪಾಪಕ್ಕೆ ಪಾರ್ವ್ವರೆಲ್ಲಂದದೊಳಂ ॥ ೧೨೬ ॥

ಪಶುಕರ್ಮ್ಮಂಗೆಯ್ದನನಿ[೪]ಱಿ- ।
ಯಿಸುವರು ಪೊಲೆಯನುಮನರಸರುತ್ತ[೫]ಮರೆಂದುಂ[೫]॥

೧. ಇ, ಈ—೧ಪಾರ್ವ್ವರ್೧; ೨. ಇ—ಸೂ; ೩. ಇ—ದ; ೪. ಇ—ನ;
೫. ಇ—೫ಮರರೆದುಂ೫;

ಪಶುಕರ್ಮ್ಮಂಗೆಯ್ದಡೆ ದಂ- ।
ಡಿಸರೊಲ್ದದನಿತ್ತು ಪೂಜಿಪರ್ಪ್ಪಿಷ್ಮರ್ ॥ ೧೨೭ ॥

ಮಾಡಿದ ಮಾಡಿಸಿದ ಪೆಱ- ।
ರ್ಮ್ಮಾಡಿದ ಹಿಂಸಾದಿ ದೋಷದೊಳ್ಮೆಚ್ಚುಗೆಯುಂ ॥
ಮಾಡಿದ ಪಾಪಂ ಪ್ರಾಣಿಗೆ ।
ಮಾಡದೆ ಮಾಣ್ದಪುದೆ ಘೋರನಾರಕವಿಧಿಯುಂ ॥ ೧೨೮ ॥

ವೃ॥ ಧರೆಯೊಳಗುಳ್ಳದೇಹಿಗಳನೋವದೆ ಘಾತಿಸಿ-
ಕೂಡೆಕಾಯ್ದು ಬಿ- ।
ತ್ತರದೊಳೆ ಸುಟ್ಟುಮಿಕ್ಕುದನೆ ತಿಂಬುದು ಸ್ವರ್ಗ್ಗ-
ಸುಖಕ್ಕೆ ಹೇತುವೆಂ- ।
ಬರಮತದಿಂದೆ ಮಾಳ್ಪುದು ಜಿನೇಶ್ವರನಿಂದಮೆ-
ಮಾಣ್ದದೀಧರಾ- ।
ಮರಜನವಿಲ್ಲದಂದುಮುಖದಿಂ ಜಗದಿಂ[೧]-
ಬಱಿಕೆಯ್ಯದಿಕ್ಕುಮೇ ॥ ೧೨೯ ॥

ಕಂ॥ ಕೊಲ್ವುದಧರ್ಮ್ಮಂ ಕೊಂದಂ ।
ಸಲ್ವಂ ನರಕಕ್ಕೆ ಬೇಗಮೆನೆ ಜಿನಮತದಿಂ ॥
ಕೊಲ್ವುದನುಳಿದರ್ಪ್ಪಸುವಂ ।
ಕೊಲ್ವುದೆತಾಂ ಧರ್ಮ್ಮವೆಂದು ನೆಗಳ್ವರೊಳರೆಬರ್ ॥ ೧೩೦ ॥

ಎಂತುಟೆ ಬೀಜಂ ಭಾವಿಪೊ- ।
ಡಂತುಟೆ ಮೊಳೆಯೆಂಬತೆಱದೆವೇದಂ ತಾಮು- ॥
ನ್ನೆಂತುಟದು ಪೇಳ್ದಧರ್ಮ್ಮಮ- ।
ದಂತುಟೆಯುಕ್ಕುಂ ಪರಿಶಾಂತಮೇನಾದಪುದೇ ॥ ೧೩೧ ॥

ಸ್ಮೃತಿಕಾಱರಪ್ಪ[೩]ವಿಪ್ರರು[೩] ।
ವ್ರತಿಗಳ ಜನ್ಮಮುಮನವರ ಚರಿತವನವರಾ ॥
ಕಥೆಗಳೊಳೆ ಕೇಳ್ದಡೇಕೆಯೊ ।
ಮತಿವಂತರ್ಮ್ಮತ್ತಮವರ ಪೇಳ್ದುದೆಗೆಯ್ವರ್ ॥ ೧೩೨ ॥

೧. ಇ, ಈ—ವಂ; ೨. ಇ, ಈ—ಪ್ರ; ೩. ಇ—೩ವಿಷ್ಣು೩;

ಪುಸಿಯುಂ ದಿಟವುಂ ಧರ್ಮ್ಮವು- ।
ನಸದಾಚಾರಮನಹಿಂಸೆ[1]ಯು ...ನೊಂ[1]- ॥
ದಿಸಿ ಜೈನರಲ್ಲದಬ್ಬು- ।
ಣ್ಣಸರಂಗೋದಂತೆ ಧರ್ಮ್ಮಶಾಸ್ತ್ರಂಬೇಳ್ವರ್ ॥ ೧೩೩ ॥

ಎಲ್ಲೆಲ್ಲಿ ಕೃಷ್ಣಮೃಗಮುಂ- ।
ಟಲ್ಲಿಯೆ ಸದ್ಧರ್ಮ್ಮಮುಂಟು ತದ್ದೇಶದೊಳೆಂ- ॥
ದೆಲ್ಲಂ ನುಡಿವರು ಮೃಗಮುಂ- ।
ಟಲ್ಲಲ್ಲಿಗೆ ಬೇಡನಾಡಲುಂಟೇಧರ್ಮ್ಮಂ ॥ ೧೩೪ ॥

ಎರಳೆಗಳಾವಾವೆಡೆಯೊ- ।
ಳ್ಚರಿಯಿಪುವಾಭೂಮಿಧರ್ಮ್ಮಭೂಮಿಯೆಗಡ ಪೆ- ॥
ರ್ಮ್ಮರೆಯುಂ ಮದಕರಿಗಳುಮಿ- ।
ರ್ಪ್ಪರಣ್ಯಮೀಧರ್ಮ್ಮಭೂಮಿಯಾಗದಿದೇನೋ ॥ ೧೩೫ ॥

ಕುಟಿಳತೆಯಿಂದಂ ರಾಗೋ- ।
ತ್ಕಟ ಚಿತ್ತರ್ಪ್ಪೇಳ್ದಧರ್ಮ್ಮದಿಂದಂ ಪುಣ್ಯಂ ॥
ಘಟಿಯಿಸದದಂತೆ ತಂಪೇಂ ।
ಘಟಿಯಿಸುಗುಮೆ ತೀವ್ರಪಾಪಕಿ ಜ್ವಾಳೆಗಳೋಳ್ ॥ ೧೩೬ ॥

ಮೃಗಕುಳದೊಳ್ ಜಳಚರದೊಳ್ ।
ಖಗನಿಚಯದೊಳಿನ್ನವಿನ್ನವಂ ಸೇವಿಪುದ- ॥
ಗ್ನಿಗೆ ಹವಿಯಿಕ್ಕಿರೆ ವಿಪ್ರಾ- ।
ಳಿಗಿಕ್ಕಿಮಿಕ್ಕಡಗನೆಂಬರಾ ಸ್ಮೃತಿಕಾಱರ್ ॥ ೧೩೭ ॥

ದೇವಾಗ್ನಿ ಪಿತೃಗಳಂ ಭೂ- ।
ದೇವರುಮಂ ತಣಿಪಿ ಮಿಕ್ಕಮಾಂಸಮನೆಂದುಂ ॥
ಸೇವಿಸಿದಾತನ ಪುಣ್ಯಮ- ।
ನೇವೊಗಳ್ವುದೊ ಪೇಳಿಮೆಂದು ಪೊಗಳ್ವರ್ಪ್ಪೂರ್ವರ್ ॥ ೧೩೮ ॥

ತಮ್ಮೊಡನೆ ಕೂಡಿ ದೇವರಿ- ।
ಗಂ ಮಾಸಂ ಮದ್ಯಮಧುಗಳೆಂಬವನಿತ್ತುಂ ॥

೧. ಇ—ಗಯುಂ ಹಿಸೆಯಾನೊಂಗ; ೨. ಇ, ಈ—ವ;

ತಮ್ಮಯ ನರಕಾಯುಷ್ಯಮು- ।
ಮಂ ಮತ್ತಂ ಪೆರ್ಚಿಸುತ್ತಮಿಪ್ಪರ್ಮೂರ್ಖರ್ ॥ ೧೪೯ ॥

ವೃ॥ ಒಡಲೊಳ[೧]ದೇನು[೧]ಯುಂ ಕ್ಷತಮದಿಲ್ಲದೆ ಸತ್ತು-
ದನೆಲ್ಲಿಕಂಡೊಡಂ।
ಕಡೆಗಣಿಸಲ್ಕೆಸಲ್ಲಮೃಗಮಂ ಪಥದೊಳ್ಕಗುಳ್ದಿ-
ತ್ತಿತಂದದಂ ।
ಕಡಿಕಡಿದಟ್ಟು ವಿಪ್ರತತಿಗಿಕ್ಕುವುದೊಳ್ಪನೊಲ್ಲದಂ।
ತಡೆಯದೆ ರೌರವಕ್ಕಿಳಿವನೆಂದುಸಿರ್ವರ್ಸ್ಸಲೆ-
ವೇದಮಾರ್ಗ್ಗದೊಳ್ ॥ ೧೫೦ ॥

ಕಂ॥ ನುಣ್ಣನೆ ನೊಣೆವುದು ಮಾಂಸಮು- ।
ನುಣ್ಣದವಂ ದಿವಮನೆಯ್ದು[೨]ನೆಯ್ದುನೆನುತ್ತಂ[೨] ॥
ಪಣ್ಣಂ ಕಲಸುವರಱಿನಂ ।
ಬಣ್ಣಿಸಿತಾಂ ಪೇಳ್ವಡೆಲ್ಲಿಯುಂ ಸ್ಮೃತಿಕಾಱರ್ ॥ ೧೫೧ ॥

ಅಡಗ ನೆಱೆ ತಿಂಬ ಮಧುವಂ ।
ಕುಡಿವ ಮಹಾತ್ಮಂ ದಿವಕ್ಕೆಸಲ್ವಂ ಮಱಿದ- ॥
ಪ್ಪಡಮುಳ್ಳಿಯನಾಸ್ವಾದಿಸಿ- ।
ದಡೆ ಪಾತಕನಕ್ಕುವಾತನೆಂಬತ್ತರ್ಕ್ಕರ್ ॥ ೧೫೨ ॥

ಎನಿತೊಳವಧರ್ಮ್ಮಮಾರ್ಗ್ಗಮು- ।
ವನಿತಕ್ಕಂ ನೋಳ್ಪಡಾವಗಂ ತಾವೆತವ- ॥
ರ್ಮ್ಮನೆಯೆನಿಪವೇದದಿಪ್ಪುದಿ ।
ನಡೆವಾಪಾರ್ವ್ವಂಗೆ ನೆಗಳಲಾಗದುದುಂಟೇ ॥ ೧೫೩ ॥

ಪಲತೆಱದಮಾಂಸಮಂ ಸಲೆ ।
ಮೆಲಲಕ್ಕುಂ ಮಱಿದುವುಳ್ಳಿಯೆಂಬುವನೆಂತುಂ ॥
ಮೆಲಲಾಗದೆಂದು ಪೇಳ್ವಾ ।
ಮಳಿನಾತ್ಮರ ಮಾತುಗೇಳಲಾಗದು ಚದುರಂ ॥ ೧೫೪ ॥

---

೧. ಇ, ಈ—೧ದೆಲ್ಲಿ೧; ೨. ಈ –೨ನೆನುತಂ ಪಾಲೊಳುಂ೨;

ನಾರಾಯಣನವತಾರಂ ।
ವಾರಾಹಂ ಮತ್ಸ್ಯಕೂರ್ಮ್ಮವೆಂಬಿವೆದಿಟವೆಂ-॥
ದೋರಂತೆ ಪೇಳ್ವರವನೆ ವಿ- ।
ದಾರಿಸಿಯುಂ ತಿನಲುಮಕ್ಕುಮೆಂಬತ್ತರ್ಕ್ಕರ್ ॥ ೧೪೫ ॥

ಪೇಸದೆ ಕಂಟಳಿಸದೆ ಬಿಱು- ।
ತೋಸರಿಸದೆ ಮಾಂಸಸೇವೆಗೆಯ್ವನೆ೧ಮತ್ತಂ೧ ॥
ಪೇಸಿ ಕಿಸುಗುಳಮಿದೆಂ- ।
ದೋಸರಿಸಿದೊಡವನೆ(ಕೆ)ವೇದಮಂ ದೂಷಿಸಿದಂ ॥ ೧೪೬ ॥

ವೇದಾರ್ತ್ಥದಿಂದೆ ನಡೆವವ- ।
ನಾದರದಿಂ ತಿಂಬುದಡಗನೊಲ್ಲದೆ ತೊಱೆದಂ ॥
ವೇದಕ್ಕೆ ಬಾಹ್ಯನಾತಂ- ।
ಬಾದೇನೋಪಾರ್ವ್ವನಲ್ಲನೆಂಬತ್ತರ್ಕ್ಕರ್ ॥ ೧೪೭ ॥

ನರಕದೊಳಾಚಂದ್ರಾರ್ಕ್ಕಂ- ।
ಬರವಿಪ್ರನದೊರ್ಮ್ಮೆಮಾಂಸಮಂ ಸೇವಿಸದಾ ॥
ನರನೆಂದೊಡೆಂತೊ ಪಾರ್ವ್ವಂ ।
ನಿರಂತರಂ ತಿಂಗೆ ಕಿವಿಯನೆಂಬತ್ತರ್ಕ್ಕರ್ ॥ ೧೪೮ ॥

ಮಧುಮಾಂಸಮಿಲ್ಲದಿರ್ದ್ದಂ- ।
ದು ಧರಾಮರಸಮಿತಿಯಾಜ್ಯಮುಮನುದ್ಧಮನಾ- ॥
ಮಧುಮಾಂಸಮೆಂದು ಕಲ್ಪಿಪ- ।
ರ ಧಾರ್ಮ್ಮಿಕಶ್ರಾದ್ಧಮಿಕ್ಕುವೆಡೆಯೊಳ್ಪಾರ್ವ್ವರ್ ॥ ೧೪೯ ॥

ಪೊಱಗೊಂದು ಹೆಡಗೆ ಮಣ್ಣಂ ।
ನೆಱೆಶೌಚಂಗೆಯ್ವರೊಳಗೆ ಪಲತೆಱದಡಗಂ ॥
ತುಱುಕುವರಿಂತುಟು ಶೌಚದ ।
ತೆಱನೀಧರೆಯಲ್ಲಿ ಕುಲತೆ ಬೆಸದಿಪ್ಪವರಾ ॥ ೧೫೦ ॥

ಬಿಡದಿನಿಸಂ ಜೇನೆರ್ಯ್ಯಂ ।
ಬಿಡದಿನಿಸಂ ಮಾಂಸಸೇವೆಯುಂ ಕರವತಿಯುಂ ॥

---

೧. ಇ—೧ಮುಕ್ತಂ; ಈ—೧ಭಕ್ತಂ೧;

ಬಿಡರೆಯ್ದೆ ಬಿಲ್ವಫಲಮಂ ।
ಬಿಡರೌದುಂಬರ[೧]ಫಲಂಗಳಂ[೧] ವೇದಜಡರ್ ॥ ೧೫೧ ॥

ಪುಳುಗ[೨]ನೀರಂಪೇಸದೆ ।
ಬಳಸುವುದುಂ ಚರ್ಮ್ಮಭಾಜನಂಗಳನೀರಂ ॥
[೩]..................................[೩] ।
ಬಳಸುವುದುಂ ವಿಪ್ರತತಿಗೆ ನಚ್ಚಿನಚರಿತಂ ॥ ೧೫೨ ॥

ಪುಳುವ ನಿಱುಂಪೆಯುನೆಲ್ಲಂ[೪] ।
ಕಳೆದುಗಡಾಕೂಳನುಣ್ಬುದುಂ ಮೆಚ್ಚಿ[೫]ದಂ ॥
ಗಟಿಡಪೋಟುತ್ತುಮುಣ್ಬುದುಂ ಭೂ- ।
ತಳವೈದಿಕರ್ಗಲ್ತೆ ನೋಡವಿಹಿತಾಚಾರಂ ॥ ೧೫೩ ॥

ತುರಿಪದೆ ಧೋತ್ರಮುಮಂ ಪಾ- ।
ದರಕ್ಕೆಯುಂ ಸುತ್ತಿ ತೊಡೆಯುಕೆಳಗಿಕ್ಕಿದರ್ದ್ದೀ- ॥
ರ್ವ್ವರ ತಳಿಗೆಯೆಂಜಲೋರೋ- ।
ರ್ವ್ವರ ಮೆಲುಗೆ ಪಾರ್ವ್ವರೆಯ್ದೆ ಛತ್ರದೊಳುಂಬರ್ ॥ ೧೫೪ ॥

ಪಾಪಮನೆ ಮಾಡಿ ಜನಕಂ ।
ಪೋಪುದುಮಿತ್ತಿರ್ದ್ದ ಪೆಣನನೆತ್ತಲ್ಸಲ್ಲೆಂ- ॥
ದಾಪತ್ತುವಡಿಸಿ ಪುತ್ರನ- ।
ನೀ ಪೊನ್ನಂ ಸುಗತಿಗುಡುವೆಮೆಂಬರ್ತ್ತಕ್ಕರ್ ॥ ೧೫೫ ॥

ಕನಸಿನೊಳಂ ಪಾರ್ವ್ವಂ ಭೋ- ।
ಜನಮಂ ಬೇಡಿದೊಡೆ ಕೊಟ್ಟಡಂದಿನದಿವಸಂ ॥
ಮನೆಬೇಗುಮೆಂಬರಱಿದಿ- ।
ತ್ತ ನರಂಗೇನಕ್ಕುಮಱಿದು ಕೊಳ್ವುದುಚದುರಂ ॥ ೧೫೬ ॥

ಭ್ರಷ್ಟವ್ರತಂಗಶೌಚಿಗೆ ।
ನಷ್ಟಾಚಾರಂಗೆ ಪಾರುವಂಗಿತ್ತನ್ನಂ ॥

೧. ಇ—೧ಪಂಚಕಂಗಳಂ೧; ೨. ಇ, ಈ—ಳ; ೩. ಇ, ಈ—೩ಬಳಸುವುದುಂ ಸಿದ್ಧಿಕೆ-ಯೊಳುಂ೩; ೪. ಇ—ಲ್ವಂ; ೫. ಇ, ಈ—ದು; ೬. ಇ—೬ಳಶುಃ೬;

ಕಷ್ಟಂಬಟ್ಟಿಂ ಮುನ್ನೆ ನಿ- ।
ಕೃಷ್ಟಂ ಮಾಡಿದೆನೊ ಪೇಳಿಮೆಂದುಗದಳಿಗುಂ ॥ ೧೫೭ ॥

ವಿತ್ರಸ್ತದುರಿತನಲ್ಲದ ।
ಪಾತ್ರಕ್ಕಿಕ್ಕಿದೊಡ ನಿಷ್ಫಲಂ ಬಗೆಯಲದೇಂ ॥
ಚಿತ್ರತರಮೋ ಪ್ರವಾಹೇ- ।
ಮೂತ್ರಿತಮುದವೀಣನೆಂಬನೆಂಬಂತೆವೊಲಂ ॥ ೧೫೮ ॥

ಪಾವಿಂಗೆ ಪಾಲನೆಱೆದೊಡೆ ।
ಕೇವಳಮದುವಿಷಮೆಯುಕ್ಕುಮಂತಘುಚಯದೊ- ॥
ಳ್ಭಾವಿಸಿದಂಗಿತ್ತುದು ಪಾ- ।
ಪಾವಹಮಲ್ಲದೆ ವಿಶೇಷಫಲಮಾದಪುದೇ ॥ ೧೫೯ ॥

ಬಗೆಗೆಟ್ಟು ಕುಪಾತ್ರಕ್ಕಿ- ।
ತ್ತಗಣಿತಧನಮಂ ಕುಭೋಗಭೂಮಿಯನಾದಂ ॥
ಪುಗಲೊಡರಿಪ ಧಾರ್ಮ್ಮಿ[೧]ಗ್ಗ್ರಿ[೧]ಕ್ಕಿಯ[೧]- ।
ಕ್ಕಿಗೊಟ್ಟುಮಡಗೂಳನುಣ್ಬ ಮರುಳಂ ಪೋಲ್ಕುಂ ॥ ೧೬೦ ॥

ಪುಸಿಯೋದುಗಳಿಂದಂ ನಂ- ।
ಬಿಸೆ ನಂಬಿಕುಪಾತ್ರದಾನವಂ[೨]........[೨] ॥
ಕಸವರದಿಂ ಮತಿಯಿಂ ಮೋ- ।
ಲಸುಗತಿಯುಂ ಕಟ್ಟಿಮೂಱುಕೇಡಂ ಕಿಡುಗುಂ ॥ ೧೬೧ ॥

ದಯೆಧರ್ಮ್ಮಮನೊಕ್ಕಾ ಪಾ- ।
ಪಿಯೆ ಪಾತ್ರಂಯೆನುತಕೊಟ್ಟು ಕಿಡದೆ ನಿಸರ್ಗ್ಗಂ ॥
ದಯೆಧರ್ಮ್ಮಮುಳ್ಳಪಾತ್ರ- ।
ಕ್ಕೆ ಯತ್ನದಿಂ ಕುಡುಗೆ ಸೌಖ್ಯಮಂ ಬಯಸುವವಂ ॥ ೧೬೨ ॥

ಆರಾಧಿಪದ್ಯೆವಂ ವಿ- ।
ಸ್ತಾರದೆ ಪೇಳ್ವಾಗಮಂಗಳಂತಾ ಧರ್ಮ್ಮಂ ॥
ಚಾರಿತ್ರಮುಮಳಿವೆಡೆಗಳೊ- ।
ಳಾರಯ್ವೆಡೆ ನಾಡುನಾಡೊಳೊಂದೊಂದಂದಂ ॥ ೧೬೩ ॥

---

೧. ಈ—೧ಕನ೧; ೨. ಇ, ಈ—೨ಮಾಡಿದವಂ೨;

ಜಳನಿಧಿ ಪರಿವೃತಧಾತ್ರೀ- ।
ವಳಯದೊಳಾರಯ್ದು ನೋಡಿ ಜಿನಧರ್ಮ್ಮಂ ನಿ- ॥
ರ್ಮ್ಮಳವೊಂದೆ ಮಾರ್ಗ್ಗಮಲ್ಲೆಡೆ- ।
ಯೊಳಮದಱಿಂ ಜಿನರಮಾರ್ಗ್ಗಮದೆ ಸನ್ಮಾರ್ಗ್ಗಂ ॥ ೧೬೪ ॥

ಆರಾಪ್ತಂ ನಿರ್ಮ್ಮಳವಿ- ।
ನ್ಮಾರಾಗಮಮಮಳಪಾರಚರಿತಂ ಲೇಸಂ- ॥
ದಾರಯ್ವಡಲ್ಲಿಗಲ್ಲಿಗೆ ।
ಸಾರಂ ಜಿನಮಾರ್ಗ್ಗಮುಳಿದುದೆಲ್ಲಮಮಾರ್ಗ್ಗಂ ॥ ೧೬೫ ॥

ಇದನಿಂಬಾಗಱಿಗೆ ಕುಮಾ- ।
ರ್ಗ್ಗದೊಳಾವಂ ಬಿಡದೆನಡೆವನೇಂ ವೈಷ್ಣವನೆಂ- ॥
ಬುದು ಮೋಕ್ಷ ಮಾಹೇಶ್ವರನೆಂ- ।
ಬುದು ದೆಯ್ವದ ಧರ್ಮ್ಮದೊಂದು ತೆಱನಱಿಯದರಂ ॥ ೧೬೬ ॥

ಅವರಿವರೆನ್ನದೆ ಮಿಥ್ಯಾ- ।
ತ್ವವಶದೆ ಬಱಿದಿದ್ರ್ದಡುಂಟೆ ಮಾಹೇಶ್ವರರೆ ಬಳಿ- ॥
ಕ್ಕವರೊಳಗೆತ್ತಾನುಂ ಪು- ।
ಣ್ಯವಶದೆ ಸದ್ದೃಷ್ಟಿಯಾದ ಕೆಲಬರೆ ಜೈನರ್ ॥ ೧೬೭ ॥

ವೃ॥ ಉರಗೇಂದ್ರ ಪ್ರಮದಾರ್ಚ್ಚನಾಕುಸುಮಧೂಳಿ-
ಧೂಸರ ಶ್ರೀಪದಾಂ- ।
ಬುರುಹಂ ಭಕ್ತಿಭರಾನತಾಮರವಧೂಧ-
ಮ್ಮಿಲ್ಲಮಂದಾರ ಸೌಂ- ।
ದರ ಮಾಳಾರುಚಿರಂ ಜಿನಾಂಘ್ರಿಯುಗಳಂ-
ದೇವಾಧಿದೇವಂ ಜಿನೇ- ।
ಶ್ವರನೀಗೊಲ್ದು ವಿನೇಯ ಸಂತತಿಗೆ ಮುಕ್ತಿ-
ಶ್ರೀಸುಖಾವಾಪ್ತಿಯಂ ॥ ೧೬೮ ॥

---

೧. ಇ—ನ್ಮರ್ಗ;

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರತೀವ್ರಚಂಡಕಿರಣ ಸಕಳಾಗಮಪ-
ದಾರ್ತ್ಥನಿಪುಣ ಮಹಾಕವಿ ಬ್ರಹ್ಮದೇವ
ವಿರಚಿತಮಪ್ಪಸಮಯಪರೀಕ್ಷೆಯೊಳು
ಕುಲಿಂಗಿಕುಚಾರಿತ್ರಸ್ವರೂಪ
ನಿರೂಪಣಂ ಚತುರ್ದ್ದಶಾಧಿಕಾರಂ
ಶ್ರೀ ಶ್ರೀ ಶ್ರೀ

॥ ಶ್ರೀ ॥

ಪಂಚದಶಾಧಿಕಾರಂ

ವೃ॥ ಎನಿತಂಭಾವಿಸಿನೋಡೆ ದೋಷರಹಿತಂ ಜ್ಞಾನಾತ್ಮಕಂ-
ದೇವನಾ- ।
ತನಸೂಕ್ತಂ ಪರಮಾಗಮಂ ನಿಖಿಳ ಸೌಖ್ಯಕ್ಕಾ-
ಸ್ಪದಂ ಶ್ರೀಯುತ- ।
ವ್ರಿನಯಾಚಾರ ದಯಾನ್ವಿತಪ್ಪರಮಮುಕ್ತಿ-
ಶ್ರೀವಧೂಕಾಂಕ್ಷಿತ- ।
ಮ್ಮುನಿಗಳ್ತಾಮೆನೆ ಜೈನಧರ್ಮ್ಮಮನದಂ-
ಬಣ್ಣಿಪ್ಪೆನೇ ವಣ್ಣಿಪೆಂ ॥ ೧ ॥

ಕಂ॥ ವಿಳಸನ್ನರೇಂದ್ರ ಸೌಖ್ಯ- ।
ಕ್ಕಿದುನಿಳಯಂ ದೇವೇಂದ್ರ ಸೌಖ್ಯದೆಱಿಂವಟ್ಟತಿ ನಿ- ॥
ಶ್ಚಳಸೌಖ್ಯದಾಯಿ ಮೋಕ್ಷದ ।
ಬೆಳಗೆಯಿ ಜಿನಧರ್ಮ್ಮಮೆಂದು ಬಣ್ಣಿಪುದು ಜಗಂ ॥ ೨ ॥

ಆರಾಿವಮಾಳ್ಕೆಯಿಂದಂ ।
ಭಾವಿಸುವೊಡಮೆಲ್ಲತೆಱದೊಳಂ ಪಾವನಮುಂ ॥
ಸಾವದ್ಯರಹಿತಮಪ್ಪುದ- ।
ದಾವುದು ತಾನದನೆ ಧರ್ಮ್ಮಮೆಂದಱಿಗಱಿವಂ ॥ ೩ ॥

ಆವುದು ಸನ್ಮಾರ್ಗ್ಗಂ ವಿ- ।
ಶ್ವಾವನಿಯೊಳ್ನೆಗಳ್ದುಮಾರ ಧರ್ಮ್ಮದೊಳದೆ ತಾಂ ॥
ದೇವೇಂದ್ರವಂದ್ಯಮುಖಿಳಸು- ।
ಖಾವಹವಂತದುವೆ ಧರ್ಮ್ಮಮುಳಿದುದಧರ್ಮ್ಮಂ ॥ ೪ ॥

---

೧. ಇ—ಜ್ರ; ೨. ಇ, ಈ—ವಾ;

ಸ್ವಪಚಂ ಮೊದಲಾಗಿರೆ ಮಿ- ।
ಕ್ಕಪಾಪದೊಳ್ ಪೊರೆಯದಾವಧರ್ಮ್ಮದೊಳಿಸಗಿ- ॥
ರ್ದ್ದ ಪವಿತ್ರಮೆನಿಕುಮದೆ ತಾ- ।
ನಪವರ್ಗ್ಗೋಚಿತಮೆನಿಪ್ಪ ಧರ್ಮ್ಮಂ ಧರೆಯೊಳ್ ॥ ೫ ॥

ಉತ್ತಮರೆಮೆಂದು ಬೆಸವರ ।
ವಿತ್ತಂತವೆ ಮಾಳ್ಪಮಾಟಮಂ ಕೇಳಲೊಡಂ ॥
ತುತ್ತನಿದಂ ಪೊಲೆಯುನುಮೆನಿ- ।
ಪುತ್ತಮಚಾರಿತ್ರಮೆಲ್ಲಿತಲ್ಲಿಯೆ ಧರ್ಮ್ಮಂ ॥ ೬ ॥

ಉತ್ತಮರೊಳ್ಪಾರ್ವ್ವಂಗಂ ।
ಮತ್ತೆತ್ತಲುಕೀಲಿಗಂಗವೊಂದಂದಂತಾ- ॥
ನುತ್ತಮ ಚರಿತ್ರಮಾದೊಡೆ ।
ಮತ್ತಂ ಮೋಕ್ಷಕ್ಕೆ ಮಾರ್ಗ್ಗಮದೆಯೆಂಗ[1]ಱಿವಂ ॥ ೭ ॥

ಕುಲಹೀನಂಗೊಂದಂದಂ ।
ಕುಲಜಂಗೊಂದಂದಮಕ್ಕುಮಾಚಾರಮದೆಂ- ॥
ದೊಲವರಮಂ ಪೇಳ್ವುದು ನಿ- ।
ರ್ಮ್ಮ[2]ಳಧರ್ಮ್ಮಮದಲ್ಲ ಠಕ್ಕಮತಮೆಂಗಱಿವಂ ॥ ೮ ॥

ಪೊನ್ನುಂ ದಯೆಯೊಳ್ಕೂಡಿ ಜ- ।
ಗನ್ನುತಮೆನಿಸಿರ್ದ್ದ ಧರ್ಮ್ಮಮುಂ ಸಕಳಜಗ- ॥
ಕ್ಕಂ ನಿರುತಂ ಸಲವೇಳ್ಪುದು ।
ಪೊನ್ನಱಿನೆಂಬೆರಡಱಿಲ್ಲಿವೊಲವರಮುಂಟೇ ॥ ೯ ॥

ಪೊಲೆಯುಂ ಪಡೆದ ಸುವರ್ನ್ನಂ ।
ಕಲುಂಬುಗೊಂಡಿರ್ದ್ದತಾಂಬ್ರಮಕ್ಕುಮೆ ಧರ್ಮ್ಮಂ ॥
ಕುಲಜಂಗಮ ಕುಲಜಂಗಂ ।
ಸಲವೇಳ್ಪುದು ಕುಲಮದೇವುದಱಿತಮೆ ಮುಖ್ಯಂ ॥ ೧೦ ॥

---

೧. ಇ, ಈ—ದ; ೨. ಇ—ಖಿ;

ವೃ॥ ಕ್ಷತ್ರಿಯನಾದಿಯಾಗಿ ಕಡೆಯೊಳ್ಪೊಲೆಯುಂ-
ಬರವೆಲ್ಲ ಜಾತಿಗಂ।
ಧಾತ್ರಿಯೊಳಲ್ಲಿ ನೋಡುವಡಮೇತೆಱದಿಂ-
ಕಱೆಯಿಲ್ಲ ಶುದ್ಧಚಾ-।
ರಿತ್ರಮದೊಂದೆ ಮಾರ್ಗ್ಗಮದಱಿಂ ಜಿನಧರ್ಮ್ಮಮೆ-
ಧರ್ಮ್ಮಮೈಹಿಕಾ-।
ಮುತ್ರಿಕ ಸೌಖ್ಯಹೇತು ಭುವನತ್ರಯ ಸಾರಮ-
ದೆಂತುಮೆಲ್ಲಿಯುಂ ॥ ೧೧ ॥

ಕಂ॥ ಹಿಮಕರನ ಹಿಮಾಂಶುಗಳು-।
ತ್ತಮಜಾತಿಗಮಂತ್ಯಜಾತಿಗಂ ತಣ್ಪೆಂದಂ ॥
ಸಮನಪ್ಪತೆಱದಿ ನಱಿನುಂ।
ಸಮನಾಗಲೆವೇಳ್ಕುಮಾವಜಾತಿಗಮೆಂತುಂ ॥ ೧೨ ॥

ಪಾಲುತ್ತಮಂಗಮಾಚಾಂ-।
ಡಾಲಂಗಂ ಸೀಯನಪ್ಪತೆಱನಿಂದಱಿನುಂ ॥
ಮೇಲಪ್ಪಜಾತಿಗಂ ಚಾಂ-।
ಡಾಲಂಗಮದೊಂದೆಯುಂದಮಾಗಲೆವೇಳ್ಕುಂ ॥ ೧೩ ॥

ಅದಿದೆನುತಂ ಬಾದಂ ಮಾ-।
ಳ್ಪುದು ಬುದ್ಧಿಯೆ ಪಿರಿದುಮಾವುದೊ ಕಾರಣಮ-॥
ಭ್ಯುದಯಕ್ಕಂ ಮುಕ್ತಿಗಮಂ-।
ತದೆ ಧರ್ಮ್ಮಂ ಜಗದೊಳಲ್ಲಿ ಸಂದಯಮುಂಟೇ ॥ ೧೪ ॥

ಒರೆದುಂ ಕಡಿದುಂ ಪೊಯ್ದುಂ।
ಕರಗಿಸಿಯುಂ ಪೊನ್ನನೆಂತು ನೋಡುವರಿನ್ನೆಂ-॥
ತಿರೆ ದೆಯ್ವದಿನಾಗಮದಿಂ।
ಚರಿತ್ರದಿಂ ದಯೆಯಿನೆಯ್ದೆ ಪರಿಕಿಪುದಱಿನಂ ॥ ೧೫ ॥

ಹಿತ್ತಳೆಗೆಬೆಳ್ಳಿಯುತ್ತಮ-।
ಮುತ್ತಮಮದಱಿಂ ಸುವರ್ನ್ನಮೆಂಬವೊಲಿದಱಿಂ-॥
ದುತ್ತಮವಿಂತಿದು ನೋಳ್ಪಡೆ-।
ನುತ್ತುಂ ಪರಿಕಿಸುವೊಡೊಳ್ಪನಱಿಸುವಮನುಜಂ ॥ ೧೬ ॥

ಲೇಸಿಂಗೆ ಲೇಸಮಾಳ್ಪುದು ।
ದೋಷಮಿದೊಳ್ಳಿತ್ತಿದೆಂದು ತಿಳಿವುದು ತಿಳಿದುಂ ॥
ದೋಷಮನೆ ಬಿಟ್ಟುಬೇಗಂ ।
ಲೇಸೆನಿಸಿದ ಧರ್ಮ್ಮದತ್ತಲೆಱಗುವುದಱಿವಂ ॥ ೧೭ ॥

ಸಾರವಿದಸಾರವೆಂದು ವಿ- ।
ಚಾರಿಸುವುದು ಮುನ್ನೆತನ್ನೊಳಱಿವುಳ್ಳವರೊ- ॥
ಳ್ಪೈರಮನೆಬಿಟ್ಟು ಧರ್ಮ್ಮದ ।
ಸಾರಮನೇಂ ತಿಳಿದು ಬಳಿಕ ಕೈಕೊಳುಗಱಿವಂ ॥ ೧೮ ॥

ವೃ॥ ಪರಿಕಿಸದೇನುಮಂ ನೆಗಳ್ಪುದೇ ಕಳೆಗೊಳ್ವಡೆ-
ಕಯ್ಯನಿಟ್ಟುಮುಂ ।
ಪರಿಕಿಸಿ ಮಾಱುಗೊಳ್ವರೆನೆ ಶಾಸ್ವತಸೌಖ್ಯ-
ಸಧರ್ಮ್ಮಮಂತದಂ ।
ಪರಿಕಿಸದುದ್ಧತಂ ಪರಿವುದೇಕೆ ವಿನಿರ್ಮ್ಮಳ-
ಧರ್ಮ್ಮಮುಂ ಕರಂ ।
ಪರಿಕಿಸಿ ಸಂತತಂ ನೆಗಳ್ವುದಂತದಱಿಪ್ಪದಿನೋಳ್ಪನೋಲ್ಪವಂ ॥ ೧೯ ॥

ಕಂ॥ ಅಡಗಂ ತಿಂದುಂ ಕಳ್ಳಂ ।
ಕುಡಿದುಂ ನಲಿದಾಡಿಮೆಯ್ಗೆ ಮೆಚ್ಚಿದತೆಱದಿಂ ॥
ನಡೆವುದದೇಂ ಧರ್ಮ್ಮಮೆ ನೋ- ।
ಳ್ಪಡೆ ನಿರ್ಮ್ಮಳಮಾವತೆಱದೊಳಂ ಜಿನಧರ್ಮ್ಮಂ ॥ ೨೦ ॥

ಎಂತುಂ ನೇರಾಣಿಯು ಪೊ- ।
ನ್ನಂತಿರೆ ಲೇಸೆನಿಪುದೆಂತು ಪರಿಕಿಪೊಡಮನಿ- ॥
ಪ್ಪಂತದು ಧರ್ಮ್ಮಂ ಪಿತ್ತಳೆ- ।
ಯಂತೆಸವುದು ಧರ್ಮ್ಮಮಾಗಿಸಲಱಿದಪುದೇ ॥ ೨೧ ॥

ವೃ॥ ಇದು ಧರ್ಮ್ಮಂ ಸುಚರಿತ್ರಮಿಂತುಟೆದಿದಲ್ಪು-
ಣ್ಯಾವಹಂ ನೋಳ್ಪಡಿಂ- ।
ತಿದು ಸೌಖ್ಯಾಕರಮೀಗಳೆಂತು ಬಳಿಯುಂ ಮುಂತಪ್ಪ-
ಜನ್ಮಕ್ಕೆ ತಾ- ।

ನಿದೆ ಮೋಕ್ಷಪ್ರದಮಕ್ಕುಮೆಂದೆನಿತುಮಂ-
ನಿಶ್ಚ೧ಯಿಸಿ೧ಸನ್ಮಾರ್ಗ್ಗದಿ- ।
ಷ್ವದಿನೊಲ್ದಾಚರಿಪಂ ವಿವೇಕಿಯುಳಿದಂ ಚಾತು-
ರ್ಯ್ಯಹೀನಂ ನರಂ ॥ ೨೨ ॥

ಕಂ॥ ಲೋಕದ್ವಯಹಿತಮಂ ಸೌ- ।
ಖ್ಯಾಕರಮಂ ಜೈನಧರ್ಮ್ಮಮಂ ಖಳಕರ್ಮ್ಮ- ॥
ನೀಕಕ್ಷಯಕರಮಂ ನಿ- ।
ವ್ಯಾ೯ಕುಳಮನನಾಗಿ ಸೇವಿಪುದು ಮತಿವಂತಂ ॥ ೨೩ ॥

ಸಮಯಂಗಳೊಳೆಲ್ಲಂ ಜಿನ- ।
ಸಮಯಮೆ ಸುಖನಿಳಯಮಂತದಂ ಸನ್ಮತಿಯಿಂ- ॥
ದಮೆ ತಿಳಿದು ಪೊಕ್ಕಭವ್ಯನೆ ।
ಸುಮತಿವಿವೇಕಕ್ಕಮವನೆ ಕಳಶಮನಿಟ್ಟಂ ॥ ೨೪ ॥

ಪೆಱಪೆಱವು ಸಮಯದೊಳ್ಸುಖ- ।
ಮಱಸುವಡುಂಟಣ್ಣ ಸಕಳಸೌಖ್ಯಕ್ಕಂ ತಾ- ॥
ನೆಱವಟ್ಟೆನಿಸಿದ ಪೆಂಪಿಂ ।
ನೆಱೆತಾಳ್ದಿದ ಜೈನದಲ್ಲಿ ಪಡೆಯಲ್ಬಕ್ಕುಂ ॥ ೨೫ ॥

ಧರ್ಮ್ಮಂಗಳರಸನಂ ಜಿನ- ।
ಧರ್ಮ್ಮಮನೆತ್ತಾನುಮೊರ್ಮ್ಮೆ ಬಗೆಗೊಂಡಾತಂ ॥
ಕರ್ಮ್ಮದತೊಡರಂ ಪಱಿದಿ- ।
ದ್ಧೊರ್ಮ್ಮದಲೊಳೆ ದೇವನಾಗಲಾಪ್ಪನಮೋಘಂ ॥ ೨೬ ॥

ಜಿನಧರ್ಮ್ಮದಲ್ಲಿ ಚಿತ್ತಂ ।
ತನಗಾದಡೆ ಬೇಗಮಂತೆ ಕೈಕೊಳ್ಳದವಂ ॥
ತನಗೆ ನಿಧಾನಂ ಸಾದ್ಧ್ಯಡ- ।
ಮನುಭವಿಸದೆ ತಿರಿವುತಿಪ್ಪ ಮರುಳಂ ಪೋಲ್ಕುಂ ॥ ೨೭ ॥

ಪ್ರಬಳ ಜಿನಮಾರ್ಗ್ಗಮಂ ಬಿ- ।
ಟ್ಟು ಬೇಱೆಪೆಱತೊಂದುವಿಡಿದು ತುದಿಯೆಯ್ದಲು ಕಿ- ॥

೧. ಇ—೧ಯ್ಸಿ೧;

ಪ್ರಬಳನವಂ ಕೂದಲುವಿಡಿ- ।
ದು ಬೆಟ್ಟವಡರುತ್ತಮಿಪ್ಪ ಜಡನಂ ಪೋಲ್ಕುಂ ॥ ೨೮ ॥

ಕನಕಂ ಕಲ್ಲೊಳಗಿಂ ತೆಗೆ- ।
ವಡೆ ತನ್ನಂ ತಾಟ ತಾಪನಕ್ರಿಯೆವೇಳ್ಕುಂ ॥
ಮನುಜಂಗೆ ಮುಕ್ತಿವಡವಡೆ ।
ಜಿನಮಾರ್ಗ್ಗಮೆ ನಿಯಮದಿಂದಮಾಗಲೆವೇಳ್ಕುಂ ॥ ೨೯ ॥

ನೆಱೆಜಿನಮಾರ್ಗ್ಗದೆ ನಡೆ[೧]ಯುದೆ[೧] ।
ಕೊಱೆವಂತಿರೆ ಕರ್ಮ್ಮಮುಳಿದಱೊಳ್ಕೊರದಪುದೇ ॥
ಪಱಗೋಲೊಳ್ಪಾಯ್ವಂತಿರೆ ।
ತೊಱೆಯುಂ ಮೊಱದಿಂದೆಪಾಯಲೇಂ ಬಂದಪುದೇ ॥ ೩೦ ॥

ಪುಟ್ಟುವ ಪೊಂದುವ ರುಜೆಗಿದೆ ।
ನೆಟ್ಟನೆಮರ್ದ್ದೆನಿಸಿ ನೆಗಳ್ದ ಜಿನಶಾಸನಮಂ ॥
ಬಿಟ್ಟುಳಿದುದಱೊಳಗೆಸಪಂ ।
ಪುಟ್ಟದೆ ಮಾಣ್ಬನೆ ಭವಾಬ್ಧಿಯೊಳ್ಮತಿಹೀನಂ ॥ ೩೧ ॥

ಸಿರಿದೊರೆಕೊಂಡಡೆ ಮತ್ತಂ ।
ತಿರಿಯುತ್ತಿರಲೇಕೆ ಪುಣ್ಯದಿಂ ಜಿನಧರ್ಮ್ಮಂ ॥
ದೊರೆಕೊಂಡಡೆ ಪುರುಳಿಲ್ಲದ ।
ಪರಸಮಯಂಗಳೊಳೆ ತೊಡರ್ದು ಕಿಡುವುದೆ ಚದುರಂ ॥ ೩೨ ॥

ಸಲೆ ಮುಂ ಕಳ್ದುಡಿವಂ ನಿ- ।
ರ್ಮ್ಮಳವೆನಿಸಿದ ಜೈನಧರ್ಮ್ಮಮಂ ಮಱೆಗೊಳೆ ಭೂ- ॥
ತಳವಂದ್ಯನಕ್ಕುಮೆನೆ ಮು- ।
ತ್ತೆ ಲೇಸು ಜಿನಧರ್ಮ್ಮಮಲ್ಲದೊಳವೇ ಧರ್ಮ್ಮಂ ॥ ೩೩ ॥

ಎನಿತಾನುಂ ದುರ್ಜ್ಜನನುಂ ।
ನಯಮಂ ಮಾಡುತ್ತಮಿರ್ದ್ದನುಂ ಗುಣಿಯೆನಿಕುಂ ॥

---

೧. ಇ—೧ಯಿಡೆ೧; ಈ—೧ದೊಡೆ೧;

ಜಿನಸಮಯಿಯೆನಿಸಿದೊಡ ಪಾ- ।
ಸಿನಪಱಿಪಂ[೧]ಪಚ್ಚ[೧]ವಡಿಗೆ ಮುಚ್ಚುವತೆಱದಿಂ ॥ ೩೪ ॥

ಕಟ್ಟಳಿಪಿಂದೊಳ್ಗುಣವುಂ ।
ಬಿಟ್ಟುಂ ಲಘುಪಾತ್ರನಾಗಿ ಕಾಗೆಯಕೊರಲೊ- ॥
ಳ್ಕಟ್ಟಿದೊಡೆ ಪಾಱುವವನುಂ ।
ನೆಟ್ಟನೆ ಬಿಣ್ಪಿದನೆನಿಕ್ಕುಮಾರ್ಹತದಿಂದಂ ॥ ೩೫ ॥

ಪತ್ತೆಂಟು ಪಲದೊಳೊಪ್ಪಲ ।
ಕತ್ತುರಿಯುಂ ಕೂಡಲೊಡನೆ ದಳವುಳ್ಳನಿತುಂ ॥
ಕತ್ತುರಿಯಪ್ಪವೊಲಾರ್ಹತ- ।
ದೊತ್ತುಳ್ಳಂ ಧನ್ಯಸಮಯಿ ದೇವನೆನಿಕ್ಕುಂ ॥ ೩೬ ॥

ಜಿನಧರ್ಮ್ಮದ ವಾರ್ತ್ತೆಯನೊಂ- ।
ದಿನಿಸಾನುಮನಱಿವಡನ್ಯಸಮಯದ ಮುನಿಗಳ್ ॥
[೨]ಜಿನಮು[೨]ನಿಗೆ ದೊರೆ ಸಮಂತಿವ- ।
ರೆನಿಸಲ್ತಾವಾರ್ಪ್ಪರಿನಿಸು ದಯೆಯುೞಿವುದಱಿಂ ॥ ೩೭ ॥

ಸಲೆನಿಚ್ಚಂ ಮೃಗಕುಳಮಂ ।
ಕೊಲುತಿರ್ಪ್ಪನುಮೊರ್ಮ್ಮೆ ರಿಷಿಯರಂ ಕಂಡಂದಾ ॥
ಪೊಲದಲ್ಲಿಮೃಗಮನೆಂತುಂ ।
ಕೊಲಪಡೆಯುಂ ಧರ್ಮ್ಮವಿನ್ನವೊಳವೇ ಜಗದೊಳ್ ॥ ೩೮ ॥

ಚಳಮತಿಗಳ್ತಮ್ಮಿಚ್ಛೆಗೆ ।
ಗಳಪಿದೊಡೇಂ ಕ್ರೋಧಮಾನಮಾಯಾಲೋಭಂ- ॥
ಗಳ ದೆಸೆಯುಂ ಪೊರ್ದ್ದದ ನಿ- ।
ರ್ಮ್ಮಳಧರ್ಮ್ಮಂ ಜೈನಧರ್ಮ್ಮದಿಂ ಪೆಱತುಂಟೇ ॥ ೩೯ ॥

ಪಿತ್ತಳೆಯಂತಿರೆ ನೋಳ್ಪಡೆ ।
ಮುತ್ತಿನ ಧರ್ಮ್ಮಂಗಳೆಂತು ಪರಿಕಿಸುವೊಡೆಯು- ॥
ತ್ತ್ಯುತ್ತಮ ಸುವರ್ಣ್ಣದಂದದಿ- ।
ನೆತ್ತಂ ಲೇಸಪ್ಪುದೆಲ್ಲಿಯುಂ ಜಿನಧರ್ಮ್ಮಂ ॥ ೪೦ ॥

---

೧. ಇ—೧ಪಾಚ೧; ೨. ಇ—೨ಮನ್ನು೨;

ಪುಸಿವವನೆ ತೊಲಗು ಹಿಂಸೆಯೊ- ।
ಳಿಸಗುತ್ತಿಪ್ಪವನೆ ತೊಲಗು ಪರವಧುವಿಂಗಾ- ॥
ಟಿಸುವನೆ ತೊಲಗೆನುತುಂ ತಾಂ ।
ಪಸರಿಸುವುದು ಜೈನಧರ್ಮ್ಮಭೇರೀನಿನದಂ ॥ ೪೧ ॥

ಅಡಗಂತಿಂಬನೆ ತೊಲಗುಂ ।
ಪೆಱರೊಡವೆಯಕೊಳ್ಪತೊಲಗು ಮಧುವಂ ಕಳ್ಳಂ ॥
ಕುಡಿವವನೆ ತೊಲಗೆನುತ್ತಂ ।
ಪೊಡವಿಗೆ ಜಿನಧರ್ಮ್ಮದೊಂದೆಗೋಸನೆಯೆಸೆಗುಂ ॥ ೪೨ ॥

ಪಲವೊಳವು ಧರ್ಮ್ಮಮವಱೊ- ।
ಳ್ಫಲಮಾವುದು ಪಾಪದತ್ತಲೊಂದದ ಪೆಂಪಂ ॥
ಸಲೆತಾಳ್ದಿ ನಿಂದ ಧರ್ಮ್ಮಮೆ ।
ವಲಮಘಕುಳಹರಣಕರಣಮದೆ ಸದ್ಧರ್ಮ್ಮಂ ॥ ೪೩ ॥

ದಾನಿಗೆ ಶೌಚಿಗೆ ಸಮ್ಯ- ।
ಜ್ಞಾನಿಗೆ ಜಿನಧರ್ಮ್ಮಮರ್ತ್ಥಿಭಾವಿಸುವಂದ- ॥
ಜ್ಞಾನಿಗೆ ಖಳಂಗೆ ಪಾಪಿಗೆ ।
ಹೀನಚರಿತ್ರಂಗೆ ರುಚಿ ಜಿನೇತರಧರ್ಮ್ಮಂ ॥ ೪೪ ॥

ಈತೆಱದಿಂ ಭಾವಿಸುವೊಡೆ ।
ಪಾತಕದೊಳ್ಪೊರ್ದ್ದದೆನಿಪ ಜಿನಶಾಸನಮಂ ॥
ನೀತಿವಿದರೋಲ್ವರಲ್ಲದೆ ।
ಚಾತುರ್ಯ್ಯವಿಹೀನರೆಂತುವೊಲ್ಲರಮೋಘಂ ॥ ೪೫ ॥

ಕಡುಬಸನದಿಂದೆ ಕಿಡಿಕಿಯ-।
ರೊಡನಾಡುತಿಪ್ಪವಂಗಮಲಸದೆ ಪುಸಿಯುಂ ॥
ನುಡಿವಂಗಂ ಪ್ರಾಣಿಗಳಂ ।
ಮಡಿಪುತ್ತಿಪ್ಪಂಗಮರ್ತ್ಥಿಯೇ ಜಿನಧರ್ಮ್ಮಂ ॥ ೪೬ ॥

ಅತುಳಂ ಲೋಕದ್ವಯಕತಿ- ।
ಹಿತಮೆನಿಸಿದ ಜೈನಧರ್ಮ್ಮಮೆಂತುಮಸಂಭಾ- ॥
ವಿತಮತಿಗೆ ಸೊಗಯಿಸದು ರಾ- ।
ಜಿತದರ್ಪ್ಪಣಮೆಂತನಾಸಿಕಂಗುಱಿಸದವೋಲ್ ॥ ೪೭ ॥

ಪತ್ತದು ನೋಣವೇಗೆಯ್ದುಂ।
ಕತ್ತುರಿಯೊಳು ಕೊಳೆಗೆಪೋಕುಮಂತಿರಲೆಂತುಂ ॥
ಪತ್ತದುದಲು ದುಶ್ಚರಿತನ।
ಚಿತ್ತಂ ಜಿನಧರ್ಮ್ಮದಲ್ಲಿ ನಿಶ್ಚಯದಿಂದಂ ॥ ೪೮ ॥

ಖಳಸಂಗದೊಳಿಪ್ಪನ ಮನ-।
ವೆಳಸದು ಧರ್ಮ್ಮಕ್ಕೆ ಪಾಪಮನೆ ಮಾಳ್ಪುದಱಿಂ ॥
ಗಳಗಳನೆ ಬಳಿಕೆ ನರಕ-।
ಕ್ಕಿಳಿಗುಂ ಮಱುಭವದೊಳಲ್ಲಿ ಸಂದಯಮುಂಟೇ ॥ ೪೯ ॥

ಆರಯ್ವೊಡೆಮ್ಮ ಧರ್ಮ್ಮದ।
ಸಾರತೆಯಂ ಪೋಲವನ್ಯಧರ್ಮ್ಮಂಗಳೆನು-॥
ತ್ತಾರುಂ ನುಡಿವರ್ತ್ತಂ[1]ಮಳೆ[1]-।
ನೀರಳೆಯೆಂದಪರೆ ಮಿಕ್ಕಸಮಯಿಗಳೆಲ್ಲಂ ॥ ೫೦ ॥

ನಿಯಮಿಪರುಳ್ಳುದಱಿಂ ರೂ-।
ಢಿಯಜೈನಮನೊಲ್ಲದಂಗೆ ಮತ್ತಿನಧರ್ಮ್ಮಂ ॥
ಪ್ರಿಯಮೇಕೆನಲಲೆಯೆಂಬ-।
ತ್ತೆಯಿಲ್ಲಮಲೆಯೆಂಬ ಮಾವನಿಲ್ಲಪ್ಪುದಱಿಂ ॥ ೫೧ ॥

ನಿನಗಿದು ನಿಧಿದೊರೆಕೊಂಡುದು।
ಜಿನಧರ್ಮ್ಮಂ ಕೈಕೊಳಲ್ಕಿವೇಳ್ಕುಂ ನೀನೆಂ-॥
ದೆನಿತಂ ಪೇಳ್ದಡಮೇಂ ಭ-।
ವ್ಯನಲ್ಲದಂ ಕೈಕೊಳಲ್ಕದೇನಱಿದಪನೇ ॥ ೫೨ ॥

ಪ್ರತಿಕೂಲದೆಯ್ವನೊಳ್ಪಿಡಿ-।
ದುತಂದು ಲಕ್ಷ್ಮಿಯನೆ ಕೂಡೆಯುಂ ಕೂಡದವೋಲ್ ॥
ಗತಪುಣ್ಯನಪ್ಪನೊಳ್ಜಿನ-।
ಮತಮಂ ಪತ್ತಿಸಿದೊಡಂತುಮೇಂ ಪತ್ತುಗುಮೇ ॥ ೫೩ ॥

ಪಿರಿದುಂ ದಯೆಯಿಂದಂ ಸಂ-।
ಸರಣಾಂಭೋರಾಸಿಯಿಂದೆ ಪೊಱಮಡಿಸಲ್ಪ-॥

೧. ಇ—೧ವೊಳುಂ;

ಚ್ಚರಿತದೆ ನಡಯಿಮೆನಲ್ದು- |
ಶ್ಚರಿತ್ರರಾ ಜೈನರೆಂಬುದಂ ನಗುತಿಪ್ಪರ್ || ೫೪ ||

ಜಱುಚಲ್ತುಬಾಯಗೆಬಾಯೊ- |
ಳ್ಕಿಱಿದೆಡೆಯೊಳ್ನಡೆಯಬಕ್ಕುಮಲ್ಲದೆ ಪಲವುಂ ||
ತೆಱದ ಸುಚರಿತ್ರದಿಂದಂ |
ನೆಱೆದಾರ್ಹತದಲ್ಲಿ ನಡೆಯಬಾರದಿದಾರ್ಗ್ಗಂ || ೫೫ ||

ಬಿಡದನ್ಯಧರ್ಮ್ಮಮಾರ್ಗ್ಗದೆ |
ನಡೆವಂದದೆ ಜೈನಧರ್ಮ್ಮಮಾರ್ಗ್ಗದೊಳೆಂತುಂ ||
ನಡೆಯಲ್ಬಕ್ಕುಮೆ ಪಾಪಿಗೆ |
ಕಡಲೆಗಳಂ ತಿಂಬ ಮೊಗ್ಗುಕಲ್ಗಳೊಳುಂಟೇ || ೫೬ ||

ಮೊದಲೊಳ್ಕಟುಕಂ ಪರಿಣಾ- |
ಮದೊಳಮೃತ ಸಮಾನಮಪ್ಪ ಜೈನಬ್ರತಮಂ ||
ಮದಮೋಹವ್ಯಾಧಿಗೆ ತ- |
ಕ್ಕುದೆನಿಸುವೌಷಧಮನಾರೊ ಕೈಕೊಳ್ಳದವರ್ || ೫೭ ||

ಸಾರತರ ಜೈನಮಾರ್ಗ್ಗದೊ- |
ಳೋರಂತಿರೆ ನಡೆಯದನ್ಯಮಾರ್ಗ್ಗದೆ ನಡೆದುಂ ||
ದೂರದ ತೊಱೆಯಂ ಮೀವ- |
ನ್ನೀರಿಂ ಪೋಪಂತೆ ಮೆಯ್ಯಮಲಮೋ ಪಾಪಂ || ೫೮ ||

ಪಲವುಂ ತೊಱೆಗಳ ನೀರಂ |
ಸಲೆಮಿಂಡಡೆ ಪೋಪವಲ್ಲ ಪಾಪಂಗಳು; ನಿ- ||
ರ್ಮ್ಮಳನ ಜಿನಧರ್ಮ್ಮಮೆಂಬೀ |
ಜಳದಿಂ ಕರ್ಚ್ಚುವುದು ಪಾಪಪಂಕಮನಱೆವಂ || ೫೯ ||

ವೃ|| ಇದು ಕುಲಧರ್ಮ್ಮಮಿಂತಿದನೆದಲ್ಬಿಡಲಾಱದೆನು-
ತ್ತ ದೋಷದೊ- |
ಳ್ಪುದಿದುದನಂತೆ ಪತ್ತಿನಮೆವಪ್ಪರಿಭಾವಿಸಿ-
ವಿತ್ತ್ವಸೌಖ್ಯಸಂ- |

---

೧. ಇ, ಈ—ಳ;

ಪದಮನಗಣ್ಯಪುಣ್ಯನಿಧಿಯಂ ಜಿನಧರ್ಮ್ಮಮ-
ನೆಂತುಮೊಲ್ಲ ಧಾ- |
ವತಿವಡುವಂಗೆ ಶಾಶ್ವತಸುಖಂ ದೊರೆಕೊಂಡಡ-
ಮೊಲ್ಲದಂದದಿಂ ‖ ೬೦ ‖

ಕಂ॥ ಖ್ಯಾತಿಯ ಜಿನಧರ್ಮ್ಮಕ್ಕಿನಿ |
ಸೋತೆಱಿಗದೆ¹ ವಿಕಳಮತಿಗಳಿತರರಧರ್ಮ್ಮ- ‖
ಕ್ಕೋತಿಪ್ಪರದಂತುಟೆ ತಾ- |
ನೋತಂಗಡ ರಂಭೆಯೆಂಬುದೇಂ ತಪ್ಪುಗುಮೇ ‖ ೬೧ ‖

ಜಿನಧರ್ಮ್ಮಮನೊಲ್ಲದ ಮನು- |
ಜನಿಕಾಯಕ್ಕಿತರಧರ್ಮ್ಮಮೆಸದಿಕ್ಕುಮದೆಂ- ‖
ತೆನೆ ಮರುಳಕಣ್ಗೆ ಸಾಸವಿ- |
ಯೆನಾಡೆಯುಂ ಕೊಡದತೋರಮೆಂಬರ ನುಡಿವೋಲ್ ‖ ೬೨ ‖

ಮಲವಿರಹಿತ ಜಿನಮಾರ್ಗ್ಗದೆ |
ಸಲೆನೆಗಳದೆ ತಮದೊಳೊಂದಿ ದೇಶಾಚಾರಂ ‖
ಕುಲಧರ್ಮ್ಮಮೆಂದು ಪಲರುಂ |
ಮಳಿನಾತ್ಮಕರ್ಮ್ಮಪಥದಲ್ಲಿ ನಡೆವುತ್ತಿಪ್ಪರ್ ‖ ೬೩ ‖

ಬಡತನಮೆಮ್ಮನ್ವಯದಿಂ- |
ದೆಡೆವಱಿಯದೆ ಬಂದುದೆಂದು ಬಿಡುವರ ಸಿರಿ ಸಾ- ‖
ರ್ದ್ದಡಮೇಂ ಬಂದದೆ ದೊರೆಕೊಂ- |
ಡೊಡಮೊಲ್ಲಕರ್ಮ್ಮಪಥವರ್ತ್ತಿಗಳ್ಸತ್ಪಥಮಂ ‖ ೬೪ ‖

ಯತಿಗಳ ಪೇಳ್ದೋಜೆಯಿನಾ- |
ರ್ಹತಮಂ ಕೈಕೊಂಡು ಸಚ್ಚರಿತ್ರದೆ ನಡೆದಂ ‖
ಗತಿವಡೆಗುಮೊರ್ಮ್ಮನೊಸಲಂ |
ಕ್ಷಿತಿಯೊಳ್ಪ್ರಾಟಿಸಿದೊಡಾಗಲಱಿಗುಮೆ ಸಗ್ಗಂ ‖ ೬೫ ‖

ಜಿನಮತಮಂ ಪೊರ್ದ್ದದೆ ಮ- |
ತ್ತಿನಧರ್ಮ್ಮಂ ಸುಖದಮೆಂದು ಪೊರ್ದ್ದಿರ್ದ್ದಡೆ ಪಾ- ‖

---

೧. ಇ—ಗಿಗುಗೆ;

ವಿನಪೆಡೆಯು ನೆಳಲ ನೆಳಲಿಂ- ।
ದೆ ನಂಬಿ ಸಾರ್ದ್ದಂದಮಕ್ಕುಮಕ್ಕುಮೆ ಸೌಖ್ಯಂ ॥ ೬೬ ॥

ಅಱಿನೆಂದಱಿಯದೆ ಕೈಕೊಂ- ।
ಡಱಿದುಂ ಬಿಡಲಾಗದೋಷಮೆಂಬರ ಮಾತಿಂ ॥
ಮಱುಗದೆ ನಿರ್ಮ್ಮಳಮೆನಿಸಿ- ।
ರ್ದ್ದಱಿನಂ ಕಂಡಾಗಳದನೆ ಕೈಕೊಳ್ಗಱಿವಂ ॥ ೬೭ ॥

ಅಪವರ್ಗ್ಗಮಾರ್ಗ್ಗಮಲ್ತೆಂ- ।
ದು ಪರೀಕ್ಷಿಸಿಯುಂ ಮಹಾಜನಂ ನಡೆದುದು ಸ- ॥
ತ್ಪಥಮೆನುತುಂ ಪಲರುಂ ।
ಕುಪಥದೊಳಂ ನೆಱೆಬಿಡದೆ ನಡೆವರಱಿವಿಲ್ಲದವರ್ ॥ ೬೮ ॥

ಜಿನಧರ್ಮ್ಮಮೆಂತು ನೋಳ್ಪಡ- ।
ಮನವದ್ಯಂ ಜಗದೊಳೆಂಬರಲ್ಲದೆ ಮಱೆದುಂ ॥
ಮನಮಂ ತಾರರದೆಂತುಂ ।
ಜಿನಧರ್ಮ್ಮದೊಳೆಸಗರಧಿಕಪುಣ್ಯವಿಹೀನರ್ ॥ ೬೯ ॥

ನೂರ್ವ್ವರ್ವ್ವೈಷ್ಣವರುಂ ಸಾ- ।
ಸಿರ್ವ್ವರ್ಬ್ರಾಹ್ಮರುಮನಕ್ಕುವಾಗಿಸಲಿಚ್ಛಾ- ॥
ಸಿರ್ವ್ವರ್ಮ್ಮಾಹೇಶ್ವರರನ- ।
ದೋರ್ವ್ವಂ ಜೈನನನದಾರ್ಗ್ಗೆ ಮಾಡಲುಬಕ್ಕುಂ ॥ ೭೦ ॥

ಕನಕಮುಮಂ ಜೈನಮುಮಂ ।
ಮನಕ್ಕೆವಂದಾಗ ಮಾಡಲೇಂ ಬಕ್ಕುಮೆ ಕ- ॥
ಬ್ಬುನಮುಮನಿತರನು ಮನ- ।
ದೊಂದಿನಿಸಾನುಂ ಕ್ರಿಯೆಯಿನಾಗುಮಾಡುವತೆಱದಿಂ ॥ ೭೧ ॥

ಅವರಿವರೆನ್ನದೆ ಮುಂಬಿ- ।
ಟ್ಟವನಿಪರಂ ಕೂಡೆಮಾಡಬಾರದತೆಱದಿಂ ॥
ಶಿವಗತಿಗೆ ಭಾಗ್ಯವಿಲ್ಲೆನಿ- ।
ಪವರಂ ಜೈನಕ್ಕೆ ತರಲು ಬಾರದದೆಂತುಂ ॥ ೭೨ ॥

ಜಿತದೋಷಂ ಶುಚಿ ಲೋಕ- ।
ಸ್ತುತನೆನಿಪವ ಪಿಡಿಯಲಾರ್ಪ್ಪನಂತಲ್ಲದೆ ದುಃ- ॥
ಕೃತಿಗೆ ಸದೋಷಂಗೆ ಜಿನ- ।
ಬ್ರತಮಂ ದಿಬ್ಯಮುಮನೆಂತು ಪಿಡಿಯಲ್ಬಕ್ಕುಂ ॥ ೭೩ ॥

ನಾನಾಸ್ವರೂಪದಿಂದಮೆ ।
ಯೋನಿಗಳೆಂಭತ್ತನಾಲ್ಕುಲಕ್ಷೆಯೊಳಮನಂ- ॥
ತಾನಂತಕಾಲಮುಂ ನವೆ- ।
ವೇನೋ ಜೀವಂಗಳರುಹಪದ ವಿಮುಖಂಗಳ್ ॥ ೭೪ ॥

ವೃ॥ ಪರಿಕಿಸಿನೋಳ್ಪಡಾಪ್ತರತಿ ನಿಷ್ಠುರನಾಗಮವೊಂದ-
ವಿಂದಿದು- ।
ಶ್ಚರಿತಮೆ ತಮ್ಮಧರ್ಮ್ಮಮಿದು ಮುಕ್ತಿಗೆ ಕಾರಣ-
ಮಲ್ಲದೆಂದದಂ- ।
ತರದೊಳೆ ನೋಡಿ ಬಿದ್ದಿ[೧]ರದೆ ಲೋಕದೊಳುತ್ತ-
ಮವೆಂದೆ ನಂಬಿದ- ।
ರ್ಪ್ಪರಮ ಜಿನೇಂದ್ರಧರ್ಮ್ಮದೊಳೆ ವರ್ತ್ತಿಪ-
ರುತ್ತಮ ಸೌಖ್ಯಭಾಜನರ್ ॥ ೭೫ ॥

ಹರಿಹರಬುದ್ಧ ಸೂರ್ಯ್ಯಕಮಳಾಸನಭಕ್ತರು-
ಮಂತೆ ವೇದಭ- ।
ಕ್ತರುಮವಿವೇಕದಿಂ ನಿಜನಿಜಾಗಮ ಮಾರ್ಗ್ಗದೆ-
ಪೋಗಿಭಾಗ್ಯದಿಂ ।
ವರಜಿನಮಾರ್ಗ್ಗದಿಂ ಬಳಿಕೆಕೊಂಡು ಕುಮಾರ್ಗ್ಗ-
ಮನೆಯ್ದೆಬಿಟ್ಟು ಮ- ।
ತ್ತಿರದೆ ಜಿನೇಂದ್ರಮಾರ್ಗ್ಗದೊಳೆ ಸಂತೊಸದಿಂ-
ನಡೆವರ್ವಿವೇಕಿಗಳ್ ॥ ೭೬ ॥

ಕಂ॥ ವೈದಿಕ ವೈಷ್ಣವ ಪಾಶುಪ- ।
ತಾದಿಗಳುಂ ಜೈನರಪ್ಪರಾ ಜೈನರದೆಂ- ॥

೧. ಇ—ಟ್ಟ;

ದಾಗಿಯುಮಂತಾಸಮಯಿಗ- ।
ಳಾದುದುಮಂ ಮಱಿದುಮಪ್ಪಡಂ ಕೇಳ್ದಱಿಯೇಂ || ೭೭ ||

ಜಿನಮಾರ್ಗ್ಗದೆ ನಡೆವಂ ಮ- ।
ತ್ತಿನಸಮಯಕ್ಕೆಱಗನನ್ಯಸಮಯದ ಗುರುವುಂ ॥
ಜಿನಮತಮಂ ಕೇಳ್ದರೆ ಮು- ।
ನ್ನಿನ ತಪಮಂ ಬಿಟ್ಟು ಜೈನನಾಗದೆ ಮಾಣಂ || ೭೮ ||

ಒಂದಂದಮಾಗಮಂ ಮ- ।
ತ್ತೊಂದಂದಂ ದೆಯ್ವದಂದಮಾಚರಣಂ ಬೇ- ॥
ಱೊಂದಂದಮೊಂದವಿಂದಿಯ ।
ಚಂದಮೊದಲ್ ಜೈನರಲ್ಲದವರೊಂದಂದಂ || ೭೯ ||

ವೃ॥ ಆಪ್ತನಶೇಷದೋಷಪರಿವರ್ಜ್ಜಿತಮಾಗಲೆವೇಳ್ಕುಮನ್ನನ- ।
ಪ್ಪಾಪ್ತನಸೂಕ್ತಮುಂ ಶಿವಸುಖಪ್ರದಮಾಗಲೆ-
ವೇಳ್ಕುಮಂತೆ ಮ- ।
ತ್ತಾಪ್ತನಿರೂಪಿತಂ ಚರಿತಮುತ್ತಮಮಾಗಲೆ-
ವೇಳ್ಕುಮಾಸುಖಾ- ।
ವಾಪ್ತಿಗಿದಲ್ತೆ ಮಾರ್ಗ್ಗಮಿನಿತಲ್ಲದಮಾರ್ಗ್ಗಮೆ-
ಮಾರ್ಗ್ಗಮಲ್ಲದೇ || ೮೦ ||

ಕಂ॥ ವಸತಿಸುಖವಸತಿ ಮಾರ್ಗ್ಗಂ ।
ಪ್ರಸಿದ್ಧ ಸೌಖ್ಯಕ್ಕೆ ಮಾರ್ಗ್ಗಮಾಗಮಮತ್ಯಂ- ॥
ತ ಸುಖಾಗಮಮುದಱಿಂ- ।
ದೆ ಸಾರಮೆಂತೆಂತು ನೋಳ್ಪಡಂ ಜಿನಮಾರ್ಗ್ಗಂ || ೮೧ ||

ವೃ॥ ನಿಡುಮಾಳಂ ಮುಂತೆ ನೀರಿಲ್ಲಣಮೆಮಗುಳ್ಪಡಂ-
ಪಿಂತಣೂಗ್ಗೆಂಟುಕಳ್ಳ- ।
ರ್ಬ್ಬಡಿವಪ್ಪಾರ್ದ್ದಿರ್ದ್ದ ಪೊತ್ತುಂ ಪಗಲಿಳಿದ-
ಪುದೆಂದಂಜುತಂ ಬಟ್ಟೆವೋಪಂ ।

ಗೆಡೆಯೊಳ್ಪಣ್ತಿರ್ದ್ದರ್ಮಾವುಂ ಸುಭಟರನೆರವುಂ-
ನೀರುಮಿಪ್ಪಂತಿರಿರ್ದ್ದ- ।
ತ್ತೆಡರಾದಂ ಸತ್ತಜೀವಾವಳಿಗೆ ಭುವನಕಾಂತಾರ-
ದೊಳ್ ಜೈನಧರ್ಮ್ಮಂ ॥ ೮೨ ॥

ಅನಿತುಂ ಕಲ್ಪದ್ರುಮಂಗಳ್ನೆರದು ಕುಡುವೊಡಂದಂ-
ದಂ ತಾನೆಮುಂಕೊಂ- ।
ಡನಿತುಂ ಮುನ್ನೀರ ನೀರೋರ್ವ್ವಳಿಗೆ ತೆಗೆದೊಡಂ-
ತಾನೆಗಂಭೀರವಾದಂ- ।
ದನಿತುಂ ಗೋತ್ರಾಚಳಂಗಳ್ಬಿಡದೊಡನಡಕೀಲ್ಗೊಂ-
ಡಡಂ ತಾನೆಮೇಲ್ಗ್ಗೆ- ।
ಯೆನಲೇಂ ಕೈಗೆಯ್ದುದೋ ಭೂಭುವನಕಮಳಮುಂ-
ಪೆರ್ಮ್ಮೆಯಿಂ ಜೈನಧರ್ಮ್ಮಂ ॥ ೮೩ ॥

ಕಂ॥ ಭ್ರಾಂತೇಂ ಮುಕ್ತಿಶ್ರೀ ಪರಿ- ।
ಯಂತಂ ಬರವೊಲ್ದು ಸುಖಮನೀವೆಡೆಯೊಳ್ತಾ- ॥
ನಂತೇಕೆ ಕಾಮಧೇನುವಿ- ।
ನಂತುಟೆ ಜಿನಧರ್ಮ್ಮದಲ್ಲಿ ಸಂದಯಮುಂಟೇ ॥ ೮೪ ॥

ಅಕ್ಷೂಣಮಪ್ಪ ಸುಖಮನ- ।
ಪೇಕ್ಷಿಸುವಂ ಜೈನಧರ್ಮ್ಮಮಾರ್ಗ್ಗದೆ ನಡೆಯು- ॥
ಲ್ದಕ್ಷನೆನಿಪ್ಪುದು ದಯೆಯಿಂ ।
ರಕ್ಷಿಸುವುದು ಜೀವನಿಕರಮಂ ನಿಶ್ಚಯದಿಂ ॥ ೮೫ ॥

ಕಡೆಯಿಲ್ಲದ ಸಂಸಾರದ ।
ಕಡೆಯೆಯ್ದುವ ಬುದ್ಧಿಯುಳ್ಳೊಡರುಹತ್ಪದಮಂ ॥
ಬಿಡದೆ ನಡೆವುತ್ತಮಿಪ್ಪುದು ।
ನಡೆವುದು ಜಿನಧರ್ಮ್ಮಮಾರ್ಗ್ಗದಿಂ ಮತಿವಂತಂ ॥ ೮೬ ॥

ಜಿನಧರ್ಮ್ಮಮೊಳ್ಳಿತೆಂದೊಂ- ।
ದಿನಿಸಾನುಂ ಮೆಚ್ಚಿದನಿತಱಿಂ ದುರ್ಗ್ಗತಿ ಭಾ- ॥
ಜನನಲ್ಲನೆಂದೊಡನಿಸಂ ।
ಜಿನಮಾರ್ಗ್ಗದೆ ನಡೆವವಂಗೆ ಗಹನಮೆ ಮೋಕ್ಷಂ ॥ ೮೭ ॥

ಪೆಱರಂ ತನ್ನಂತಿರೆ ಬಗೆ- ।
ದಱಿವುಳ್ಳರ ಪೇಳ್ದು ಗೆಯ್ದು ದುರಿತದ ಬೇರೊ- ॥
ಳ್ನೆಱೆ ಬೆನ್ನೀರಂ ಪೊಯ್ದುವ- ।
ನುಱುವಱಿವ ಸ್ವಾರ್ತ್ಥವಿಕಳನಿದನೊಲ್ಲದವಂ ॥ ೮೮ ॥

ಒಡವೆಯುಮನೊಡಲುಮಂ ಮಡ-।
ಗಿಡದಂತವನೆಯ್ದೆ ದಾನದಿಂ ತಪದಿಂ ಪೂ- ॥
ಣ್ದೊಡೆಯುಡುಗದೆ ತವಿಸುವವಂ ।
ಪಡೆವುದು ಪಿರಿದಾಯ್ತು ಪರಮ ಸೌಖ್ಯಾಸ್ಪದಮಂ ॥ ೮೯ ॥

ತನುವಂ ಸುವ್ರತದಿಂದಂ ।
ಧನಮಂ ಸತ್ಪಾತ್ರದಾನದಿಂದಂ ತವಿಪಾ- ॥
ತನಜನ್ಮಂ ಸಫಲಂ ಮ- ।
ತ್ತಿನವಂ ತಾಂ ಜನ್ಮಿಯೆನಿಸಿ ಜೀವನ್ಮೃತಕಂ ॥ ೯೦ ॥

ತನುವಿತ್ತಮೆಂಬಬಿ[1]ತ್ತಂ ।
ಜಿನಧರ್ಮ್ಮಕ್ಷೇತ್ರದಲ್ಲಿ ಪದದಲಿ ಬಿತ್ತಿ- ॥
ರ್ದ್ದನುಪಮ ಸುಖಮಂ ಬೆಳವಾ ।
ಮನುಜಂ ಮತ್ತಿವನನೊಲ್ಲದಂ ಮತಿಹೀನಂ ॥ ೯೧ ॥

ಮ[2]ದದಿಂ ಜಿನಮಾರ್ಗ್ಗದೊಳೆಸ- ।
ಗದೆ ಮುನ್ನಿನ ಸುಕೃತಫಲಮನನುಭವಿಸುವವಂ- ॥
ಗದೆ ಸಫಲಂ ತ[3]ದ್ಭವದೊಳೆ ।
ಕದಳೀಫಲದಂತೆ ಮೇಲೆ ಫಲವಿಲ್ಲೆಂತುಂ ॥ ೯೨ ॥

ಮಱೆದಿರ್ದ್ದಂ ಜವನೆಂದಱ- ।
ನಱಿಯದೆ ಬಸನಮನೆ ಬಿಡದೆ ಪಾಟಿಸುವಾತಂ ॥
ತೊಱೆವಱೆದುಪಟ್ಟುದೆಂದಱ- ।
ನಱಿಯದೆ ಪೊಕ್ಕಾಳ್ವನವನನನುಕರಿಸಿಕ್ಕುಂ ॥ ೯೩ ॥

೧. ಇ, ಈ—ಚಿ, ೨. ಈ—ಮು; ೩. ಇ—ಸ;

ವೃ॥ ಅಱಿಯಮೆಯಿಂದಮಕ್ಕೆ ಧನಲಾ[೧]ಭದಿನಕ್ಕೆಮ-
ಪಾತಕಂಗಳಂ- ।
ತಱಿಸಲೆಮಾಡಿಮಾಡಿದಘಮಂ ಕಳೆಯಲ್ಕಣ-
ಮಾಱೆನೆಂದು ನೀಂ ।
ಮಱುಗದಿರಮ್ಮ ಕೆಟ್ಟ[೨]ಜಪಮುಂ ತಪಮುಂ-
ನಿನಗೇಕೆಚೆಚ್ಚರಂ ।
ಮಱೆವುಗೆಸಾಲ್ಗುಮೀಗ ಮರುಳಾಗದೆ ಪೋಗಿ-
ಜಿನೇಂದ್ರಧರ್ಮ್ಮಮಂ ॥ ೯೪ ॥

ಅಳಿಯೊಡಲೆಂಬ ಮಣ್ಣಮಱೆಗೋಟೆಯೊಳಿಂ-
ದ್ರಿಯ ದುಃಪರಿಗ್ರಹಂ- ।
ಗಳನೊಳಕೊಂಡು ಜೀವನಿಲಲಾರ್ತ್ತಪನಾಳಿಯು-
ಲಗ್ಗೆಗೆಯ್ದು ತೊ- ।
ತ್ತಳದುಳಿದಿಪ್ಪನುದ್ದವರಿಯಿಂ ಜವನಂತದಱಿಂದೆ ನಂಬಿ ನಿ- ।
ರ್ಮ್ಮಳ ಜಿನಧರ್ಮ್ಮ ಮಾರ್ಗ್ಗದೊಳೆ ನೀಂ ನಡೆದೆಯ್ದ-
ಪವರ್ಗ್ಗದುರ್ಗ್ಗಮಂ ॥ ೯೫ ॥

ಕರಡಿಪಿಪೀಲಿಕಾವಳಿಗೆ ನಾಲಗೆಮಾಸುವವೋಲ್-
ಯಮಂ ಭಯಂ- ।
ಕರರಸನಾಗ್ರಮಂ ಧರೆಗೆಪಾಸಿದನಲ್ಲಿಗೆ ಕಾಯ-
ಲಾರ್ಪ್ಪುದೇ ।
ಕರಿತುರಗಂ ಪದಾತಿಕವಚಂ ನಿಜದೋರ್ವ್ವಳ-
ಗರ್ವ್ವವಮ್ಮ ನೀಂ ।
ಮರುಳೆನೆ ಬಂದು ಪೊರ್ದ್ದುಶರಣಿಂ ನಿನಗೇಂ-
ಪೆಱತುಂಟೆಧರ್ಮ್ಮಮಂ ॥ ೯೬ ॥

ಕೊಳೆವನಿನೆತ್ತರೊಳ್ಕಲಸಿ ಸಿದ್ದಿಗೆಯೊಳ್ಳೆಲ-
ಸಿರ್ದ್ದಕೀವಿನಂ- ।
ತೊಳಗಿರೆ ನೆತ್ತರಿಂದಡಗಿ ನೀಂ ಮಿದುಳಿಂ-
ದೆಲುವಿಂದಮೇಧ್ಯದಿಂ ।

೧. ಇ—ಲೋ; ೨. ಇ—ಟ್ಟ;

ಬಳಿಕದು ತೀವಿಪಂಗಡಿವೊಲಾದೊಡಲಲ್ಲಿ ಮಹಾತ್ಮ ನಿನ್ನ ನಿ-।
ರ್ಮ್ಮಳತೆಯನೊಕ್ಕುಪೊರ್ದ್ದಿರದೆ ಪೊರ್ದ್ದು-
ನಿರಂತರ ಸೌಖ್ಯಕೋಟಿಯಂ ॥ ೯೭ ॥

ನರಕಮನುಷ್ಯತಿರ್ಯ್ಯಗಮರಾಜ್ಯಚತುರ್ಗ್ಗತಿಯಲ್ಲಿ-
ನೀಂ ನಿರಂ- ।
ತರಮೆನಿತಾನುಮಂದದಶರೀರದ ಭಾರದೊಳೊಂದಿ-
ಹಾಸ್ಯದೊ- ।
ಳ್ಪೊರದಪೆ ಧರ್ಮ್ಮಮಂ ಪಿಡಿದುನೆಮ್ಮಪವರ್ಗ್ಗ-
ಮನೇಕೆ ಜೀವಸಂ- ।
ಸರಣಮಹಾಂಬುರಾಸಿಯೊಳಗದ್ದುಗು ಮುನ್ನಿನ-
ಕೇಡುಸಾಲದೇ ॥ ೯೮ ॥

ಒದವಿದ ಮಿಥ್ಯೆಯೊಂದುವಶದಿಂದಮೆಮಾಣದೆ-
ಗಾಣದೆತ್ತು ಮೆ- ।
ಟ್ಟಿದುದನೆ ಮೆಟ್ಟಿಕೂಡೆ ತಿರಿವಂದದೊಳೀತ್ರಿ-
ಜಗಂಗಳೊಳ್ತೊಳ- ।
ಲ್ದುದು ನಿನಗಾಗದುಃಖಮುದಱಿಂ ತ್ರಿಜಗಾಗ್ರ-
ಮನೆಯ್ದಿನಿತ್ಯ ಸೌ- ।
ಖ್ಯದೊಳಿರು ಜೀವನಿಶ್ಚಳಿತ ದರ್ಶನಬೋಧ-
ಚರಿತ್ರರೂಪದಿಂ ॥ ೯೯ ॥

ಮದದಿನಗುರ್ವ್ವವೆತ್ತಮುಳಿಸಿಂ ಕೊಳೆಯಿಂ-
ದಘ ಲೋಹಬಂಧಮಾ- ।
ದುದು ಬಳಿಕಂತೆ ಪುಣ್ಯದೊಳೆ ಭೋಗಸುವರ್ಣ್ಣ-
ಸುಸೂತ್ರಬಂಧಮಾ- ।
ದುದು ನಿನಗಮ್ಮ ಭದ್ರಗುಣಸೇತು ನಿರಂಕುಶ-
ನಾಗಿ ಬಂಧಯು- ।
ಗ್ಮದತೊಡರೆಲ್ಲಮಂ ಪಱಿದು ನೀಂ ಪುಗುಮುಕ್ತಿ-
ವನಾಂತರಾಳಮಂ ॥ ೧೦೦ ॥

ಪಗೆನಿನಗೀರ್ವ್ವರಲ್ತೆ ಸುಖದುಃಖಫಲಂಗಳನೂಡಿ-
ಕೊಲ್ವ ಜೆ- |
ಟ್ಟಿಗರಿರೆ ಪುಣ್ಯಪಾಪಖಳರಿರ್ದ್ದಪರಂತವರ್ಗೇಕೆ-
ಪಕ್ಕುಗೊ- |
ಟ್ಟಘುಪಡುತಿಪ್ಪೆ ನಂಬದಿರವಂದಿರನೆಲ್ಲಿಯುಮು-
ಮಾತ್ಮ ನಿಮ್ಮ ನಂ- |
ಬುಗೆ ನೆನೆ ಸಂತತಂ ಜಿನಗುಣಸ್ತವದಿವ್ಯವಿಷಾಪ-
ಹಾರಮಂ ‖ ೧೦೧ ‖

ಜವದೊಳೆ ಪುಣ್ಯಪಾಪದಪೊನಲ್ಕವಿದಪ್ಪುದು ಬೇಗಮೇರೆಗೆ- |
ಟ್ಟವಿಚಳಶುದ್ಧಭಾವದೊಳೆನಿಂದು ನಿಜೋರ್ಜ್ಜಿತ-
ಕರ್ಮ್ಮದೀರ್ಗ್ಘಿಕಾಂ- |
ಬುವನು೧ಗಿತೊತ್ತಿ೧ಜೈನಮತ ಪಾತ್ರದೊಳಂತವು-
ಕೂಡಿ ನಿನ್ನನೀ- |
ಭವ ಜಳರಾಶಿ ಮಧ್ಯದೊಳಗರ್ದ್ದದಮುನ್ನಮೆ-
ಭವ್ಯಚೆಲ್ವ೨ರಂ ‖ ೧೦೨ ‖

ಹೃದಯಮನೆಲ್ಲಮೆಯ್ದೆ ವೊಲಗಳ್ತಲೆತೀವಿರೆ-
ಜೀವಮುಂದುಗಾ- |
ಣದೆ ನಡೆದಂಧಕೂಪದೊಳಗೇಕೆಯೊ ಬಿರ್ದ್ದಪೆ-
ನೆನ್ನದೇಹಗೇ- |
ಹದೊಳದೆ ಬೋಧದೀಪಮುದನೀಬೆಳಗಂತದ-
ಱಿಂದೆ ಜೈನಮಾ- |
ರ್ಗ್ಗದೆ ನಡೆದೀತ್ರಿಲೋಕದೊಳಗುಳ್ಳ ಪದಾರ್ತ್ಥ-
ಮನೆಯ್ದೆ ಕಂಡಪೈ ‖ ೧೦೩ ‖

ದಾರಿದ್ರಾಗ್ನಿ ಮಹಾಕ್ಷುಧಾಗ್ನಿ ವಿಚಳತ್ಕ್ರೋ-
ಪಾಗ್ನಿ ಶೋಕಾಗ್ನಿ ದು- |
ರ್ವ್ವಾರಪ್ರಸ್ಫುರದಂಗಜಾಗ್ನಿಯೆನಿಪೀ ಪಂಚಾಗ್ನಿ-
ಯಿಂ ಜೀವನೀ- |

೧. ಇ –೧ಗತೋಡಿ೧; ೨. ಇ, ಈ—ಚ್ಚ;

ನೋರಂತೇಕೆಯೊ ಬೆಂದಪ್ಪೆನದಿಪುಬೇಗಂ-
ಜೈನಧರ್ಮ್ಮಾಮೃತಾ- ।
ಸಾರಶ್ರೋತಗಿದೆ ಶಾಂತಿಯಂ ತಳೆದು ನೀನಿಪ್ಪೆರ್-
ಕುಳಿಕೊರ್ಳ್ಳಿಡುತಂ ॥ ೧೦೪ ॥

ಜಿನಪತಿ ಪೂಜೆದಾನಮುಪವಾಸ ಸುಶೀಲಮೆನಿಪ್ಪ-
ನಾಲ್ಕುವೊ- ।
ಳ್ಪಿನ ಮೊಲೆವುತ್ತ ನಿನ್ನ ಶುಭಕರ್ಮ್ಮ ಮನೋಹರ-
ಕಾಮಧೇನು ಸೈ- ।
ಪಿನೊಳನುರಾಗದಿಂ ಕಱಿವಧರ್ಮ್ಮರಸಾಮೃತಮಂ-
ತಗುಳ್ದು ಭ- ।
ವ್ಯನತಣಿವನ್ನಮಿಂಟುತಳೆದಪ್ಪೆ ಬಳಿಕ್ಕಜರಾ-
ಮರತ್ವಮಂ ॥ ೧೦೫ ॥

ಕಂ॥ ಹೃದಯದೊಳಿಪ್ಪುದು ಪಂಕಜ- ।
ಮದಱೊಳ್ಪರಮಾತ್ಮನಿಪ್ಪನೆಂಬರಮಾತಿಂ ॥
ಕುದಿಯದೆ ದೇಹಪ್ರಮಿತಂ ।
ಸದಮಳಗುಣನಾತ್ಮನೆಂದೆ ಭಾವಿಸುಗಱಿವಂ ॥ ೧೦೬ ॥

ಬಿಡೆಬಾಹ್ಯಪದಾರ್ತ್ಥಂಗಳ ।
ತೊಡರ್ಪ್ಪನಿಂದ್ರಿಯ ಸಮಾಜನೊಳ್ಚಿತ್ತಂ ತಾಂ ॥
ನಡೆಮಾರುತನ ಲೇಪಿಲ್ಲದ ।
ಸೊಡರವೊಲಿಪ್ಪಾ ಚಿದಾತ್ಮನಂ ಧ್ಯಾನಿಸುವೆಂ ॥ ೧೦೭ ॥

ತ್ವರಿತಂ ಮುಕ್ತಿಶ್ರೀಯೊ- ।
ಳ್ಸೆರೆಯಲ್ಮಾಟಿಸುವ ಬುದ್ಧಿಯುಳ್ಳಡೆ ಬೇಗಂ ॥
ಪರಮಜಿನೋದಿತಮಾರ್ಗ್ಗದೆ ।
ಚರಿಯಿಪುದಂತದನೆ ಭಾವಿಸಿರುಳುಂ ಪಗಲುಂ ॥ ೧೦೮ ॥

೧. ಇ, ಈ—ತ್ರ;

ವೃ॥ ಜಿನಮತಮುತ್ತರೋತ್ತರ ಸುಖಪ್ರದಮೆಂದದನೆಲ್ಲ-
ಮಾರ್ಗ್ಗದಿಂ ।
ಮನವೊಸೆದೆಯ್ದೆ ಕೇಳ್ದುಮಿದೆ ನಿರ್ಮ್ಮಳ ಧರ್ಮ್ಮ-
ಮೆನುತ್ತೆ ನಂಬದಂ ।
ತನಗೆ ನಿಮಿತ್ತದಿಂ ಶಕುನದಿಂ ನೆಱೆನಂಬುಗೆ-
ಯುಳ್ಳೊಡಲ್ಲಿ ನೆ- ।
ಟ್ಟನೆ ತಿಳಿದೆಯ್ದೆ ನಂಬಿ ಬಳಿಕಾರ್ಹತನಕ್ಕೆ ವಿವೇಕಿ-
ಯಪ್ಪವಂ ॥ ೧೦೯ ॥

ಕಂ॥ ತ್ರೈಲೋಕ್ಯಸಾರಮಮೃತ ।
ಶ್ರೀಲಲನೆಯ ನೊಲಿಪುದಣ್ಣ ಪಾಲಾಮದ್ರ್ಯ- ॥
ಸಾಲೆಗುಡಿಯೆಂಬುದಂ ಬಗೆ- ।
ದಾಬೆಸದಿಂದೊಲ್ದುಕೊಳ್ಳ ಜೈನಬ್ರತಮಂ ॥ ೧೧೦ ॥

ಶುಭಮತಿಯುಂ ಸದ್ಗತಿಯುಂ ।
ಪ್ರಭುತ್ವಮುಂ ಸಕಳ ಸೌಖ್ಯಮುಂ ಶಾಂತಿಯುಮ- ॥
ತ್ಯಭಿನವಮೆನೆ ಸಮನಿಸುಗುಂ ।
ಪ್ರಭಾತದೊಳ್ ಜೈನಧರ್ಮ್ಮಮಂ ಕೇಳಲೊಡಂ ॥ ೧೧೧ ॥

ಇದನಾವನೋಜೆಯಿಂದಂ ।
ಪದಪಿಂದಿಂಬಾಗೆ ಕೇಳ್ವನಂತಾತಂ ಜೀ-॥
ವದಯಾಪರನಪ್ಪಂ ಧ- ।
ರ್ಮ್ಮದ ತೆಱನುಮನಱಿಗುಮಂತ್ಯದೊಳ್ಸುಖಿಯಕ್ಕುಂ ॥ ೧೧೨ ॥

ಧರಣಿಯನಾದರದಿಂದಂ ।
ಧರಣೀಶ್ವರರೊಲ್ದು ಪಾಲಿಸುತ್ತಿಕ್ಕೆ ಜಿನೇ- ॥
ಶ್ವರಧರ್ಮ್ಮಮೆಯ್ದೆ[೧]ಜಗ[೧]ದೊ- ।
ಳ್ಪರಿದೆಸೆಗೆ ಜಗಕ್ಕೆ ಶಾಂತಿಯಕ್ಕನವರತಂ ॥ ೧೧೩ ॥

ಪರಮಾತ್ಮನೆನಿಸಿದರುಹ- ।
ತ್ಪರಮೇಶ್ವರನಮಳ ಕೀರ್ತ್ತಿಯೆಂತಂತಿರೆ ವಿ- ॥

೧. ಅ, ಆ—ಸುಖ;

ಸ್ತರಿಸಿ ಕರವೆಸಗೆ ಬಮ್ಮಂ ।
ವಿರಚಿಸಿದೀಕಾಬ್ಯಮಖಿಳ ಬುಧಜನಸೇವ್ಯಂ ॥ ೧೧೪ ॥

ವೃ॥ ಘನಕರ್ಮ್ಮಾರಾತಿ ಸಂದೋಹಮನವಯದಿಂ-
ಗೆಲ್ದು ನಿಶ್ರೇಯಸಶ್ರೀ- ।
ವನಿತಾ ಸಂಭೋಗಸೌಖ್ಯಾಕರದೊಳಮಿತ-
ಬೋಧಾಕರಾವಾಸದೊಳ್ಬ- ।
ವ್ಯನಿಕಾಯಾಭೀಷ್ಟಲೋಕತ್ರಿತಯ ಶಿಖರದೊಳ್ನಿಂ-
ದ ಲೋಕೈಕನಾಥಂ ।
ಜನನವ್ಯಾಪಾರದೂರಂ ಕುಡುಗೆ ನಿಜಸುಖಾ-
ವಾಪ್ತಿಯಂ ಶಾಂತಿನಾಥಂ ॥ ೧೧೫ ॥

ಗದ್ಯ:— ಇದು ಭಗವದರ್ಹತ್ಪರಮೇಶ್ವರಚರಣಸ್ಮರಣಪರಿಣತಾಂತಃಕರಣ
ವೀರಣಂದಿಮುನೀಂದ್ರಚರಣಸರಸೀರುಹಷಟ್ಚರಣ ಮಿಥ್ಯಾ-
ಸಮಯತಿಮಿರಚಂಡಕಿರಣ ಸಕಳಾಗಮಾರ್ತ್ಥ-
ನಿಪುಣ ಮಹಾಕವಿ ಬ್ರಹ್ಮದೇವ ವಿರ-
ಚಿತಮಪ್ಪಸಮಯಪರೀಕ್ಷೆಯೊಳು
ಶ್ರೀಜಿನಧರ್ಮ್ಮವ್ಯಾವರಣನಂ
ಪಂಚದಶಾಧಿಕಾರಂ
ಶ್ರೀ ಶ್ರೀ ಶ್ರೀ

ಅನುಬಂಧ ೧

ಅನುಬಂಧ ೧

"ಈ" ಪ್ರತಿಯಲ್ಲಿ ಬಂದಿರುವ ಹೆಚ್ಚಿನ ಪದ್ಯಗಳು

ಪ್ರಥಮಾಧಿಕಾರಮ್

(೭೧—೭೨ನೆಯ ಪದ್ಯಗಳ ನಡುವೆ)

ವೃ॥ ಅನುಪಮ ಶಾಂತಚಿತ್ತನನುಮಾನವಿನೂತನ-
ತರ್ಕಭಾವಕಂ ।
ಜನಿತ ದಯಾಹಿತಂ ಹಿತವಿವರ್ಧನ ತತ್ಪರನಪ್ಪ ಪುಣ್ಯಭಾ- ।
ಜನನಿದನೋಜೆಯಿಂದೆಸೆಯೆ ಕೇಳ್ದು ವಿಚಾರಿಸಿ-
ಹೊಲ್ಲದಂ ಬಿಸು- ।
ಟ್ಟನುಪಮ ಜೈನಮಾರ್ಗ್ಗದೊಳ್ ತಾಂ ನಡೆಸುಂ-
ವರಮೋಕ್ಷಕಾಂಕ್ಷೆಯಿಂ ॥ ೧ ॥

ಕಂ॥ ಇಂತಪ್ಪನಾಪ್ತಸಾಗಮ- ।
ಮಿಂತಪ್ಪುದು ಧರ್ಮಮಿಂತುದೆಂದರಿದಂಗ- ॥
ತ್ಯಂತ ಸುಖಾಸ್ಪದಮಕ್ಕುಂ ।
ಭ್ರಾಂತೇಂ ಪಲಕೊಂಬುದಾಯ್ದುವಂಗಾದಪುದೇ ॥ ೨ ॥

ಶ್ರೀಮತ್ತ್ರಿದಶಪತಿ ಪ್ರಮು- ।
ಖಾಮರನಹಿತೋತ್ತಮಾಂಗಚಾಮೀಕರ ಚೂ- ॥
ಡಾಮಣಿ ಸೌಖ್ಯವಿಭಾವಿ- ।
ಶ್ರಾಮಾಸ್ಪದ ಚಾರುಚರಣನಘಸಂಹರಣಂ ॥ ೩ ॥

ವೃ॥ ಮೊದಲೊಳ್ ತಾನೆ ಜಿನೇಶ್ವರಂ ತ್ರಿಭುವನ ಸ್ತೋತ್ರೈಕ-
ಪಾತ್ರಂ ಮಹಾ- ।
ಭ್ಯುದಯ ಪ್ರಾಪ್ತಿಗೆ ಹೇತುನಿರ್ಮಳ ಗುಣಂ-
ನಿಶ್ರೇಯಸಶ್ರೀಶನ- ।
ಪ್ಪುದರಿಂದಾ ವಿಭುವಂ ಪ್ರಸನ್ನನನಶೇಷಾರಾಧ್ಯನಂ-
ಭಕ್ತಿಭಾ- ।
ವದಿನಾರಾಧಿಪುದಾಗಳುಂ ಸದಯನಂ ಲೋಕತ್ರಯ-
ಸ್ವಾಮಿಯಂ ॥ ೪ ॥

ಕಂ॥ ಆದಿಬ್ರಹ್ಮಂ ತೀವ್ರಾ- ।
ಷ್ಟಾದಶವಿಧ ದೋಷರಹಿತನಾಪ್ತಂ ತಾನೆಂ- ॥
ದಾದರದಿಂದೋಲಗಿಪುದು ।
ವಾದದೊಳೇಂ ಪೆರತುದೆಯ್ವರೊಳ್ಪುರುಳುಂಟೇ ॥ ೫ ॥

ವೃ॥ ಉದಿತ ಕ್ಷುತ್ತೃಡ್ಜರಾವಿಸ್ಮಯ ಭಯಮರಣೋದ್ವೇಗ-
ಮೋಹಪ್ರಚಿಂತಾ ।
ಮದರಾಗದ್ವೇಷ ನಿದ್ರಾಜನನ ರತಿ ರುಜಾಸ್ವೇದ-
ಖೇದಂಗಳೆಂಬೀ ।
ಪದಿನೆಂಟು ದೋಷದಿಂ ಪಿಂಗಿದ ಪುರುಷನೆ-
ಸರ್ವಜ್ಞನಾಪ್ತಂ ತ್ರಿಣೇತ್ರಂ ।
ಮದನ ಪ್ರಧ್ವಂಸಕಂ ಮಾಧವನ ಜಿನನಘಂ-
ಬುದ್ಧನೀಶಂ ಜಿನೇಶಂ ॥ ೬ ॥

ಕಂ॥ ಈಷಣೆಯಂ ನೆರೆಕೆಡಿಸಿ ವಿ- ।
ಶೇಷಗುಣಂಗಳೊಳೆ ನೆರೆದು ಭಾವಿಸುವಡೆ ನಿ- ॥
ರ್ದೋಷ ಪರಮಾತ್ಮನೆನಿಪನ- ।
ಶೇಷಕ್ಕಂ ಸ್ವಾಮಿ(ಯೆನಿ)ಪ್ಪಂಗಡ ಪೇಳ್ವೆಂ ॥ ೭ ॥

ಘಾತಿಗಳಂ ಕೆಡಿಸಿ ಮಹಾ- ।
ಖ್ಯಾತಿಮಯನೆಯ್ದೆ ಪಡೆದು(ಂ) ಸರ್ವಜ್ಞತ್ವ ॥
ಖ್ಯಾತಿಯನೆಯ್ದಿ ಬಳಿಕ್ಕೆಮ- ।
ಘಾತಿಗಳಂ ಕೆಡಿಸಿದನಾ ....ದವಂ ॥ ೮ ॥

ದ್ವಿತೀಯಾಧಿಕಾರಮ್

(೧ನೆಯ ಪದ್ಯದ ಮೊದಲು)

ಶ್ಲೋ॥ ಯಾಸದ್ರೂಪ ವಿನಾಶಿನೀ ತೃಷಕರೀ ಕಾಮೋತ್ಸ-
ವಿಧ್ವಂಸನೀ- ।
ಪುತ್ರಭ್ರಾತೃಕಳತ್ರಭೇದನಕರೀ ಧರ್ಮಸ್ಯ-
ನಿರ್ನಾಶಿನೀ ॥
ಚಕ್ಷುರ್ಮಂದಕರೀ ತಪಶ್ರುತಹರೀ ಲಜ್ಜಾತುರಚ್ಛೇದಿನೀ ।
ಸಾಮಾಪೀಡಿತ ಸರ್ವಭೂತದಹನೀ ಪ್ರಾಣಾ-
ಪಹಾರೀಕ್ಷುಧಾ ॥ ೧ ॥

ಕ್ಷುಧಾಸಮೋನಾಸ್ತಿ ಶರೀರ ಪೀಡನಂ ।
ಚಿಂತಾಸಮೋನಾಸ್ತಿ ಶರೀರ ಶೋಷಣಂ ॥
ವಿದ್ಯಾಸಮೋನಾಸ್ತಿ ಶರೀರ ಭೂಷಣಂ ।
ಕ್ಷಮಾಸಮೋನಾಸ್ತಿ ಶರೀರ ರಕ್ಷಣಂ ॥ ೨ ॥

(೫೦—೫೧ನೆಯ ಪದ್ಯಗಳ ನಡುವೆ)

ಕಂ॥ ಒಂದೆರಡು ನಾಡಪಾಲಂ ।
ತಂದಭಿಷೇಕವನೆ ಮಾಡಿ ಪಾದದ ಕೆಳಗಿಂ- ॥
ತೊಂದು ಪನಿಪರಿಯದೆಂದೊಡೆ ।
ಬಂದಣಿಕೆಯ ಶಾಂತಿ ಜಿನನ ಸಲಿಲಾತಿಶಯಂ ॥ ೧ ॥

(೫೧—೫೨ರ ನಡುವೆ)

ಭರತಂ ಮಾಡಿದ ಕೊಲ್ಲಾ- ।
ಪುರದ ಜಿನೇಶ್ವರನಲಿಪ್ಪಮಂದಾಕಾಲಂ ॥
ಕರವಿಟ್ಟಂದದೆ ಧರೆಗ- ।
ಚ್ಚರಿಯಾಗಲ್ಕೋಟಿವರ್ಷಮಿರ್ದಪುದಿನ್ನುಂ ॥ ೨ ॥
ಧರೆಪೊಗಳೆ ನೆಗಳ್ದಕೊಲ್ಲಾ- ।
ಪುರದ ಜಿನೇಶ್ವರನಲಿಪ್ಪಮುಂ ಚೋಳಂ ಬಂ- ॥

ದಿರದೊಡೆದಡೆ ಕುಲನಗದದೊ- ।
ಲಿರೆ ಭರದಿಂ ಪೂಜೆಗೆಯ್ದು ಪೋದುದು ಪುಸಿಯೇ ॥ ೩ ॥

(೫೨—೫೩ರ ನಡುವೆ.)

ಮನುಗೋತ್ರಬಾಹುಬಳಿ ನೃಪ- ।
ನ ನೆಗಳ್ತೆಯ ರಾಜಧಾನಿಯ ನೆಗಳ್ದೀ ಪೌ- ॥
ದನಪುರದಕುಕ್ಕುಟೇಶ್ವರ ।
ಜಿನಚರಣಂ ನಿಲ್ಕೆಮನ್ಮನಸ್ಸರಸಿಜದೊಳ್ ॥ ४ ॥

ಆನತ ಪೂರ್ವಕದಿಂ ತ- ।
ಜ್ಜಿನಚರಣಾಂಗುಷ್ಠ ನಖಮಣಿದ್ಯುತಿಯಿಂ ಮು- ॥
ನ್ನಿನ ತಮ್ಮನುಭವಮನರಿವರ್ ।
ಮನುಜರಿಂದೇ ತೀರ್ಥಕರನ ಪೆಂಪತಿಶಯಮೋ ॥ ೫ ॥

ಶ್ರೀವಿಂಧ್ಯಾಚಳ ತಟದೊಳಿ ।
ರೇವಾನದಿ ಪುಟ್ಟಿದಲ್ಲಿ ಶಾಸನದೇವೀ ॥
ದೇವಕೃತಾತಿಶಯಂ ವಸು- ।
ಧಾ ವಿಶ್ರುತಮಾದುದಲ್ಲಿ ಪವಣರ ತೀರ್ಥಂ ॥ ೬ ॥

ಮನುಜರ್ಬಂದುರೆ ಕವಸಾ- ।
ಯೆನುತಂ ಕರಯುಗದಿನೆರಡು ಕಲ್ಲಂ ಪಿಡಿದೊ- ॥
ಯ್ಯನಿಕಾಟಿಸಿ ನೋಡಲೊಡಂ ।
ಮುನಿಯುಗ ಬೀಜಂಗಳಕ್ಕುಮಿನ್ನುಂ ನಗದೊಳ್ ॥ ೭ ॥

ತೃತೀಯಾಧಿಕಾರಮ್

(೬೬—೬೭ನೆಯ ಪದ್ಯಗಳ ನಡುವೆ)

ಕಂ॥ ಓತು ಜಿನಮಾರ್ಗಮಂ ಕೇ- ।
ಳ್ದಾ ತೆರದಿಂ ನಡೆಯದನ್ಯಮಾರ್ಗದೆ ನಡೆವಂ ॥
ಮಾತೇನೊ ಮತ್ತಮಾ ಪೊರ- ।
ಸಾತಗುಣಿಯೆನಿಪತೆರದೇನಾತ್ಮದ್ರೋಹಂ ॥ ೧ ॥

ಚತುರ್ಥಾಧಿಕಾರಮ್

(೩೩, ೩೪ನೆಯ ಪದ್ಯಗಳ ನಡುವೆ)

ಕೊಳೆದೋದುಗಳಂ ಪಲವಂ- ।
ಗಳ ಪಲ್ಕಲ್ತಾಪ್ತನಿನ್ನನೆಂದರಿಯದಪಂ- ॥
ಗಳಪನುಮುತ್ತಮ ಜೈನಂ ।
ಗಿಳಿಯೆಂಬುದು ಯೋಗ್ಯನೆನ್ನದಿರ್ಪುದು ಮರೆದುಂ ॥ ೧ ॥

(೪೨—೪೩ರ ನಡುವೆ)

ಅಳವಿಗಳಿದ್ದುರ್ಗಂ ಸೌಖ್ಯ- ।
ಕ್ಕೆಳಸಿ ತಪಂಬಿಟ್ಟು ವಿಷಯಲೋಲಂ ಕಡೆಯೊಳ್ ॥
ಖಳಸಂಸ್ಕೃತಿ ವಿಷಯಲದ ।
ಕ್ಕೆಳಸುಗುಮಳೆಗಾಡಿ ಬಳಮಂ ಕೆಡಿಪುವವೋಲ್ ॥ ೨ ॥

ಕಿಸುಗುಳದರಾಸಿ ತನ್ನೊಡ- ।
ಲೆಸಕಮನರಿದೂರರ ಸಿರೆಕಾಯ್ಕನೃತಲೆಮ- ॥
ಟ್ಟಸಗಂ ಬಡಿವಂದೇಮ- ।
ರ್ಚಿಸುತಿರ್ಪುದೆ ಕಿಡಿವಡಲ್ಗೆ ತಮ್ಮಮನರುವಂ ॥ ೩ ॥

(೫೧—೫೨ರ ನಡುವೆ)

ದೇವಾರ್ಚನೆಗೆಡೆಮಾಳ್ಪ- ।
ಪ್ಪೂರ್ವಂ ತಂದೀವರೊಳ್ಪಿತಪ್ಪರ್ಚನೆಯುಂ ॥
ಶ್ರಾವಕರ್ಗೆತಂದು ಕುಡುವ- ।
ತ್ತಾರ್ವಾದರದಿಂದೆ ಜೈನ ಸಮಯಿಗಳೆಲ್ಲಂ ॥ ೪ ॥

(೫೯—೬೦ರ ನಡುವೆ)

ಶಶಿಗೆ ಮಳೆಯುಉದಯಕ್ಕಾ- ।
ಶಶಿಕರಮೆಂತೊಂದೆ ಮಾರ್ಗ್ಗಮಿನ್ನಂತಿರೆ ಭ- ॥
ವ್ಯಸಮಾಜಕ್ಕೆಲ್ಲಂ ಸಂ- ।
ತೊಸಮಾಗೆ ನೆಗಳಲರಿವೊಡೆ ಆತಂ ಜೈನಂ ॥ ೫ ॥

(೯೩—೯೪ರ ನಡುವೆ)

ಅಯ್ದು ಪ್ರತಕ್ಕೆ ಭವ್ಯ- ।
ಮೆಯ್ದಂದು ಜಿನೇಂದ್ರಚರಣಮಂ ಭಾವಿಸುವಂ- ॥
ಗೆಯ್ದುಗುಮಿದನೊಲ್ಲದವಂ ।
ಯೆಯ್ದಲ್ಕಾರ್ತ್ರಪನೆ ವಿಮಳಮುಕ್ತಿಶ್ರೀಯಂ ॥ ೬ ॥

ಪಂಚಮಾಧಿಕಾರಮ್

(೧೦೩—೧೦೪ನೆಯ ಪದ್ಯಗಳ ನಡುವೆ)

ಗಂಡನದೆಸೆಯತ್ತವರಂ ।
ಕಂಡಡೆ ಕಡೆಗಣಿಸುವತ್ತ್ರವರ್ಮನೆಯವರಂ ॥
ಕಂಡೊಡೆ ರಾಗಿಸಿಕರೆದೊಡ- ।
ನುಂಡುಂ ಬೇಡಿದುದನೀವರರಗುಲಿವೆಂಡಿರ್ ॥ ೧ ॥

(೧೦೯—೧೧೦ರ ನಡುವೆ)

ಶ್ರಾವಕ ಶೂದ್ರರ ಮನೆಯೊ- ।
ಳ್ತಾವುಣ್ಬಡಮುಣ್ಗೆ ಜಾತಿನಾಶಂ ಮಾಡ- ॥
ಲ್ಕಾವಾರೆವು ಉಣೆವೆಂಬ- ।
ದ್ರ್ಪೀವರದೊರೆಯೆನಿಪ ಜೈನಸಮಯಿಯಮನೆಯೊಳ್ ॥ ೨ ॥

ಎಮಗೆಮ್ಮದೆಯ್ವಮುಕ್ಕುಂ ।
ನಿಮಗಂ ನಿಮ್ಮರುಹನಕ್ಕುಮಿರಿವೊಲ್ಲದಡಿಂ ॥
ನೆಮಗೇನೊ ಮಡಕೆಯುಂ ಸಡು- ।
ವವಳಂ ಜೈನೆಯೆನೆ ತನ್ನಿಮೆಂಬರ್ ಪೆಂಡಿರ್ ॥ ೩ ॥

(೧೪೦—೧೪೧ರ ನಡುವೆ)

ಪಿರಿದಪ್ಪುತ್ಸವದಿಂ ಭ- ।
ವ್ಯರಕಾಲಂ ತಾನೆಕಚ್ಚ್ರಪೂಜಿಸಿಕರಮಾ- ॥
ದರದಿಂ ಖುಷಿಯುಗ್ಗ್ರಂತಂ- ।
ತಿರೆ ಭಕ್ತಿಯಿನಕ್ಕವೇಳ್ಕುಮುತ್ತಮ ಜೈನಂ ॥ ೪ ॥

(೧೪೪—೧೪೫ರ ನಡುವೆ)

ವೃ|| ಪರಮಾನಂತ ಚತುಷ್ಟಯಾತ್ಮಕ ನರಂ ಪೊಂದರ್ದ್ಧಿಯಿಂ-
ಕಲ್ಲೊಳೊ- |
ಪ್ಪಿರೆ ಮಾಡಿದ್ದುರ್ದನೊಂದಚೇತನಮನೋರಂತ-
ರ್ಚಿರ್ಪಂ ಚೇತನಂ |
ಪರಮಾನಂತ ಚತುಷ್ಟಯಾತ್ಮಕನೆನಿಪ್ಪಾ ಯೋಗಿಯುಂ-
ಜೈನರುಂ |
ದೊರೆಕೊಂಡಾಗಳೆ ತುಷ್ಟಿಮಾಡಿದರದೇಂ ಮೋಕ್ಷಾಂ-
ಗನಾಕಾಂಕ್ಷಿತಂ || ೫ ||

ಷಷ್ಠಾಧಿಕಾರಮ್

(೬೫—೬೬ನೆಯ ಪದ್ಯಗಳ ನಡುವೆ)

ಕಂ|| ರತ್ನಮನೊಂದನೆ ಪಡೆದಾ |
ಯತ್ನದೆ ಸುಖಿಯಾಗಲಾರ್ಪನೆಂದೊಡೆ ಭವ್ಯಂ ||
ರತ್ನತ್ರಯಮಂ ಪಡೆದುಂ |
ನೂತ್ನಸುಖಕ್ಕಧಿಪನಪ್ಪುದೊಂದಚ್ಚರಿಯೇ || ೧ ||

(೮೪—೮೫ರ ನಡುವೆ)

ತತ್ವದೊಳಗರಿಯರೆಂತುಂ |
ಸಾತ್ವಿಕದಿಂ ಮರೆದುಮಪ್ಪಡಂ ನೆಗಳ್ದರಿಯರ್ ||
ಸತ್ವವಿಹಿತಮಾಗಲರಿಯ- |
ರ್ತತ್ವಜ್ಞರೆನಿಪ್ಪ ಜೈನರಲ್ಲದ ಮನುಜರ್ || ೨ ||

ಅಷ್ಟಮಾಧಿಕಾರಮ್

(೩೬—೩೮ನೆಯ ಪದ್ಯಗಳ ನಡುವೆ)

ಕಂ|| ನರರಸ್ತಿ ಹಸ್ತಿ ಚರ್ಮ್ಮಂ |
ಪರೇತವನಮೊಳಕೆ ಪಾವುಶೂಲಂ ಭಸ್ಮಂ ||
ಮರುಳ ಪಡೆಯೆಂಬಿವಿನಿತುಂ |
ಪೊರಗಾಗಿರೆ ಬಣ್ಣಿಸರ್ದಾಪ್ತನನೆಂದುಂ || ೧ ||

ತೊಡುವನೆಲ್ವುಗಳಜಿನಮ- ।
ನಡುವಂ ತಾಂ ನರಪಾಳದೊಳ್ತಿರಿದುಂ ॥
ಪಡುವಂ ಮಸಣದೊಳೆಂಬ- ।
ಕ್ಕಡೆಪಟ್ಟನುಮಿಂತೆ ನೆಗಳನಾಪ್ತನೆ ನೆಗಳ್ವಂ ॥ ೨ ॥

ಪೊಲೆಯುನೊಡನಾಗಿಯುಂದಂ- ।
ಬಲಮುಂ ಸೇವಿಸಿದನೆಂಬರೆಲ್ಲಂ ಸಲೆ ನಿ- ॥
ರ್ಮಳನುಂ ಪಾಪಿಷ್ಟರನುಂ ।
ಗಲೆವಡಿಸುವರರಿಯದಗ್ಗಳೀನುಂ ನುಡಿಯರ್ ॥ ೩ ॥

ದೋಷಂ ಮಾಡಿದನಪ್ಪಡೆ ।
ಪೋಷಿಸುವವ(ರುವ)ರಿಲ್ಲರುದ್ರನಂ ಜಗದೊಳಗೆಂ- ॥
ದಾಸಮಯದ ಜಡರೂಳ್ವ- ।
ಸ್ಸಾರ್ಥಿಸರೇ ನರಕದಲ್ಲಿ ನಾರಕರವನಂ ॥ ೪ ॥

(೫೨—೫೩ರ ನಡುವೆ)

ಧುರದೊಳ್;ದುರ್ವಿಪ ಲಂಕಾ-।
ಸುರನಂ ಕೊಂದಂ ಕಪಾಲದೊಳ್ತಿರಿದುಂಡಂ ॥
ಸುರಮುನಿ ಪತ್ನಿಯರೊಳ್ಪಾ- ।
ದರವಾಡಿದನಾಪ್ತನೆನೆಲೆವೇಡರಿವಾತಂ ॥ ೫ ॥

(೮೬—೮೭ರ ನಡುವೆ)

ಲಿಂಗಾರಾಧನೆ ಮಾಡುವ- ।
ವಂಗದೆತಾಂ ಸ್ವಲ್ಪಸೌಖ್ಯಮನೆ ಕುಡಿಗುಂ ಸ್ವ- ॥
ರ್ಗ್ಗಂಗಳ ಸುಖಮುಂ ಮುಕ್ತಿಯು-।
ಮಂ ಗುಣನಿಧಿ ಜಿನನೆ ಕುಡುಗುಮರ್ಚಿಸು ಜಿನನಂ ॥ ೬ ॥

ಸುರರಿಪುಗಳೊಡನೆ ಪಿರಿದುಂ।
ಭರವಶದಿಂ ಕಾದುತಿರ್ಪುದಂ ಧ್ಯಾನಿಪುದೋ ॥
ಗಿರಿಜಾರ್ಧಾಂಗದೊಳೊಂದಿ- ।
ಪ್ಪಿರವಂ ಧ್ಯಾನಿಪುದೊ ಚಿಂತೆಗಾವುದೊ ಮುಖ್ಯಂ ॥ ೭ ॥

ಮರುಳಪಡೆಯೊಡನೆ ರಾಗದೆ।
ಪರೇತವನದಲ್ಲಿ ಕುಣಿವುದುಂ ಧ್ಯಾನಿಪುದೋ ॥
ಕರಿಚರ್ಮಾಂಬರನಾಗಿ- ।
ಪ್ಪಿರವಂ ಪುಲಿದೊವಲನುಟ್ಟುದುಂ ಧ್ಯಾನಿಪುದೋ ॥ ೮ ॥

(೨೨೯—೨೩೦ರ ನಡುವೆ)

ಅಯುನಯಮಿಲ್ಲದುದಂ ದೋ- ।
ಷಿಯುಮಪ್ಪುದುನಾಪ್ತನೆಸಕದೊಳು ಪುಟ್ಟಿದೊಡಂ ॥
ಪ್ರಿಯದಿಂ ಸಾರುವುದೇ ತ- ।
ನ್ನಯ ಮರುಳೇ ಮುಚ್ಚಿಕಳೆವುದೆಂಬುದನರಿಯಾ ॥ ೯ ॥

ನವಮಾಧಿಕಾರಮ್

(೨೬—೨೭ನೆಯ ಪದ್ಯಗಳ ನಡುವೆ)

ಕಂ॥ ಕುರುವಾದಡೆ ಜನಕಂ ಪೇ- ।
ಗ್ಗರಕಾದೊಡೆ ಮಸಣಮಾಸಿಮೆಯೆಲ್ಲಮಂ ಮಾ- ॥
ಸಿರೆ ಹಿತಕರೆಂದು ಪರಸುವ ।
ಮರುಳಂ ಬಾರಿಸಲ್ಕೆ ಬಲ್ಲರುಮೊಳರೇ ॥ ೧ ॥

(೮೭—೮೮ರ ನಡುವೆ)

ಕರಿರತ್ನಗೋಕುಲಕ್ಕಂ ।
ತುರಗಂ ಪಾಬಿಂಗಮಾಯುಧಕ್ಕಂ ಕೂಳ್ಗಂ ॥
ಗಿರಿಗಂ ತೊರೆಗಂ ವ್ಯವಹರಿ- ।
ಸುವ ಪುಟ್ಟಂಗಂ ಮೆರಗುತಿರ್ಪ್ಪ ಮೂರ್ಖರ್ ॥ ೨ ॥

ಮನೆಯುಂ ಕಿಚ್ಚುತಗುಳ್ದೊಡೆ ।
ಮನೆಮುಟ್ಟಂ ಧಾನ್ಯವರ್ಗ್ಗಮಂ ತೆಗೆಯದೆ ನೀ- ॥
ರನೆ ಸೂಸಿ ಕೊಟ್ಟೆನುಣ್ಣಂ- ।
ದು ನಿವೇದಿಸಲುಮೊಟ್ಟನಪ್ಪರರಿವಿಲ್ಲದವರ್ ॥ ೩ ॥

ದಶಮಾಧಿಕಾರಮ್

(೨೨—೨೩ನೆಯ ಪದ್ಯಗಳ ನಡುವೆ)

ಕಂ|| ಅದರಿಂದಮೊರ್ವನೊಳು ತಾ- |
ನುದಯಿಸಿದಘುಟಂ ಸಹಾಯಮಾಗಲೆವೇಳ್ಕುಂ ||
ಮುದದಿಂ ಚಿಂತಿಸುಲೋಕಮ- |
ನೊದವಿಪೆನೆಂಬವನಮಾವುಮಂ ಘುಟಿಯಿಕುಮೇ || ೧ ||

ನಿಟ್ಟಿಸಲರಿದೆಂಬುವನಿಂ |
ಪುಟ್ಟಿತು ಲೋಕಂ ಸಮಸ್ತಮೆಂಬರಕುಮತಂ ||
ನೆಟ್ಟನೆ ಬಂಜೆಯ ಮಗನೀ |
ಸೃಷ್ಟಿಯನೊಸೆದಾಳ್ದನೆಂಬಕಡೆಯುಂ ಪೋಲ್ಕುಂ || ೨ ||

(೩೯—೪೦ರ ನಡುವೆ)

ತಂದೆ ಕಿಡನುಡಿಯೆ ತನ್ನಂ |
ನೊಂದಾಗಳು ತನ್ನ ದೇವಿ ಹೋಮಾನಳನಿಂ ||
ಬೆಂದೆಂದು ಕಾಯಲಾರದ- |
ನೆಂದುಂ ಕಾಯಲ್ಕೆ ಬಲ್ಲನೇ ಪೆರಪೆರರಂ || ೩ ||

(೧೪೨—೧೪೩ರ ನಡುವೆ)

ಹರಿವಂಶ ಪುರಾಣದೊಳೊ- |
ಪ್ಪಿರೆ ಭಾರತ ಕಥೆಯೊಳಂತೆ ರಾಮಾಯಣಮಂ ||
ವರಪದ್ಮಚರಿತೆಯೊಳ್ ಬಿ- |
ತ್ತರದಿಂದಂ ಕೇಳ್ವವಂಗೆ ಬಿಡುಗುಮೆ ಮೂಢಂ || ೪ ||

ಏಕಾದಶಾಧಿಕಾರಮ್

(೧೦—೧೧ನೆಯ ಪದ್ಯಗಳ ನಡುವೆ)

ಕಂ|| ಅಲ್ಲಿಲ್ಲಿ ನಾಲ್ಕುಮಾತಂ |
ಬಲ್ಲಂದದಿಕೂಡಿ ಮಾಡಲಾವ್ಯಾಸನಿಗಾ- ||
ಯ್ತಲ್ಲದೆ ಮುನ್ನೆ ಸ್ವಯಂಭುವ- |
ದಲ್ಲದ ಜಗವರಿಯೆ ಮತ್ತೆ ವೇದಂ ಕೃತಕಂ || ೧ ||

(೧೬—೧೭ರ ನಡುವೆ)

ವೃ॥ ಅರಿಯಲ್ಕಪ್ಪುದೆ ವೇದದರ್ಥಮೆನುತಿಪ್ಪಂತಾಮರೋ-
ವಿಪ್ರರೇ- ।
ಕರಿಯಲ್ಪಾರದು ವೇದದರ್ಥಮೆನುತುಂ ನಾನಾ-
ಕುಶಬ್ದಂಗಳಿಂ- ।
ದರಿಯಲ್ಪಾರವವಪ್ರಯೋಗಮೆನಿಪಾ ವಾಕ್ಯಂಗಳುಂ ಭಾವಿಪಂ- ।
ದರಿಯಲ್ಪಾರವವಂ ವಿವೇಕಿಗಳಗ್ಗ್ರ ಗೂಢಂಗಳಿಂ-
ಬದ್ವಿಜರ್ ॥ ೨ ॥

(೨೧—೨೨ರ ನಡುವೆ)

ನಿಯಮದೆ ಭೂತಶುದ್ಧಿಯುಮನಾಯತಪೂಜೆಯ-
ನಂತ ಶಕ್ತಿಪೂ- ।
ಜೆಯುಮನೆ ಮಂಡಲತ್ರಿತಯ ಪೂಜೆಯುಮುಂ-
ತದದೀಶಪೂಜೆಯಂ ।
ಕ್ರಿಯೆಯೊಳುಮೂರ್ತಿ ಮೂರ್ತಿಪರನಂಗಯ್ಯುತಂ-
ನೆರೆಪೂಜೆ ಪೊಂದುದಾ- ।
ರ್ತಯನೆಣಿಮಿಲ್ಲವೇದದೊಳಗಂ ತರುಪೇಳ್ದುದೆನುತ್ತ-
ಮುಬ್ಬುವರ್ ॥ ೩ ॥

ಕಂ॥ ವೇದದೊಳಗೊಳ್ಳಿತಪ್ಪುದ- ।
ನಾದರದಿಂ ಕೊಂಡು ಜೈನರುತ್ತಮರಾದರ್ ॥
ಮೇದಿನಿಯೊಳೆಂಬರೊಳ್ಪಂ ।
ವೇದಂ ಜಿನಧರ್ಮ್ಮದಲ್ಲಿ ಕೊಂಡುದನರಿಯರ್ ॥ ೪ ॥

(೪೨—೪೩ರ ನಡುವೆ)

ಆಗಳು ವಿಷಯ ಸುಖಂಗಳ ।
ಭೋಗಮದಾಗಮಮಿದೆಂದು ವಿಪ್ರರ್ನುಡಿವೀ- ॥
ರಾಗಮುಮೂರ್ಧ್ವಮನೇರದ- ।
ಧೋಗತಿಗಿಳಿಯಲ್ಕೆ ಬಯಸುತಿಪ್ಪರ್ಗೆ ನಿಜಂ ॥ ೫ ॥

(೬೨—೬೩ರ ನಡುವೆ)

ವೃ|| ಇರೆ ಕಿವಿಯಲ್ಲಿ ನೀರೆಗಡ ನಿರ್ದಹಧಾವತಿ ಯೇಕೆ-
ಕಿಚ್ಯುತಾ- |
ನಿರೆ ಹವಿಯೆಂದು ಸಂಧಿಸಲದೇಕದನಡ್ಡಡಲಿಕ್ಕಿಮುನ್ನತಾ- |
ನರಿಪುವುದೇಕೆವಾಯುವಿರಲಾ ಕಿವಿತನ್ನಲೆತಾನೆಮಾಡದೇ |
ನಿರುತಮದೆಲ್ಲಮಂ ಸುಖದೆ ಚಿಂತೆಯನೊಪ್ಪಿಸಿ-
ಕರ್ಣಕಂ ದ್ವಿಜರ್ || ೬ ||

ಕಂ|| ಇನನಿರೆ ಕಿವಿಯೊಳ್ಪಾರ್ವರ |
ಮನೆಯೊಳ್ಕತ್ತಲೆಯದೇಕೆ ಸಸಿಯಿರೆ ಗಗನ-||
ಕ್ಕೆನುತುಂ ಬೆಳಗುವರಾ ನಾ- |
ತನ ಪೆಸರುಮನೆಂಬುದಲ್ತೆ ರಾತ್ರೀ ಸತಿಯಂ || ೭ ||

(೬೯—೭೦ರ ನಡುವೆ)

ಬನ್ನಿಯ ಮರದಡಿಯೊಳು ವಿ- |
ಪ್ರೋನ್ನತರಿರಲಾಗದೆಂದು ನುಡಿವರಿದಕ್ಕಂ ||
ಜನ್ನಕ್ಕೌಪಾಸನಕಂ |
ಬನ್ನಿಯ ಮುಳ್ಳೇಕೆ ಬಾಳ್ತೆಯಾದುವೊ ಪೇಳಿಂ || ೮ ||

(೮೪—೮೫ರ ನಡುವೆ)

ಅಡಗಂ ಪೊಲೆಯುಂ ಚಿತೆಗಿ- |
ತ್ತಡೆಕೊಳ್ವುದು ಕುಲಜನಪ್ಪವಂ ಪೊಲೆಯುಂ ಮ- ||
ತ್ತಡಗರಿವಾ ಕತ್ತಿಗೆಗೊ- |
ಯ್ದಡೆನೊಸಲಿಂ ಶುದ್ಧಮಕ್ಕುಮೆಂಬಪ್ಪಾರ್ವರ್ || ೯ ||

(೮೯—೯೦ರ ನಡುವೆ)

ಸೋದರವೆನಿಸಿದ ತ್ರಸ್ನಯ |
ನಾದುಸಿಯೊಳ್ಮದುವೆ ಸಲ್ಲ ಮಧುಮಾಂಸಂ ಮೆ- ||
ಲ್ಲಾದರದಿಂ ಸೇವಿಪುದೆಲೆ |
ಬಾದಿನೊಳೇನಿದುವೆ ಧರ್ಮ್ಮಮೆಂಬರ್ಚದುರರ್ || ೧೦ ||

(೯೪—೯೯ರ ನಡುವೆ)

ಒಕ್ಕಲಿಗನಕ್ಕೆ ಪಂಚಮ- ।
ನಕ್ಕೆಮುವೇದಮನೆ ಕೇಳಲಾಗಂದೂಳ್ವ- ॥
ರ್ತಕ್ಕರನರಿದುಂ ವೇದ- ।
ಕ್ಕೊಕ್ಕಲಿಗಂ ಭಕ್ತಿಮಾಳ್ಪುದಾವುದು ದುಃಖಂ ॥ ೧೧ ॥

(೧೦೨—೧೦೩ರ ನಡುವೆ)

ಒಳ್ಪಿದನಪ್ಪುದು ಧರ್ಮ್ಮಮು- ।
ನೊಳ್ಪಿತ್ತಾಗೆಯ್ದೆ ಕೇಳ್ವುದಂತಲ್ಲದೆ ಮ- ॥
ತ್ತೊಳ್ಪಿತ್ತು ನಮ್ಮ ಶೆಟ್ಟಿಯು ।
ಬಳ್ಳಂ ಕಿರಿದೆನಿಸಿ ನೆಗಳ್ದೊಡಕ್ಕುಮೆ ಧರ್ಮಂ ॥ ೧೨ ॥

ಒಮ್ಮಡಿಪಾಪಂ ಪುಣ್ಯಂ ।
ನೂರ್ಮಡಿಯೆನಿಸುವುದು ಧರ್ಮಮಲ್ಲೆಂದೊಡೆಸಾ- ॥
ಸಿರ್ಮಡಿ ಪಾಪಂ ಪುಣ್ಯಮ- ।
ದೊಮ್ಮಡಿಯೆನಿಸುವುದು ಧರ್ಮಮಕ್ಕುಂ ಪೇಳಿಂ ॥ ೧೩ ॥

ಪಿಡಿದು ಕಡೆಯಿಕ್ಕಿ ಗಂಟಲ- ।
ನೊಡೆಯುತ್ತುದಂತು ಕೊಂದಪಶುವಂ ಕಡಿದುಂ ॥
ಸುಡುವುದು ತಿಂಬುದೆನಿಪ್ಪಾ- ।
ರಡಿಯೋದುಗಳಾಗಮುಂಗಳೆನಲಾಗರಿವಂ ॥ ೧೪ ॥

ವಿಧಿಯಿಂದಂ ಕೊಲೆ ಪುಣ್ಯಂ ।
ವಿಧಿಯಲ್ಲದೆ ಕೊಂದು ತಿನಲೆ ಸಲ್ಲದರಿಂದಂ ॥
ವಿಧಿಯಿಂದೆ ಕೊಂದ ಪಶುವಂ ।
ವಿಧಿಯಿಂದಂ ತಾವು ಸುಟ್ಟು ತಿಂಬಪಾರ್ವ್ವರ್ ॥ ೧೫ ॥

ನರ ಕರಿ ತುರಂಗ ಮೇಷೋ- ।
ತ್ಕರಮುಂ ಕಡಿದಟ್ಟು ಸುಟ್ಟು ತಿಂದಡೆ ಸಗ್ಗಂ ॥
ದೊರೆಕೊಳ್ಗುಮೆಂಬರದು ಪುಸಿ ।
ನರಕಮೆದಲು ಮುನ್ನೆ ಕಯ್ಯ ಕಟ್ಟಿದ ಪೊತ್ತಂ ॥ ೧೬ ॥

ಪಶುವಂ ಕೊಂದಡದಿಂದುಂ ।
ಪಶುವಿನ ಪಂದೊವಲಲಾದಬಸೆಯಂ ಕುಡಿದುಂ ॥
ಪಶುಕರ್ಮ್ಮಂಗೆಯ್ದುಂ ಚಿಂ- ।
ತಿಸಿದನಿತರನಿಂದ್ರವಿಭವಮಾಗದೆ ದಿಟದಿಂ ॥ ೧೭ ॥

(೧೦೭—೧೦೮ರ ನಡುವೆ)

ದ್ವಾದಶ ಮಾಸಂಗಳೊಳಂ ।
ದ್ವಾದಶವಿಧಮಪ್ಪಮಾಂಸ ಭಕ್ಷಕ್ರಿಯೆಯಿಂ ॥
ವೇದಂ ಸೂಚಿಪಕತದಿಂ ।
ಪೋದುದು ಪಾಪಕ್ರಿಯೋಪವೇತಂ ॥ ೧೮ ॥

ವೃ॥ ಪಶುವಂ ಕೊಂದದನಟ್ಟು ಸುಟ್ಟುಪಲರುಂ ತಿಂದೆಂಜಲಂ-
ತಿಂದು ಕೂ- ।
ಜಿಸುತಂ ತಾಂ ಪರಿವಂದಮೇಂ ಬಹುವಿಧಕ್ರವ್ಯಂ-
ಗಳಂತಂದು ಭ- ।
ಕ್ಷಿಸುವೊಂದಂದಮನೆಯ್ದೆ ಪೂಣಿಕಡೆಯೊಳ್ಸಾವ-
ನ್ನೆಗಂ ಕೂಡೆ ವಿ- ।
ಪ್ರಸಮಾಜಂ ನೆಗಳ್ವನ್ನೆಗಂ ತಗುಳ್ದು ವೇದಂ-
ಪೇಳ್ದುದೊಳ್ಪಿಲ್ಲದೋ ॥ ೧೯ ॥

ಕಂ॥ ಮಾದಂಗನವೊಲ್ನೆಗಳ್ದೊಡೆ ।
ಮೂದಲೆಯೊಳ್ನರಕ ಮಾರ್ಗ್ಗದೇಕೆನೆ ಕಂಡಾ ॥
ವೇದಂ ಪೇಳ್ದಡೆ ಕಿಚ್ಚುಮ- ।
ನಾದರದಿಂ ಪುಗುಗೆಬೇಯದೆಂಬಪ್ಪಾರ್ವರ್ ॥ ೨೦ ॥

ವೃ॥ ನೋಡಿಡರೆ ಪಾಪಕರ್ಮ್ಮರಮತಂಗಳನೋವವ-
ಜನ್ನದಲ್ಲಿ ಕೊಂ- ।
ಡಾಡುವದಿರ್ಪ್ಪಿಂಡುಮದನಿತ್ತಕುರುಂಬನು-
ಮಯ್ದುಜನ್ನಮಂ ।
ಮಾಡಿದನಿಪ್ಪತ್ತೊಂದು ತಲೆಯುಂ ನೆರೆಪೇಳ್ದಿವರುಂ-
ಸುಪಾಲರುಂ ।
ನಾಡರ ಸಂಗಡಂ ದಿವಿಜಲೋಕಮನೆಯ್ದುವರಿನ್ನ-
ವೋದುಗಳ್ ॥ ೨೧ ॥

ವೃ॥ ಪದೆದಾದೊಡಂತವೆ ಕೊಂದು ಸಗ್ಗಮನಕ್ಕೊಲ್ದೀ-
ವರಂದೀಯಲಾ- ।
ಗದೆತತ್ಪಾತ್ರಕಳತ್ರಮಿತ್ರನಿವಹಕ್ಕಾಡಿಂದಂ ಮಾಬಂದು ಕೂ- ।
ರದದಕೊಕ್ಕದಡಡಿಂಬ ಶಾಸ್ತ್ರದಿನಹಿಂ ಸಾಲಕ್ಷಣೋ-
ಧರ್ಮಮೆಂ- ।
ಬುದನೀ ತತ್ಸವಿತುರ್ವರೇಣ್ಯರಿಳಿದ ತ್ರೈಲೋಕ್ಯ-
ಚೂಡಾಮಣೀ ॥ ೨೨ ॥

ಕಂ॥ ಬಂದಾದನಳಿದು ತಿಂದು ಪು- ।
ರಂದರ ಲೋಕಕ್ಕೆ ಪಾರುದೋಂಗಡ ಪಾರ್ವ್ವಂ ॥
ಕೊಂದುಸ● ತಿಂಬ ಬೇಡಂ ।
ಬಂದಪನೇ ಸಗ್ಗದಿಂದಮೀಧರೆಗೆಂದುಂ ॥ ೨೩ ॥

ಅಕಟೆನ್ನದೆ ಪೇಸದೆ ತಂ- ।
ದು ಕೊಂದು ತಿಂದಾತನುಮುತ್ತಮನೆಂಬಾ ಪಾ- ॥
ತಕನೆ ಸಲೆ ಭೂಮಿಯೊಳು ಪಾ- ।
ಪಕರ್ಮಚಾಂಡಾಲನಂತ್ಯಜಂ ಪಾಪಿಷ್ಟಂ ॥ ೨೪ ॥

(೧೧೨—೧೧೩ರ ನಡುವೆ)

ಪಶುಕರ್ಮ್ಮವಂ ಗೆಯ್ವನನಿ- ।
ರಿಸುವಪೂರ್ವಲೆಯನುಮನರಸರುತ್ತಮಕುಲಜರ್ ॥
ಪಸುಕರ್ಮ್ಮಂ ಗೆಯ್ವಡೆ ಸೈ- ।
ರಿಸುವಪೂರ್ವಜಾರ್ಥಮವರನಾರಧಿಕಾರರ್ ॥ ೨೫ ॥

(೧೩೯—೧೪೦ರ ನಡುವೆ)

ಪುಟ್ಟಿಲ್ಪಡೆಯೇಂ ಮಾಳ್ಪುದು ।
ನೆಟ್ಟನೆ ಘೋಡಶದ ವಿಧಿಯಿನೆನಗೆಂದೋರ್ವ್ವಂ ॥
ಕಟ್ಟಕಡೆದಾಗಳಲ್ಲಿಂ ।
ಕಟ್ಟಿದ ಪಾಪಿಯನೆ ಸುಟ್ಟುಕೂಳಂ ಮಾಳ್ಪರ್ ॥ ೨೬ ॥

ಬಾರಸೆಯೊಳು ಸಾಮಜನಿ- ।
ದ್ಧಿರ್ೀರಾರುಂ ಪೆಸರು ಕೃಷ್ಣನಂ ಪೂಜಿಸಿಕೊ- ॥

ಟ್ಟಾರಾತ್ರಿಯ ಬೇಗುಳಮಂ ।
ಪಾರುವರುಮಂ ತಣಿಪಿಮುಟ್ಟುವಂ ಗಡಸತ್ತಂ ॥ ೨೭ ॥

ಗೊರವರುಮಾರ್ಹತರುಂ ಬೌ- ।
ದ್ಧರುಮಿನ್ನಾಭಗವರರು ನಿಜಾಗಮದಿಂ ಮಾ- ॥
ಳ್ಪರೆ ಮಾಣಿ ಮದುವೆಯಂ ಪಾ- ।
ರ್ವ್ವರೆ ವೈದಿಕರೆಂದೆ ಮಾಳ್ಪರೆಂಬಪಾರ್ವ್ವರ್ ॥ ೨೮ ॥

ವೇದದಿನಲ್ಲದೆ ಮದುವೆಯು- ।
ನಾದರದಿಂ ಮಾಡಲಾಗದೆಂಬಪಾರ್ವರ್ ॥
ಮೇದಿನಿಪತಿಯುಂ ಕಡೆಯೊಳ್ ।
ಮಾದಂಗನುಮೆಂತುಮದುವೆಯಂ ಮಾಡಿದಪಂ ॥ ೨೯ ॥

ಕಿಚ್ಚನೆ ಪೊಗಳ್ವುದು ವೇದಂ ।
ಕಿಚ್ಚಲ್ಲದೆ ವೈದಿಕರ್ಗ್ಗೆ ದೆಯ್ವಂ ಬೇರಿ- ॥
ಲ್ಲಚ್ಚಿಸಿರುಮನ್ಯದೆಯ್ವಮ ।
ನಿಚ್ಚಯ್ಸರು ಮೋಕ್ಷಮಾರ್ಗಮಂ ದುಶ್ಚರಿತರ್ ॥ ೩೦ ॥

ಎತ್ತಾನುಂ ವೈದಿಕರೊಳ- ।
ಗೊತ್ತಂಬಡೆಲಿಂಗಪೂಜೆಯಂ ಕೈಕೊಂಡುಂ ॥
ಮತ್ತಲ್ಲಿಗೊರವನಂ ಕಾ- ।
ಣುತ್ತವೆ ಕಣ್ಮುಚ್ಚಿ ಕೊಳ್ವನೀರಂ ಪೋಲ್ಕುಂ ॥ ೩೧ ॥

ವೇದಂಗಳುಮಂ ಕಿಚ್ಚುಮ- ।
ನಾದರಿಸುವರಲ್ಲದಖಿಳಜಗದೀಶನನೊ- ॥
ಲ್ದಾದರಿಸಿ ಸಾತ್ತ್ವವಚನಮ- ।
ನಾದರಿಸಮ್ಮೊಸದುಗೊಂಡ ಚಿತ್ತದಪಾರ್ವರ್ ॥ ೩೨ ॥

ಹರಕೃಷ್ಣಮಿದ್ದ ಜಿನರೆಂ- ।
ಬರಸಮಯಿಗಳೊಡನೆ ವೈದಿಕರಿಗೇಗೆಯ್ದುಂ ॥
ದೊರೆಕೊಳ್ಳದು ಮಿತ್ರತ್ವಂ ।
ಪಿರಿದುಂ ತಾಮಮಳಚರಿತರಲ್ಲದ ಕಥದಿಂ ॥ ೩೩ ॥

ಭಗವರೊಳಂ ಗೊರವರೊಳಂ ।
ಸುಗತರೊಳಂ ಋಷಿಯರೊಳಮದೆಂದುಂ ಪಾಷಂ ॥

ಡಿಗಳಿಂದೆ ನೆಚ್ಚರುಂ ನ- |
ಲ್ಕೆಗಳವರಾದನೆಂದುಮಿಲ್ಲಪಾರ್ವ್ವರಿಗೆಂದುಂ || ೩೪ ||

ನೆರೆ ತಿಳಿದು ಮೋಕ್ಷಮಾರ್ಗದ |
ತೆರನಂ ಬಿಡದದರೊಳಗೆಸಪರಂ ಕಂಡಾಗಳು ||
ನಿರಿದಲೆಗೆ ಕರಂ ಕಾಯ್ವುದು |
ಬರಿದಲೆಯೆಂಬಂತೆ ವೈದಿಕರ್ಸ್ಸಲೆಮುಳಿವರ್ || ೩೫ ||

ಭೂಮೀಶ್ವರರೆಮಗೆರಗುವ- |
ರಾಮಲ್ಲದೆ ದೆಯ್ವಮಿಲ್ಲಿಪೆರತಿಲ್ಲದರಿಂ- |
ದೇ ಮಾತೊಜಗದೊಳಾಮೇ |
ರಾಮರ್ದೇವರೇಕೆದೆಯ್ವಮೆಮಗೆಂದೂಳ್ವರ್ || ೩೬ ||

ಶ್ರೀಮಹಿತನನಖಿಳ ಜಗ- |
ತ್ಸ್ವಾಮಿಯನೋಲಗಿಪುದುಚಿತಮುತ್ತಮರದಗೆ- ||
ಟ್ಟೀಮಹಿಯೊಳಂತೆನೆಗಳ್ವ ಧ- |
ರಾಮರರಾ ಗೋಪಸುತನನೆಂತೋಲಗಿಪರ್ || ೩೭ ||

ಎಲೆ ಪಾರ್ವ್ವರನಾಗ್ಗಂ ಮಾ- |
ಡಲೆಬಾರದೆನುತ್ತಮಿಪ್ಪರಾತನನಿರಲೀ ||
ಕುಲಜನು ಮನುಕುಲಜನುಂ |
ಪೊಲೆಯನುಮಂ ಪೇಳಿವಾರುಮೇಂ ಮಾಡಿದರೋ || ೩೮ ||

ವೃ॥ ಶಿರಮಂ ಭದ್ರಿಸಿ ಕಾಸೆಯಂ ಪೊದದಪ್ಪಂ ಹಂಸನಂ-
ತಾಗೆ ಬಾ- |
ದ್ಧರುಮಪ್ಪರ್ಜಡೆಗಟ್ಟಿದಂ ಗೊರವನಪ್ಪಂ ಕೇಶಮಂ-
ಕಿತ್ತೊಡ- |
ಪ್ಪರವತ್ಯಂ ಸವಣಾರ್ಧರಾಮರರನಾರ್ಗಂ ಮಾಡಲುಂ-
ಬಾರದೆಂ- |
ಬರದೆಂತೋ ಕಡೆಪಟ್ಟ ಜಾತಿಗಳನಾಗ್ಗಂ ಮಾಡಲೇಂ-
ಬಕ್ಕುಮೋ || ೩೯ ||

ಮಾಣೆಯಿಮವನೆಂದು ಕೊರಳೊಳು |
ನೇಣಿಕ್ಕಿದ ಕಥದೆ ಪಾರ್ವನಾದಂ ಪೆಗಲೊಳು ||

ನೇಣೆಂಬುದಲಾತನಮಾ- ।
ನೇಣಿಂ ದ್ವಿಜನುಂತೆ ಜಾತಿಮಾತ್ರದನಲ್ಲಾ ॥ ೪೦ ॥

ದ್ವಿಜರಲ್ಲಿ ಪುಟ್ಟಿದುದರಿಂ ।
ದ್ವಿಜನ್ಮನೆನೆ ಸಂದನೆವ್ರತಾರೋಹಣದಿಂ ॥
ದ್ವಿಜನಾದಡನುಮಾಗದೊಡಂ ।
ದ್ವಿಜನಾದನೆ ಮುನ್ನೆಪಾರ್ವನದರಿಂ ಕೃತಕಂ ॥ ೪೧ ॥

ಕುಲಜರು ಪೊಲೆಯರು ಪಡದು-।
ಜ್ವಳ ಕನಕಂ ಕನಕಮಲ್ಲದಿದಿರ್ದಾತಂ[ತಾಂ] ॥
ಕುಲಜನೆ ಸುವರ್ಣಮಲ್ಲದಃ ॥
ಪೊಲೆ ಪೊನ್ನುಳ್ಳಾತ್ಮನಂತೆ ತಾನೆಲ್ಲಿರ್ದುಂ ॥ ೪೨ ॥

ಪೊನ್ನಿಂ ಪುಟ್ಟಿಸಿ ಮಾಡಿದ ।
ಕನ್ನಡಿ ಕನ್ನಡಿಯೊಲೆಸೆಯಲರಿಗುಮೆ ಪೇಳ- ॥
ತ್ಯುನ್ನತ ಗುಣಗಣದಿಂದಂ ।
ಸನ್ನುತನಪ್ಪಂತ್ಯಜಾತಿಯುಂತೆಸೆದಪುದೇ ॥ ೪೩ ॥

(೧೫೧—೧೫೨ರ ನಡುವೆ)

ವೇದದ ಪುರುಳರಿಯುರ್ಮಂ ।
ವೇದಜಗನ್ನುತಮೆನಿಪ್ಪವಂ ಪುಣ್ಯದಿನಾ ॥
ವೇದದೊಳಗರಿದೊಡಾಗಳೆ ।
ವೇದಮನೀಡಾಡಿ ಜೈನನಾಗದೆ ಮಾಣಂ ॥ ೪೪ ॥

ವೃ॥ ಕೊಲೆಯುಮಸತ್ಯಮುಂ ಕಳವುಮನ್ಯವಧೂಜನಸಂಗ-
ಕಾಂಕ್ಷೆಯುಂ ।
ಫಲಮಧುಮದ್ಯ ಸೇವೆಗಳುಮಾಗದಿವಂ ಬಿಡಿ-
ಮೆಂದುವೇದಮಿಂ- ।
ತುಲಿದಪುವಾನವಂ ತೋರಿದೆವಪ್ಪುದಮೆವೇದ-
ಮಧ್ಯಮದೊಳು ।
ನೆಲಸಿದೆವೆಂದು ಪಾರ್ವರೊಡನೀ ತೆರದಿಂ ನುಡಿ-
ಗೊಪ್ಪಲಾರ್ಹತಂ ॥ ೪೫ ॥

ಪರದಾರೋಭಿಗಮಂ ಪರಾರ್ಥಹರಣಂ ಹಿಂಸಾ-
ನೃತಂಗಳ್ ಕ್ರಿಯಾಂ- ।
ತರದಿಂದಾಚರಿಸಲ್ಕೆ ಸಚ್ಚರಿತಮೊಂದೇನಾನುಮಂ-
ಕೇಳ್ದುಪಾ- ।
ರ್ವರವಾತಂ ದಿಟಮೆಂದು ನಂಬಿದೆ ಜಗಕ್ಕಾರಾಧ್ಯ-
ನಾಗಿರ್ದ ಮು- ।
ಕ್ತಿರಮಾಕಾಂತನ ಸೂಕ್ತಿಯಿಂದರಿಗೆ ಧರ್ಮಾಧರ್ಮ-
ಕರ್ಮಂಗಳಂ || ೪೬ ||

ಮುತ್ತರ ಮುತ್ತರಿಂ ಪಡೆದವೃತ್ತಿಯ ನಿಳ್ಕುಳಿಗೊಳ್ವ-
ರೊಳ್ಕರಂ ।
ಪತ್ತುವವೋಲ್ ವಿಚಾರಿಪರರಲ್ಲದ ಮೂರ್ಖರ-
ದೊಂದುದೆಯ್ವಮಂ ।
ಪತ್ತಿಯುಮಂತದಂ ಪಳಿವರಂ ತಿಳಿಪಲ್ಕಣ-
ಮಾರದಾಗಳಾ- ।
ರ್ದತ್ತಲೆ ಬರ್ಪರಂತದರೊಳಾರ್ಹತರಲ್ಲದರತ್ತ-
ನೋಳ್ಪಡಂ || ೪೭ ||

ಕಂ|| ನೆನೆಯಲೊಡಂ ಲೋಕಂಗಳ ।
ನಿಯಮಿಸುಗುಂ ದಿವಿಜಮನುಜಫಣಿಸಂಕುಳಮಂ ||
ಜನಿಯಿಸುಗುಂ ರುದ್ರನಿನೆಂ- ।
ದೆನಿತಾನುಂ ಬಾದುಗೆಯ್ವರಾ ಸಮಯದವರ್ || ೪೮ ||

ವೇದಂ ಸ್ವಯಂಭುವಲ್ಲದು ।
ಮಾದೇವಂ ಪೇಳ್ದನೆಂದು ಶೈವರ್ನುಡಿವರ್ ||
ಮಾದೇವನಲ್ಲದೆಯ್ವಂ ।
ವೇದಮೆತಾದೆಯ್ವಮೆಂದು ನುಡಿವಪ್ಪಾರ್ವರ್ || ೪೯ ||

ವೃ|| ರಾಭಸವೃತ್ತಿಯಿಂ ಮಿಂದು ಹುಂಡಿಗೆ ಸೇಸೆಯ-
ನೆಂಬರಂತೆ ಚಂ- ।
ದ್ರಾಭರಣ ಪ್ರಪಂಚಮನೆ ಪೇಳ್ದುದು ವೇದಮೆನುತ್ತೆ-
ರಕ್ಕಟಂ ।

ಲೋಭದಿನೆಂಬರಲ್ಲದದು ಪೇಳ್ದುದು ಮೂರ್ಖರೆಲ್ಲಮಿಂ- ।
ತೀಭವವಾರ್ಧಿಯೊಳು ಮುಳುಗುವಂತಿರೆ ತಮ್ಮಯ-
ಬಾಯ್ಗೆವಂದುದಂ ॥ ೫೦ ॥

ಕಂ॥ ವೇದಂ ಮರೆದು ಪೊಗಳ್ದುದೆ ।
ಮಾದೇವನ ಪೊದ್ದಬಟ್ಟೆಯಂ ತಿಳಿಯದವರ್ ॥
ವೇದಗಳೊಳಗುಳ್ಳುದೆಲ್ಲಂ ।
ಮಾದೇವನ ಚರಿತಮೆಂದು ಬಾಯಂ ಬಡಿವರ್ ॥ ೫೧ ॥

(೧೫೨—೧೫೩ರ ನಡುವೆ)

ಜಗಮೆಲ್ಲನೋರ್ವನಾತ್ಮನೆ ।
ಮಿಗಿಲೆನಿಸುವರಲ್ಲ ನೋಳ್ಪಡಿಂಬರ.... ॥
.... ।
ಬಗೆಗಳನೇಕಂಗಳಪ್ಪಕಾರಣದಿಂದಂ ॥ ೫೨ ॥

ಓರ್ವರನೋರ್ವಂ ಬೇಳ್ಪುದ ।
ನೋರ್ವಂಗೋರ್ವಂ ಹಿರಣ್ಯಮಂ ಕುಡುವುದುಮಂ ॥
ನಿರ್ಬಂಧದೆ ಕಾಣುತ್ತಂ ।
ನಿರ್ಬುದ್ಧಿಗಳೇಕೆಯಾತ್ಮನೋರ್ವನೆಯಂಬರ್ ॥ ೫೩ ॥

ಗುಣಿಯಲ್ಲಿ ವಸ್ತುವೆಲ್ಲಂ ।
ಕ್ಷಣಿಕಂ ಶೂನ್ಯಂಗಳೆಂಬ ಚಾರ್ವಾಕಮತಂ ॥
ಗುಣಿದಮೆ ವಸ್ತುಗಳಿಲ್ಲಂ ।
ಗುಣಿಗಳೆ ನಾವೆಂದು ತಿಳಿಗೆ ಜೈನಾಗಮದೊಳ್ ॥ ೫೪ ॥

ಹರಿಹರರ್ಗೆ ಭಕ್ತಿಮಾಳ್ಪಾ- ।
ನರರೆಲ್ಲಂ ಮಾಂಸಸೇವೆಯಂ ಮಾಡುವರಾ ॥
ಹರಿಸರ್ವಂ ವಿಷ್ಣುಮಯಂ ।
ಹರನುಂ ಸಕಳಾತ್ಮ ನಿರ್ಭರಂತಿನವೇಳ್ಕುಂ ॥ ೫೫ ॥

ಕ್ಷಣದಿಂದಗ್ಗಳಮಿವನೆಂ- ।
ತೆಣಿಸುವನೋ ವಸ್ತುವೆಲ್ಲಮಂತಾಬುದ್ಧಂ ॥

ಕ್ಷಣಿಕಮೆನಿಸಿರ್ದ ಸಕಳಮು ।
ನೆಣಿಸುವತೆರನಾವುದಲ್ಲಿ ತಾನಿಲ್ಲದವಂ ॥ ೫೬ ॥

ಅರಿವವನಳಿದಂದವನೊಳು ।
ನೆರೆ ಕೂಡಿದ್ದರಿತಮೆಂತು ನಿಂದುದು ಜಗದೊಳ್ ॥
ಪೊರವತ್ತನೆಡಪಿ ಬಿದ್ದಡೆ ।
ಪೊರೆ ಬೀಳದೆ ಗಗನತಳದೊಳಿಕ್ಕುಮೆ ಪೇಳಿಂ ॥ ೫೭ ॥

ಪಲವು ಮತಂಗಳಂ ಬಾ- ।
ಯ್ವಲದಿಂದಂ ಬಾದುಗೆಯ್ವ ಬಸನದೆ ಮಾಳ್ಪ- ॥
ರ್ಕೆಲಬರದನೊಲುವರೊಲ್ಲ- ।
ರ್ಪ್ಪಲರೆಂತುಂ ಮೋಕ್ಷಮಾರ್ಗಮಂ ಜಿನಮತಮಂ ॥ ೫೮ ॥

ತಜ್ಞತೆ ತನಗಿಲ್ಲದೆ: ದುಃ- ।
ಪ್ರಜ್ಞಂ ಬಾಯಲ್ಲದೆ ಮಾಡಿದೋಡುಗಳಿಂ ತ- ॥
ತ್ವಜ್ಞತೆಯುಕ್ಕುಮೆ ದುಃಶ್ಶಾ- ।
ಸ್ತ್ರಜ್ಞತೆಯುಕ್ಕುಮೆ ನಿಶ್ಚಯಾತ್ಮಕತ್ವಮುಮುಕ್ಕುಂ ॥ ೫೯ ॥

ಪರಮೇಶನಿನ್ನನಾತ್ಮ ।
ಸ್ವರೂಪಮಿನಿತುಂಟೆ ತಿಳಿಯದಣಂ ಮು- ॥
ಚ್ಚರದೆ ತಲೆಪಿರಿದು ಬಾಲಂ ।
ಪಿರಿದೆನೆ ನುಡಿಯಲ್ಕೆ ತರ್ಕ್ಕಮೋದುವರೆಗ್ಗರ್ ॥ ೬೦ ॥

ಕಯ್ವಾರದಿಂದೆ ಬಕ್ಕುಡಿ ।
ಗೆಯ್ವರ್ಪ್ಪರಿದೊಂದು ಸಮಯಮಂ ಸಮತೆಯಿನಾ- ॥
ರಯ್ವಜ್ಞರ್ನಮನಾವೆಡೆ ।
ಗೆಯ್ವುಡಮತ್ಯಂತ ಕಲುಷ ಹೃದಯರದೇನೋ ॥ ೬೧ ॥

ಲೋಗರ ಮತದೊಳಗಂ ತಾ- ।
ವಾಗಳುಮಂಬಾಗೆ ತಿಳಿವರಾರ್ಹತರಾ ಜೈ- ॥
ನಾಗಮದೊಳಗಂ ನೋಡಲ- ।
ದೇಗೆಯ್ದುಂ ಪುಣ್ಯಹೀನರೊಲ್ಲರದೆಂತುಂ ॥ ೬೨ ॥

ದ್ವಾದಶಾಧಿಕಾರಮ್

(೨೮—೨೯ನೆಯ ಪದ್ಯಗಳ ನಡುವೆ)

ಕಂ|| ಮರೆ..............ನಲ್ಲಿನ- |
ಲರಿಕೆಯ ಶಾಕಾದಿ ವಸ್ತುಗಳಂ ಮೆಲ್ಲಣನಂ ||
ಪಿರಿಯಂ ನೆರೆ ದೈವಜ್ಞಂ |
ಹರನೊಳು ನೆರೆಕೂಡಿದಾತನೆಂಬಮೂರ್ಖಧರ್ || ೧ ||

ಮರಿದೆಂದುಮುಂಬನಲ್ಲಂ |
ತೆರೆಯುಂಗಡಗುಹೇಯಪತಿಯನಂತಾಗಿರ್ಪ್ಪಂ ||
ನೆರೆಸಾಸಿರ ವರ್ಷಂಗಳು |
ನೆರೆವಿನಗಂ ಮರ್ತ್ಯಸಿದ್ಧರೆಂಬಮೂರ್ಖಧರ್ || ೨ ||

(೩೨—೩೩ರ ನಡುವೆ)

ವೃ|| ಅರಸಂ ತಂಬುಲವಿೞಯೆಪಾರ್ವನೆಗಡಯ್ಯಂ-
ನೀಡಿದಾಗಳ್ಮಹೇ- |
ಶ್ವರನಿಂತೇನೆನೆ ಪಾರ್ವ್ವನೆನ್ನ ಬಲಗೈಯೊಳ್ಕಿಚ್ಚು-
ತಾನುಂಟು ಭೂ- |
ವರನೀಡಿಂ ಬಲ್ಲರಯ್ಯನೆಂದುಸಿರೆಕೊಳ್ಳೆಂದಿತ್ತೊಡಾ-
ತಂಬಲಂ |
ಕರದೊಳ್ಪುಟ್ಟಿದ ಕಿಚ್ಚಿನಿಂದುರಿದುದೆಂಬಪ್ಪಾರ್ವ್ವರ್ || ೩ ||

ಸುರಪತಿಯಕ್ಷ ರಾಕ್ಷಸ ನದೀನದವಾರಿಧಿ ಚಂದ್ರ-
ಸೂರ್ಯ ಭೂ- |
ಧರಕುಜಗೋಕುಲಂಗಳೆರಮಾಳ್ಪುದು ಶಾಂತಿಯ-
ನೆಂದುಕಂಗೆಡು- |
ತ್ತಿರಲವು ಮಾಡಲಾರ್ತಪಮೆ ಶಾಂತಿಯನಾ-
ಜಿನಧರ್ಮದೀಪ್ತದಿಂ |
ಪರಿಪರಿದಾಡುತಿಪ್ಪಕಥೆಯಂತಿರಲಿಂತುಟಿ ಭಾಗಭಾರ್ಗವರ್ || ೪ ||

ಕಂ|| ಪಾರಾಯಣಮೋಸುವ- |
ಪಾರ್ರುವರಿಂ ಜಾತವೇದಮಂತ್ರಂಬಳಮಂ ||
ಭೋರೆಂದು ಜಪಂ ಮಾಡುವ- |
ರೋರಂತಿರೆ ಬದುಕಮಾಸೆಯಿಂ ಕೂರ್ತವರ್ಗಳ್ || ೫ ||

ಅಪಮೃತ್ಯುವನೀತೆರದಿಂ- |
ದುಪ(ಸಮಿ)ತಮಿಸುವುದೆಂಬುದೊಂದುಮಾತಂ ನಂಬಿ- ||
ದರ್ಪಮೃತ್ಯುವಂ ಗೆಲ- |
ಲ್ಕ್ಯಾಪುರುಷಂ ತಾಂ ಮಾಡೆ ಪಾಪಮೆಂಬಮೂರ್ಖರ್ || ೬ ||

ನಿಯಮದೆ ಜಪಿಯಿಸೆ ಮೃತ್ಯುಂ |
ಜಯಮಂತ್ರಮನೋದದಂದು ದಿಟದಿಂ ಮೃತ್ಯುಂ ||
ಜಯಮಾಗೆಂದು ನುಡಿವ- |
ರ್ಭಯರಸಮಣಮಿಲ್ಲದಿಂತು ಮೂಢಜನಂಗಳ್ || ೭ ||

ಆಯುಷ್ಯಕರ್ಮ್ಮಮುಳ್ಳೊಡೆ |
ಸಾಯುರಣಂ ಕರುಳಿಪರಿಯೆ ಕುತ್ತಂಗೊಳಲುಂ ||
ಸಾಯಲ್ಕಿಚ್ಚಿಂ ನೀರಿಂ |
ಸಾಯುರ್ಬೆಟ್ಟಲಿಬಿದ್ದೊಡೆಂತುಂ ಸಾಯರ್ || ೮ ||

ಶರದೆನಿಯಾಮದೊಡಂ ಪಾ- |
ರ್ವರನೋಡದಡಂ ಜಪಂಗಳಂ ಮಾಡದೊಡಂ ||
ಪಿರಿದುಮವಸ್ಥೆಗಳಿಂ ಸಾ- |
ಯರುಮುನ್ನಂ ಕಟ್ಟಿದಾಯುಮುಳ್ಳನ್ನೆವರಂ || ೯ ||

ಪರಮಂಗೆ ಪೂಜೆಯುಂ ಬಿ- |
ತ್ತರದಿಂ ಮಾಳ್ಪುದು ತಪಸ್ವಿಗಿಷ್ಟಾನ್ನಮನಾ- ||
ದರದಿಂದೀವುದು ಮತ್ತಿಹ- |
ಪರತ್ರೆಗಿವು ಸೌಖ್ಯಹೇತುವಾಗಿಹವೆಂತುಂ || ೧೦ ||

ಗ್ರಹಣಂಗಳಲ್ಲಿ ಶಾಂತ್ಯಾ- |
ವಹಮೆಂದುಂ ಉಣಲಿಬೇಳ್ಪುದುಂ ಕೊಟ್ಟು ದುರಾ- ||
ಗ್ರಹಿಗಳು ಶಾಂತಿಕರಂ ಸ- |
ಗ್ರಹ ಭೋಜನಮೆಂದುಮಾಳ್ಪರರಿವಿಲ್ಲದವರ್ || ೧೧ ||

ಬಹುಲೋಪದ ಮುದ್ರಿಕೆಯುಂ ।
ಗ್ರಹಪೀಡೆಗೆತುಡುವುದುಣ್ಬಪೊತ್ತಂ ತೆಗೆವುದು ॥
ಗ್ರಹಪೀಡೆಗೆ ತುಡುವ ನವ- ।
ಗ್ರಹಮುದ್ರಿಕೆಯನೆಂದು ನೆರದು ಪೇಳ್ವಮೂರ್ಖರ್ ॥ ೧೨ ॥

ದೀವಳಿಯ ಚತುರ್ದ್ದಶಿಗಳೊ- ।
ಳಾವಗಮಲು ಗಗನವೆಲ್ಲಮಂ ಮಾಡಿಸಿಕೊಂ- ॥
ಡಾವಾಸರದೊಳು ಕಟ್ಟಿದೊ- ।
ಡೇವೇಳ್ವುದೆ ಭೂತರಕ್ಷೆಯುಂಬಮೂರ್ಧರ್ ॥ ೧೩ ॥
ಜಡನೊಡನೆ ಪುಟ್ಟುತಂ ಸ- ।
ತ್ತಡೆ ಮಕ್ಕಳು ತಮ್ಮ ಕರ್ಮವಶದಿಂ ಮುಳಿಸಿಂ- ॥
ದಡಿಗಡಿಗನ್ಯಸ್ತ್ರೀಯುಂ- ।
ಮ್ಮಡಿಹಿಸಿದಳೆನುತ್ತಮೆಲ್ಲ ನೆರವಮೂರ್ಖರ್ ॥ ೧೪ ॥
ಪೆಂಡತಿ ಸತ್ತಡೆ ಮತ್ತಂ ।
ಪೆಂಡತಿಯಂ ಮಾಡಿಕೊಂಡು ಮಗನಂ ಪೆತ್ತುಂ ॥
ಪೆಂಡತಿಯು ಪೆಸರನಿಡುವ- ।
ಪ್ಪೆಂಡತಿ ಕೊಂದಪ್ಪಳೆಂದು ಭಯದಿಂ ಮೂರ್ಖರ್ ॥ ೧೫ ॥

ವೃ॥ ಜನಿಯಿಸಿ ತಮ್ಮಕರ್ಮ ವಶದಿಂದಮೆ ಸಾವುತಿರಲ್ಕೆ-
ಮಕ್ಕಳಾ ।
ಜನನಿಗಮಂತದೊಂದು ಶುಭಕರ್ಮಮುಮೊಂ-
ದಿರೆ ಮತ್ತೆಪುಟ್ಟಿಯಾ ।
ತನುಜರೆ ಮಾಳ್ಪರೆಂದುಸಿರೆದೆಯ್ವಕಮಂ ಸಹಕಾರಿ-
ಯಾಗಿ ಕಾ- ।
ಯಿನಿತುಮನನ್ಯಜನ್ಮಸತಿಪತ್ನಿಯೆ ಮಾಡಿದಳೆಂಬರೆಲ್ಲರುಂ ॥ ೧೬ ॥
ಬಡತನವಾಗಿ ಕರ್ಮವಶದಿಂ ಸಲೆಪೀಡಿಸುತಿರ್ದನಿನ್ನೆಗಂ ।
ಬಿಡದೆಲೆ ನಿನ್ನನಾಂ ತಿಳಿದು ಬಿಟ್ಟಡೆನೀಂ ಪಿಡಿದಪ್ಪೆ-
ಯೆಂದಳಂ- ।
ದಿಡೆ ಸಿರಿಲಕ್ಷ್ಮಿಯಾದುದೆನಗೆಂಬರದಂತವಳಿಚ್ಛೆಯಿಲ್ಲದಾ ।
ನುಡಿ ಸಹಕಾರಿ ಮಾಳ್ಪುದು ಶುಭಾಶುಭಕರ್ಮಮೆ-
ನಂಬುಗಿಂತದಂ ॥ ೧೭ ॥

ಕಂ॥ ಎಲ್ಲೆಡೆಗಳೊಳಂ ವ್ಯಂತರ- ।
ಮಲ್ಲಲ್ಲಿಗೆ ಪಲವುಮಿರ್ಪ್ಪವವರಿದ್ದೆಡೆಯುರಿ- ॥
ದಲ್ಲಿಲ್ಲಿಯ ಮಾತುಗಳಂ।
ಬಲ್ಲಂದದೆ ಪೆರರಮೇಲೆ ಬಂದವು ನುಡಿಗಳ್ ॥ ೧೮ ॥

ಮುನ್ನಿನ ಭವದೊಳ್ಮಾಡಿದ ।
ತನ್ನ ಶುಭಾಶುಭಮೆ ಬಂದು ಪೀಡಿಸುತಿಕ್ಕುಂ ॥
ತನ್ನನು ಪಲವುಂ ತೆರದಿಂ ।
ಮುನ್ನಂ ಮಾಡದುದನಾರುವೇಂ ಮಾಡಿದರೇ ॥ ೧೯ ॥

ಅನ್ಯಭವಕರ್ಮ್ಮದುದಯಮು- ।
ನನ್ಯ ಸ್ತ್ರೀ ಬಾಧೆಮಾಡಿದಪ್ಪಳೆ ಮತ್ತಂ ॥
ಮಾನ್ಯ...................... ।
ಟ್ಟನ್ಯಸ್ತ್ರೀ ಚದುರರುಂ....ಬರಿದಪ್ಪರ್ ॥ ೨೦ ॥

ಪರಮೇಶನನರ್ಚಿಸುವುದು ।
ಪರಮತಪೋಧನರ್ಗೆ ಕುಡುವುದೊಲ್ದನ್ನರನಿಂ-॥
ತಿರೆ ತನಗೆಮಾಡಿಮುನ್ನಂ।
ದೊರೆಕೊಳ್ಗುಂ ಶಾಂತಿ ಮೇಲೆ ಸುಗತಿಯುಮಕ್ಕುಂ ॥ ೨೧ ॥

ಪಸುಗೂಸಂ ಪೊಲೆಯುರಮನೆ- ।
ಗಸಗರಮನೆಗೊಯ್ದುಕೊಟ್ಟು ಮಡಿದ........ ॥
.ಸುವರು ಬೆಣ್ಣೆಯುನುಳಿದಂ- ।
ದುಸಾಯದೆ ಪೊತ್ತುಪೊಲ್ಲೆನುತಂ ನೋಡರ್ ॥ ೨೨ ॥

ಬಸವಂ ಕೈಹಿಗನೆಂಬೀ ।
ಪೆಸರ್ಗ್ಗನಿಡೆ ಮೂಗನೂರೆ ಮಕ್ಕಳ್ಸಲೆ ಜೀ- ॥
ವಿಸುವಪ್ಪಲಕಾಲಮನೆಂ-।
ದುಸಿರ್ವ್ವರ್ಮಾತಿಂದೆ ನೆಗಳುತಿಪ್ಪರ್ ಮೂಢರ್ ॥ ೨೩ ॥

ನಡುವತೊರ್ಳೆಯಂ ಕರಗಮು- ।
ನಿಡುವದೊರ್ತಿಯೆನೆ ಪಾಯ್ವರಗೆಯಂ ಪೊಯ್ವರ್ ॥
ಸೊಡರಂ ಪೊತ್ತಿಸುವಸ್ಸ- ।
ತ್ತಡೆಯೊಳ್ ತವಗಂಜಿ ಭೀತಿಯಿಂದಂ ಮೂಢರ್ ॥ ೨೪ ॥

ಕಬವಮಂ ತಳಿಪಿ ತಟಾಕ- ।
ಕ್ಕೆಬಂದುವಿಂದಲ್ಲಿ ಬೇವಿನೆಲೆಯಂ ತಿಂದ- ॥
ಲ್ಲಿ ಬಳಿಕ್ಕೆ ಮುಟ್ಟಿ ಕಿಚ್ಚಂ ।
ಸಿಬಿರಕ್ಕೆ ಬಂದುವೀವರಂಜುವಮೂರ್ಖಧರ್ ॥ ೨೫ ॥

ರವಿಯ ವಿಮಾನಕೆ ರಾಹುವಿ- ।
ನವಿಮಾನಕ್ಕಡ್ಡಮಾಗೆ ತತ್ಪ್ರತಿಯಂ ರಾ- ॥
ಹುವೆ ನುಂಗಿತೆಂದುತಡದಿರ- ।
ದೆ ವಹ್ನಿಯಂ ಪೊಕ್ಕು ಮುರುಟಿ ಸಾವಮೂರ್ಖಧರ್ ॥ ೨೬ ॥

ಕಿಚ್ಚಂ ಪೊಕ್ಕಡೆ ತೊನ್ನಂ ।
ಚಚ್ಚರ ಮಾಕ್ಷಣದೆ ದೇವನಾಗಿರ್ಪ್ಪನದೇ- ॥
ನಚ್ಚರಿಯೊ ಪುಗುವುದೆಂದಾ ।
ಕಿಚ್ಚಂ ಪೊಕ್ಕಲ್ಲಿ ಮುರುಟಿ ಸಾವಮೂರ್ಖಧರ್ ॥ ೨೭ ॥

ಪುರುಷನ ಪರೋಕ್ಷದೊಳ್ಪಿರ- ।
ಗಿರದಾಗಡೆ ಸತ್ತಳಪ್ಪೊಡಾಕೆಗೆ ಸಗ್ಗಂ ॥
ದೊರೆಕೊಳ್ಗುಮೆಂಬ ದುರ್ಬೋ- ।
ಧರ ಮಾತುಂ ಕೇಳ್ದು ನಂಬಿ ಕಿಚ್ಚಂ ಪೊಗುವರ್ ॥ ೨೮ ॥

ಬೆಟ್ಟೇರಿ ಪಾಯ್ದೊಡಾತಂ ।
ಸಿಟ್ಟಿಗೆತಾನೊಡೆಯನಿಪ್ಪನೊಂದೋರ್ವ್ವಂ ಕ- ॥
ಣ್ಗೆಟ್ಟಕರುಗೊಳಿಸಿ ಸಾಯಲೆ।
ನೆಟ್ಟನೆ ಪೇಳ್ದಾಗಳಂತೆ ಪಾಯ್ವಮೂರ್ಖಧರ್ ॥ ೨೯ ॥

ವ್ಯರ್ಥಮುಳಿದಲ್ಲಿ ಪೆರಡೇಂ।
ಸಾರ್ಥಂ ತೀರ್ಥದೊಳು ಸಾವುದೆಂದೊಡೆ ಕೊರೆಗ- ॥
ಳ್ತೀರ್ಥಂಗಳಿಂದೆ ಮುಳಿಗಿ ನಿ- ।
ರರ್ಥಮುಸುರ್ವಿಡಿಕೆಗೊಂಡು ಸಾವಮೂರ್ಖಧರ್ ॥ ೩೦ ॥

ತುರುಗಳುಗುಳ್ದ ಪುಯ್ಯಲೊ- ।
ಳೆರೆಯನ ಕಾರ್ಯದೊಳಮುಣ್ಕೆ ಸತ್ತವನಂ ಕಂ- ॥

ಡೆರಗಿ ಬಳಿಕವನ ನೆತ್ತರೊ- ।
ಳರಿವಿಂದೆ ಬೊಟ್ಟನಿಟ್ಟುಕೊಳುವಮೂರ್ಖರ್ || ೩೧ ||

ಕಿಚ್ಚಿಂ ನೀರಂ ಪೊಕ್ಕುಂ ।
ಮಚ್ಚರದಿಂದಿರಿದುಕೊಂಡುವಾಡಂಬರದಿಂ ॥
ಕಚ್ಚಿಮುಳಿಸಂದೆ ಸತ್ತರ ।
ಚೆಚ್ಚರಮತ್ಯುಗ್ರಮಪ್ಪ ನರಕಕ್ಕಿಳಿವಂ || ೩೨ ||

ಅಸಮಾಧಿಯಿಂದೆಸತ್ತುಂ ।
ಅಸುವಂ ಬಿಡೆ ಪಡೆಯಲಾರೆನೆಂತುಂ ದೇವಾ- ॥
ವಸಥಮನೆಂದೊಡೆ ಕೋಪದಿ- ।
ನಸಮಾಧಿಯನೆಯ್ದಿ ಸತ್ತನಾಪ್ಪರ್ನೆ ಪಡೆಯಲ್ || ೩೩ ||

ವೃ॥ ಒಡಲಂ ದುರ್ಧರಮಪ್ಪುದೊಂದು ತಪದಿಂ ಸ್ವರ್ಗ್ಗಂ-
ಗಳೊಳ್ಪಬ್ಬೆಗಂ ।
ಬಡಿಸುತ್ತಿಪ್ಪವರೇಕೆ........................ಕೊಂದಿಕ್ಕಿ-
ತಕ್ಕಾಮ್ಯಮು- ।
ಪ್ಪಿಡೆಯುಂ ಪೊರ್ದಿಸಿ ಪುಣ್ಯಮಂ ಪಡೆವೆನೆಂಬೊಂ-
ದಿಪ್ಪದಿಂ ಗಂಗೆಯಾ ।
ತಡಿಯೊಳ್ ಧರ್ಮಪರಕ್ಕೆಲಕ್ಕೊಲುತಮಿಪ್ಪ-
ರ್ದ್ವಿರಾಚಕ್ರದೊಳ್ || ೩೪ ||

ಕಂ॥ ಬಸವಂ ಸತ್ತಿರ್ದಡೆ ಸಂ- ।
ತಸದಿಂದಂ ಮೀಸಿಪೂಜಿಸುತೆ ಭಂಡಿಯೊಳೇ- ॥
ರಿಸಿ ಸುತ್ತಿ ಪೂಗಳಂ ಪಾ- ।
ಡಿಸುತೆ ಕೊಂಡೊಯ್ದು ಪೂಳ್ವು ಮೀವಮೂರ್ಖರ್ || ೩೫ ||

ಘೋರೆನೆ ಶೌಚಂಗೆಯಲ್ ।
ನೀರಂ ಪೊತ್ತಡಕಿಯಡಿಕಿ ಪೊಯ್ವರನಾಳ್ಗಂ ॥
ಧಾರಿಣಿಯನೆಂದೊಡಳಿಪೆಂ ।
ನೀರಂ ಪೊತ್ತಡಕೆ ಪೊಯ್ಯುತಿಪ್ಪಮೂರ್ಖರ್ || ೩೬ ||

ಉರೆ ವೈಕುಂಠಮನೆಯ್ದುವ- ।
ನರುದಿಂಗಳ್ಪುತ್ತದೆಲೆಯೊಳುಂಡವನೆಂಬ- ॥

ನ್ನೆರೆ ಜೀವಿಪನ್ನಮುಂಡ- ।
ರ್ಕರೆಕಂಠನ ಪುರದೊಳಗಲದಿರರೇ ಬೇಡರ್ ॥ ೩೭ ॥

ದಾವಣೆಯೊಳ್ಕಟ್ಟಿದರ್ದ್ದ ।
ಜೀವಧನಮದೊಂದೆ ಮಗ್ಗುಲಿಂದಿರದೊಡವಿ- ॥
ನ್ನೇವೆಳ್ಪುದಧಿಕಮೆನಿಸುವ ।
ಜೀವಧನಮನೆಂದು ಸೇಸೆದಳಿವಮೂರ್ಖರ್ ॥ ೩೮ ॥

ನರಕದ ದುಃಖಮನೆಯ್ದು- ।
ಲ್ಪರಿಯುತ್ತಂ ಬನ್ನಿಮೀಗಳೆಂದೋವದೆ ಡಂ- ॥
ಗುರಮಂ ಪೊಯ್ಯುವ ತೆರದಿಂ ।
ಪರೆಪೊತ್ತರೊಳಿದ್ದು ಬೇಂಟೆವರೆಯಂ ಪೊಯ್ವರ್ ॥ ೩೯ ॥

ಅರನರಿವಂತಿರೆ ತಮ್ಮಾ- ।
ಯೆರೆಯುಲ್ಕಂ ದಾನಧರ್ಮಮಂ ಮಾಡಿ ಬಳಿ- ॥
ಕ್ಕರಗುಲಿಗಳ್ಸಂಕ್ರಾಂತಿಯ ।
ಮರುದಿವಸಂ ನಿಯಮದಿಂದೆ ಬೇಂಟೆಗೆ ಪೋಪರ್ ॥ ೪೦ ॥

(೪೩—೪೪ರ ನಡುವೆ)

ಪದವಡದು ರಕ್ಕಸರ್ಪ್ಪಗೆ ।
ಪದಮಣ್ಣಂಕೆಯ್ಯ ಭತ್ತಮೆಂಬುವುದಂ ಮಾ- ॥
ಡಿದಪಾರಣೆಯೊಳ್ಕಾಲ್ವಾ- ।
ಸದಂದುವಾಫಳಮನೊಯ್ವರೆಂಬಮೂರ್ಖರ್ ॥ ೪೧ ॥

ಪಗವದ ಭತ್ತಮನಸುರರು ।
ಪುಗದಂತಿರೆ ಕಾವನೆಂತು(ದು)ಬೆನಕನಪೆಸರಿಂ ॥
ಸಗಣಮನೆ ಸುತ್ತಿ ನೂಲಂ ।
ಪಗವದ ನಡುವಿಟ್ಟು ಮಾಳ್ಪರರಿವಿಲ್ಲದವರ್ ॥ ೪೨ ॥

ಪುಲಿಸಂ ಪೊತ್ತಾತನೆ ಕಳ- ।
ದಲುಪಡುವುದು ಭತ್ತಮಳತೆಯುಪ್ಪಿನಮುತ್ತಂ- ॥
ತೊಲಗಲು ಸಲ್ಲದು ಪೋದಡೆ ।
ಫಲಿಸುಂಗಡ ಪೋಕುಮೆಂದು ನೆಗಳ್ವಮೂರ್ಖರ್ ॥ ೪೩ ॥

ಒಂದೂರ ಕರುವಿನಗುಳಂ ।
ತಂದದನೊಂದೂರ ಪೊಲದೊಳಿಕ್ಕಿದೊಡಾಯ್ತುಂ ॥
ಕುಂದದೆ ಬೆಳಗುಂ ಪುಲಿಸುಂ ।
ತಂದವಗದಮಕ್ಕುಮೆಂದು ನೆಗಳ್ವಮೂರ್ಖರ್ ॥ ೪೪ ॥

ತಲೆಯುನಿರುಳ್ಪಿಕ್ಕಿದೊಡೆ- ।
ತ್ತಲಾನುಮೊಂದಲ್ಲಿ ಭಾಗ್ಯಮುಳ್ಳರೋಮಂ ॥
ತಲೆಯಿಂದುದಿರ್ದೊಡೆ ಬಳಿಯಂ ।
ನಿಲಲರಿಯದು ಭಾಗ್ಯಮೆಂಬರರಿವಿಲ್ಲದವರ್ ॥ ೪೫ ॥

ಪಡುವವೊಗವಾಗಿ ರೋಮಂ ।
ಗಡತಲೆಯುಂ ಪೆಕ್ಕಲೊಡನೆ ಸಿರಿಯುಂ ಪೋದಂ- ॥
ತೊಡನಾರು ನುಡಿವರುಮಿ- ।
ಲ್ಲಡವಿಗೆ ಲಕ್ಷ್ಮಣನೆ ಪೋದನೆಂಬರ್ ಮೂರ್ಖರ್ ॥ ೪೬ ॥

ಪೊರಸುಮನೆವೊಗಲು ಮೇಘೋ- ।
ತ್ಕರ ಗರ್ದಭ ಚರಣರಜಮುಮೊಂದಿನಿಸಾನುಂ ॥
ಪುರುಷನ ಮೆಯ್ಯಂ ಪೊರ್ದಿದೊ- ।
ಡಿರಲರಿಯದು ಭಾಗ್ಯಮೆಂದು ನೆಗಳ್ವಮೂರ್ಖರ್ ॥ ೪೭ ॥

ಪೊರಸಿನ ನೆಳಲೆತ್ತಾನುಂ ।
ಪುರುಷನ ಮೇಲೊಮ್ಮೆ ಪರಿದೊಡಾಗಲೆ ಮೆಯ್ಯಿಂ ॥
ಸಿರಿ ತೊಲಗುಗುಮೆಂಬರದೇಂ ।
ಸಿರಿ ತೊಲಗದೆ ಪೊರಸಿನಲ್ಲಿ ಪಟ್ಟಿರೆ ನಿಚ್ಚಂ ॥ ೪೮ ॥

ಏಗೆಯ್ದುಂ ಪುಣ್ಯದೊಳಿಡ- ।
ಲಾಗದು ಕುಂಬಳದ ಪಣ್ಣಸಂಡಗೆಯಂ ಮು- ॥
ತ್ತಾಗದಲೆ ಮದುವೆ ಮಾಡಿದ ।
ಮೇಗಾಸಂಡಗೆಯಿಡಲಾಗದೆಂಬಮೂರ್ಖರ್ ॥ ೪೯ ॥

ಮದುವೆಯನೆ ಮಾಡಿದಾಬರಿ- ।
ಸದೊಳೆಂತುಂ ನೂಡಲಾಗದು ಮಾಳ್ಪಂತದು ಪೊ- ॥
ಲ್ಲದಕ್ಕುಮೆಂದರಿಯದರೂ- ।
ಳ್ಪಡೆಮಾಡಲಂಜಿ ಮಾಣ್ಬಮೂರ್ಖರ್ ॥ ೫೦ ॥

ಗೂಗೆಮನೆವೊಕ್ಕಡಂ ತದ- ।
ನಾಗಡೆ ಕೊಂದಲ್ಲಿ ಪೊಳ್ದೊಡಲ್ಲದೆ ಮನೆಯಂ ॥
ಪೋಗಲು ಕೆಟ್ಟೊಡಲ್ಲಿರ- ।
ಲಾಗದು ಕೇಡಕ್ಕುಮೆಂಬರರಿವಿಲ್ಲದವರ್ ॥ ೫೧ ॥

ಸೊಸೆ ತೊತ್ತೆತ್ತು ತುರಂಗಂ ।
ಕಿಸುಗಲ್ಯನೆ ಮಿಕ್ಕಪೊತ್ತುಪೊಲ್ಲಂದಿಂತೊ- ॥
ಟ್ಟೆ ಸುಖಮೆಲ್ಲಸುಖಂ ಸಂ- ।
ಧಿಸಿತೀಮನಲೇಸು ಮಾಳ್ಪುದೆಂಬಮೂರ್ಖರ್ ॥ ೫೨ ॥

ಮಂತ್ರಂಗಳನರಿಯುವ ದು- ।
ರ್ಮಂತ್ರಿಗಳೇನೆಂದು ಪೇಳ್ದೊಡವು ತಮಗೆಂದುಂ ॥
ಮಂತ್ರಂಗಳಾಗಿ ಬಿಡದಾ ।
ಮಂತ್ರಂಗಳ ನೋದಿ ಬರಿದೆ ಕಿಡುವಮೂರ್ಖರ್ ॥ ೫೩ ॥

ಪದಪಿಂ ಜೀವೇಶ್ವರಂ ಪೇ- ।
ಳ್ದುದೆ ಮಂತ್ರಖ್ಯಾತಿಲಾಭ ಪೂಜಾರ್ಥಂ ದು- ॥
ರ್ಮದರುಳಿಪರಳಿಪಿ ಮಾ- ।
ಡಿದ ಮಂತ್ರಂ ಬಗೆದು ನೋಡೆ ಮಾಯಾಮಂತ್ರಂ ॥ ೫೪ ॥

ಇದುಯುಕ್ತಮಪ್ಪುದಲ್ಲೆಂ- ।
ಬುದನೆಂತುಂ ತಿಳಿಪಲಾರದನ್ವಯದಿಂ ಬಂ- ॥
ದುದದೇನಾದೊಡಮುಳ್ಕುಂ- ।
ತದೆ ದೆಯ್ವದಮಾರ್ಗಮೆಂದು ನೆಗಳ್ವಮೂರ್ಖರ್ ॥ ೫೫ ॥

ಪೊಲ್ಲದಿದೊಳ್ಳಿತೆನವೇ- ।
ಡೆಲ್ಲಂ ಕೊಂಡಾಡುತಿಪ್ಪರ್ಥರ್ಮಮೆ ಲೇಸಿಂ- ॥
ತಲ್ಲಿಂ ಮೇಲೆನಿಸಿರ್ದ- ।
ನಲ್ಲಿಗೆ ಮತ್ತೆರಗಲಾರದೆಂಬಮೂರ್ಖರ್ ॥ ೫೬ ॥

ಏನಾದೊಡಕ್ಕದೆತ್ತ- ।
ಲ್ತಾನುಯ್ದೊಡಮೊಯ್ಯದೆಮಗೆ ದಿಟದಿಂ ಧರ್ಮಂ ॥
ತಾನೆಮಗೆನುತಜ್ಞಾನದೆ ।
ಜೈನಮನೊಲ್ಲದೆಕೆಡುವಮೂರ್ಖರ್ಮತ್ತಂ ॥ ೫೭ ॥

ನಾಡವರೇನಾನೊಂದಂ ।
ಮಾಡಿದುದಂ ಮಾಡದಂದು ನಾಸ್ತಿಕನೆಂಬ- ॥
ಮೂರ್ಖದೊಳ್ಪಯ್ಯರದರಿಂ ।
ಮಾಡುವುದಲ್ಲದೊಡೆ ಪೊಲ್ಲದೆಂಬಮೂರ್ಖರ್ ॥ ೫೮ ॥

ಬಡತನಮೆಮ್ಮನ್ವಯದಿಂ- ।
ದೆಡವರಿಯದೆ ಬಂದುದೆಂತು ಬಿಡು(ವೆ)ವೋ ಸಿರಿ ಸಾ- ॥
ರ್ದೊಡಮೆಂಬಡಮದುದೊರೆ- ।
ತೊಡವೊಲ್ಲಕುಪಥವರ್ತಿಗಳ್ ಸತ್ಪಥಮಂ ॥ ೫೯ ॥

ಪಲಬರ್ನೆಗಳ್ವಂದಡೆ ನೆಗ- ।
ಳಲುವೇಳ್ಪುದು ಮುಕ್ತಿಮಾರ್ಗಮೇಕೆನಲಾಗ- ॥
ತ್ಯಬಹುತರಲಕ್ಷ್ಮಿಸಾರ್ದೊಡೆ ।
ಪಲರೊಡನಾಂ ಕೂಡಿತಿರಿವೆನೆನಲಾಗರಿವಂ ॥ ೬೦ ॥

ತ್ರಯೋದಶಾಧಿಕಾರಮ್

(೧ನೆಯ ಪದ್ಯದ ಮೊದಲು)

ಕಂ॥ ಶ್ರೀದೇವೇಂದ್ರಸ್ತುತ ಬೋ- ।
ಧೋದಯನುದ್ಧೂತ ದೋಷವೃಂದಂ ಮುಕ್ತಿ- ॥
ಶ್ರೀದಯ್ತನಮಳಿನ ಸ್ಯಾ- ।
ದ್ವಾದಾದಯೆಗೆಯ್ಗೆ ವೀರನಾಥನೆಮಗೊಳ್ವಂ ॥ ೧ ॥

(೨೦—೨೧ರ ನಡುವೆ)

ಪಡೆವಂ ನಂಟರ್ಗೆಲ್ಲಂ ।
ಕುಡುವಂ ಶಿವಭಕ್ತನಪ್ಪದಿವಸದೊಳೆಂತುಂ ॥
ಪಡೆಯುಂ ಮುಂಕೂರ್ಪರವೊಡ- ।
ನುಡಿಯುಂ ಜಿನಭಕ್ತನಾದೊಡೆಂಬದುರ್ಷ್ಟರ್ ॥ ೨ ॥

(೨೩—೨೪ರ ನಡುವೆ)

ವೇದಂಗಳುಮಂ ಕಿಚ್ಚುವ- ।
ನಾದರಿಸುವರಲ್ಲದಖಿಳ ಜಗದೀಶನನೊ- ॥

.... |
ಲ್ದಾದರಿಸರ್ಮಸಡುಗೊಂಡ ಚಿತ್ತದ ಪಾರ್ವರ್ || ೩ ||

ಪಾರ್ವರಕುಲದೊಳು ಜನಿಯಿಸಿ |
ಪಾರ್ವರುಮಂ ದೂಷಿಸುತ್ತವಿಪ್ರರೆ........ ||
ಪಾರ್ವಗೆರ್ಗ್ಗೆಟ್ಟಿಸಿ ಬಳಿಯಿಂ |
ಸಾರ್ವುದು ಜೈನರನೆ ಜಗದಿಮೆಂಬಪ್ಪಾರ್ವರ್ || ೪ ||

ಬಿಡದೆ ಸುಚರಿತ್ರದಿಂದಂ |
ನಡೆದಂ ಶುದ್ಧಾತ್ಮನಪ್ಪನದನೊಲ್ಲದೆ ಮಿಂ- ||
ದಡೆ ಶುದ್ಧನಲ್ಲ ಮಲಮಂ |
ಪಿಡಿರಿಸಿ ಪೊರಗಯ್ಯನೊರಸಿ ಕಚ್ಚಿದ ತೆರದಿಂ || ೫ ||

(೨೬—೨೭ರ ನಡುವೆ)

ನೀರಂ ನೇಣಂ ತೋರಿ(ದು)ಮು- |
ದಾರುಣಲಿಕ್ಕಿದೊಡಮವರ ತಳಿಗೆಯೊಳುಂಬ- ||
ಪ್ಪಾರ್ವರುಮಾಪೋಶನಮಂ |
ಚಾರಿತ್ರಂಗೆಡಗುಮೆಂದು ನಿಯಮದೆ ಕೊಳ್ವರ್ || ೬ ||

ಮಿಂದುಣ್ಣದೆ ಸಂಜೆಗಳಂ |
ಬಂದಿಸದೆ ಯಥೇಷ್ಟಮಾಗಿಡಿಂಗರನವೊಲಿ- ||
ಪ್ಪಂದವನನೇನುಮೆನ್ನಂ |
ಬಂದವರ್ಗ್ಗಳು ಜೈನನಾಗಿ ಕೆಟ್ಟವನೆಂಬರ್ || ೭ ||

ಪಶುವಲ್ಲದಿಂತಿವಂ ಮಾ- |
ನಸನಲ್ಲನೆನಿಪ್ಪ ಮೂರ್ಖನುಂ ಪೊಲೆಯನವೋ- ||
ಲೆಸಪವನುಂ ಸದ್ಧರ್ಮದ |
ದೆಸೆಗಂಡಡೆ ಮುಳಿವರವರ ಪಾಪಮೊ ಪೇಳಿಂ || ೮ ||

ನೆರೆತಿಳಿದು ಮೋಕ್ಷಮಾರ್ಗದ |
ತೆರನಂ ಬಿಡದದರೊಳೆಸೆವರಂ ಕಂಡಾಗಳ್ನೀ- ||
ನಿರಿದಲೆಗೆ ಕರಂ ಕಾಯ್ದುದು |
ಪರಿದಲೆಯೆಂಬಂತೆ ವೈದಿಕರ್ ಸಲೆಮುಳಿವರ್ || ೯ ||

(೩೩—೩೪ರ ನಡುವೆ)

ವೃ॥ ನಡೆವಾಗಳ್ ಜೀವಸಂಘಟ್ಟನೆಗೆಲೆ ಪಿರಿದಂ-
ನೋಡುತಂತಂತೆ ಕಾರು- ।
ಣ್ಯಮೆ ಮುಖ್ಯಂ ನೋರ್ಪ್ಪಡೆಲ್ಲಾ ಪುಲುಮರ-
ಪುಳುಪಂಚೇಂದ್ರ ಜೀವಂಗಳಂ ನೋ- ।
ವುವೆನುತ್ತಂ ನೋಡಿನೋಡುತ್ತಡಿಯಿಡುತವೆ-
ಬರ್ಪ್ಪರ್ದ್ದಯಾಮೂಲ ಧರ್ಮ್ಮಂ ।
ಬಿಡದಪ್ಪೀ ಸಾಧುವಂ ದೂಷಿಸಿದಡೆ ಪುಗದೇ-
ಕಿರ್ಪ್ಪುದೇಕಯ್ಯ ಪಾಪಂ ॥ ೧೦ ॥

ಚತುರ್ದಶಾಧಿಕಾರಮ್

(೧೦—೧೨ನೆಯ ಪದ್ಯಗಳ ನಡುವೆ)

ಕಂ॥ ಸಲೆ ಮೆಯ್ಗುಚ್ಚುವ ಪಲ್ಲಂ ।
ಸುಲಿವ ವಿಲೇಪನಮನಾಗಳುಂ ಪೂಸುವ ತಂ- ॥
ಬುಲಮಂ ಮೆಲ್ವತಪಸ್ವಿಗ- ।
ಳೊಲಿಪರ್ಬ್ಬಿಲೆವೆಣ್ಣನೊಲಿಸರಮೃತಾಂಗನೆಯಂ ॥ ೧ ॥

ವೃ॥ ಮನೆಯಂ ಪುತ್ರಕಳತ್ರಮಿತ್ರಧನಧಾನ್ಯವ್ರಾತಮಂ-
ಬಿಟ್ಟುಮ- ।
ತ್ತೆನಿತಾನುಂ ತೆರದಿಂದೆ ಪೂಣ್ದುತಪಮಂ ಮಾಡುತ್ತ-
ಮಿದ್ದೆಲ್ಲರುಂ ।
ವನಿತಾಸಂಗಮನಾಸೆದಟ್ಟಿಳಿಪಿನಿಂ ಹಾಸ್ಯಕ್ಕೆ ಪಕ್ಕಾಗಿ ಚಿ- ।
ನ್ನನೆಪೊರ್ದಿರ್ಪ್ಪವರಾಗಳುಂ ಗೊರವರೇನಂ-
ಮಾಡರಜ್ಞಾನಿಗಳ್ ॥ ೨ ॥

(೨೭—೨೮ರ ನಡುವೆ)

ಕಂ॥ ಕೊಂಡಪ್ಪುವು ಮನುಜರತಲೆ ।
ಯೊಂಡಪ್ಪುದು ಪಸಿಯು ತಲೆಗಳಪ್ಪವುಕೊರಲೊಳ್ ॥

ಕಾಡೊಳಗೆ ಬೆಳೆದ ಕೇದಗೆ ।
ಬೇಡೆಂಬಪೂರ್ವಲಸುನಾಪ್ಪರ್ವದೇ ದೇಗುಲಮುಂ ॥ ೩ ॥

(೧೧೭—೧೧೭ರ ನಡುವೆ)

ಪೇಸುವರಾರ್ಹತರೆನಿಸಂ ।
ಪೇಸುವರಾಬೌದ್ಧರಂತೆ ಮಾಹೇಶ್ವರರೇಂ ॥
ಪೇಸುವರೇ ವೈಷ್ಣವರೇಂ ।
ಪೇಸುವರೇ ಮದ್ಯಮಾಂಸ ಮಧುಗಳ್ಗಿಂತುಂ ॥ ೪ ॥

(೧೪೯—೧೫೦ರ ನಡುವೆ)

ಸಾಸವೆಯಿನಿತಡಗುಮನಿನಿ- ।
ಸಾಸವಮುಂ ಸವಿದನೆಯ್ದುಗುಂ ನರಕಮನೆಂ- ॥
ಬಾಸಿಗತ(ಗ)ನ ಬಾಯೊಳು ತಾಂ ।
ದೋಷಮುಮಿಲ್ಲಿಕ್ಕಿಮಿಕ್ಕಿದಂ ತಿನ್ನೆಂಬರ್ ॥ ೫ ॥

(೧೫೬—೧೫೭ರ ನಡುವೆ)

ನುಡಿಯುತ್ತಮುಂಬುದುಂ ಸಲೆ ।
ನಡುವಿರುಳೆನ್ನದೆಯುಮುಣ್ಬುದುಂ ಪ್ರಾಣ್ಯಂಗಂ ॥
ತೊಡರ್ದಡಮುಂಬುದು ಮೀವಾ-।
ಗಡೆಯುಣ್ಬುದು ವಿಪ್ರತತಿಗೆ ಸಹಜಮೆನಿಕ್ಕುಂ ॥ ೬ ॥

ನಿಯಮಸ್ಥರಪ್ಪರಾ ಸೋ- ।
ಮಯಜಿಗಳು ವಸ್ತ್ರಘಾತಮಪ್ಪುದಕರವ- ॥
ತಿಯೊಳೆಂದು ಕುದಿದರಿಯ- ।
ದ್ರ್ದಯೆಯಿಂ ಶೋಧಿಸುವುದೇಕೆ ಬಳಸುವನೀರಂ ॥ ೭ ॥

ಓಲೆಯಕಾರರ ತಳಿಗೆಯೊ- ।
ಳಾಳೋಚಿಸದುಂಬರೊಲ್ದುಮಾತನ ಸತಿಯುಂ ॥
ಮೇಲೆಗೆಡೆದೊಮ್ಮೆ ಬಂದಡೆ ।
ಲೀಲಾಮಾತ್ರದೊಳೆ ನೆರೆವರಾ ಭೂಸುರರುಂ ॥ ೮ ॥

ಎನಿತೆಡರಡಸಿದೊಡಂ ಪಾ- ।
ರ್ವನಂದದಿಂ ಸತ್ರದಲ್ಲಿ ಜೈನಂ ಪೇಳ್ದಂ- ॥
ಬನೆ ಕಡೆಪಟ್ಟವನುಂ ತೊವ- ।
ಲಿನ ಪೆಸರಂತೆ ಕೇಳ್ದು ಮುಣ್ಣನೇನರಿದಪನೇ ॥ ೯ ॥

ಧನಹೀನಂ ಸೂಳೆಯೊಳಿ- ।
ರ್ದ್ದನ(ನ)ಪ್ಪಡವನೊಡನೆ ನುಡಿಯಲಾಗೆಂಬವರ್ಗಳ್ ॥
ಧನದಂ ತಾಂ ತೊತ್ತಿನೊಳಿ- ।
ರ್ದನಪ್ಪಡವನಲ್ತು ವಿಷ್ಣುವೆಂದೋಲಗಿಪರ್ ॥ ೧೦ ॥

ಪಣಮುಳ್ಳ ಪಾರ್ವ್ವನಂ ನಿ- ।
ಗ್ರ್ಗಣಿಯೆನಿಸಿದ ಕೆಡುಕಿಯೊಡನೆ ಕೆಟ್ಟೊಡಮೆಮ್ಮಂ-॥
ತಣಿಯಿಸಿ ದಕ್ಷಿಣೆಗೊಟ್ಟಡ- ।
ಮಣಿಮಾತ್ರಂ ಪಾಪಮಿಲ್ಲವೆಂಬಪಾರ್ವ್ವರ್ ॥ ೧೧ ॥

ಶ್ರಾವಕರಲ್ಲರೆ ಪಾರ್ವರು ।
ಸೇವಿಸುತಿರ್ದ್ದಪರೆಮಾಂಸಮಧುಗಳನೆಂಬ- ॥
ಸ್ಸೇವಿಸುವರವನೆ ಮತ್ತಂ ।
ಶ್ರಾವಕತನದಿಂದೆಮಿಂತುಟಾಗಲೆವೇಳ್ಕುಂ ॥ ೧೨ ॥

ಬೆರಳಲ್ಲಿ ಪುಲ್ಲನೊಕ್ಕಲಿ- ।
ಗರನೆನಸುಂ ಮುಟ್ಟದಿಪ್ಪರ್ದುಂ ಮೀವುದುಮಾ-॥
ದರದಿಂದಕ್ಕುಂ ಸುಡುವುದು ।
ಚರಿತ್ರಮಿನ್ನವು ಭಾವಂ............... ॥ ೧೩ ॥

ವೃ॥ ಕಿಚ್ಚನೆ ದೆಯ್ವಮೆಂದು ಸಲೆಕೊಂಡಡಗಿಂದೆಯು-
ನಾಡೆರಾಗದಿಂ ।
ಮೆಚ್ಚಿದ ಮಾರ್ಗದಿಂ(ದ)ನಡೆಯುವೇಳ್ಪದನಾಗಮ-
ಮೆಂದುನಂಬಿ ತ- ।
ನ್ನಿಚ್ಚೆಯೊಳಾಗಳುಂ ನೆಗಳ್ದ ಲೋಗರುಮಂ ನೆರೆ-
ಠಕ್ಕನಿಕ್ಕು ನಾ- ।
ನಿಚ್ಚಲಪಾತ್ರನಲ್ಲನರಿವಂ ಕುಡಲಾಗದವಂಗೆ ದಾನಮುಂ ॥ ೧೪ ॥

ಕಂ॥ ಕೊಕ್ಕರಿಸದೆ ಪಶುಗಳನರಿ- ।
ದುಕ್ಕೆವದಿಂ ಮಾಂಸಸೇವೆಯುಂ ಮಾಳ್ಪದಾರ್- ॥

ನಕ್ಕಿರದೆ ಯೋಗ್ಯವೆಂದಿರ- ।
ದಿಕ್ಕುವರೀ ಜೈನರಲ್ಲದವರ್ಗಾಡದುದೇಂ ॥ ೧೫ ॥

ಓದಿದನಪ್ಪಡೆ ಸಾಲ್ಗುಂ ।
ವೇದಮನಜ್ಞಾನಿಯಾದೊಡೆಂತುಂ ಪೂಜ್ಯಂ ॥
ಭೂದೇವನೆಂದು ಪಾರ್ವಂ- ।
ಗಾದರದಿಂ ದಾನಮಿಕ್ಕುವವರ್ಮೂರ್ಖಾತ್ಮರ್ ॥ ೧೬ ॥

ಪೊತ್ತಗೆಯುಂ ಪೊತ್ತಿರ್ದಂ ।
ಪೊತ್ತಗೆಯೊಳಗಿರ್ದವಾತನರಿವನೆ ಬಿಡದಾ- ॥
ಡುತ್ತಿರ್ದನೊಳು ಗುಣಂಗಳ ।
ನೆತ್ತರಿವನೊ ಗಿಳಿಯತೆರದೆನೋದಿದ ಪಾರ್ವಂ ॥ ೧೭ ॥

ವೇದಾರ್ಥಮೆಂತುಟೆಂದರಿ- ।
ದೋದದೆಮುಂಬಿಟ್ಟು ಪಾತಮಂ ಪಠಿಸಿ ಚತು- ॥
ರ್ವೇದಿಗಳಾಗಿಯೆ ದಾನ- ।
ಕ್ಕಾದಂ ಮರುಗುತ್ತವಿಪ್ರನಲ್ಲಂ ಪಾತ್ರಂ ॥ ೧೮ ॥

ದಾನಂಗೊಂಡು ಕಳತ್ರಮ ।
ನಾನೆಂತುಂ ಪೊರೆವೆನದುವೆ ಧರ್ಮಂ ಪರಮ- ॥
ಧ್ಯಾನಂ ಪರತ್ರೆಹಿತಮೆಂ- ।
ದೀ ನುಡಿಯುಂ ನೆಗಳ್ವವಂಗೆ ಕೊಟ್ಟುದೆ ವಿಫಳಂ ॥ ೧೯ ॥

ಪರಮನನೋಲಗಿಸದೆ ಸ- ।
ಚ್ಚರಿತ್ರದಿಂ ನೆಗಳದಾಗಳುಂ ಜೀವದಯಾ- ॥
ಪರನೆನಿಸಿದ ಪೆಂಡಿರ ಮ- ।
ಕ್ಕಳ ದುಃಖವೆ ತಿರಿವವಂಗೆ ಕುಡಲಾಗರಿವಂ ॥ ೨೦ ॥

ಪರ್ವಂಗಳೊಳಂ ಮರೆದುಂ ।
ಸರ್ವಜ್ಞನನರ್ಥಿಯಿಂದಮರ್ಚಿಸದಾಗಳ್ ॥
ದುರ್ವಾಗಿರೆ ಪರಿತಂದುಂ ।
ನೂರ್ವರುಮಂ ಬೇಡಿತಿರಿವನಲ್ಲಂ ಪಾತ್ರಂ ॥ ೨೧ ॥

ಪೊಗಸೆದ್ದುನಿಚ್ಚಲಲ್ಲಿಗೆ ।
ಪರಿತಂದುಂ ಸೇಸೆಗೊಟ್ಟುಮೆಡೆಯಾಡುವಡಂ ॥

ತೊಗಲೊಳು ಪಾಲಿರ್ದಾಕವ- ।
ಳಿಗೆ ಕಕ್ಷದೊಳಿರೆಯುಮರೆಯ ವೈದಿಕನಾತಂ ॥ ೨೨ ॥

ಕೊಡುವಾಗಳು ಪೊರೆವಟ್ಟುಣ ।
ಕೊಡುವುದು ಕುಡಲಿಲ್ಲ ಹೋಗಿಯುಂದಡೆಮತ್ತಂ ॥
ಬಿಡದೆಡೆಯಾಡುವ ಪಾರ್ವರ ।
ಪೆಡತಲೆಯುಂ ಪಿಡಿದು ನೂಕುವದ್ಧಾರ್ತಾರರ್ ॥ ೨೩ ॥

ಪಿರಿದಪ್ಪಕಾಂಕ್ಷೆಯಿಂದಂ ।
ಪುರೋಹಿತಂ ಪೇಳ್ದ ಕೆಲಸಮಂ ಮಾಳ್ಪತೊರ್- ॥
ತ್ತಿರತೆರದೆ ಲಂಚಮಿತ್ತುಂ ।
ಪಿರಿದುಂಬರು ಬೆಸದಬೋವರಟ್ಟಿಡುಗೆಗಳಂ ॥ ೨೪ ॥

ಒಂದೆಡೆಯೊಳುಂಬುದುಂ ಮ- ।
ತ್ತೊಂದೆಡೆಯೊಳು ಪರಿದುಂಬರು........ ॥
.... ।
ಕುಂದದಃ ಬಹುಕಾಂಕ್ಷೆವೇದಮೋದಿದರ್ಗೆಂತುಂ ॥ ೨೫ ॥

ಮಿಗೆಪಡುಕೆನಾರ್ಪವುಲ್ಲೆಯ- ।
ತೊಗಲೊಳು ತೀವಿರ್ದ ನೀರು ಪಾವನಮೆಂದು- ॥
ಬ್ಬೇಗದೆ ಕರವತ್ತಿಯ ನೀ- ।
ರಂಗುಡಿವವಿವೇಕಿಗಳು ಮೆಯ್ಕುಲಾಪ್ಪರೆಸುಖಮಂ ॥ ೨೬ ॥

ಪತ್ತೆಂಟು ಮರದೊಳಿಕ್ಕಿಯು- ।
ಮಿತ್ತಪರೇಳ್ತಪ್ಪುದೆಂದೊಡೇಳ್ತಂದವರ- ॥
ಲ್ಲಿತ್ತುದನೆ ಕೊಂಡುತಣಿಯದೆ ।
ಮತ್ತಿನ್ನುಂ ಬೇಕುಮೆಂದು ಪಾಯ್ವಮೂರ್ಖರ್ ॥ ೨೭ ॥

ಮನೆಯೊಳ್ಕೇಶವಮಾಧವ ।
ಜನಾರ್ದನಂ ನಮ್ಮ ಪುತ್ರರಿರ್ದ್ದಪ್ಪನ್ನಿರೀ- ॥
ವನಿಬಗ್ಗರ್ಮೀವುದುಳಿದ- ।
ಗ್ಗೇನಸುಂ ಕುಡವೇಡ ನನ್ನಿಮೆಂಬಪ್ಪಾರ್ವರ್ ॥ ೨೮ ॥

ವೃ॥ ಪುರುಷಂ ಸತ್ತಡೆ ಪುತ್ರನುಳ್ಳವರು ಸಾಯಲ್ ಸಲ್ಲ-
ದೆಂಬರ್ಧರಾ- ।
ಮರರೇಕಾಗಮ ನಿಯಮಮವಾಗಿ ಧನಮಂ-
ನಿಃಪುತ್ರನಾವಾಗಳಾ- ।
ದರದಿಂದಂ ತವಗಿತ್ತು ಸಾವಡೆನತುಂ ಸಾಯಲ್ಕೆ-
ಪೇಳ್ವರ್ಮಹಾ- ।
ಪುರುಷರ್ಸ್ಸತ್ತಡೆ ಬದ್ಧರೊಂದೊಡಮೆಯುಂ-
ಕೊಳುವೊಂದುಪಾಯಮ್ಮಿಗಲ್ ॥ ೨೯ ॥

ಕಂ॥ ಸವಣಂ ಗೊರವಂ ಮುನಿಯೆಂ- ।
ಬವರ್ಗ್ಗೀಯಲ್ಲದಾನಮಂ ಪಲತೆರದಿಂ- ॥
ದೆಮಗೆ ಕುಡಿಮೆಂಬರಾ ವೇ- ।
ದವಿದರ್ಪೆಣನಲ್ಲಿ ಕಂಚನಿಟ್ಟಡಮುಣ್ಬರ್ ॥ ೩೦ ॥

ತಮ್ಮಾಪ್ತನುಮಂ ತಪಸಿಗ- ।
ಳಮ್ಮೆಚ್ಚದೆ ಬಯ್ವುವಿಪ್ರತತಿಗಿತ್ತಫಳಂ ॥
ತಮ್ಮನಿರಿವಂಗೆ ಸತ್ತುಗ- ।
ಮಮ್ಮಾಡಿದ ಫಳಮೆಪಾತ್ರಮೆಂದಿತ್ತ ಫಳಂ ॥ ೩೧ ॥

(೧೬೪—೧೬೫ರ ನಡುವೆ)

ಇದನಿಂಬಾಗರಿಗೆ ಕುಮಾ- ।
ರ್ಗ್ಗದೊಳಾವಂ ಬಿಡದೆ ನಡೆವನಂ ವೈಷ್ಣವನೆಂ-॥
ಬುದು ಮೋಕ್ಷಾಮಾಹೇಶ್ವರನೆಂ- ।
ಬುದು ದೆಯ್ವದ ಧರ್ಮದೊಂದು ತೆರನರಿಯದವಂ ॥ ೩೨ ॥

ಪಂಚದಶಾಧಿಕಾರವ್

(೧ನೆಯ ಪದ್ಯದ ಮೊದಲು)

ಕಂ॥ ಶ್ರೀಯೆಂಬನಂತ ವಿದ್ಯಾ- ।
ಶ್ರೀಯೆಂಬೀಯೆರಡು ಸೌಖ್ಯಹೇತುಗಳದರಿಂ ॥
ಶ್ರೀಯುಮನಂತ ವಿದ್ಯಾ- ।
ಶ್ರೀಯುಮನಮಗೀಗೆ ವರ್ಧಮಾನ ಜಿನೇಂದ್ರಂ ॥ ೧ ॥

(೧೮—೧೯ರ ನಡುವೆ)

ಪರ ಸಮಯದ ದೈವಮುಮಂ ।
ಪರಸಮಯದ ಮತಮನೋಜೆಯಿಂ ಚರಿತಮುಮಂ ॥
ಪರಮಜಿನಧರ್ಮ್ಮಮಂ ಮುಂ ।
ಪರಿಕಿಸಿ ಪದಿಯಿಟ್ಟು ನೋಟ ಕೈಕೊಳುಗರಿವಂ ॥ ೨ ॥

(೪೩—೪೪ರ ನಡುವೆ)

ಧರ್ಮ್ಮವೆಸರಿಂಗೆ ಸರಿಯೇ ।
ಕರ್ಮ್ಮಿಗಳಾಚರಿತ ದುಶ್ಚರಿತ್ರದೆನಡೆವಾ ॥
ಧರ್ಮ್ಮಂ ಜೀವದಯಾಪರ- ।
ಧರ್ಮ್ಮಕ್ಕೆಣೆಯಲ್ಲವಿತರ ನಡೆವ ಕುಧರ್ಮ್ಮಂ ॥ ೩ ॥

(೪೬—೪೭ರ ನಡುವೆ)

ಕಳ್ಳಂಗೆ ವಿಮಲಚಂದ್ರಿಕೆ- ।
ಯೊಳ್ಳಿತ್ತಲ್ಲೆಂದೀ ತೆರದೆಯನ್ಯ ಕುಮಾರ್ಗ- ॥
ಕೊಳ್ಳಿತ್ತೆ ಜೈನಧರ್ಮ್ಮಮ- ।
ದೊಳ್ಳಿತ್ತು ದಯಾಪರಂಗೆ ಸಚ್ಚರಿತಂಗಂ ॥ ೪ ॥

(೪೯—೫೦ರ ನಡುವೆ)

ಅರಗುಲಿಗೆ ಮೋಕ್ಷಮಾರ್ಗ್ಗದ ।
ತೆರನಂ ಸದ್ಗುರುಗಳೂರಿ ತೋರಿದಡಮವಂ- ॥
ಗುರಿಸದು ನಾಡೆಸದಂ ಗಡ ।
ಪೊರಗಂ ತೂರಿದವೊಲಕ್ಕು ಮೆಯ್ವುದುಮನಮುಂ ॥ ೫ ॥

(೫೦—೫೧ರ ನಡುವೆ)

ಆದಿಯ ಜಿನಧರ್ಮ್ಮಮುಮಂ ।
ಬೌದ್ಧರ ಧರ್ಮ್ಮಮುಮನೊಂದೆ ಸರಿಯೆಂದೆಂಬರು ॥
ಬಾದಂ ಮಾಳ್ಪರು ಪಿಟ್ಟುಂ ।
ಬೂದಿಯುಮಂ ಸಮಮೆನಿಪ್ಪವೋಲ್ಮತಿಹೀನರ್ ॥ ೬ ॥

(೫೧—೫೨ರ ನಡುವೆ)

ಇದು ಧರ್ಮ್ಮದ ಲಕ್ಷಣಮೆಂ- ।
ಬುದನರಿಯಮರ್ನ್ನ ತಿಳಿದುಮದರೊಳು ಮತ್ತಂ- ॥

ತದನೊಲ್ಲರ್ಗಡ ಮನಮೆ- ।
ಚ್ಚಿದತೆರದಿಂ ನಡೆಯಬಾರದಪ್ಪುದರಿಂದಂ ॥ ೭ ॥

(೮೧—೮೨ರ ನಡುವೆ)

ಚಿಂತಿಸಿದೊಡಲ್ಲದೀಯದು ।
ಚಿಂತಾಮಣಿ ಬೇಡದಂದು ಕುಡದಮರಕುಜಂ ॥
ಚಿಂತಿಸಿದೊಡಮರೆಯದೊಡಮು ।
ದೆಂತುಂ ಜಿನಧರ್ಮಮೀಗುಮುತ್ತಮಸುಖಮಂ ॥ ೮ ॥

(೯೬—೯೭ರ ನಡುವೆ)

ವೃ॥ ಮರುಗದಿರೆನ್ನ ಪೆಂಡಿರಿವರೆನ್ನಸುತರ್ಪರಿವಾರವೆನ್ನದೆಂ- ।
ದರಿಯೆಯೆಒ ನಿನ್ನ ಮಾಳ್ಕೆಯಲ್ಲದೆ............ ।
ಕರಘಡಮಾತೊಬಾಹ್ಯಮೆನಿಸಿರ್ದುವುನಿನ್ನವೆ-
ಬೇರೆವೆಲ್ಲಮಂ- ।
ತರಿನೆರೆ ಜೀವ ನಿನ್ನೊಡನೆ ಬಪ್ಪುವು ನಚ್ಚಿನ-
ಸುವ್ರತಂಗಳುಂ ॥ ೯ ॥

(೧೦೭—೧೦೮ರ ನಡುವೆ)

ಕಂ॥ ಧ್ಯಾನಿಸುತಂ ನಿರ್ಮಳಸು- ।
ಜ್ಞಾನದಿನಾತಂಗೆ ಕೂಡಿದತ್ತಾನರನ- ॥
ಜ್ಞಾನಮನಂಡಲೆದು ಭವಾಂ- ।
ಬೋನಿಧಿಯುಂ ದಾಟಿಮುಕ್ತಿರಮೆಯೊಳ್ನೆರೆಗುಂ ॥ ೧೦ ॥

(೧೧೨—೧೧೩ರ ನಡುವೆ)

ವೃ॥ ಮತಿಗೆಟ್ಟನ್ಯೋಕ್ತಿಯುಂ ಪಂಬಲಿಸಿ ಮರುಗದಿ-
ರ್ಜೀವಪೊತ್ತೆತ್ತುಗುಂ ಸಂ- ।
ಶ್ರುತಿಪಾರಾವಾರದಿಂದಂ ಜಿನಮುಖಜನಿತಾಳಾಪ-
ಮುದ್ಭೂತಲೇಪಂ- ।
ಗತಪಾಪಂ ಬೋಧರೂಪಂ ಜಿತಕುಸುಮ-
ಸರಾವೋಪಮತ್ಯಂತ ದೂರೀ- ।
ಕೃತತಾಪಂ ತ್ಯಕ್ತಕೋಪಂ ವಿಷಮವಿಷಯ-
ಚಿಂತಾವಿಕಾರಪ್ರದೀಪಂ ॥ ೧೧॥

ಅನುಬಂಧ ೨

ಅನುಬಂಧ ೨

ಸಮಯಪರೀಕ್ಷೆ ಗ್ರಂಥದ ಪದ್ಯಗಳ ಅಕಾರಾದಿ

[ಅ = ಅಧಿಕಾರ; ಪ = ಪದ್ಯಸಂಖ್ಯೆ; ಪು = ಪುಟಸಂಖ್ಯೆ]

ಆ

ಏ

ಓ

ಅಂ

ಖ

ಗ

ಘ

ಚ

ದ

ಧ

ನ

ಪ

ಫ

ಬ

ಮ

ಯ

ವ

ಶ

ಸ

ಹ

ಅನುಬಂಧ ೩

ಅನುಬಂಧ ೩

ಸಮಯಪರೀಕ್ಷೆ ಗ್ರಂಥದಲ್ಲಿ ಬರುವ ಕಠಿಣ ಶಬ್ದಗಳ ಕೋಶ

ಅ

ಶಬ್ದ		ಅರ್ಥ
ಅನುಪಮ	—	ಅಪ್ರಮಿತ; ಶ್ರೇಷ್ಠ
ಅತಂದ್ರ	—	ಆಯಾಸರಹಿತ
ಅಳ್ಕು	—	ಅಂಜು
ಅಮಳ	—	ನಿರ್ಮಲ
ಅಭಿನುತ	—	ಸ್ತುತಿಸಲ್ಪಟ್ಟ
ಅನಿಶಂ	—	ಸತತ
ಅಗ್ರತನಯ	—	ಹಿರಿಯ ಮಗ
ಅರ್ಹ	—	ಅರಹಂತ; ಜಿನ
ಅನಾಪ್ತಾಗಮ	—	ಅಯೋಗ್ಯಶಾಸ್ತ್ರ
ಅಷ್ಟಕರ್ಮ	—	ಜ್ಞಾನಾವರಣೀಯ ಮೊದಲಾದ ಎಂಟು ಕರ್ಮಗಳು
ಅಜರ	—	ಮುಪ್ಪುರಹಿತ
ಅನಂತವೀರ್ಯ	—	ದಾನಾಂತರಾಯ ಮುಂತಾದ ಐದು ಅಂತರಾಯ ಕರ್ಮಗಳ ನಾಶವಾದ ಮೇಲೆ ಸಿದ್ಧಪರಮೇಷ್ಠಿ ಆಗುವ ಮೊದಲು ಪ್ರಕಟವಾಗುವ ಗುಣ
ಅನಘ	—	ಪಾಪರಹಿತ

ಶಬ್ದ		ಅರ್ಥ
ಅನಾಕುಳ	—	ದುಃಖವಿಲ್ಲದ
ಅಹರ್ನಿಶ	—	ಹಗಲಿರುಳು
ಅಪವರ್ಗಮಾರ್ಗ	—	ಮೋಕ್ಷದ ದಾರಿ
ಅಹೀಂದ್ರ	—	ಆದಿಶೇಷ
ಅಭಿಷವ	—	ಅಭಿಷೇಕ
ಅನುಲೋಮ	—	ಕ್ರಮದಿಂದ
ಅಳವು	—	ಸಮೀಪ; ಸಾಧ್ಯ
ಅರ್ಕರಸ್ಮಿ	—	ಸೂರ್ಯಕಿರಣ
ಅಘುಟಂ	—	ಅಸಂಭವನೀಯ
ಅಣುವ	—	ಹನುಮಾನ್
ಅಕ್ಷಸೂತ್ರ	—	ರುದ್ರಾಕ್ಷಿಮಾಲೆ
ಅಟ್ಟಳೆ	—	ಬುರುಜು
ಅರುಣ	—	ಕೆಂಪು; ಸೂರ್ಯ ಸಾರಥಿ
ಅಘುಹರಣ	—	ಪಾಪನಾಶ
ಅಪ್ಪುಕೆಯ್	—	ಹೊಂದು
ಅಭವೋದಿತ	—	ಜಿನನಿಂದ ಹೇಳಲ್ಪಟ್ಟ
ಅಹಿ	—	ಸರ್ಪ
ಅಡಗ	—	ಮಾಂಸ
ಅಮೋಘ	—	ಸಫಲ; ಶ್ರೇಷ್ಠ
ಅನಂತಚತುಷ್ಟಯ	—	ಅನಂತಜ್ಞಾನ, ಅನಂತ ದರ್ಶನ, ಅನಂತಸುಖ ಮತ್ತು ಅನಂತವೀರ್ಯ
ಅಧಿಗಮ	—	ಕಲಿಯುವಿಕೆ, ಅಭ್ಯಾಸ
ಅಪವರ್ಗೋಚಿತ	—	ಮೋಕ್ಷಯೋಗ್ಯ
ಅಕೃಷಿಣ	—	ಹದವಾಗದ
ಅಕಾಮಿಕ	—	ಇಚ್ಛೆಯಿಲ್ಲದವ
ಅಳಿಪು	—	ಅನುರಾಗ
ಅಗ್ಗಳ	—	ಹೆಚ್ಚಳ; ಹೆಚ್ಚು

ಶಬ್ದ		ಅರ್ಥ
ಅಳಲು	—	ದುಃಖ
ಅವಜ್ಞೆ	—	ತಿರಸ್ಕಾರ; ಅಪಮಾನ
ಅಭಿಗಮ	—	ಎದುರು ಹೋಗುವದು
ಅರ್ಕಬಿಂಬ	—	ಸೂರ್ಯಮಂಡಲ
ಅಡಸು	—	ಹೊಂದಿಕೆಯಾಗು
ಅನರ್ಘ್ಯ	—	ಬೆಲೆಕಟ್ಟಲುಬಾರದ
ಅಮಿತಪ್ರೋಕ್ತ	—	ಬಹಳ ತಿಳಿಸಿದವ (ಜಿನ)
ಅವಗ್ರಹ	—	ತೊಡಕು; ಬರಗಾಲ
ಅನುವಶ	—	ಹೇಳಿದಂತೆ ಕೇಳಿಕೊಂಡಿರುವ
ಅಣಕ	—	ಹಾಸ್ಯ, ಕುಚೋದ್ಯ
ಅಬ್ಜವಿಷ್ಟರ	—	ಕಮಲಪೀಠ
ಅಡವೇಳು	—	ಅಡ್ಡ ಹೇಳು
ಅಣ್ಮು	—	ಪೌರುಷ
ಅಸ್ತೋಮ	—	ಗುಂಪಾಗದ
ಅನಿಂದ್ಯ	—	ಕೀಳಲ್ಲದ; ನಿಂದೆಯಿಲ್ಲದ
ಅಭವ	—	ಹುಟ್ಟು ಇಲ್ಲದವ; ಜಿನ
ಅರಸು	—	ಹುಡುಕು
ಅಗಿ	—	ತೋಡು; (ಹಲ್ಲಿನಿಂದ)-ತಿನ್ನು
ಅಜಾತ	—	ಹುಟ್ಟು ಇಲ್ಲದ
ಅಪಗತ	—	ಕಳೆದುಹೋದ
ಅಲಂಪು	—	ಸೊಗಸು
ಅಖಂಡಿತ	—	ನಿಶ್ಚಯವಲ್ಲದ
ಅನಂಗಾಪಹ	—	ಶಿವ; ಜಿನ

ಶಬ್ದ		ಅರ್ಥ
ಅಸುಧಾರೆ	—	ಜೀವಧಾರೆ
ಅಚ್ಯುತ	—	ನಾಶವಿಲ್ಲದ
ಅಮರಗುರು	—	ಬೃಹಸ್ಪತಿ
ಅಣುಗ	—	ಹುಡುಗ
ಅಬ್ಬೆ	—	ತಾಯಿ
ಅಗುರ್ವು	—	ಭಯಂಕರ
ಅರೆ	—	ಅರ್ಧ; ನಾಶಮಾಡು
ಅಮರನದಿ	—	ದೇವಗಂಗಾ
ಅಸ್ತಮಿತ	—	ಮುಳುಗಿದ
ಅಬ್ದ	—	ವರ್ಷ
ಅರಗುಲಿ	—	ಪಾಪಿ; ಧರ್ಮಘಾತುಕಿ
ಅಡಗೂಳ್	—	ಅಟ್ಟಅನ್ನ
ಅಲ್ಲಣಿಗೆ	—	ವಿನೋದ; ಮೇಳ
ಅಪದಸ್ಥ	—	ಕಾಲಿನಿಂದ ನಡೆಯದಿರುವವ, ತಲೆಕೆಳಗಾಗಿ ತಪಸ್ಸು ಮಾಡುವವ
ಅಮೇಧ್ಯ	—	ಹೊಲಸು; ಮಲ
ಅಲೆ	—	ಅಡ್ಡಾಡು; ತೆರೆ
ಅಕ್ಷೂಣ	—	ಕಡಿಮೆಯಾಗದ
ಅಂಜುಳಿ	—	ಬೊಗಸೆ
ಅಂತರಾಯ	—	ಅಡ್ಡಿ; ವಿಘ್ನ
ಅಂಬುಳು	—	ಒಂದು ರೋಗದ ಹೆಸರು (ಚರ್ಮಕ್ಕೆಸಂಬಂಧಿಸಿದ್ದು)
ಅಂಶು	—	ಕಿರಣ

ಆ

ಶಬ		ಅರ್ಥ
ಆಗಮವೇದಿ	—	ಸಿದ್ಧಾಂತ ತಿಳಿದವ
ಆಪ್ತೋದಿತ	—	ಹಿರಿಯರು ಹೇಳಿದ
ಆಗರ	—	ಸಮೂಹ
ಆಯತ್ತಂ	—	ಯೋಗ್ಯ
ಆಳಾಪ	—	ದುಃಖ, ಸಂಭಾಷಣೆ
ಆರಾಧಿಸು	—	ಪೂಜಿಸು
ಆನೀಕ	—	ಸಮೂಹ
ಆರಾಧಕ	—	ಪೂಜಿಸುವವ
ಆಮುತ್ರಿಕ	—	ಪರಲೋಕದ
ಆನಂದಾವಹ	—	ಸಂತೋಷ ಕೊಡುವ
ಆವರಣೀಯ	—	ಮುಚ್ಚಿದಂಥ
ಆರಯ್	—	ಹುಡುಕು
ಆರ್ತ್ಗೆಸಗು	—	ಪರಾಕ್ರಮ ತೋರಿಸು
ಆರ್ತ	—	ದುಃಖಿತ; ಸಮರ್ಥ; ಬಂಧಿತ
ಆರ್ಯ	—	ಹಿರಿಯ; ಶ್ರೇಷ್ಠ; ಉತ್ತಮ ಕುಲದಲ್ಲಿ ಹುಟ್ಟಿದವ
ಆಳಿಗೊಳ್	—	ವಿರೋಧಿಸು
ಆಟಿಸು	—	ಬಯಸು
ಆವಿಳರ್	—	ಅಶಿಕ್ಷಿತರು
ಆಗುಳಿಸು	—	ಆಕಳಿಸು
ಆರಡಿಕಾರ	—	ಚಾಡಿಖೋರ
ಆಪೋಶನ	—	ಊಟದ ಮೊದಲು ಮಂತ್ರಪೂರ್ವಕ ಕುಡಿವ ನೀರು
ಆರೋಗಿಸು	—	ಊಟಮಾಡು
ಆರ್ಯ್	—	ಆರಿಸು

ಶಬ್ದ		ಅರ್ಥ
ಆಮಿಷ	—	ಇಚ್ಛೆ, ಊಟ.
ಆರಾತಿ	—	ಶತ್ರು

ಇ

ಇನ	—	ಸೂರ್ಯ
ಇರಿಪೆ	—	ಇರುವೆ
ಇಳಾಮಂಡಳ	—	ಭೂಮಂಡಲಂ
ಇಸು	—	ಬಾಣಬಿಡು
ಇಟ್ಟಗೆ	—	ಇಟ್ಟಂಗೆ
ಇತಃಪರ	—	ಇನ್ನುಮುಂದೆ
ಇನಿತು	—	ಇಷ್ಟು
ಇಂದು	—	ಚಂದ್ರ
ಇಂಬು	—	ವಿಸ್ತಾರ, ಸ್ಥಳ

ಈ

ಈಂಟು	—	ಕುಡಿ

ಉ

ಉರೆ	—	ಅಧಿಕ, ಚನ್ನಾಗಿ
ಉಪಸರ್ಗ	—	ತೊಂದರೆ; ಆಪತ್ತು
ಉಜ್ಜುಗ	—	ಉದ್ಯೋಗ
ಉಪಸಮಿಸು	—	ಶಾಂತ ಮಾಡು, ಸಮಾಧಾನ ಹೊಂದು
ಉಚ್ಚರಿಸು	—	ಮಾತಾಡು
ಉತ್ಪಾದ	—	ಬೆಳೆಸು, ಹುಟ್ಟಿಸು
ಉದ್ದಾಮ	—	ಶ್ರೇಷ್ಠ, ಸೊಕ್ಕಿನ

ಶಬ್ದ		ಅರ್ಥ
ಉರಗೇಂದ್ರ	—	ಆದಿಶೇಷ
ಉದೀರಿತ	—	ಹೇಳಿದ
ಉರ್ವ	—	ಉಬ್ಬು
ಉತ್ತಾರಣ	—	ಎತ್ತುವಿಕೆ
ಉಪಗೂಹ(ನ)	—	ಅಡಗಿಸು,ರಹಸ್ಯವಾಗಿಡು ಉತ್ತಮ ಕ್ಷಮಾದಿಗಳಿಂದ ತನ್ನಲ್ಲಿ ಸದ್ಗುಣಗಳನ್ನು ಬೆಳಸಿ ಸಾಧರ್ಮಿಗಳ ದೋಷಗಳನ್ನು ಮುಚ್ಚು-ವುದು
ಉಪಶಮ	—	ಶಾಂತಿಹೊಂದು; ಕರ್ಮವು ಉದಯವಾಗದಿರುವಿಕೆ ಮತ್ತು ಅದು ಅಲ್ಲಿಯೇ ನಿಂತುಹೋಗುವಿಕೆ
ಉಪೇಕ್ಷೆ	—	ಅನಾದರ
ಉತ್ಪ್ರೇಕ್ಷೆ	—	ಅನಾದರ
ಉಡಿ	—	ಮುರಿ
ಉಳಿ	—	ಕಳ್ಳ
ಉದ್ಧತ	—	ಮದಾಂಧ
ಉಪಾದೇಯ	—	ಗ್ರಾಹ್ಯವಾದ ಜ್ಞಾನಾದಿ ಗುಣಗಳಿಗೆ ಉಪಾದೇಯ ವೆನ್ನುತ್ತಾರೆ
ಉತ್ತಮಾಂಶ	—	ಶಿರಸ್ಸು
ಉದ್ಭವ	—	ಹುಟ್ಟು
ಉತ್ಕರ	—	ರಾಶಿ; ಅಧಿಕ
ಉತ್ಕರ್ಷ	—	ಹೆಚ್ಚಳ; ಆನಂದ
ಉಲಿ	—	ಮಾತಾಡು; ಧ್ವನಿಮಾಡು
ಉಯ್ಯಾಲ	—	ಜೋಕಾಲಿ

ಶಬ್ದ		ಅರ್ಥ
ಉಣ್ಮು	—	ಹುಟ್ಟು; ಏಳು
ಉದ್ದುರ್	—	ತಿಕ್ಕು
ಉಪಶಾಂತ	—	ಆಶೆಬಿಟ್ಟ; ಸಮಾಧಾನ
ಉದ್ಭಾಸಿ	—	ಹೊಳೆಯುವ
ಉದ್ವಾಸನ	—	ಹೊರಗೆ ಹಾಕು; ಕೊಲೆ; ಸಂಹಾರ

ಊ

ಊರ್ಜಿತ	—	ಶಕ್ತಿಯುತ; ಅತಿಶಯ
ಊಳ್	—	ಕೂಗು; ಒದರು
ಊರ್ಧ(ರ್ಧ್ವ) ಲೋಕ	—	ಸ್ವರ್ಗ
ಊಡು	—	ಊಟಮಾಡು; ಹೂಡು
ಊನ	—	ಅಪೂರ್ಣ; ಕೊರತೆಯುಳ್ಳ
ಊರು	—	ತೊಡೆ

ಎ

ಎಸಕ	—	ಖ್ಯಾತಿ
ಎಸೆ	—	ಶೋಭಿಸು, ಒಗೆ, ಬಾಣ ಬಿಡು
ಎಯ್ದು	—	ಹೋಗು; ಬರು
ಎಯ್ತರು	—	ಬರು; ಬಾ
ಎಗ್ಗ	—	ಹೆಡ್ಡ; ಮೂರ್ಖ
ಎಡರ್	—	ಅಡ್ಡಿ; ಪೇಚು; ಸಂಕಟ
ಎಡೆ	—	ಸ್ಥಳ
ಎರೆಯ	—	ಯಜಮಾನ; ಪತಿ
ಎರವು	—	ಕಡ; ಕೈಗಡ; ಸಾಲ
ಎಗ್ಗು	—	ಅಪಮಾನ

ಶಬ್ದ		ಅರ್ಥ

ಏ

ಏಕದಂಡಿ	—	ಸನ್ಯಾಸಿಗಳಲ್ಲಿ ಒಂದು ಭೇದ
ಏಳಿದ	—	ತಿರಸ್ಕಾರ; ನಿಕೃಷ್ಟ
ಏಣ	—	ಚಿಗರಿ
ಏಡಿಸು	—	ಅಣಕಿಸು; ಪರಿಹಾಸ್ಯ-ಮಾಡು

ಐ

ಐರಾವತ	—	ಶಿಖರಿಪರ್ವತ ಮತ್ತು ಪೂರ್ವ ಪಶ್ಚಿಮ ಉತ್ತರ ಸಮುದ್ರಗಳ ನಡುವಿನ ಪ್ರದೇಶವು. ಭರತ ಕ್ಷೇತ್ರ ದಂತೆ ಇದರಲ್ಲಿಯೂ ವಿಜ ಯಾರ್ಧಪರ್ವತ ಮತ್ತು ಗಂಗಾಸಿಂಧು ನದಿಗಳಿಂದ ಆರು ಭಾಗಗಳಾಗಿವೆ. ಪ್ರತಿ ಯೊಂದು ಭಾಗಕ್ಕೆ ಖಂಡ ವೆನ್ನುತ್ತಾರೆ.
ಐಹಿಕ	—	ಪ್ರಾಪಂಚಿಕ

ಒ

ಒಸೆ	—	ಪ್ರಸನ್ನವಾಗು; ಪ್ರೀತಿಸು
ಒಳ್ಪು	—	ಲೇಸು; ಒಳಿತು
ಒಳರು	—	ಅರಚು; ಇದ್ದಾರೆ
ಒಲವರ	—	ಪ್ರೀತಿ; ಪಕ್ಷಪಾತ
ಒಟ್ಟಜೆ	—	ಗುಂಪು; ರಾಶಿ

ಶಬ್ದ		ಅರ್ಥ
ಒಟ್ಟೈಸು	—	ಗುಂಪುಗೂಡಿಸು; ಒಟ್ಟು ಸೇರಿಸು; ನೂಕು
ಒಡಪಿಸು	—	ಒದಗಿಸು; ಅನುಕೂಲ-ಮಾಡಿಕೊಡು
ಒಸರ್	—	ಸುರಿ; ಸ್ರವಿಸು
ಒನೆ	—	ಕೇರು (ಮರದಲ್ಲಿಟ್ಟು ಹಸನು ಮಾಡುವದು)
ಒಡಗಲಸು	—	ಮಿಶ್ರವಾಗು; ಕೂಡು
ಒರತೆ	—	ಪ್ರವಾಹ; ಒಸರುವಿಕೆ; ನೀರು ಹುಟ್ಟುವಿಕೆ

ಓ

ಓಲಗಿಪು	—	ಸೇವಿಸು
ಓಜೆ	—	ಬಲ; ಆಧಾರ; ಸಾಲು
ಓರಂತೆ	—	ಒಂದೇಸಮ
ಓವು	—	ರಕ್ಷಿಸು; ಉಪಚರಿಸು
ಓಸರಿಸು	—	ಹಿಂದೆಗೆ
ಓತ	—	ಓದು;

ಔ

ಔದುಂಬರ	—	ಅತ್ತಿಯಮರ

ಕ

ಕಂಪು	—	ಪರಿಮಳ
ಕಂಜ	—	ಕಮಲ; ಬ್ರಹ್ಮ
ಕಂಡೂಯನ	—	ನವೆ; ತುರಿಕೆ
ಕಂಟಣಿಸು	—	ಕುಗ್ಗು; ಬೆದರು

ಶಬ್ದ		ಅರ್ಥ
ಕಮನೀಯ	—	ಮನೋಹರ
ಕಳಂಕ	—	ತಪ್ಪು; ಪಾಪ; ಕಲೆ
ಕರ್ತೃ	—	ಮಾಡಿದವ
ಕಲ್ಪಮಹೀಜ	—	ಕಲ್ಪವೃಕ್ಷ
ಕವರ್ತೆ	—	ಸೆಳೆದುಕೊಳ್ಳು
ಕತ	—	ಕಾರಣ
ಕಲ್ಬಿಷ	—	ಪಾಪ; ಹೊಲಸು
ಕಡುಗುಜ್ಜ	—	ಅತಿಗಿಡ್ಡ
ಕರಗ	—	ಕರಕ; ಕಮಂಡಲು
ಕವಿಲೆ	—	ಆಕಳ
ಕಡಂಗಿ	—	ಸಿಟ್ಟಿಗೆದ್ದು
ಕಸವರ	—	ಬಂಗಾರ
ಕಠಿರ್	—	ತೀಕ್ಷ್ಣ; ಖಾರ; ಕಮರು
ಕಲ್ಕ	—	ಕಲಕು; ಪಾಪ; ಸುಳ್ಳು; ಒಂದು ತರದ ಅಂಟು
ಕಲ್ಪಭುಜ	—	ಕಲ್ಪವೃಕ್ಷ
ಕಪಾಳ	—	ತಲೆಬುರುಡೆ
ಕರಿಕ	—	ಕಪ್ಪು ಮನುಷ್ಯ
ಕಟುತ್ರಿಕ	—	ಮೂರುಕ್ಷಾರ (ಖಾರ)-ಗಳು
ಕನಕಾದ್ರಿ	—	ಮೇರು ಪರ್ವತ
ಕಮಠ	—	ಆಮೆ; ನೀರಿನ ಪಾತ್ರೆ
ಕಳೇವರ	—	ಮೃತಶರೀರ, ದೇಹ
ಕಯ್ದು	—	ಆಯುಧ
ಕಲನ	—	ಗರ್ಭಪಿಂಡ; ಪೂರ್ಣವಾ-ಗದ ವಸ್ತು; ಕಲೆ; ನಿಮಿತ್ತ
ಕಲಂಬು	—	ಕಿಲಬು; ಕಲ್ಮಷ; ಕೆಸರು

ಶಬ್ದ		ಅರ್ಥ
ಕ್ರತು	—	ಯಜ್ಞ
ಕ್ಷಪಿತ	—	ಬಿಸಾಡಿದ; ಒಗೆದ
ಕಾಂಕ್ಷೆ	—	ಬಯಕೆ
ಕಾಂಸ	—	ಕಂಚು
ಕಾಳ್ಕಬ್ಬ	—	ಕನಿಷ್ಠ ಕಾವ್ಯ
ಕಾಯ್ಪು	—	ಪರಾಕ್ರಮ
ಕಾಲುಡಿ	—	ಕಾಲುಮುರಿ
ಕಾಳಿ	—	ದುರ್ಗೆ
ಕಾಣೆ	—	ಒಂದು ಜಾತಿ ಮೀನು; ತಕ್ಕಡಿಯ ಏರುಪೇರು
ಕಾಸು	—	ಸಣ್ಣನಾಣ್ಯ
ಕಾಲ್ಗರ್ಚು	—	ಕಾಲು ತೊಳೆ
ಕಾಪುರುಷ	—	(ನೀಚ, ಹೇಡಿ) ಕೆಟ್ಟ ಮನುಷ್ಯ
ಕಿಂಜಲ್ಕ	—	ಕಮಲ; ಕೇಸರ
ಕಿಸು	—	ಕೆಂಪು
ಕಿರಿ	—	ತೆಗೆ; ಸಣ್ಣ
ಕಿಸುಗುಳ	—	ಉಪದ್ರ
ಕಿಲ್ಬಿಷರುಜಾಳಿ	—	ಪಾಪದ ಬೇನೆಗಳು
ಕಿಸುವೊನ್ನು	—	ಬಂಗಾರ
ಕೀಲಿಗ	—	ಬಡಿಗ
ಕುಳಿತೆವರ್	—	ತಗ್ಗುದಿನ್ನೆ
ಕುಜ	—	ಗಿಡ; ಮಂಗಳ ಗ್ರಹ
ಕುಭೃತ್	—	ಪರ್ವತ; ರಾಜ
ಕುತ್ಸಿತ	—	ನಿಂದ್ಯ; ಕೆಡುಕ
ಕುತ್ತು	—	ಹೊಡೆ; ವಿಪತ್ತು
ಕುವಳಯಮಿತ್ರ	—	ಸೂರ್ಯ

ಶಬ್ದ		ಅರ್ಥ
ಕೂರ್ತು	—	ಕುಳಿತು
ಕೂರ್ಪ	—	ಪ್ರಿಯ; ಎರಡು ಹುಬ್ಬುಗಳ ನಡುವಿನ ಸ್ಥಳ
ಕೂರ್ಮೆ	—	ನಲ್ಮೆ; ಮೋಹ
ಕೃತ್ತಿ	—	ಚರ್ಮ
ಕೃತಘ್ನ	—	ಅಪಕಾರಿ
ಕೃತ್ಸ್ನ	—	ಸಂಪೂರ್ಣ;ಹೊಟ್ಟೆ;ನೀರು
ಕೆಮ್ಮನೆ, ಕೆಮ್ಮಗೆ	—	ಸುಮ್ಮನೆ; ಫಲವಿಲ್ಲದೆ
ಕೆಯ್ತ	—	ಅಭಿನಯ; ಕಪಟ
ಕೆಲ	—	ಸಮೀಪ, ಪಕ್ಕ
ಕೆಳೆ	—	ಸೆಳೆ; ಸ್ನೇಹ; ಸ್ನೇಹಿತ
ಕೇವಳಬೋಧ	—	ಕೇವಲಜ್ಞಾನ; ಸರ್ವಜ್ಞತ್ವ
ಕೇಳೀನಿವಾಸ	—	ಆಟದ ಮನೆ; ವಿನೋದ-ಗೃಹ
ಕೇಶ	—	ಕೂದಲು; ತಲೆಕೂದಲು
ಕೈವಲ್ಯ	—	ಮೋಕ್ಷ
ಕೈಸಾರ್	—	ದೊರಕು
ಕೈಗೆಯ್	—	ಕಾರಣವಾಗು;ಸಿದ್ಧವಾಗು ಅಲಂಕರಿಸು
ಕೊಕ್ಕರಿಸು	—	ಬೆದರಿಸು;ಉಪದ್ರವಮಾಡು ನಿಂದಿಸು; ಹಿಂಜರಿ
ಕೊಳ್ಳಿ	—	ಬೆಂಕಿ;ಉರಿಯುವ ಕಟ್ಟಿಗೆ.
ಕೊಪ್ಪು	—	ಕೊಕ್ಕೆ; ಬಿಲ್ಲಿನ ತುದಿಯ ಕಚ್ಚು; ಕಿವಿಯಿಂದ ಜಡೆಗೆ ಸಿಕ್ಕಿಸುವ ಆಭರಣ
ಕೊರಡು	—	ಕಟ್ಟಿಗೆ ತುಂಡು
ಕೊನೆವುದು	—	ಕೈಕೊಂಡ ಕಾರ್ಯದಲ್ಲಿ ಜಯಸಂಪಾದಿಸುವುದು

ಶಬ್ದ		ಅರ್ಥ
ಕೊದಲು	—	ತೊದಲು; ಅಸ್ಪಷ್ಟವಾಗಿ ಮಾತಾಡು
ಕೊಡಕೆ	—	ಕಿವಿ; ಕಿವಿಗೊಡುವಿಕೆ; ಕಿವಿಯ ಆಭರಣ
ಕೊರ್ವು	—	ಕೊಬ್ಬು; ಹೆಮ್ಮೆ
ಕೋವಿದ	—	ವಿದ್ವಾಂಸ
ಕೋಡಂಗ	—	ಮಂಗ
ಕ್ರೌಂಚಾರಿ	—	ಷಣ್ಮುಖ
ಕೌಳರ್	—	ಕಾಳಿಕಾಭಕ್ತರು

ಖ

ಖಳ	—	ನೀಚ
ಖರ	—	ಕತ್ತೆ; ತೀಕ್ಷ್ಣ; ಶಕೆ; ರಾಕ್ಷ-ಸನ ಹೆಸರು

ಗ

ಗಹನ	—	ರಹಸ್ಯ; ಭೇದಿಸಲುಅಸಾಧ್ಯ ಕೊರತೆ
ಗಹ್ವರ	—	ಗುಹೆ; ಕಾಡು
ಗಣಿಕೆ	—	ವೇಶ್ಯಾಸ್ತ್ರೀ
ಗರೆ	—	ವಿಷ; ಪಿಶಾಚಿ
ಗರಿ	—	ಕರಿಕೆ; ಹಕ್ಕಿಯ ತುಪ್ಪಳ
ಗತಪುಣ್ಯ	—	ಪುಣ್ಯತೀರಿದ
ಗಸಣೆ	—	ಘರ್ಷಣೆ; ತೊಂದರೆ
ಗಾತ್ರ	—	ಅವಯವ; ವೈಶಾಲ್ಯ
ಗಾರುಡ	—	ವಿಷಪರಿಹರಿಸುವವಿದ್ಯೆ
ಗ್ರಾಮಸಿಂಹ	—	ನಾಯಿ

ಶಬ್ದ		ಅರ್ಥ
ಗಿಣ್ಣು	—	ಗಿಣ್ಣು; ಗಣಲು; ಗಂಟು
ಗೀರ್ವಾಣ	—	ದೇವತೆ
ಗುಂಜ	—	ಗುಲಗಂಜಿ; ಹೆಂಡದ ಅಂಗಡಿ
ಗೂಂಟ	—	ಗೂಟ
ಗೂಥ	—	ಮಲ; ಸಗಣಿ
ಗೇಹ	—	ಮನೆ
ಗೇಯ	—	ಗಾನ; ಸಂಗೀತ; ಹಾಡು-ಗಾರ
ಗೊರವ	—	ಶಿವ, ಶೈವಭಿಕ್ಷು; ತಪಸ್ವಿ
ಗೋಸನೆ(ಣೆ)	—	ಘೋಷಣೆ; ಡಂಗುರಹೊಡೆ
ಗೋವಳ(ರ)	—	ಗೋಪಾಲ
ಗೋಘ್ನ	—	ಆಕಳು ಕೊಲ್ಲುವವ

ಘ

ಘಾತಿಚತುಷ್ಟಯ	—	ಜ್ಞಾನ, ದರ್ಶನ, ಸುಖ, ಶಕ್ತಿ ಇತ್ಯಾದಿ ಜೀವನಗುಣಗಳನ್ನು ನಾಶಮಾಡುವ ಕರ್ಮಗಳಿಗೆ ಘಾತಿಕರ್ಮಗಳೆನ್ನುತ್ತಾರೆ. ಈ ಕರ್ಮಗಳು ಜ್ಞಾನಾವರಣೀಯ, ದರ್ಶನವಾರಣೀಯ, ಮೋಹನೀಯ ಮತ್ತು ಅಂತರಾಯ ಎಂದು ನಾಲ್ಕು ಇವೆ.

ಚ

ಶಬ್ದ		ಅರ್ಥ
ಚಂಡಿ	—	ಶಕ್ತಿ ದೇವತೆ
ಚಳಮತಿ	—	ಚುರುಕು ಬುದ್ಧಿ
ಚಕ್ರಿ	—	ಕೃಷ್ಣ; ಚಕ್ರವುಳ್ಳವ
ಚಳಿ	—	ಶಕ್ತಿಗುಂದು; ಶೀತ; ಹಿಮ
ಚತುರ್ಗತಿ	—	ದೇವಗತಿ, ನಾರಕಗತಿ; ಮನುಷ್ಯಗತಿ ಮತ್ತು ತಿ-ರ್ಯಗ್ಗತಿ. ಈ ನಾಲ್ಕು ಗತಿಗಳ ಉದಯದಿಂದ ಜೀವನು ದೇವಾದಿ ಜನ್ಮ ಪಡೆಯುತ್ತಾನೆ.
ಚರಮದೇಹಿ	—	ಚರಮ-ಕೊನೆಯ, ದೇಹ-ಶರೀರ. ತದ್ಭವ ಮೋಕ್ಷ ಗಾಮಿಯಾದ ಮನುಷ್ಯನ ಶರೀರಕ್ಕೆ ಚರಮದೇಹಿ, ಚರಮತನು, ಚರಮ ಶರೀರ ಮುಂತಾದ ಹೆಸರುಗಳಿವೆ
ಚಟ್ಟೆ	—	ಶಿಷ್ಯ; ಸಿದಿಗಿ; ಚೊಕ್ಕತನ
ಚಯ	—	ಗುಂಪು; ಸಮೂಹ
ಚಂಡಕರ	—	ತೀಕ್ಷ್ಣಕಿರಣವುಳ್ಳವ;
ಚಟಾರಿಸು	—	ಸೂರ್ಯ ತುಂಡುಮಾಡು
ಚಾರಣ	—	ಸಂಚರಿಸುವವ; ತಪಸ್ಸಿನ ಪ್ರಭಾವದಿಂದ ಅಕಾಶದಲ್ಲಿ ಸಂಚಾರ ಮಾಡುವ ಸಾಮರ್ಥ್ಯವು ಉಂಟಾಗುತ್ತದೆ. ಈ ಸಾಮರ್ಥ್ಯವುಳ್ಳಮುನಿ. ಈ ಸಾಮರ್ಥ್ಯಕ್ಕೆ ಚಾರಣರ್ಧಿ ಎನ್ನುತ್ತಾರೆ.

ಶಬ್ದ		ಅರ್ಥ
ಚಾರ್ವಾಕ	—	ನಾಸ್ತಿಕವಾದವನ್ನುಸಾರಿದ ಪ್ರಾಚೀನಕಾಲದ ಒಬ್ಬ ಮೇಧಾವಿ
ಚಿಕ್ಕಯ್ಯ	—	ಮೈಲಾರಲಿಂಗನ ಒಂದು ಹೆಸರು
ಚಿಚ್ತ್ರರಿಗ	—	ಉತ್ಸುಕ
ಚೋಹ	—	ಯೋಗ; ಸೋಗು
ಚೋದ್ಯ	—	ಆಶ್ಚರ್ಯ; ಸೋಜಿಗ
ಚೌವಟ್ಟೆ	—	ನಾಲ್ಕು ದಾರಿಗಳು ಕೂಡಿದ ಸ್ಥಳ

ಛ

ಛಾಗ	—	ಹೋತು; ಗಂಡುಆಡು
ಛಿಧ್ರಾನ್ವೇಷಿ	—	ಪರರ ಕುಂದುಕೊರತೆ ಹುಡುಕುವವ

ಜ

ಜಂಗುಳಿ	—	ಗುಂಪು
ಜನವಲ್ಲಭ	—	ಅರಸು
ಜರೆ	—	ಮುಪ್ಪು
ಜನಿತ	—	ಹುಟ್ಟಿದ
ಜಡರ್	—	ಮೂಢರು
ಜರುಚು	—	ವ್ಯರ್ಥವಾತಾಡು; ಹರಟೆಕೊಚ್ಚು
ಜನ್ನಿಗೆ	—	ಯಾಜ್ಞಿಕ; ನೈವೇದ್ಯ
ಜಗುನೆ	—	ಯಮುನಾನದಿ
ಜರಗ	—	ಜಲಗಾರ

ಶಬ್ದ		ಅರ್ಥ
ಜಘನ್ಯ	—	ನೀಚ; ಅಹಂಕಾರಿ
ಜಾನಿಸು	—	ಧ್ಯಾನಿಸು
ಜಾವ	—	ಪ್ರಹರ; ಯಾಮ
ಜಾತರೂಪ	—	ಒಳ್ಳೆಯ ರೂಪವುಳ್ಳದು; ಚಿನ್ನ
ಜಿನಸಮಯ	—	ಜೈನ ಸಿದ್ಧಾಂತ
ಜಿತಾಂಗೋದ್ಭವ	—	ಕಾಮನನ್ನು ಜಯಿಸಿದವ
ಜೂಳಿ	—	ಜೂಲು ಕೂದಲು;ರೋಮ ವೃಂದ; ಗಿಂಡಿಯ ಮೂತಿ; ಪಾತ್ರೆಯ ಸೊಂಡಿಲು
ಜೇನೆಯ್	—	ಜೇನುತುಪ್ಪ
ಜೊತ್ತು	—	ಜೋಡಿ; ಸಮೂಹ
ಜೋಕಾರ	—	ಬೆಡಗುಗಾರ
ಜೋತ್ಸ್ನೆ	—	ಬೆಳದಿಂಗಳು
ಜ್ಞಾನಾವರಣೀಯ	—	(ಘಾತಿಚತುಷ್ಟಯ ನೋಡಿರಿ)

ಡ

ಡಂಭಕ	—	ಮೋಸಗಾರ; ಗರ್ವಿ

ತ

ತರ್ಕ	—	ವಿಚಾರ, ವಾದ, ನ್ಯಾಯ, ಮೀಮಾಂಸೆ ಮೊದಲಾದ ಶಾಸ್ತ್ರಗಳು, ಅನುಮಾನ, ಊಹೆ
ತರಣಿ	—	ದಾಟು; ಶಕ್ತಿ
ತವಿಲ್	—	ಎಡರು, ದಾರಿದ್ರ್ಯ, ನಾಶ
ತವಿಪ	—	ಶಾಂತಮಾಡುವ, ಕುಂದಿಸುವ, ಅಡಗಿಸುವ

ಶಬ್ದ		ಅರ್ಥ
ತಕ್ಕ	—	ಯೋಗ್ಯ, ಯುಕ್ತ, ಸಮವಾದ
ತರುವಲಿ	—	ತರಳ; ಹುಡುಗ; ತಾಯಿತಂದೆಗಳಾರೆಂಬುದನ್ನು ತಿಳಿಯದ ಕನ್ನೆ; ತಬ್ಬಲಿ
ತಲೆನವಿರ್	—	ತಲೆಗೂದಲು
ತರಿ	—	ಕತ್ತರಿಸು, ಸಲ, ನಿಶ್ಚಯ, ಡೋಣಿ, ಹಡಗ, ನಾಶ ಮಾಡು
ತಣಿ	—	ತಂಪಾಗು, ಕಾವಾರು, ತೃಪ್ತಿಹೊಂದು, ಲಜ್ಜೆ
ತನಿಬಂದ	—	ಹೆಚ್ಚಾಗಿ, ಸಿಹಿ, ಸಂಪೂರ್ಣ, ಒಂಟೆ, ತರ್ಪಣ
ತಕ್ಕಿ	—	ದಗೆ, ಮೋಸ
ತಂತ್ರಿ	—	ಸಿದ್ಧಾಂತ, ತೀರ್ಮಾನ, ಔಷಧ, ಅರ್ಥ, ರಾಜ್ಯದ ಚಿಂತೆ, ಶಿವನಸಂಬಂಧ ಶಾಸ್ತ್ರ, ಮಂತ್ರ ಬಲ್ಲವ
ತಾರ್ಕಿಕ	—	ನ್ಯಾಯಶಾಸ್ತ್ರ ಬಲ್ಲವ;ಅನುಮಾನ ತಿಳಿದವ
ತಾರಾಪತಿ	—	ಚಂದ್ರ
ತಾಟಕಿಯರ್	—	ರಕ್ಕಸಿಯರಂತಹ-ಸ್ತ್ರೀಯರು
ತಾಟಿಸು	—	ತಾಗಿಸು
ತಾರಕ	—	ದಾಟಿಸುವ; ಸಂಸಾರದಿಂದ ದಾಟಿಸುವ ಓಂ ಮಂತ್ರ; ಕಣ್ಣುಗುಡ್ಡೆ,ಮೇಲಿನ ಸಪ್ತಕದ ಸ್ವರ

ಶಬ್ದ		ಅರ್ಥ
ತಾರ	—	ಬೆಳ್ಳಿ; ಮುತ್ತು; ಎರಡುಪೈ ಪಾರಾಗುವಿಕೆ; ಪರ್ವತ; ಶುಭ್ರ, ತಾರೆ
ತಾಳಗೊಟ್ಟಿ	—	ತಾಳ ಬಡೆಯುವವರ ಸಮೂಹ, ತಾಳೆಗಿಡಗಳ ಗುಂಪು
ತಿಸುಳ್	—	ತ್ರಿಶೂಲ
ತಿರು	—	ಶಬರಿ, ಹೆದೆ, ಬೇಡು, ಬಾಗು
ತಿಮಿರ	—	ಕತ್ತಲೆ, ಅಜ್ಞಾನ, ದುಃಖ, ಮೂಢಭಕ್ತಿ, ಕಪಟ
ತಿರೀಟ	—	ಕಿರೀಟ
ತ್ರಿದಶ	—	ದೇವತೆ
ತ್ರಿವಳಿ	—	ಹೊಟ್ಟೆಯ ಮೇಲಾಗುವ ಮೂರು ಮಡಿಕೆ
ತಿಂಗಳ್ವರ	—	ಚಂದ್ರಮ
ತೀವು	—	ತುಂಬು, ಹೆಚ್ಚಾಗು, ಮುಗಿಸು,
ತೀವ್ರ	—	ತೀಕ್ಷ್ಣ, ಬೇಗ, ಹರಿತ,ವೇಗ
ತೀವ್ರಕರ	—	ಸೂರ್ಯ
ತೀವ್ರಪವನ	—	ಬಿರುಗಾಳಿ
ತುಂಗ	—	ಎತ್ತರವಾದ, ದೀರ್ಘ, ಶ್ರೇಷ್ಠ
ತುಷ್ಟಿ	—	ಸಂತೋಷ, ತೃಪ್ತಿ
ತುರುಂಬು	—	ಜಡೆಮುಡಿ, ಮುಂದಲೆ
ತುಳಿಲ್	—	ವಂದನೆ, ನಮಸ್ಕಾರ, ಶೌರ್ಯ, ಸೇವೆ
ತುಯ್ಯಲು	—	ಪಾಯಸ

ಶಬ್ದ		ಅರ್ಥ
ತೂಳ್	—	ಮುಂದುವರಿ, ಬೆನ್ನಟ್ಟು, ತಳ್ಳು, ನಾಶಮಾಡು
ತೆರಳ್	—	ಹೋಗು
ತೇಜ	—	ಕಾಂತಿ, ಪ್ರಕಾಶ, ಕಿರಣ, ಸೂರ್ಯ, ಶರೀರ, ಮನೆ
ತೇಱ್	—	ಚೇಳು
ತೊನಸೆ	—	(ತೊಣಚೆ)ನಾಯಿಸೊಳ್ಳೆ; ಒಂದು ಜಾತಿ ನೊಣ
ತೊರೆ	—	ನದೀಪ್ರವಾಹ, ಹೊಳೆ; ಬಿಡು, ಹಾಲು ತನ್ನಷ್ಟಕ್ಕೆ ಇಳಿವ ಕೆಚ್ಚಲ
ತೊಳಂಚೆ	—	ತುಳಸಿ
ತೋಟಿ	—	ಜಗಳ, ಹಿಟ್ಟಿನ ಮುದ್ದಿ, ಜಾಡಮಾಲಿ

ದ

ದಂದುಗ	—	ಕಷ್ಟ; ತೊಂದರೆ; ಕ್ಲೇಶ
ದರ್ಶನ	—	ನೋಟ; ಎದುರಿಸುವದು
ದರ್ಶನಾವರಣೀಯ	—	(ಘಾತಿ ಚತುಷ್ಟಯ ನೋಡಿರಿ)
ದರ್ಶನಾವರಣ	—	ರೂಪಾದಿ ವಿಶೇಷ ವಿಷಯಗಳ ಜ್ಞಾನವಿಲ್ಲದೆ ಉಂಟಾಗುವ ಸಾಮಾನ್ಯದ ಅನುಭೂತಿಯು ದರ್ಶನವು. ಇದುಚಕ್ಷುದರ್ಶನಾವರಣ; ಅಚಕ್ಷುದರ್ಶನಾವರಣ; ಅವಧಿದರ್ಶನಾವರಣ; ಕೇವಲ ದರ್ಶನಾವರಣ; ಎಂದು ನಾಲ್ಕು ಬಗೆಯಾಗಿದೆ.

ಶಬ್ದ		ಅರ್ಥ
ದಕ್ಷೋಧ್ವರಮಥನ	—	ವೀರಭದ್ರ
ದಳ್ಳುರಿ	—	ಪ್ರಜ್ವಳಿಸುವ ಬೆಂಕಿ
ದರ್ಪಣ	—	ಕನ್ನಡಿ
ದಾತೃ	—	ಕೊಡುವವ; ದಾನ
ದಾಯ	—	ಪಾಲು; ಪಾಲಿಗೆ ಯೋಗ್ಯ ದ್ರವ್ಯ; ದಾನ; ದಾಳ-ಹಾಕುವಿಕೆ
ದಿನಪ	—	ಸೂರ್ಯ
ದಿವಿಜಸರಿತ್	—	ಗಂಗಾನದಿ
ದ್ವಿಜಕುಳರತ್ನ	—	ಬ್ರಾಹ್ಮಣ ಕುಲಕ್ಕೆ ರತ್ನ ಪ್ರಾಯನಾದವ
ದ್ವಿಜನ್ಮ	—	ಎರಡನೆಯ ಜನ್ಮ
ದ್ವಿಷ	—	ದ್ವೇಷ; ಹಗೆ
ದೀರ್ಘಿಕೆ	—	ಅಗಲಕ್ಕಿಂತ ಉದ್ದ ಹೆಚ್ಚಾಗಿದ್ದ ಕೆರೆ
ದುಗ್ಧ	—	ಹಾಲು
ದುರಿತ	—	ನರಕಕ್ಕೆ ಕಾರಣವಾದ ಪಾಪ
ದುರ್ವಾರ	—	ಕಷ್ಟ; ಕೆಟ್ಟ ಫಲ
ದೆ(ದಿ)ವಸಕರ	—	ಸೂರ್ಯ
ದೂತಿ	—	ಸಮಾಚಾರ ಒಯ್ಯುವವಳು; ದಾಸಿ; ಕುಂಟಲಗಿತ್ತಿ
ದೇವದೂಷ್ಯ	—	ದೇವರ ದೂಷಣೆ
ದೇಹಾ(ಹ)ರ	—	ಹೊಸ್ತಿಲ
ದೈತ್ಯಾರಾಧ್ಯ	—	ಶುಕ್ರ; ಶಿವ
ದೋಷಾವಿಳ	—	ಪಾಪದಿಂದ ಕೂಡಿದ
ದೋರ್ಬಲ	—	ತೋಳಶಕ್ತಿ

ಶಬ್ದ		ಅರ್ಥ
ಧವಳ	—	ಬಿಳುಪಾದ; ಸ್ವಚ್ಛವಾದ; ಶುಭ್ರ
ಧಮ್ಮಿಲ್ಲ	—	ಕೂದಲಗಂಟು; ಮುಡಿ; ತುರುಬು
ಧ್ವಾಂತ	—	ನಾಶಮಾಡು
ಧಾತೃ	—	ಬ್ರಹ್ಮ
ಧೂರ್ಜಟಿ	—	ಶಿವ

ನ

ನಚ್ಚು	—	ನಂಬು; ವಿಶ್ವಾಸಪಡು ಅಪೇಕ್ಷಿಸು; ಪ್ರೀತಿ; ಆಸೆ; ಭರವಸೆ
ನಕ್ರ	—	ಮೊಸಳೆ
ನವನಿಧಿ	—	ಕುಬೇರನ ಒಂಭತ್ತು ಸಂಪತ್ತುಗಳು–ಪದ್ಮ; ಮಹಾಪದ್ಮ; ಶಂಖ; ಮಕರ; ಕಚ್ಛಪ; ಮುಕುಂದ; ನೀಲ; ನಂದ; ಖರ್ವ
ನವವಿಧಪುಣ್ಯ	—	ಜೈನ ಮುನಿಗಳು ಚರಿಗೆಗೆ ಬಂದಾಗ ಅವರಿಗೆ ದಾನಮಾಡುವ ಕ್ರಮಗಳು ಒಂಭತ್ತು ಇರುತ್ತವೆ. ಅವುಗಳಿಗೆ ನವವಿಧ ಪುಣ್ಯವೆನ್ನುತ್ತಾರೆ. ಅವು ಹೀಗೆ–(೧) ಮೂರು ಸಲ ಪ್ರದಕ್ಷಿಣೆ (೨) ಉಚ್ಚ ಸ್ಥಾನ (೩) ಪಾದೋದಕ (೪) ಅರ್ಚನ (೫) ಪ್ರಣಾ-

ಶಬ್ದ		ಅರ್ಥ
		ಮ (೬) ವಚನ ಶುದ್ಧಿ (೭) ಕಾರ್ಯಶುದ್ಧಿ (೮) ಮನಶ್ಶುದ್ಧಿ (೯) ಏಷಣಾ ಶುದ್ಧಿ
ನಗಧರ	—	ಪರ್ವತ ಧರಿಸಿದವ-(ಕೃಷ್ಣ)
ನಯ	—	ನೀತಿ; ಶುಕ್ರಾಚಾರ್ಯರು ಬರೆದ ಒಂದು ಶಾಸ್ತ್ರ;ರಾಜ ನೀತಿ; ನುಣುಪು;
ನಾಲ್ದೆಸೆ	—	ನಾಲ್ಕೂ ದಿಕ್ಕು
ನಾದ	—	ಶಬ್ದ; ಯೋಗಿಗಳಿಗೆ ಕಾಣಿಸುವ ಚಂದ್ರಬಿಂದು; ಉತ್ತಮವಾದ್ಯವಿಶೇಷ; ಗಾನ; ಉಲಿ;ಚಟ; ಚಾಳಿ
ನಾಕ	—	ದುಃಖವಿಲ್ಲದ ಸ್ಥಾನ; ಸ್ವರ್ಗ; ಆಕಾಶ; ಭೂಮಿ
ನ್ಯಾಸ	—	ಇಟ್ಟದ್ರವ್ಯ; ಇಡುಗಂಟು; ಮುದ್ರೆ; ಪಣಕಟ್ಟು; ಪ್ರಬಂಧ;ಕೇಳಿದಾಗ ಕೊ-ಡುವಂತೆ ಇಟ್ಟ ಹಣ
ನಿರ್ವ್ಯಗ್ರ	—	ಕಳವಳವಿಲ್ಲದ; ಉದ್ವೇಗ-ವಿಲ್ಲದ
ನಿಸ್ತರಿಪ	—	ತಾಳು; ಸಹಿಸು; ದಾಟು; ಕಡೆ ಹಾಯಿಸು
ನಿಕೃಷ್ಟ	—	ನೀಚ; ಅಧಮ; ಕೀಳಾದ
ನಿರ್ಗುಣ	—	ಗುಣಹೀನ, ಮೂರ್ಖ
ನಿಳಯ	—	ಆವಾಸ; ಮನೆ

ಶಬ್ದ		ಅರ್ಥ
ನಿಲೆನಿಂದ	—	ನಿಂತಲ್ಲಿಯೆ ನಿಂತ; ತಡೆದು ನಿಂತ
ನಿರ್ಭರ	—	ಸಂಪೂರ್ಣ ಭಾರ; ಬಹಳ; ತುಂಬಿದ; ಅತಿಶಯ; ದುಡುಕು
ನಿಕಾಯ	—	ಸಮೂಹ; ಗುಂಪು; ರಾಶಿ; ವರ್ಗ; ಮನೆ
ನಿರನ್ವಯ	—	ವಂಶರಹಿತ; ಸೇರಿಕೆ ಇಲ್ಲ-ದ; ಹೊಂದಿಕೆ ರಹಿತ
ನಿಶೀಥ	—	ರಾತ್ರಿ ಕಾಲ
ನಿಸ್ತರಣ	—	ಹೋಗುವಿಕೆ; ಹೊರಡು ವಿಕೆ; ದಾಟುವಿಕೆ; ಕಾಲ-ಹರಣ
ನಿರ್ವಾಣ	—	ಮೋಕ್ಷ; ಕೈವಲ್ಯ; ನಿವೃತ್ತಿ; ವಿನಾಶ; ಶಾಂತ; ನಿಶ್ಚಲ; ಶೂನ್ಯ; ಬತ್ತಲೆ; ಆನೆಯ-ಸ್ನಾನ; ಜಿನ; ಆತ್ಮ
ನಿರ್ಮುಕ್ತ	—	ಪರೆಕಳಚಿದ ಹಾವು; ಬಂಧ ವಿಲ್ಲದ, ಸಂಘರಹಿತ
ನಿರ್ವ್ಯಾಕುಳ	—	ವ್ಯಥೆರಹಿತ
ನಿರತ	—	ತುಷ್ಟ; ಆಸಕ್ತ; ಅನುರಕ್ತ
ನಿಶಾವಸಾನ	—	ರಾತ್ರಿ, ಕೊನೆಯಭಾಗ
ನಿಮಿರ್	—	ನೆಟ್ಟಗಾಗು; ಸೆಟೆ; ನೀಡು; ಚಾಚು; ಉದ್ದವಾಗು; ವಿಸ್ತರಿಸು
ನಿಃಕಳ	—	ಪ್ರಕಾಶವಿಲ್ಲದ; ಕಾಂತಿ-ಯಿಲ್ಲದ; ಅವಿದ್ಯಾವಂತ

ಶಬ್ದ		ಅರ್ಥ
ನಿಃಕಾಂಕ್ಷೆ	—	ಇಚ್ಛೆ ಇಲ್ಲದಿರುವಿಕೆ
ನಿಃಕ್ರಿಯೆ	—	ಕೆಲಸವಿಲ್ಲದಿರುವಿಕೆ
ನಿರ್ವೇಗ	—	ಶಾಂತ; ವೇಗರಹಿತ
ನಿರ್ಲೌಲ್ಯ	—	ಚಂಚಲ ಸ್ವಭಾವವಿಲ್ಲದ;
ನಿರಿಸು	—	ಇರಿಸು; ಕ್ರಮವಾಗಿಡು; ನಿಲ್ಲಿಸು; ಸ್ಥಾಪಿಸು; ಅಣಿ-ಗೊಳಿಸು, ಹೊಂದಿಸು
ನಿರ್ವೃತಿ	—	ಸಂತೋಷ,ಸುಖ,ಮೋಕ್ಷ; ಬಿಡುಗಡೆ, ತೆರವು
ನಿರ್ವ್ಯಾಜ	—	ಸರಳ; ಕಪಟವಿಲ್ಲದ;ಪ್ರಾ-ಮಾಣಿಕ; ನಿವಾರಣೆ; ನಿಷ್ಕಾರಣ
ನಿಯುತ	—	ನಿಶ್ಚಿತ; ಆಚಾರವುಳ್ಳ; ಗೊತ್ತಾದ; ಹತ್ತುಲಕ್ಷ
ನಿಘ್ನ	—	ಆಧೀನ, ಗುಣಿಸಲ್ಪಟ್ಟ; ನಾಟಿದ
ನಿಗೂಢ	—	ಅಡಗಿದ
ನಿಧಾನ	—	ಶಂಖಪದ್ಮಾದಿ ನವನಿಧಿ-ಗಳು; ಆಶ್ರಯ; ಕೆಲಸದ ಕೊನೆ; ನಿವಾಸ, ಶ್ರಮ; ತಾಳ್ಮೆ; ಸಾವಕಾಶ
ನಿನದ	—	ಸ್ವರ, ದನಿ; ಕೂಗು
ನುಸುಳು	—	ಜಾರಿಹೋಗು; ತಪ್ಪಿ-ಹೋಗು;ಆಡಿತಪ್ಪುವದು; ಸುಳ್ಳು
ನುಗ್ಗು	—	ಒತ್ತಿ ಮುಂದೆ ಹೋಗು
ನೂಲ್ಗಳ ಗುಣ	—	ನೂಲುಗಳ ಸಮೂಹ
ನೂತ್ನ	—	ಹೊಸ; ವಿಚಿತ್ರ

ಶಬ್ದ		ಅರ್ಥ
ನೃಶಿರೋಮಾಲಾಧರ	—	ಶಿರಗಳ ಮಾಲೆ ಧರಿಸಿದವ; ಶಿವ
ನೆಗಳು	—	ಮಾಡು; ರಚಿಸು; ಪ್ರಾಪ್ತಿಸು; ಉಂಟಾಗು; ಉದ್ಯೋಗ-ಮಾಡು, ಖ್ಯಾತಿಗೊಳ್ಳು; ಹೊಗಳು
ನೇಣ್	—	ಹಗ್ಗ, ಉರುಲು
ನೇರ್	—	ಕತ್ತರಿಸು; ಒಪ್ಪು; ಒಡಂ-ಬಡು; ಸೇರಿಕೆ; ಒಪ್ಪಂದ; ವ್ಯವಸ್ಥೆ
ನೇರ್ಪಡು	—	ಸೇರಿಕೊಳ್ಳು; ಹೊಂದಿ-ಕೊಳ್ಳು
ನೇತ್ರತ್ರಯ	—	ಮೂರು ಕಣ್ಣುಳ್ಳವ; ಶಿವ
ನೊಣೆ	—	ನುಂಗು; ಬಾಯಿಚಪ್ಪರಿಸು
ನೋ	—	ನೊಯ್ಯು; ನೋವು-ಗೊಳ್ಳು
ನೋಂತ	—	ವ್ರತಾಚರಣೆಮಾಡಿದ

ಪ

ಶಬ್ದ		ಅರ್ಥ
ಪಚ್ಚವಡಿಸು	—	ಹೊದೆಸು; ಹೊಚ್ಚು
ಪಜ್ಜೆ	—	ಹಜ್ಜೆ; ಹೆಜ್ಜೆ, ಅಡಿ, ಪದ್ಧತಿ
ಪನ್ನ	—	ಜಾರಿದ; ಬಿದ್ದ; ಬಟ್ಟೆಯ ಅಗಲ; ಹೆಮ್ಮೆ; ಬಿಂಕ
ಪರೋಪತಾಪಿ	—	ಎರಡನೆಯವರಿಗೆ ಉಪದ್ರ ಕೊಡುವವ
ಪರತ್ರ	—	ಮೋಕ್ಷ, ಸ್ವರ್ಗಲೋಕ, ಇನ್ನೊಂದು ಲೋಕ

ಶಬ್ದ		ಅರ್ಥ
ಪಟಲ	—	ಸಮೂಹ; ರಾಶಿ; ಹೊದಿಕೆ; ಮುಚ್ಚಿಗೆ; ಪರೆ
ಪಸುರ್	—	ಪಚ್ಚೆತನ; ಹಸಿತನ; ಎಳೆತನ
ಪಸೆ	—	ಹಸೆಹಾಸಿಗೆ; ಚಾಪೆ; ಪದರು; ಹುರುಳಿಲ್ಲದಮಾತು; ನೀರಿನಂಶ; ತೇವ
ಪಂಚಮ	—	ಐದನೆಯ; ಶೂದ್ರ; ಚಾಂಡಾಲ; ಕೋಗಿಲೆಯ ಸ್ವರ ಚತುರ
ಪರಿಕರ	—	ಸುತ್ತುಮುತ್ತಲಿನವರು; ಸೇವಕ; ಪರಿವಾರ; ಮಂಚ; ಸಭೆಯ ಪ್ರಾರಂಭ; ಗುಂಪು; ವಿವೇಕ; ವಿಚಾರ; ಪೂಜಾಸಾಮಗ್ರಿ; ಸಾಹಿತ್ಯಸಾಧನ
ಪರ್ವ	—	ಹಬ್ಬ
ಪದಾಂಗುಷ್ಠ	—	ಪಾದದ ಹೆಬ್ಬೆರಳು
ಪಚ್ಚೆ	—	ಹಸುರು; ಹಸುರುಬಣ್ಣ; ಹೆಚ್ಚು; ಹಾಸ್ಯ; ಒಂದು ರತ್ನ; ಎಳಚಿಗುರು, ಅಲಂಕಾರ; ಎಳಮೆ; ಬಂಜೆ
ಪರಿಯಳ	—	ಹರಿವಾಣ
ಪಟು	—	ಸಮರ್ಥ; ಕುಶಲ; ದೃಢಕಾಯ; ಹರಿತ; ಕ್ರೂರ
ಪರಮಾರ್ಥ (ಪಾರಮಾರ್ಥ)	—	ಪಾರಮಾರ್ಥಕ್ಕೆ ಹಿತಕರವಾದ ಧರ್ಮ; ಬೆಲೆ ಇಲ್ಲದ ದ್ರವ್ಯ
ಪರಿಗ್ರಹ	—	ಸ್ವೀಕಾರ; ಪರಿಜನ; ಸೇವಕ; ಸೇನೆಯ ಹಿಂಭಾಗ; ಶಪಥ; ಮದುವೆ

ಶಬ್ದ		ಅರ್ಥ
ಪರಿಗ್ರಹ	—	(ಜೈನಮತದಂತೆ) ಇದು ಬಾಹ್ಯ ಮತ್ತು ಅಭ್ಯಂತರ ಎಂದು ಎರಡು ವಿಧವಾಗಿದೆ. ಧನಧಾನ್ಯವು ಬಾಹ್ಯ ಪರಿಗ್ರಹವು. ಮಿಥ್ಯಾತ್ವ, ಕ್ರೋಧಾದಿ ಕಷಾಯ, ಹಾಸ್ಯಾದಿನೋಕಷಾಯ ಇವುಗಳಿಗೆ ಅಭ್ಯಂತರ ಪರಿಗ್ರಹವೆನ್ನುತ್ತಾರೆ.
ಪಯ	—	ಪದ; ಪಯಸ್, ಕುಡಿಯುವ ನೀರು; ಹಾಲು; ಅಮೃತ
ಪದಪು	—	ಸಂಭ್ರಮ;ಪ್ರೀತಿ;ಸೌರಭ; ಸಂತೋಷ; ಸೊಗಸು; ಆತುರ
ಪಡೆ	—	'ಹಡೆ; ಬಲ; ಸೈನ್ಯ; ಸೇನೆ; ಹೊಂದು; ಗಳಿಸು
ಪರ್ಯಾಯ	—	ಪಲ್ಲಟ; ಸುತ್ತುವರಿವ; ತಾಳು; ಕಾಲ ಸರಿಯುವಿಕೆ; ಅವ್ಯವಸ್ಥೆ; ಶಾಸ್ತ್ರವನ್ನೂ ಲೋಕಮರ್ಯಾದೆಯನ್ನು ಬಿಟ್ಟುದು
ಪಡಿಗ	—	ಬಟ್ಟಲು; ಪೀಕದಾನಿ; ಉಗುಳುವ ಬುಟ್ಟಿ
ಪಳಿ	—	ನಾಯಿಯನ್ನು ಅಟ್ಟುವದು; ನಿಂದೆ; ದೂರು
ಪಂಚಾಣುವ್ರತ	—	ಐದು ನಿಯಮಗಳು— ಅಹಿಂಸೆ;ಸತ್ಯ; ಅಚೌರ್ಯ;

ಶಬ್ದ		ಅರ್ಥ
		ಬ್ರಹ್ಮಚರ್ಯ; ಪರಿಗ್ರಹ-ಪರಿಮಾಣ
ಪ್ರಧ್ವಂಸ	—	ನಾಶ
ಪ್ರವಿಮಳ	—	ನಿರ್ಮಳ
ಪ್ರವರ	—	ಸಂತಾನ;ಗೋತ್ರ; ಶ್ರೇಷ್ಠ; ಒಳ್ಳೆಯ;ಕುಲಪೂರ್ವಜ; ಮುಖ್ಯ; ಅಗಿಲುಗಂಧ
ಪ್ರಣೀತ	—	ತ್ವರೆ; ಯಜ್ಞ; ಸಂಸ್ಕಾರ-ಹೊಂದಿದ ಅಗ್ನಿ; ಬರೆದ
ಪ್ರಜ್ಞಪ್ತಿ	—	ಬುದ್ಧಿ; ತಿಳುವಳಿಕೆ
ಪ್ರಮಿತಿ	—	ನಿಜವಾದ ಜ್ಞಾನ; ಅಳತೆ; ಆದರ್ಶ; ಪ್ರಮಾಣ
ಪ್ರಣವ	—	'ಓಂ'ಕಾರ
ಪ್ರಚುರ	—	ಪ್ರಸಾರ; ಹರಡುವಿಕೆ
ಪ್ರಳಯ	—	ಕಲ್ಪಾಂತ್ಯದಲ್ಲಿ ಆಗುವ ಪ್ರಪಂಚದ ನಾಶ; ನಾಶ; ಸಾವು
ಪ್ರಹಸನ	—	ಹಾಸ್ಯ; ಹಾಸ್ಯ ಗರ್ಭಿತ-ವಾದ ಏಕಾಂಕ ನಾಟಕ
ಪ್ರಜಾಪತಿ	—	ಪ್ರಜೆಗಳಒಡೆಯ;ಬ್ರಹ್ಮ; ದಕ್ಷ
ಪರೀಷಹ	—	ಹಸಿವು; ನೀರಡಿಕೆ; ಚಳಿ; ಬಿಸಿಲು ಮುಂತಾದ ಇಪ್ಪ-ತ್ತೆರಡು ಉಪದ್ರವಗಳು
ಪ್ರಕೃಷ್ಟ	—	ಉತ್ತಮವಾದ; ಪ್ರಧಾನ; ಮುಖ್ಯ; ಒಳ್ಳೆಯ
ಪರೇತ	—	ಸತ್ತುದು; ದೂರಹೋ-ದುದು; ಪ್ರೇತ

ಶಬ್ದ		ಅರ್ಥ
ಪರಿಸು	—	ನಡೆಸು
ಪಳಿಕ	—	ಸ್ಫಟಿಕ; ಒಂದು ಜಾತಿಯ ಶುಭ್ರಶಿಲೆ
ಪರಿಕಿಸು	—	ಪರೀಕ್ಷಿಸು; ಆಲೋಚಿಸು; ಶೋಧಿಸು; ನೋಡು
ಪರಿವರ್ತನ	—	ಬದಲಾವಣೆ; ಕ್ರಾಂತಿ; ವಿನಿಮಯ
ಪನ್ನಗ	—	ಕಾಲಿಲ್ಲದೆ ಚಲಿಸುವದು; ಹಾವು
ಪಡಕೆ	—	ಹಾಸಿಗೆ
ಪಶು	—	(ಹಸು) ಎಲ್ಲವನ್ನು ಒಂದೇ ವಿಧವಾಗಿ ಕಾಣುವದು; ಕಟ್ಟಿ ಸಾಕುವ ಪ್ರಾಣಿ; ಮೃಗ; ದೇವತೆ; ಪ್ರಥಮ-ಗಣ
ಪಸ	—	ಬಯಕೆ; ಆಸೆ
ಪರದಾರ	—	ಅನ್ಯರ ಹೆಂಡತಿ; ಅನ್ಯಸ್ತ್ರೀ
ಪಂದೆ	—	ಹಂದೆ; ಹೇಡಿ; ಪುಕ್ಕ; ಧೈರ್ಯವಿಲ್ಲದವ; ದಡಿಗ; ಮೈತುಂಬಿದವ
ಪಾರ್ಥಿವ	—	ಪೃಥ್ವಿಯ ಒಡೆಯ; ರಾಜ; ಸೀತೆ; ಕ್ಷತ್ರಿಯ; ಪೃಥ್ವಿ-ಯಿಂದ ಬಂದ
ಪಾಗ	—	(ಹಾಗ) ಒಂದಾಣೆ; ಎರಡು ಪೈ
ಪಾರಿಪಂಥಿಕ	—	ಹಾದಿಹೋಕರನ್ನು ಸುಲಿ-ವವ

ಶಬ್ದ		ಅರ್ಥ
ಪಾರಣೆ	—	ಉಪವಾಸ ಕಳೆದ ಬಳಿಕ ಮಾಡುವ ಊಟ
ಪಾಟಿಸು	—	ಉಪಚರಿಸು; ಓದಿಸು; ಕಲಿಸು
ಪಾನ	—	ಕುಡಿಯುವ ಪದಾರ್ಥ; ಕುಡಿಯುವಿಕೆ; ಮದ್ಯ-ಪಾನ; ಕುಡಿತ
ಪಾತ್ರ	—	ವಸ್ತುಗಳನ್ನು ಹಿಡಿಯುವ ಸಲಕರಣೆ; ದಾನಯೋ-ಗ್ಯ;ನದಿಹರಿಯುವ ಸ್ಥಾನ; ನದಿ ಒಡಲು;ನಾಟಕದಲ್ಲಿ-ಯ ವೇಷ
ಪಾಪ್ಪೆ	—	ಜಾರಸ್ತ್ರೀ; ಪುಂಡಿ
ಪ್ರಾಕಟ(ಪ್ರಕಟ)	—	ಸ್ಪಷ್ಟ; ಪ್ರಕಾರ; ತೋರಿಕೆ,
ಪ್ರಾಕೃತ	—	ಮೂಲ ರೂಪಕ್ಕೆ ಸಂಬಂ-ಧಿಸಿದ; ಸಂಸ್ಕೃತದಿಂದ ಹುಟ್ಟಿದ ಪಾಲಿಯಂಥ ಭಾಷೆ;ಮೂಢ;ಅಸಂಸ್ಕೃತ
ಪಿಪೀಲಿಕೆ	—	ಇರುವೆ, ಗೆದ್ದಲು
ಪಿಂಗು	—	ತೊಲಗು; ದೂರ ಸರಿ; ನಿಂತುಹೋಗು; ಉಳಿ; ತಪ್ಪು;ಬಿಡು;ಹಿಂದಿರುಗು; ಆರಿಸು; ಇಂಗು; ಬತ್ತು
ಪಿಂಡಿ	—	ಅಂದಿಗೆ; ಕಟ್ಟು; ಗಂಟು
ಪಿಂಗಳನೇತ್ರ	—	ಶಿವ
ಪಿಳಿ	—	ಹಿಂಡು; ನಿರ್ದ್ರವವಾಗು
ಪಿನಿಸೆ	—	ಮೂಗಿನಲ್ಲಿರುವ ರೋಗ

ಶಬ್ದ		ಅರ್ಥ
ಪಿಸಿ	—	ಹಿಸಿ, ಹಣ್ಣನ್ನು ಕೈಯಿಂದಲೇ ಒತ್ತಿಒಡೆ; ಕುಸಿದು ಬೀಳು; ಜರಿ
ಪುಂಜ	—	ರಾಶಿ; ಗುಂಪು; ಸಮೂಹ; ಎತ್ತರದಲ್ಲಿ; ಹುಂಜ
ಪುಂಗವ	—	ಎತ್ತು; ಶ್ರೇಷ್ಠ
ಪುರಾಣ	—	ಹಿಂದೂ ಮತಕ್ಕೆ ಸಂಬಂಧವಾದವು; ಇವು ೧೮ ಅವೆ
ಪುದಿ (ಪುದು)	—	ತುಂಬು; ವ್ಯಾಪಿಸು; ಆಚ್ಛಾದಿಸು; ಕೂಡು; ಸೇರು; ದ್ವಾರ; ಪಕ್ಕ; ಮಗ್ಗಲು; ಹೊಸ
ಪುರುಳ್	—	ಹುರುಳು; ಅರ್ಥ; ದ್ರವ್ಯ; ಯೋಗ್ಯತೆ; ತಿರುಳು; ಜ್ಞಾನ; ಕೆಚ್ಚು
ಪುದ್ಗಲ	—	ಒಳ್ಳೆಯ ಸ್ವರೂಪ; ಮನೋಹರ ವಸ್ತು; ಪರಮಾಣು; ಶರೀರ; ಜೀವ; ಒಡೆದ; ಶಿವನ ಹೆಸರು; (ಜೈನಮತದಂತೆ) ಸ್ಪರ್ಶ ರಸ; ಗಂಧ ವರ್ಣಗಳುಳ್ಳ ದ್ರವ್ಯ.
ಪುರುಡು	—	ಸ್ಪರ್ಧೆ, (ಹುರುಡು) ಪೈಪೋಟಿ; ಮೇಲಾಟ; ಹೊಟ್ಟೆಕಿಚ್ಚು
ಪೂಣ್ಕೆ	—	ಶಪಥ; ಆಣೆ; ಒಪ್ಪಿಗೆ
ಪೂತ	—	ಚೊಕ್ಕಟವಾದ; ಶುದ್ಧವಾದ; ಹೂಬಿಟ್ಟ; ಗಾಳಿಸಿದ; ಕೇರಿದ; ಕೊಳೆತ

ಶಬ್ದ		ಅರ್ಥ
ಪೆರತು	—	ಬೇರೆ; ಬೇರೆಯದು
ಪೆರ್ಗಡೆ	—	ಹೆಗ್ಗಡೆ; ಯಜಮಾನ
ಪೆರ್ಮೆ	—	ಹೆಚ್ಚಳ
ಪೊಂಪುಳಿ	—	ಆಧಿಕ್ಯ; ಪುಳಕ; ರೋಮಾಂಚ
ಪೊನಲ್	—	ಪ್ರವಾಹ; ನೀರಿನ ಹರಿಯುವಿಕೆ; ಹರಿ
ಪೊಣ್ಮು	—	ಹೊಣ್ಮು; ಹೊರಡು; ಹುಟ್ಟು; ಉಂಟಾಗು; ವ್ಯಾಪ್ತವಾಗು; ಉಬ್ಬು
ಪೋಕು	—	ಟೊಳ್ಳು; ಕೆಡಕು; ಹಾಳು; ತಿರುಳು ಇಲ್ಲದ

ಫ

ಫಣಿವೈರಿ	—	ಗರುಡ

ಬ

ಬಂದಿ(ಸಿ)	—	(ವಂದಿಸಿ) ಬಂಧನಕ್ಕೊಳಗಾದವ; ಸೆರೆ; ತಡೆ; ತೋಳ್ಸರಿಗೆ; ಬಂಕಿ
ಬಂದಣಿ(ಕೆ)ಗೆ	—	(ಬದನಿಕೆ) ಬಂದರಕಿ; ಅಥವಾ ಬಾಂದರಕಿ
ಬಲವಂದು	—	ಬಲದಿಂದ ಸುತ್ತಿಬಂದು; ಪ್ರದಕ್ಷಿಣೆ
ಬಹುಶ್ರುತ	—	ಪಂಡಿತ
ಬಹಿತ್ರ	—	ಹಡಗು
ಬಸನ	—	ವ್ಯಸನ; ವಸ್ತ್ರ (ವಸನ)

ಶಬ್ದ		ಅರ್ಥ
ಬವರ	—	ಯುದ್ಧ; ಭ್ರಮರ
ಬಗೆರಗೆ	—	ಪಕ್ಕಲೆ; ಒಂದು ಬಗೆಯ ಪಾತ್ರೆ
ಬರ್ಬರ	—	ಒಂದು ತರಹದ ಗಂಧದ ಕಟ್ಟಿಗೆ; ಪಾಮರ
ಬಸ	—	ವಶ; ಸ್ವಾಧೀನ; ಅಧೀನ
ಬಡ್ಡಿಸೆ	—	ಗಟ್ಟಿಯಾಗಿ ಹಿಡಿ
ಬ್ರಹ್ಮಘ್ನ	—	ಬ್ರಹ್ಮಹತ್ಯಮಾಡುವವ
ಬಟ್ಟೆ	—	ದಾರಿ
ಬಾದಿ	—	ಸಹಾಯಕ; ಭಾರ; ಹೊರೆ
ಬಾಡ	—	ಊರು; ಸಾಲು; ಗ್ರಾಮ ಬಹಳ; ಅತಿಶಯ
ಬಾಂದೊರೆ	—	ಆಕಾಶದ ಹೊಳೆ;ಆಕಾಶ-ಗಂಗೆ
ಬಾಡು	—	ಮಾಂಸ
ಬಾಸಿಗ	—	ಬಾಸಿಂಗ; ಭಾಷಣ ಮಾ-ಡುವವ
ಬಾದು	—	ವಾದ; ಮಾತು
ಬಾಸು	—	ವಾಸನೆ, ನಾರುವಿಕೆ
ಬಿಸವಂದ	—	ಕೌತುಕ; ವಿಸ್ಮಯ; ಆಶ್ಚರ್ಯ
ಬಿತ್ತರ	—	ವಿಸ್ತಾರ; ವಿವರ
ಬಿತ್ತು	—	ಬೀಜ; ಬೀಜಬಿತ್ತು; ನಡು
ಬಿನದ	—	ವಿನೋದ
ಬಿದಿ	—	ವಿಧಿ; ಬ್ರಹ್ಮ
ಬಿಯ	—	ವ್ಯಯ, ಖರ್ಚು, ವೆಚ್ಚ
ಬಿಸ	—	ವಿಷ; ನಂಜು; ನೀರು
ಬಿಚ್ಚೆ	—	ಭಿಕ್ಷೆ

ಶಬ್ದ		ಅರ್ಥ
ಬೀಯ	—	ಅಕ್ಕಿ; ಆಹಾರ; ವ್ಯಯ
ಬುಧ	—	ಬುದ್ಧಿವಂತ; ಬುಧಗ್ರಹ
ಬೂತು	—	ಹೊಲಸು
ಬೆರಣೆ(ಟೆ)	—	ಕುಳ್ಳು
ಬೆಳ್ಪವಾಸ	—	ಬಿಳಿಯ ಹಾಸುಗಲ್ಲು
ಬೆದೆ	—	ಬಿತ್ತನೆ; ಮೊಳಕೆ; ಬಿತ್ತಾಗುವ ಕಾಲ; ಬೆದಿಕೆ; ಕಾಮುಕತೆ
ಬೆಟ್ಟಿತು	—	ಗಟ್ಟಿಯಾದ ಪದಾರ್ಥ; ಬಿಗಿ; ಕಠಿಣ; ಬಿರುಸು; ನಿಷ್ಠುರ, ಕ್ರೂರ
ಬೆಟ್ಟು	—	ಬೆಟ್ಟ; ಪರ್ವತ; ನಾಟು; ಗಟ್ಟಿಯಾದ ಗೂಟ; ಮಟ್ಟವಾದ ಪ್ರದೇಶ; ಮಿಶ್ರವಾದ
ಬೆಡಂಗು	—	ಸೌಂದರ್ಯ; ವಿಲಾಸ; ಒಯ್ಯಾರ; ಸೊಬಗು; ತೋರಿಕೆ; ಜಂಬ
ಬೈತ (ಬಯ್ತ)	—	ಅಡಗಿಸಿದ; ಮರೆಯಿಸಿದ
ಬೈಕೆ (ಬಯಕೆ)	—	ಇಚ್ಛೆ; ಮನೋರಥ; ಕಾಂಕ್ಷೆ; ಹಂಬಲ; ನಿಧಿ; ಬಸುರಿಯ ಆಶೆ
ಬೊಟ್ಟು	—	ಬೆರಳು; ತಿಲಕ; [illegible] ಆಣೆ; ತೊಟ್ಟು; ಹನಿ; ಮೊಂಡ; ದಡ್ಡ; ಮೋಟ
ಬೋಧನಿಧಿ	—	ಜ್ಞಾನದ ಕಣಿ

ಶಬ್ದ		ಅರ್ಥ
ಬೋವ	—	ಬೋಯಿ; ಪಲ್ಲಕ್ಕಿ ಹೊರುವವ; ಗಾದಿ ಹೊಡೆಯುವವ; ಸಾರಥಿ

ಭ

ಭವ್ಯ	—	ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ ಚಾರಿತ್ರಗಳಿಂದ ಪರಿಣತನಾಗುವವನು
ಭವಜಳಧಿ	—	ಸಂಸಾರ ಸಮುದ್ರ
ಭವಮಥನ	—	ಸಂಸಾರವನ್ನು ದಾಟಿದವನು (ದಾಟುವದು)
ಭಸ್ಮ	—	ಬೂದಿ; ಲೋಹಾಮ್ಲ
ಭಂಡ	—	ಅಶ್ಲೀಲ ಮಾತುಗಳನ್ನಾಡುವವ; ಒಬ್ಬ ರಕ್ಕಸ; ನಾಚಿಕೆ ಇಲ್ಲದವ
ಭಾವ	—	ಹೃದಯದ ಅವಸ್ಥೆಯನ್ನು ಹೊರಗೆಡವುವ ಮನೋವಿಕಾರ; ಸ್ವೇದಕಂಪನಾದಿ ವ್ಯಭಿಚಾರಭಾವ
ಭಾನು	—	ಸೂರ್ಯ; ಎಕ್ಕೆಗಿಡ; ಪ್ರಕಾಶ; ಸ್ವಾಮಿ; ಒಡೆಯ; ರಾಜ
ಭಾಜನ	—	ಪಾತ್ರ; ಆಧಾರ; ಆಸರೆ; ಯೋಗ್ಯ; ತಕ್ಕ
ಭುಜಂಗ	—	ಹಾವು; ವಿಟ; ಜಾರ; ಆಶ್ಲೇಷಾ ನಕ್ಷತ್ರ

ಶಬ್ದ		ಅರ್ಥ
ಭೂಷಣ	—	ಅಲಂಕಾರ; ತೊಡುಗೆ; ಚಂದ; ಯೋಗ್ಯ
ಭೂರಿ	—	ಬಂಗಾರ; ಶಿವ; ಇಂದ್ರ; ವಿಷ್ಣು; ಬ್ರಹ್ಮ; ಬಹಳ; ಶ್ರಾದ್ಧ ಊಟ
ಭೇದನ	—	ಬೇರೆ ಮಾಡುವದು; ಒಡೆಯುವದು; ಸೀಳುವದು; ವ್ಯತ್ಯಾಸಮಾಡುವದು
ಭೇಷಜ	—	ರೋಗಪರಿಹರಿಸುವದು; ವೈದ್ಯ; ಔಷಧ; ಮದ್ದು

ಮ

ಶಬ್ದ		ಅರ್ಥ
ಮಡಗು	—	ಇಡು; ಅಡಗಿಸು
ಮಳ(ಲ)	—	ಪಾಪ; ಶರೀರದಿಂದ ಹೊರಗೆ ಹೋಗುವ ಕೊಳೆ; ಕಬ್ಬಿಣದ ಕಿಟ್ಟ; ಕಳಂಕ; ವಾತ;ಪಿತ್ತ;ಕಫ;ಮೈಲಿಗೆ; ದುಃಖ
ಮಡಗೂಳ್	—	ಎಂಜಲ ಅನ್ನ
ಮಧುಕರ	—	ಜೇನು ಸಂಗ್ರಹಿಸುವದು; ಜೇನ್ನೊಣ;ಗಂಡು ತುಂಬಿ
ಮಹಾರ್ಣವ	—	ದೊಡ್ಡ ಸಮುದ್ರ
ಮಕರಾಕರ	—	ಮೊಸಳೆ, ಮೀನು, ಮೊಣಕ, ಮೊದಲಾದವು ವಾಸವಾದದ್ದು; ಸಮುದ್ರ
ಮಹಂತ	—	ದೊಡ್ಡ ಮನುಷ್ಯ; ಮಹಾತ್ಮ; ಗುಡಿ-ಮಠಗಳ ಧರ್ಮಾಧಿಕಾರಿ

ಶಬ್ದ		ಅರ್ಥ
ಮರ್ದ	—	(ಮದ್ದು) ಔಷಧ
ಮಗುಳ್	—	ಹಿಂದಿರುಗು; ಮರುಳು; ಆಗು; ಸಂತೋಷಿಸು; ತಿರುಗಿ; ಪುನಃ
ಮದ	—	ಗರ್ವ; ಹೆಮ್ಮೆ;–ರೂಪು, ಯೌವನ, ಐಶ್ವರ್ಯ, ವಿದ್ಯೆ. ಉದ್ಯೋಗ, ಕುಲ, ಅಸ್ತ್ರ, ಸ್ತ್ರೀ ಎಂದು ೮ ವಿಧದ ಮದಗಳನ್ನು ಹೇಳುತ್ತಾರೆ.
ಮಸೆ	—	ತಿಕ್ಕು; ಹರಿತ ಮಾಡು; ಹುರುಡಿಸು; ಪುಟ್ಟಗಾಯ; ಗಾಯ; ಕಪ್ಪು; ಹೊಳಸು
ಮರುತ್	—	ಗಾಳಿ; ವಾಯು; ಒಬ್ಬ ದೇವತೆ
ಮಖ	—	ಯಜ್ಞ; ಯಾಗ
ಮತಂಗ	—	ಚಂಡಾಲ; ಮೋಡ; ಒಬ್ಬ ಬ್ರಹ್ಮರ್ಷಿ; ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷೌರಿಕನಿಂದ ಜನಿಸಿದವ
ಮಸಗು	--	ವಿಜೃಂಭಿಸು; ಉಬ್ಬು; ಉತ್ಸಾಹಗೊಳ್ಳು; ಹೆಚ್ಚಾಗು; ಹಬ್ಬು; ಹರಿತಮಾಡು; ಕೆರಳು; ಉಕ್ಕು; ತಿಕ್ಕು
ಮಲೆ	—	ಪರ್ವತ; ಬೆಟ್ಟ; ಗುಡ್ಡ; ಔದ್ಧತ್ಯ; ಧಿಟ್ಟತನ; ಇದಿರಿಸುವಿಕೆ; ವಿರೋಧಿಸು; ಕೊಬ್ಬು; ಸೊಕ್ಕು; ಮದವೇರು; ಗರ್ವಿಸು

ಶಬ್ದ		ಅರ್ಥ
ಮಂಡಲ	—	ಚಕ್ರಾಕಾರವಾದ ಸುತ್ತು; ಕಣ; ಗ್ರಹಪಥ; ಸಮೂಹ; ಗೋಲ; ಕೂಟ; ಒಂದು ವಿಷಸರ್ಪ
ಮಂಡೆ	—	ಕುಡಿ; ತಲೆ; ಸ್ಥಳ;
ಮಂಡನ	—	ಅಲಂಕಾರ; ಆಭರಣ; ಸಮರ್ಥನೆ; ಪುಷ್ಟಿ
ಮಾತುಳ	—	ತಾಯಿಯ ತಮ್ಮ; ಸೋದರ ಮಾವ
ಮಾಂಗಲ್ಯ	—	ಮಂಗಳಕರವಾದುದು; ಮಂಗಳ; ವಿವಾಹದ ಗುರುತಿಗಾಗಿ ಕಟ್ಟುವ ತಾಳಿ
ಮಾತಂಗ	—	ಹೊಲೆಯ; ಒಂದು ಪರ್ವತ; ಒಂದು ಕಿರಾತ ಜಾತಿ; ಆನೆ
ಮಾಣಿ	—	ತರುಣ; ಹುಡುಗ; ಎಳೆಯ
ಮಾನಸಿಕೆ	—	ಗೌರವ; ಆತ್ಮಾಭಿಮಾನ;
ಮಾಣಿಸು	—	ಬಿಡಿಸು; ನಿಲ್ಲಿಸು; ನಿವಾರಿಸು; ಹೋಗಲಾಡಿಸು
ಮಾಹಾತ್ಮ್ಯ	—	ಹಿರಿಮೆ; ಮಹಿಮೆ; ಕೀರ್ತಿಗೆ ಕಾರಣವಾದ ಗುಣ
ಮಾ	—	ಲಕ್ಷ್ಮಿ; ಬೇಡ; ಅಳೆ; ತಾಯಿ; ಮಾವು; ಮಹಾ
ಮಿಡಿ	—	ಎಳೆಕಾಯಿ; ಹಿಮ್ಮಡ; ಮೀಟು; ಬಿಲ್ಲನ್ನು ಟೇಂಕರಿಸು; ಸಿಡಿ; ಬೆರಳ ಮೇಲಿಟ್ಟು ಹಾರಿಸು

ಶಬ್ದ		ಅರ್ಥ
ಮಿಟ್ಟೆ	—	ಒಂದು ಆಯುಧ; ಒಂದು ಬಗೆಯ ಬಾಣ; ಮೊಗ್ಗು; ಅರಳದ ಹೂ
ಮಿಥ್ಯಾತ್ವ	—	ಇದರ ಉದಯದಿಂದ ಜೀವನು ಆಪ್ತರು ತೀರ್ಥಂಕರರು ಹೇಳಿದ ಮೋಕ್ಷ ಮಾರ್ಗದಿಂದ ಪರಾಙ್ಮುಖನಾಗುತ್ತಾನೆ. ಸಮ್ಯಕ್ತ್ವ ರಹಿತನಾಗುತ್ತಾನೆ. ಅರ್ಥಾತ್ ಮಿಥ್ಯಾದೃಷ್ಟಿಯಾಗುತ್ತಾನೆ. ಅದಕ್ಕೆ ಮಿಥ್ಯಾತ್ವ ಕರ್ಮವೆನ್ನುತ್ತಾರೆ. ಅಂದರೆ ಅತತ್ವಶ್ರದ್ಧಾನ.
ಮಿಗ	—	ಮೃಗ; ಜಿಂಕೆ
ಮಿಥುನ	—	ಸತಿಪತಿ; ಗಂಡಹೆಂಡಿರ ಜೋಡಿ; ಸುರತ
ಮೀ	—	ಸ್ನಾನಮಾಡು; ಜಳಕ ಮಾಡು
ಮಿತ್ತು	—	ಮೃತ್ಯು; ಮರಣಕಾರಕ- ದೇವತೆ
ಮಿದಿ	—	ಭತ್ತ ಕುಟ್ಟುವಿಕೆ; ಕೊಲ್ಲು; ತಿಕ್ಕು
ಮಿಳಿ	—	ತೊಗಲಿನ ಹಗ್ಗ; ಮಿಣಿ
ಮುನಿಸು	—	ಕೋಪ; ಸಿಟ್ಟು
ಮುಕ್ಕೊಡೆಯೊಡೆಯ	—	ಜಿನ
ಮುತ್ತ	—	ಎರಡು ವರ್ಷದ ಹಿಂದೆ; ಎರಡು ತಲೆ ಹಿಂದೆ; ಅಜ್ಜ; ಮುದುಕ

ಶಬ್ದ		ಅರ್ಥ
ಮುಂಡದಂತರ	—	ಒಂದು ಆಳಿನ ಅಳತೆ
ಮೃಷೆ	—	ಸುಳ್ಳು
ಮೊಟ್ಟ	—	ತಕ್ಕ; ಹಾಳಿತ; ಹದ; ಸೊಗಸು.
ಮೊರಡಿ	—	ದಿನ್ನೆ; ದಿಬ್ಬ; ಗುಡ್ಡ
ಮೊಗ್ಗು	—	ಮಿಟ್ಟೆ; ಮೊಗ್ಗೆ; ಅರಳದ ಹೂವು; ಇಂದ್ರಜಾಲ; ಹಳಸು ವಾಸನೆ; ಅತಿಶಯ
ಮೋಹನೀಯ	—	(ಘಾತಿ ಚತುಷ್ಟಯ ನೋಡಿರಿ)

ಯ

ಯತಿ	—	ಸನ್ಯಾಸಿ; ಮುನಿ
ಯಮನಿಯಮ	—	ಯೋಗದ ಕೆಲವು ನಿಯಮಗಳು; ಇಂದ್ರಿಯ ನಿಗ್ರಹ; ವ್ರತಪೂಜಾದಿಗಳು
ಯಾನಪಾತ್ರ	—	ಹಡಗು; ಡೋಣಿ
ಯುಗ್ಮ	—	ಜತೆ; ಜೋಡಿ
ಯೋಜನ	—	ಸೇರಿಕೆ; ಎಂಟು ಮೈಲು ದೂರ; ಯೋಚನೆ
ಯೋಗ	—	ಸೇರಿಕೆ; ಧ್ಯಾನ; ಮನಸ್ಸನ್ನು ತಡೆದು ಪರಮಾತ್ಮನಲ್ಲಿ ನಿಲ್ಲಿಸುವ ಬಗೆ

ರ

ರಜಕ	—	ಅಗಸ, ನೀಲಿಗಾರ
ರಕ್ಷಾಮಣಿ	—	ತಾಯಿತ; ರಕ್ಷೆ
ರತ್ನತ್ರಯ	—	ಸಮ್ಯಗ್ಯದರ್ಶನ,ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ಇವುಗಳಿಗೆ ಜೈನಮತದಲ್ಲಿ ರತ್ನತ್ರಯವೆನ್ನುತ್ತಾರೆ.

ಶಬ್ದ		ಅರ್ಥ
ರತ್ನಕರಂಡಕ	—	ರತ್ನದ ಸಣ್ಣ ಪೆಟ್ಟಿಗೆ
ರಸನ	—	ನಾಲಗೆ; ಕೂಗು;ಆರ್ಭಟೆ
ರಾಜಿ	—	ಸಾಲು; ಶ್ರೇಣಿ;ಸಮೂಹ; ಸಂಧಾನ
ರಿಕ್ಕಟೆ	—	ಮೌನ
ರುದ್ಧ	—	ನಿಂತ; ಎದುರಾದ; ಮುಚ್ಚಿದ
ರೂಕ್ಷ	—	ಒಣ; ಸ್ನೇಹರಹಿತ; ತೈಲ-ರಹಿತ
ರೂಪಕ	—	ಆಕಾರ; ಚತುರ; ನಟಿಸಿ-ತೋರಿಸಬಹುದಾದ ಒಂದು ದೃಶ್ಯಕಾವ್ಯ;ಒಂದು ತಾಳ-ಜಾತಿ
ರೇತ	—	ಇಂದ್ರಿಯ; ಶುಕ್ಲ; ವೀರ್ಯ
ರೋಮಜ	—	ಕೂದಲಿನಲ್ಲಿ ಹುಟ್ಟಿದ್ದು-(ಹೇನು)

ಲ

ಲಂಘಿಸು	—	ಹಾರು; ಜಿಗಿ
ಲವ	—	ಅಲ್ಪ; ಸ್ವಲ್ಪ; ನಾಶ
ಲಬ್ಧಿ	—	ದೊರಕಿದುದು; ಪ್ರಾಪ್ತಿ; (ಜೈನಮತದಂತೆ) ಯಾವುದೊಂದು ವಸ್ತುವನ್ನು ಅದರೊಡನೆ ಸಂಬಂಧವಿರುವ ಯಾವುದೊಂದು ವಿಷಯದ ಸಹಾಯದಿಂದ ನಿರ್ದೇಶಿಸುವದು ಲಬ್ಧಿಯೆನಿಸುವದು.

ಶಬ್ದ		ಅರ್ಥ
ಲಾಂಛನ	—	ಗುರುತು; ಕಲೆ; ಅಪಮಾನ
ಲಾವುಗೆ	—	ಕತ್ತರಿ; ಹಾವಾಡಿಗ; ನಾಶಪಡಿಸುವವ; ಲಾವಕ್ಕಿ
ಲೇಪ	—	ಹಚ್ಚುವುದು; ಮುಲಮು
ಲೋಲುಪ	—	ಅತ್ಯಾಶೆಯುಳ್ಳವ; ಆಸಕ್ತನಾದವ
ಲೌಲ್ಯತೆ	—	ಚಾಂಚಲ್ಯಭಾವ; ಅಸ್ಥಿರತೆ

ವ

ಶಬ್ದ		ಅರ್ಥ
ವತ್ಸಳ	—	ಪ್ರೀತಿಯುಳ್ಳ; ಪ್ರಿಯ
ವಂದಿ	—	ಸ್ತುತಿಪಾಠಕ; ಸೆರೆಸಿಲುಕಿದವ
ವಾಯಸ	—	ಕಾಗೆ
ವ್ರಾತ	—	ಸಮೂಹ; ಪಡೆ; ಶರೀರತ್ರಮ
ವ್ಯಾಪ್ತ	—	ವಿಸ್ತಾರಗೊಂಡ; ಹಬ್ಬಿದ
ವ್ಯಾಜ	—	ಮೋಸ; ನೆವ
ವಿದೇಹ	—	ಮಿಥಿಲೆ
ವಿನೇಯ	—	ನಿಯಮಿತ; ವಿಧೇಯವಾದ
ವಿಕಾಸ	—	ಅರಳುವಿಕೆ; ಹರ್ಷ
ವಿತ್ತ	—	ತಿಳಿದ; ದ್ರವ್ಯ; ಕೀರ್ತಿವಂತ; ಬಿಡಲ್ಪಟ್ಟ
ವಿಕಲ್ಪ	—	ಸಂದೇಹ; ಅನಿತ್ಯಯ; ಅಜ್ಞಾನ
ವಿಹ್ವಳ	—	ಭಯಾದಿಗಳಿಂದ ಬೆಬ್ಬರಗೊಳುವಿಕೆ; ಕಳವಳ; ಗಲಿಬಿಲಿ

ಶಬ್ದ		ಅರ್ಥ
ವಿಲೋಮ	—	ಹಿಂದುಮುಂದೆ; ವಿಪರೀತ; ರೋಮಹೋದುದು
ವಿಧುಕರ	—	ಚಂದ್ರಕಿರಣ
ವಿರತ	—	ಮುಗಿದ; ನಿಂತ; ತಡೆದ
ವಿಶಾಖ	—	ಷಣ್ಮುಖ; ಹಗೆ; ಟೊಂಗೆ-ರಹಿತ
ವೀಥಿ	—	ಬೀದಿ; ಸಾಲು
ವೀಸ	—	ಅಲ್ಪ, ಹಣದ $\frac{೧}{೧೬}$ ನೆಯ ಭಾಗ
ವೃತ್ತಿ	—	ಕೆಲಸ; ಉದ್ಯೋಗ; ಟೀಕೆ; ವ್ಯಾಖ್ಯಾನ
ವೇಣು	—	ಕೊಳಲು; ವಾದ್ಯ; ಬಿದಿರು
ವೈಶ್ವಾನರ	—	ಅಗ್ನಿ: ವಿಶ್ವನರನೆಂಬ ಋಷಿಯ ಮಗ
ವೈಕುರ್ವಣ	—	ರೂಪಾಂತರ

ಶ

ಶರಣ್ಯ	—	ಆಶ್ರಯ ಯೋಗ್ಯನಾದವ; ರಕ್ಷಿಸಬಲ್ಲುದು; ಮನೆ
ಶಕ್ರ	—	ಇಂದ್ರ; ಮುತ್ತಿಯಮರ; ವಿಷ್ಣು
ಶ್ರಾವಕ	—	ಹನ್ನೆರಡು ಉಪಾಸಕ ವ್ರತಗಳನ್ನು ಪಾಲಿಸುವ ಜೈನ ಗೃಹಸ್ಥನು.
ಶಿಖಿ	—	ಅಗ್ನಿ; ನವಿಲು; ಚಂಡಿಕೆ; ಮಂಗಳಗ್ರಹ; ಕೇತು
ಶುಭ (ಕರ್ಮ)	—	ಈ ಕರ್ಮದ ಉದಯ-ದಿಂದ ಶರೀರವು ಅಂದ-ವಾಗಿ ಉಳಿಯುತ್ತದೆ.

ಶಬ್ದ		ಅರ್ಥ
ಶ್ರುತ	—	ಕೇಳಿದ; ಶಾಸ್ತ್ರ; ಶಾಸ್ತ್ರದಿಂದ ಬಂದ ತಿಳಿವು
ಶೈಶವ	—	ಬಾಲ್ಯ

ಸ

ಶಬ್ದ		ಅರ್ಥ
ಸಂದಯ	—	ಸಂದೇಹ; ಮುಟ್ಟು
ಸಂಪದ	—	ಐಶ್ವರ್ಯ; ಸುದೈವ; ಸುಖ; ತೃಪ್ತಿ
ಸಂಸೃತಿ	—	ಸಂಸಾರ
ಸನ್ಯಾಸ	—	ಕಾಮ್ಯ ಕರ್ಮ ಬಿಡುವದು; ನಾಲ್ಕನೆಯ ಆಶ್ರಮ; ಒಂದು ವ್ರತ; ವೈರಾಗ್ಯ
ಸತ್ಪಾತ್ರ	—	ದಾನ ಪಡೆಯಲುಯೋಗ್ಯ
ಸಮ್ಯಕ್	—	ಸುಂದರವಾದ; ಸೇರಿದ; ಸತ್ಯ; ಸಂಪೂರ್ಣ; ಒಳಿತಾಗಿ
ಸ್ಮರಣ	—	ಧ್ಯಾನ; ಚಿಂತನೆ; ಯೋಚನೆ
ಸಲಿಲ	—	ನೀರು
ಸಮಯ	—	ಸಿದ್ಧಾಂತ
ಸರ್ವ್ವಗೀರ್ವಾಣ	—	ಎಲ್ಲ ದೇವತೆಗಳು
ಸರಿಗ	—	ಸಮಾನ; ಜೋಡಿ; ಸಮರ್ಥ
ಸ್ನಪನ	—	ಸ್ನಾನ
ಸಾರ	—	ನೀರು; ದ್ರವ್ಯ; ಅಮೃತ; ರಸ; ಬೆಣ್ಣೆ
ಸಾರ್ತ	—	ಬರು
ಸ್ಥಾಣು	—	ರುದ್ರ; ಮೋಟುಮರ; ಗೂಟ; ಬರ್ಚಿ; ಸ್ಥಿರವಾಗಿನಿಂತ
ಸ್ವರ್ಗಾಪವರ್ಗ	—	ಸ್ವರ್ಗ; ಮೋಕ್ಷ

ಶಬ್ದ		ಅರ್ಥ
ಸ್ವಪಚ	—	ಹೇಸಿ; ಹೊಲಸು ಮನುಷ್ಯ
ಸದ್ಮ	—	ಮನೆ; ನಿವಾಸ; ದೇವಾ-ಲಯ
ಸಪ್ತಧಾತು	—	ದೇಹದ ಸರ,ರಕ್ತ,ಮಾಂಸ, ಮೇದಸ್ಸು, ಮಜ್ಜ, ಅಸ್ಥಿ, ಶುಕ್ಲ–ಈ ಏಳು ಸತ್ವಗಳು
ಸಮೀಹಿತ	—	ಅಪೇಕ್ಷೆ; ಹಂಬಲ
ಸಮ್ಯಕ್‌ಜ್ಞಾನ	—	ಜೀವಾದಿಗಳ ಸ್ವರೂಪ-ವನ್ನು ನಿಸ್ಸಂಶಯವಾಗಿ ತಿಳಿದುಕೊಳ್ಳುವದು.
ಸಮ್ಯಕ್ ಚಾರಿತ್ರ	—	ಪಾಪಾಗಮನಕ್ಕೆ ಕಾರಣ ವಾಗುವ ಹಿಂಸಾದಿ ಕಾರ್ಯ-ಗಳಿಂದ ವಿರಕ್ತನಾಗಿರು-ವದು.
ಸಮ್ಯಕ್ತ್ವ	—	ಅನಂತಾನುಬಂಧಿ ಕ್ರೋಧ, ಮಾನ, ಮಾಯಾ ಮತ್ತು ಲೋಭ, ಮಿಥ್ಯಾತ್ವ ಮತ್ತು ಸಮ್ಯಗ್ ಮಿಥ್ಯಾತ್ವ ಈ ಆರು ಕರ್ಮಗಳ ಉದ-ಯಭಾವವು ಭವಿಷ್ಯಕಾಲ-ದ ಅಪೇಕ್ಷೆಯಿಂದ ಉಪ-ಶಮ ಮತ್ತು ವರ್ತಮಾನ ಕಾಲದಲ್ಲಿ ಸಮ್ಯಕ್ತ್ವಪ್ರಕೃ-ತಿಯ ಉದಯವಾಗಿ ಪ್ರಾ-ಪ್ತವಾಗುವ ಸಮ್ಯಗ್‌ದರ್ಶನವು ಸಮ್ಯಕ್ತ್ವವು.
ಸ್ನಾತಕ	—	ವಿದ್ಯಾಭ್ಯಾಸ ಮುಗಿಸಿ ಬಂದವ; ಸ್ನಾನ ಮುಗಿಸಿ ಬಂದವ

ಶಬ್ದ		ಅರ್ಥ
ಸಿದ್ಧ	—	ಯಾವಾಗಲೂ ಕರ್ಮ-ಮಲಗಳಿಲ್ಲದ ಶುದ್ಧಜೀವ. ಇವರಿಗೆ ಅನಂತ ಜ್ಞಾನಾದಿಗುಣ ತಮ್ಮ ಸ್ವರೂಪ ಪ್ರಾಪ್ತವಾಗಿರುತ್ತವೆ.
ಸ್ಥಿತ	—	ನಿಂತ; ಕದಲದ; ಚಲಿಸದ; ಆನೆ
ಸಿತಗ	—	ಜಾರ; ಘಟಿಂಗ; ವೀರ
ಸಿಂಹವಿಷ್ಟರ	—	ಸಿಂಹಾಸನ
ಸುದೇಶಿಕ	—	ತತ್ವಉಪದೇಶಕ; ಗುರು
ಸುಧಾರ್ಣವ	—	ಅಮೃತದ ಸಮುದ್ರ
ಸುತತ್ವ	—	ನಿಶ್ಚಿತ ಸಿದ್ಧಾಂತ
ಸುಧಾರಸ	—	ಅಮೃತ
ಸುರಸಿಂಧು	—	ದೇವಗಂಗೆ
ಸ್ತುತ	—	ಹೊಗಳಿಸಿಕೊಳ್ಳುವ
ಸುಪರ್ಣ	—	ಎಲೆಯುಳ್ಳದು; ನಾಗಕೇಸರ; ದೇವತೆ; ಬಾಣ
ಸ್ಫುರತ್	—	ಪ್ರಕಾಶಿಸು
ಸುಶ್ರೂಷೆ	—	ಶೇವೆ; ಆರೈಕೆ
ಸುರಗಿ	—	ಕತ್ತಿ; ಹೂವಿನ ಗಿಡ
ಸುರಭಿ	—	ಪರಿಮಳ; ಕಾಮಧೇನು; ವಸಂತಕಾಲ; ಮನೋಹರ; ದನ
ಸೂನೆಗಾಜಿ	—	ಕಟಕ
ಸೂರುಳ್	—	ಪ್ರತಿಜ್ಞೆ; ಶಪಥ; ಆಣೆ; ಮೋಡದಿಂದ ಬೀಳುವ ನೀರು

ಶಬ್ದ		ಅರ್ಥ
ಸೂಡು	—	ಕಂತೆ; ಹುಲ್ಲಿನ ಕಟ್ಟು; ಹೂಮುಡಿ; ಸುಡುವಿಕೆ; ಕಟ್ಟು; ಉರಿಯುಬಲ್ಲ ವಸ್ತುಗಳನ್ನು ಹಾಕಿ ಮಾಡಿದ ಸೂಟಿ
ಸೇಸೆ	—	ಮಂಗಳ ಕಾರ್ಯಕ್ಕೆ ಉಪಯೋಗಿಸುವ ಕುಂಕುಮ ಕೂಡಿಸಿದ ಅಕ್ಕಿ; ಅಕ್ಷತ
ಸೆಣಸು	—	ಯುದ್ಧಮಾಡು; ಇದಿರಾಗು; ಸ್ಪರ್ಧಿಸು; ಹೋರಡಿಸು; ಕೋಪ; ಸ್ಪರ್ಧೆ
ಸೇದೆ	—	ಬಳಲಿಕೆ; ಆಯಾಸ; ಸಂಕಟ
ಸೊಡರ್	—	ಸಣ್ಣ ದೀಪ
ಸೋಮ	—	ಚಂದ್ರ; ಸೋಮವೆಂಬರಸ; ಪಚ್ಚಕರ್ಪೂರ; ಕುಬೇರ; ಯಮ; ವಾಯು; ವಸು; ನೀರು; ಒಂದು ಬಳ್ಳಿ; ಅಮೃತ; ಶಿವಪಾರ್ವತಿ
ಸೈಪು	—	ಪುಣ್ಯ; ಸಂಪತ್ತು; ಸಮಾಧಾನ
ಸೌರ	—	ಸೂರ್ಯ ಸಂಬಂಧವಾದ; ಸೂರ್ಯನಮಗ, ಶನೀಶ್ವರ; ಯಮ

ಹ

ಶಬ್ದ		ಅರ್ಥ
ಹಂಸ	—	ಒಂದು ಜಲಪಕ್ಷಿ; ವಿಷ್ಣು; ಸೂರ್ಯ; ಒಂದು ಮಂತ್ರ; ಶ್ರೇಷ್ಠ; ಶುದ್ಧವಾದ; ಸನ್ಯಾಸಿಗಳ ಭೇದ

ಶಬ್ದ		ಅರ್ಥ
ಹಳ(ಲ)	—	ನೇಗಿಲು
ಹರ್ಮ್ಯ	—	ಸೌಧ; ಉಪ್ಪರಿಗೆ; ಮಹಡಿ-ಮನೆ
ಹಡಿಕೆ	—	ನಾರುವಿಕೆ; ನಾತ
ಹಾಗ	—	ನಾಣ್ಯ; ಒಂದಾಣೆ ಎರಡು ಪೈ
ಹಿಳಿ	—	ಹಿಂಡು; ಹಿಸಕು
ಹುತವಹ	—	ಅಗ್ನಿ
ಹೂಜಿ	—	ಹೊಟ್ಟೆಕಿಚ್ಚು; ಹೂಜಿ
ಹೈಮ	—	ಭಂಗಾರ; ಚಳಿ

SHRI
SARASWATHI PRINTING WORKS
ಶ್ರೀ ಸರಸ್ವತಿ ಮುದ್ರಣಾಲಯ
ಧಾರವಾಡ.